ನಾಡೋಜ ಡಾ. ಮನು ಬಳಿಗಾರ್ ಅವರ

# ಸಾಹಿತ್ಯ ಅವಲೋಕನ



ಸಂಪಾದಕ

ಡಾ. ಡಿ. ಕೆ. ಚಿತ್ತಯ್ಯ ಪೂಜಾರ್

ಸಪ್ನ

ಕನ್ನಡ ರಾಜ್ಯೋತ್ಸವ ಸಂಭ್ರಮ

**ನಾಡೋಜ ಡಾ. ಮನು ಬಳಿಗಾರ್ ಅವರ**

# ಸಾಹಿತ್ಯ ಅವಲೋಕನ

ಸಂಪಾದಕ

ಡಾ. ಡಿ. ಕೆ. ಚಿತ್ತಯ್ಯ ಪೂಜಾರ್

ಸಪ್ನ ಬುಕ್ ಹೌಸ್

ಗಾಂಧಿನಗರ, ಬೆಂಗಳೂರು-560 009

Nadoja Dr. Manu Baligar Avara SAHITYA AVALOKANA : Collection of Articles – Edited by Dr. D. K. Chittaiah Poojar, Professor, Centre for Kannada Studies J. B. Campus, Bangalore University, Bangalore-560 056, M : 98456 37247, published by Sapna Book House (P) Ltd., R.O. # 11, 3rd Main Road, Gandhinagar, Bengaluru - 9. Tel. : 40114455.

[K.B. 2624]

ISBN : 978-93-90490-57-8

ಹಕ್ಕುಗಳು : ಸಂಪಾದಕರು

ಪ್ರಥಮ ಮುದ್ರಣ : ನವೆಂಬರ್ 2020

| | |
|---|---|
| ಪುಟಗಳು : Xiv+381=395 | ಪ್ರತಿಗಳ ಸಂಖ್ಯೆ : 500 |
| ಬೆಲೆ : Rs.295/- | Paper Used : 18.6 Kg D/D (70 gsm) N.S. Maplitho<br>Book Size : 1/8th Demy |

| ಅಕ್ಷರ ಜೋಡಣೆ | ಮುಖಪುಟ ವಿನ್ಯಾಸ | ಮುದ್ರಣ |
|---|---|---|
| **ಪೂರ್ಣಿಮಾ** | **ಶ್ರೀಪಾದ** | **ಪ್ರಿಂಟೆಕ್ ಪ್ರಿಂಟರ್ಸ್** |

# ಪ್ರಸ್ತಾವನೆ

ಡಾ. ಮನು ಬಳಿಗಾರ್ ಅವರದು ಚುಂಬಕ ವ್ಯಕ್ತಿತ್ವ. ಅವರ ಮಾತು, ಸರಳತೆ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಕುರಿತು ಅವರಿಗೆ ಇರುವ ಬದ್ಧತೆ ಎಂಥವರನ್ನೂ ಸೂಜಿಗಲ್ಲಿನಂತೆ ತನ್ನತ್ತ ಸೆಳೆಯುತ್ತದೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯ ಮತ್ತು ಸಾಹಿತಿಗಳ ಬಗ್ಗೆ ಅವರು ಅಪಾರವಾಗಿ ಓದಿಕೊಂಡಿದ್ದಾರೆ. ಅದರ ಫಲವಾಗಿಯೇ ಸಾಹಿತ್ಯ ಪ್ರಕಾರಗಳಾದ ಕಥೆ, ಕಾವ್ಯ, ನಾಟಕ, ಪ್ರಬಂಧ, ಅಂಕಣಬರಹ, ಸಂಪಾದನೆ, ವ್ಯಕ್ತಿಚಿತ್ರ ಜೀವನ ಚರಿತ್ರೆ, ವೈಚಾರಿಕ ಸಾಹಿತ್ಯ ಪ್ರಕಾರಗಳಲ್ಲಿ ಆಳವಾದ ಕೃಷಿ ನಡೆಸಿ ಸುಮಾರು ೩೦ ಕೃತಿಗಳನ್ನು ರಚಿಸಿ ವಿದ್ವಾಂಸರ, ವಿಮರ್ಶಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಸಾಹಿತ್ಯ, ಸಂಸ್ಕೃತಿ, ಸಂಘಟನೆ, ಆಡಳಿತ ಕ್ಷೇತ್ರಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿದ ಶ್ರೀಯುತರು ರಾಜ್ಯ ಮತ್ತು ರಾಷ್ಟ್ರಮಟ್ಟದ ಹಲವಾರು ಪ್ರತಿಷ್ಠಿತ ಪ್ರಶಸ್ತಿ, ಗೌರವಗಳಿಗೆ ಭಾಜನರಾಗಿದ್ದಾರೆ. ೨೦೦೮ ಹಾಗೂ ೨೦೦೯ರಲ್ಲಿ ಪ್ರಜಾವಾಣಿಯಲ್ಲಿ ಸಾಕ್ಷಿಪ್ರಜ್ಞೆ ಎನ್ನುವ ಶೀರ್ಷಿಕೆಯಲ್ಲಿ ಬರೆದ ಅಂಕಣಬರಹಗಳು-ಕನ್ನಡಿಗರ ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿವೆ.

ಕರ್ನಾಟಕ, ಭಾರತದಲ್ಲಷ್ಟೇ ಅಲ್ಲದೆ, ಅಮೆರಿಕಾ, ಆಸ್ಟ್ರೇಲಿಯಾ, ಇಂಗ್ಲೆಂಡ್, ಸಿಂಗಪುರ, ಥೈಲ್ಯಾಂಡ್, ಮಲೇಷಿಯಾ, ದುಬೈ, ಬೆಹರಿನ್ ಮುಂತಾದ ದೇಶಗಳಲ್ಲಿ ಕನ್ನಡ-ಕನ್ನಡಿಗ - ಕರ್ನಾಟಕ ಸಂಸ್ಕೃತಿಯನ್ನು ಕುರಿತಂತೆ ಹಲವಾರು ವಿದ್ವತ್ ಪೂರ್ಣ, ಉಪನ್ಯಾಸಗಳನ್ನು ನೀಡಿ ಕನ್ನಡದ ಕಂಪನ್ನು ಹರಡಿದವರಾಗಿದ್ದಾರೆ. ಇವರ ಸಾಹಿತ್ಯ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ೨೦೧೧ರಲ್ಲಿಯೇ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಇವರ ಹಲವಾರು ಕಥೆಗಳು, ಇಂಗ್ಲೀಷ್, ಹಿಂದಿ, ಓರಿಯಾ ಮತ್ತು ತೆಲುಗು ಭಾಷೆಗಳಿಗೆ ಭಾಷಾಂತರಗೊಂಡಿರುವುದು ಅವರ ಸಾಹಿತ್ಯದ ಶ್ರೇಷ್ಠತೆಗೆ ದ್ಯೋತಕವಾಗಿದೆ. ಹಾಗೆಯೇ ರವೀಂದ್ರನಾಥ ಠಾಕೂರರ ೨೦೦ಕ್ಕೂ ಹೆಚ್ಚು ಕವನಗಳನ್ನು ಶ್ರೀಯುತರು ಕನ್ನಡಕ್ಕೆ ತಂದಿರುವುದು ಅವರಿಗೆ ಅನ್ಯ ಭಾಷೆಯ ಮೇಲಿರುವ ಪಾಂಡಿತ್ಯಕ್ಕೆ ಸಾಕ್ಷಿಯಾಗಿದೆ.

ಡಾ. ಬಳಿಗಾರ್ ಅವರು ಸರಕಾರಿ ಸೇವೆಯಲ್ಲಿ ವಿವಿಧ ಹಂತಗಳಲ್ಲಿ ವಿವಿಧ ಇಲಾಖೆಗಳಲ್ಲಿ ಅತ್ಯುತ್ತಮ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರು, ಕಂದಾಯ ಇಲಾಖೆಯಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶಕರು, ಡೆಪ್ಯುಟಿ ಕಮೀಷನರ್ ಹಾಗೂ ಕೌನ್ಸಿಲ್ ಕಾರ್ಯದರ್ಶಿಗಳು, ಬಿಬಿಎಂಪಿ; ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ, ಆಹಾರ ನಾಗರೀಕ ಪೂರೈಕೆ ಇಲಾಖೆ, ಪ್ರವಾಸೋದ್ಯಮ, ಐ.ಟಿ.ಬಿ.ಟಿ. ಇಲಾಖೆಗಳ ಸಚಿವರುಗಳ ಆಪ್ತ ಕಾರ್ಯದರ್ಶಿಗಳು; ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಗಳು ಹೀಗೆ ಹಲವಾರು

ಮಹತ್ವದ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಖ್ಯಾತಿ ಇವರದಾಗಿದೆ. ಜನಪರ ದಕ್ಷ ಆಡಳಿತಗಾರರಾದ ಶ್ರೀಯುತರು ಕ್ರಿಯಾಶೀಲರು, ಉತ್ಸಾಹಶಾಲಿಗಳು, ಸರ್ವಧರ್ಮ ಸಮನ್ವಯಿಗಳು. ಇವರ ಜನಮುಖಿ ಆಡಳಿತ ಸೇವೆಯನ್ನು ಗಮನಿಸಿ 'ಅತ್ಯುತ್ತಮ ಅಧಿಕಾರಿಯೆಂದು ಎರಡು ಚಿನ್ನದ ಪದಕವನ್ನೊಳಗೊಂಡಂತೆ ಐದು ಬಹುಮಾನಗಳನ್ನೂ ಪಡೆದಿದ್ದಾರೆ. ರಾಷ್ಟ್ರಪತಿಗಳ ಸತ್ಯೇನ್ ಮೈತ್ರ ಪ್ರಶಸ್ತಿ (ಬೆಳಗಾವಿ ಜಿಲ್ಲೆಗೆ) ವಿಶ್ವ ಮಾನವ ಪ್ರಶಸ್ತಿ, ಬೆಟಗೇರಿ ಕೃಷ್ಣಶರ್ಮ ಕಥಾ ಪ್ರಶಸ್ತಿ, ರನ್ನ, ಗೊರೂರು, ಕೆಂಪೇಗೌಡ, ಲಿಂಗರಾಜ ದೇಸಾಯಿ, ಬೆಳಗಾವಿಯ ಎಂ.ಕೆ. ಪಬ್ಲಿಸಿಟಿ ಪ್ರಶಸ್ತಿ ಮುಂತಾದ ಪುರಸ್ಕಾರ-ಪ್ರಶಸ್ತಿಗಳು ಶ್ರೀಯುತರನ್ನು ಹುಡುಕಿಕೊಂಡು ಬಂದಿವೆ.

೨೦೦೪ರಲ್ಲಿ ನಡೆದ ಗದಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ೨೦೦೫ರಲ್ಲಿ ಸಿಂಗಪುರದಲ್ಲಿ ನಡೆದ 'ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷರಾಗಿ ಅಲ್ಲಿ ಮಾಡಿದ ವಿದ್ವತ್ಪೂರ್ಣ ಭಾಷಣ ಕನ್ನಡ ಸಾಹಿತ್ಯದಲ್ಲಿ ಅವರಿಗಿರುವ ಆಳವಾದ ಪ್ರಜ್ಞೆ ಮತ್ತು ಜ್ಞಾನವನ್ನು ತೋರಿಸುತ್ತದೆ. ಶ್ರೀಯುತರು ರಾಜ್ಯ-ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟದಲ್ಲಿ ವೈವಿಧ್ಯಮಯ ಕನ್ನಡಪರ ಸಭೆ-ಸಮಾರಂಭ-ಕಾರ್ಯಕ್ರಮಗಳನ್ನು ಆಯೋಜಿಸಿದ ಕೀರ್ತಿಶಾಲಿಗಳು. ಬೆಳಗಾವಿಯಲ್ಲಿ ೨೦೧೧ರಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಿದಾಗ ಕನ್ನಡ ಸಂಸ್ಕೃತಿ ಇಲಾಖೆಯ ಮುಖ್ಯಸ್ಥರಾಗಿ ನಿರ್ವಹಿಸಿದ ಕೆಲಸ ಅಭೂತಪೂರ್ವ. ಹೀಗೆ ಹೇಳುತ್ತಾ ಹೋದರೆ ಹತ್ತು ಹಲವು ಉನ್ನತಿಗಳ ಅವರ ಕನ್ನಡಪರ ಕಾಳಜಿಯ ದೊಡ್ಡ ಪಟ್ಟಿಯೇ ಬೆಳೆದುಹೋಗುತ್ತದೆ. ಆಡಳಿತ, ಸಾಹಿತ್ಯ ಸೇವೆ ಒಂದು ಕಡೆಯಾದರೆ ಕನ್ನಡ - ಸಂಸ್ಕೃತಿ ಇಲಾಖೆಯ ಆಯುಕ್ತರಾಗಿದ್ದಾಗ ಕೈಗೊಂಡ ಕಾರ್ಯ ಯೋಜನೆಗಳದ್ದೂ ಒಂದು ದೊಡ್ಡ ದಾಖಲೆಯಾಗುತ್ತದೆ. ಅದನ್ನು ಕರ್ನಾಟಕದ ವಿದ್ವತ್ವಲಯ ಗಮನಿಸಿ ಸೂಕ್ತವಾಗಿ ಸ್ಪಂದಿಸಿದೆ ಎಂದರೆ ತಪ್ಪಾಗಲಾರದು. ಇದರ ಫಲವಾಗಿಯೇ ಒಲಿದು ಬಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆ ಪಟ್ಟ ಒಂದು ಯಶೋಗಾಥೆಯೇ ಸರಿ. ಹೀಗೆ ಆಡಳಿತ ಸೇವೆ, ಸಾಹಿತ್ಯ, ಸಂಸ್ಕೃತಿಯ ಸೇವೆ, ಸಂಘಟನೆಯಲ್ಲಿ ಯಶಸ್ವಿ ಪ್ರಯಾಣ ಮಾಡಿಕೊಂಡುಬಂದ ಡಾ. ಮನು ಬಳಿಗಾರ್ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಇಪ್ಪತ್ತೈದನೆಯ ಅಧ್ಯಕ್ಷರೂ ಆಗಿ ನಡೆದ ಚುನಾವಣೆಯಲ್ಲಿ ಇತಿಹಾಸದಲ್ಲಿ ದಾಖಲಾರ್ಹ ಅತ್ಯಧಿಕ ಮತಗಳಿಂದ ಅಂದರೆ ಸುಮಾರು ನಲವತ್ತು ಸಾವಿರ ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಪರಿಷತ್ತಿನ ಇತಿಹಾಸದಲ್ಲಿ ಇದು ಅಸಾಧಾರಣ ದಾಖಲೆ ಎನಿಸಿದೆ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಪರಿಷತ್ತು ಇನ್ನಷ್ಟು ಜನಮುಖಿಯಾಗಿ ಸಾಮಾನ್ಯನಿಗೂ ಎಟಕುವಂತೆ ಆಯಿತು. ಕನ್ನಡ ಸಾಹಿತ್ಯ, ಸಾಹಿತಿ, ಸಂಸ್ಕೃತಿ, ಭಾಷೆಯ ಬೆಳವಣಿಗೆಗೆ ಅವರು ಕೈಗೊಂಡ ಕಾರ್ಯಯೋಜನೆಗಳು, ಪುಸ್ತಕ ಪ್ರಕಟಣೆಗಳು, ರಾಯಚೂರು, ಮೈಸೂರು, ಧಾರವಾಡಗಳಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಯಶಸ್ಸು ಹಾಗೂ ದೆಹಲಿ, ಮುಂಬಯಿ, ಮಹಾರಾಷ್ಟ್ರ (ಸೊಲ್ಲಾಪುರ)-ಚನ್ನೈನಲ್ಲಿ ನಡೆದ ಹೊರನಾಡ ಕನ್ನಡ ಸಾಹಿತ್ಯ ಸಮ್ಮೇಳನ ಸಮಾವೇಶಗಳು, ಬೆಹರಿನ್ ಏರ್ಪಡಿಸಿದ ಅಂತರ ರಾಷ್ಟ್ರೀಯ ದೇಶದಲ್ಲಿ ನಡೆದ ಕನ್ನಡ

ಸಾಹಿತ್ಯ ಸಮ್ಮೇಳನಗಳು ಹೀಗೆ... ಇವೆಲ್ಲವೂ ಅವರಿಗೆ ಸಂಘಟನೆಯಲ್ಲಿರುವ ಬದ್ಧತೆ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ. ಸಾಮಾಜಿಕ ನ್ಯಾಯ, ಪ್ರತಿಭಾ ನ್ಯಾಯ, ಪ್ರಾದೇಶಿಕ ನ್ಯಾಯ ಎಂಬ ಸೂತ್ರದ ಮೇಲೆ ದಕ್ಷತೆ, ಪ್ರಾಮಾಣಿಕತೆ ಹಾಗೂ ಪಾರದರ್ಶಕತೆ ತತ್ವದ ಮೇಲೆ ಅವರು ಪರಿಷತ್ತನ್ನು ಮುನ್ನಡೆಸುವ ರೀತಿ ಹಾಗೂ ಸಮಾಜದ ಎಲ್ಲ ವರ್ಗದ ಎಲ್ಲ ಪ್ರದೇಶದ ಎಲ್ಲ ಸಮುದಾಯದ ಜನರನ್ನು ಒಳಗೊಳ್ಳುವ ಪರಿಯೇ ಅವರ ಯಶಸ್ಸಿಗೆ ಕಾರಣವಾಗಿದೆ ಎನ್ನಬಹುದು.

* * * * * *

ಡಾ. ಮನು ಬಳಿಗಾರ್ ಅವರು ಹುಟ್ಟಿದ್ದು ಉತ್ತರ ಕರ್ನಾಟಕದ ಅಂದಿನ ಧಾರವಾಡ ಜಿಲ್ಲೆಯ (ಇಂದಿನ ಗದಗ ಜಿಲ್ಲೆ) ಶಿರಹಟ್ಟಿ ತಾಲ್ಲೂಕಿನ ಶಿಗ್ಲಿ ಎಂಬ ಹಳ್ಳಿಯಲ್ಲಿ. ಪ್ರಗತಿಪರ ಕೃಷಿ ಕುಟುಂಬದಲ್ಲಿ ಹುಟ್ಟಿದ ಶ್ರೀಯುತರು ಪಂಪನ 'ಪುಲಿಗೆರೆ'ಯ ತಿರುಳ್ಗನ್ನಡ ನಾಡಿಗೆ ಸೇರಿದವರು. ಚಿಕ್ಕಗ್ರಾಮವೊಂದರಲ್ಲಿ ಹುಟ್ಟಿದ ಚೇತನವೊಂದು ವಿಶ್ವದ ಉದ್ದಗಲಕ್ಕೂ ಚಾಚಿ ತನ್ನ ಪ್ರಭಾವ ಬೀರುವುದು ಸುಲಭ ಸಾಧ್ಯದ ಮಾತಲ್ಲ.

ಶಿಗ್ಲಿಯಲ್ಲಿ ನಡೆಯುತ್ತಿದ್ದ ಜಾತ್ರೆ, ಉತ್ಸವ, ಕ್ರೀಡೆ ಮುಂತಾದವು ಬಾಲ್ಯದಲ್ಲಿಯೇ ಇವರನ್ನು ಆಕರ್ಷಿಸಿದವು. ಅವುಗಳ ಜೊತೆಗೆ ತಂದೆ ಪರಮೇಶ್ವರಪ್ಪನವರ ಪ್ರಗತಿಪರ ಚಿಂತನೆ, ಅವರು ಓದುತ್ತಿದ್ದ ವಚನಗಳು, ದಾಸರ ಕೀರ್ತನೆಗಳು, ಸರ್ವಜ್ಞನ ತ್ರಿಪದಿಗಳು, ಶಿಶುನಾಳ ಶರೀಫ ಶಿವಯೋಗಿ ಮುಂತಾದವರ ಅನುಭಾವ ಪದಗಳು, ಮನೆಯಲ್ಲಿದ್ದ ಶಿಸ್ತು ಎಲ್ಲವೂ ಮುಪ್ಪುರಿಗೊಂಡು ಅವರ ಬದುಕಿಗೆ ಭದ್ರ ಬುನಾದಿಯಾದವು. ಹದಿಮೂರನೇ ವಯಸ್ಸಿಗೆ ಪದ್ಯ-ಕಥೆ ಬರೆಯುವ ಗೀಳಿಗೆ ಅಂಟು ಬಿದ್ದರು. ಅಲ್ಲಿಂದಲೇ ಅವರ ಸಾಹಿತ್ಯಯಾನ ಪ್ರಾರಂಭವಾಯಿತೆಂದು ಹೇಳಬಹುದು (ಹೆಚ್ಚಿನ ಓದಿಗೆ ನೋಡಿ ಡಾ. ಮನು ಬಳಿಗಾರ್ ಜೀವನ ಸಾಧನೆ, ಡಾ. ಜಿ.ಎಂ. ಹೆಗಡೆ, ಭಾರತೀಯ ವಿದ್ಯಾಭವನ, ಬೆಂಗಳೂರು) ಆಟ, ಪಾಠ, ವ್ಯಾಯಾಮ, ಓದು ಸಂಘಟನೆ, ಸಾಹಿತ್ಯ ರಚನೆಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡು ಡಾ.ಮನುಬಳಿಗಾರ್, ಶಿಗ್ಲಿ, ಧಾರವಾಡ, ಬೆಂಗಳೂರುಗಳಲ್ಲಿ ವಿದ್ಯಾಭ್ಯಾಸ ಮಾಡಿ, ನಂತರ ವಕೀಲಿ ವೃತ್ತಿ ಆರಂಭಿಸಿ ತದನಂತರ ಕರ್ನಾಟಕ ಆಡಳಿತ ಸೇವೆಗೆ ಆಯ್ಕೆಯಾಗಿ ಅಲ್ಲಿಂದ ಸರ್ಕಾರದ ವಿವಿಧ ಹಂತಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಆಡಳಿತ ಮತ್ತು ಸಂಘಟನೆಗಳಿಗೆ ಮಾನವೀಯತೆಯ ಸ್ಪರ್ಶ ನೀಡುವುದರ ಮೂಲಕ ಜನಮುಖಿಯಾದ ಡಾ.ಮನುಬಳಿಗಾರ್ ಅವರು ತಮ್ಮ ಸಾಹಿತ್ಯದಲ್ಲಿಯೂ ಅದನ್ನು ಜೀವನದುದ್ದಕ್ಕೂ ಅನುಗಾಲವೂ ಕಾಪಿಟ್ಟುಕೊಂಡು ಬಂದಿದ್ದಾರೆ. ಅದಕ್ಕೆ ಸಾಕ್ಷಿಯಾಗಿ ಅವ್ಯಕ್ತ, ಋಣ; ಬದುಕು ಮಾಯೆಯ ಮಾಟ, ನನ್ನ ನಿನ್ನೊಳಗೆ, ಎದ್ದವರು ಬಿದ್ದವರು, ಸಾಕ್ಷಿಪ್ರಜ್ಞೆ, ಏಕಾಂತ ಮತ್ತು ಏಕಾಗ್ರತೆ, ಬೆಳಕ ಬೆಡಗು; ಮೈಲಾರ ಮಹಾದೇವ; ಅಬ್ದುಲ್ ನಜೀರ್ ಸಾಬ್, ಎಸ್,ಆರ್. ಕಂಠಿ, ಅಪ್ಪ; ಬಹುಮುಖಿ, ಗಾನಗಂಧರ್ವ

ಮುಂತಾದ ಕಥೆ, ಕವನ, ಲಲಿತ ಪ್ರಬಂಧ, ನಾಟಕ, ಅಂಕಣಬರಹ, ಜೀವನ ಚರಿತ್ರೆ, ಸಂಪಾದನೆಯ ಸಾಹಿತ್ಯ ಪ್ರಕಾರಗಳಿಗೆ ಸೇರಿದ ಮೂವತ್ತಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ.

ಡಾ.ಮನು ಬಳಿಗಾರ್ ಅವರು ನನಗೆ ಪರೋಕ್ಷವಾಗಿ ಪರಿಚಯವಾದದ್ದು ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿದ್ದಾಗ ಮಾಡುತ್ತಿದ್ದ ಕಾರ್ಯಕ್ರಮಗಳು ಮತ್ತು ಕಾರ್ಯಯೋಜನೆಗಳ ಮುಖಾಂತರ. ಆನಂತರ ಅವರು ವಿವಿಧ ಕನ್ನಡ ದಿನಪತ್ರಿಕೆಗಳಲ್ಲಿ ಬರೆಯುತ್ತಿದ್ದ ಅಂಕಣ ಬರಹಗಳ ಮೂಲಕ ಅದರಲ್ಲೂ ಪ್ರಜಾವಾಣಿಯಲ್ಲಿ ಬರುತ್ತಿದ್ದ 'ಸಾಕ್ಷಿಪ್ರಜ್ಞೆ' ಎಂಬ ಅಂಕಣ ಬರಹಗಳ ಮೂಲಕ ಇನ್ನಷ್ಟು ಹತ್ತಿರವಾದರು. ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಕುರಿತು ಅವರಿಗಿದ್ದ ಆಳವಾದ ತಿಳುವಳಿಕೆ ನನ್ನನ್ನು ಇನ್ನಷ್ಟು ಸೆಳೆದವು. ತದನಂತರ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ಕೆಲಸ ಮಾಡುವಾಗ ನಾನೂ ಸಹ ಪರಿಷತ್ತಿನ ಸಂಶೋಧನಾ ವಿಭಾಗದ ಸಂಚಾಲಕನಾಗಿ ಕೆಲಸ ಮಾಡುತ್ತಿದ್ದೆನಾದರೂ ಎಂದೂ ಮುಖಾಮುಖಿ ಭೇಟಿಯಾಗಲಿಲ್ಲ. ಅವರು ಅಧಿಕಾರಿಗಳಾಗಿದ್ದವರು ಹೇಗೋ-ಏನೋ ಎಂಬ ಅಳುಕು ಒಂದು ಕಡೆಯಾದರೆ, ಇನ್ನೇನು ನನ್ನ 'ಮೇಲ್ವಿಚಾರಕನ' ಅವಧಿ ಮುಗಿದಿದೆ ಚುನಾವಣೆ ಹತ್ತಿರ ಬರುತ್ತಿದೆ ಎನ್ನುವ ಭಾವನೆಯೂ ಇದ್ದುದ್ದರಿಂದ ನಾನು ಅವರನ್ನು ಭೇಟಿಯಾಗುತ್ತಿರಲಿಲ್ಲ. ಆದರೆ ಅವರ ಅವ್ಯಕ್ತ, ಋಣ, ಅಪ್ಪ, ಏಕಾಂತ ಮತ್ತು ಏಕಾಗ್ರತೆ ಮುಂತಾದ ಕಥಾ ಸಂಕಲನ, ಲಲಿತ ಪ್ರಬಂಧ ಕೃತಿಗಳು ನನ್ನ ಗ್ರಂಥಾಲಯದಲ್ಲಿ ಆಗಾಗ ಕಣ್ಣಿಗೆ ಬಿದ್ದು ಮತ್ತೆ ಮತ್ತೆ ಓದಲು ಪ್ರೇರೇಪಿಸುತ್ತಿದ್ದವು.

ಈ ಮಧ್ಯೆ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆ ನಡೆದು ಅಭೂತಪೂರ್ವ ಗೆಲುವಿನೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಡಾ. ಬಳಿಗಾರ್ ಆಯ್ಕೆಯಾಗಿ ಬಂದರು. ಹೊಸ ಅಧ್ಯಕ್ಷರು ಆಯ್ಕೆಯಾಗಿ ಬಂದತಕ್ಷಣ ನಿಯಮಾನುಸರ ನಾನು ನನ್ನ "ರಾಜಿನಾಮೆ ಪತ್ರವನ್ನು ಕಛೇರಿಗೆ ಕಳುಹಿಸಿಕೊಟ್ಟು ಸುಮ್ಮನಾದೆ. ಕೆಲವೇ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬೆಂಗಳೂರು ವಿಶ್ವವಿದ್ಯಾಲಯ, ಕನ್ನಡ ವಿಭಾಗದ ನನ್ನ ವಿಳಾಸಕ್ಕೆ ಒಂದು ಪತ್ರ ಬಂದಿತು. ಅದನ್ನು ತೆಗೆದು ನೋಡಿದಾಗ ಅಚ್ಚರಿಯಾಯಿತು. ಕಾರಣ ಆ ಪತ್ರದಲ್ಲಿ "ಕನ್ನಡ ಸಾಹಿತ್ಯ ಪರಿಷತ್ತಿಗೆ ನಿಮ್ಮ ಸೇವೆಯ ಅಗತ್ಯವಿದೆ. ನೀವು ಈ ಕೂಡಲೆ ಬಂದು ಸಂಶೋಧನಾ ವಿಭಾಗದ ಮೇಲ್ವಿಚಾರಕರಾಗಿ ಜವಾಬ್ದಾರಿ ವಹಿಸಿಕೊಳ್ಳಬೇಕು" ಎಂದು ಬರೆಯಲಾಗಿತ್ತು. ಅವರಿಗೆ ನನ್ನ ಪರಿಚಯವಿರಲಿಲ್ಲ. ಅವರನ್ನು ನಾನು ಎಂದೂ ಹತ್ತಿರದಿಂದ ಮುಖತಃ ಮಾತನಾಡಿಸಿದವನಲ್ಲ. ಆದರೂ ಈ ಆಹ್ವಾನ!. ಇದು ನನ್ನನ್ನು ಇನ್ನಷ್ಟು ಕಾಡತೊಡಗಿತು. ಆನಂತರ ಅನೇಕ ಸಂದರ್ಭಗಳಲ್ಲಿ ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದಾರೆ. ನನ್ನ ಬೆಳವಣಿಗೆಗೆ ಕಾರಣರಾಗಿದ್ದಾರೆ. ಪರಿಷತ್ತಿನ ಅವರ ಕಛೇರಿಯು ವಿದ್ವಾಂಸರುಗಳ ಭೇಟಿಯಿಂದ ಸದಾ ತುಂಬಿ ತುಳುಕುತ್ತಿರುತ್ತದೆ. ಅಲ್ಲಿ ದೊಡ್ಡವರು, ಚಿಕ್ಕವರು, ವರ್ಗ, ಜಾತಿಯ ಯಾವುದೇ ತಾರತಮ್ಯಗಳಿರುವುದಿಲ್ಲ. ನನ್ನನ್ನು ಸೆಳೆಯಲು ಇದೂ ಒಂದು ಕಾರಣ.

ಈ ಎಲ್ಲಾ ಕಾರಣಗಳಿಂದ ಅವರ ನಡೆ-ನುಡಿ-ಬರಹಗಳಲ್ಲಿರುವ ಸಾಮ್ಯತೆ ನನ್ನನ್ನು ಬೆರಗುಗೊಳಿಸಿದ ಕಾರಣ ಅವರ ಸಾಹಿತ್ಯವನ್ನು ಹೆಚ್ಚು-ಹೆಚ್ಚು ಓದತೊಡಗಿದೆನು. ಆಗ ಕಂಡಿದ್ದು ಇಂಥ ಉತ್ತಮ ಬರಹಗಳನ್ನು ಯು.ಆರ್. ಅನಂತಮೂರ್ತಿ, ಡಾ. ಜಿ.ಎಸ್.ಎಸ್., ಡಾ. ಚಂದ್ರಶೇಖರ ಕಂಬಾರ, ಚನ್ನವೀರ ಕಣವಿ, ಎಸ್.ಜಿ.ಸಿದ್ದರಾಮಯ್ಯ, ಪ್ರೊ, ಕೀರ್ತಿನಾಥ ಕುರ್ತಕೋಟಿ ಮುಂತಾದವರು ಮೆಚ್ಚಿ ಬರೆದಿದ್ದಾರೆ ಎಂಬುದು.

ಈ ಎಲ್ಲಾ ಕಾರಣಗಳಿಂದ ಮನುಬಳಿಗಾರ್ ಅವರ ಬರಹದ ಮೇಲಿನ ವಿಮರ್ಶೆಯನ್ನು ಒಂದು ಕೃತಿಯಾಗಿ ತರಬೇಕೆಂಬ ಆಸೆಯಾಯಿತು. ನಾಡಿನ ವಿವಿಧ ವಿದ್ವಾಂಸರು, ವಿಮರ್ಶಕರು, ಸಂಶೋಧಕರು ವಿವಿಧ ಸಂದರ್ಭಗಳಲ್ಲಿ ಬರೆದ ವಿಮರ್ಶೆಗಳನ್ನ, ಲೇಖನಗಳನ್ನ, ಮೆಚ್ಚಿ ಬರೆದ ಅನಿಸಿಕೆಗಳನ್ನ ಒಂದು ಕಡೆ ತಂದು ಪ್ರಕಟಿಸಿದರೆ ಅಧ್ಯಯನಾಸಕ್ತ ಓದುಗರಿಗೆ, ಸಂಶೋಧಕರಿಗೆ, ವಿಮರ್ಶಕರಿಗೆ ಅನುಕೂಲವಾಗುತ್ತದೆ ಎನಿಸಿತು. ಅಲ್ಲದೆ ಡಾ. ಮನು ಬಳಿಗಾರ್ ಅವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ ಎಂಬ ಕಾರಣದ ಫಲವಾಗಿ ಈ ಕೃತಿ ಇಂದು ಒಂದು ಸ್ವರೂಪವನ್ನು ತಳೆದು ನಿಮ್ಮ ಮುಂದಿದೆ.

ಇಂತಹದೊಂದು ಸಂಗತಿಯನ್ನು ತಿಳಿಸುತ್ತಿದ್ದಂತೆ ಸಂತೋಷಪಟ್ಟ ನಾಡಿನ ಬರಹಗಾರರು, ವಿದ್ವಾಂಸರು, ಸಂಶೋಧಕರು ಅವರವರ ಲೇಖನಗಳನ್ನು ಸಕಾಲದಲ್ಲಿ ಕಳಿಸಿಕೊಟ್ಟು ಸಹಕರಿಸಿದ್ದಾರೆ. ಅವರಿಗೂ, ತುಂಬಾ ಶ್ರದ್ಧೆಯಿಂದ ಡಿ.ಟಿ.ಪಿ ಮಾಡಿಕೊಟ್ಟ ಪೂರ್ಣಿಮಾ ಅವರಿಗೂ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೂ ನನ್ನ ಧನ್ಯವಾದಗಳು.

ಹಾಗೆಯೇ ಈ ಕೃತಿಯನ್ನು ಪ್ರಕಟಿಸಲು ಸಂತೋಷದಿಂದ ಒಪ್ಪಿದ ಸಪ್ನ ಬುಕ್‌ಹೌಸ್‌ನ ಮಾಲಿಕರಾದ ಶ್ರೀ ನಿತಿನ್ ಶಾರವರಿಗೆ, ದೊಡ್ಡೆಗೌಡರಿಗೆ, ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಶ್ರೀಪಾದ ಅವರಿಗೂ ನಾನು ಆಭಾರಿಯಾಗಿದ್ದೇನೆ.

ಡಾ.ಡಿ.ಕೆ ಚಿತ್ತಯ್ಯ ಪೂಜಾರ್
ಬೆಂಗಳೂರು ವಿಶ್ವವಿದ್ಯಾಲಯ

# ಪರಿವಿಡಿ

ಭಾಗ -1 : ಕಥೆಗಳು

1. 'ಋಣ' ಕಥಾ ಸಂಕಲನ / 3

ಯು.ಆರ್. ಅನಂತಮೂರ್ತಿ

2. 'ಬದುಕು ಮಾಯೆಯ ಮಾಟ' ಕಥಾಸಂಕಲನ / 6

ಡಾ. ಚಂದ್ರಶೇಖರ ಕಂಬಾರ

3. ಮನು ಬಳಿಗಾರ್ : ಕೆಲವು ಕತೆಗಳು / 10

ಡಾ. ಜಿ.ಆರ್. ತಿಪ್ಪೇಸ್ವಾಮಿ

4. ಋಣ ಕಥಾ ಸಂಕಲನ ಅನಾವರಣಗೊಳಿಸುವ ಗ್ರಾಮೀಣ ಬದುಕಿನ ತಲ್ಲಣಗಳು/15

ಡಾ. ಮುತ್ತೇಗೌಡ, ಟಿ. ಎನ್.

5. ಮನು ಬಳಿಗಾರ್ ಕತೆಗಳು : ಸಮಕಾಲೀನಗೊಳ್ಳುವ ಮಾದರಿಗಳು / 20

ದೀಪಿಕಾ ಬಿ.

6. ಮನು ಬಳಿಗಾರ್‌ರವರ ಕಥೆಗಳಲ್ಲಿ ಮಾನವೀಯ ನೆಲೆಗಳು / 26

ಡಾ. ಗೋಪಿ, ಎಸ್.ಎಂ.

7. ಮನು ಬಳಿಗಾರ್‌ರವರ ಕತೆಗಳಲ್ಲಿ ವಾಸ್ತವತೆಯ ನಿರ್ವಹಣೆ / 32

ಶ್ರೀ ಜಗದೀಶ್ ಎಸ್.

8. 'ಋಣ' ಕಥಾಸಂಕಲನದ ಆಂತರ್ಯದಲ್ಲಿ / 39

ಶ್ರೀ ಲೋಕೇಶ ನೀರಕಲ್ಲು

9. ಮನು ಬಳಿಗಾರರ ಎರಡು ಕಥೆಗಳು / 44

ಡಾ. ರಣಧೀರ

10. ಮನು ಬಳಿಗಾರರ ಕಥೆಗಳಲ್ಲಿ ಗ್ರಾಮೀಣ ಪರಿಸರದ ಸೊಗಡು / 49

ಡಾ. ಪ್ರಸನ್ನ ಕುಮಾರ್ ಕೆ.

11. 'ಬದುಕು ಮಾಯೆಯ ಮಾಟ' ಕಥೆಗಳ ಹೆಜ್ಜೆ ಗುರುತು / 52

ಶ್ರೀ ಲೋಕೇಶ ನೀರಕಲ್ಲು

12. ಮನು ಬಳಿಗಾರ್ ಕತೆಗಳು : ಸಂಘರ್ಷದ ಹಾದಿ ಮತ್ತು ಮಾನವೀಯ ನೆಲೆಗಳ ಶೋಧ / 58

ಶ್ರೀ ಚೆನ್ನರಾಜು ಎಂ

13. ಮನು ಬಳಿಗಾರ್ ಅವರ ಕಥೆಗಳಲ್ಲಿ ಸ್ತ್ರೀ ಚಿತ್ರಣ / 64

ಡಾ. ಸಿದ್ದಪ್ಪ ಬೆಳಘಟ್ಟ

14, 'ಋಣ' ಕಥೆಯಲ್ಲಿನ ಸಾವಯವ ಪಾತ್ರ ಸೃಷ್ಟಿ / 73

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

## ಭಾಗ -2 : ಕಾವ್ಯ

15. ಎದ್ದವರು ಬಿದ್ದವರು (ಮುನ್ನುಡಿ) / 81

ಸಿದ್ಧಯ್ಯ ಪುರಾಣಿಕ

16. ನನ್ನ ನಿನ್ನೊಳಗೆ (ಮುನ್ನುಡಿ) / 84

ಚೆನ್ನವೀರ ಕಣವಿ

17. ಮನು ಬಳಿಗಾರರ ಕಾವ್ಯ / 86

ಡಾ. ಹೆಚ್. ಎಲ್. ಪುಷ್ಪಾ

18. ನಯಾಗರಾ ಮತ್ತು ಜಲಪಾತ ಕವನ ಸಂಕಲನದ ವಿಮರ್ಶೆ / 93

ಡಾ. ಮುನಿಯಪ್ಪ

19. ಆಯ್ದ ಕವಿತೆಗಳು : ಒಂದು ಅವಲೋಕನ / 97

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

20. ಮನುಷ್ಯ ಪ್ರೀತಿಯ ಹುಡುಕಾಟದಲ್ಲಿ ಬಳಿಗಾರರ ಕಾವ್ಯ / 104

ಡಾ. ಶಿವರಾಜ್. ಬ್ಯಾಡರಹಳ್ಳಿ

21. ಮನು ಬಳಿಗಾರ್ ಅವರ ಕಾವ್ಯ | 110

ಡಾ. ಎಂ. ನಾಗರಾಜ

22. ಬರೆಯಬೇಕಿದೆ ಕವನ (ಮನು ಬಳಿಗಾರ್ ಅವರ ಆಯ್ದ ಕವನಗಳ ಸಂಕಲನದ ಒಂದು ಓದು) / 120

ಡಾ. ಗಜಾನನ ನಾಯ್ಕ

23. ಮನು ಬಳಿಗಾರ್ ಅವರ “ನಯಾಗರ ಮತ್ತು ಜಲಪಾತ” : ಮನುಷ್ಯ ಪ್ರೀತಿಯ ಕೊರಳ ತಬ್ಬಿ... | 124

ಚೆನ್ನರಾಜು ಎಂ. ಬಸಪ್ಪನದೊಡ್ಡಿ

24. ಮನು ಬಳಿಗಾರ್ ಅವರ ಕಾವ್ಯಗಳಲ್ಲಿ ಜೀವಪರ ಆಶಯಗಳು / 129

ದೀಪಿಕಾ ಬಿ.

25. ಡಾ. ಮನು ಬಳಿಗಾರ್ 'ಕಾವ್ಯ ಕಾಯಕ' / 137

ಸಂಗಮೇಶ್ ಉಪಾಸೆ

## ಭಾಗ - 3 : ನಾಟಕ

26. ಅಪ್ರತಿಮ ಹೋರಾಟಗಾರ : ಮೈಲಾರ ಮಹಾದೇವ / 147

ಡಾ. ಜ್ಯೋತ್ಸ್ನಾ ಚಂದ್ರಕಾಂತ

27. ಮೈಲಾರ ಮಹಾದೇವ ನಾಟಕ : ಒಂದು ಅವಲೋಕನ / 150

ಡಾ. ಚನ್ನವೀರಯ್ಯ

28. ಗಾಂಧಿಯುಗದ ಕನ್ನಡದ ಕೊಂಡಿ ದಂಡಿ ಮೈಲಾರ / 155

ಡಾ. ಆರ್. ನಟರಾಜ್ ತಲಘಟ್ಟಪುರ
29. ಡಾ. ಮನು ಬಳಿಗಾರ್ ಅವರ ಮೈಲಾರ ಮಹಾದೇವ / 159
ಡಾ. ಚಿತ್ರಲಿಂಗಯ್ಯ ಡಿ.ಸಿ.

**ಭಾಗ -4 : ಲಲಿತ ಪ್ರಬಂಧಗಳು**

30. ಏಕಾಂತ ಮತ್ತು ಏಕಾಗ್ರತೆ / 171
ಡಾ. ದೇಜಗೌ
31. 'ಸಂಸ್ಕೃತಿ ವಿಹಾರ' ಒಳಹೊಕ್ಕಾಗ... / 175
ಪ್ರೊ. ಎಂ.ಎಲ್. ನರಸಿಂಹಮೂರ್ತಿ
32. ಏಕಾಂತ ಮತ್ತು ಏಕಾಗ್ರತೆ (ಲಲಿತ ಪ್ರಬಂಧಗಳು) ಕೃತಿಯ ವಿಶ್ಲೇಷಣೆ (181
ಡಾ. ಶ್ವೇತಾ
33. ಏಕಾಂತ ಮತ್ತು ಏಕಾಗ್ರತೆ / 184
ಶ್ವೇತಾ ಎನ್.

**ಭಾಗ -5 : ಅಂಕಣ ಬರಹಗಳು**

34. ಬೆಳಕ ಬೆಡಗು : ಸಂಸ್ಕೃತಿ ಚಿಂತನೆಯ ಬರೆಹಗಳು / 199
ಡಾ. ನಿತ್ಯಾನಂದ ಬಿ. ಶೆಟ್ಟಿ
35. ಮನು ಬಳಿಗಾರ್ ಅವರ ಬೆಳಕ-ಬೆಡಗು ಕೃತಿ ಚಿಂತನೆ | 202
ಡಾ. ಶಿವಾನಂದ ಕೆಳಗಿನ ಮನೆ
36. ಮನು ಬಳಿಗಾರರ 'ಸಂಸ್ಕತಿ ವಿಹಾರ' ಸಂಸ್ಕತಿ ದರ್ಶನ | 208
ಡಾ.ಹಾ.ಮ.ನಾಗಾರ್ಜುನ
37. ಕನ್ನಡ ನಾಡು-ನುಡಿ ಸಂಸ್ಕೃತಿಯ ಸಮರ್ಥ ರಾಯಭಾರಿ / 213
ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ
38. ಡಾ. ಮನು ಬಳಿಗಾರರ ಬೆಳಕು - ಬೆಡಗು | 218
ಶ್ರೀ ಮಾಸ್ಕೇರಿ ಎಂ.ಕೆ. ನಾಯಕ
39. ಬೆಳಕ - ಬೆಡಗು / 235
ಡಾ. ಪಿ. ನಾಗರಾಜ
40. ಬಳಿಗಾರರ ಸಂಸ್ಕೃತಿ ಚಿಂತನೆಯ ಬೆಳಕ ಬೆಡಗಿನ ಅಕ್ಕಡಿ ಸಾಲುಗಳು | 241
ಡಾ|| ರಾಜೀವ ನಾಯ್ಕ ಎಸ್.

**ಭಾಗ -6 : ಸಂಪಾದನಾ ಕೃತಿಗಳು**

41. ಡಾ. ಮನು ಬಳಿಗಾರರ ಜೀವನ ಚರಿತ್ರೆಗಳು / 249
ಡಾ. ಜಿ.ಎಂ. ಹೆಗಡೆ

42. ಮನು ಬಳಿಗಾರರ ಸಂಪಾದನಾ ಕೃತಿಗಳು / 252

ಡಾ. ಜಿ.ಎಂ. ಹೆಗಡೆ

43. 'ಬಹುಮುಖಿ'- ಉಪಯುಕ್ತ ಸಂಪಾದನಾ ಕೃತಿ / 256

ಡಾ. ರಾಘವೇಂದ್ರ ಪಿ.ಕೆ.

44. ಮನು ಬಳಿಗಾರರ ಸಾಕ್ಷರ ಗೀತೆಗಳು | 264

ಯುವರಾಜ ಮಾದನಶೆಟ್ಟಿ

45. ಕಡಲ ತೀರದ ಭಾರ್ಗವ : ಬಹುಮುಖ / 268

ಡಾ. ಎಸ್. ಮೋಹನ್

**ಭಾಗ -7 : ಜೀವನ ಚರಿತ್ರೆಗಳು**

46. ಅತಿ ವಿರಳ ರಾಜಕಾರಣಿ ಎಸ್. ಆರ್. ಕಂಠಿ ಕುರಿತು / 278

ಡಾ. ಅಂಕನಹಳ್ಳಿ ಪಾರ್ಥ

47. ಡಾ. ಮನು ಬಳಿಗಾರ್‌ರವರು ಚಿತ್ರಿಸಿದ / 282

ಬಡವರ ಬಂಧು, ಅತಿವಿರಳ ರಾಜಕಾರಣಿ ಎಸ್.ಆರ್. ಕಂಠಿಯವರ ಬಹುಮುಖತೆ

ಡಾ. ಕೆ.ವಿ. ಮುದ್ದುವೀರಪ್ಪ

48. ಮನು ಬಳಿಗಾರ್ ಅವರ 'ಅಪ್ಪ'ನ ಅಂತಃಕರಣದ ಅನಾವರಣ / 288

ಪ್ರೊ. ಎಂ.ಎಲ್. ನರಸಿಂಹಮೂರ್ತಿ \

49. ಅನುರೂಪದ ಮನಸ್ಸುಗಳ ಅಭಿವ್ಯಕ್ತಿ / 294

ಡಾ. ವಿಜಯ ಕುಮಾರ ಹೆಚ್.

50. ಡಾ. ಮನು ಬಳಿಗಾರರ 'ಅಪ್ಪ' | 298

ಡಾ. ಸಂತೋಷ ಹಾನಗಲ್

51. ಮನು ಬಳಿಗಾರ್ ಅವರ 'ಅಪ್ಪ' ಕೃತಿಯಲ್ಲಿ ಜೀವನ ಮೌಲ್ಯಗಳು / 302

ಶಿಲ್ಪ ಬಿ.

52. ಮನು ಬಳಿಗಾರರ ಬರವಣಿಗೆಯಲ್ಲಿ ಕ್ರಿಯಾಶೀಲತೆ ಮತ್ತು ಸಾತ್ವಿಕ ಎಚ್ಚರ / 308

ಡಾ. ಸಿಪಿಲೆ ಸತೀಶ್

53. ಅಬ್ದುಲ್ ನಜೀರ್‌ಸಾಬ್ : ಗ್ರಾಮೀಣಾಭಿವೃದ್ಧಿಯ ಭೀಷ್ಮಪ್ರಜ್ಞೆ / 311

ಚೆನ್ನರಾಜು, ಎಂ. ಬಸಪ್ಪನದೊಡ್ಡಿ

**ಭಾಗ -8 : ವಿದ್ವಾಂಸರ ಅಭಿಪ್ರಾಯಗಳು**

54. ಋಣ ಸಂಕಲನ - ಕೃತಿ ಕುರಿತು / 323

ಡಾ. ಯು.ಆರ್. ಅನಂತಮೂರ್ತಿ

55. ರವೀಂದ್ರರ ಮಿಂಚಿನ ಹನಿಗಳು - ಕೃತಿ ಕುರಿತು / 323
ಡಾ. ಜಿ.ಎಸ್. ಶಿವರುದ್ರಪ್ಪ
56. ಏಕಾಂತ ಮತ್ತು ಏಕಾಗ್ರತೆ - ಕೃತಿ ಕುರಿತು / 323
ಶ್ರೀ ಜಯಂತ ಕಾಯ್ಕಿಣಿ
57. ಋಣ ಕಥಾಸಂಕಲನ - ಕೃತಿ ಕುರಿತು / 324
ಡಾ. ರಂಜಾನ್ ದರ್ಗಾ
58, ಬೆಳಕ ಬೆಡಗು - ಕೃತಿ ಕುರಿತು / 324
ಶ್ರೀ ವಿಶ್ವೇಶ್ವರ ಭಟ್
59. ತಲಸ್ಪರ್ಶಿ - ಕೃತಿ ಕುರಿತು / 325
ಶ್ರೀ ಚೆನ್ನವೀರ ಕಣವಿ
60. ಎದ್ದವರು ಬಿದ್ದವರು - ಕೃತಿ ಕುರಿತು / 325
ಡಾ. ಚಂದ್ರಶೇಖರ ಕಂಬಾರ
61. ಎದ್ದವರು ಬಿದ್ದವರು - ಕೃತಿ ಕುರಿತು / 326
ಶ್ರೀ ಸಿದ್ಧಯ್ಯ ಪುರಾಣಿಕ
62. ಸಂಸ್ಕೃತಿ ವಿಹಾರ - ಕೃತಿ ಕುರಿತು / 326
ಪ್ರೊ. ಎಸ್. ಜಿ. ಸಿದ್ದರಾಮಯ್ಯ
63. ನನ್ನ ನಿನ್ನೊಳಗೆ- ಕೃತಿ ಕುರಿತು / 327
ಡಾ. ಸಂಗಮೇಶ ಸವದತ್ತಿಮಠ
64. ಮೈಲಾರ ಮಹಾದೇವ / 327
ಡಾ. ಕೆ.ವೈ. ನಾರಾಯಣಸ್ವಾಮಿ
65. ಮನು ಬಳಿಗಾರ್ ಅವರ ಆಯ್ದ ಕವನಗಳು / 327
ಕಾ.ತ. ಚಿಕ್ಕಣ್ಣ
66. ಅಪ್ಪ / 328
ಐ.ಬಿ.ಎಚ್. ಪ್ರಕಾಶನ
**ಭಾಗ -9 : ಸಂದರ್ಶನಗಳು / 329**
**ವ್ಯಕ್ತಿ ವಿವರ / 372**
**ಲೇಖಕರ ವಿಳಾಸ / 379**

ಭಾಗ-1

# ಕಥೆಗಳು

## 'ಋಣ' ಕಥಾಸಂಕಲನ

ಯು.ಆರ್. ಅನಂತಮೂರ್ತಿ

**ಮ**ನು ಬಳಿಗಾರ್ ನನಗಿನ್ನೂ ಮುಖತಃ ಪರಿಚಯವಾಗಿರಲಿಲ್ಲ. ಅವರು ಕನ್ನಡದಲ್ಲಿ ಆರು ಪುಸ್ತಕಗಳನ್ನು ಪ್ರಕಟಿಸಿದ್ದರೂ ಅವನ್ನು ನಾನಿನ್ನೂ ಓದಿಲ್ಲ. ಈಗ ಪ್ರಕಟವಾಗುತ್ತಿರುವ ಸಂಕಲನದ ಕಥೆಗಳನ್ನು ಓದುತ್ತಿದ್ದಂತೆ ನಾನೇನೋ ಕಳೆದುಕೊಂಡಂತೆ ಭಾಸವಾಗಿದೆ. ಮನು ಬಳಿಗಾರ್ ನಮ್ಮ ನಡುವಿನ ಒಬ್ಬ ಸಮರ್ಥ ಲೇಖಕ; ಇನ್ನೂ ಬೆಳೆಯಬಲ್ಲ ಮುಕ್ತ ಮನಸ್ಸಿನ ಲೇಖಕ; ಹದವಾದ ದೃಷ್ಟಿಯ ಲೇಖಕ ಎಂದು ನನಗೆ ಅನ್ನಿಸಿದೆ.

ಇವರ ಬರವಣಿಗೆಯ ಹದ, ಭಾವನೆಯ ಆರ್ದ್ರತೆಯನ್ನು ಕಳೆದುಕೊಳ್ಳದ ಹದ ನನಗೆ ತುಂಬ ಇಷ್ಟವಾಗಿದೆ. ಆರ್ದ್ರ ಸ್ವಭಾವದವನು ವಿವೇಕಿಯಲ್ಲದೇ ಇರಬಹುದು; ಹಾಗೆಯೇ ವಿವೇಕಿಯಾದವನ ಭಾವನಾಲೋಕ ಒಣಗಿ ಹೋಗಿರಬಹುದು. ಆದರೆ ಮನು ಬಳಿಗಾರ್ ವಿವೇಕ ಕಳೆದುಕೊಳ್ಳದಂತೆ ಆರ್ದ್ರವಾಗಿ ಸ್ಪಂದಿಸುತ್ತಾರೆ. 'ವಂಚಿತ' ಕಥೆಯ ಮಡ್ಡೆಪ್ಪ ದುರಗಪ್ಪ ಕೊಂಪಿಯನ್ನು ನೋಡಿ. ಅವನ ದಾರುಣ ಬಡತನ ಸಾಲದೆಂಬಂತೆ ಅವನ ಹೆಸರೂ ಅವನಿಗೆ ಶಾಪವಾಗಿದೆ. ಇಡೀ ಕಥೆಯನ್ನು ಅತಿರೇಕಕ್ಕೆ ಹೋಗದಂತೆ ಬಳಿಗಾರ್ ಬರೆಯುತ್ತಾರೆ. ಈತನಿಗೆ ನೌಕರಿಯಿಲ್ಲ. ಮದುವೆಯಾಗಲು ಹುಡುಗಿ ಕಡೆಯವರು ಒಪ್ಪುವುದಿಲ್ಲ. ಮಡ್ಡೆಪ್ಪ ಯಾವುದೋ ಭರವಸೆಯಿಂದ ದಸರಾ ಉತ್ಸವ ನಡೆಸುವ ಒಬ್ಬ ಮೇಲಧಿಕಾರಿ ಹಿಂದೊಮ್ಮೆ ಗೆಳೆಯನಾಗಿದ್ದನೆಂದು ನೆನಸಿ ಮೈಸೂರಿಗೆ ಹೋಗುತ್ತಾನೆ; ಕುಚೇಲ ಕೃಷ್ಣನನ್ನು ನೋಡಲು ಹೋದಂತೆ. ಓದುಗನೂ ಅನುಕಂಪಿತನಾಗಿ ಈತನ ಬಗ್ಗೆ ಭರವಸೆ ತಾಳುತ್ತಾನೆ. ಒಂದೋ ಆಸೆ ಕೈಗೂಡಬೇಕು ಅಥವಾ ನಿರಾಸೆಯಾಗಬೇಕು; ಸಾಮಾನ್ಯವಾಗಿ ಈ ಕಥೆ ಅಪೇಕ್ಷಿಸುವ ಮುಕ್ತಾಯ ಹಾಗಿರಬೇಕು. ಆದರೆ ಬಳಿಗಾರರ ವಿಶೇಷ ಕಲೆಗಾರಿಕೆಯಿಂದಾಗಿ ಮಡ್ಡೆಪ್ಪನ ಒಂದು ಭವ್ಯ ಹಗಲುಗನಸಿನಲ್ಲಿ ಕಥೆ ಮುಕ್ತಾಯವಾಗುತ್ತದೆ. ಇದು ಕನಸೂ ಹೌದು; ಅವನು ತನ್ನಲ್ಲಿರುವ ಹಣವನ್ನೆಲ್ಲ ಖರ್ಚು ಮಾಡಿ ನಿರುಪಯುಕ್ತವಾದ ಒಂದು ಆನೆಯನ್ನು ಕೊಂಡು ತರುವ ಕಥೆಯೂ ಹೌದು. ಮಡ್ಡೆಪ್ಪನ ಈ ಮೂರ್ಖತನದಲ್ಲಿಯೇ ಅವನ ಹಲವು ಸಾಧ್ಯತೆಗಳ ಆತ್ಮ ನಮಗೆ ಗೋಚರಿಸುತ್ತದೆ.

'ಒಂದು ಚಪ್ಪಲಿ ಪ್ರಕರಣ' ಕಥೆಯ ಬಸವಣ್ಣಿಯ ಭಯಂಕರ ಕೋಪವನ್ನೂ ಇದೇ ಹದದಲ್ಲಿ ಚಿತ್ರಿಸಿದ್ದಾರೆ. ಕಥೆಯಲ್ಲಿ ಅನುಕಂಪವಿದೆ, ನವಿರಾದ ಹಾಸ್ಯವಿದೆ. ಬಸವಣ್ಣಿ ವಂಚಿತನಾಗುತ್ತಾನೆ. ಆದರೆ ಅವನ ಒಳಗಿನ ಸಿಟ್ಟು ಅವನಿಗೆ ಘನತೆಯನ್ನು ತರುತ್ತದೆ. ಅವನು ಬಡವ; ಆದರೆ ಬಡಪಾಯಿಯಲ್ಲ, ಬಂಡಾಯ ಸಾಹಿತ್ಯದ 'ರೋಷ'ದ ಬರವಣಿಗೆಯಲ್ಲಿ ದಕ್ಕಲಾರದೇ ಹೋಗುವ ಕೋಪಾಗ್ನಿ ಬಸವಣ್ಣಿಗೆ ಘನತೆ ತರುತ್ತದೆ. ಬಸವಣ್ಣಿ ನಮ್ಮ ಕರುಣೆಗೆ ಪಾತ್ರವಾಗದೇ ನಮ್ಮ ಮೆಚ್ಚುಗೆ ಗಳಿಸುವುದು ಕಥೆಯಲ್ಲಿ ಚೆನ್ನಾಗಿ ಮೂಡಿದೆ. ಬಳಿಗಾರ್‌ಗೆ ಶೈಲಿಯ ಹದ ದಕ್ಕಿದೆ ಎಂದು ಅನ್ನಿಸುತ್ತದೆ. "ಜೋಳದ ಬುಟ್ಟಿಯೊಳಗಿಂದ" ಕಥೆಯಲ್ಲಿಯೂ ಭದ್ರವ್ವ ತನ್ನ ಹೆಣ್ಣುತನದ ಅಳುಕನ್ನು ಗೆದ್ದು ನಿಲ್ಲುವುದು ಹದವಾಗಿ ಮೂಡಿದೆ.

ಬಳಿಗಾರ್‌ರ ಕಥೆಗಳಲ್ಲಿನ ಹದವಾದ ನಿರ್ವಹಣೆಯಂತೆಯೇ ಅವರ ಭಾವನಾಲೋಕ ಜೀವನದ ಹಲವು ಮಗ್ಗಲುಗಳನ್ನು ಒಳಗೊಳ್ಳುವ ಕ್ರಮ ಚೆನ್ನಾಗಿದೆ. 'ಅಳು' ಕಥೆಯ ಮಂಜು ನಾವು ಯಾರಾದರೂ ಆಗಿರಬಹುದು. ಒಬ್ಬ ಹುಡುಗ ಓದಿ ಮುಂದೆ ಬರುವುದು; ಅದಕ್ಕಾಗಿ ತಾಯಿ ತಂದೆಗಳು ಹಾತೊರೆದು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುವುದು; ಹೀಗೆ ಬರಡಾದೆನೆಂದು ನರಳುವುದು- ನಮಗೆ ಪರಿಚಿತವಾದ ಥೀಮು. ಆದರೆ ಬಳಿಗಾರ್‌ರ ಸಮರ್ಥ ನಿರ್ವಹಣೆಯಲ್ಲಿ ಮಂಜು ಕಳೆದುಕೊಂಡ ಬದುಕು ವಿಶಿಷ್ಟ ವಿವರಗಳಲ್ಲಿ ಮೂಡುವುದಷ್ಟೇ ಅಲ್ಲ - ಮಂಜು ಒಳ್ಳೆಯವನಾಗಿದ್ದೂ ಬರಡಾಗುತ್ತಾನೆ ಮತ್ತು ಹೀಗಾದೆನೆಂದು ನರಳುತ್ತಾನೆ. ಆದರೆ ಹೀಗೆ ನರಳುವುದು ಪ್ರಯೋಜನವಿಲ್ಲದ.... ಇತ್ಯಾದಿ ಭಾವನೆಗಳು ಪ್ರೌಢವಾಗಿ ನಮ್ಮ ಮನಸ್ಸಿನಲ್ಲಿ ಮೂಡಿಸುವಂತೆ ಬಳಿಗಾರ್ ಬರೆಯುತ್ತಾರೆ.

"ಗಂಗಮ್ಮನ ಜೀವನ ದೃಷ್ಟಿ" ಕತೆ ಭಾವಾತಿರೇಕದ ಆದರ್ಶವಾದೀ ನಿರೂಪಣೆಯಿಂದ ಕೃತಕವಾಗಬಹುದಿತ್ತು. ಆದರೆ ನಿರೂಪಕನ ಪಕ್ವತೆಯಿಂದಾಗಿ ಹಾಗಾಗದೇ ಗಂಗಮ್ಮ ನೈಜವಾಗಿದ್ದೇ ಆದರ್ಶಪ್ರಾಯಳಾಗುತ್ತಾಳೆ. 'ಋಣ'ದ ರಮೇಶ ಒಳ್ಳೆಯವನು. ಆದರೆ ಅವನ ಒಳ್ಳೆತನ ಮತ್ತು ಭಾವುಕತೆಗಳು ಸಮಸ್ಯಾತ್ಮಕವಾಗಿ ಮೂಡುವುದು ಬಳಿಗಾರರ ಸಂಕೀರ್ಣವಾದ ದೃಷ್ಟಿಯಿಂದ ಸಾಧ್ಯವಾಗಿದೆ. "ಎರಡು ದಾರಿ" ಕಥೆಯ ವಿರಸ ದಾಂಪತ್ಯ ಇಬ್ಬರನ್ನೂ ಸಂಬಂಧಪಟ್ಟವರಲ್ಲಿ ಯಾರೊಬ್ಬರನ್ನು ಅತಿ ಹಳಿಯದೆ, ಅತಿ ಎತ್ತದೆ ಮನುಷ್ಯ ಸ್ವಭಾವದಲ್ಲೇ ಇರುವ ಸಣ್ಣತನದ ದರ್ಶನವಾಗಿ ಮೂಡುತ್ತದೆ. ಇಲ್ಲಿ ಹೆಣ್ಣು ಸಣ್ಣವಳಾಗುತ್ತಾಳೆ; ಆದರೆ ಇನ್ನೊಂದು ಇಂಥ ಕಥೆಯಲ್ಲಿ ಗಂಡು ಅಲ್ಪನಾಗಿರಬಹುದು ಎನಿಸುವಂತಿದೆ ಪ್ರಸ್ತುತ ಕಥೆ. 'ಅನುಭೋಗ' ಕಥೆಯ ಕುಷ್ಠರೋಗಗ್ರಸ್ತನಾದ ಶಿವು ಒಮ್ಮೆ ಸುಂದರನೂ, ಸರಸಿಯೂ, ಭೋಗಿಯೂ, ವಿಲಾಸಿಯೂ ಆಗಿ ಗೆಳೆಯರ ಹೊಟ್ಟೆ ಉರಿಸುವಂತೆ ಇದ್ದವನು, ಈಗ ಅವನು ಕರುಣಾಜನಕನಾಗಿ ಕಾಣುತ್ತಾನೆ. ಅವರ ಹಾಗೆ ಅವನ ನಡತೆಯಿಲ್ಲ. ನಿರೂಪಕನಾದ ಅವನ ಗೆಳೆಯ ಶಿವೂನ ಸ್ವಸ್ಥವಾದ ದೃಷ್ಟಿಯಿಂದ ಬೆರಗಾಗುತ್ತಾನೆ. ಇಂಥ ಒಂದು ಕಥೆಯನ್ನು ಯಾರಾದರೂ ಕರುಣೆ ಹುಟ್ಟಿಸಲು

ಬರೆಯಬಹುದಿತ್ತು. ಆದರೆ ಬಳಿಗಾರ್ ಹಾಗೆ ಬರೆಯುವುದಿಲ್ಲವೆಂಬುದು ಕನ್ನಡದ ಇನ್ನೊಬ್ಬ ಕಥೆಗಾರನಾಗಿ ನನಗೆ ತುಂಬ ಇಷ್ಟವಾಗಿದೆ.

ಈ ಸಂಕಲನದ ಕಥೆಗಳನ್ನು ನಾನು ಓದುವಂತೆ ಮಾಡಿ ನನ್ನ ಒಳಮನಸ್ಸನ್ನು ಹಿಗ್ಗಿಸಿದ ಬಳಿಗಾರ್‌ರನ್ನು ನಾನು ಅಭಿನಂದಿಸುತ್ತೇನೆ. ನನ್ನಂತೆಯೇ ಇವರು ಹಳ್ಳಿಯಲ್ಲಿ ಹುಟ್ಟಿಬಂದು ವಿದ್ಯಾವಂತರಾದವರು. ಜೀವನವನ್ನು ಪ್ರತಿನಿತ್ಯ ಅದರ ಕ್ಷುಲ್ಲಕತೆಯಲ್ಲೂ, ಭವ್ಯತೆಯಲ್ಲೂ ಕಾಣಬಲ್ಲ. ಸರ್ಕಾರಿ ಇಲಾಖೆಯಲ್ಲಿ ಇರುವ ಬಳಿಗಾರ್ ತಮ್ಮ ಸೂಕ್ಷ್ಮಜ್ಞತೆ ಮತ್ತು ಭಾವನಾ ಪ್ರಾಮಾಣಿಕತೆಯಿಂದಾಗಿ ಇಂಥ ಕಥೆಗಳ ಜೊತೆಯೇ ನವರತ್ನ ರಾಮರಾಯರಂತೆ ಈ ಕಾಲದ ದಾಖಲಾಗಬಲ್ಲ ಬರವಣಿಗೆಯನ್ನು ಬರೆಯಬಲ್ಲಷ್ಟು ಇವರ ವೃತ್ತಿಜೀವನ ಹಿಗ್ಗಲಿ ಎಂದು ಹಾರೈಸಿ ಈ ಕೆಲವು ಮಾತುಗಳನ್ನು ಅಭಿಮಾನದಿಂದ ಬರೆದಿದ್ದೇನೆ.

೨೫.೦೧.೧೯೯೯ ಯು. ಆರ್. ಅನಂತಮೂರ್ತಿ

## ‘ಬದುಕು ಮಾಯೆಯ ಮಾಟ' ಕಥಾಸಂಕಲನ (೨೦೦೨)

ಡಾ. ಚಂದ್ರಶೇಖರ ಕಂಬಾರ

ಡಾ. ಮನು ಬಳಿಗಾರ್ ಅವರ ಕಥೆಗಾರಿಕೆ ನಾನು ಈತನಕ ಓದಿದ ಕಥೆಗಳಿಗಿಂತ ಭಿನ್ನವಾದ ನೆಲೆಯಿಂದ ಮನಸ್ಸನ್ನು ಆವರಿಸುತ್ತದೆ. ಓದಿಯಾದ ಮೇಲೆ ಒಂದು ಬಗೆಗಿನ ಹಿತ ಆರೋಗ್ಯದ ಅನುಭವವಾಗಿ ಇಡೀ ಕಥೆಯನ್ನು ಪುನಃ ಸೃಷ್ಟಿಸಿಕೊಳ್ಳುವ ಹಾಗೆ ಮಾಡುತ್ತದೆ. ಇತಿಹಾಸದ ಕುತಂತ್ರಗಳಿಂದ ಭಿನ್ನವಾದ ನಿರ್ಮಲವಾದ ಸಂದರ್ಭದಲ್ಲಿದ್ದಂತೆ ಅನುಭವವಾಗುತ್ತದೆ. ಅವರ ಯಾವ ಕಥೆಯೂ ಮುಗಿಯುವುದಕ್ಕೆ ಅವಸರ ಮಾಡುವುದಿಲ್ಲ. ಅಸಹಜವಾದ ತಿರುವು, ಒತ್ತಡಗಳಿಲ್ಲ. ಮರಕ್ಕೆ ಚಿಗುರು ಮೂಡುವ ಹಾಗೆ ಕಥೆ ಹುಟ್ಟಿ, ನಿಧಾನವಾಗಿ ಬಿಚ್ಚಿಕೊಂಡು ಈ ಕಥೆಗಳ ನಡಾವಳಿಯನ್ನು ನಿಯಂತ್ರಿಸಿದೆ ಎನ್ನಿಸುತ್ತದೆ. ಈ ಕಥೆಗಳು ಭಿನ್ನವಾಗಿರುವುದಕ್ಕೆ, ಇಷ್ಟು ತಾಜಾ ಆಗಿರುವುದಕ್ಕೆ ಇದೇ ಕಾರಣವೆಂದು ನನ್ನ ಭಾವನೆ. ಇವುಗಳನ್ನು ನಾನು ಒಟ್ಟಾರೆ ಓದಿದವನಲ್ಲ. ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದಂತೆ ಓದುತ್ತಿದ್ದೆ. ಓದಿಯಾದ ಮೇಲೆ ಕೆಲವು ಕಥೆಗಳನ್ನು ಮರೆಯಲಾಗಲೇ ಇಲ್ಲ. ಅಲ್ಲಿನ ಘಟನೆಗಳು ವ್ಯಕ್ತಿಗಳು ತಂತಾವೇ ನೆನಪಿಗೆ ನುಗ್ಗಿ ತಮ್ಮ ಸಂದರ್ಭಗಳನ್ನು ಪುನರಾರಂಭಿಸಿ ಹೋಗುತ್ತಿದ್ದವು. ಅವುಗಳಲ್ಲಿ ‘ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ' ಒಂದು.

ನವ್ಯ ಮತ್ತು ಬಂಡಾಯಗಳ ಆರ್ಭಟದಲ್ಲಿ ನಾವೆಂಥ ಅನುಭವಗಳನ್ನು ಕಳೆದುಕೊಂಡಿದ್ದೇವೆ ಎಂದು ತಿಳಿಯಬೇಕಾದರೆ ಈ ಕಥೆಯನ್ನು ಓದಬೇಕು. ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಈಗಲೂ ಇರುವ ಪೈಲ್ವಾನರು, ಉಸ್ತಾದಿಗಳು, ಅವರ ಹ್ಯಾವಗಳು, ಪೂರ್ವ ತಯಾರಿಗಳು, ಜನ ತಮಗಿಷ್ಟವಾದ ಪೈಲ್ವಾನರ

ಸುತ್ತುಕಟ್ಟಿಗೊಳ್ಳುವ ಭಾವ ಪ್ರಪಂಚಗಳು ಇವೆಲ್ಲ ಕಣ್ಣಿಗೆ ಕಟ್ಟುವಂತೆ ವಿವರವಾಗಿ ವಿವರಿಸಿದ್ದಾರೆ ಮನು. ಮಲ್ಲಣ್ಣ ಪೈಲ್ವಾನನ ವಿಷಯವೇ ಅರ್ಧಕಥೆಯಾಗಿದೆ. ಅವನು ಮತ್ತವನ ಎದುರಾಳಿಯ ಹೇಳಿಕೆ, ಪ್ರತಿಹೇಳಿಕೆಗಳು, ಅವರ ವ್ಯಾಯಾಮ ಸಾಧನೆ, ಊಟದ ವೈಭವ, ಅವರ ಟಾಂಗುಗಳು ಇನ್ನೊಂದು ತಿಂಗಳು ಕುಸ್ತಿ ಇದೆ ಎಂದಾಗ ತರಬೇತು ನೀಡಲು ಬರುವ ಉಸ್ತಾದಿಗಳು, ಅವರ ಹಿಂದಿನ ಪ್ರತಾಪಗಳು ಇವುಗಳೊಂದಿಗೆ ಕುಸ್ತಿಯ ದಿನ ಬರುತ್ತಿದ್ದಂತೆ ವಿವರವಾದ ವರ್ಣನೆಗಳಿಂದಾಗಿ ಕ್ಷಣಕ್ಷಣವೂ ಪತ್ತೇದಾರಿ ಕಥೆಗಳಂತೆ ಕುತೂಹಲ ಕೆರಳಿಸುತ್ತ ಕಥೆ ಮುಂದುವರಿಯುತ್ತದೆ. ಕುಸ್ತಿಯ ಅನುಭವವುಳ್ಳವರಿಗೆ ಮಾತ್ರವಲ್ಲ ಹೊರಗಿನಿಂದ ನೋಡುವವರಿಗೂ ಮೈನವಿರೇಳಿಸುವ ವರ್ಣನೆಗಳಿವು. ಕೊನೆಗೂ ಒಮ್ಮೆ ಕುಸ್ತಿ ಮುಗಿದು ಎಲ್ಲರು ನಿರೀಕ್ಷಿಸಿದ್ದ ಮಲ್ಲಣ್ಣ ಬಿದ್ದು ಸೀದಾ ದೇವಳ್ಳಿ ದಾರಿ ಹಿಡಿದ. ಊರಿಗೆ ಬಂದವನು ದನದ ಮನೆಗೆ ಬಂದು ಮಲಗಿದ. ಇಲ್ಲಿಗೇ ಈ ಕಥೆ ಮುಗಿದಿದ್ದರೂ ಇದೊಂದು ರೋಮಾಂಚನಕಾರೀ ಅನುಭವದ ಕಥನವಾಗುತ್ತಿತ್ತು.

ಸೋತು ಸುಣ್ಣಾಗಿದ್ದ ಮಲ್ಲಣ್ಣನಿಗೆ ನಿದ್ದೆ ಬಾರದಿದ್ದಾಗ ಯಾರೋ ಕಾಲನ್ನು ನೆಕ್ಕಿದಂತೆ ಭಾಸವಾಯ್ತು. ಕಣ್ಣೆರೆದು ನೋಡಿದರೆ ಹೋರಿ ಮುಕ್ಕಣ್ಣ! ದಡಗ್ಗನೇ ಎದ್ದವನೆ ಅದನ್ನಪ್ಪಿಕೊಂಡ.... ಬಿಕ್ಕಿ ಬಿಕ್ಕಿ ಅತ್ತ.... ಆಮೇಲೆ ಮಲ್ಲಣ್ಣ ತನ್ನನ್ನು ತಾನು ಹೋರಿಯಲ್ಲಿ ಪುನಃ ಸೃಷ್ಟಿಸಿಕೊಂಡು ತಾನು ಸೋತ ಸೋಲುಗಳನ್ನೆಲ್ಲ ಕಪ್ಪಕಾಣಿಕೆ ಸಮೇತ ಗೆಲ್ಲುತ್ತ ಹೋಗುತ್ತಾನೆ. ಕಥೆಗಾರನ ಶ್ರದ್ಧೆಯಿಂದಾಗಿ ಹೋರಿಯಂಥ ಪ್ರಾಣಿ ಕೂಡ ಮಾನವಸಹಜ ಧೀರೋದಾತ್ತ ಪಾತ್ರವಾಗಿ ಬೆಳೆಯುತ್ತದೆ. ಹಿಂದೆ ಕೆಲವು ಕಥೆ ಕಾದಂಬರಿಗಳಲ್ಲಿ ಪ್ರಾಣಿಗಳು ಪಾತ್ರಗಳಾಗುವ ಮಟ್ಟಕ್ಕೆ ಬೆಳೆದುದನ್ನು ಓದಿದ್ದೆ. ಆದರೆ ಆ ಯಾವ ಪ್ರಾಣಿಗಳೂ ಮುಕ್ಕಣ್ಣನ ಹಾಗೆ ಕಥಾನಾಯಕನನ್ನೇ ಹಿಂದೆ ಸರಿಸಿ ಬೆಳೆದುದನ್ನು ಕಂಡಿರಲಿಲ್ಲ. ತುಂಬ ಹೃದಯಸ್ಪರ್ಶಿಯಾದ ನಾನೆಂದಿಗೂ ಮರೆಯಲಾಗದ ಕಥೆಯಿದು.

"ಕಥಾವಸ್ತು"ವಿನ ಜೀವಂತಿಕೆಯಿಂದ ನಳನಳಿಸುವ ಪಾತ್ರ, ಯೋಚಿಸಿದಷ್ಟೂ ಕ್ಲಿಷ್ಟವಾಗುವ ಬಿಡಿಸಿದಷ್ಟೂ ಕಗ್ಗಂಟಾಗುವ ವಿಕ್ಷಿಪ್ತ ವ್ಯಕ್ತಿತ್ವ ರೇಶ್ಮಾಳದು. ಎದುರಾದವರು ಅವಳ ವ್ಯಕ್ತಿತ್ವದ ಮುಂದೆ ಸೋತರೆ ಸಾಲದು. ಸೋಲನ್ನು ಒಪ್ಪಿಕೊಳ್ಳಬೇಕು. ಕೆಲವು ವಾಗ್ವಾದ, ತಿರುಗಾಟ, ಜಗಳ ಬೆಳೆಯುತ್ತ ಹೋದಂತೆ ಈಕೆ ತಾವು ಕಂಡವಳಲ್ಲವೆ? ಅಂತ ಬಹುಬೇಗ ಪರಿಚಿತಳಾಗುತ್ತಾಳೆ. ಅವಳ ದಾಂಪತ್ಯವೂ ವಿಶಿಷ್ಟವೆ. ಗಂಡ ಹೆಂಡತಿ ತಂತಮ್ಮ ಗುಣಗಳನ್ನು ಅದಲು ಬದಲು ಮಾಡಿಕೊಂಡಿರಬಹುದೆಂಬ ಮಿತ್ರರ ಅಭಿಪ್ರಾಯವನ್ನು ಕಥೆಗಾರ ತಮ್ಮ ಅಭಿಪ್ರಾಯದೊಂದಿಗೆ ಹೇಳಿದ್ದಾರೆ. ಎದುರಿನವರ ಸೋಲುಗಳಿಂದಲೇ ಜೀವಶಕ್ತಿ ಪಡೆದವಳೇ ಅನ್ನಿಸುವ ಆ ಪಾತ್ರದ ಬಾಯಲ್ಲಿ ಆತ್ಮಹತ್ಯೆಯ ಮಾತು ಬಹಳ ಅಸಹಜ ಮತ್ತು ಅಸಂಗತವೆಂಬ ಅಭಿಪ್ರಾಯಕ್ಕೆ ನಾವೂ ಬರುವಷ್ಟರಲ್ಲಿ ಅವಳ ಗಂಡನ ಆತ್ಮಹತ್ಯೆಯ ಆಘಾತದೊಂದಿಗೆ ಕಥೆ ಮುಗಿಯುತ್ತದೆ. ಅವನ ಆತ್ಮಹತ್ಯೆಗೇನೋ ಅವನೇ ಕೊಟ್ಟ ಕಾರಣ ಇದೆ. ರೇಶ್ಮಾಳಲ್ಲಿ ಅಜ್ಜಿ ತಾಯಿಯನ್ನೇ

ಕಾಣಬಯಸಿದ ಆತ ಅದು ಸಿಕ್ಕದಾದೊಡನೆ ಆತ್ಮಹತ್ಯೆ ಮಾಡಿಕೊಂಡ ಕಥೆ ಮುಗಿದಾದ ಮೇಲೆ ರೇಶ್ಮಾ ನಮ್ಮಲ್ಲಿ ಬೆಳೆಯತೊಡಗುತ್ತಾಳೆ. ಅವಳ ಬಗ್ಗೆ ನಾವು ಈತನಕ ತಿಳಿದುಕೊಂಡ ಲಘು ಭಾವನೆಗಳಿಗೆ ಗಾಂಭೀರ್ಯ ಮೂಡಿ ರೇಲ್ಮಾ ಬಶ್ಮಾ ಅನುಕಂಪ ಮೂಡುತ್ತದೆ.

ಆಧುನಿಕ ಮನುಷ್ಯರ ದೈವ "ರಾಜಕಾರಣ" ಮೂಲಕವೇ ಪ್ರಕಟವಾಗುವುದೆಂದು ಥಾಮಸ್‌ಮನ್ ಹೇಳಿದ್ದಾರೆ. ಬ್ರಿಟಿಷರಿಂದ ಬಳುವಳಿಯಾಗಿ ಬಂದ ರಾಜಕಾರಣಕ್ಕೆ ಮೌಲ್ಯಗಳ ಅಗತ್ಯಬೀಳುವುದು ವಿಲಾಸಕ್ಕಾಗಿ ಮಾತ್ರ ತನಗೆ ಅನುಕೂಲವಾದ ಮೌಲ್ಯಗಳಿಲ್ಲದಿದ್ದಲ್ಲಿ ನಕಲು ಮೌಲ್ಯಗಳನ್ನು ಸೃಷ್ಟಿಸಿಕೊಂಡು ಮುಂದುವರಿಯುತ್ತದೆ. 'ರಾಜಕಾರಣ' ಎಂಬ ಕಥೆ ಈ ಸಮಸ್ಯೆಯನ್ನು ಚಿತ್ರಿಸುತ್ತ ಮಜ ತೆಗೆದುಕೊಳ್ಳುತ್ತದೆ. ರಾಜಕಾರಣ ಅದೊಂದು ಹುಚ್ಚು ಕುದುರೆ, ಆದರೆ ಅದೃಶ್ಯವಾದ ಕುದುರೆ. ಪ್ರತಿಯೊಬ್ಬರ ಕೈಯಲ್ಲಿ ಲಗಾಮಿದೆ. ಈ ಕುದುರೆ ತನ್ನ ಬಳಿಯೇ ಇದೆಯೆಂದು ಪ್ರತಿಯೊಬ್ಬರೂ ಹೇಳುತ್ತಾರೆ. ಆದರೆ ಪ್ರತಿಯೊಬ್ಬರ ಹತ್ತಿರವೂ ಅದಿಲ್ಲ. ಲಗಾಮು ಅದಲು ಬದಲು ಮಾಡುವ ಚೇಷ್ಟೆಯೂ ನಡೆಯುತ್ತದೆ. ಇಲ್ಲಿಯ ಪ್ರತಿಯೊಬ್ಬನೂ ಒಂದೇ ಪಾತ್ರವನ್ನು ಬೇರೆ ಬೇರೆ ಥರ ಅಭಿನಯಿಸುತ್ತಾನೆ. ಕುದುರೆ ಒಬ್ಬರಿಗೆ ಮಾತ್ರ ಸಿಕ್ಕುವುದು ಸಾಧ್ಯ. ಆ ಸುದೈವಿ ಯಾರೆಂದು ತೀರ್ಮಾನಿಸುವುದೇ ಇಲ್ಲಿಯ ಆಟ. ತೀರ್ಮಾನವಾದ ಕೂಡಲೇ ಎಲ್ಲ ಬಣ್ಣ ಬದಲಾಗಿ ಬೇರೊಂದು ಪಾತ್ರದ ಸಿದ್ಧತೆಗೆ ತೊಡಗುತ್ತಾರೆ.

"ಮುತ್ತೈದೆ" ನಿಧಾನವಾಗಿ ಬಿಚ್ಚಿಕೊಳ್ಳುವ ಕಥೆ. ಡಾ || ಸುರೇಶ್ ಹಳೆಯ ಪಳೆಯುಳಿಕೆ ಕಟ್ಟಡಗಳ ಅಸಮಾನ್ಯ ರಚನೆ, ಭದ್ರತೆ ಭವ್ಯತೆಗಳನ್ನು ಮೆಚ್ಚಿಕೊಳ್ಳುತ್ತ ತನ್ನಜ್ಜಿ ದೇವೀರಮ್ಮನನ್ನು ಜ್ಞಾಪಿಸಿಕೊಳ್ಳುತ್ತಾನೆ. ಆಕೆಗೆ ಆರಾಮವಿಲ್ಲವೆಂಬ ಸಂಗತಿ ಎರಡು ತಿಂಗಳು ಹಳೆಯದು. ಮುತ್ತೈದೆಯಾಗಿ ಸಾಯಬೇಕೆಂಬುದು ಅವಳ ಹಟ. ಹೆಣವಾದಾಗಲೂ "ಹಸಿರು ಬಳೆ ಕೆಂಪು ಕುಂಕುಮ ಗಲ್ಲದ ತುಂಬ ಅರಿಶಿಣ ಈ ಸಾಮಗ್ರಿಗಳೇ ತನಗೆ ಸ್ವರ್ಗಕ್ಕೆ ಸೋಪಾನ ತೋರಿಸಬಲ್ಲವೆಂಬ ಮೂಢನಂಬಿಕೆ" ಆಕೆಯದು. ಅಜ್ಜಿಯ ಈ ಅಭಿಲಾಷೆಯನ್ನು ಬಿಡಿಸಿ ಗುಣಪಡಿಸಬೇಕೆಂದು ಡಾಕ್ಟರ ಮೊಮ್ಮಗನ ಸಂಕಲ್ಪ. ಅಜ್ಜ "ಬೆಂಕಿಸ್ವಾಮಿ!" ಹಿಂದೊಮ್ಮೆ ಅಜ್ಜನಿಗಾಗದ ಅಭಿಪ್ರಾಯ ಹೇಳಿದ್ದಕ್ಕೆ ಅಜ್ಜ ಹೊಡೆದು ಅವಳ ಮೈಮೇಲಾದ ಗಾಯಗಳು ಮಾಯಲಿಕ್ಕೆ ಒಂದೂವರೆ ತಿಂಗಳು ಹಿಡಿದಿತ್ತು. ಅದಕ್ಕೆ ಅಜ್ಜನ ಜೊತೆಗಿರುವುದೆಂದರೆ ಏಳು ಹೆಡೆ ಸರ್ಪದ ಜೊತೆಗಿದ್ದಂತೆ ಎಂದು ದೇವೀರಮ್ಮ ಹೇಳಿದ್ದನ್ನು ಮೊಮ್ಮಗ ಜ್ಞಾಪಿಸಿಕೊಂಡು ಅಂಥವಳನ್ನು ಸಾವಿನಿಂದ ಪಾರುಮಾಡುವುದು ಹ್ಯಾಗೆಂದು ಚಿಂತೆ ಮಾಡುತ್ತಾ ಬರುತ್ತಾನೆ. ಬಂದು ನೋಡಿದರೆ ಅವನ ಕಲ್ಪನೆ ತಲೆಕೆಳಗಾಗಿದೆ. "ಏನಾರ ಮಾಡಿ ನನ್ನನ್ನು ಆರಾಮ ಮಾಡು ನಾ ಜೀವಂತ ಇದ್ದಾಗಲೇ ಅವರು ಕಣ್ಣು ಮುಚ್ಚಲಿ" ಎಂದಾಡಿದ ಅಜ್ಜಿಯ ಮಾತು ಕೇಳಿ ಬೆರಗಾಗುತ್ತಾನೆ. ಕಥೆ ಇದ್ದಕ್ಕಿದ್ದಂತೆ ಲಘು ಹಾಸ್ಯಕ್ಕೆ ತಿರುಗಿತೇ ಎಂದು ಅನುಮಾನ ಬರುವಷ್ಟರಲ್ಲಿ ಗೊತ್ತಾಗುತ್ತದೆ. ಬೆಂಕಿಯಂಥ ಅಸಹಕಾರೀ ಗಂಡ (ಅಜ್ಜ) ಹಾಸಿಗೆ ಹಿಡಿದಾಗ ಅವನ ಸೇವೆಗೆ ಯಾವ ಆಳೂ ತಯಾರಿರಲಿಲ್ಲ. ಆಗಲೇ ಅಜ್ಜಿ ನಿರ್ಧರಿಸಿದ್ದಳು. ತಾನು ಜೀವಂತವಾಗಿರದಿದ್ದರೆ ಇವರ ಹೆಣವೂ ಅನಾಥವಾಗಿ

ಬಿಡಬಹುದು ಎಂದು. ಆದ್ದರಿಂದ ತಾನು ಬದುಕಲೇಬೇಕು. ಕಥೆ ಓದಿ ಮುಗಿಸಿದಾಗ ಅಜ್ಜಿಯ ಬಗೆಗಿನ ನಮ್ಮ ಗೌರವ ಇಮ್ಮಡಿಯಾಗುತ್ತದೆ. ಮಂದಹಾಸದೊಂದಿಗೆ ಕಥಾರಂಭದ ಪಳೆಯುಳಿಕೆಗಳ ನೆನಪಾಗುತ್ತದೆ. ಕಥೆ ಎಲ್ಲೂ ಆಡಂಬರ ಮಾಡದೆ ಮೌನವೇ ಅನುಭವವಾಗುವ ಈ ಪರಿ ಬಳಿಗಾರರಿಗೇ ವಿಶಿಷ್ಟವಾದುದು.

ಸಂಕಲನದ ಎಲ್ಲ ಕಥೆಗಳೂ ನನಗೆ ಸಮಾನವಾಗಿ ಇಷ್ಟವಾದಂತಿಲ್ಲ. 'ಪೃಥ್ವಿಯ ಮೇಲೊಂದು ಮರಡಿ', 'ಘಾತ' ಇವು ತೆಳುವಾದ ಅನುಭವ ನೀಡಿ ತಮ್ಮಷ್ಟಕ್ಕೆ ಹಿಂದೆ ಸರಿವ ಕಥೆಗಳು. ಹಾಗೆಂದು ಇವುಗಳನ್ನು ಲಘುವಾಗಿ ಪರಿಗಣಿಸಬೇಕೆಂದು ಅಲ್ಲ. ಜಾತಿವಂತ ಸಂಗೀತಗಾರನೆಂದೂ ಅಪಸ್ವರ ಎತ್ತಲಾರ ಅಲ್ಲವೆ? ಈ ಕಥೆಗಳ ಹಿಂದೆಯೂ ಬದುಕಿನ ನಿಗೂಢಗಳನ್ನು ಕಾಂಬ ಹಂಬಲದಿಂದ ಮಿಡಿವ ಒಂದು ಸುಸಂಸ್ಕೃತ ಮನಸ್ಸು ಕ್ರಿಯಾಶೀಲವಾಗಿರುವುದನ್ನು ಬದುಕಿನ ಗಾಢ ಕತ್ತಲೆಗಳನ್ನು ಎದುರಿಸಿ ನೋಡುವ ಉತ್ಸಾಹದ ಧೈರ್ಯ ಕಾಣುತ್ತದೆ.

ಅಣ್ಣಯ್ಯನ ಹೆಣ ಅಮೆರಿಕದಿಂದ ಬರುವ ಸುದ್ದಿಯಿಂದ ಆರಂಭವಾಗುವ "ಸಾವು ಬದುಕು ನಿರಂತರ" (ಬದುಕು ಮಾಯೆಯ ಮಾಟ) ಒಂದು ಮಹತ್ವಾಕಾಂಕ್ಷೆಯ ಕಥೆ. ಹೆಣ ಬರುವ ತನಕ ಕಾಯುತ್ತ ಕಾಲವನ್ನನುಭವಿಸುವ ಗೋಳು ಒಂದಾದರೆ, ಬಂದ ಮೇಲೆ ಅಣ್ಣಯ್ಯನ ಹೆಣ ಎದುರಿಗಿಟ್ಟುಕೊಂಡು ಬದುಕಿದ್ದಾಗ ಅವನೊಂದಿಗಿನ ಸಂಬಂಧಗಳನ್ನು ಜ್ಞಾಪಿಸಿಕೊಳ್ಳುತ್ತ ಸಾವು ಬದುಕುಗಳು ಕೈ ಕೈ ಹೆಣೆದ ಪರಿಗೆ ಬೆರಗಾಗುತ್ತ ಸಾವಿನ ಮೀಮಾಂಸೆಗೆ ಬಂದು ತಲುಪುವುದಿನ್ನೊಂದು. ಅಣ್ಣಯ್ಯನಿಗೆ ಸಾವು ಅನುಭವವಿಲ್ಲ. ಯಾಕೆಂದರೆ ಆತ ಆಗಲೇ ಸತ್ತಿದ್ದಾನೆ. ಆದರೆ ಅದರ ಮೀಮಾಂಸೆಗೆ ತೊಡಗಿದ ಪ್ರಭುದೇವನಿಗೆ ಅದು ಸಾಕ್ಷಿಯಾಗುತ್ತದೆ. ರಾತ್ರಿ ಕನಸಿನಲ್ಲಿ ತಾನು ಸತ್ತು ಸಾವಿನ ಮೆರವಣಿಗೆಯಲ್ಲಿ ತಾನೂ ಭಾಗಿಯಾಗಿ ಹೆಣವೂ ಹೆಣಕ್ಕೆ ಸಾಕ್ಷಿಯೂ ಆಗಿ ಏಕಕಾಲದಲ್ಲಿ ಎರಡು ಪಾತ್ರಗಳನ್ನು ಅಭಿನಯಿಸುತ್ತಾನೆ. ಸಾವಿನ ಇಂಥ ಭಯಾನಕ ದರ್ಶನದಲ್ಲಿಯೇ ಕಥೆ ಮುಗಿಯಿತೆಂದಾಗ ಗೋರಿಯಿಂದ ಚಿಮ್ಮುವ ಹಸಿರಿನ ಹಾಗೆ ಚುನಾವಣೆಯ ಬಾಜಾಭಜಂತ್ರಿ ಊರನ್ನೂ ಸಾವು ತುಂಬಿದ ನಮ್ಮ ಮನಸ್ಸನ್ನೂ ಆಕ್ರಮಿಸಿ ಸಂಭ್ರಮಿಸುತ್ತದೆ. ಓದಿ ಮುಗಿಸಿದ ಮೇಲೂ ಕಥೆ ಹಿಂದೆ ಮುಂದೆ ಸರಿಯುತ್ತ ಭಯಾನಕವಾದ ಹಾಗೆಯೇ ಸಡಗರದ ದೃಶ್ಯಗಳಿಗೆ ಅರ್ಥದ ಪದರುಗಳನ್ನು ಕಟ್ಟಿಕೊಡುತ್ತ ಬೆಳೆಯುತ್ತದೆ. ಕನ್ನಡದ ಶ್ರೇಷ್ಠ ಕಥೆಗಳಲ್ಲಿ "ಸಾವು ಬದುಕು ನಿರಂತರ" ಮತ್ತು "ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ"- ಕಥೆಗಳು ನಿಲ್ಲುತ್ತವೆಂದು ನಂಬಿದ್ದೇನೆ.

ಮನು ಬಳಿಗಾರ್ ಅವರ ಕಥೆಗಳು ನನಗೆ ಇಷ್ಟವಾದ ಬಗೆಯನ್ನು ಅವು ನನಗೆ ನೀಡಿದ ಅನುಭವದ ಪುಟ್ಟ ವಿಶ್ಲೇಷಣೆ ಸಮೇತ ವಿವರಿಸಿದ್ದೇನೆ. ನನ್ನ ಹಾಗೆಯೇ ಇವರೂ ಹಳ್ಳಿಯವರು. ನನ್ನ ಪಕ್ಕದ ಜಿಲ್ಲೆಯವರು, ನಮ್ಮಿಬ್ಬರ ಭಾವಪ್ರಪಂಚ ಭಿನ್ನವಾದದ್ದಲ್ಲ. ಇಂಥ ಒಬ್ಬ ಮಿತ್ರ ಆಗಲೇ ಕನ್ನಡದ ಕಥಾ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಬದುಕನ್ನು ಅದರೆಲ್ಲ ಗಾಂಭೀರ್ಯ ಮತ್ತು ಹೊಳಹುಗಳೊಂದಿಗೆ ನೋಡಿ ಬೆಚ್ಚನೆಯ ಭಾವನೆಗಳಿಂದ ಅಂದಗೆಡದಂತೆ ಹಿಡಿದ ಕಥೆ ಕಟ್ಟಿ ತೋರುವ ಶ್ರೇಷ್ಠ ಕಲೆ ಮತ್ತು ಶೈಲಿ

ಮಾತ್ರ ಕೇವಲ ಅವರದ್ದೇ, ಅವರೊಬ್ಬರದ್ದೇ, ಅದಕ್ಕಾಗಿ ಅವರನ್ನು ಅಭಿನಂದಿಸುತ್ತ ಅವರಿಂದ ಇನ್ನೂ ಇಂತಹ ಕಥೆಗಳು ಬರಲಿ, ಕನ್ನಡದ ಶ್ರೀಮಂತಿಕೆಯನ್ನು ಹೆಚ್ಚಿಸಲಿ ಎಂದು ಹಾರೈಸುತ್ತೇನೆ.

**ನವಂಬರ್ ೨೦೦೨ - ಡಾ. ಚಂದ್ರಶೇಖರ ಕಂಬಾರ**

# ಮನು ಬಳಿಗಾರ್ : ಕೆಲವು ಕತೆಗಳು

ಡಾ. ಜಿ.ಆರ್. ತಿಪ್ಪೇಸ್ವಾಮಿ

**ಕಾ**ವ್ಯ, ಲಲಿತಪ್ರಬಂಧ, ಜೀವನಚರಿತ್ರೆ, ಸಂಪಾದನೆ ಮುಂತಾದ ಕ್ಷೇತ್ರಗಳಲ್ಲಿ ಬರವಣಿಗೆ ಮಾಡಿರುವ ಮನು ಬಳಿಗಾರ್ ಅವರು ಸಣ್ಣಕತೆಗಳನ್ನೂ ರಚಿಸಿದ್ದಾರೆ. ಅವ್ಯಕ್ತ(೧೯೮೮), ಋಣ, ಬದುಕು ಮಾಯೆಯ ಮಾಟ, ದ ಡೆತ್ ಆ್ಯಂಡ್ ಅದರ್ ಸ್ಟೋರೀಸ್ - ಮುಂತಾದ ಸಂಕಲನಗಳನ್ನು ಹೊರತಂದಿದ್ದಾರೆ. 'ಕೆಲವು ಕತೆಗಳು' ಸಂಕಲನದಲ್ಲಿ ವಂಚಿತ, ಗಂಗಮ್ಮನ ಜೀವನದೃಷ್ಟಿ, ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ, ಕಥಾವಸ್ತು, ಸಾವು ಬದುಕು ನಿರಂತರ, ಎರಡುದಾರಿ, ಮುತ್ತೈದೆ, ಒಂದು ಚಪ್ಪಲಿ ಪ್ರಕರಣ - ಮುಂತಾದ ಆಯ್ದ ಹದಿನಾರು ಕತೆಗಳನ್ನು ೨೦೦೫ರಲ್ಲಿ ಸಂಕಲ್ಪಿಸಿಕೊಟ್ಟಿದ್ದಾರೆ. ಗ್ರಾಮೀಣ ಪರಿಸರವೇ ಇವರ ಕತೆಗಳ ಅಂತರಂಗ, 'ಋಣ' ಕಥಾಸಂಕಲನಕ್ಕೆ ಮುನ್ನುಡಿ ಬರೆದ ಯು.ಆರ್.ಅನಂತಮೂರ್ತಿಯವರು "ಮನು ಬಳಿಗಾರರ, ಬರವಣಿಗೆಯ ಹದ ಭಾವನೆಯ ಆರ್ದ್ರತೆಯನ್ನು ಕಳೆದುಕೊಳ್ಳದ ಹದ" ಎಂದಿದ್ದಾರೆ. ಅವರು ಯಾವುದೇ ಭಾವಾವೇಶಕ್ಕೆ ಒಳಗಾಗದಂತೆ ಆರ್ದ್ರವಾಗಿಯೇ ಸ್ಪಂದಿಸುತ್ತಾರೆಂಬುದಕ್ಕೆ ಅವರ ಕಥಾರಚನೆಗಳೇ ಸಾಕ್ಷಿಯಾಗಿವೆ.

'ವಂಚಿತ' ಕತೆಯಲ್ಲಿ ಬರುವ ಮಡ್ಡೆಪ್ಪ ಲಕ್ಷ್ಮೇಶ್ವರದ ಹಳ್ಳಿಯ ಹಿಂದುಳಿದ ಬಡಕುಟುಂಬವೊಂದರಲ್ಲಿ ಹುಟ್ಟಿದವನು. ಈತನ ಪೂರ್ತಿ ಹೆಸರು ಮಡ್ಡೆಪ್ಪ ದುರಗಪ್ಪ ಕೊಂಪಿ. ಪೂರ್ತಿಯ ಹೆಸರಿನ ಬಗ್ಗೆ ಆತನಿಗೆ ದ್ವೇಷ ಹಾಗೂ ತಿರಸ್ಕಾರ. ಮಡ್ಡೆಪ್ಪ ಲಕ್ಷ್ಮೇಶ್ವರದ ಕಿರಿಯ ಕಾಲೇಜೊಂದರಲ್ಲಿ ಓದುತ್ತಿದ್ದ. ಹುಡುಗರು ಆತನ ಹೆಸರನ್ನು ಕೂಗುತ್ತಾ ಹೀಯಾಳಿಸುತ್ತಿದ್ದರು. ಬೋರ್ಡ್ನ ಮೇಲೆ ಪೂರ್ತಿ ಹೆಸರು ಬರೆದು ಅವಮಾನಿಸುತ್ತಿದ್ದರು. ಇದರಿಂದ ಎರಡು ದಿನ ಕ್ಲಾಸಿಗೇ ಹೋಗಲಿಲ್ಲ. ಅದನ್ನ ಮರೆಯಲು ಅಗಸ್ತ್ಯತೀರ್ಥದ ನೀರಿನಲ್ಲಿ ಸ್ನಾನ ಮಾಡಿ ಮುಕ್ತಿಮಂದಿರಕ್ಕೆ ಹೋಗಬೇಕೆಂದು ನಿರ್ಧರಿಸಿದ. ಕೆಲವರು ಆತನ ಈ ಅಭಿಪ್ರಾಯಕ್ಕೆ 'ಇದು ಮೆಂಟಲ್ ಕೇಸ್' ಎಂದರು. ಆತನ ತಂದೆ ತಾಯಿ ಸಂಪೂರ್ಣ ಅನಕ್ಷರಸ್ತರು. ಕೂಲಿನಾಲಿ ಮಾಡಿ ಇವನನ್ನು ಶಾಲೆಗೆ ಕಳಿಸಿದರು. ಓದುವುದರಲ್ಲಿ ಬುದ್ಧಿವಂತ. ಶಿಗ್ಗಿ ಹೈಸ್ಕೂಲಿಗೆ ಪ್ರವೇಶ ಸಿಕ್ಕಿತು. ಅಲ್ಲಿಯೇ ಊಟದ ವ್ಯವಸ್ಥೆಯೂ ಆಯಿತು. ಆತನ ಸ್ನೇಹಿತ ಶಿವಲಿಂಗು. ಸುಗ್ಗಿಯ ದಿನಗಳಲ್ಲಿ ಆತನ ಜೊತೆ ತಿರುಗಾಟ, ಶೇಂಗಾ, ಊಟ

ತಿಂಡಿ ತಿನ್ನುತ್ತಾ ಸಂಭ್ರಮಿಸಿದ. ಧಾರವಾಡದ ಕರ್ನಾಟಕ ಕಾಲೇಜ್ ಹಾಗೂ ಹಾಸ್ಟೆಲ್‌ನಲ್ಲಿ ಶಿವಲಿಂಗುಗೆ ಪ್ರವೇಶ ಸಿಕ್ಕಿತ್ತಾದರೂ, ಮಡ್ಡೆಪ್ಪನಿಗೆ ಸಿಗಲಿಲ್ಲ.

ನೌಕರಿಗಾಗಿ ಅಲೆದಾಟ ಪ್ರಾರಂಭಿಸಿದ. ತುಂಬಾ ಬಡತನವಿದ್ದದರಿಂದ ಯಾರಿಗೂ ಈ ತರಹ ಬಡತನ ಬರಬಾರದೆಂದು ಚಿಂತಿಸುತ್ತಿದ್ದನು. ತಾನು ಹಿಂದುಳಿದ ವರ್ಗವಾದರೂ ಖೊಟ್ಟಿ ಸರ್ಟಿಫಿಕೇಟ್ ಮಾಡಿಸಿ ಹುಬ್ಬಳ್ಳಿಯಲ್ಲಿ ಬ್ಯಾಂಕ್ ಕ್ಲಾರ್ಕ್ ನೌಕರಿ ದೊರಕಿಸಿಕೊಂಡನು. ಫೇಕ್ ಸರ್ಟಿಫಿಕೇಟ್‌ನಿಂದ ಕಿರಿಕಿರಿಯಾಗಿ ರಾಜೀನಾಮೆ ನೀಡಿ ಹೊರಬಂದ ಮಾಜಿ ಶಾಸಕರು ಮಗಳನ್ನು ಕೊಡಲು ಮುಂದಾದರು. ಆಗ ಹುಡುಗಿಯ ತಾಯಿ ಏನೂ ಇಲ್ಲದವರಿಗೆ ಹೇಗೆ ಕೊಡುವುದು ಎಂದರು. ಆಗ ಮಡ್ಡೆಪ್ಪನಿಗೆ ಬೇಸರವಾಯಿತು. ಅನಂತರ ಶಿವಲಿಂಗು ಮೈಸೂರಿನ ಉಪವಿಭಾಗಾಧಿಕಾರಿಯಾಗಿ ಕೆಲಸವನ್ನು ನಿರ್ವಹಿಸುತ್ತಿದ್ದ. ಎಲ್ಲಾ ಗಣ್ಯರು ಈತನ ಆದೇಶವನ್ನು ಕೇಳಲು ಇಷ್ಟಪಡುತ್ತಿದ್ದರು. ಆಗ ಈ ಎಲ್ಲವನ್ನು ನೋಡಿದ ಮಡ್ಡೆಪ್ಪನಿಗೆ ಒಂದು ಕಡೆ ಆನಂದ, ಇನ್ನೊಂದು ಕಡೆ ದುಃಖ. ಮೈಸೂರಿನ ಅಂಬಾರಿಯನ್ನು ವೀಕ್ಷಿಸುತ್ತಾ ಆನಂದಿಸುತ್ತಾ ಕಷ್ಟವನ್ನು ಸ್ವಲ್ಪಮಟ್ಟಿಗೆ ಮರೆಯುತ್ತಾನೆ. ಹೀಗೆ ಹಗಲುಗನಸಿನಲ್ಲಿ ವಂಚಿತ ಕತೆ ಮುಕ್ತಾಯವಾಗುತ್ತದೆ. ದಡ್ಡತನ ಮತ್ತು ತನ್ನ ಹೆಸರಿನ ಅವಮಾನದಿಂದಾಗಿ ಹಾಗೂ ನೌಕರಿ ರಾಜೀನಾಮೆಯಿಂದಾಗಿ ಈ ಎಲ್ಲಾ ಅವಮಾನದಿಂದ ಮಡ್ಡೆಪ್ಪ ವಂಚಿತನಾಗುತ್ತಾನೆ.

'ಗಂಗಮ್ಮನ ಜೀವನ ದೃಷ್ಟಿ' ಕತೆಯಲ್ಲಿ ಗಂಗಮ್ಮ ಎಂಬ ಮುದುಕಿ ತನ್ನ ಮೊಮ್ಮಗನಿಗೆ ನೌಕರಿ ಕೊಡಿಸಬೇಕೆಂದು ಓಡಾಡುತ್ತಾ ತನಗೆ ಗೊತ್ತಿರುವವರ ಬಳಿ ಅಲೆಯುವ ಪ್ರಯತ್ನವಿದೆ. ಗಂಗಮ್ಮನಿಗೆ ಶಿಕ್ಷಣ ಶಾಲೆ ಎಂದರೆ ಗೌರವ. ತನ್ನ ಮೊಮ್ಮಗನಿಗೆ ಯಾವುದೇ ಇಂಟರ್‌ವ್ಯೂ ಸುದ್ದಿ ಬರಲಿಲ್ಲವೆಂದು ಹಾಸಿಗೆ ಹಿಡಿದಳು. ಆಗ ಆಕೆ ಹಿರಿಯರನ್ನು ಕರೆಸಿ ಉಯಿಲು ಬರೆಸಿದಳು. ಅದನ್ನ ರಾಚಪ್ಪ ಶೆಟ್ರು ಓದುತ್ತಾರೆ. ಆಗ ಅದರಲ್ಲಿ ಗಂಗಮ್ಮ 'ತನಗಿದ್ದ ಮೂರು ಎಕರೆ ಹೊಲ ಊರಿಗೆ ಮಂಜೂರಾದ ಸರಕಾರಿ ಹೈಸ್ಕೂಲಿಗೆ ದಾನ' ಅಂತ ಕೊಡುತ್ತಾಳೆ. ಹಿರಿಯರು 'ಇದನ್ನು ಮಕ್ಕಳಿಗೆ ಕೊಡು' ಎಂದರೆ ಗಂಗಮ್ಮ ಅದಕ್ಕೆ ಒಪ್ಪುವುದಿಲ್ಲ. ತಮ್ಮ ಮನೆತನದ ಹೆಸರು ಉಳಿಸುವ ಸಲುವಾಗಿ ಹಟಾ ಮಾಡಿ ದಾನ ಮಾಡುತ್ತಾಳೆ. ಆಗ ರಾಚಪ್ಪ 'ಶಾಲೆಗೆ ಯಾರ್ಯಾರ ಹೆಸರಿಡಬೇಕೆಂದರೆ', ಜಮೀನು ಕೊಟ್ಟಮೇಲೆ ಅದರ ಜೊತೆ ಇಪ್ಪತ್ತೈದು ಸಾವಿರ ಕೊಡಬೇಕೆಂದು ಹೇಳುತ್ತಾರೆ. "ಕಥಾ ವಸ್ತು" ರೇಷ್ಮಾಳ ದಾಂಪತ್ಯ ಜೀವನದ ಬಗೆಗಿನ ಕಥೆ. ಇದರ ಕೇಂದ್ರವೇ ರೇಷ್ಮ. ರೇಷ್ಮ-ಸುಧೀರ ದಾಂಪತ್ಯ ಜೀವನದಲ್ಲಿ ಹೊಂದಾಣಿಕೆ ಇರಲಿಲ್ಲ. ರೇಷ್ಮ, ದಬ್ಬಾಳಿಕೆ ಹಾಗೂ ಸುಧೀರನ ಮುಗ್ಧತೆಯನ್ನು ಕಂಡು ಬೇರೆಯವರಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದಳು. ಆಕೆಯ ಕಠೋರ ಸ್ವಭಾವವನ್ನು ಕಂಡು ಸುಧೀರ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸುತ್ತಾನೆ. ಕೊನೆಯಲ್ಲಿ ರೇಷ್ಮಾಳ ಬಗ್ಗೆ ಅನುಕಂಪ ಮೂಡುತ್ತದೆ. ಇವತ್ತಿನ ಕೌಟುಂಬಿಕ ಸಮಸ್ಯೆಯನ್ನ, ಹೊಂದಾಣಿಕೆ ಸಮಸ್ಯೆಯನ್ನ ಚಿತ್ರಿಸುವಲ್ಲಿ ಈ ಕಥೆ ಫಲಕಾರಿಯಾಗಿದೆ.

'ಒಂದು ಚಪ್ಪಲಿ ಪ್ರಕರಣ' ಕತೆಯಲ್ಲಿ ಬಸವಣ್ಣಿ ಮುಂಗಾರು ಮಳೆಯಲ್ಲಿ ಗುಡುಗು ಸಿಡಿಲಿದ್ದರು ಅದನ್ನು ಯೋಚಿಸದೆ ರಾವ್ ಸಾಹೇಬರ ದಲಾಲಿ ಅಂಗಡಿಗೆ ತಲುಪುತ್ತಾನೆ. ತನ್ನ ಮಾಲನ್ನು ಕಡಿಮೆ ರೇಟಿಗೆ ಪಡೆಯಬೇಕೆಂದುಕೊಂಡಾಗ ತನ್ನ ತಮ್ಮನು ಈ ಮಾಲಿಗೆ ಕೇವಲ ಎರಡು ಸಾವಿರ ರೂಪಾಯಿ ಬರಬೇಕೆಂದು ಹೇಳುತ್ತಿದ್ದನು. ತನ್ನ ರೇಟಿಗೆ ಅಂದುಕೊಂಡಂತ ಹಣ ಬರದಿದ್ದರೆ ರಪೀಜ್ ಮಾಡಿಸಲು ಸ್ಪಷ್ಟವಾಗಿ ಬಸವಣ್ಣ ರಾವ್ ಸಾಹೇಬನ ಅಂಗಡಿಯಲ್ಲಿ ಹೇಳುತ್ತಿದ್ದನು. 'ತನಗೆ ಬೇಗ ಮಾಲನ್ನು ಕಡಿಮೆ ರೇಟ್‌ನಲ್ಲಿ ಕೊಡಬೇಕೆಂದು' ರಾವ್ ಸಾಹೇಬರಲ್ಲಿ ಕೇಳಿಕೊಂಡನು. ಏಕೆಂದರೆ ಆತನ ಮಗ ಎಸ್‌ಎಸ್‌ಎಲ್‌ಸಿಯಲ್ಲಿ ಮೆರಿಟ್ ಸೀಟ್ ಪಡೆದಿದ್ದನು. ಹಾಗೆ ಅದಕ್ಕೆ ಹಣಬೇಕಾಗಿ ರಾವ್ ಸಾಹೇಬರಲ್ಲಿ ಕೇಳಿಕೊಳ್ಳುತ್ತಾನೆ. ಆತ ಏನು ಮಾಡಿದರೂ ವಿಕ್ರಿ ಮಾಡಿದ ರಪೀಜ್‌ನ್ನು ಕೊಡುವುದಿಲ್ಲ. ಆಗ ಬಸವಣ್ಣಿ ಮತ್ತೊಂದು ದಿನ ಆತನ ಅಂಗಡಿಗೆ ಹೋಗಿ ಸಿಟ್ಟಿನಿಂದ ಗಲಾಟೆ ಮಾಡುತ್ತಾನೆ. ಆಗ ಅಂಗಡಿ ಮ್ಯಾನೇಜರ್ ಚನ್ನೇಗೌಡ ರಾವ್ ಸಾಹೇಬರ ಬಳಿ ಹೋಗಿ ಹೇಳುತ್ತಾನೆ. ಎಲ್ಲರು ಸುತ್ತ ಮುತ್ತಲಿನ ರೈತರು ತಮ್ಮ ಸಮಸ್ಯೆಗಳನ್ನು ಕೊರತೆಗಳನ್ನು ಹೇಳಿಕೊಳ್ಳುತ್ತಿದ್ದರು. ಅದನ್ನು ಯಾವುದೂ ನೋಡದೆ ಬಸವಣ್ಣಿ ನುಗ್ಗಿ ಸಿಟ್ಟಿಗೇರಿ ರಾವ್ ಸಾಹೇಬ್ ಜೊತೆ ಜಗಳ ಮಾಡುತ್ತಾನೆ. ಬಸವಣ್ಣಿ ಮಾತಿಗೆ ಮಾತು ಸೇರಿ ತನ್ನ ಚಪ್ಪಲಿಯಿಂದ ರಾವ್ ಸಾಹೇಬರಿಗೆ ಹೊಡೆಯುತ್ತಾನೆ. ಬಸವಣ್ಣಿಗೆ ಒಂದು ಕಡೆ ದುಃಖ, ಇನ್ನೊಂದು ಕಡೆ ಸಿಟ್ಟು, ಕೊನೆಗೆ ತಾನು ಪಶ್ಚಾತ್ತಾಪ ಪಡುತ್ತಾ ಆತನ ಅಂಗಡಿಗೆ ತನ್ನ ಮಾಲನ್ನು ಕೊಡಬಹುದಾಗಿತ್ತು ಎಂದು ದುಃಖಿಸುತ್ತಾನೆ. ರಾವ್‌ಸಾಹೇಬರು ಆತನ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕುತ್ತಾರೆ. ಪಟೇಲರು, ವಕೀಲರು ಈ ಪ್ರಕರಣಕ್ಕೆ ಮುಖ್ಯರು. ಆದರೆ ಆ ಪಟ್ಟಿಯಲ್ಲಿ ವಕೀಲರೆಂದರೆ ರಾವ್‌ಸಾಹೇಬರ ಪರ ಸಾಕ್ಷಿ ಹೇಳೋಕೆ ಬಂದವರು. ಬಾಬಣ್ಣ, ಶ್ಯಾಮ್‌ರಾವ್ ಎನ್ನುವರು ಬಸವಣ್ಣಿ ಪರ ಇದ್ದರು. ಆದರೆ ಪಾಟೀಲ ವಕೀಲರಿಗೆ ಗೊತ್ತು ಈ ವಕೀಲರ ವಿರುದ್ಧ ಮಾತಾಡಿದ್ದರೆ ಖಂಡಿತ ಶಿಕ್ಷೆಯಾಗುವುದೆಂದು. ಈ ವಕೀಲರ ಪಟ್ಟಿಯನ್ನು ನೋಡಿ ಯಾರೂ ಕೂಡ ಹಾಜರಾಗಬಾರದೆಂದು ನಿರ್ಧರಿಸುತ್ತಾರೆ. ಆದರೂ ಬಸವಣ್ಣಿ ಪಾಟೀಲ ವಕೀಲರಿಗೆ ನೇರವಾಗಿ ಕೇಳುತ್ತಾನೆ. ಈ ಪ್ರಕರಣದಲ್ಲಿ ಶಿಕ್ಷೆಯಾದರೆ ಎಷ್ಟು ದಿನಗಳಾಗಬಹುದು ಎಂದು, ಅದಕ್ಕೆ ವಕೀಲರು 'ಮೂರರಿಂದ ಆರು ತಿಂಗಳು ಆಗಬಹುದು' ಎಂದು ಹೇಳುತ್ತಾರೆ. ಅದಕ್ಕೆ ಬಸವಣ್ಣಿ 'ಆಗಲಿ ಬಿಡಿ' ಎಂದು ಹೇಳುತ್ತಾನೆ. ಆಗ ವಕೀಲರು ಒಳಗೊಳಗೆ ಖಷಿಪಡುತ್ತಾರೆ. ಇದೆಲ್ಲಾ ಆದ ನಂತರ ಕೋರ್ಟಿನಲ್ಲಿ ಬಸವಣ್ಣಿ ಪ್ರಕರಣ ಬಂದಾಗ ಅದನ್ನ ವಕೀಲರೆಲ್ಲರು ಪುನಃ ಪುನಃ ಮುಂದೆ ಹಾಕತೊಡಗಿದರು. ಯಾರೂ ಹಾಜರಾಗದಿರುವುದಕ್ಕೆ ಈ ರೀತಿ ಮಾಡಬೇಕಾಯಿತು.. ಕೊನೆಯಲ್ಲಿ ರಾಜಿಯಲ್ಲಿ ಮುಕ್ತಾಯಗೊಳ್ಳಬೇಕಾಯಿತು.

ಬಸವಣ್ಣಿ ತನಗಾದ ಅನ್ಯಾಯಕ್ಕೆ ದುಃಖಿಸುತ್ತಾನೆ. ಆದರೆ ಕೋರ್ಟಿನಲ್ಲಿ ವಕೀಲರು ಈ ಪ್ರಕರಣಕ್ಕೆ ಹಾಜರಾಗದಿರುವುದಕ್ಕೆ ಈ ಪ್ರಕರಣವನ್ನು ಮುಂದೆ ಹಾಕುತ್ತಾ ಸಾಗಿಸಿದರು.

ಕೊನೆಯಲ್ಲಿ ಯಾವುದೇ ಶಿಕ್ಷೆಯು ಆಗಲಿಲ್ಲ. ಬಸವಣ್ಣಿಯ ಅಗಾಧವಾದ ಕೋಪವನ್ನು ಒಂದು ರೀತಿಯ ಹದದಲ್ಲಿ ಮನು ಬಳಿಗಾರ್ ವ್ಯಕ್ತಪಡಿಸುತ್ತಾರೆ. ಹಾಗಾಗಿ ಆತನ ಬಗೆಗೆ ಅನುಕಂಪ ವ್ಯಕ್ತಗೊಳ್ಳುತ್ತದೆ. ಆತನ ವರ್ತನೆಯ ಬಗೆಗೆ ನಗುಬರುತ್ತದೆ. ದಲಿತಪ್ರಜ್ಞೆ ಎಂಬುದು ಮನು ಬಳಿಗಾರ ಕತೆಗಳಲ್ಲಿ ಬಡತನ, ಶೋಷಣೆ - ಇತ್ಯಾದಿ ನೆಲೆಗಳಲ್ಲಿ ಗೋಚರವಾಗುವಂಥದ್ದಲ್ಲ. ದಲಿತರ ಊರುಕೇರಿ, ಅವರ ಕಸುಬುಗಳು, ಆಹಾರಪದ್ಧತಿ, ಆಚರಣೆ ಸಂಪ್ರದಾಯಗಳ ವಿವರಗಳಿಗಿಂತ ದಲಿತರು ಅವಕಾಶಗಳಿಂದ ವಂಚಿತರಾಗುತ್ತಿರುವ ಸಂಗತಿಗಳನ್ನ ಕುರಿತು ಬರೆಯುವತ್ತ ಇವರ ಒಲವು ಮೂಡುತ್ತದೆ. 'ವಂಚಿತ', 'ಒಂದು ಚಪ್ಪಲಿ ಪ್ರಕರಣ' - ಮುಂತಾದ ಕತೆಗಳನ್ನು ಇಲ್ಲಿ ಉದಾಹರಿಸಬಹುದು.

'ಅನುಭೋಗ' ದಲ್ಲಿ ಶಿಕ್ಷಣದ ವಿವರಗಳಿವೆ. ಈ ಕಥೆಯಲ್ಲಿ ಮೂವರು ಗೆಳೆಯರಿರುತ್ತಾರೆ. ಓದುವುದರಲ್ಲೂ ಒಟ್ಟಿಗೆ, ಅಂಕ ಗಳಿಕೆಯಲ್ಲೂ ಸಮಸಮ. ಈ ಮೂವರಲ್ಲಿ ರಾಜ ಎಂಬವವನ ಕವನ ಸಂಕಲನ ಬಿಡುಗಡೆ ಸಮಾರಂಭಕ್ಕೆ ಇಬ್ಬರು ಗೆಳೆಯರನ್ನು ಆಹ್ವಾನಿಸುತ್ತಾರೆ. ಕಾರ್ಯಕ್ರಮ ಸುಂದರವಾಗಿ ನಡೆಯುತ್ತದೆ. ಅಷ್ಟರಲ್ಲಿ ಶಿವನಾಗ ಎಂಬ ಗೆಳೆಯ ಕುಷ್ಠರೋಗದಿಂದ ಬಳಲುತ್ತಿರುವ ಸುದ್ದಿ ತಿಳಿದುಬಂತು. ನಾಟಕ ಅಭಿನಯದಲ್ಲಿ ಶಿವನಾಗ ಪರಿಣಿತನು. ಪತ್ರಿಕೆಗಳಲ್ಲೂ ಪ್ರತಿದಿನ ಇವನ ಬರವಣಿಗೆ ಇರುತ್ತಿತ್ತು. ಹಾಗಾಗಿ ಪ್ರತಿದಿನವೂ ಇವನದೇ ಹೆಸರು. ಇದರಿಂದ ಸ್ವಲ್ಪ ಜಂಬದಿಂದ ಮೆರೆಯುತ್ತಾ ಇದ್ದ. ಅಷ್ಟರಲ್ಲಿ ಇಬ್ಬರೂ ಗೆಳೆಯರಿಗೆ ಆತನ ಕುಷ್ಠರೋಗದ ಬಗ್ಗೆ ತಿಳಿದು ಆತನನ್ನು ನೋಡಲು ಊರಿಗೆ ಹೊರಟರು. ಶಿವನಾಗ ಸ್ನೇಹಿತರು ಬಂದದ್ದನ್ನು ಕಂಡು ಖುಷಿಪಟ್ಟ. ಆದರೆ ಏನು ಆಗಿಲ್ಲವೇನೋ ಎಂಬಂತೆ ಕಾಣಿಸುತ್ತಿದ್ದ. ಇಬ್ಬರ ಪ್ರೇಮ ವಿಚಾರಗಳನ್ನು ವಿಚಾರಿಸಿದ. ಈ ಇಬ್ಬರು ಆತನು ರೋಗದಿಂದ ಬಹಳಷ್ಟು ನೊಂದಿದ್ದಾನೆಂದುಕೊಂಡರು. ಆದರೆ ಶಿವನಾಗ 'ಹೆಂಡತಿಯು ಇಲ್ಲ ಇನ್ನ ನಾನೊಬ್ಬನೆ ಹೇಗೋ ಜೀವನ ಸಾಗಿಸಬೇಕು' ಎಂದ. ಸ್ನೇಹಿತರು ಏನಾದರೂ ಸಹಾಯ ಬೇಕಿದ್ದರೆ ಹೇಳಿ ಎಂದರು. ಆಗ ಶಿವನಾಗನಿಗೆ ಇಬ್ಬರಲ್ಲೂ ವಿಶ್ವಾಸ ಹೆಚ್ಚುತ್ತದೆ. ಕರುಣೆ ಹುಟ್ಟಿಸುವ ರೀತಿಯಲ್ಲಿ ಇಂಥದೊಂದು ಕತೆಯನ್ನ ಬರೆಯುವ ಸಾಧ್ಯತೆಯಿತ್ತಾದರೂ ಮನು ಬಳಿಗಾರ್ ಆ ರೀತಿಯ ಮಾರ್ಗವನ್ನ ಅನುಸರಿಸಲು ಹೋಗಿಲ್ಲವೆಂಬುದನ್ನು ಗಮನಿಸಬಹುದು.

'ಅನುಭೋಗ'ದ ಈ ಮೂವರು ಸ್ನೇಹಿತರಲ್ಲಿ ಒಗ್ಗಟ್ಟನ್ನು ಕಾಣಬಹುದು. ಕಷ್ಟದಲ್ಲಿದ್ದರಿಗೆ ಸಹಾಯ ಮಾಡುವ ಮನಸ್ಸು ಮೂವರಲ್ಲಿ ಕಾಣಬಹುದು. ಜೋಳದ ಬುಟ್ಟಿಯೊಳಗಿನಿಂದ, ಋಣ, ಎರಡುದಾರಿ - ಮುಂತಾದ ಕತೆಗಳೂ ವಿಭಿನ್ನ ಕಾರಣಗಳಿಂದ ಮುಖ್ಯವಾಗುತ್ತವೆ'. ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ' ಈ ಕತೆಯಂತೂ ಕುತೂಹಲ ಕೆರಳಿಸುವ ಮಾಹಿತಿ ನೀಡುತ್ತದೆ. ಇದರಲ್ಲಿ ಹೋರಿಯಂಥ ಪ್ರಾಣಿಯೂ ಪಾತ್ರವಾಗಿ ಬೆಳೆಯುತ್ತದೆ. ಇದಕ್ಕೆ ಮನು ಬಳಿಗಾರರ ಕಥಾಶ್ರದ್ಧೆ ಕಾರಣವೆನ್ನಬಹುದು. ಕೀರ್ತಿನಾಥ ಕುರ್ತುಕೋಟಿಯವರು ಹೇಳುವಂತೆ ಇದು ಒಂದು ದೃಷ್ಟಿಯಿಂದ ಬಳಿಗಾರರ ಕಥನತಂತ್ರದ

ಜೀವಾಳವನ್ನ ಬಯಲಿಗೆಳೆಯುವ ಕಥೆಯಾಗಿದೆ. ಮೌಲ್ಯ ಪಲ್ಲಟವನ್ನು ವಿವರಿಸುವ ರಾಜಕಾರಣದಂತಹ ಕತೆಯನ್ನ ರಚಿಸುವ ಮನು ಬಳಿಗಾರ್ ಯಾವುದೇ ಆಡಂಬರವಿಲ್ಲದೆ ಮೌನವೇ ಅನುಭವವಾಗುವಂತಹ 'ಮುತ್ತೈದೆ' ಕತೆಯನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಬಲ್ಲರು. ಹಾಗೆಯೇ ಆಶ್ರಯ, ಸಾವು ಬದುಕು ನಿರಂತರ, ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ - ಮುಂತಾದ ಮಹತ್ವದ ಕತೆಯನ್ನು ನೀಡುವುದರ ಮೂಲಕ ಭಾಷಾಬಳಕೆಯಲ್ಲಿ ಅಭಿವ್ಯಕ್ತಿ ಕ್ರಮದಲ್ಲಿ ನಿಸ್ಸೀಮರೆಂಬುದನ್ನ ವ್ಯಕ್ತಗೊಳಿಸುವುದರ ಮೂಲಕ ಮುಂದಿನ ದಿನಗಳಲ್ಲಿ ಇವರು ಉತ್ತಮ ಕತೆಗಳನ್ನು ನೀಡಬಲ್ಲರೆಂಬ ಭರವಸೆ ಮೂಡಿಸುತ್ತಾರೆ".

ಹಳ್ಳಿ, ಬಡತನ, ಶಿಕ್ಷಣ, ಅಪಮಾನ, ಹೊಲಿಕೆ, ಸ್ನೇಹ, ಒಗ್ಗಟ್ಟು ಇತ್ಯಾದಿ ಸಂಗತಿಗಳನ್ನು ವಸ್ತುವಾಗಿಸಿಕೊಂಡ ಮನು ಬಳಿಗಾರರು ನೈತಿಕ ನೆಲೆಯಲ್ಲಿ ಅವನ್ನ ಗಮನಿಸುತ್ತಾ ಸೂಕ್ತ ಪಾತ್ರಗಳ ಮೂಲಕ ಸಂಭಾಷಿಸತೊಡಗುತ್ತಾ ಪರಿಹಾರ ಕಂಡುಕೊಳ್ಳುವ ನೆಲೆಗೆ ತಲುಪುತ್ತಾರೆ. ಅಮಾನವೀಯವಾಗಿ ವರ್ತಿಸುವವರನ್ನ ಮಾನವೀಯವಾಗಿಸಿ, ಮನುಷ್ಯರನ್ನ ಮನುಷ್ಯರನ್ನಾಗಿ ಮಾಡುವುದೇ ಕಥೆಗಳ ಮುಖ್ಯ ಉದ್ದೇಶ. ನವೋದಯ ಕಥೆಗಾರರ ಈ ಪ್ರಧಾನ ಆಶಯವನ್ನ ಮನು ಬಳಿಗಾರರು ತಮ್ಮ ಒಟ್ಟು ಕಥೆಗಳಲ್ಲಿ ಎತ್ತಿ ಹಿಡಿದಿದ್ದಾರೆಂಬುದು ಗಮನಾರ್ಹ ಅಂಶ.

# 'ಋಣ' ಕಥಾ ಸಂಕಲನ ಅನಾವರಣಗೊಳಿಸುವ ಗ್ರಾಮೀಣ ಬದುಕಿನ ತಲ್ಲಣಗಳು

ಡಾ. ಮುತ್ತೇಗೌಡ, ಟಿ. ಎನ್.

**ಮ**ನು ಬಳಿಗಾರ್‌ರವರ 'ಋಣ' ಕಥಾ ಸಂಕಲನದ ವಿಶೇಷತೆಯಿರುವುದೇ ಗ್ರಾಮೀಣ ಬದುಕಿನ ಚಿತ್ರಣದಲ್ಲಿ. ಪ್ರತಿಯೊಂದು ಕತೆಯೂ ಗ್ರಾಮೀಣ ಬದುಕನ್ನು ಕಟ್ಟಿಕೊಡುತ್ತದೆ. ಯಾವುದು ಸರಿ-ತಪ್ಪು ಎಂಬ ವಿಶ್ಲೇಷಣೆಗೆ ತೊಡಗದೆ ವಾಸ್ತವಿಕತೆಯನ್ನು ಒಪ್ಪಿಕೊಳ್ಳುವ ಮನೋಭಾವನೆಯ ಕತೆಗಳು ಓದುಗರನ್ನು ಸೆಳೆಯುತ್ತವೆ.

'ಮುನ್ನುಡಿ' ಬರೆದಿರುವ ಯು.ಆರ್.ಅನಂತಮೂರ್ತಿಯವರು ಹೇಳಿರುವ ಒಂದೊಂದು ವಾಕ್ಯವು ಕಥೆಯ ಉತ್ಕೃಷ್ಟತೆಯನ್ನು ತಿಳಿಸುತ್ತವೆ. "ಮನು ಬಳಿಗಾರ್ ನಮ್ಮ ನಡುವಿನ ಒಬ್ಬ ಸಮರ್ಥ ಲೇಖಕ; ಇನ್ನೂ ಬೆಳೆಯಬಲ್ಲ ಮುಕ್ತ ಮನಸ್ಸಿನ ಲೇಖಕ; ಹದವಾದ ದೃಷ್ಟಿಯ ಲೇಖಕ ಎಂದು ನನಗೆ ಅನಿಸಿದೆ"– ಯು.ಆರ್.ಅನಂತಮೂರ್ತಿಯವರ ಈ ಮಾತು ಇಂದಿಗೂ ಪ್ರಸ್ತುತವಾಗಿದೆ. ಅವರ ಒಂದೊಂದು ಕಥೆಯೂ ಒಂದೊಂದು ಬದುಕಿನ ರೀತಿಯನ್ನು ಕಟ್ಟಿಕೊಡುತ್ತದೆ. ಎಲ್ಲಿಯೂ ಮಿತಿಮೀರದೆ ಓದುಗನನ್ನು ಪರೀಕ್ಷೆಗೊಳಪಡಿಸದೆ ಸರಳವಾದ ಶೈಲಿಯಲ್ಲಿ ನಾವು ಕಥೆಯಲ್ಲಿನ ಒಂದು ಪಾತ್ರವಾಗುವಂತೆ

ಕಟ್ಟಿಕೊಡುತ್ತಾರೆ. ಪ್ರಕೃತಿ ಮತ್ತು ಪುರುಷ ಸಂಬಂಧಗಳ ಹಿನ್ನೆಲೆಯಲ್ಲಿ ಕರೆದೊಯ್ಯುವ ಇವರು ಪ್ರಕೃತಿಯ ಜೊತೆಗಿನ ಚೆಲ್ಲಾಟಗಳು, ಸರಸಗಳು ಮುಂದಿನ ಸೃಷ್ಟಿಯ ಸಂಕೇತಗಳನ್ನು ಸಹಜವಾಗಿ ಮೂಡಿಸುತ್ತಾರೆ. ಅವರ 'ವಂಚಿತ' ಕಥೆಯ ಪ್ರಾರಂಭವೇ ವಿಶೇಷವಾಗಿದೆ. "ಆಕಾಶದಲ್ಲಿ ಕಪ್ಪು ಮೋಡಗಳು ಒಂದರ ಹಿಂದೆ ಇನ್ನೊಂದರಂತೆ ಬೆನ್ನು ಹತ್ತಿ ಸರಸ ಸಲ್ಲಾಪವಾಡುತ್ತಿದ್ದವು. ತುಸು ಗಾಳಿ ಹೆಚ್ಚಿದಾಗ ಅವು ಒಂದರಲ್ಲೊಂದು ಬೆರೆಯತೊಡಗಿದವು. ಈ ಮಿಲನ ಗಾಢವಾದಾಗ ನೆತ್ತಿ ಮೇಲಿನ ನೇಸರನ ಕಿರಣಗಳು ಸಹ ಭೂಮಿಗೆ ತಲುಪಬಾರದು, ನಡುಹಗಲು, ರಾತ್ರಿಯ ರೂಪ ತಾಳುತ್ತಾ, ಬಾನೊಳಗಿನ ಆ ಮೈಥುನಕ್ಕೆ ಅನುಕೂಲ ಮಾಡಿಕೊಡುತ್ತಿತ್ತು. ಹೆಣ್ಣು ಗಂಡಿನ ಸಾಮರಸ್ಯದ ಬದುಕು ಪ್ರತಿಯೊಂದಕ್ಕೂ ಪ್ರೇರಣೆಯನ್ನೊದಗಿಸುತ್ತದೆ. ಪ್ರತಿಯೊಂದು ಸೃಷ್ಟಿಯು ಮಿಲನದ ಫಲ ಯಾವುದೂ ವ್ಯರ್ಥವಲ್ಲ. ಹಳ್ಳಿಯಲ್ಲಿ ಮುಂಗಾರಿನ ಮಳೆಯ ಆಗಮನ ಭೂಮಿಯ ತೃಪ್ತಿ, ಮನುಷ್ಯನ ತೃಪ್ತಿ, ಮುಂಗಾರು ಮಳೆಯಿಂದಾಗುವ ಅನುಕೂಲಗಳು ಒಂದಲ್ಲಾ ನೂರಾರು. ಪ್ರತಿಯೊಂದು ಕ್ರಿಮಿಕೀಟಗಳು, ಸಸ್ಯ ಪ್ರಭೇದಗಳು ಮುಂಗಾರು ಮಳೆಯಿಂದ ಮರುಜೀವ ಪಡೆಯುತ್ತವೆ.

ಮಡ್ಡೆಪ್ಪನ ಆಲೋಚನಾಲಹರಿ ಆತನ ಬದುಕಿನ ಪಯಣ ಪ್ರಕೃತಿಯ ಜೊತೆಗಿನ ಹೋರಾಟವಾಗಿದೆ. ಶಿವಲಿಂಗು ಮತ್ತು ಮಡ್ಡೆಪ್ಪನ ನಡುವೆ ಇರುವ ಬದುಕಿನ ಅಂತರ, ಬದುಕಿನ ಪಡಿಪಾಟಲುಗಳು ನಮ್ಮನ್ನು ತಲ್ಲಣಗೊಳಿಸುತ್ತವೆ. ಹಳ್ಳಿಯ ಬಡತನ, ಗೌಡರ ಮನೆಯಲ್ಲಿ ದುಡಿಯುವ ಅನಿವಾರ್ಯತೆ, ನೌಕರಿಗಾಗಿ ಅಲೆದಾಟ, ಬಡವರಿಗೆ ಸಿಗುವ ನಿರಾಶೆಯ ನಿಟ್ಟುಸಿರು ಮಡ್ಡೆಪ್ಪನದಾದರೆ, ಶಿವಲಿಂಗು ಯಾವುದೇ ಸಮಸ್ಯೆಯಿಲ್ಲದೆ ವಿದ್ಯಾಭ್ಯಾಸ ಮುಗಿಸಿ ಉತ್ತಮ ಸ್ಥಾನವನ್ನು ಪಡೆದು ಬದುಕುತ್ತಿರುವ ರೀತಿ ಕಂಡರೆ ನಮ್ಮ ಸಮಾಜದ ಅಸಮಾನತೆಯ ನಡುವೆ ನಲುಗುತ್ತಿರುವ ಮಡ್ಡೆಪ್ಪನಂತಹ ಪ್ರತಿಭೆಗಳಿಗೆ ಕಡಿಮೆಯಿಲ್ಲ. ಬಡವನ ಆಸೆ ಆಕಾಂಕ್ಷೆಗಳು ಕೇವಲ ಕನಸಾಗಿವೆ. "ಶೂನ್ಯದೆಡೆ ನೆಟ್ಟ ದೃಷ್ಟಿಗೆ ಕೊನೆಗೂ ಯಾವ ಅಂಕಿಗಳೂ ಸಿಗದಾಗಿವೆ" ಇದೆ ಬಡವರ ಸ್ಥಿತಿ.

'ಅಳು' ಕತೆ ಇಂದಿನ ವಾಸ್ತವದ ಯಾಂತ್ರಿಕ ಬದುಕನ್ನು ಕಟ್ಟಿಕೊಡುತ್ತದೆ. ಏನೆಲ್ಲಾ ಮಾಡಿ ಹಣ ಸಂಪಾದಿಸುವ ನಾಗರೀಕ ಜನಾಂಗ ಮನುಷ್ಯ ಸಂಬಂಧಗಳಿಂದ ದೂರಾಗುತ್ತಿದ್ದಾರೆ. ಎಷ್ಟೆಲ್ಲಾ ಪ್ರೀತಿಯಿಂದ ಬೆಳೆಸಿದ ತಂದೆ ತೀರಿಕೊಂಡರೂ ನಮಗೆ ಯಾವುದೇ ರೀತಿಯ ಮಾನಸಿಕ ತಳಮಳವಾಗದೆ ಅದು ಒಂದು ಕ್ರಿಯೆ ಎಂದು ನೋಡುವ ಮಂಜುನಾಥನ ಪಾತ್ರ ನಾವೆಲ್ಲಾ ಆಗಿದ್ದೇವೆ. ಮನು ಬಳಿಗಾರ್ ರವರ ವಿಶೇಷತೆಯಡಗಿರುವುದು ಮಂಜುನಾಥ ತನ್ನ ವ್ಯಕ್ತಿತ್ವ ವಿಶ್ಲೇಷಣೆಗೆ ತೊಡಗುವುದು. ತಮಗಾಗಿ ಎಲ್ಲವನ್ನೂ ತ್ಯಾಗ ಮಾಡುವ ತಂದೆ ತಾಯಿಗಳಿಗಾಗಿ ನಾವೇನು ಮಾಡುತ್ತೇವೆ? ನಮ್ಮ ಮನುಷ್ಯತ್ವ ಎಲ್ಲೋಯಿತು ಎಂಬ ಪ್ರಶ್ನೆಗಳು ಪ್ರತಿಯೊಬ್ಬರಲ್ಲೂ ತಂದೆ ತಾಯಿ ಬದುಕಿರುವಾಗಲೇ ಕಾಡಿದರೆ ಒಳ್ಳೆಯದು.

ಗಂಗಮ್ಮನಂತಹ ಮಹಿಳೆಯರು ಭಾರತದಲ್ಲಿ ಬಹಳ ಮಂದಿ ಇದ್ದರೂ ಬೆಳಕಿಗೆ ಬರುವುದಿಲ್ಲ. ಗಂಗಮ್ಮನ ಮೂಕ ಜೀವನ, ಗ್ರಾಮೀಣ ಬದುಕಿನ ಜಂಜಾಟಗಳು ಎಳೆ ಎಳೆಯಾಗಿ ತೆರೆದುಕೊಂಡಿವೆ. ತನ್ನ ಮೊಮ್ಮಗನಿಗಾಗಿ ಕಾತರಿಸುವ ಮುದುಕಿ ತನಗಾಗಿ ಏನನ್ನೂ ಬಯಸದ ನಿಸ್ವಾರ್ಥ ಆದರ್ಶ ನಾರಿಯೆನಿಸುತ್ತಾಳೆ. ವಿದ್ಯಾಭ್ಯಾಸ ಕಲಿತ ಗ್ರಾಮೀಣ ಜನರಲ್ಲಿ ಮೂಡುವ ಅಹಂಕಾರ, ಹಿರಿಯರಿಗೆ ತೋರುವ ಅಗೌರವವನ್ನು ತಿರಸ್ಕರಿಸಿದ್ದಾರೆ. ಗಂಗಮ್ಮನ ಮಾತುಗಳು ಇಂದಿನ ಯುವ ಪೀಳಿಗೆಗೆ ಪಾಠ ಕಲಿಸುವಂತಿವೆ. ಆಕೆಯ ನೆನಪಿನ ಶಕ್ತಿ ಬದುಕಿನ ಮೇಲಿರುವ ಆಸಕ್ತಿಯಾಗಿದೆ. ಅವರ ಶ್ರದ್ಧೆ, ಗೌರವ, ನಮ್ಮನ್ನು ಯೋಚನೆಗೊಳಪಡಿಸುತ್ತದೆ. ಎಲ್ಲಾ ಹೆಂಗಸರಂತೆಯೇ ಗಂಗಮ್ಮ ತನ್ನ ಮಕ್ಕಳು ಮೊಮ್ಮಕ್ಕಳಿಗಾಗಿ ಪಡಿಪಾಟಲು ಪಡುತ್ತಾಳೆ ಎಂದು ನಾವು ಚಿಂತಿಸಿದರೆ ತಪ್ಪಾಗುವಂತೆ ಮಾಡಿದ್ದಾರೆ. ಗಂಗಮ್ಮನ ಉದಾರತೆ ಮಕ್ಕಳಿಗಾಗಿ ಮಾತ್ರ ಸೀಮಿತವಾಗದೆ, ಇರುವ ಮೂರು ಎಕರೆ ಜಮೀನನ್ನು ಸರ್ಕಾರಿ ಶಾಲೆಗೆ ದಾನ ನೀಡುವುದು ಸಾಮಾನ್ಯ ವಿಷಯವಲ್ಲ. ಆಕೆಯ ಸಾಮಾಜಿಕ ಚಿಂತನೆ, ನಮ್ಮನ್ನು ಬೆರಗುಗೊಳಿಸುತ್ತದೆ. ತನ್ನನ್ನು ಪ್ರೀತಿಸಿ ಜೀವನಾಧಾರವಾಗಿದ್ದ ಗಂಡನ ಹೆಸರು ಅಜರಾಮರವಾಗಲಿ ಎಂಬ ಆಕೆಯ ಬಯಕೆ, ಮಕ್ಕಳು ಪಾಠ ಕಲಿತು ಬೆಳೆಯಬೇಕೆಂಬ ಹೆಬ್ಬಯಕೆಯ ಮುಂದೆ ನಾವು ಸಣ್ಣವರಾಗಿದ್ದೇವೆ. ಗಂಗಮ್ಮನ ದಾನದ ಮಾತಿಗೆ ಊರಿನ ಹಿರಿಯರು ಮತ್ತೊಮ್ಮೆ ಯೋಚಿಸುವಂತೆ ಹೇಳಿದಾಗ ಆಕೆಯ ಮಾತುಗಳು ಯಾವುದೇ ಕೊರಗಿಲ್ಲದೆ ಸಂತೋಷದಿಂದ ಆಡುತ್ತಾಳೆ. ಅದನ್ನು ಇಟಗೊಂಡು...........ಹಿರ್‍ಯಾವ್ರು ಹೆಸರು ಇಡತರಂತ" ಪುಟ-24 ಇಂತಹ ಸ್ತ್ರೀಗೆ ನಾವೆಲ್ಲರೂ ತಲೆಬಾಗಲೇಬೇಕೆನಿಸುತ್ತದೆ. ಮನು ಬಳಿಗಾರ್ ರವರ ಸಾಮಾಜಿಕ ಕಳಕಳಿ ವಿದ್ಯೆಯ ಮೇಲಿರುವ ಗೌರವ ಇದರಲ್ಲಿ ಮೂಡಿದಂತಿದೆ.

ಗ್ರಾಮೀಣ ಬದುಕಿನ ಹಲವು ರೀತಿಯ ಮಜಲುಗಳನ್ನು ಮನು ಬಳಿಗಾರ್ ರವರ ಎಲ್ಲಾ ಕತೆಗಳೂ ತೆರೆದಿಡುತ್ತವೆ. ಗಂಗಮ್ಮನ ಮೂಲಕ ಒಂದು ಆಯಾಮ ಕಂಡರೆ 'ಬಸವಣ್ಣೆಯ ಮೂಲಕ ವ್ಯಾಪಾರಿ ದಲ್ಲಾಳಿಗಳು ಹೇಗೆ ರೈತರನ್ನು ವಂಚಿಸುತ್ತಾರೆ, ವಂಚನೆಗೆ ಒಳಗಾದ ರೈತರ ಬದುಕು ಹೇಗೆ ಅವಸಾನದತ್ತ ಸಾಗುತ್ತದೆ ಎಂಬುದನ್ನು 'ಒಂದು ಚಪ್ಪಲಿ ಪ್ರಕರಣ'ದಲ್ಲಿ ಕಾಣುತ್ತೇವೆ. ತನ್ನ ಪ್ರೀತಿಯ ಮಗನಿಗಾಗಿ ಜೀವನವನ್ನೇ ಮುಡುಪಾಗಿಡುವ ಬಸವಣ್ಣೆ ತಾನು ತೆಗೆದುಕೊಳ್ಳುವ ನಿರ್ಧಾರ ಸರಿಯೋ ತಪ್ಪೋ ಎಂದು ನಿಶ್ಚಯಿಸುವಲ್ಲಿ ಪರದಾಡುತ್ತಾನೆ. ದಲ್ಲಾಳಿ ರಾವ್ ಸಾಹೀಬ್ ಶ್ರೀಮಂತಿಕೆಗೆ ಬಡವರ ನೋವು, ಕಣ್ಣೀರು ಕಾಣುವುದೇ ಇಲ್ಲ. ಆದರೂ ಬಸವಣ್ಣೆಯಂತಹ ಧೈರ್ಯವಂತ ಗಂಡಸರು ಒಂದಾದ್ರೆ ದಲ್ಲಾಳಿಗಳ ಆಟ ಏನೂ ನಡೆಯದು ಎಂದು ಗೊತ್ತಾದರೂ ರೈತರು ಎದುರು ನಿಲ್ಲದೆ ತಮ್ಮ ಶ್ರಮವನ್ನು ದಲ್ಲಾಳಿಗಳಿಗೆ ನೀಡುತ್ತಾರೆ.

'ಋಣ' ಕತೆಯಲ್ಲಿ ಬರುವ ರಮೇಶನಂತವರನ್ನು ಹುಡುಕಿದರೆ ಇಂದು ಪ್ರತಿಯೊಂದು ಹಳ್ಳಿಯಲ್ಲೂ ದೊರಕುತ್ತಾರೆ. ತನ್ನ ತಾಯಿಯ ಬಳಿ ಬೆಳೆಯದೆ (ಸೀತಮ್ಮ) ಅಜ್ಜಿಯ ಬಳಿ ಬೆಳೆದ ರಮೇಶ ಜಿಲ್ಲಾಧಿಕಾರಿಯಾದರೂ ನೆನೆಪಿಸಿಕೊಂಡು ಪತ್ರ ಬರೆದಿರುವುದು ಸಂತೋಷವೆನಿಸಿದರೂ ನಗರ ಜೀವನದ

ಒತ್ತಡಗಳಲ್ಲಿ ತನ್ನವರನ್ನು ಮರೆಯುವಂತಹ ಜನರಿಗೇನೂ ಕಡಿಮೆಯಿಲ್ಲ. ತಂದೆ ತಾಯಿಯನ್ನು ಮರೆತು ಕೆಲಸ, ಹಣ ಸಂಪಾದನೆಯ ಹಿಂದೆ ನಡೆಯುತ್ತಿರುವಾಗ ರಮೇಶ ತೋರುವ ಪ್ರೀತಿ ಒಂದು ಜೀವವನ್ನು ಉಳಿಸುವ ಬದಲಿಗೆ ಬಲಿ ತೆಗೆದುಕೊಳ್ಳುವುದು ವಿಪರ್ಯಾಸ. ಆಕೆಯ ಕೈತುತ್ತು ತಿಂದು ಬೆಳೆದ ರಮೇಶ ಆಕೆಯ ಋಣ ತೀರಿಸಲಾಗದೆ ಉಳಿಯುವ ಪರಿ ಸೋಲೆನಿಸುತ್ತದೆ. ಜೀವನದಲ್ಲಿ ಯಾವಾಗಲೂ ನಮ್ಮ ಮನಸ್ಸು ಕವಲು ದಾರಿಯಲ್ಲಿ ಸಂಚರಿಸುತ್ತದೆ. ನಾವು ಯಾವುದಾದರೂ ಒಂದನ್ನು ಆರಿಸಿಕೊಳ್ಳಬೇಕಷ್ಟೆ.

'ಎರಡು ದಾರಿ' ಕತೆಯ ಬಲದೇವರ ಮನಸ್ಸಿನ ವೇಗಕ್ಕೆ ಯಾವುದೂ ಸಾಟಿಯಿಲ್ಲ. ಸಾಂಸಾರಿಕ ಜೀವನ ಸರಿ ಹೊಂದದಿದ್ದಾಗ ಅನುಭವಿಸುವ ಯಾತನೆ ಸಾಮಾನ್ಯದ್ದಲ್ಲ. ಕ್ಷಣ ಕ್ಷಣಕ್ಕೂ ನಮ್ಮನ್ನು ಹಿಂಡಿ ರಕ್ತಹೀರುವ ಚಿಂತೆಗಳು ನಮ್ಮನ್ನು ಕಾಡುತ್ತವೆ. ಸತಿ ಪತಿಯ ಬದುಕು ಎಲ್ಲರೂ ತಿಳಿದುಕೊಂಡಂತೆ, ಸಾಹಿತಿಗಳು ವರ್ಣಿಸಿದಂತಿರುವುದಿಲ್ಲ. ಪತಿಯಾದವನು ಪತ್ನಿಗಿಂತ ಹೆಚ್ಚು ಮಾನಸಿಕ ಹಿಂಸೆಗೆ ಒಳಗಾಗುತ್ತಾನೆ. ತನ್ನವರಿಗಾಗಿ ಬದುಕುವ ಪತಿಗೆ ಮನೆಯಲ್ಲಿ ಸ್ವಾತಂತ್ರ್ಯವಿರುವುದಿಲ್ಲ. ಬಹಳ ಮಂದಿ ಹೇಳುತ್ತಾರೆ, ಸ್ತ್ರೀ ಸ್ವಾತಂತ್ರ್ಯಳಲ್ಲ ಎಂದು, ಆದರೆ ಸ್ತ್ರೀಗೆ ಹೊರಗೆ ಸ್ವಾತಂತ್ರ್ಯವಿಲ್ಲದಿರಬಹುದು ಆದರೆ ಮನೆಯಲ್ಲಿ ಬಾಯಿ ಮುಚ್ಚಿಸುವುದು ಸುಲಭವಲ್ಲ. ತಾಳ್ಮೆಯ ಮತ್ತೊಂದು ರೂಪವೇ ಪತ್ನಿ ಎಂದವರು ಮೂರ್ಖರಿರಬಹುದು. ಪತ್ನಿ ಹುಡುಕುವ ದಾರಿಗಳು ಹಲವು. ತನ್ನವರು-ಪತಿಯ ಕಡೆಯವರೆಂದು ಬೇಧವೆಣಿಸುವ ಹೆಣ್ಣಿಗೆ ತನ್ನ ಗಂಡನ ಗೌರವವನ್ನು ಉಳಿಸಬೇಕೆಂಬ ಸಾಮಾನ್ಯ ಪ್ರಜ್ಞೆಯೇ ಇರುವುದಿಲ್ಲ. ಗಂಡನಿಂದ ಬರುವ ಎಲ್ಲಾ ಯಶಸ್ಸು, ಶ್ರೀಮಂತಿಕೆಯನ್ನು ಅನುಭವಿಸಲು ಬೇಕು ಆದರೆ ಗಂಡನ ಸುಖ, ನೆಮ್ಮದಿ, ಆರೋಗ್ಯ ಮಾತ್ರ ಬೇಕಾಗಿಲ್ಲ. ಇಂತಹ ಬದುಕನ್ನು ಅನುಭವಿಸುವ ಪುರುಷರ ಸಂಖ್ಯೆಗೂ ಕಡಿಮೆಯಿಲ್ಲ. ಬಲದೇವರ ಮೂಲಕ ಸ್ವಾರ್ಥ ಸ್ತ್ರೀಯರಿಗೆ ಸೂಚನೆ ನೀಡಿದ್ದಾರೆಯೇ ಹೊರತು, ಸ್ತ್ರೀಗೆ ಬುದ್ಧಿ ಕಲಿಸಲಾಗುವುದಿಲ್ಲ ಎಂದು ಮೌನಕ್ಕೆ ಶರಣಾಗುವಂತೆ ಪುರುಷರಿಗೆ ಮತ್ತೊಂದು ದಾರಿಯನ್ನು ಸೂಚಿಸಿದ್ದಾರೆ ಮನು ಬಳಿಗಾರ್.

ಎಲ್ಲಾ ಸಂಸಾರಗಳಲ್ಲೂ ಸಮಸ್ಯೆಗಳು ಪ್ರಾರಂಭವಾಗುವುದೇ ಮದುವೆ ನಂತರ. ದೈಹಿಕ ಸುಖದಲ್ಲಿ ನೆಮ್ಮದಿ ಕಾಣದೆ ಅದರಿಂದ ವಿರಕ್ತಿ ಹೊಂದಿ ಮುಕ್ತಿಯನ್ನು ಪಡೆದ ನಂತರ ಪತಿ ಪತ್ನಿಯರ ಬದುಕು ಎಂತಹ ಜಟಿಲತೆಯಲ್ಲಿ ಮುಳುಗುತ್ತದೆಯೆಂದು ಕಾಣುತ್ತೇವೆ. ಮದುವೆಗೆ ಮುಂಚೆ ಕ್ರಿಯಾಶೀಲರಾಗಿದ್ದ ಬಲದೇವರ ಮದುವೆಯ ನಂತರದ ಬದುಕು ಯಾರಿಗೂ ಬೇಡ ಎನಿಸುತ್ತದೆ.

'ಜೋಳದ ಬುಟ್ಟಿಯೊಳಗಿಂದ' ಕತೆಯಲ್ಲಿ ಬರುವಂತೆ ಪ್ರತಿಯೊಂದು ಹಳ್ಳಿಗಳಲ್ಲಿಯೂ ಈ ರೀತಿಯ ಸಮಸ್ಯೆಗಳು ಇರುತ್ತವೆ. ಚಿಕ್ಕವಯಸ್ಸಿನ ಹೆಣ್ಣುಮಕ್ಕಳನ್ನು ವಯಸ್ಸಾದವರಿಗೆ ಮದುವೆ ಮಾಡಿದಾಗ ಹಳ್ಳಿಯಲ್ಲಿ ಇಂತಹ ಹೆಣ್ಣು ದಾರಿ ತಪ್ಪಬಹುದು. ಅಥವಾ ಆ ಹೆಣ್ಣನ್ನು ಅಣಕಿಸುವುದು, ಛೇಡಿಸುವುದು ಮಾಡಬಹುದು ಅದು ಅವರ ಶಕ್ತಿ ಮತ್ತು ಮನಸ್ಸಿನ ಮೇಲೆ ಅವಲಂಬಿಸಿರುತ್ತದೆ. ಈ ಕಥೆಯಲ್ಲಿ ದ್ಯಾಮವ್ವ, ಭದ್ರಮ್ಮ ಹೀನ

ಮನಸ್ಸಿನವರಲ್ಲ. ಅವರಿಗೆ ತಮ್ಮ ಬದುಕು ಮತ್ತು ಜೀವನದ ಬಗ್ಗೆ ಚಂಚಲತೆಯಿಲ್ಲ. ಸರಿಯಾಗಿ ಬದುಕಬೇಕೆಂಬ ಛಲವಿದೆ. ಅದನ್ನು ಅವರ ತಾಯಿ ರಾಮವ್ವ ಚಿಂತಿಸುವ ಪರಿ ಹೆಣ್ಣುಮಗಳ ತಾಯಿಯಾಗಿ ಸೂಕ್ತವಾಗಿದೆ. ಶೇಖರಪ್ಪನ ನ್ಯಾಯದ ಮಾತುಗಳು ಉತ್ತಮವಾಗಿವೆ. ತನ್ನ ಸಂಬಂಧಿಕರಾದರೂ ಹೆಣ್ಣು ಜೊತೆಗೂಡಿದರೆ ಏನು ಮಾಡಲಾಗದೆಂದು ಚಿಂತಿಸಿ ಲಚ್ಚ ಬಾಳಪ್ಪನ ಪುಂಡಾಟಿಕೆಯನ್ನು ಕೊನೆಗಾಣಿಸಲು ಯೋಚಿಸಿ ಪರಿಹಾರ ಸೂಚಿಸುತ್ತಾನೆ. ಶೇಖರಪ್ಪ ಸೂಚಿಸಿದಂತೆ ಅಂದು ಸಂಜೆ ಭದ್ರಮ್ಮ, ದ್ಯಾಮವ್ವರ ಆಕ್ರಮಣಕ್ಕೆ ಬಾಳಪ್ಪ ನಡುಗಿಹೋಗುತ್ತಾನೆ. ಈ ಪಾಠವನ್ನು ನಮ್ಮ ಎಲ್ಲಾ ಹೆಣ್ಣುಮಕ್ಕಳಿಗೂ ಕಲಿಸಬೇಕಾಗಿದೆ. ಎಲ್ಲಿಯವರೆಗೆ ಹೆಣ್ಣು ಸಹಿಸಿಕೊಳ್ಳುವಳೋ, ಅಲ್ಲಿಯವರೆಗೆ ಗಂಡು ಚುಡಾಯಿಸುತ್ತಲೇ ಇರುತ್ತಾನೆ. ತಿರುಗಿ ಬಿದ್ದಾಗ ಅವನು ಕೆಳಗೆ ಬೀಳುತ್ತಾನೆ.

'ಅನುಭೋಗ' ಕತೆ ನನ್ನಂತಹ ಅನೇಕರಿಗೆ ನಮ್ಮ ಹಿಂದಿನ ಜೀವನವನ್ನು ನೆನಪಿಸುತ್ತದೆ. ಹಳ್ಳಿಯಿಂದ ನಗರಗಳಿಗೆ ಬಂದು ಸೇರಿರುವ ನಾವು ಹಳ್ಳಿಯ ಬದುಕಿನ ಉಲ್ಲಾಸದ ಕ್ಷಣಗಳು ನಮ್ಮ ಒತ್ತಡದ ಬದುಕಿಗೊಂದು ಶಾಂತಿಯನ್ನು ನೀಡುತ್ತವೆ. ಬಾಲ್ಯದ ಗೆಳೆಯರು ದೊರಕಿದಾಗಲೆಲ್ಲಾ ನಮ್ಮ ಬಾಲ್ಯದ ಜೀವನದ ಸಿಹಿ-ಕಹಿ ಘಟನೆಗಳನ್ನು ಮೆಲುಕು ಹಾಕಬೇಕೆನಿಸುತ್ತದೆ. ಇದು ಎಷ್ಟು ಬಾರಿ ಪುನರಾವರ್ತನೆಯಾದರೂ ಬೇಸರವೆನಿಸುವುದಿಲ್ಲ. ನಮ್ಮಿಂದ ದೂರಾದ ಗೆಳೆಯರು, ಈಗ ಇರುವ ಗೆಳೆಯರ ಬದುಕಿನ ಏರುಪೇರುಗಳು ನಮ್ಮ ಕಣ್ಣಮುಂದೆ ಹಾದು ಹೋಗುತ್ತವೆ. ಶಿವನಾಗನಿಗೆ ಕುಷ್ಠರೋಗ ಬಂದ ವಿಷಯ ಕೇಳಿ ಆತಂಕಕ್ಕೆ ಒಳಗಾಗುವ ಗೆಳೆಯರು ಬಹಳ ನೋವನ್ನು ಅನುಭವಿಸುತ್ತಾರೆ. ಜೊತೆಗೆ ಶಿವನಾಗನು ಬಾಲ್ಯದಿಂದಲೆ ಹಲವು ರೀತಿಯ ಮೋಜುಗಳನ್ನು ಮಾಡಿದ್ದನು. ಅದನ್ನು ನೆನಸಿ ಬಹು ಬೇಗ ಎಲ್ಲವನ್ನು ಅನುಭವಿಸಿ ಈಗ ರೋಗಕ್ಕೆ ತುತ್ತಾಗಿರುವುದು ಒಂದು ರೀತಿಯಲ್ಲಿ 'ಮಾಡಿದ್ದುಣೋ ಮಹಾರಾಯ' ಎಂಬಂತೆನಿಸಿದರೂ ಗೆಳೆಯನ ಬಗ್ಗೆ ಇರುವ ಪ್ರೀತಿ ಕಡಿಮೆಯಾಗಿಲ್ಲ. ಶಿವನಾಗನ ಪ್ರೀತಿಯೆ ಅವನಿಗೆ ಮುಳುವಾಗಿರುವುದನ್ನು ಕಂಡಾಗ ನೋವಾಗುತ್ತದೆ ನೋವಿನಿಂದಲೇ ಶಿವನಾಗನ ಮನೆಗೆ ಭೇಟಿ ಕೊಟ್ಟಾಗ ಶಿವನಾಗನ ಧೈರ್ಯ ಓದುಗರನ್ನು ಚಿಂತೆಗೆ ಬೀಳಿಸುತ್ತದೆ. ಜೀವನದಲ್ಲಿ ಬರುವ ಸುಖ- ದುಃಖಗಳು ಸಮವಾಗಿ ಸ್ವೀಕರಿಸುವ ಶಿವನಾಗನು ನಮಗಿಂತ ಉತ್ತಮವಾಗಿ ಕಾಣಿಸುತ್ತಾನೆ. ಬದುಕಿನಲ್ಲಿ ಏನೇ ಕಷ್ಟ ಬಂದರೂ ಸುಖವಾಗಿ ಅನುಭವಿಸುವ ಶಿವನಾಗ ತಾಳ್ಮೆ, ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ಶಿವನಾಗ ಮತ್ತು 'ಹರ್ಷನಿಕೇತನ'ದ ಶಾಂತಣ್ಣ ನನಗೆ ವಿಶೇಷವಾಗಿ ಕಾಣುತ್ತಾರೆ. ಶಿವನಾಗ ಅನುಭವಿಸುವ ಯಾತನೆ ಸಾಮಾನ್ಯದಲ್ಲ. ಅದೇ ರೀತಿ ಶಾಂತಣ್ಣ ಹೆಸರಿಗೆ ತಕ್ಕಂತೆ ಶಾಂತಚಿತ್ತನಾಗಿ ತಮಗೆ ಒದಗಿರುವ ಅಂಗವಿಕಲ ಮಗನನ್ನು ಕಂಡು ಅಸಹಾಯಕರಾಗಿ ಮನೆಸೇರದೆ ಅಂಗವಿಕಲ ಧಾಮವನ್ನು ನಡೆಸುವುದು ಸಾಮಾನ್ಯ ವಿಷಯವಲ್ಲ. ಶಾಂತಣ್ಣ ತನ್ನ ಮಗನಂತಿರುವ ಹಲವು ಮಕ್ಕಳಿಗೆ ತಂದೆಯಾಗಿರುವುದನ್ನು, ಪತ್ನಿಯ ಸಹಕಾರ

ಹಾಗೂ ತಾಳ್ಮೆಯನ್ನು ಮೆಚ್ಚಲೇಬೇಕು. ಶಾಂತಣ್ಣನಂತಹ ನಿಸ್ವಾರ್ಥ ದಂಪತಿಗಳಿಂದ ಇಂದು ಎಷ್ಟೋ ಅನಾಥಾಶ್ರಮಗಳು ನಡೆಯುತ್ತಿವೆ.

ನಮಗೆ ಬೇಕಾದವರು, ಆತ್ಮೀಯರು ನಮ್ಮಿಂದ ದೂರವಾದಾಗ ನಾವುಗಳು ಅನುಭವಿಸುವ ಯಾತನೆ ಕಡಿಮೆಯಲ್ಲ. ತನ್ನ ಆತ್ಮೀಯ 'ಯೋಗೇಶ' ಹೊಸ ವರ್ಷದ ಶುಭಾಶಯಗಳನ್ನು ಕಳಿಸಿಲ್ಲ ಎಂದು ಕೊರಗುವ ಮಹದೇವ, ಪುತ್ರನಿಗಾಗಿ ತನ್ನ ಜೀವನವನ್ನು ಬಲಿಕೊಡುವ 'ಯಮನಪ್ಪ' ಸಾಮಾನ್ಯರಲ್ಲ. ತಾನು ಸತ್ತರೆ ತನ್ನ ಮಗ ಸುಖವಾಗಿರಬಹುದೆಂದು ಯೋಚಿಸಿ ಕೊನೆಗೂ ದುಡಿಯುವ ಮಗನನ್ನು ಉಳಿಸುವ ಪ್ರಯತ್ನದಲ್ಲಿ ತನ್ನ ನಾಲ್ಕು ವರ್ಷದ ಕುಂಟ ಮಗನನ್ನು ಲಾರಿಗೆ ತಳ್ಳಿ ಸಾಯುವಂತೆ ಮಾಡುವ ದೃಶ್ಯ ಮನಮಿಡಿಯುತ್ತದೆ. ಯಮನಪ್ಪ ಸ್ವಾರ್ಥಿಯಾಗಿ ಕಂಡರೂ ಬದುಕುವ ಯೋಗ್ಯತೆಯಿಲ್ಲದ ಬಸ್ಯಾನಿಗಿಂತ ದುಡಿಯುವ ಮಗನನ್ನು ಉಳಿಸಿಕೊಳ್ಳುವ ಚಿಂತೆ ಬಲವಾಗಿದೆ.

ಮನು ಬಳಿಗಾರ್‌ರವರು ಗ್ರಾಮೀಣ ಬದುಕನ್ನು ಸ್ವಂತ ಅನುಭವಿಸಿರುವುದರಿಂದ 'ಋಣ' ಕಥಾಸಂಕಲನದಲ್ಲಿ ಬರುವ ಎಲ್ಲಾ ಪಾತ್ರಗಳು ಗ್ರಾಮೀಣ ಬದುಕಿನ ಜಂಜಾಟಗಳ ಜೊತೆ ಬದುಕುವ ಕಲೆ ಮಾನವ ಸಹಜ ಸಂಬಂಧಗಳು ನಮ್ಮನ್ನು ಚಿಂತನೆಗೆ ಹಚ್ಚಿವೆ. ಇಂದಿನ ನಗರ ಜೀವನದಲ್ಲಿ ಮುಳುಗಿರುವ ನಮಗೆ ಹಳ್ಳಿಯ ಬದುಕನ್ನು ನೆನಪಿಸುವುದರ ಜೊತೆಗೆ ಅಲ್ಲಿನ ಏರಿಳಿತಗಳನ್ನು ಕಾಣಿಸುತ್ತಾರೆ.

# ಮನು ಬಳಿಗಾರ್ ಅವರ ಕತೆಗಳು : ಸಮಕಾಲೀನಗೊಳ್ಳುವ ಮಾದರಿಗಳು

ದೀಪಿಕಾ ಬಿ.

**ಕ**ನ್ನಡ ಸಾಹಿತ್ಯದ ಕಥಾ ಪ್ರಕಾರದ ಮೂಲಕ ಆ ಕಾಲಘಟ್ಟದ ಸಮಾಜದ ಬದುಕನ್ನು, ಮನುಷ್ಯ ಸಂಬಂಧಗಳಲ್ಲಿಯ ಬದಲಾವಣೆಗಳನ್ನು ಹಾಗೂ ಬದ್ಧತೆಗಳಲ್ಲಿಯ ಬಿರುಕುಗಳನ್ನು ತಮ್ಮ ಬರಹಗಳಲ್ಲಿ ನಿರೂಪಿಸಿರುವ ಅನೇಕ ಲೇಖಕರಂತೆಯೇ ಮನು ಬಳಿಗಾರರು ತಮ್ಮನ್ನು ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿರುವುದನ್ನು ಅವರ ಕತೆಗಳಲ್ಲಿ ಕಾಣಬಹುದಾಗಿದೆ. ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಸಾಹಿತ್ಯ ವಸ್ತುವನ್ನು ಸರಳವಾಗಿ, ಸೂಕ್ಷ್ಮವಾಗಿ ಮತ್ತು ಕಡಿಮೆ ಸಮಯದಲ್ಲಿ ಸೆರೆ ಹಿಡಿಯಬಹುದಾದ ಕಥಾ ಪ್ರಕಾರವು ಓದುಗನನ್ನು ಮತ್ತು ಕತೆಗಾರನನ್ನು ಪ್ರಭಾವಿಸುವುದಲ್ಲದೆ ಇವರಿಬ್ಬರ ನಡುವೆ ಬಹು ಬೇಗ ಹೊಂದಾಣಿಕೆಯನ್ನು ಬೆಳೆಸುತ್ತದೆ. ಅಲ್ಲದೆ ಕತೆಯ ಕಥಾವಸ್ತು ನಿರೂಪಕನ ನಿರ್ವಹಣೆಯ ಕ್ರಮದಲ್ಲಿ ಓದುಗನನ್ನು ತಲುಪಿ ಅವನನ್ನು ಮನರಂಜನೆಯಾಚೆಗಿನ ಚಿಂತನೆಗೆ ಗುರಿ ಮಾಡುವಲ್ಲಿ ಸಹಕರಿಸುತ್ತದೆ.

ಈ ಹಿನ್ನೆಲೆಯಲ್ಲಿ ಬಳಿಗಾರರ ಕತೆಗಳೂ ಸಹ ವರ್ತಮಾನದ ಸಮಸ್ಯೆಗಳನ್ನು, ಎದುರಿಗಿರುವ ಸವಾಲುಗಳ ಸ್ವರೂಪವನ್ನು ಹಾಗೂ ಇವತ್ತಿನ ಗೊಂದಲದ ಜೀವನ ಕ್ರಮವನ್ನು ಹಿಡಿದಿಡುವ ಪ್ರಯತ್ನ ಮಾಡುತ್ತವೆ. ಇವುಗಳ ಜೊತೆಗೆ ಬಹು ಮುಖ್ಯವಾಗಿ ಜಾಗತಿಕವಾದ ಆಧುನಿಕತೆಯ ಕ್ರೂರತೆಯಿಂದ ಬಿಡಿಸಿಕೊಳ್ಳಬೇಕೆನ್ನುವ ತವಕವಿದ್ದರೂ ಅದರಿಂದ ಹೊರಬರಲಾರದ ದ್ವಂದ್ವ ಬದುಕನ್ನು ಇವರ ಬಹುತೇಕ ಕತೆಗಳು ಅನಾವರಣಗೊಳಿಸುತ್ತವೆ. ಗಂಡು-ಹೆಣ್ಣಿನ ಸಂಬಂಧ, ಮನುಷ್ಯನ ಅಹಂಕಾರದ ಮನೋಭಾವ, ಹಳ್ಳಿಯ ಅಂಧಕಾರ, ನಗರ ಬದುಕಿನ ಜಂಜಾಟವನ್ನು ವಿರೋಧಿಸುತ್ತಲೇ ಅಲ್ಲಿಯೇ ಇರಬೇಕಾದ ಅನಿವಾರ್ಯತೆಯನ್ನು ಇವರ 'ರಾಜಕಾರಣ', 'ಒಂದು ಚಪ್ಪಲಿ ಪ್ರಕರಣ', 'ಪೃಥ್ವಿಯ ಮೇಲೊಂದು ಮೊರಡಿ', 'ಮುತೈದೆ', 'ಅನುಭೋಗ' ಕತೆಗಳ ಪಾತ್ರಗಳು ನಿರ್ವಹಿಸುತ್ತವೆ. ಇವುಗಳ ಕಥಾವಸ್ತುಗಳು ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಪ್ರಶ್ನಿಸುವ ಜೊತೆಗೆ ಹೊಸ ಆಯಾಮಗಳನ್ನು ಪ್ರತಿಪಾಧಿಸುತ್ತವೆ. ಆಧುನಿಕತೆ, ಬಂಡವಾಳಶಾಹಿ ವ್ಯವಸ್ಥೆ, ಮುಕ್ತ ಮಾರುಕಟ್ಟೆಯ ಎದುರು ದೇಸೀ ಮಾದರಿಯ ಕಾರಂತರ 'ಮರಳಿ ಮಣ್ಣಿಗೆ' ಎನ್ನುವ ತತ್ವವನ್ನು ಮನು ಬಳಿಗಾರ್ ಅವರ ಅನೇಕ ಕತೆಗಳು ತಮ್ಮ ಆಶಯವಾಗಿಸಿಕೊಂಡಿವೆ.

ಅಲ್ಲದೆ ಇವುಗಳ ನಿರೂಪಣಾ ವಿಧಾನವು ಅಲಂಕಾರ ಹಾಗೂ ರೂಪಕಗಳ ಜೊತೆಗೆ ಗಾದೆ ಮಾತುಗಳನ್ನು, ಇತರ ಕವಿಗಳ ಪದ್ಯಗಳನ್ನು ಬಳಸಿಕೊಳ್ಳುವ ಮೂಲಕ ಸರಳವಾಗಿ ಓದುಗನನ್ನು ತಲುಪುವ ಪ್ರಯತ್ನ ಮಾಡುತ್ತವೆ.

ಬಳಿಗಾರರ 'ಒಂದು ಚಪ್ಪಲಿ ಪ್ರಕರಣ' ಎಂಬ ಕತೆಯು ಎಪ್ಪತ್ತರ ದಶಕದ ನಂತರದ ಸಾಮಾಜಿಕ ರಚನೆಯಲ್ಲುಂಟಾದ ಬಂಡಾಯ ಧೋರಣೆಯ ಪರಿಣಾಮಗಳನ್ನು ನಿರೂಪಿಸುತ್ತದೆ. ರೈತ ಚಳವಳಿಯ ಪ್ರಭಾವವಿರುವ ಕಾಲಘಟ್ಟದಲ್ಲಿರುವ ಕತೆಗಾರ ಬಸವಣ್ಣಿ ಪಾತ್ರದ ಮೂಲಕ ಸಮಾಜದ ಪಲ್ಲಟಕ್ಕೆ ಕಾರಣವಾಗುತ್ತಾನೆ. ತನ್ನ ಬೆಳೆಗೆ ಬೆಂಬಲ ಬೆಲೆ ಸಿಗಲಿಲ್ಲವಾದ್ದರಿಂದ ಮಾಲೀಕನ ವಿರುದ್ಧ ಧ್ವನಿ ಎತ್ತುವ ಬಸವಣ್ಣಿ ವ್ಯಾಪಾರಿ ಮುಖಂಡರಿಗೆ ಮುಳುವಾಗಿ ಕಂಡರೇ ಇತರ ರೈತರಿಗೆ ಆದರ್ಶ ವ್ಯಕ್ತಿಯಾಗಿ ಬೆಳೆಯುತ್ತಾನೆ. 'ಬಸವಣ್ಣಿಯ ಈ ನಡತೆ ಕೆಲವರಿಗೆ ವಿಚಿತ್ರವೆನಿಸಿದರೆ ಇನ್ನು ಕೆಲವರಿಗೆ ಒಳಗೊಳಗೇ ಖುಷಿ ನೀಡುತ್ತಿತ್ತು. ಎಂದೋ ತಮಗಾದ ಅನ್ಯಾಯವನ್ನು ಬಸವಣ್ಣಿಯ ಬಂಡಾಯದ ಮೂಲಕ ಅವರೂ ಸರಿಪಡಿಸಿಕೊಳ್ಳುತ್ತಿರುವಂತೆನಿಸುತ್ತಿತ್ತು'.

ಈ ಮಾತುಗಳ ಮೂಲಕ ರೈತ ಚಳವಳಿಯ ಯಾವ ಕುರುಹನ್ನು ತರದ ಈ ನಿರೂಪಕ ಹೋರಾಟ ಉಂಟು ಮಾಡಿರುವ ಪರೋಕ್ಷ ಸುಧಾರಣೆಗಳನ್ನು ಕಟ್ಟಿಕೊಡುತ್ತಾನೆ. ಬಸವಣ್ಣಿ ಮಾಲೀಕನಿಗೆ 'ನಿನ್ನಂಗಡಿಗೆ ಮಾಲು(ಹತ್ತಿ) ಹಾಕಿದ್ದ ತಪ್ಪಾಗೈತಿ ಧಣಿ. ನಮ್ಮ ಹೊಡ್ಯಾನ ಸಂಗ್ಟಾ ನಿನಗೆಂಗ್ ತಿಳಿಬೇಕು. ಏನರ ಮಾಡು ನನ್ನ ಮಾಲು ನನಗೆ ವಾಪಸು ಮಾಡಿಸಿಬಿಡು. ಮತ್ತ ನಾ ಎಲ್ಲಾರ ಬ್ಯಾರೆ ಕಡೆ ಹೋಗಿ ವಿಕ್ರಿ ಮಾಡಿಸ್ತೀನಿ" ಎನ್ನುವಲ್ಲಿ ರೈತನ ಹೋರಾಟ ಮತ್ತು ಅವನ ಅಸಹಾಯಕತೆಯ ಅರಿವಾಗುತ್ತದೆ. ಬಡತನವನ್ನು

ಬಳಸಿಕೊಳ್ಳುವ ಉಳ್ಳವರ ದರ್ಪವನ್ನು ವಿರೋಧಿಸುವಾಗ ಎಲ್ಲಾ ಶ್ರೀಮಂತರು ಒಟ್ಟುಗೂಡಿ ಶ್ರೀಮಂತ ರಾವ ಸಾಹೇಬನಿಗೆ ಸಹಕರಿಸುವುದು ಬಸವಣ್ಣಿ ಅಂತವರ ಹೋರಾಟವನ್ನು ಹತ್ತಿಕ್ಕುವಲ್ಲಿ ಸಹಕರಿಸುವ ಮಾದರಿಗಳು ಈ ಕತೆಯಲ್ಲಿದೆ. ತನ್ನ ಹಿಂದಿನ ಎಲ್ಲಾ ಶೋಷಣೆಯ ನೋವನ್ನು ಒಟ್ಟುಗೂಡಿಸಿ "ಚಪ್ಪಲಿಯ" ಮೂಲಕ ಹೊಡೆಯುವುದು ಜಮಿನ್ದಾರಿ ವ್ಯವಸ್ಥೆಗೆ ಮತ್ತು ಮಾರುಕಟ್ಟೆ ವ್ಯವಹಾರಿಕೆಗೆ ಬಿದ್ದ ಬಹು ದೊಡ್ಡ ಏಟಾಗಿದೆ.

ಇದರ ಪರಿಣಾಮವಾಗಿ ಪೋಲಿಸ್, ಕಾನೂನು, ಕೋರ್ಟ್, ವಕೀಲರು ನ್ಯಾಯಪರತೆಗಿಂತ ಅಧಿಕಾರದ ಪರವಾಗಿರುವ ಕುರುಹುಗಳನ್ನು ಇಲ್ಲಿ ಗುರುತಿಸಬಹುದಾಗಿದೆ. 'ರಾವ ಸಾಹೇಬರು 15-20 ವರ್ಷಗಳಿಂದ ನಗರಸಭೆಯ ಸದಸ್ಯರಾಗಿದ್ದವರು. ಸಮಾಜದಲ್ಲಿ ಸಹಜವಾಗಿಯೇ ಪ್ರತಿಷ್ಠಿತ ಸ್ಥಾನದಲ್ಲಿದ್ದವರು. ಇಂತಹವರ ವಿರುದ್ಧ ಸಾಕ್ಷಿ ಹೇಳಿದರೆ ಆರೋಪಿ ಬಸವಣ್ಣಿಯ ಕತೆ ಮುಗಿದಂತೆಯೇ.? ಇದು ಎಲ್ಲರ ಅಭಿಪ್ರಾಯವಾಗಿರುವುದು ವಿಪರ್ಯಾಸ. ಬಸವಣ್ಣಿಯ ಪರ ವಾದ ಮಾಡುವ ವಕೀಲರು ಸಹ ಅಂಜಿದರೂ, ಬಸವಣ್ಣಿಗೆ ಯಾವುದೇ ಭಯವಾಗಲಿ, ತಾನು ಮಾಡಿದ್ದು ತಪ್ಪು ಎಂದಾಗಲಿ ಕೊನೆವರೆವಿಗೂ ಅನ್ನಿಸದೆ ತಾನೇ ವಕೀಲರನ್ನು ಸಂತೈಸುವುದು ಅವನಲ್ಲಿಯ ಮಾನಸಿಕ ಧೃಡತೆಯನ್ನು ಹೇಳುತ್ತದೆ. ಲೇಖಕ ಕತೆಯ ಕೊನೆಯಲ್ಲಿ ಕೆಲವೊಮ್ಮೆ ನ್ಯಾಯ ಅಹಿಂಸೆಗಿಂತ ಹೆಚ್ಚಾಗಿ ಹಿಂಸೆಯಿಂದಲೇ ದಕ್ಕುತ್ತದೆಂಬ ನಿಲುವಲ್ಲಿ ಬಂದು ನಿಲ್ಲುತ್ತಾರೆ. 'ಈಗ ರಾವ ಸಾಹೇಬನನ್ನು ಮಚ್ಚೀಲೆ ಹೊಡೆದಿದ್ದಕ್ಕೆ ಆರು ತಿಂಗಳಾರೀ, ಜೇಲಿಂದ ಹೊರಗೆ ಬಂದ ಮ್ಯಾಲೆ ಇಲ್ಲಿ ನಿಂತಾರಲ್ಲಿ ಸಾಕ್ಷಿ ಹೇಳಾಕ ಬಂದವು ಬಾಬ್ಯಾ, ಶ್ಯಾಮ್ಯಾ ಇವರಿಬ್ಬರಿಗೂ ಓಡಿಸ್ಯಾಡಿ ಪ್ಯಾಟ್ಯಾಗ ಮಚ್ಚೀಲೇ ಹೊಡಿತೇನ್ರಿ ಒಟ್ಟ ದೀಡ್ ವರ್ಷ ಜೇಲ್ ಸೋಸೋದು ಅಷ್ಟ ಅಲ್ರಿ?' ಬಸವಣ್ಣಿಯ ಈ ನಿಲುವು ಹೋರಾಟದ ಪ್ರಾರಂಭವನ್ನು ಹೇಳುತ್ತಲೇ, ಸಾಕ್ಷಿದಾರರೆಲ್ಲರೂ ಬಸವಣ್ಣಿಯ ವಿರುದ್ಧ ಸಾಕ್ಷಿ ಹೇಳದೆ ತಟಸ್ಥರಾಗುವುದು ಸಮಾಜದಲ್ಲಿ ಹೊಸ ಸಾಧ್ಯತೆಯನ್ನು ಹುಟ್ಟಿ ಹಾಕುತ್ತದೆ.

ಆಧುನಿಕತೆಯ ಜಾಗತಿಕ ಬದುಕಿನಿಂದ ಬೇಸತ್ತಿರುವ ಹಳ್ಳಿಯಿಂದ ನಗರಕ್ಕೆ ವಲಸೆ ಬಂದಿರುವ ಒಂದು ವಿದ್ಯಾವಂತ ವರ್ಗ ಮರಳಿ ಹಳ್ಳಿಗೆ ಹಿಂತಿರುಗಿ ಹೋಗಲಾರದ, ಇಲ್ಲಿಯೂ ಬದುಕಲಾರದ ಗೊಂದಲದಲ್ಲಿ ಸಾಗುತ್ತಿರುವ ಅನಿವಾರ್ಯತೆಯನ್ನು ಬಳಿಗಾರರ 'ಅನುಭೋಗ' ಕತೆಯು ವಿಶ್ಲೇಷಿಸುತ್ತದೆ.

ನೌಕರಿಗಾಗಿ ಸ್ಥಳೀಯತೆಯಿಂದ ದೂರವಿರಬೇಕಾದ ಅಗತ್ಯವನ್ನು ನಿರೂಪಕ ವಿವರಿಸುವಾಗ ತನ್ನ ಬಾಲ್ಯವನ್ನು ಮೆಲುಕು ಹಾಕುತ್ತಾ 'ಬಯಲು ಸೀಮೆಯ ನನ್ನ ಹಳ್ಳಿ 'ಕನಕಾಪೂರ'ವೆಂದರೆ ನನಗೆ ಪಂಚಪ್ರಾಣ. ಅಲ್ಲಿಯ ಹಳೆಯ ಲಂಗೋಟಿ ದೋಸ್ತರೆಂದರೆ ಈಗಲೂ ನನ್ನ ಮೈಯಲ್ಲಿ ರೋಮಾಂಚನ, ಮನದಲ್ಲಿ ಪುಳಕ. ಅದ್ಯಾವ ಸಂಬಂಧ ಬೆಸೆದುಕೊಂಡಿದೆಯೋ ನನಗೇ ತಿಳಿಯದು. ಕೆನೆ ಮೊಸರು, ಬೆಣ್ಣೆ, ತುಪ್ಪವನ್ನೆಲ್ಲಾ ಸವಿದು, ಜೋಳದ ಸುಗ್ಗಿಯಾಗಿದ್ದರೆ ಬೇಯಿಸಿ ತಿಂದು ಮಜ್ಜಿಗೆ ಕುಡಿದು ತೋಟದ ಬಾವಿಯಲ್ಲಿ ಈಸ್ಯಾಡಿ ಡುಮುಕಿ ಹೊಡೆದು ಬರುತ್ತಿದ್ದೆ' ಎನ್ನುತ್ತಾನೆ. ಅನುಭೋಗ ಕತೆಯು ಮುಖ್ಯವಾಗಿ ಜಾಗತೀಕರಣ ಮತ್ತು ಖಾಸಗೀಕರಣದ ಸಲುವಾಗಿ ಮನುಷ್ಯನ ನಡವಳಿಕೆಯಲ್ಲಾಗಿರುವ ಮತ್ತು ಆಗುತ್ತಿರುವ ಬದಲಾವಣೆಗಳನ್ನು

ಹೇಳುತ್ತದೆ. ಮಾನವೀಯತೆಯನ್ನು ಹೇಳುವ ಮಾನವ ಸಂಬಂಧಗಳು ಜಾಗತಿಕ ಮಾರುಕಟ್ಟೆಯ ಸರಕಾಗುವ ಮೂಲಕ ತಮ್ಮ ಮೂಲ ನೆಲವನ್ನು ಹಾಗೂ ಪ್ರಾದೇಶಿಕತೆಯ ಸೊಗಡನ್ನು ಮರೆತುಬಿಟ್ಟಿರುವುದರ ಬಗೆಗೆ ಅನುಕಂಪವನ್ನು ತೋರುತ್ತದೆ.

ಪುರಾಣ ಕತೆಗಳ ಮೂಲಕ ನೈತಿಕತೆಯನ್ನು ಕಲಿಯುವುದಲ್ಲದೆ ಒಳಿತು ಕೆಡುಕನ್ನು ಕಂಡುಕೊಳ್ಳುವುದನ್ನು ನಿರೂಪಕ ತಿಳಿಸುವಾಗ 'ಬ್ರಾಹ್ಮಣರ ಕಮಲಾಬಾಯಿಯು ಗುಡಿಯಲ್ಲಿ ಹನುಮಂತನ ಸುತ್ತ ಪ್ರದಕ್ಷಿಣೆ ಹಾಕುವಾಗ ಅವಳ ವಿರುದ್ಧ ದಿಕ್ಕಿನಲ್ಲಿ ಅವಳಿಗೆ ತುಸು ಕೈ ತಾಗಿಸಿ ಪ್ರದಕ್ಷಿಣೆ ಹಾಕಿ ಅವಳ ಮಡಿ ಕೆಡಿಸಿ ಕೇಕೆ ಹೊಡೆಯುತ್ತ ಓಡುತ್ತಿದ್ದ'[5] ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾರೆ. ಅಂದರೆ ಮಕ್ಕಳ ಮನಸ್ಸು ಸೂಕ್ಷ್ಮವಾಗಿದ್ದು ವಾತಾವರಣಕ್ಕೆ ತಕ್ಕಂತೆ ಬೆಳೆಯುತ್ತದೆ. ಹಾಗಾಗಿ ನಾವು ಅನುಭವಿಸಿದ ನಮ್ಮ ಬಾಲ್ಯ ನಮ್ಮ ಮುಂದಿನ ಪೀಳಿಗೆಗೆ ದಕ್ಕಲಾರದ ಸ್ಥಿತಿಯಲ್ಲಿರುವ ವರ್ತಮಾನದ ಪರಿಸ್ಥಿತಿಯ ಬಗ್ಗೆ ಈ ಕತೆ ನಿರೂಪಿಸುವಾಗ ಮಕ್ಕಳಿಗೆ ಬಾಲ್ಯದಲ್ಲಿ ಮೂಡುವ ಮಾನವೀಯತೆ, ಸಹಕಾರ, ಹೊಂದಾಣಿಕೆ, ಬಂಡಾಯ ಮತ್ತು ವೈಚಾರಿಕ ಮನಸ್ಥಿತಿಯನ್ನು ಶೋಧಿಸುತ್ತದೆ.

ಸ್ನೇಹ ಸಂಬಂಧವನ್ನು ನಿರೂಪಿಸುವಾಗ ಅನುಭೋಗ ಕತೆಯ ನಿರೂಪಕ ತನ್ನ ಸ್ನೇಹಿತನಾದ ರಾಜು ಮತ್ತು ಶಿವನಾಗ ಜೊತೆಗಿನ ಒಡನಾಟವನ್ನು ಆದರ್ಶದ ನೆಲೆಯಲ್ಲಿ ತಂದು ನಿಲ್ಲಿಸುತ್ತಾರೆ. ಶಿವನಾಗನ ಕಾಯಿಲೆ ಕುರಿತು ನಿರೂಪಕನ ಗೊಂದಲ, ಅನುಕಂಪ, ಅವನ್ನು ಸಂತೈಸಬೇಕೆಂಬ ಬಯಕೆಗಳೆಲ್ಲಾ ಶಿವನಾಗನ ಮುಂದೆ ಸೋಲುವುದು ಅವರನ್ನು ಅಸಹಾಯಕನಾಗಿ ಮಾಡಿಬಿಡುತ್ತವೆ. ಕಾಯಿಲೆಗೆ ಹೆದರದ ಶಿವನಾಗನನ್ನು ಕಂಡು "ಸ್ನೇಹಿತರಿಬ್ಬರೂ ನಮ್ಮನ್ನು ನೋಡಿ ಶಿವನಾಗ ತೀವ್ರ ನೋವು ಅನುಭವಿಸಿ ಗೋಳಾಡಬಹುದೆಂದು ಇನ್ನೂ ಏನೇನೋ ತಿಳಿದುಕೊಂಡಿದ್ದ ನಮಗೆ ಆತನು ಆ ಪರಿಸರಕ್ಕೆ ಹೊಂದಿಕೊಂಡ ಸ್ಥಿತಿ ಸ್ಥಿತಪ್ರಜ್ಞನೊಬ್ಬನನ್ನು ನೆನಪಿಸಿ ಭ್ರಮನಿರಸನ ಮಾಡುತ್ತಿದ್ದರೂ ನಮ್ಮಲ್ಲಿಯ ನೋವನ್ನು ಮಾತ್ರ ದ್ವಿಗುಣಗೊಳಿಸುತ್ತಿತ್ತು" ಎನ್ನುತ್ತಾರೆ. ಅಂದರೆ ಅನಂತಮೂರ್ತಿ ಅವರ 'ಸೂರ್ಯನ ಕುದುರೆ' ಕತೆಯಲ್ಲಿ ಹಡೆ ವೆಂಕಟನ ಎದುರು ನಿರೂಪಕ ಸೋಲುವ ರೀತಿಯಲ್ಲಿಯೇ, ಬಳಿಗಾರರ ಅನೇಕ ಕಡೆಗಳಲ್ಲಿಯ ಆಧುನಿಕತೆಯ ನೆರಳಲ್ಲಿ ಬದುಕುತ್ತಿರುವ ವ್ಯಕ್ತಿತ್ವಗಳು ಹಳ್ಳಿಯ ಪಾತ್ರಗಳಲ್ಲಿಯ ವ್ಯಕ್ತಿತ್ವದ ಎದುರು ಸೋಲುತ್ತಿರುವುದನ್ನು ಗ್ರಹಿಸಬಹುದಾಗಿದೆ.

ವಸಾಹತು ನಂತರದ ಭಾರತದ ಸಮಾಜದಲ್ಲಿ ಇರುವ ಸುತ್ತಲಿನ ರಾಜಕೀಯ ಸ್ವರೂಪವನ್ನು ಹೇಳುವ 'ರಾಜಕಾರಣ' ಕತೆಯು ವಿವಿಧ ರಾಜಕೀಯ ಸ್ವರೂಪವನ್ನು ಕುರಿತು ಚರ್ಚಿಸುತ್ತದೆ. ಧರ್ಮ ರಾಜಕಾರಣ, ಜಾತಿ ರಾಜಕಾರಣ, ಲಿಂಗ ರಾಜಕಾರಣ, ಕೋಮು ರಾಜಕಾರಣಗಳ ವಿಕೃತಿಯನ್ನು ಹೇಳುತ್ತಲೇ ಇವನ್ನೆಲ್ಲ ಆಳುತ್ತಿರುವ ಜಾಗತಿಕ ರಾಜಕಾರಣದ ವಿವರಣೆಯನ್ನು ಕತೆ ಕಟ್ಟಿಕೊಡುತ್ತದೆ. ಇಲ್ಲಿ ಬರುವ ಅಪ್ಪಾ ಸಾಹೇಬನು ಸಮಾಜವಾದಿ ರಾಜಕಾರಣಿಯಾಗಿ ಕಂಡು ಬರುವುದಲ್ಲದೆ ಪಕ್ಷದ ಜೊತೆಗೆ

ನೈತಿಕತೆಯನ್ನು ಉಳಿಸಿಕೊಂಡವನಾಗಿದ್ದಾನೆ. ಪಕ್ಷಾಂತರವನ್ನು ಕುರಿತು ಮಾತಾಡುವಾಗ 'ಮೂಲವೆಂದರೆ ಪಕ್ಷ, ಅದು ಹೆತ್ತ ತಾಯಿಯಿದ್ದಂತೆ. ಪಕ್ಷದ್ರೋಹ ನೀಚತನ. ಹಾಗೆ ಪಕ್ಷ ಒಡೆಯುವ ಬದಲು, ಅದಕ್ಕೆ ರಾಜೀನಾಮೆ ನೀಡಿ ಶಾಸಕ ಪದವಿ ತ್ಯಜಿಸಿ, ಬೇರೆ ಪಕ್ಷದಿಂದ ಅಥವಾ ಸ್ವತಂತ್ರವಾಗಿ ಆರಿಸಿ ಬರಬೇಕೆ ವಿನಹ ಈ ವಿದ್ರೋಹಿ ಚಟುವಟಿಕೆ ಸಲ್ಲದೆಂಬುದೇ ಅವರ ಹಾಗೂ ಅವರಂತಹವರ ಸ್ಪಷ್ಟ ನಿಲುವಾಗಿರಬೇಕು' ಎನ್ನುತ್ತಾನೆ. ಆದರೆ ಲೋಹಿಯಾ ಅವರ ಸಮಾಜವಾದಿ ರಾಜಕೀಯದಿಂದ ಬಹಳ ದೂರ ಬಂದಿರುವ ವರ್ತಮಾನದ ರಾಜಕೀಯಕ್ಕೆ ಯಾವುದೇ ಆದರ್ಶದ ಸುಧಾರಣೆಗಳು ಬೇಡವಾಗಿದ್ದು ಅಪ್ಪಾ ಸಾಹೇಬರಂತಹ ಅನೇಕ ರಾಜಕಾರಣಿಗಳನ್ನು ಅಧಿಕಾರದಿಂದ ದೂರ ಇರಿಸುವ ಕುತಂತ್ರ ರಾಜಕಾರಣದ ಕುರಿತು ಈ ಕತೆ ಬೆಳಕು ಚೆಲ್ಲುತ್ತದೆ.

ಪ್ರಾರಂಭದಲ್ಲಿಯೇ ಹೇಳುವಂತೆ ಪ್ರಜಾಪ್ರಭುತ್ವದ ಆಶಯದ ಆಡಳಿತಕ್ಕಿಂತ ಹೆಚ್ಚಾಗಿ ಸ್ವಹಿತಾಸಕ್ತಿಯ ಅಧಿಕಾರ ಇವತ್ತಿನ ರಾಜಕೀಯವನ್ನು ಪ್ರಭಾವಿಸತೊಡಗಿದೆ. ತಾನು ಮಾಡಿದ ಅಕ್ರಮಗಳಿಂದ ತಪ್ಪಿಸಿಕೊಳ್ಳಲು ಸದಾ ಅಧಿಕಾದಲ್ಲಿರಬೇಕೆನ್ನುವ ರಾಜಕೀಯದ ರುಚಿಕಂಡ ವ್ಯಕ್ತಿ ಪಕ್ಷದಿಂದ ಪಕ್ಷಕ್ಕೆ ಹಾರುವುದು ಸಾಮಾನ್ಯವಾಗಿದೆ. ಇದರ ಅರಿವಿದ್ದೂ ಇಲ್ಲದಂತಹ ಜನರು ಮತ್ತೆ ಅವರನ್ನೇ ಆರಿಸಿ ತರುವುದು ಇವತ್ತಿನ ಸಮಾಜದ ದುರಂತಗಳಲ್ಲಿ ಒಂದಾಗಿದೆ.

ಅಲ್ಲದೆ ರಾಜಕೀಯ ಕೌಟುಂಬಿಕ ಚೌಕಟ್ಟನ್ನು ಹಾಗೂ ಅಲ್ಲಿಯ ಮನಸ್ತಾಪವನ್ನು ಬಳಸಿಕೊಳ್ಳುವ ವಿವಿಧ ಮಾದರಿಗಳನ್ನು ಕುರಿತು ಗ್ರಹಿಸಬಹುದಾಗಿದೆ. ಗ್ರಾಮ ಪಂಚಾಯ್ತಿಯ ಚುನಾವಣೆಯಲ್ಲಿ ಮತ ಚಲಾಯಿಸಬೇಕೆನ್ನುವ ಮುದುಕಿಯ ಉದ್ದೇಶ ನಿಜಕ್ಕೂ ಬೆರಗುಗೊಳಿಸುವಂತದ್ದು. ಎದುರಾಳಿಯನ್ನು ಸೋಲಿಸುವ, ಗೇಲಿಮಾಡುವ ಒಂದು ಅಸ್ತ್ರವಾಗಿ ಬಳಕೆಯಾಗಿದೆ, ಇವತ್ತಿನ ಚುನಾವಣೆ. "ಎಲ್ಲರಿಗೂ ಆನಂದ ಮುದುಕಿ ಕೊನೆಗೂ ಮೊಮ್ಮಗನಿಗೆ ಹಿಂದಿನ ವೈಮನಸ್ಸು ಮುರಿದು ಮತ ನೀಡಲು ಬಂದಳೆಂದು. ಅವಳು ವಿವರಣೆ ನೀಡಿದ್ದು : ಹೌದು ನಾನು ಮತ ಚಲಾಯಿಸಲೆಂದೇ ಬಂದೆ. ಚಲಾಯಿಸದಿದ್ದರೆ ಹೇಗೆ? ಅದೂ ಮೊಮ್ಮಗ ನಿಂತಾಗ. ಅವರಿಗೂ ತೋರಿಸಬೇಕಿತ್ತು ಅಜ್ಜಿ ಹೇಗೆ ಎಂದು. ಬರ್ಲಿ ಅವನು ಹೇಗೆ ಆರಿಸಿ ಬರುತ್ತಾನೊ ನಾನೂ ನೋಡೇ ಬಿಡುತ್ತೇನೆ". ಮುದುಕಿಯ ಈ ನಿಲುವು ಇವತ್ತಿನ ಗ್ರಾಮ ಮಟ್ಟದ ಚುನಾವಣೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಪಕ್ಷ-ಪಕ್ಷಗಳ ನಡುವಿನ ಜಗಳಗಳು ಅನೇಕ ಸಾರಿ ಸಾವಿನೊಂದಿಗೆ ಅಂತ್ಯ ಕಂಡಿರುವ ಉದಾಹರಣೆಗಳು ನಮ್ಮ ನಡುವಿವೆ.

ಜಾತಿ ಹಿನ್ನೆಲೆಯಲ್ಲಿ ಬರುವ ಸರ್ ದೇಸಾಯಿಯಾಗಲಿ, ಶಿವೋತ್ತಮರಾಯನಾಗಲಿ ಹಾಗೂ ಬಸವೇಗೌಡನಾಗಲಿ ಎಲ್ಲಾ ಕಾಲದ ರಾಜಕೀಯದಲ್ಲಿಯೂ ತಮ್ಮ ಇರುವಿಕೆಯನ್ನು ಉಳಿಸಿಕೊಂಡಿರುತ್ತಾರೆ. ಇವರ ಜೊತೆಯಲ್ಲಿಯೇ ಅಪ್ಪಾಸಾಹೇಬರಂತಹ ರಾಜಕಾರಣಿಗಳೂ ಸಮಾಜ ಪರವಾಗಿ ಹೋರಾಡುತ್ತಿರುತ್ತಾರೆ. ಎಡಪಂತೀಯ ನಿಲುವುಗಳನ್ನು ಬೆಂಬಲಿಸುವ ಅಲ್ಪ ಸಂಖ್ಯಾತರನ್ನು, ದಲಿತರನ್ನು

ಹಾಗೂ ಹಿಂದುಳಿದವರನ್ನು ಮೇಲೆತ್ತಬೇಕೆನ್ನುವ ಆರ್.ವಿ ಪಾಟೀಲರ ನಿಲುವುಗಳ ಉದ್ದೇಶ ಒಳ್ಳೆಯದೇ ಆಗಿದ್ದರೂ ಅದರಿಂದಿರುವ ರಾಜಕೀಯ ಮತಗಳಿಕೆಯ ಹುನ್ನಾರದ ಬಗ್ಗೆ ಮತದಾರ ಸದಾ ಎಚ್ಚರಿಕೆಯಿಂದಿರಬೇಕಾದ ಅನಿವಾರ್ಯತೆಯನ್ನು ಕತೆ ಬಹಳ ಸೂಕ್ಷ್ಮವಾಗಿ ಹೇಳುತ್ತದೆ.

**ಕೊನೆ ಟಿಪ್ಪಣಿಗಳು**

1. ಮನು ಬಳಿಗಾರ್ : 'ಕೆಲವು ಕತೆಗಳು' ಪುಸ್ತಕದ 'ಒಂದು ಚಪ್ಪಲಿ ಪ್ರಕರಣ' ಕತೆ ಪರಮಶಂಕರ ಪ್ರಕಾಶನ, ಬೆಂಗಳೂರು, 2005 ಪುಟ : 71
2. ಅದೇ ; ಪುಟ : 70
3. ಅದೇ ; ಪುಟ : 72
4. ಮನು ಬಳಿಗಾರ್ : 'ಕೆಲವು ಕತೆಗಳು' ಪುಸ್ತಕದ 'ಅನುಭೋಗ' ಕತೆ ಪರಮಶಂಕರ ಪ್ರಕಾಶನ, ಬೆಂಗಳೂರು, 2005 ಪುಟ : 110
5. ಅದೇ ; ಪುಟ : 111
6. ಅದೇ ; ಪುಟ : 115
7. 7. ಮನು ಬಳಿಗಾರ್ : 'ಕೆಲವು ಕತೆಗಳು' ಪುಸ್ತಕದ 'ರಾಜಕರಣ' ಕತೆ ಪರಮಶಂಕರ ಪ್ರಕಾಶನ, ಬೆಂಗಳೂರು, 2005 ಪುಟ : 123
8. ಅದೇ ; ಪುಟ : 117

**ಪರಾಮರ್ಶನ ಗ್ರಂಥಗಳು**

1. ಮನು ಬಳಿಗಾರ್, ಕೆಲವು ಕತೆಗಳು, ಪರಮಶಂಕರ ಪ್ರಕಾಶನ, ಬೆಂಗಳೂರು, 2005
2. ಯು. ಆರ್. ಅನಂತಮೂರ್ತಿ, ಸೂರ್ಯನ ಕುದುರೆ, ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ, ಜಿ. ಎಸ್. ಅಮೂರ (ಸಂ), ಅಂಕಿತ ಪುಸ್ತಕ, ಬೆಂಗಳೂರು

# ಮನು ಬಳಿಗಾರ್ ಅವರ ಕಥೆಗಳಲ್ಲಿ ಮಾನವೀಯ ನೆಲೆಗಳು

ಡಾ. ಗೋಪಿ. ಎಸ್.ಎಂ.

ಮನು ಬಳಿಗಾರ್ ಅವರು ಸರ್ಕಾರಿ ಇಲಾಖೆಯೊಂದರಲ್ಲಿ ಕಾರ್ಯ ನಿರ್ವಹಿಸುತ್ತಲೇ ಸಾಹಿತ್ಯ ಕ್ಷೇತ್ರದಲ್ಲಿಯೂ ಸೃಜನಶೀಲರಾಗಿದ್ದಾರೆ. ಇವರ ಕಥೆಗಳಲ್ಲಿನ ಹದವಾದ ನಿರ್ವಹಣೆಯಂತೆಯೇ ಅವರ ಭಾವನಾಲೋಕ, ಜೀವನದ ಹಲವು ಮಗ್ಗಲುಗಳನ್ನು ಒಳಗೊಳ್ಳುವ ಕ್ರಮ ಚೆನ್ನಾಗಿದೆ. ಬಳಿಗಾರ್‌ರು ಬಹುಶಃ ಗ್ರಾಮೀಣ ಪ್ರದೇಶದಿಂದ ಬಂದವರಾದ ಕಾರಣದಿಂದಲೇ ಗ್ರಾಮ ಸಮಾಜದ ಬಡತನ, ಹಸಿವು, ದಾರಿದ್ರ್ಯ, ಮಾನವೀಯತೆ ಪ್ರೀತಿ, ವಾತ್ಸಲ್ಯ ಮೊದಲಾದ ಭಾವನೆಗಳು ಇವರ ಕಥೆಯ ಪ್ರಧಾನ ವಸ್ತುಗಳಾಗಿವೆ.

ಒಂದೊಂದು ಕಥೆಗಳಲ್ಲಿಯೂ ಬದುಕಿನ ವಿವಿಧ ನೆಲೆಗಳನ್ನು ಸ್ಪರ್ಶಿಸುವ ಪ್ರಯತ್ನ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಇವರ ಹಲವಾರು ಕಥೆಗಳು ಸಶಕ್ತವಾಗಿ ಮೂಡಿಬಂದಿವೆ. ಇವರ ಕಥಾಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಯು.ಆರ್.ಅನಂತಮೂರ್ತಿರವರು ಹೇಳಿರುವಂತೆ "ನನ್ನಂತೆಯೇ ಇವರು ಹಳ್ಳಿಯಲ್ಲಿ ಹುಟ್ಟಿಬಂದು ವಿದ್ಯಾವಂತರಾದವರು. ಜೀವನವನ್ನು ಪ್ರತಿನಿತ್ಯ ಅದರ ಕ್ಷುಲ್ಲಕತೆಯಲ್ಲೂ, ಭವ್ಯತೆಯಲ್ಲೂ ಕಾಣಬಲ್ಲ ಸರ್ಕಾರಿ ಇಲಾಖೆಯಲ್ಲಿ ಇರುವ ಬಳಿಗಾರ ತಮ್ಮ ಸೂಕ್ಷ್ಮಜ್ಞತೆ ಮತ್ತು ಭಾವನಾ ಪ್ರಾಮಾಣಿಕತೆಯಿಂದಾಗಿ ಇಂಥ ಕಥೆಗಳ ಜೊತೆಯೇ ನವರತ್ನ ರಾಮರಾಯರಂತೆ ಈ ಕಾಲದ ದಾಖಲಾಗಬಲ್ಲ ಬರವಣಿಗೆಯನ್ನು ಬರೆಯಬಲ್ಲಷ್ಟು ಇವರ ವೃತ್ತಿಜೀವನ ಹಿಗ್ಗಲಿ ಎಂದು ಹಾರೈಸಿ ಈ ಕೆಲವು ಮಾತುಗಳನ್ನು ಅಭಿಮಾನದಿಂದ ಬರೆದಿದ್ದೇನೆ" ಈ ಮಾತುಗಳು ಬಳಿಗಾರರ ಕಥೆಗಳನ್ನು ಕುರಿತಂತೆ ಹೆಚ್ಚು ಅರ್ಥಪೂರ್ಣವಾಗಿದೆ.

'ವಂಚಿತ' ಕಥೆಯಲ್ಲಿ ಬರುವ ಮಡ್ಡೆಪ್ಪ ದುರುಗಪ್ಪ ಕೊಂಪಿ ಅದೃಷ್ಟಹೀನ ನತದೃಷ್ಟನ ಕಥೆಯಾಗಿದೆ. ಸೂಕ್ಷ್ಮಮತಿಗಳಾದವರಿಗೆ ಜೀವನ ಮುಳ್ಳಿನ ಹಾಸಿಗೆಯಾಗಿರುತ್ತದೆಂಬಂತೆ ಮಡ್ಡೆಪ್ಪನಂತಹ ಅತಿಸೂಕ್ಷ್ಮ ಜೀವಿಗಳಿಗೆ ಸಣ್ಣಪುಟ್ಟ ಅಡೆತಡೆಯೂ ಆಘಾತವನ್ನುಂಟು ಮಾಡಬಲ್ಲದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಡ್ಡೆಪ್ಪನಿಗೆ ಜೀವನದಲ್ಲಿ ಒಂದಾದ ಮೇಲೊಂದರಂತೆ ದುರಂತ ಘಟನೆಗಳು ಘಟಿಸಿ ಕನಸುಗಾರಿಕೆಯಲ್ಲಿಯೇ ತನ್ನ ಜೀವನದ ಆನಂದದ ಕ್ಷಣಗಳನ್ನು ಕಾಣುವಂತಹ ಭ್ರಾಮಕ ಸ್ಥಿತಿಯಲ್ಲಿ ಕಥೆ ಕೊನೆಗೊಳ್ಳುತ್ತದೆ. ಬಡತನದಿಂದಲೇ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿ ಮೇಲೆ ಬಂದರೂ, ಬ್ಯಾಂಕ್ ಪರೀಕ್ಷೆಯೊಂದರಲ್ಲಿ ಉತ್ತೀರ್ಣನಾಗಿ ಜೀವನ ಕಂಡುಕೊಳ್ಳಬೇಕೆಂದಿರುವ ಸಂದರ್ಭದಲ್ಲಿ ತಾನು ಮಾಡಿದ ತಪ್ಪೊಂದು ಮುಳುವಾಗಿ ನೌಕರಿ ಕಳೆದುಕೊಂಡು ಅವಮಾನಿತನಾಗುತ್ತಾನೆ. ತಾನು ಹಿಂದುಳಿದ ವರ್ಗದವನಾಗಿದ್ದರೂ ಪರಿಶಿಷ್ಟವರ್ಗದವನೆಂದು ಸುಳ್ಳು ಸರ್ಟಿಫಿಕೇಟ್ ಮಾಡಿಸಿಕೊಂಡದ್ದೇ ನೌಕರಿ ಹೋಗಲು ಮುಳುವಾಯಿತು. ಇಷ್ಟು ಸಾಲದೆಂಬಂತೆ ಮದುವೆಯಾಗಲು ಹುಡುಗಿಯೊಬ್ಬಳನ್ನು ನೋಡಿದ್ದ. ಅದೇ ಸಂದರ್ಭದಲ್ಲಿ, ಇವನಿಗೆ ಯಾವಾಗ ನೌಕರಿ ಹೋಯಿತೋ, ಏನೂ ಗತಿಯಿಲ್ಲದವನಿಗೆ ಮಗಳನ್ನು ಕೊಡುವುದೇ? ಎಂದು ಹುಡುಗಿಯ ಪೋಷಕರು ಮದುವೆಯನ್ನು ನಿರಾಕರಿಸುತ್ತಾರೆ. ಹೀಗೆ ಕೊನೆಗೆ ಯಾವುದೋ ಭರವಸೆಯಿಂದ ದಸರಾ ಉತ್ಸವ ನಡೆಸುವ ಒಬ್ಬ ಮೇಲಾಧಿಕಾರಿ ಹಿಂದೊಮ್ಮೆ ಗೆಳೆಯನಾಗಿದ್ದನೆಂದು ನೆನೆದು ಏನಾದರೂ ಸಹಾಯವಾಗಬಹುದೆಂದು ಮೈಸೂರಿಗೆ ಹೋಗುತ್ತಾನೆ. ಕುಚೇಲ ಕೃಷ್ಣನನ್ನು ನೋಡಲು ಹೋದಂತೆ, ಮಡ್ಡೆಪ್ಪನ ಒಂದು ಭವ್ಯ ಹಗಲುಗನಸಿನಲ್ಲಿ ಕಥೆ ಮುಕ್ತಾಯವಾಗುತ್ತದೆ. ಇದು ಕನಸೂ ಹೌದು. ಅವನು ತನ್ನಲ್ಲಿರುವ ಹಣವನ್ನೆಲ್ಲ ಖರ್ಚುಮಾಡಿ ನಿರುಪಯುಕ್ತವಾದ ಒಂದು ಆನೆಯನ್ನು ಕೊಂಡು ತರುವ ಕಥೆಯೂ ಹೌದು. ಮಡ್ಡೆಪ್ಪನ ಈ ಮೂರ್ಖತನದಲ್ಲಿಯೇ ಅವನ ಹಲವು ಸಾಧ್ಯತೆಗಳ ಆತ್ಮ ನಮಗೆ ಗೋಚರಿಸುತ್ತದೆ. ಈ ಕಥೆಯ ಮುಖೇನ ಒಬ್ಬ ನೊಂದ ಮನುಷ್ಯನ ಅದೃಷ್ಟ ಹೀನತೆಯ ಬದುಕಿನ ಹಲವು ಆಯಾಮಗಳನ್ನು ಕಥೆಗಾರರು ಹೇಳುತ್ತಾ ಓದುಗರಲ್ಲಿ ಅನುಕಂಪ ಸಹಾನುಭೂತಿ ಮೂಡಿಸುತ್ತಾರೆ.

'ಅಳು' ಕಥೆಯು ಭಾವನಾಲೋಕದ ಹಲವು ಮಗ್ಗಲುಗಳನ್ನು ಒಳಗೊಳ್ಳುತ್ತದೆ. ಈ ಕಥೆಯ ಮಂಜು ಪಾತ್ರ ನಾವು ಯಾರಾದರೂ ಆಗಬಹುದು ಏಕೆಂದರೆ ಬಾಲ್ಯಾವಸ್ಥೆಯಲ್ಲಿ ಪ್ರತಿಯೊಬ್ಬ ಮಗುವು ತನ್ನ ಸುತ್ತಮುತ್ತಲಿನ ಪರಿಸರದ ನದಿ, ಬೆಟ್ಟ-ಗುಡ್ಡ ಹಳ್ಳ-ಕೊಳ್ಳ, ಪ್ರಾಣಿ-ಪಕ್ಷಿಗಳೊಂದಿಗೆ ಅವಿನಾಭಾವ ಸಂಬಂಧವನ್ನು ಬಾಲ್ಯಸಹಜ ಮುಗ್ಧತೆಯನ್ನು ಇಟ್ಟುಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಇದ್ದಕ್ಕಿದ್ದ ಹಾಗೆ ಆ ಪರಿಸರದಿಂದ ಆ ಮಗುವನ್ನು ಬೇರ್ಪಡಿಸಿದರೆ ಮಗುವಿನ ಮನೋಲೋಕ ಘಾಸಿಗೊಳ್ಳಬಹುದು. ಬೇರ್ಪಡಿಸಿದವರ ಮೇಲೆ ಸಹಜವಾಗಿ ದ್ವೇಷ ಉಂಟಾಗುತ್ತದೆ. ಹಾಗೆಯೇ ಈ ಕಥೆಯಲ್ಲಿ ಮಂಜುವಿನ ಬದುಕು ಗ್ರಾಮ್ಯ ಸಂಸ್ಕೃತಿಯ ಜೊತೆಗೆ ತಳುಕು ಹಾಕಿಕೊಂಡಿರುತ್ತದೆ. ತಂದೆ ಮಗನ ಉನ್ನತ ವಿದ್ಯಾಭ್ಯಾಸಕ್ಕಾಗಿ ಬೇರೆ ಊರಿಗೆ ಬಲವಂತವಾಗಿ ಕಳುಹಿಸಿದಾಗ ಮಗನಿಗೆ ಅಪ್ಪನ ಮೇಲೆ ದ್ವೇಷ ಉಂಟಾಗಿ ತನ್ನ ಮೊದಲಿನ ಮುಗ್ಧತೆಯನ್ನು ಕಳೆದುಕೊಳ್ಳುತ್ತಾನೆ. ಇಲ್ಲಿ ಅಪ್ಪನಿಗೆ ಮಗನ ಭವಿಷ್ಯದ ಬದುಕಿನ ಬಗೆಗಿನ ಅಪಾರ ಕಾಳಜಿಯಿಂದಾಗಿ ಮಾಡಿದರೂ ಮಂಜುಗೆ ಅಪ್ಪನ ಬಗೆಗೆ ತಿರಸ್ಕಾರ ಮೂಡಿ ಅವನು ಕೊನೆಗೆ ಅಪ್ಪ ತೀರಿಕೊಂಡ ಸುದ್ದಿ ಕೇಳಿದಾಗಲೂ ಒಂದು ತೊಟ್ಟು ಕಣ್ಣೀರು ಬರದಿರುವ ದುರಂತ ಚಿತ್ರಣವನ್ನು ಕಾಣಬಹುದು. ಒಬ್ಬ ಹುಡುಗ ಓದಿ ಮುಂದೆ ಬರುವುದು, ಅದಕ್ಕಾಗಿ ತಾಯಿತಂದೆಗಳು ಹಾತೊರೆದು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುವುದು, ಓದಿ ಮುಂದೆ ಬಂದ ಹುಡುಗ ಕ್ರಮೇಣ ತನ್ನ ಮುಗ್ಧತೆ ಕಳೆದುಕೊಂಡು ಬರಡಾಗುವುದು; ಹೀಗೆ ಬರಡಾದೆನೆಂದು ನರಳುವುದು - ನಮಗೆ ಪರಿಚಿತವಾದ ಥೀಮು. ಆದರೆ ಬಳಿಗಾರ್‌ರ ಸಮರ್ಥ ನಿರ್ವಹಣೆಯಲ್ಲಿ ಮಂಜು ಕಳೆದುಕೊಂಡ ಬದುಕು ವಿಶಿಷ್ಟ ವಿವರಗಳಲ್ಲಿ ಮೂಡುವುದಷ್ಟೇ ಅಲ್ಲ - ಮಂಜು ಒಳ್ಳೆಯವನಾಗಿದ್ದೂ ಬರಡಾಗುತ್ತಾನೆ ಮತ್ತು ಹೀಗಾದೆನೆಂದು ನರಳುತ್ತಾನೆ. ಆದರೆ ಹೀಗೆ ನರಳುವುದು ಪ್ರಯೋಜನವಿಲ್ಲ. ಇತ್ಯಾದಿ ಭಾವನೆಗಳು ಘಾಢವಾಗಿ ನಮ್ಮ ಮನಸ್ಸಿನಲ್ಲಿ ಮೂಡಿಸುವಂತೆ ಬಳಿಗಾರ್‌ರವರು ಬರೆಯುತ್ತಾರೆ. 'ಹರ್ಷ ನಿಕೇತನ' ಕಥೆಯಲ್ಲಿ ಆದರ್ಶ ವ್ಯಕ್ತಿಯೊಬ್ಬನ ವೈಯಕ್ತಿಕ ಬದುಕಿನ ದಾರುಣತೆಯನ್ನು ಹೇಳುವಂತದ್ದು, ಇಲ್ಲಿನ ಶಾಂತಣ್ಣ ಊರಿನಲ್ಲಿಯೇ ಅತ್ಯಂತ ಬುದ್ಧಿವಂತನೂ, ಉದಾರಿಯೂ ಆಗಿದ್ದೂ ಉನ್ನತ ವಿದ್ಯಾಭ್ಯಾಸ ಮಾಡಿ ನಾಲ್ಕಾರು ಜನಕ್ಕೆ ಮಾರ್ಗದರ್ಶನ ಮಾಡುವಂಥ ಆದರ್ಶವ್ಯಕ್ತಿಯಾಗಿದ್ದನು. ಹಾಗೆಯೇ ತನ್ನ ಸುತ್ತಮುತ್ತಲಿನವರನ್ನು ಪ್ರೀತಿಯಿಂದ ಭ್ರಾತೃವಾತ್ಸಲ್ಯದಿಂದ ಕಾಣುತ್ತಿದ್ದಂತಹವನು. ಆದರೆ ಇವನ ದಾಂಪತ್ಯ ಜೀವನದಲ್ಲಿನ ಕೊರತೆಯೆಂದರೆ ಇವರಿಗೆ ಹುಟ್ಟಿದ ಮಗು ಮಾನಸಿಕ ಅಂಗವೈಕಲ್ಯಕ್ಕೆ ಒಳಗಾಗಿತ್ತು. ಹೀಗಾಗಿ ಆ ಮಗುವಿನ ಕಾಳಜಿ ಮಾಡುವುದಷ್ಟೇ ಅಲ್ಲದೆ ಇಂತಹ ಹಲವಾರು ಮಕ್ಕಳಿಗೆ ಅನುಕೂಲವಾಗಲೆಂದು ತಮ್ಮ ಮಗನ ಹೆಸರಿನಲ್ಲೇ 'ಹರ್ಷನಿಕೇತನ' ವೆಂಬ ಆಶ್ರಮವನ್ನು ಕಟ್ಟಿಸಿ ಎಲ್ಲ ಮಕ್ಕಳನ್ನು ತಮ್ಮ ಮಕ್ಕಳೆಂಬಂತೆ ನೋಡುವ ಔದಾರ್ಯವನ್ನು ಶಾಂತಣ್ಣ ಹೊಂದಿದ್ದರು. ಹೀಗೆ ವ್ಯಕ್ತಿಯೊಬ್ಬ ತನ್ನ ಮಗನಿಗಾಗಿ ದುರಂತಕ್ಕೆ ಮರುಗಿ ನಿರಾಶನಾಗದೆ ಇತರ ಮಕ್ಕಳ

ಕಷ್ಟಕ್ಕೂ ಸ್ಪಂದಿಸುವ ಮನೋಭಾವ ಹೊಂದಿ ತನ್ನ ಪರಿಮಿತಿಯಲ್ಲಿ ಸಹಾಯಹಸ್ತ ನೀಡಿ ಮಾದರಿಯಾದುದು ಈ ಕಥೆಯ ಮಹತ್ವದ ಸಂಗತಿಯಾಗಿದೆ.

ಈ ಕಥೆಯಲ್ಲಿ ಬರುವ ನಿರೂಪಕರು ಆರಂಭದಲ್ಲಿ ತಮ್ಮ ಊರಿನ ಶಾಂತಣ್ಣನ ಬಗೆಗೆ ಹೇಳುತ್ತಾ ಅವನ ವ್ಯಕ್ತಿತ್ವದ ಗುಣಗಾನ ಮಾಡುತ್ತಾರೆ. ಆದರೆ ಶಾಂತಣ್ಣನ ಜೀವನದ ಎರಡನೆಯ ಘಟ್ಟದ ಬಗೆಗೆ ಅವರ ಕಾರಿನ ಚಾಲಕನಿಂದ ಸಂಪೂರ್ಣವಾಗಿ ಕೇಳಿ ಗದ್ಗದಿತರಾಗುತ್ತಾರೆ. "ಅವನೇ ಸರ್ ಹರ್ಷ ಸಾಹೇಬರ ಒಬ್ಬನೇ ಮಗ. ಹುಟ್ಟಿದಾಗಿನಿಂದನ ಹಂಗ ಹುಚ್ಚನಂಗ ಅದಾನ. ಎಷ್ಟು ಡಾಕ್ಟರಿಗೆ ತೋರಿಸಿದರೂ ನೆಟ್ಟಗಾಗಲಿಲ್ಲ. ಕೊನೆಗೆ ಭಾಳ ಆಸ್ತಿ, ರೊಕ್ಕಾ, ದಾನಾ ಕೊಟ್ಟು ಆ ನಿಕೇತನ ಕಟ್ಟಿಸಿ ಇಂತಾ ಮಕ್ಕಳ ಕಾಳಜಿ ಮಾಡಕಹತ್ಯಾರಾ . . . . "ಇನ್ನೂ ಏನೇನೋ ಹೇಳುತ್ತಿದ್ದ, ಆದರೆ ನನ್ನೆದುರು ಯಾವುದೋ ಒಂದು ಅಸ್ಪಷ್ಟ ಹರ್ಷನ ಮುಖ ಬಂದಂತಾಗಿ ದು:ಖ ಉಮ್ಮಳಿಸಿ ಬರತೊಡಗಿತ್ತು. ಹೀಗೆ ಈ ಕಥೆಯಲ್ಲಿ ಬಳಸಿರುವ ತಂತ್ರಗಾರಿಕೆ, ನಿರೂಪಣ ಕ್ರಮ ಕೂಡ ಕಥೆಯ ಕುತೂಹಲವನ್ನು ಹೆಚ್ಚಿಸಿದೆ. ಇಂತಹ ಕಥೆಗಳ ಹಿನ್ನಲೆಯಲ್ಲಿ ಬಳಿಗಾರರು ಮಾನವೀಯ ಸೆಲೆಯ ಅನಂತ ಮುಖಗಳ ದರ್ಶನವನ್ನು ಮಾಡಿಸುತ್ತಾರೆ.

'ಮೂರು ಅಂಶಗಳ ಸೂತ್ರ' ಕಥೆಯು ಹೊನ್ನಾಪುರವೆಂಬ ಊರಿನ ರಾಜಕೀಯ ಅನೈಕ್ಯತೆಯ ಬಗೆಗೆ ಹಾಗೂ ಅಲ್ಲಿನ ಜಾತಿ ಸಂಘರ್ಷ, ಅರಾಜಕತೆಯನ್ನು ಹೇಳುವಂಥದ್ದು. ರಾಜಕೀಯ ನಾಯಕರು ಇಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹೇಗೆ ಹಪಹಪಿಸುತ್ತಾರೆ, ಹಾಗೆಯೇ ಸಾಮಾನ್ಯ ಜನ ಏನೂ ಪ್ರತಿಕ್ರಿಯಿಸಲಾಗದೆ ಹೇಗೆ ಅಸಹಾಯಕರಾಗುತ್ತಾರೆ. ಎಂಬುದನ್ನು ಬಹಳ ಸೂಚ್ಯವಾಗಿ ಕಥೆಗಾರರು ಹೇಳುತ್ತಾರೆ. ಈಗಾಗಲೇ ಈ ಊರಿನಲ್ಲಿ ಗುರುಸ್ವಾಮಿಗಳೊಬ್ಬರು ಕಣ್ಮರೆಯಾಗಿರುತ್ತಾರೆ. ಈ ಪ್ರಕರಣ ಪ್ರಸ್ತುತ ರಾಜಕೀಯ ಮೆರವಣಿಗೆ (ಹೊರಟಿರುವ ಎಂ.ಎಲ್.ಎ.)ಗೆ ತಿಳಿದಿದ್ದರೂ ಸಹ ಏನಾದರಾಗಲಿ ತನ್ನ ಪಕ್ಷಕ್ಕೆ ಸಾಕಷ್ಟು ಪ್ರಚಾರಗಳಿಸಿಕೊಂಡು ತನ್ನ ಅಸ್ತಿತ್ವ ಉಳಿಸಿಕೊಳ್ಳುವ ಧಾವಂತದಲ್ಲಿ ಮೆರವಣಿಗೆ ಸಾಗುತ್ತಿರುತ್ತದೆ. ಆದರೆ ಅಂತಿಮವಾಗಿ ಕೆಲವು ಕಿಡಿಗೇಡಿಗಳಿಂದ ಸಾವು - ನೋವುಗಳಾಗಿ ಘಟನೆಯನ್ನು ನಿಯಂತ್ರಣಕ್ಕೆ ತರಲು ಜಿಲ್ಲಾ ಎಸ್.ಪಿ.ಯವರು ಪರದಾಡುತ್ತಾರೆ. ಕೊನೆಗೆ ಒಂದಿಬ್ಬರು ಕೊಲೆಯಾಗಿ ಅತ್ತ ಪಂಚಾಯ್ತಿಯಲ್ಲಿ ನಡೆದ ತುರ್ತುಸಭೆಯಲ್ಲಿ ಒಂದು-ಯಾರೂ ಪೋಲೀಸರಿಗೆ ಫಿರ್ಯಾದಿ ಕೊಡಬಾರದು, ಎರಡು – ಕೋರ್ಟಿನಲ್ಲಿ ಯಾವನೂ ಸಾಕ್ಷಿ ಹೇಳಲೂ ಹೋಗಬಾರದು. ಮೂರು-ಯಾರು ಏನೇ ಕೇಳಿದರೂ ತಮಗೇನೂ ಗೊತ್ತಿಲ್ಲವೆಂದೇ ಎಲ್ಲರೂ ಹೇಳಬೇಕು ಎಂಬ ಮೂರು ಅಂಶಗಳ ರಾಜಿ ಸೂತ್ರವೊಂದು ರೂಪುಗೊಂಡಿದ್ದು ಎಸ್.ಪಿ.ಯವರಿಗೆ ತಿಳಿಯದೇ ಹೋಯಿತು. ಹೀಗೆ ಹಳ್ಳಿಗಳಲ್ಲಿ ಏನೊಂದು ಗುರಿ ಉದ್ದೇಶ್ಯಗಳಿಲ್ಲದೆ ಕೆಲವೊಂದು ಕಿಡಿಗೇಡಿಗಳ ಕುತಂತ್ರಗಳಿಂದ ಗ್ರಾಮಜೀವನ ಕದಡುವುದನ್ನು ಇಂತಹ ಕಥೆಗಳಲ್ಲಿ ನಾವು ನೋಡಬಹುದು.

'ಹೊಸ ವರ್ಷದ ಶುಭಾಶಯಗಳು' ಕಥೆಯು ಸ್ನೇಹದ ಆರ್ದ್ರತೆಯನ್ನು ಪರಸ್ಪರ ವಿಶ್ವಾಸವನ್ನು ಹೇಳುವಂತಹದು. ಗುಮಾಸ್ತನಾದ ಮಹಾದೇವ ಸಾಮಾನ್ಯ ನೌಕರಿಯಲ್ಲಿ ದುಡಿಯುವಂತಹನು. ಇವನು ತನ್ನ ಆದಾಯದಲ್ಲಿ ಪ್ರತಿಭಾವಂತರಾದ ವಿದ್ಯಾರ್ಥಿಗಳನ್ನು ಗುರುತಿಸಿ ಸಾಕಷ್ಟು ಹಣಕಾಸಿನ ಸಹಕಾರ ನೀಡಿ ಓದಿಗೆ ಸಹಾಯ ಮಾಡುವಂತಹವನು. ಇವನ ಇಂತಹ ಈ ಸಹಕಾರದಿಂದ ವೃತ್ತಿಯಲ್ಲಿ ಈಗ ಡಾಕ್ಟರ್ ಆಗಿರುವ ಯೋಗೇಶ ಈ ವರ್ಷ ತನಗೆ ಶುಭಾಶಯ ಕೋರದಿದ್ದುದನ್ನು ನೆನೆದು ಮಹಾದೇವ ಬೇಸರಪಡುತ್ತಾನೆ. ತಾನು ಎಷ್ಟೆಲ್ಲಾ ಅವನಿಗೆ ಓದುವುದಕ್ಕೆ ಸಹಾಯ ಮಾಡಿದ್ದೆ, ಆದರೆ ಈಗ ಅವನು ದುಡ್ಡು, ಅಧಿಕಾರದ ಮದದಿಂದ ನನ್ನನ್ನು ಮರೆತಿರಬಹುದೆಂದು ತನ್ನಷ್ಟಕ್ಕೆ ಅಂದುಕೊಂಡಿರುತ್ತಾನೆ. ತಾನು ಇತರರಿಗೆ ಸಹಾಯ ಮಾಡಿದಂತೆ ತನ್ನ ಕಷ್ಟಕಾಲದಲ್ಲಿ ತನಗೆ ಯಾರೂ ಸಹಾಯ ಮಾಡದಿದ್ದ ಸಂದರ್ಭ ನೆನೆದು ದು:ಖಿತನಾಗುತ್ತಾನೆ. ಕೊನೆಗೆ ಯೋಗೇಶ ಕಳುಹಿಸಿದ್ದ ಶುಭಾಶಯ ಪತ್ರ ಸ್ನೇಹಿತನಿಂದ ತಡವಾಗಿ ಬಂದು ತಲುಪಿದಾಗ ಆನಂದಾತಿರೇಕದಿಂದ ಉಬ್ಬಿಹೋಗುತ್ತಾನೆ. ತೆರೆದು ಓದಿದ "ಪೂಜ್ಯ ಮಹಾದೇವಣ್ಣನಿಗೆ ಯೋಗೀಶ ಮಾಡುವ ಶಿ.ಸಾ.ನಮಸ್ಕಾರಗಳು.... ಈ ಸಾರಿ ನೀನು ಊರಿಗೆ ಹೋಗುವಾಗ ಖಂಡಿತ ನನ್ನ ಹೊಸ ಮನೆಗೆ ಬರಬೇಕು ಗೃಹ ಪ್ರವೇಶಕ್ಕೂ ಲೀವ್ ಸಿಗಲಿಲ್ಲವೆಂದು ಬಂದಿರಲಿಲ್ಲ ನೀನು. ಇಪ್ಪತ್ತೆರಡು ಲಕ್ಷ ಖರ್ಚಾಗಿದೆ ಮನೆಕಟ್ಟಲು. ಹುಟ್ಟಿಸಿದ ತಂದೆ ಲಿಂಗಪ್ಪ ಹಾಗೂ ಬೆಳೆಸಿದ ಅಣ್ಣ ಮಹಾದೇವ ಇಬ್ಬರನ್ನೂ ಮರೆಯಬಾರದೆಂದು ಮನೆಗೆ "ಲಿಂಗ-ದೇವ" ಎಂದು ಹೆಸರಿಟ್ಟಿದ್ದೇನೆ. ಬರುವುದು ಮೊದಲೇ ತಿಳಿಸಿದರೆ ಬಸ್‌ಸ್ಟ್ಯಾಂಡಿಗೆ ನಾನೇ ಬರುತ್ತೇನೆ. ಇಲ್ಲವೇ ಕಾರನ್ನಾದರೂ ಕಳುಹಿಸುತ್ತೇನೆ. ಹೊಸವರ್ಷದ ಶುಭಾಷಯಗಳು", ಹೀಗೆ ಸ್ನೇಹ, ಭ್ರಾತೃತ್ವದ ಬಗೆಗೆ ಅತ್ಯಂತ ತೀವ್ರವಾದ ಭಾವುಕ ಸನ್ನಿವೇಶಗಳನ್ನು ಈ ಕಥೆಯಲ್ಲಿ ಕಾಣಬಹುದು.

'ಪುತ್ರಪ್ರೇಮ' ಕಥೆಯು ಕರುಣಾಜನಕವಾದ ಬಡತನದ ಅತ್ಯಂತ ದೈನ್ಯಾವಸ್ಥೆಯನ್ನು ಹೇಳುವಂತಹದು. ಯಮನಪ್ಪನು ತನ್ನ ಮಗನ ಕಾಯಿಲೆಯ ಚಿಕಿತ್ಸೆಗಾಗಿ ಯಮನ ಜೊತೆಯೇ ಕಾದಾಡುವಂತಹ ದಾರುಣಾವಸ್ಥೆಯಲ್ಲಿದ್ದಾನೆ. ಮಗನ ಚಿಕಿತ್ಸೆಗೆ ಐದಾರು ಸಾವಿರ ರೂಪಾಯಿ ಬೇಕಾದಾಗ ಅದನ್ನು ಹೇಗೆ ಹೊಂದಿಸುವುದು ಎಂದು ದಾರಿಕಾಣದ ಪರಿಸ್ಥಿತಿಯಲ್ಲಿ ಯಮನಪ್ಪನಿದ್ದಾನೆ. ಈ ಸಂದರ್ಭದಲ್ಲಿ ಊರಿನ ಜನತಾ ನ್ಯಾಯಾಲಯದಲ್ಲಿ ಕಾರ್ಯಕ್ರಮ ನಡೆಯುತ್ತಿದ್ದು ಪರಿಹಾರದ ಚೆಕ್‌ಗಳನ್ನು ಪಡೆಯಲು ಫಲಾನುಭವಿಗಳು ಅಲ್ಲಿ ನೆರೆದಿದ್ದರು. ಶಾರವ್ವ ಎಂಬಾಕೆಯ ಗಂಡ ಸಾಹುಕಾರರೊಬ್ಬರ ಟ್ರಕ್ಕಿನಡಿ ಸಿಲುಕಿ ಸತ್ತಿದ್ದ, ಆಗ ಅವಳಿಗೆ ಇಪ್ಪತ್ತು ಸಾವಿರ ರೂಪಾಯಿಯ ಚೆಕ್‌ವೊಂದನ್ನು ನೀಡುತ್ತಿದ್ದರು. ಇದನ್ನು ನೋಡಿದಾಗ ಯಮನಪ್ಪನ ಎದೆಯಲ್ಲಿ ಯಾರೋ ರುದ್ರಭಯಂಕರವಾಗಿ ತಾಳ ಮದ್ದಳೆಗಳನ್ನು ಬಾರಿಸಿದಂತಾಗುತ್ತಿತ್ತು. ಬೇಡ ಬೇಡವೆಂದರೂ ಹಾಸಿಗೆಯಲ್ಲಿ ನರಳುತ್ತಿದ್ದ ಹರೆಯದ ಹಿರಿಮಗ ಹನುಮಂತನ ನೆನಪು ಆತನ ತಲೆಯಲ್ಲಿ ಗರಗಸವಾಗಿ ಕೊರೆಯತೊಡಗಿತ್ತು. ಹೇಗಾದರೂ ಮಾಡಿ ಮಗನನ್ನು ಉಳಿಸಿಕೊಳ್ಳಲೇಬೇಕು,

ಮಗನಿಗೆ ಆಪರೇಷನ್ ಮಾಡಿಸಲೇಬೇಕು, ಕನಿಷ್ಠವೆಂದರೂ ಐದಾರು ಸಾವಿರ ಖರ್ಚು, ತನ್ನಂತಹವನಿಗೆ ಅಷ್ಟೊಂದು ಹಣ ಎಲ್ಲಿಂದ ಬರಬೇಕು? ಎಂದು ಹಪಹಪಿಸುತ್ತಾನೆ. ಶಾರವ್ವನನ್ನು ನೋಡಿದಾಗ, ಆಕೆಯ ಗಂಡ ಬದುಕಿದ್ದರೂ ಅವಳಿಗೆ ಇಷ್ಟೊಂದು ಅನುಕೂಲ ಜೀವನ ಸಿಗುತ್ತಿರಲಿಲ್ಲ. ಆತ ಸತ್ತದ್ದೇ ಇವಳಿಗೆ ವರವಾಯಿತೇ? ಸಾವು ಅನುಕೂಲ ಎಂದು ತನ್ನೊಳಗೆ ಪುನಃ ಪುನಃ ಅಂದುಕೊಂಡ. ಏನಾದರಾಗಲಿ ತನ್ನ ಮಗನನ್ನು ಸಾಯಲು ಬಿಡಬಾರದು ಎಂದು ನಿರ್ಧರಿಸಿ ಬೀದಿಯಲ್ಲಿ ಆಡುತ್ತಿದ್ದ ತನ್ನ ನಾಲ್ಕು ವರ್ಷದ ಕುಂಟು ಮಗ ಸೊಟ್ಟಬಸ್ಯಾನನ್ನು ಎತ್ತಿಕೊಂಡು ರಸ್ತೆಯಲ್ಲಿ ರಭಸದಿಂದ ಬರುತ್ತಿದ್ದ ಲಾರಿಯ ಚಕ್ರಕ್ಕೆ ತನ್ನ ಹೆಗಲ ಮೇಲಿದ್ದ ಮಗನನ್ನು ಹಾಕುತ್ತಾನೆ. ಹೀಗೆ ಈ ಕಥೆಯಲ್ಲಿ ಒಬ್ಬ ಮಗನನ್ನು ಉಳಿಸಿಕೊಳ್ಳಲು ಮತ್ತೊಬ್ಬನನ್ನು ಬಲಿಕೊಡುವ ಹೇಯಕೃತ್ಯವನ್ನು ಮಾಡುವಂತಹ ಸಂದರ್ಭಗಳು ಬಡವರಿಗೆ, ಅಸಹಾಯಕರಿಗೆ ಬಂದೊದಗುವ ಸ್ಥಿತಿಯನ್ನು ಇಂತಹ ಕಥೆಗಳು ತಿಳಿಸುತ್ತವೆ.

'ಗಂಗಮ್ಮನ ಜೀವನ ದೃಷ್ಟಿ' ಕಥೆಯಲ್ಲಿ ಹಳ್ಳಿಯ ಅವಿದ್ಯಾವಂತ ಹೆಂಗಸಾದ ಗಂಗಮ್ಮಳ ಜೀವನಾನುಭವದ ದೃಷ್ಟಿಕೋನವನ್ನು ಹೇಳುತ್ತದೆ. ಬದುಕನ್ನು ಅತ್ಯಂತ ಸರಳವಾಗಿ ಗ್ರಹಿಸಿ, ಗಂಡನೊಂದಿಗೆ ಆದರ್ಶ ದಾಂಪತ್ಯದ ತುಂಬು ಜೀವನವನ್ನು ನಡೆಸಿ, ಕೊನೆಗೆ ತನ್ನೂರಿನ ಶಾಲೆಯ ನಿರ್ಮಾಣಕ್ಕೆ ತನ್ನ ಜಮೀನನ್ನು ದಾನವಾಗಿ ನೀಡಿ ಸಮಾಜದ ಹಿತಕ್ಕಾಗಿ ಬದುಕುವಂತಹ ಆದರ್ಶಪರತೆ ಮೆರೆದವಳು ಗಂಗಮ್ಮ, ನಿರೂಪಕರೊಂದಿಗೆ ಗಂಗಮ್ಮ ತನ್ನ ಹಿಂದಿನ ಜೀವನದ ಅನುಭವಗಳನ್ನು ಮೆಲುಕು ಹಾಕುತ್ತಾ ತನ್ನ ಮೊಮ್ಮಗನಿಗೊಂದು ನೌಕರಿ ಕೊಡಿಸುವಂತೆ ಭಿನ್ನವಿಸಿಕೊಳ್ಳುತ್ತಾಳೆ. ಹೀಗೆ ಈ ಕಥೆ ಭಾವಾತಿರೇಕದ ಆದರ್ಶವಾದೀ ನಿರೂಪಣೆಯಿಂದ ಕೃತಕವಾಗಬಹುದಿತ್ತು. ಆದರೆ ನಿರೂಪಕನ ಪಕ್ವತೆಯಿಂದಾಗಿ ಹಾಗಾಗದೇ ಗಂಗಮ್ಮ ನೈಜವಾಗಿದ್ದೇ ಆದರ್ಶಪ್ರಾಯಳಾಗುತ್ತಾಳೆ.

ಮನು ಬಳಿಗಾರರ ಒಟ್ಟು ಕಥೆಗಳಲ್ಲಿ ಕಂಡುಬರುವ ಮುಖ್ಯ ವಸ್ತು ಗ್ರಾಮ್ಯ ಜೀವನ ಹಾಗೂ ಅಲ್ಲಿನ ಬಡತನ, ಶೋಷಣೆ, ದಾರಿದ್ರ್ಯದ ವಿವಿಧ ಮುಖಗಳನ್ನು ಬಹಳ ಔಚಿತ್ಯಪೂರ್ಣವಾಗಿ ಕಲಾತ್ಮಕ ಸಂವಿಧಾನ ಚೌಕಟ್ಟಿನಲ್ಲಿ ಕಂಡರಿಸಿದ್ದಾರೆ. ಜೊತೆಗೆ ಮಾನವೀಯ ಸಂಬಂಧದ ಎಳೆಗಳನ್ನು ಬಹಳ ಸೂಕ್ಷ್ಮವಾಗಿ ಗುರುತಿಸುತ್ತಾರೆ. ತಂದೆ-ತಾಯಿ, ಗುರು-ಶಿಷ್ಯರ ಮಾನವೀಯ ಸಂಬಂಧದ ಭಾವನಾತ್ಮಕ ಸಂದರ್ಭಗಳನ್ನು ಪ್ರಾಮಾಣಿಕವಾಗಿ ಅತಿರಂಜನೀಯಗೊಳಿಸದೆ ಸಹಜವಾಗಿ ಚಿತ್ರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಭರವಸೆಯ ಕಥೆಗಾರರಾಗಿ ಮನು ಬಳಿಗಾರರು ಪ್ರಮುಖರೆನಿಸುತ್ತಾರೆ.

# ಮನು ಬಳಿಗಾರ್ ಕತೆಗಳಲ್ಲಿ ವಾಸ್ತವತೆಯ ನಿರ್ವಹಣೆ

ಜಗದೀಶ್ ಎಸ್.

ಆಧುನಿಕ ಕನ್ನಡ ಸಾಹಿತ್ಯವು ಹಲಬಗೆಯಲ್ಲಿ ಪಾಶ್ಚಾತ್ಯ ಸಾಹಿತ್ಯದಿಂದ ಪ್ರಭಾವ ಮತ್ತು ಪ್ರೇರಣೆಯನ್ನು ಪಡೆದುಕೊಂಡಿದೆ. ಒಟ್ಟು ಕನ್ನಡ ಸಾಹಿತ್ಯ ಸಂವೇದನೆಯನ್ನು ಗ್ರಹಿಸುವುದೇ ಆದರೆ ಕಾವ್ಯ, ಸಣ್ಣಕತೆ, ಕಾದಂಬರಿ ಮತ್ತು ಇತರ ನಿರೂಪಣಾ ಕ್ರಮಗಳು ಸಹ ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಬಂದಿದೆ ಎನ್ನಬಹುದು. ಈ ಮಾದರಿಯ ನಿರೂಪಣಾ ಕ್ರಮಗಳು, ತತ್ವ, ಸಿದ್ಧಾಂತಗಳನ್ನು ಎರವಲು ಪಡೆದುಕೊಂಡ ಕನ್ನಡ ಸಂವೇದನೆಯು ಸಾಹಿತ್ಯ ವಲಯದಲ್ಲಿ ಬಹುದೊಡ್ಡ ಕ್ರಾಂತಿಯನ್ನು ಮಾಡಿತು. ಸಾಹಿತ್ಯದಲ್ಲಿ ಅದುವರೆಗು ಮೂಡಿರದ ಸಮಾಜ, ಮನುಷ್ಯ, ಪ್ರಕೃತಿ, ಮಾನವೀಯತೆ, ವಾಸ್ತವತೆ ಹಾಗೂ ರಮ್ಯ ಶೈಲಿಯ ವಸ್ತುಗಳು ಸಾಹಿತ್ಯದ ಕೇಂದ್ರ ವಸ್ತುಗಳಾದವು. ಎಂದರೆ ಈ ರೀತಿಯ ಕನ್ನಡ ನಾಡಿನ ವಸ್ತು ಸಂವೇದನೆಗಳು ಅನ್ಯ ನಿರೂಪಣಾ ಕ್ರಮದೊಂದಿಗೆ ಶಕ್ತವಾಗಿ ಬೆರೆತು ಮೂಡಿಬಂದ ಬಗೆಯನ್ನು ಸ್ಥೂಲವಾಗಿ ಗಮನಿಸಬಹುದು. ಆಧುನಿಕ ಕನ್ನಡ ನವೋದಯ ಸಾಹಿತ್ಯದಿಂದ ಸಣ್ಣಕತೆ ನಿರೂಪಣಾ ಪ್ರಕಾರವು ಬೆಳೆದುಬಂದಿತು. ನವೋದಯದ ತಾತ್ವಿಕತೆಗಳಲ್ಲಿ ರಮ್ಯತೆಯ ಶೈಲಿಯೊಂದಿಗೆ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಚರ್ಚೆಗಳ ಜೊತೆಗೆ ವಸಾತುಶಾಹಿಯ ಆಗಮನದ ಪರಿಣಾಮಗಳನ್ನು ಹಿಡಿದಿಡುವ ಸೂಕ್ಷ್ಮವಾದ ಒಳನೋಟಗಳು ಕಂಡುಬಂದವು. ನವೋದಯದಲ್ಲಿ ಸಮಾಜದ ವಾಸ್ತವದ ಚಿತ್ರಣಗಳು ಸಹ ರಮ್ಯತೆಯ ಶೈಲಿಯಲ್ಲಿ ನಿರೂಪಣೆಗೊಂಡದ್ದರಿಂದ ನಿಜವಾದ ವಾಸ್ತವಿಕತೆಯ ಚರ್ಚೆ ಮೂಡಿಬರಲಿಲ್ಲ.

ಪ್ರಗತಿಶೀಲ ಮತ್ತು ದಲಿತ ಬಂಡಾಯ ಕಾಲಘಟ್ಟದಿಂದ ಕನ್ನಡ ಸಾಹಿತ್ಯ ಸಂವೇದನೆಯ ನೆಲೆಗಳಲ್ಲಿ ನಿಜವಾದ ವಾಸ್ತವಿಕತೆಯ ಚರ್ಚೆ ಮೂಡಿಬಂದಿತು. ನವೋದಯ ಕಾಲಘಟ್ಟದ ಕುವೆಂಪು ಅವರ "ಯಾರು ಅರಿಯದ ವೀರ" ಕತೆಯು ಮಾನವೀಯತೆಯನ್ನು, ಪ್ರಾಮಾಣಿಕತೆಯನ್ನು ಮಂಡಿಸುವ ಸಲುವಾಗಿ ಅಲ್ಲಿದ್ದಂತಹ ವರ್ಗ ತಾರತಮ್ಯವನ್ನಾಗಲಿ, ಜಾತಿ ತಾರತಮ್ಯವನ್ನಾಗಲಿ ಮರೆಮಾಚುತ್ತದೆ. ಎಂದರೆ ಮಾನವೀಯ ನೆಲೆಯಲ್ಲಿ ಈ ಎಲ್ಲಾ ತಾರತಮ್ಯವನ್ನು ಮೀರಲು ಪ್ರಯತ್ನಿಸುವ ಬಗೆಯನ್ನು ಕಾಣಬಹುದಾದರೂ ನಿಜವಾದ ವಾಸ್ತವವನ್ನು ಕಟ್ಟಿಕೊಡುತ್ತದೆ ಎಂಬುದನ್ನು ನಂಬಲಾಗುವುದಿಲ್ಲ. ನವೋದಯದ ನಂತರ ಮಾರ್ಕ್ಸ್‌ವಾದ, ಕಮ್ಯುನಿಸಂ, ಲೋಹಿಯಾವಾದ, ಸಮಾಜವಾದ, ಸ್ಥಳೀಯ ಚಳವಳಿಗಳಿಂದಾಗಿ ದಲಿತ ಬಂಡಾಯ ಸಾಹಿತ್ಯವು ಒಂದು ಗಟ್ಟಿನೆಲೆಯ ತಾತ್ವಿಕತೆಯನ್ನು ಹೊಂದುವ ಮೂಲಕ ನಿಜವಾದ ವಾಸ್ತವಿಕತೆಯನ್ನು ಮಂಡಿಸಿತು. ಇದರಿಂದ ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ಕಲ್ಪಿಸಲಾಗಿದ್ದ ಸಮಾಜದ ಪರಿಕಲ್ಪನೆ, ರಾಷ್ಟ್ರೀಯತೆಯ ನೆಲೆಗಳು, ಪರಂಪರೆ, ಸಂಪ್ರದಾಯದ ತೊಡಕುಗಳು ಹಾಗೂ ಮನುಷ್ಯ ಬದುಕಿನ ಸಂಘರ್ಷಾತ್ಮಕ ನೆಲೆಗಳನ್ನು ಮತ್ತೊಂದು ಬಗೆಯಲ್ಲಿ ನಿರೂಪಿಸಿತು. ಹೀಗೆ ಕನ್ನಡ ಸಂವೇದನೆಯಲ್ಲಿ ಮೂಡಿದ ಸಮಾಜದ

ಡಂಬಾಚಾರಗಳು, ಭ್ರಷ್ಟತೆ, ವರ್ಗ-ವರ್ಣ ತಾರತಮ್ಯ, ರಾಜಕೀಯ ಭ್ರಷ್ಟ ನೆಲೆಗಳ ಶೋಧನೆಯು ಮನು ಬಳಿಗಾರ್ ಅವರ ಕತೆಗಳಲ್ಲಿ ಗ್ರಹಿಸಬಹುದಾಗಿದೆ.

ಎಪ್ಪತ್ತು ಎಂಬತ್ತರ ದಶಕದ ಈಚೆಗಿನ ಭಾರತದ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಯನ್ನು ವಾಸ್ತವದ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಬಳಿಗಾರರ "ಘಾತ" ಮತ್ತು 'ಪೃಥ್ವಿಯ ಮೇಲೊಂದು ಮೊರಡಿ' ಕತೆಗಳು ಮಾಡುತ್ತವೆ. ಈ ಕತೆಗಳ ನಿರೂಪಣಾ ವಿಧಾನವನ್ನು ಗಮನಿಸಿದಾಗ ನಿರೂಪಕ ಮತ್ತು ನಾಯಕ ಒಂದೇ ದಾಟಿಯಲ್ಲಿ ಸಾಗುತ್ತಿರುವುದರ ಅರಿವಾಗುತ್ತದೆ. ಅಂದರೆ ಕತೆಯ ನಾಯಕ ಪಾತ್ರವು ಪ್ರಸ್ತುತ ಸಮಾಜದ ಪಲ್ಲಟಕ್ಕೆ ಸಿಲುಕಿ ನಲುಗುವ, ಇಲ್ಲವೆ ಕಾಲಘಟ್ಟವನ್ನು ನಿಯಂತ್ರಿಸುವ ಪಾತ್ರವಾಗಿ ಕಂಡುಬರುತ್ತಾನೆ. ಸಮಕಾಲೀನ ಸಮಾಜದಲ್ಲಿ ನಡೆಯುತ್ತಿರುವ ರಾಜಕೀಯ ಭ್ರಷ್ಟಾಚಾರ, ಅನೈತಿಕತೆ, ಲಂಚಗುಳಿತನ, ಕಾರ್ಮಿಕರ ಸಾವಿನ ಅಲಕ್ಷ್ಯತನ, ಸರ್ಕಾರಿ ಕಛೇರಿಗಳ ಮೋಸ, ಅಧಿಕಾರಿ ಮತ್ತು ಜನರ ನಡುವಿನ ಬಿರುಕುಗಳು ಮುಂತಾದ ವಾಸ್ತವ ಸಮಸ್ಯೆಗಳನ್ನು ಬಳಿಗಾರರ ಕತೆಗಳು ಬಹು ಮುಖ್ಯವಾಗಿ ಪ್ರಶ್ನೆ ಮಾಡುವುದಲ್ಲದೇ ಅವುಗಳಿಗೆ ಸಾಧ್ಯವಾದ ಮಟ್ಟಿಗೆ ಪರಿಹಾರದ ಮಾರ್ಗಗಳನ್ನು ತಿಳಿಸಿಕೊಡುವ ನೆಲೆಯಲ್ಲಿ ರಚನೆಯಾಗಿವೆ.

'ಘಾತ' ಕತೆಯು ಮೇಲುನೋಟಕ್ಕೆ 'ಧಡಲ್ ಬಾಜಿ' ಪತ್ರಿಕೆಯ ಸಂಪಾದಕನಾದ ಸುಬ್ಬಣ್ಣನಿಗೆ ಉಂಟಾದ ಆಘಾತವನ್ನು ಹೇಳುತ್ತದೆಯಾದರೂ ಇದರೊಳಗೆ ಕಾಣದ ಅನೇಕ ಪಾತ್ರಗಳಿಗೆ ತಟ್ಟಿದ ಕಳಂಕವನ್ನು ಶೋಧಿಸುತ್ತದೆ. ನಿರೂಪಕ ಕತೆಯ ಕೊನೆಗೆ 'ಮಾನಹಾನಿ ಖಟ್ಲೆಗೆ ಮೊದಲೇ ಪ್ರಕರಣವು ಇಷ್ಟೊಂದು ಸಲೀಸಾಗಿ ಮುಗಿದುಹೋದ ಖುಷಿ ನಿರ್ದೇಶಕರಲ್ಲಿ ಎದ್ದು ಕಾಣುತ್ತಿತ್ತು. ಆದರೆ ಸುಬ್ಬಣ್ಣನಿಗೆ ಆದ ಆಘಾತ, ಹಾನಿ ಯಾವುವೂ ಅವರ ಗಮನಕ್ಕೆ ಕೊನೆತನಕವೂ ಬರದೇ ಹೋದವು" ಎನ್ನುತ್ತಾನೆ. ಇಲ್ಲಿ ಸುಬ್ಬಣ್ಣನಿಗೆ ಕಾರು ತೆಗೆದುಕೊಳ್ಳಲು ಲಂಚ ದಕ್ಕಲಿಲ್ಲ ಎಂದೂ, ಇಲ್ಲವೇ ತನ್ನ ಮೇಲೆ ಕಾನೂನು ಕ್ರಮ ಜರುಗುತ್ತದೆ ಎಂದೋ ಆಘಾತವಾಗಿದೆ. ಆದರೆ ನಡತೆಯ ಹೆಸರಲ್ಲಿ ಲೈನ್‌ಮನ್ ನಾಗಣ್ಣನ ಹೆಂಡತಿಯ ಹೆಸರಿಗೆ ಅಂಟಿದ ಕಳಂಕವನ್ನು ಅಷ್ಟಾಗಿ ಕತೆ ಪರಿಗಣಿಸುವುದಿಲ್ಲ. ನಿರ್ದೇಶಕ ಜೆ.ಇ. ಯನ್ನು ಕಾಪಾಡಲು ಮಾನಹಾನಿ ಪ್ರಕರಣವನ್ನು ಪರಿಚಯಿಸುತ್ತಾನೆಯೇ ವಿನಹ ನಿಜವಾಗಿ ನಾಗಣ್ಣನ ಹೆಂಡತಿಗೆ ನ್ಯಾಯ ದೊರಕಿಸುವ ಉದ್ದೇಶದಿಂದಲ್ಲ. ಕತೆಯಲ್ಲಿ ಅಲ್ಲದೆ ತನ್ನ ಮೇಲೆ ಬಂದ ದೈಹಿಕ ಕಳಂಕವನ್ನು ಎಲ್ಲಿಯೂ ನೇರವಾಗಿ ನಾಗಣ್ಣನ ಹೆಂಡತಿ ಪ್ರಸ್ತಾಪಿಸುವುದೇ ಇಲ್ಲ. ಜೊತೆಗೆ ಈ ಪಾತ್ರ ಕೊನೆವರೆವಿಗೂ ಅಮೂರ್ತವಾಗಿಯೇ ಉಳಿದುಬಿಡುತ್ತದೆ.

ಈ ಕತೆಯ ಮುಖ್ಯ ನೆಲೆಗಳನ್ನು ಗುರುತಿಸುವುದಾದರೆ ಮೊದಲಿಗೆ ಸರ್ಕಾರ ಮತ್ತು ವಿದ್ಯುತ್ ಇಲಾಖೆಯ ನಡುವೆ ಹೊಂದಾಣಿಕೆ ಇಲ್ಲದ ಆಡಳಿತದ ಪರಿಣಾಮ, ಎರಡನೆಯದಾಗಿ ಸಮಾಜವನ್ನು, ರಾಜಕೀಯ ಅಧಿಕಾರವನ್ನು ಮತ್ತು ಜನರನ್ನು ತಿದ್ದಬೇಕಾದ ಜವಾಬ್ದಾರಿ ಇರುವ ಪತ್ರಿಕಾರಂಗ ತನ್ನ

ನೈತಿಕತೆಯನ್ನು ಕಳೆದುಕೊಂಡಾಗ ಸಮಾಜದಲ್ಲಿ ಉಂಟಾಗುವ ರೋಗಗಳನ್ನು ನಿವಾರಿಸಲು ಸಾಧ್ಯವಾಗದ ಸ್ಥಿತಿಯನ್ನು ಕುರಿತುದಾಗಿದೆ. ನಾಗಣ್ಣನ ಸಾವಿನೊಂದಿಗೆ ಆರಂಭವಾಗುವ 'ಘಾತ' ಕತೆ ಅವನ ಸಾವಿಗೆ ಸಿಗಬೇಕಾದ ನ್ಯಾಯವನ್ನು (ಪರಿಹಾರ) ಕೊಡಿಸುವಲ್ಲಿ ವಿಫಲವಾಗುತ್ತದೆ. 'ಯಾರನ್ನೇ ಕೇಳಿದರೂ, ಅದೊಂದು ಅಪಘಾತವೆಂದೋ, ಸಹಜ ಸಾವೆಂದೋ ಉತ್ತರ. ಅಂದರೆ ವಿದ್ಯುತ್ ಕಂಬವನ್ನೇರಿದ ನಾಗಣ್ಣ, ಅಲ್ಲಿನ ಕರೆಂಟ್ ಶಾಕ್‌ನಿಂದಲೇ ಸತ್ತ ಎಂಬುದು ಪ್ರಥಮ ಹಾಗೂ ಪ್ರತ್ಯಕ್ಷದರ್ಶಿ ಹುಸೇನ್‌ಸಾಬ್ ಮಾಸ್ತರದು'. ಇಲ್ಲಿ ಕಾರ್ಮಿಕ ಅಥವಾ ಕೆಳದರ್ಜೆಯ ನೌಕರನ ಸಾವಿನ ಬಗ್ಗೆ ಯಾವ ಅಧಿಕಾರಿಯೂ ಮಾತಾಡುವುದಿಲ್ಲ. ಇವತ್ತಿನ ವಾಸ್ತವವೂ ಕೂಡ ಇದೇ ಆಗಿದೆ ಎಂಬುದನ್ನು ಅರಿಯಬೇಕಾಗುತ್ತದೆ. ನಿರೂಪಕ ಪ್ರಾರಂಭದಲ್ಲಿ 'ಧಡಲ್ ಬಾಜಿ' ಪತ್ರಿಕೆಯ ಪರಿಚಯ ಮಾಡುವಾಗ ಕೆಲ ತಿಂಗಳ ಹಿಂದೆಯೇ ಕೆ.ಇ.ಬಿ.ಯಲ್ಲಿಯ ಕುತಂತ್ರದ ಬಗ್ಗೆ ತಹಸೀಲ್ದಾರಾಫೀಸಿನ ಭಯಂಕರ ಭ್ರಷ್ಟಾಚಾರದ ಬಗ್ಗೆ, ಪೊಲೀಸರ ದುರಾಡಳಿತದ ಬಗ್ಗೆ ಮುದ್ರಿಸಿ ಅಗಾದ ಜನಪ್ರಿಯತೆ ಗಳಿಸಿದ್ದ ಸುಬ್ಬಣ್ಣನಿಗೆ'[2] ಎನ್ನುವ ಮೂಲಕ ಸಮಾಜವಾದಿ ಧೋರಣೆ ಹೊಂದಿದ ಪತ್ರಿಕೆ ಎಂಬುದನ್ನು ಸಾಕ್ಷೀಕರಿಸುತ್ತಾರೆ. ತದ ನಂತರ ಪತ್ರಕರ್ತನ ನೈತಿಕತೆಯನ್ನು ಆವರಿಸುವ ಭ್ರಷ್ಟಾಚಾರದ ವಿವಿಧ ಮುಖಗಳನ್ನು ಕತೆ ಚರ್ಚಿಸುತ್ತದೆ. ಅಲ್ಲದೆ ಸಾಮಾನ್ಯ ಲೈನ್‌ಮನ್ ನಾಗಣ್ಣನ ಆರ್ಥಿಕ ಸ್ಥಿತಿ 'ಅದು ಒಬ್ಬ ಭಾರಿ ಶ್ರೀಮಂತರ ಮನೆಗೇನೂ ಕಡಿಮೆ ಇರಲಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರೊ, ಮತ್ತಾವುದೋ ಗೆಜೆಟೆಡ್ ಅಧಿಕಾರಿಯ ಮನೆಯೊಡನೆ ಹೋಲಿಸಬಹುದಾಗಿತ್ತು' ಇನ್ನು ದೊಡ್ಡ ಅಧಿಕಾರಿಗಳ ಭ್ರಷ್ಟತೆಯ ಅಳತೆ ಎಷ್ಟು ದೊಡ್ಡದಿರುತ್ತದೆಂದು ಅಂದಾಜಾಗಬೇಕು. ಪೂರ್ಣಚಂದ್ರ ತೇಜಸ್ವಿ ಅವರು 'ಮಾಯಾಲೋಕ' ಕೃತಿಯಲ್ಲಿ ವಿದ್ಯುತ್ ಇಲಾಖೆ ಮತ್ತು ಪತ್ರಿಕೆಯ ಸಹ ಸಂಬಂಧ, ಒಳಜಗಳ ಮತ್ತು ಹೊಂದಾಣಿಕೆಯ ಸಾಧ್ಯತೆಗಳ ಬಗೆಗೆ ವಾಸ್ತವವಾದಿ ನೆಲೆಯಲ್ಲಿ ನಿರೂಪಿಸುತ್ತಾರೆ. ಈ ಹಿನ್ನೆಲೆಯಲ್ಲಿಯೇ ಬಳಿಗಾರರ 'ಘಾತ' ಕತೆ ವಾಸ್ತವ ಸಮಾಜದ ರಾಜಕೀಯ ಅಧಿಕಾರದಲ್ಲಿರುವ ಮಿತಿಗಳನ್ನು ಹಿಡಿದಿಡುವ ನಿಟ್ಟಿನಲ್ಲಿ ಮುಖ್ಯವಾಗುತ್ತದೆ.

'ಪೃಥ್ವಿಯ ಮೇಲೊಂದು ಮೊರಡಿ' ಕತೆಯು ಬಳಿಗಾರರ ಇತರ ಕತೆಗಳಿಗಿಂತ ಭಿನ್ನವಾದುದು ಮತ್ತು ಮುಖ್ಯವಾದುದು. ಕತೆಯ ರಚನೆಯಲ್ಲಿ ಹೊಸ ಹೊಸ ಪ್ರಯೋಗವನ್ನು ಮಾಡಿರುವ ಈ ಕತೆ ಮೊದಲಿಗೆ ಚರಿತ್ರೆ ಮತ್ತು ಪುರಾಣವನ್ನು ಒಟ್ಟಿಗೆ ಬಳಸಿಕೊಳ್ಳುವ ಮೂಲಕ ವಾಸ್ತವದ ಸಮಾಜವನ್ನು ವಿಡಂಬಿಸುವ ಆಯಾಮವನ್ನು ಒಳಗೊಂಡಿದೆ. ಪುರಾಣ ವ್ಯಕ್ತಿಯಾದ 'ನಾರದ' ಹಾಗೂ ಚರಿತ್ರೆಯ ಪಾತ್ರವಾದ 'ಬಸವಣ್ಣ'ನ ನಡುವೆ ಸಂಭಾಷಣೆಯನ್ನು ನಡೆಸುವ ಮೂಲಕ ಚರಿತ್ರೆಯನ್ನು ಸಾಹಿತ್ಯದ ನೆಲೆಯಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಈ ಕತೆ ಮಾಡುತ್ತದೆ. ಇದರ ನಿರೂಪಣಾ ವಿಧಾನವನ್ನು ಗಮನಿಸಿದಾಗ ಪ್ರಭುಶಂಕರ ಅವರ 'ಬೆರಗು' ಕೃತಿಯು ನೆನಪಾಗುತ್ತದೆ. ಇದು ಹನ್ನೆರಡನೆಯ ಶತಮಾನದ ಬಸವಣ್ಣನನ್ನು ಆ ಕಾಲದ ಇತರ ಪಾತ್ರಗಳಾದ ಅಲ್ಲಮ, ಅಕ್ಕ, ಗಂಗಾಂಬಿಕೆ, ಬಿಜ್ಜಳ ನಿರೂಪಿಸಿದ ಬಗೆಯನ್ನು ಒಳಗೊಂಡಿದೆ. ಹಾಗೆಯೇ

‘ಪೃಥ್ವಿಯ ಮೇಲೊಂದು ಮೊರಡಿ' ಕತೆಯು ಬಸವಣ್ಣ ತನ್ನ ನಂತರದ ಕಾಲಘಟ್ಟದ ಆಗು-ಹೋಗುಗಳನ್ನು ತಿಳಿಯಲು ಭೂಲೋಕಕ್ಕೆ ಬರುವುದರ ಹಿಂದಿರುವ ಆಶಯಗಳನ್ನು ಕುರಿತು ಚರ್ಚಿಸುತ್ತದೆ.

ಬಸವಣ್ಣ ಭಾರತದಾಚೆಗಿನ ಯೂರೋಪ್ ರಾಷ್ಟ್ರಗಳಲ್ಲಿ ನಡೆಯುವ ಯುದ್ಧವನ್ನು ನೋಡಿ “ಕ್ಯಾಥೋಲಿಕ್ ಹಾಗೂ ಪ್ರಾಟೆಸ್ಟಂಟ್ಸ್ ನಡುವೆ ಮೂವತ್ತು ವರ್ಷಗಳ ಯುದ್ಧವೇ ನಡೆದುಹೋಯಿತು. ತಾನೂ ಹೊಸ ಸಿದ್ಧಾಂತವೊಂದನ್ನು ರೂಪಿಸಿ ಜಾತ್ಯತೀತ ನವ ಸಮಾಜ ನಿರ್ಮಾಣ ಮಾಡಬೇಕೆಂದಾಗ ಕಲ್ಯಾಣದಲ್ಲಿಯೂ ಹೀಗೆಯೇ ಘರ್ಷಣೆಗಳಾಗಿರಲಿಲ್ಲವೇ? ಧಾರ್ಮಿಕ ಯುದ್ಧಗಳೇನೇ ಇರಲಿ ಬೈಬಲ್ ಅನ್ನು ಲ್ಯಾಟಿನ್ ಇಂದ ಜನರ ಭಾಷೆಗೆ ತಂದದ್ದು, ಊಳಿಗಮಾನ್ಯ ಪದ್ಧತಿ ಹಾಗೂ ಧರ್ಮಗುರುಗಳನ್ನು ನಿಯಂತ್ರಿಸಿದ್ದು ಮುಖ್ಯ ಎಂದು ಹೇಳುವ ಜೊತೆಗೆ ಅಲ್ಲಿಯ ಸ್ವಾತಂತ್ರ್ಯ ಹಾಗೂ ಸಮಾನತೆ ನಮಗೂ ಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಜೊತೆಗೆ ಸಾಮಾಜಿಕ ಚಳವಳಿಯ ಮೂಲಕ ಸಾಂಪ್ರದಾಯಿಕ ಮೌಢ್ಯಗಳನ್ನು ಸಮಾಜದಿಂದ ಕಿತ್ತೆಸೆಯಬೇಕಾದ ಅಗತ್ಯವನ್ನು ಹೇಳುವುದರ ಜೊತೆಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕಿನಲ್ಲಿ ಸಾಮಾನ್ಯನಿಗೆ ಸಿಗಬೇಕಾದ ಮನ್ನಣೆಯನ್ನು ಪ್ರತಿಪಾದಿಸುತ್ತದೆ.

ಹದಿಮೂರನೆ ಶತಮಾನದಲ್ಲಿ ಭಾರತದ ಚರಿತ್ರೆ ಕಟ್ಟುವಿಕೆಯ ಕೆಲಸದ ಪ್ರಾರಂಭ ಹಾಗೂ ವರ್ಗಸಂಘರ್ಷದ ಹಾದಿ ನಿವಾರಣೆಯಾಗುವ ಸಾಧ್ಯತೆಯನ್ನು ಕತೆ ಒಳಗೊಂಡಿದೆ. ಬಸವಣ್ಣ ಪಾತ್ರದ ಮೂಲಕ ಹನ್ನೆರಡನೆ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗಿನ ಭಾರತದ ಸಾಮಾಜಿಕ ರಚನೆಯಲ್ಲಾದ ಪಲ್ಲಟಗಳನ್ನು, ಸ್ಥಿತ್ಯಂತರಗಳನ್ನು ಹಾಗೂ ಹೊಸದಾಗಿ ಹುಟ್ಟಿಕೊಂಡ ಕೋಮು ಗಲಭೆಯೆಂಬ ಸಾಮಾಜಿಕ ರೋಗವನ್ನು ವಿಡಂಬಿಸಲಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ‘’ದೆಹಲಿ ಸುಲ್ತಾನರ ಏಕೈಕ ಮಹಿಳಾ ರಾಜಳಾಗಿ ರಾಜ್ಯಭಾರ ನಡೆಸಿದ ರಜಿಯಾ ಸುಲ್ತಾನಳದು. ಬುರ್ಖಾವನ್ನು ಕಡೆಗಣಿಸಿ ಪುರುಷ ಉಡುಪನ್ನೇ ಧರಿಸಿ ಆಡಳಿತ ಮಾಡುತ್ತಿದ್ದ ಅವಳನ್ನು ನೋಡುವುದೇ ಒಂದು ಖುಷಿ” ಎನ್ನುವ ಬಸವಣ್ಣ ಮಹಮ್ಮದ ಘೋರಿಯ ನಂತರ ಗುಲಾಮ ಐಬಕ್ ಆಡಳಿತ ನಡೆಸಿದರ ಜೊತೆಗೆ ಹಿಂದೂ ಮುಸ್ಲಿಂರ ನಡುವೆ ಹುಟ್ಟಿದ ಅಹಂಕಾರದ ಅರಿವೂ ಇಲ್ಲಿದೆ. ವಸಾಹತುಶಾಹಿ ವಿರುದ್ಧವಾಗಿ ಹುಟ್ಟಿದ ಕೀರ್ತನಾಕಾರರು, ಪುನರುಜ್ಜೀವನ ಚಳವಳಿ, ಭಾರತದ ಸಾಮಾಜಿಕ ಅನಿಷ್ಟದ ವಿರುದ್ಧ ಬಂಡೆದ್ದ ರಾಜಾರಾಮ್ ಮೋಹನರಾಯರು ಸಹ ಈ ಕತೆಯ ನಿರೂಪಣೆಯಲ್ಲಿ ಸಿಗುತ್ತಾರೆ. ಜಾಗತಿಕ ಸಮಸ್ಯೆಯಲ್ಲಿ ಸಿಲುಕಿರುವ ಜಗತ್ತನ್ನು ಬಸವಣ್ಣ ಪ್ರತಿಪಾದಿಸಿದ ಸಮಾನತೆಯ ಅಡಿಯಲ್ಲಿ ಕಟ್ಟಬೇಕೆನ್ನುವ ಆಶಯವನ್ನು ಹೇಳುವ ‘ಪೃಥ್ವಿಯ ಮೇಲೊಂದು ಮೊರಡಿ' ಕತೆ ಹೊಸ ಬಗೆಯ ಮಾನವೀಯ ಮೌಲ್ಯಗಳನ್ನು ವಾಸ್ತವದ ಸಾಂಸ್ಕೃತಿಕ ಬದುಕಿಗೆ ತಲುಪಿಸುವ ಕೆಲಸವನ್ನು ಮಾಡುತ್ತದೆ.

ಮನು ಬಳಿಗಾರ್ ಅವರ “ಮುತ್ತೈದೆ” ಕತೆಯು ದೇವಿರಮ್ಮನ ಸಂಪ್ರದಾಯದ ಕತೆಯಲ್ಲ. ಆದರೆ ಒಂದು ಸಮಾಜದ ಪರಂಪರೆಯಲ್ಲಿ ಪುರುಷ ಪ್ರಧಾನ ಸಂಕಥನಗಳು ನಿರ್ಮಿಸಿರುವ ಚೌಕಟ್ಟುಗಳು ಹಾಗೂ

ಅದನ್ನೆ ನಿಜದ ನೆಲೆ ಎಂಬಂತೆ ನಂಬಿಕೊಂಡು ಬಂದಂತಹ ಸ್ತ್ರೀ ಜಗತ್ತು ಇವೆರಡನ್ನು ವಾಸ್ತವದ ನೆಲೆಗಟ್ಟಿನಲ್ಲಿ ವಿಶ್ಲೇಷಣೆ ಮತ್ತು ನಿರೂಪಣೆಯನ್ನು ಈ ಕತೆಯಲ್ಲಿ ಕಾಣಬಹುದು. ದೇವಿರಮ್ಮನಿಗೆ ಮೂರು ಹೆಣ್ಣು ಮಕ್ಕಳು. ಈ ಮೂರು ಹೆಣ್ಣು ಮಕ್ಕಳಿಗೂ ಮೂರು ನಾಲ್ಕು ಹೆಣ್ಣು ಮಕ್ಕಳನ್ನು ಹೆತ್ತದ್ದು ದೇವಿರಮ್ಮನಿಗೆ ತಡೆಯಲಾರದ ದುಃಖವಾಗಿದೆ. ಇದರ ಜೊತೆಗೆ ಕೊನೆಯ ಮಗಳಿಗೆ ಒಂದು ಗಂಡು ಮಗುವಾಗಿ ಹುಟ್ಟಿದ ಸುರೇಶನ ಆಕೆಯ ಸರ್ವ ಸಂತೋಷವನ್ನು ತಂದುಕೊಡಬಲ್ಲವನಾಗಿದ್ದಾನೆ. ಪುತ್ರ ಸಂತಾನವಿಲ್ಲದಿದ್ದರೆ ಸ್ವರ್ಗ ಪ್ರಾಪ್ತಿಯಾಗುವುದಿಲ್ಲ ಹಾಗೂ ಅವರ ಆತ್ಮಕ್ಕೆ ಶಾಂತಿಸಿಗದೆ ಮುಂದಿನ ಜನ್ಮ ದೊರೆಯುವುದಿಲ್ಲ ಎನ್ನುವ ಮೂಢನಂಬಿಕೆಗಳು ದೇವಿರಮ್ಮನನ್ನು ಇನ್ನಿಲ್ಲದಂತೆ ಕಾಡಿದೆ. ಹಾಗೆಯೇ ಕತೆಯ ಅಂತ್ಯದವರೆಗೂ ದೇವಿರಮ್ಮ ಬಯಸುವುದು ಮತ್ತೈದೆ ಸಾವು. ತನ್ನ ಗಂಡ ಸಾಯುವುದಕ್ಕಿಂತ ಮುಂಚೆಯೆ ತಾನು ಸತ್ತು ಸಂಪ್ರದಾಯವನ್ನು ಉಳಿಸಬೇಕು. ಕೊನೆಗೆ ಈಗಾದರೂ ಮಾಡುವುದರಿಂದ ತನಗೆ ಮುಕ್ತಿ ದೊರೆಯಬಹುದು ಎಂಬ ನಂಬಿಕೆಯಿಂದಲೇ ಆಕೆ ಯಾವುದೇ ರೋಗ ಬಂದರೂ ಔಷಧಿಯನ್ನು ತೆಗೆದುಕೊಳ್ಳದೆ ತನ್ನನ್ನು ತಾನೇ ಹಿಂಸಿಸಿಕೊಳ್ಳುತ್ತಾಳೆ. ಈ ಸಂಗತಿಗಳು ಕತೆಯ ಅಂತ್ಯದವರೆಗೂ ಓದುಗರನ್ನು ಕಲಕುತ್ತದೆ. ಒಂದು ಸಮಾಜದಲ್ಲಿ ರೂಪುಗೊಳ್ಳಬಲ್ಲ ಪುರುಷ ದೃಷ್ಟಿಕೋನಗಳ ಸಿದ್ಧ ಮಾದರಿಗಳು ಮನುಷ್ಯ ಎಂಬುದನ್ನು ತಿರಸ್ಕರಿಸುವ ಮೂಲಕ ಹಿಂಸಾತ್ಮಕ ವಾತಾವರಣವನ್ನು ಸೃಷ್ಟಿ ಮಾಡುತ್ತವೆ.

ನಗರದಲ್ಲಿ ವಾಸವಾಗಿದ್ದ ಸುರೇಶ ತನ್ನ ಕೃಷಗೊಂಡ ಅಜ್ಜಿಯ ವಿಷಯವನ್ನು ತಿಳಿದು ಊರಿಗೆ ಬರುತ್ತಾನೆ. ಸುರೇಶನ ಮಾತುಗಳು ಮತ್ತು ದೇವಿರಮ್ಮನ ಮಾತುಗಳು ಸ್ಪಷ್ಟವಾಗಿ ಸಂಪ್ರದಾಯದ ಚೌಕಟ್ಟು ಹಾಗೂ ನಗರದ ವೈಚಾರಿಕತೆಯನ್ನು ತೋರುತ್ತವೆ.

ದೇವೀರಮ್ಮ ತಾನು ಮುಕ್ತಿಗಾಗಿ ಮತ್ತೈದೆ ಸಾವನ್ನು ಬಯಸುವುದಾಗಿ ಹೇಳುತ್ತಾಳೆ. ಇದೆಲ್ಲ ಮೂಢನಂಬಿಕೆ, ಇದು ಗಂಡ ಸತ್ತ ನಂತರ ಹೆಣ್ಣು ಮತ್ತಾವುದೇ ತಪ್ಪು ಮಾಡಬಾರದು ಇದರಿಂದ ಸಂಪ್ರದಾಯ ಹೆಣೆದಿರುವ ಸಂಕೋಲೆಗಳ ಮೀರುವಿಕೆಯಾಗುತ್ತದೆ ಆದ್ದರಿಂದಲೆ ಈ ರೀತಿಯ ಆಚರಣೆಗಳನ್ನು, ನಂಬಿಕೆಗಳನ್ನು ಜನರಲ್ಲಿ ಬಿತ್ತಲಾಗಿದೆ ಎಂಬುದಾಗಿ ಸುರೇಶ ಮನವರಿಕೆ ಮಾಡುತ್ತಾನೆ. ಸುರೇಶನ ಪ್ರಕಾರ ಈ ಮುತ್ತೈದೆ ಸಾವು ಎಂದರೆ ಸತಿ ಆಚರಣೆಯ ಮತ್ತೊಂದು ಬಗೆಯೆ ಹೌದು. ಹೀಗೆ ವರ್ತಮಾನದ ಆಧುನಿಕ ವೈಚಾರಿಕತೆ ಹಾಗೂ ಸಂಪ್ರದಾಯ ಶರಣತೆಯನ್ನು ಮನು ಬಳಿಗಾರ್ ಅವರು ವಾಸ್ತವದ ನೆಲೆಯಲ್ಲಿ ಕಟ್ಟಿಕೊಡುತ್ತಾರೆ.

ವರ್ತಮಾನದಲ್ಲಿ ನಡೆಯುವ ಭ್ರಷ್ಟಾಚಾರ ಹಾಗೂ ದುರಾಸೆಗಳಿಂದ ಮಾನವನ ಬದುಕು ನಿರಸಗೊಳ್ಳುವ ಮಾದರಿಯನ್ನು "ವಂಚಿತ" ಕತೆಯು ನಿರೂಪಿಸಲು ಪ್ರಯತ್ನಿಸುತ್ತದೆ. ಕಾಲೇಜೊಂದರಲ್ಲಿ ಪಾಠ ಮಾಡಿಕೊಂಡು ಇದ್ದಂತಹ ಮಡ್ಡೆಪ್ಪ ತಾನು ತನ್ನ ಗೆಳೆಯನಂತೆ ಉತ್ತಮವಾಗಿ ಓದಿ ಒಂದು ಸರ್ಕಾರಿ ಹುದ್ದೆಯನ್ನು ಪಡೆದುಕೊಳ್ಳಬೇಕೆಂಬ ಕನಸು ಮಾತ್ರ ಇರುತ್ತದೆ ಆದರೆ ಶ್ರಮದಾಯಕ ಮನುಷ್ಯನಲ್ಲ. ತನ್ನ

ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಭ್ರಷ್ಟನಾಗುತ್ತಾನೆ. ಮಡೆಪ್ಪ ಹಿಂದುಳಿದ ವರ್ಗದವನಾದರೂ ಪರಿಶಿಷ್ಟ ವರ್ಗವೆಂದು 'ಫೇಕ್ ಸರ್ಟಿಫಿಕೇಟ್'ಗಳನ್ನು ಮಾಡಿಸಿಕೊಳ್ಳುತ್ತಾನೆ. ಇದರ ಮೂಲಕ ಬ್ಯಾಂಕಿನಲ್ಲಿ ಸರ್ಕಾರಿ ಹುದ್ದೆಯನ್ನು ಪಡೆದುಕೊಳ್ಳುತ್ತಾನೆ. ಆದರೆ ಮುಂದೆ ಅಪರಾಧ ಮಾಡಿರುವುದು ಸಾಬೀತುಗೊಂಡ ಕಾರಣ ತನ್ನ ಹುದ್ದೆಯನ್ನು ಕಳೆದುಕೊಳ್ಳುತ್ತಾನೆ. ಈ "ವಂಚಿತ" ಕತೆಯು ಸೂಕ್ಷ್ಮವಾಗಿ ಸಮಾಜದ ಅನೀತಿಗಳನ್ನು ಹೇಳುತ್ತದೆ. ವರ್ತಮಾನದಲ್ಲಿ ತಾನು ಪರಿಶಿಷ್ಟ ವರ್ಗಕ್ಕೆ ಸೇರಿದ್ದರೂ ಸಹ ತಾನು ಇದನ್ನು ಹೇಳಿಕೊಳ್ಳಲಾರ. ಸಮಾಜದ ದೃಷ್ಟಿಕೋನಗಳು ತನ್ನನ್ನು ಕೀಳುದೃಷ್ಟಿಯಲ್ಲಿ ನೋಡುತ್ತದೆ ಎಂಬ ಕೀಳರಿಮೆ ಒಂದುಕಡೆಯಾದರೆ, ಸಮಾಜದ ತಳ ವರ್ಗಗಳಿಗೆ ದೊರೆಯುವ ಸೌಲಭ್ಯವನ್ನು ಪಡೆದುಕೊಳ್ಳುವ ಸಲುವಾಗಿ ತಾನು 'ಫೇಕ್' ಆಗಬಲ್ಲ. ಆದರೆ ವಾಸ್ತವ ಬದುಕಿನಲ್ಲಿ ಅವನು ಪರಿಶಿಷ್ಟ ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಹೀಗೆ ಕತೆಯು ಭ್ರಷ್ಟಗೊಳ್ಳುವ ಇಬ್ಬಗೆಯನ್ನು ನಿರೂಪಿಸುತ್ತದೆ. ಕೊನೆಗೆ ಮೈಸೂರಿನ ದಸರಾ ವೈಭವವನ್ನು ನೋಡಲು ಬರುವ ಮಡೆಪ್ಪ ತನ್ನ ಸ್ನೇಹಿತ ಅಲ್ಲಿಯೆ ಉಪ ವಿಭಾಗಧಿಕಾರಿಯಾಗಿರುವುದನ್ನು ಕಂಡು ಬೆರಗಾಗುತ್ತಾನೆ. ಇದನ್ನು ಕಂಡು ಕರಿ ಆನೆಯ ಸಾಲನ್ನು ನೋಡಿ ತಾನು ಐರಾವತದ ಮೇಲೆ ಕುಂತುಬರುವ ಕನಸನ್ನು ಕಾಣುತ್ತಾನೆ. ತಾನು ಕಂಡ ಕನಸಿನಿಂದ ಐರಾವತದ ಫೋಟೋ ಹುಡುಕಿಕೊಂಡು ಹೊರಟು ಅಂತಿಮವಾಗಿ ಕರಿ ಆನೆಯ ಫೋಟೋಗಳನ್ನೆ ತೆಗೆದುಕೊಂಡು ಮನೆಗೆ ತೆರಳುತ್ತಾನೆ. ಇದರಿಂದಲೂ ಮಡ್ಡೆಪ್ಪ ಹೇಗೆ 'ಫೇಕ್' ಆದನು ಎಂಬುದನ್ನು ಹೇಳುವ ಕತೆಯು ವ್ಯಕ್ತಿಯೊಬ್ಬನು ತನ್ನ ಭ್ರಷ್ಟತೆಯಿಂದ ಸಮಾಜದಿಂದ, ಕನಸುಗಳಿಂದ, ಸಂಬಂಧಗಳಿಂದ ವಂಚಿತನಾಗುವ ಬಗೆಯನ್ನು ಕತೆ ವಾಸ್ತವದ ನೆಲೆಯಲ್ಲಿ ಪ್ರಕಟಿಸುತ್ತದೆ. ಹೀಗೆ ಮನು ಬಳಿಗಾರ್ ಅವರ ಸಣ್ಣಕತೆಗಳಲ್ಲಿ ವರ್ತಮಾನದ ವಾಸ್ತವದ ಚಿತ್ರಣಗಳನ್ನು ನಿರ್ವಹಿಸಿರುವುದನ್ನು ಕಾಣಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಮನು ಬಳಿಗಾರ್ : 'ಕೆಲವು ಕತೆಗಳು' ಪುಸ್ತಕದ 'ಘಾತ' ಕತೆ ಪರಮಶಂಕರ ಪ್ರಕಾಶನ, ಬೆಂಗಳೂರು, 2005 ಪುಟ :109
2. ಅದೇ, ಪುಟ : 103
3. ಅದೇ, ಪುಟ : 103
4. ಮನು ಬಳಿಗಾರ್ : 'ಕೆಲವು ಕತೆಗಳು' ಪುಸ್ತಕದ 'ಪೃಥ್ವಿಯ ಮೇಲೊಂದು ಮೊರಡಿ' ಕತೆ ಪರಮಶಂಕರ ಪ್ರಕಾಶನ, ಬೆಂಗಳೂರು, 2005 ಪುಟ : 82
5. ಅದೇ, ಪುಟ : 80

**ಪರಾಮರ್ಶನ ಗ್ರಂಥಗಳು**

1. ಮನು ಬಳಿಗಾರ್ ಕೆಲವು ಕತೆಗಳು, ಪರಮಶಂಕರ ಪ್ರಕಾಶನ, ಬೆಂಗಳೂರು, 2005

2. ಪೂರ್ಣಚಂದ್ರ ತೇಜಸ್ವಿ, ಮಾಯಾಲೋಕ

3. ಪ್ರಭುಶಂಕರ, ಬೆರಗು

❖

# “ಋಣ' ಕಥಾಸಂಕಲನದ ಆಂತರ್ಯದಲ್ಲಿ

ಲೋಕೇಶ ನೀರಕಲ್ಲು

ಕಥೆಗಳು ಹುಟ್ಟುವುದಿಲ್ಲ; ಆಗುತ್ತಾ ಹೋಗುತ್ತವೆ. ಆದ್ದರಿಂದ ಕಥೆಗಾರರಿಗೆ ಮುಖ್ಯವಾಗಿ ಬೇಕಾದುದು ಒಳಗಣ್ಣಿಗೆ ಲಭ್ಯವಾಗುವ ಅನುಭವವನ್ನು ಗ್ರಹಿಸುವ ಉದಾರಗುಣ. ಕಥೆಗಳು ಕಾಲಧರ್ಮ, ಕಲಾತತ್ವ ಮೈಗೂಡಿಸಿಕೊಳ್ಳುತ್ತಾ ರೂಪ ಪಡೆದುಕೊಳ್ಳುತ್ತವೆ. ಓದುಗರು ತೆರೆದಮನ, ಸೂಕ್ಷ್ಮಮತಿಯವರಾಗಿರಬೇಕಷ್ಟೆ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು ‘ಮನು ಬಳಿಗಾರ್ ಅವರ ‘ಋಣ' ಕಥಾಸಂಕಲನವನ್ನು ಗಮನಿಸಬೇಕಾಗುತ್ತದೆ.

‘ಋಣ' ಮನು ಬಳಿಗಾರ್ ಅವರ ಎರಡನೇ ಕಥಾಸಂಕಲನ. ಇದರಲ್ಲಿ ಹದಿಮೂರು ಕಥೆಗಳಿದ್ದು, ಇವುಗಳ ಮೂಲದ್ರವ್ಯ ಲೇಖಕರು ಜನಿಸಿದ ಹಳ್ಳಿ ಶಿಗ್ಲಿ, ಲಕ್ಷ್ಮೇಶ್ವರ ಹಾಗೂ ಸುತ್ತಮುತ್ತಲ ಗ್ರಾಮೀಣ ಪರಿಸರದಲ್ಲಿ ಬದುಕುತ್ತಿರುವವರ ಜೀವನ ವಿಧಾನಗಳು. ಈ ಕಥೆಗಳು ಮೂರು ದಶಕಗಳ ಹಿಂದಿನ ಗ್ರಾಮೀಣ ಭಾರತದ ಒಳ-ಹೊರಗನ್ನು ತೆರೆದಿಡುತ್ತಾ, ಎಲ್ಲವೂ ಸರಿಯಾಗಬೇಕು, ಹಸನಾಗಿರಬೇಕೆಂಬ ಸದಾಶಯವನ್ನು ಘಟನೆಗಳ, ಪಾತ್ರಗಳ ಮೂಲಕ ಮನವರಿಕೆ ಮಾಡಿಕೊಡುತ್ತವೆಯಲ್ಲದೆ, ಎಲ್ಲ ಕಾಲದ ಲೇಖಕರ ಸಮಾಜಮುಖಿ ಚಿಂತನೆಗೆ ನೀತಿ ನಕಾಶೆಯಾಗುತ್ತದೆ.

ಈ ಸಂಕಲನದ ಮೊದಲನೇ ಕಥೆಯಾದ ‘ವಂಚಿತ'ದ ಮಡ್ಡೆಪ್ಪ ದುರುಗಪ್ಪ ಕೊಂಪಿ ಪದವೀಧರನಾದರೂ ಬಡತನವನ್ನೇ ಬೆನ್ನಲ್ಲಿ ಹೊತ್ತು ಬದುಕುತ್ತಿದ್ದಾನೆ. ಅವನ ಹೆಸರೇ ಸಾಮಾಜಿಕ ವ್ಯವಸ್ಥೆಯ ತಾರತಮ್ಯಕ್ಕೆ ಕನ್ನಡಿ ಹಿಡಿದಂತಿದೆ. ನೌಕರಿಯಿಲ್ಲದುದರಿಂದ ಅವನಿಗೆ ಹೆಣ್ಣು ಕೊಡಲು ಯಾರೂ ಒಪ್ಪುತ್ತಿಲ್ಲ. ತನ್ನೊಳಗೆ ಮಿಸುಗಾಡುತ್ತಿರುವ ನಂಬಿಕೆಯ ಒಂದು ನೆನಪಿನ ಎಳೆಯನ್ನು ಹಿಡಿದು ಮೈಸೂರಿಗೆ ಹೋಗುತ್ತಾನೆ. ಅಲ್ಲಿ ಅವನು ಕಂಡದ್ದು ನನಸಾಗದೆ, ಕನಸಾಗದೆ ಇರಬೇಕು. ಆದರೆ ಲೇಖಕರು ಮಡ್ಡೆಪ್ಪನನ್ನು ಹಗಲುಗನಸಿಗೆ ತಂದು ಕಥೆ ಮುಗಿಸುತ್ತಾರೆ. ಕೊನೆಯಲ್ಲಿ ಮಡ್ಡೆಪ್ಪ ಚಲನಶೀಲವಲ್ಲದ ಆನೆಯನ್ನು ಕೊಂಡು ತರುವ ಮೂಲಕ ಮರಳಿ ಊರಿಗೆ ಬರುತ್ತಾನೆ. ಅಂದರೆ ಯಥಾಸ್ಥಿತಿಗೆ ಬಂದುಬಿಡುತ್ತಾನೆ. ಲೇಖಕರು ಇಷ್ಟನ್ನು ಹೇಳಲು ಕ್ರಮಿಸುವ ಮಾರ್ಗ, ಬಳಸುವ ಭಾಷೆ ಮನ ಮುಟ್ಟುತ್ತದೆ. ಕಥೆಯ ಬಂಧದಲ್ಲಿ ಯಾವ ಎಳೆಯೂ ತಪ್ಪದಂತೆ ಅಚ್ಚುಕಟ್ಟಾದ ಕಥಾ ನೇಯ್ಗೆ ಮಾಡಿದ್ದಾರೆ.

'ಅಳು' ಕಥೆಯ ಮಂಜುನಾಥನನ್ನು ವಿದ್ಯಾವಂತನನ್ನಾಗಿ ಮಾಡುವ ಸಲುವಾಗಿ ತಂದೆ ಪಡುವ ಪಾಡು ಅಂತಿಂಥದಲ್ಲ. ಅದು ಮಗನಿಗೆ ಅರ್ಥವಾಗುವುದಾದರೂ ಹೇಗೆ? ಕಾಲ ನಿಲ್ಲುವುದಿಲ್ಲ. ಮಗ ಮಂಜು ತನ್ನ ಊರು ತೊರೆದು ಬಹಳಷ್ಟು ವರ್ಷಗಳೇ ಸರಿದು ಹೋಗಿವೆ. ಅಧಿಕಾರಿಯಾಗಿದ್ದಾನೆ. ಸಂಬಂಧಗಳು ಶಿಥಿಲವಾಗಿವೆ. ಅಪ್ಪನ ಸಾವು ಕೂಡ ಅವನನ್ನು ಆತಂಕಕ್ಕೆ ಈಡು ಮಾಡದೆ ಹೋದದ್ದು, ಎರಡು ತಲೆಮಾರಿನವರ ವಿಚಾರಗಳಲ್ಲಿರುವ ಕಂದರವನ್ನು ತಿಳಿಸುತ್ತದಲ್ಲದೆ, ಅಂತಃಕರಣದ ಸಂಬಂಧವನ್ನು ಕುದುರಿಸಿಕೊಳ್ಳಲಾರದ ಮಗ ಉನ್ನತ ಶಿಕ್ಷಣ, ಅಧಿಕಾರದಲ್ಲಿ ಮುಳುಗಿ ಹೋಗುತ್ತಿರುವುದರ ಚಿತ್ರಣವಿದ್ದು 'ಅಪ್ಪನ ಸಾವಿನಲ್ಲೇ ತನ್ನದೂ ಅರ್ಧ ಸಾವು ಸಂಭವಿಸಿತೆ?" ಎಂದುಕೊಳ್ಳುವ "ಅವನ ಕಣ್ಣಲ್ಲಿ ನೀರು ಬಸಿಯುತ್ತಿರುವುದು ಯಾಕೆ? ಎಂಬುದರ ಮೂಲಕ ಅಪ್ಪ-ಮಗ ಶಿಕ್ಷಣ-ಅಧಿಕಾರ, ಮಾನವೀಯ ಸಂಬಂಧಗಳ ಟೊಳ್ಳು-ಗಟ್ಟಿ ತನವನ್ನು ತನ್ನೊಳಗೆ ಅಡಗಿಸಿಕೊಂಡಿದೆ. ಇದು ಎಂದೂ ಆಗಿ ಹೋದ ಕಥೆಯಲ್ಲ. ಹಳ್ಳಿಗೆ ಹೋಗಿ ನೋಡಿದರೆ ಧರ್ಮ, ಮರ್ಮವನ್ನು ಇಂದು, ಮುಂದೂ ನೋಡಬಹುದು. ಕಥಾ ನಿರೂಪಣೆಯಲ್ಲಿ ಲೇಖಕರು ಎಲ್ಲಿಯೂ ಸಂಯಮವನ್ನು ತೊರೆದಂತೆ ತೋರುವುದಿಲ್ಲ. ಹಳ್ಳಿಗಳು ವೃದ್ಧಾಶ್ರಮವಾಗುತ್ತಿರುವುದರ ವಿಚಾರವನ್ನು ಅಂತರಾಳದಲ್ಲಿ ಹುದುಗಿಸಿಕೊಂಡಿದೆ, ಈ ಕಥೆ.

'ಗಂಗಮ್ಮನ ಜೀವನ ದೃಷ್ಟಿ'ಯ ಪ್ರಧಾನ ಪಾತ್ರ ಗಂಗಮ್ಮ, ಆಕೆಯ ಜೀವನ ನೋವುಣ್ಣುತ್ತಲೇ ಬೆಳೆದದ್ದು. ಆದರೂ ಎಂದೂ ಸ್ವಾರ್ಥಕ್ಕೆ ಎದೆಯಲ್ಲಿ ಜಾಗಕೊಡದೆ 'ಪರೋಪಕಾರಾರ್ಥ ಮಿದಂ ಜೀವನಂ' ಎಂಬ ಆದರ್ಶ ಬದ್ಧತೆಯನ್ನು ಎದೆ ತುಂಬಿಕೊಂಡು ಬದುಕು ಸಾಗಿಸಿದವಳು; ಮಾನವೀಯ ಸಂಬಂಧಗಳನ್ನು ಕರುಳಿನಿಂದ ಕತ್ತರಿಸಿಕೊಂಡು ಬದುಕು ಸವೆಸಿದವಳಲ್ಲ. ಗಂಗಮ್ಮ ಎಂದರೆ ನೀರು-ದೇವತೆ, ಎಲ್ಲರಿಗೂ ಬೇಕಾದವಳು. ತನ್ನ ಹೊಲವನ್ನೆಲ್ಲ ಹಳ್ಳಿ ಶಾಲೆಗೆ ಬರೆದುಕೊಟ್ಟರೂ ತಮ್ಮ ಹಿರಿಯರೊಬ್ಬರ ಹೆಸರನ್ನು ಆ ಶಾಲೆಗಿಡಲು ಬಯಸಿದಳಾದರೂ ಊರ ಹಿರಿಯರ ಬಾಯಿಂದ ಕೊನೆಯಲ್ಲಿ ಬರುವ ಮಾತು ನಮ್ಮನ್ನು ಆಶ್ಚರ್ಯ ಚಕಿತರನ್ನಾಗಿಸುತ್ತದೆ. ಬೇರೆಯವರ ಕೈಯಲ್ಲಿ ಈ ಕಥೆ ಅರಳಿದ್ದರೆ ಆದರ್ಶದ ಮಾತುಗಳಿಂದ ತುಂಬಿ ಭಾರವೆನಿಸುತ್ತಿತ್ತು. ಆದರೆ ಪಕ್ವವಾದ ಭಾವಗಳನ್ನು ಹದವಾಗಿ ತುಂಬಿಕೊಂಡಿರುವ ಮನು ಬಳಿಗಾರರು ಕತೆಯಲ್ಲಿ ಎಲ್ಲಿಯೂ ಆದರ್ಶ ಪ್ರದರ್ಶನವಾಗದ ರೀತಿಯಲ್ಲಿ ಎಚ್ಚರವನ್ನು ವಹಿಸಿ ಆದರ್ಶ ಪ್ರದರ್ಶನಕ್ಕಲ್ಲ ನಿದರ್ಶನಕ್ಕೆಂಬುದನ್ನು ಉತ್ತಮವಾಗಿ ತೋರಿಸಿದ್ದಾರೆ.

"ಒಂದು ಚಪ್ಪಲಿ ಪ್ರಕರಣ'ದ ಬಸವಣ್ಣಿ ಕೃಷಿಕನಾದರೂ ವ್ಯವಹಾರದಲ್ಲಿ ನಡೆಯಬಹುದಾದ ಚಮತ್ಕಾರಗಳನ್ನು ಕಂಡು ರೋಸಿ ಹೋಗುತ್ತಾನೆ. ಮುಂದೆ ಅದರ ಸಲುವಾಗಿ ಅವನು ನ್ಯಾಯಾಲಯದಲ್ಲಿ ನಿಲ್ಲಬೇಕಾಗುತ್ತದೆ. ಇದರಿಂದ ಹತ್ತಾರು ಎಡವಟ್ಟುಗಳೇ ನಡೆದು ಹೋಗಬಹುದೆಂದು ಓದುಗರು ಅಂದುಕೊಳ್ಳುತ್ತಿರುವಾಗಲೇ ಅನಿರೀಕ್ಷಿತ ತಿರುವಿನಿಂದ ಕತೆ ಮುಗಿಯುತ್ತದೆ. ಬಸವಣ್ಣಿ ಸಮಾಜದ ಎಲ್ಲ ಜನರ ವ್ಯಾವಹಾರಿಕ ನೀತಿಯ ಮರ್ಮವನ್ನು ಬಲ್ಲವನಾಗಿರುವುದರಿಂದ ಅವನನ್ನು ಹೇಗೆ ಕಡೆದು

ಕೊಡಬಹುದೆಂಬುದನ್ನು ಲೇಖಕರು ಚತುರತೆಯಿಂದ ಕಥೆಯನ್ನು ಮುಗಿಸುತ್ತಾರೆ. ಪಾತ್ರಗಳಿಗೆ ಹೊಂದಿಕೊಂಡಂತೆ ಭಾಷಾ ಬಳಕೆ ಔಚಿತ್ಯಪೂರ್ಣವಾಗಿದೆ.

'ಋಣ' ಕಥೆಯಲ್ಲಿ ಬರುವ ಸೀತಾಬಾಯಿ-ಗೀತಾ ಸಂಬಂಧದಲ್ಲಿ ಕರುಣೆ, ಪ್ರೀತಿ ಬೆರೆತಿದ್ದು, ಅದೇ ಭಾವನೆಯನ್ನು ರಮೇಶನ ಬಗ್ಗೆಯೂ ತಳೆದಿರುತ್ತಾಳೆ. ಆದರೆ ರಮೇಶ ತನ್ನ ಕಾರ್ಯ ಬಾಹುಳ್ಯದ ನಡುವೆ ಎಲ್ಲ ಸಂಬಂಧಗಳನ್ನು ನಿರ್ಲಕ್ಷಿಸುತ್ತಾನೆ. ಆದರೆ ಅದರಲ್ಲೂ ಒಂದು ಮಿಡುಕಾಟವಿದೆ. ಸೀತಾಬಾಯಿ ಬದುಕಿದ್ದಾಗ ತೋರುವ ಅವನ ಭಾವನೆಗಳಿಗೂ, ಅವಳ ಅಂತ್ಯ ಕಾಲದಲ್ಲಿ ತೋರುವ ನಿರ್ಲಕ್ಷ್ಯಕ್ಕೂ ಮಾನವೀಯತೆಯ ದನಿ ಕುಗ್ಗಿರುವುದನ್ನು ಕಾಣಬಹುದು. ಆಕೆ ಬದುಕಿದ್ದಾಗ ಬಂದು ಒಂದೆರಡು ಸಾಂತ್ವನದ ನುಡಿಯಾಡಬೇಕಾಗಿದ್ದವನು ಅವಳ ಮಣ್ಣಿಗೆ ಬರುತ್ತಾನೆ. ಅವನಲ್ಲಿ ಕಂಡು ಬರುವ ತಳಮಳ ಪಶ್ಚಾತ್ತಾಪ ಏನೇ ಇದ್ದರೂ ಸಕಾಲದಲ್ಲಿ ನಡೆಯದೆ ಹೋದದ್ದು, ಮನುಷ್ಯನಲ್ಲಿ ಅಡಗಿರುವ ಸುಪ್ತ ಸ್ವಾರ್ಥ ರಮೇಶನ ವ್ಯಕ್ತಿತ್ವವನ್ನೂ ನುಂಗಿ ಬಿಡುತ್ತದೆ.

'ಎರಡು ದಾರಿ' ಕಥೆಯಲ್ಲಿ ಹೊಂದಾಣಿಕೆಯಿಲ್ಲದ ದಾಂಪತ್ಯ ಚಿತ್ರಣವಿದ್ದರೂ ಯಾರನ್ನೂ ದೂಷಿಸದೆ, ಅತಿಯಾಗಿ ಹೊಗಳಿಕೆಯಿಂದ ಮೇಲೆತ್ತುವ ಕಾರ್ಯ ಮಾಡಿಲ್ಲ. ಆದರೆ ಹೆಣ್ಣು ತನ್ನ ಸಣ್ಣತನದಿಂದಾಗಿ ಸಣ್ಣವಳಾಗಿ ಬಿಂಬಿತವಾಗಿದ್ದಾಳೆ. ಆದರೆ ಸಹಜವಾದ ಅನುಭವವನ್ನು ಕಥೆಯಾಗಿ ಕಟ್ಟಿಕೊಡುವಾಗ ಲೇಖಕರು ತೋರುವ ಸಂಯಮ, ಶೈಲಿ ಎಲ್ಲಿಯೂ ಮುಜುಗರವನ್ನುಂಟು ಮಾಡದೆ ಗಂಡ-ಹೆಂಡತಿ ಹೇಗೆ ಬದುಕು ನಡೆಸಬೇಕು ಎಂಬುದನ್ನು ಸ್ಪಷ್ಟಪಡಿಸುತ್ತದೆ.

'ಜೋಳದ ಬುಟ್ಟಿಯೊಳಗಿಂದ' ಕಥೆಯ ಭದ್ರವ್ವ-ಕಾಶಪ್ಪನ ದಾಂಪತ್ಯದಲ್ಲಿ ಕಂಡು ಬರುವ ವಯೋಮಾನದ ಅಂತರ ಹೆಚ್ಚು ಇದ್ದುದರಿಂದ, ವಯಸ್ಸಾದವನ ಹೆಂಡತಿ ಎಂಬ ಹಸಿ ಹಸಿ ಮಾತುಗಳು ಊರವರ ಬಾಯಲ್ಲಿ ಹರಿದಾಡುತ್ತಿತ್ತು. ಗಿರಣಿಯಲ್ಲಿ ಬಾಳಪ್ಪನಾಡುವ ಮಾತುಗಳಿಂದ ಅಕ್ಕ-ತಂಗಿಯರಾದ ಭದ್ರವ್ವ-ದ್ಯಾಮವ್ವ ನೊಂದು ಸರಿಯಾದ ಪಾಠ ಕಲಿಸುತ್ತಾರೆ. ಸಹನೆಗೂ ಒಂದು ಮಿತಿ ಇರುತ್ತದೆ. ತುಟಿ ಮೀರಿದ ಮಾತು ಎಂತಹ ಅವಾಂತರಕ್ಕೆ ಎಡೆಮಾಡಿಕೊಡುತ್ತದೆ ಎಂಬುದನ್ನು ತಿಳಿಸುವಾಗ ಲೇಖಕರು ಕಟುಸಂಗತಿಯನ್ನು ಬಿಚ್ಚಿಡುತ್ತಾರೆ.

'ಅನುಭೋಗ' ಕಥೆಯ ಕುಷ್ಠರೋಗಗ್ರಸ್ಥನಾದ ಶಿವು ಒಮ್ಮೆ ಸುಂದರನೂ, ಸರಸಿಯೂ, ಭೋಗಿಯೂ, ವಿಲಾಸಿಯೂ ಆಗಿ ಗೆಳೆಯರ ಹೊಟ್ಟೆ ಉರಿಸುವಂತೆ ಇದ್ದವನು. ಈಗ ಅವನು ಕರುಣಾಜನಕನಾಗಿ ಕಾಣುತ್ತಾನೆ. ಆದರೆ ಹಾಗೆ ಅವನ ನಡತೆಯಿಲ್ಲ. ನಿರೂಪಕನಾದ ಅವನ ಗೆಳೆಯ ಶಿವನ ಸ್ವಸ್ಥವಾದ ದೃಷ್ಟಿಯಿಂದ ಬೆರಗಾಗುತ್ತಾನೆ. ಇಂಥ ಒಂದು ಕಥೆಯನ್ನು ಯಾರಾದರೂ ಕರುಣೆ ಹುಟ್ಟಿಸಲು ಬರೆಯಬಹುದಿತ್ತು. ಆದರೆ ಬಳಿಗಾರ್ ಹಾಗೆ ಬರೆಯುವುದಿಲ್ಲವೆಂಬುದು ಕನ್ನಡದ ಇನ್ನೊಬ್ಬ ಕಥೆಗಾರನಾಗಿ

ನನಗೆ ತುಂಬ ಇಷ್ಟವಾಗಿದೆ" ಎಂದು ಈ ಕಥಾ ಸಂಕಲನದ ಮುನ್ನುಡಿಯಲ್ಲಿ ಯು.ಆರ್. ಅನಂತಮೂರ್ತಿಯವರು ವ್ಯಕ್ತಪಡಿಸಿರುವ ಅಭಿಪ್ರಾಯ ಸರ್ವಸಮ್ಮತವಾದದ್ದು.

'ಹರ್ಷನಿಕೇತನ' ಕಥೆಯ ಶಾಂತಣ್ಣನಿಗೆ ಎಲ್ಲ ಅನುಕೂಲಗಳೂ ಲಭ್ಯವಾಗಿವೆ. ಆದರೆ ಅವನಿಗೆ ಒಂದೇ ಕೊರತೆ. ಆತನ ಮಗ ಹರ್ಷ ಮತಿವಿಕಲನಾಗಿದ್ದಾನೆ. ಅದನ್ನೆಲ್ಲ ಮನದೊಳಗೆ ತುಂಬಿಟ್ಟುಕೊಂಡು ಅಂಗವಿಕಲ ಮಕ್ಕಳ ಧಾಮ' ಕಟ್ಟಿಸಿದ್ದಾನೆ. ನಿರೂಪಕನೇ ಹೇಳುವಂತೆ ಶಾಂತಣ್ಣ ಏನನ್ನೋ ಕಳೆದುಕೊಂಡರೂ ಮತ್ತೇನನ್ನೂ ಸಾಧಿಸಿದ್ದಾನೆ.

'ಮೂರು ಅಂಶಗಳ ಸೂತ್ರ' ಕಥೆಯಲ್ಲಿ ನಡೆಯುವ ರಾಜಕೀಯ ಅವಾಂತರಗಳು, ಊರ ಮರ್ಯಾದೆ ಕಾಪಾಡಲು ಎಲ್ಲರೂ ಒಂದಾಗುವುದು, 'ಯಾರೂ ಪೊಲೀಸರಿಗೆ ಫಿರ್ಯಾದಿ ಕೊಡಬಾರದು, ಕೋರ್ಟಿನಲ್ಲಿ ಯಾವನೂ ಸಾಕ್ಷಿ ಹೇಳಲು ಹೋಗಬಾರದು. ಯಾರು ಏನೇ ಕೇಳಿದರೂ ತಮಗೇನೂ ಗೊತ್ತಿಲ್ಲವೆಂದೆ ಎಲ್ಲರೂ ಹೇಳಬೇಕ' ಎಂಬ ಮೂರು ಅಂಶಗಳ ಸೂತ್ರ ಅಧಿಕಾರಿ ವರ್ಗದವರಿಗೆ ತಿಳಿಯದೇ ಹೋದದ್ದು ಕಥೆಯ ಒಳಗುಟ್ಟು. ಬಹುಶಃ ಯಾವುದೇ ಹಳ್ಳಿಗೆ ಹೋದರೂ ಇಂತಹವನ್ನು ಕಾಣಬಹುದಾದರೂ ಸರ್ವ ಹಿರಿಯರ ತೀರ್ಮಾನ ಏಕರೀತಿಯ ಅಭಿಪ್ರಾಯ ಮೂಡಿ ಊರ ಹಿರಿಮೆಯನ್ನು ಕಾಪಾಡಬೇಕಾದುದು ಅತ್ಯವಶ್ಯ ಎಂಬುದು ಮುಖ್ಯ ತಿಳಿವಳಿಕೆ. ಎಲ್ಲಿಯೂ ಭಾಷೆಯನ್ನು ಹದ ಮೀರದಂತೆ ಬಳಸಿರುವುದು ಲೇಖಕರು ಭಾಷಾ ಬಳಕೆಯ ಬಗೆಗೆ ಹೊಂದಿರುವ ಪರಿಣತಿಯನ್ನು ತಿಳಿಸುತ್ತದೆ.

'ಹೊಸ ವರ್ಷದ ಶುಭಾಶಯಗಳು' ಕಥೆಯಲ್ಲಿ ಯೋಗೀಶ, ಮಹಾದೇವರ ಸಂಬಂಧಗಳಲ್ಲಿ ಕಂಡುಬರುವ ಪರಸ್ಪರರ ನಡುವಿನ ಆತ್ಮೀಯ ಸಂಬಂಧ, ಅಧಿಕಾರದ ನೆಲೆಯಿಂದ ಅದನ್ನು ನೋಡುವಾಗ ಉದ್ಭವಿಸುವ ತಳಮಳ, ಆತಂಕ, ನಿರೀಕ್ಷೆಯಲ್ಲಿ ಉಂಟಾಗುವ ಸಂವಹನದ ತೊಡಕು ಸೃಷ್ಟಿಸುವ ಹಾಗಿರಬಹುದೆ, ಹೀಗಿರಬಹುದೆ ಎಂಬ ಶಂಕೆಗಳು ಸುಖಾಂತ್ಯವನ್ನು ಕಾಣುತ್ತವೆ. ಸಹಜವಾಗಿ ಸ್ನೇಹದಲ್ಲಿ ಇಂಥ ಇರುಸು ಮುರುಸುಗಳಾಗುವುದುಂಟು. ಅದನ್ನು ಪರಿಹರಿಸದೆ ಹೋಗಿದ್ದರೆ ಕಥೆ ತಾರತಮ್ಯದ ನೆಲೆಯಲ್ಲಿ ನಿಂತುಬಿಡುತ್ತಿತ್ತು. ಆದರೆ ಅದು ಹಾಗಾಗಗೊಡದೆ ಶುಭಾಶಯಗಳು ತಡವಾಗಿ ತಲುಪುವುದರ ಮೂಲಕ ಕಥೆಗೆ ವಿಶೇಷತೆಯನ್ನು ತರಲಾಗಿದೆ. ಕುತೂಹಲದಿಂದ ಕಥೆ ಓದಿಸಿಕೊಳ್ಳುತ್ತದೆ.

'ಪುತ್ರ ಪ್ರೇಮ' ಕಥೆಯಲ್ಲಿ ಯಮನಪ್ಪ ತನ್ನ ಮಗ ಹನುಮಂತಪ್ಪ ಸಾವು ಬದುಕಿನ ಹೋರಾಟದಲ್ಲಿರುವುದನ್ನು ಕಂಡು, ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುವ ಸಂದರ್ಭದಲ್ಲಿ ಹತ್ತಾರು ಆಲೋಚನೆಗಳು ಸುಳಿದಾಡುವುದನ್ನು ತಿಳಿಸುವಲ್ಲಿ ಅತ್ಯಂತ ಜವಾಬ್ದಾರಿಯಿಂದ ತನ್ನ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು. ಲೇಖಕರು ಮಾನವೀಯ ನೆಲೆಯಲ್ಲಿ ಚಿಂತಿಸುವ ಪರಿ ಸೊಗಸಾಗಿ ಮೂಡಿಬಂದಿದೆ.

'ಬಿಸಿ ಬಿಸಿ ಕಡತ' ಕಥೆಯ ಆಡಳಿತ ನೀತಿಯಲ್ಲಿ ವಿವಿಧ ಹಂತದ ಕಾರ್ಯ ವಿಧಾನಗಳ ವೈಖರಿಗಳು ಪರಿಚಯವಾಗುತ್ತವೆ. ಇದನ್ನು ಲೇಖಕರು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಒಟ್ಟಾರೆ ಈ ಸಂಕಲನದ ಕಥೆಗಳಲ್ಲಿ ವೈವಿಧ್ಯ, ವೈಶಿಷ್ಟ್ಯವಿದ್ದು ಮಾನವೀಯ ಮಿಡಿತಗಳಿವೆ. ಭಾಷೆ ಹಿತ ಮಿತವಾಗಿ ಬಳಕೆಯಾಗುವುದರಿಂದ ಸಶಕ್ತತೆ ಕಂಡುಬರುತ್ತದೆ. ಇಲ್ಲಿನ ಕಥೆಗಳು ಸಾರ್ವಕಾಲಿಕ ಸಂದೇಶವನ್ನು ಆಂತರ್ಯದಲ್ಲಿ ಅಡಗಿಸಿಟ್ಟುಕೊಂಡು ನಿತ್ಯನೂತನವಾಗಿ ಬಿಡುತ್ತವೆ. ಜೀವನ ಮೌಲ್ಯಗಳನ್ನು ಕಾಪಾಡುವ, ಮುಂದಿನ ಪೀಳಿಗೆಗೆ ರವಾನಿಸುವ ಹೊಣೆಗಾರಿಕೆ ಸಾಹಿತಿಗಳಲ್ಲಿ ಅಗತ್ಯವಾಗಿ ಇರಬೇಕು. ಇದನ್ನು ಮನು ಬಳಿಗಾರ್‌ರವರು ಸದ್ದುಗದ್ದಲವಿಲ್ಲದೆ ತಮ್ಮ ಕಥೆಗಳಲ್ಲಿ ಸಾಧಿಸಿದ್ದಾರೆ, ಯಶಸ್ವಿಯಾಗಿದ್ದಾರೆ. ಅವರ ಶ್ರಮ ಸಾರ್ಥಕವಾಗಿದೆ.

❖

# ಮನು ಬಳಿಗಾರರ ಎರಡು ಕಥೆಗಳು

ಡಾ. ರಣಧೀರ

**ಕ**ನ್ನಡ ಸಾಹಿತ್ಯ ಲೋಕದಲ್ಲಿ ಹೊಸ ತಲೆಮಾರಿನವರಾಗಿ ಕಂಡು ಬರುವ ಮನು ಬಳಿಗಾರರು ಹದಿನಾರು ಕೃತಿಗಳನ್ನು ಸಾಹಿತ್ಯಲೋಕಕ್ಕೆ ನೀಡುವ ಮೂಲಕ, ಕನ್ನಡ ನಾಡಿನ ಪ್ರಾತಿನಿಧಿಕ ಸಂಸ್ಥೆಯಾದ ಸಾಹಿತ್ಯ ಪರಿಷತ್ತಿನಂತಹ ವಿವಿಧ ಕನ್ನಡಪರ ಸಂಘಟನೆಗಳಲ್ಲಿ ಗುರುತಿಸಿಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖ ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ. ಅವರ ಕೆಲವು ಕಥೆಗಳು' ಕಥನ ಸಂಕಲನದಿಂದ ಎರಡು ಕಥೆಗಳನ್ನು ಇಲ್ಲಿ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಒರೆಗೆ ಹಚ್ಚಿ ನೋಡಲು ಪ್ರಯತ್ನಿಸಲಾಗಿದೆ.

ಬಳಿಗಾರರ ಬರವಣಿಗೆಯ ಶೈಲಿ, ಭಾವನೆಯ ಉತ್ಕಟತೆ ಹದವರಿತು ಬರೆತಿರುವುದರಿಂದ ಅವರ ಎಲ್ಲಾ ಕಥೆಗಳು ಓದುಗರಿಗೆ ಕುತೂಹಲ ಮೂಡಿಸುವ ಜೊತೆ ಜೊತೆಗೆ ಸಂಸ್ಕೃತಿಯ ಕಾಳಜಿಯನ್ನು ಪರಿಚಯ ಮಾಡಿಕೊಡುತ್ತವೆ. ಇವರ ಕಥೆಗಳೆಲ್ಲವು ನಿರಾಸೆದಾಯಕವಾಗಿ ಮುಕ್ತಾಯಗೊಳ್ಳದೆ; ಒಂದು ಬಗೆಯ ವಿಶೇಷ ಕಲೆಗಾರಿಕೆಯಿಂದ ಮುಕ್ತಾಯಗೊಳ್ಳುತ್ತವೆ. "ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ" ಕಥೆಯಲ್ಲಿನ ಮೈನವಿರೇಳಿಸುವ ವರ್ಣನೆಗಳೇ ಇದಕ್ಕೆ ನಿದರ್ಶನ. ಕಥೆಗಾರರು "ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಈಗಲೂ ಇರುವ ಪೈಲ್ವಾನರು, ಉಸ್ತಾದಿಗಳು, ಅವರ ಹವ್ಯಾಸಗಳು, ಪೂರ್ವ ತಯಾರಿಗಳು, ಜನ ತಮಗಿಷ್ಟವಾದ ಪೈಲ್ವಾನರ ಸುತ್ತುಕಟ್ಟಿಗೊಳ್ಳುವ ಭಾವ ಪ್ರಪಂಚಗಳು ಇವೆಲ್ಲಾ ಕಣ್ಣಿಗೆ ಕಟ್ಟುವಂತೆ ವಿವರವಾಗಿ ವರ್ಣಿಸಿದ್ದಾರೆ. ಮನು." (ಕೆಲವು ಕಥೆಗಳು-ಮುನ್ನುಡಿ-ಪುಟ-8) ಎಂದು ಚಂದ್ರಶೇಖರ ಕಂಬಾರರು ಕಥೆಯನ್ನು ಕುರಿತು ಹೇಳುತ್ತಾರೆ. ಮಲ್ಲಣ್ಣನ ವಿಷಯವೇ ಕಥೆಯ ಅರ್ಧಭಾಗ ತುಂಬಿದೆ. ಮಲ್ಲಣ್ಣನ ಎದುರಾಳಿಯ ಹೇಳಿಕೆ, ಪ್ರತಿ ಹೇಳಿಕೆಗಳು ವ್ಯಾಯಾಮ ಶಾಲೆಯಲ್ಲಿನ ಸಾಧನೆ, ಅವನ ಆಹಾರ ಪದ್ಧತಿ, ಕುಸ್ತಿ ಆಟದ ಮೇಲಿನ ಆಸಕ್ತಿ,

ತರಬೇತಿ ನೀಡಲು ಬರುವ ಪ್ರಸಿದ್ಧ ಕುಸ್ತಿಪಟುಗಳಾದ ಉಸ್ತಾದಿಗಳು, ಅದರ ಜೊತೆ ಭೂತಕಾಲದ ಅವರ ಕಥಾನಕಗಳು ಇತ್ಯಾದಿ ಬಗೆಯ ಜನರ ಅಭಿಪ್ರಾಯಗಳೆಲ್ಲವನ್ನು ಏಕಕಾಲಕ್ಕೆ ಒಳಗೊಂಡಿದೆ.

ಈ ಕಥೆಯು ಉತ್ತರ ಕರ್ನಾಟಕದ ಕುಸ್ತಿಪಟುಗಳ ನೈಜ ಬದುಕಿನ ಚಿತ್ರಣವನ್ನು ಕಥೆಯ ಮರೆಯಲ್ಲೇ ನೀಡುತ್ತದೆ. ಬೆಳಗಾವಿ, ಸಂಕೇಶ್ವರ, ಬೈಲಹೊಂಗಲ, ಸವದತ್ತಿ, ಧಾರವಾಡ ಸುತ್ತಮುತ್ತಲಿನ ಅನೇಕ ಪ್ರದೇಶದಲ್ಲಿ ನಡೆಯುವ ಭಾರಿ ಪ್ರಮಾಣದ ಕುಸ್ತಿ ಆಟಗಳು ಅಲ್ಲಿನ ಜನರ ಬದುಕಿನಲ್ಲಿ ಒಂದು ಬಗೆಯ ಬಿಡಿಸಲಾರದ ಬಂಧದ ಆಟವಾಗಿ ಪರಿಣಮಿಸಿದೆ. ಇಲ್ಲಿ ಕಥೆ "ಮದಬಂದ ಗೂಳಿಯಂತೆ ಮೆರೆದಾಡುವ ಬಸವಣ್ಣೆಪ್ಪ ಪೈಲ್ವಾನ್ ಮಂಟೂರ ಮತ್ತು ದೇವಳ್ಳಿ ಮಲ್ಲಣ್ಣ ಪೈಲ್ವಾನನ ನಡುವಿನ ಕುಸ್ತಿ ಕಾಳಗದ ತಯಾರಿಯನ್ನು ಕುರಿತು ಬಿಚ್ಚಿಕೊಳ್ಳುವ ಕಥೆ; ತನ್ನ ಭೂತಕಾಲದ ಭಯಾನಕವಾದ ಇತಿಹಾಸವನ್ನೇ ಹೇಳುತ್ತಾ ಸಾಗುತ್ತದೆ.

ಕಥೆಗಾರರು ಇಲ್ಲಿ ಕೇವಲ ಅವರಿಬ್ಬರ ಕುಸ್ತಿಯ ರೋಚಕ ಕಥೆಯನ್ನು ಹೇಳದೆ ಆಳ್ಳಳ್ಳಿ ಗದಿಗೆಪಜ್ಜ, ಅಕ್ಕೂರ ಹಾಲಪ್ಪ, ಕಳ್ಳಳ್ಳಿ ನಿಂಗಪ್ಪ ಮುಂತಾದ ಕುಸ್ತಿ ಪೈಲ್ವಾನರ ಪರಂಪರೆಯನ್ನು ಪರಿಚಯಿಸುವ ಕುತೂಹಲದ ರೀತಿ ವಿಶಿಷ್ಟವಾದುದು. ಬಹುಶಃ ತನ್ನ ಪ್ರದೇಶದಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಕುಸ್ತಿ ಆಟ, ಬಳಿಗಾರರಲ್ಲಿ ಕಥೆಯಾಗಿ ಹೊರಹೊಮ್ಮಿದೆ ಎಂದರೆ ತಪ್ಪಾಗಲಾರದು. ಕುಸ್ತಿ ಆಟ ಒಂದು ಕಡೆಯಿಂದ ಆಟವೆನಿಸಿದರೆ ಮತ್ತೊಂದು ಕಡೆಯಿಂದ ಪ್ರಸಿದ್ಧಿ ಪಡೆದು ಅದರ ನೆಲೆಯಲ್ಲಿ ನಾಯಕನಾಗುವ, ನಾಡಿಗೆ ಹೆಸರು ತರುವ ಜವಾಬ್ದಾರಿ ಕೆಲಸವಾಗಿಯೂ ಇಲ್ಲಿ ಚಿತ್ರಿತವಾಗಿದೆ. ಬಸವಣ್ಣೆಪ್ಪನ ಕುಸ್ತಿ ಆಟಕ್ಕೆ ನಡೆಸುವ ತರಬೇತಿ ಸಾಧನೆಯ ಜೊತೆ; ಸುತ್ತ ಹಳ್ಳಿಗೆ ಅವನನ್ನು ಎದುರಿಸುವ ಎದುರಾಳಿ ಯಾರು ಇರಲಿಲ್ಲ. ಇದರಿಂದ ಅವನೊಬ್ಬ ನಾಯಕನಾಗಿಯೇ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದ. ಕಥೆಯಲ್ಲಿ ಬಸವಣ್ಣೆಪ್ಪನಿಗಿಂತ ಮಲ್ಲಣ್ಣನದೇ ಹೆಚ್ಚು ಕಾರ್ಯವೈಖರಿ ಎದ್ದು ಕಾಣುತ್ತದೆ. ಇಂದಿಗೂ ಸಹ ಉತ್ತರ ಕರ್ನಾಟಕದಲ್ಲಿ ಕೆಲವು ಊರುಗಳು ಪೈಲ್ವಾನರಿಂದಲೇ ಪರಿಚಯವಾಗಿ ಜಗತ್‌ಜಾಹೀರಗೊಂಡಿರುವುದು ಕಾಣುತ್ತೇವೆ.

ಮಲ್ಲಣ್ಣ ಸಾಮ ಹಾಕಲು ಆರಂಭಿಸಿದಂದಿನಿಂದ ತಿನ್ನುವ ಆಹಾರ ವಿಶಿಷ್ಟವಾದುದು. ಅದು ಒಟ್ಟು ಉತ್ತರ ಕರ್ನಾಟಕದ ಊಟದ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಾಗಿದೆ. ತುಪ್ಪದಲ್ಲಿ ನೆನೆ ಹಾಕಿದ ಕೊಬ್ಬರಿ ಚೂರು, ಉತ್ತುತ್ತೆ ಹಣ್ಣು ಗೋಡಂಬಿ, ಬಾದಾಮಿ ನುರಿಸಿ ತಿನ್ನುವುದು, ಗೋಧಿರೊಟ್ಟಿ, ಅಚ್ಚೆರು, ಬೆಣ್ಣೆ, ಬೆಲ್ಲ ಬಿಸಿ ಬಿಸಿ ಸಜ್ಜಕ, ಕಸಕಸಿ ಹಾಲು ಇತ್ಯಾದಿ.

ಬಳಿಗಾರರ ಅಣ್ಣ-ತಮ್ಮಂದಿರ ಸೋದರ ವಾತ್ಸಲ್ಯ ಎಂತಹದೆಂದು ಬಸವಣ್ಣೆ ಕುಸ್ತಿ ಕಣಕ್ಕೆ ಇಳಿಯಲು ಕಾರಣವನ್ನು ತಿಳಿಸುವ ಸಂದರ್ಭದಲ್ಲಿ ಬರುತ್ತದೆ. ತನ್ನ ಅಣ್ಣ ಪಶುಪತಿಹಾಳ ಹುಡುಗನ ಎದುರು ಸೋತಾಗ "ಏನಾದರಾಗಲಿ ನನ್ನಣ್ಣನನ್ನು ಒಗೆದವನನ್ನು ನಾನು ಬಿಡುವುದಿಲ್ಲ" ಎಂದು ಬಸವಣ್ಣೆ ಶಪಥ ಮಾಡುವಲ್ಲಿ

ಅಭಿವ್ಯಕ್ತಗೊಂಡಿದೆ. ಅದಕ್ಕೆ ಪ್ರತಿಯಾಗಿ ಅವರ ಅಣ್ಣ "ದುಡಿಯಾಕ ಅಷ್ಟ್ಯಾಕೆ ನಾನು ಉಪಾಸ ಇರಾಕೂ ತಯಾರು ನನ್ನ ತಮ್ಮನ ಸಲುವಾಗಿ" ಎಂಬಲ್ಲಿ ಅದು ಸಾರ್ಥಕವನ್ನು ಪಡೆದು ಸೋದರ ಸಂಬಂಧವನ್ನು ಗಟ್ಟಿಗೊಳಿಸಿದೆ. ಪ್ರಾದೇಶಿಕವಾಗಿ ನಡೆಯುವ ಜಾತ್ರಾ ಮಹೋತ್ಸವದಲ್ಲಿನ ಆಚರಣೆಗಳನ್ನು ಕಥೆಗಾರರು ಇಲ್ಲಿ ಹಿಡಿದಿಟ್ಟಿರುವುದು ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡಬಹುದಾಗಿದೆ.

"ಕುಸ್ತಿ ಎಲ್ಲರ ನರನಾಡಿಗಳನ್ನು ಬಿಗಿಗೊಳಿಸಿತು. ಕಣ್ಣು ಕಿವಿಗಳು ಮಾತ್ರ ಜಾಗ್ರತವಿದ್ದು ಉಳಿದೆಲ್ಲಾ ಅಂಗಾಂಗಗಳು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿದ್ದವು........" ಇಂತಹ ಕಥನ ಶೈಲಿ ಓದುಗರನ್ನು ಒಂದೇ ಸಮ ಹಿಡಿದಿಡುತ್ತದೆ. ಕಥಾ ಬಂಧದಲ್ಲೂ ಅಷ್ಟೇ ಹಿಡಿತ ಸಾಧಿಸಿರುವುದು ಕಾಣುತ್ತೇವೆ. ಇದರ ಕುರಿತು "ಕುಸ್ತಿಯ ಅನುಭವವುಳ್ಳವರಿಗೆ ಮಾತ್ರವಲ್ಲ ಹೊರಗಿನಿಂದ ನೋಡುವವರಿಗೂ ಮೈನವಿರೇಳಿಸುವ ವರ್ಣನೆಗಳಿವು. ಕೊನೆಗೂ ಒಮ್ಮೆ ಕುಸ್ತಿ ಮುಗಿದು ಎಲ್ಲರೂ ನಿರೀಕ್ಷಿಸಿದ್ದ ಮಲ್ಲಣ್ಣ ಬಿದ್ದು ಸೀದ ದೇವಳ್ಳಿ ದಾರಿ ಹಿಡಿದ. ಊರಿಗೆ ಬಂದವನು ದನದ ಮನೆಗೆ ಬಂದು ಮಲಗಿದೆ. ಇಲ್ಲಿಗೆ ಈ ಕಥೆ ಮುಗಿದ್ದಿದ್ದರೂ ಇದೊಂದು ರೋಮಾಂಚನಕಾರಿ ಅನುಭವದ ಕಥನವಾಗುತ್ತಿತ್ತು" (ಅದೇ) ಎಂದು ಅಭಿಪ್ರಾಯಪಡುತ್ತಾರೆ. ಆದರೆ ಕಥೆಗಾರರು ನಾಯಕನ ಇನ್ನೊಂದು ಪ್ರತಿಭೆಯನ್ನು ಹೊರಹಾಕುವ ನಿಟ್ಟಿನಲ್ಲಿ "ಹೋರಿ ಮತ್ತು ಮಲ್ಲಣ್ಣ"ನನ್ನು ಜೊತೆ ಮಾಡಿ ಕಥೆಯ ದಾರಿಯನ್ನು ಬೇರಡೆಗೆ ಸೆಳೆದು ತಂದು ಹೊಸ ಕಥೆಯೇನೊ ಎಂಬ ನಿಟ್ಟಿನಲ್ಲಿ ಪುನಃ ಅದೇ ಕಥೆಯನ್ನು ಹೊಸ ರೀತಿಯಲ್ಲಿ ಪ್ರಾರಂಭಿಸುತ್ತಾರೆ. ಹೋರಿಯನ್ನು ಮಲ್ಲಣ್ಣ ಬೆಳೆಸಿದ ರೀತಿ, ಅದರ ಮೇಲಿನ ಕಾಳಜಿ, ಅದು ಸಾಧಿಸಿದ ಸಾಧನೆ ಇತ್ಯಾದಿಗಳ ಜೊತೆಗೆ ಒಡೆಯ ಮಲ್ಲಣ್ಣ ಮತ್ತು ಅದರ ಅನ್ಯೋನ್ಯ ಸಂಬಂಧ ಎಂತಹದ್ದೊಂದು ಕಥೆ ತಿಳಿಸುತ್ತದೆ. ಅಲ್ಲದೆ ನಮ್ಮ ಶ್ರೀಮಂತ ಜನರೂ ಅದರಿಂದ (ಹೋರಿ ಮುಕ್ಕಣ್ಣನಿಂದ) ಪಾಠ ಕಲಿಯಬೇಕು ಎಂದು ಅದನ್ನು ಪ್ರಶಂಸಿಸುತ್ತಾರೆ. ಕೊನೆಗೊಂದು ದಿನ ಹೋರಿ ಕಾಲು ಜಾರಿ ಬಿದ್ದು ಕಾಲು ಮುರಿದು ತನ್ನ ಶಕ್ತಿಯಲ್ಲಿ ಕುಂದಿ ಅಸಹಾಯಕ ಸ್ಥಿತಿ ತಲುಪಿದಾಗ ಅವರಿಬ್ಬರ ಸ್ಥಿತಿ "ನಿನಗಾದ ನೋವನ್ನು ನಾನ್ಹೇಗೆ ನೋಡಲಿ? ನಿನ್ನ ಉಪಕಾರವನು ನಾನ್ಹೇಗೆ ತೀರಿಸಲಿ? ಎಂದು ಅಂತರಂಗದಲ್ಲಿ ಸಂಕಟ, ಮೌನ ಪರಸ್ಪರ ಸ್ಪರ್ಧೆಗೆ ಇಳಿದಿದ್ದವು.

ಹೀಗೆ ಒಟ್ಟಾರೆ ಕಥೆಯು ಉತ್ತರ ಕರ್ನಾಟಕದ ಆಟ, ಊಟ, ಸಂಪ್ರದಾಯ, ಸಂಬಂಧ, ವಾತ್ಸಲ್ಯ ಗುಣ, ಪ್ರಾಣಿದಯಾ, ಪರಸ್ಪರ ಹೊಂದಾಣಿಕೆಯ ಬದುಕು ಇತ್ಯಾದಿ ಬಗೆಯ ಕಾಳಜಿಯನ್ನು ಈ ಕಥೆಯು ಬಿಂಬಿಸುತ್ತದೆ.

* * * *

ಮನು ಬಳಿಗಾರರ "ಸಾವು" ಮತ್ತು "ಬದುಕು ನಿರಂತರ" ಎಂಬ ಇನ್ನೊಂದು ಕಥೆ ಕನ್ನಡ ಶ್ರೇಷ್ಠ ಕಥೆಗಳ ಸಾಲಿನಲ್ಲಿ ನಿಲ್ಲುವಂತಹದ್ದು. ಕಥೆಯ ಶೀರ್ಷಿಕೆಯಂತೆ ಒಂದು ಕಡೆ ಸಾವಿನ ಸೂತಕ ಮನೆಯಲ್ಲಿರುವಾಗ ತಮ್ಮನಾದ ಪ್ರಭುದೇವ ಬದುಕಿನ ಹಿಂದುಮುಂದಿನದನ್ನು ಅರಿತು ಎಲ್ಲವೂ

ಅಶಾಶ್ವತವೆನ್ನುತ್ತಲೇ ಮೈಯಲ್ಲಿ ಏನೋ ಆವರಿಸಿದಂತೆ ಚುನಾವಣೆಯ ಜನರ ಜೈಕಾರಕ್ಕೆ ಲಾವಣಿಪದಕ್ಕೆ ಮರುಳಾಗಿ ಚುನಾವಣೆ ಸ್ಪರ್ಧೆಗೆ ಧುಮುಕುವುದು ಆಶ್ಚರ್ಯವೆನಿಸಿದರೂ, ವಿಶಾದವೆನಿಸದೆ ಇರಲಾರದು. ಪ್ರಭುದೇವನ ಅಣ್ಣ ಅಮೇರಿಕಾದಲ್ಲಿ ವಾಸವಾಗಿದ್ದು ಅಕಾಲಿಕ ಮರಣಕ್ಕೆ ತುತ್ತಾಗಿದ್ದ. ಆತನ ಕೊನೆ ಆಸೆ ತನ್ನ ದೇಹ ಮಾತ್ರ ಭಾರತಾಂಬೆಯ ಮಡಿಲಲ್ಲೇ ಮಣ್ಣಾಗಬೇಕು ಎಂಬುವುದಾಗಿತ್ತು. ಇದು ಆತನು ಭಾರತದ ನೆಲದ ಮೇಲೆ ಇಟ್ಟಿರುವ ಅಭಿಮಾನ ಎಂತಹದ್ದೆಂದು ತಿಳಿಸಿದರೆ ಪ್ರಭುದೇವನ ಮನಸ್ಸು ತನ್ನ ಅಣ್ಣನ ಮೃತದೇಹ ಭಾರತಕ್ಕೆ ಬರಲು ಐದು ದಿನಗಳ ಕಾಲ ಕಾಯುವ ಶಿಕ್ಷೆಗೆ ಒಳಗಾಗಿ ತನ್ನ ಸ್ಮೃತಿಪಟಲದಲ್ಲಿ ತೀವ್ರ ಅಂತರ್ಮುಖಿಯಾಗಿ ಭಾರತೀಯ, ಇಲ್ಲವೇ ವಿದೇಶಿ ಬರಹಗಾರರ ಸಿದ್ಧಾಂತಗಳನ್ನು (ಸಾವಿನ ಕುರಿತು) ತತ್ತ್ವಗಳನ್ನು ಮೆಲುಕು ಹಾಕುತ್ತಾ ಚಿಂತನಾಮಗ್ನವಾಗಿ ಸಾವಿನ ಭೀಕರತೆಯನ್ನು ನೆನಪು ಮಾಡಿಕೊಳ್ಳುತ್ತಿದೆ.

ಬಳಿಗಾರರು ಭಾರತದಲ್ಲಿ ನೆಲೆಯೂರಿದ ಗೊಡ್ಡು ಸಂಪ್ರದಾಯಗಳನ್ನು, ನಂಬಿಕೆಗಳನ್ನು ನಿರಾಕರಿಸುತ್ತಾರೆ. ಆದರೆ ಇಲ್ಲಿನ ಉನ್ನತವಾದ ಕೆಲವು ಸಂಪ್ರದಾಯಗಳು ಉಳಿಯಬೇಕೆಂದು ಹಂಬಲಿಸುತ್ತಾರೆ. ಅಣ್ಣ ಮೂರು ನಾಲ್ಕು ವರ್ಷಗಳಿಗೊಮ್ಮೆ ಭಾರತಕ್ಕೆ ಬರುತ್ತಿದ್ದ "ಬಂದಾಗ ಮಾತ್ರ ಎಲ್ಲರನ್ನೂ ದಂಗು ಬಡಿಸುವಂತೆ ಯಾವಾಗಲೂ ಧೋತರ ಜುಬ್ಬಾ ಧರಿಸುತ್ತಿದ್ದ. ಅಂದರೆ ಎಲ್ಲರಿಗಿಂತ ಹೆಚ್ಚು ಭಾರತೀಯನಾಗಬಯಸುತ್ತಿದ್ದ" ಎಂಬಲ್ಲಿ ಅಪ್ಪಟ ನೆಲಮೂಲದ ಸಂಸ್ಕೃತಿಗೆ ಕೊಟ್ಟ ಗೌರವ ಯಾವ ರೀತಿ ಇತ್ತು ಎಂದು ಕಾಣುತ್ತದೆ. ಅಣ್ಣನು ಜೀವನ ನಶ್ವರ ಮತ್ತು ಬದುಕಿನಲ್ಲಿ ಸಂತೃಪ್ತಿ ಸಿಗುವುದು 'ಆಂತರಿಕ ಆನಂದ'ವನ್ನು ಸಿದ್ಧಿಸಿಕೊಂಡಾಗ ಎಂದು ಹೇಳುತ್ತಾ ಹಣವಂತರು ಮುಗಿಲೆತ್ತರಕ್ಕೆ ಹೊಂದಿದ ಆಸೆಗಳಿಂದ ಯಾವ ಬಗೆಯ ನೆಮ್ಮದಿ ಸಿಗದು, ಏಕಾಕಿತನದಿಂದ ವಿಚಿತ್ರ ರೀತಿಯಲ್ಲಿ ಬದುಕು ಸಾಗಿಸುವುದು ಕಠಿಣವಾದುದು ಎಂದು ಪ್ರಭುದೇವನಿಗೆ ಹೇಳುತ್ತಾನೆ. ಹೀಗಿದ್ದರೂ ಸಹ ಒಂದು ಕ್ಷಣದ ಹಿಂದೆ ಇದ್ದ ಪ್ರಭುದೇವನ ಆಸೆ ಆಲೋಚನೆಗಳು ಕ್ಷಣಾರ್ಧದಲ್ಲಿ ಮಾಯವಾಗಿ ಒಂದು ಬಗೆಯ ಗಂಭೀರತೆಯು ಬರುತ್ತದೆ. ಹಾಗಾಗಿ ಚುನಾವಣೆಯಿಂದ ಹಿಂದೆ ಸರಿಯಲು ನಿರ್ಧರಿಸಿ ಇನ್ನೇನು ನಾಮಪತ್ರ ಹಿಂಪಡೆಯಲು ಹೊರಡಬೇಕು ಎನ್ನುವಷ್ಟರಲ್ಲಿ ಭಾಜಭಜಂತ್ರಿಯಿಂದ ಕೂಡಿದ ಪಕ್ಷದ ಜನರು, ಡೊಳ್ಳು, ಕರಡಿ ಮಜಲು, ಕಹಳೆ ಇತ್ಯಾದಿಗಳೊಂದಿಗೆ ಸೇರತೊಡಗಿದರು. ಹೆಜ್ಜೆ ಮೇಳದವರು ಲೋಹಾರ್ ಮಾಸ್ತರು ಬರೆದ ಗೀ ಗೀ ಲಾವಣಿ "ಪ್ರಭಣ್ಣ ಎಂಬ ದೊರೆಯು ಅಧ್ಯಕ್ಷನಾಗುತ್ತಾನ. ಎಮ್ಮೆಲ್ಲೆ ಆಗುತಾನ ಮಂತ್ರಿಯೂ ಆಗುತ್ತಾನ ಲೋಕಾನೆ ಆಳುತಾನ" ಎಂಬ ಹಾಡಿನ ನುಡಿ ಕಿವಿಗೆ ಬೀಳುತ್ತಲೇ ಕಥೆಯು ಉನ್ನತೀಕರಣಕ್ಕೆ (ಕ್ಲೈಮ್ಯಾಕ್ಸ್) ಏರುತ್ತದೆ. ಅಂದರೆ ಪ್ರಭುದೇವ ಎಲ್ಲವೂ ನಶ್ವರವೆಂದು ಅರಿತು ಅಲ್ಲಿಯವರೆಗೆ ಸಾವಿನ ದುರಂತಮಯದಲ್ಲಿ ಮಗ್ನನಾಗಿ ತಾನೂ ಒಂದು ಬಗೆಯ ಸಾವಿನ ಕಲ್ಪನೆಯಲ್ಲಿ ಅಸ್ವಸ್ಥನಾಗಿ; ಸ್ಮಶಾನ ವೈರಾಗ್ಯ ಬಾರದಿದ್ದರೂ ಸಾವಿನ ಸುದ್ದಿ ವೈರಾಗ್ಯವಂತೂ ಬಂದು ತಟ್ಟಿತು. ಹಾಗಿದ್ದರೂ "ಈಗ ಅಧ್ಯಕ್ಷನಾದರೆ ಮುಂದೆ ಪಕ್ಷದ ಟಿಕೇಟ್

ದೊರೆಯುವುದು ಖಂಡಿತ. ಅಂದರೆ ಇನ್ನೊಂದು ವರ್ಷದಲ್ಲಿ ಎಮ್ಮೆಲ್ಲೆ, ಅಕಸ್ಮಾತ್ ಚಾನ್ಸ್ ಸಿಕ್ಕರೆ ಮಂತ್ರಿ?......" ಇವೆಲ್ಲಾ ಆಸೆಗಳು "ಸಾವು ಬದುಕು ನಿರಂತರ (ಬದುಕು ಮಾಯೆಯ ಮಾಟ)" ಎಂಬುದನ್ನು ದೃಢೀಕರಿಸಿದ. ಪ್ರಭುದೇವ ಮಡಿಕೆ ಬಿಚ್ಚದ ಕಚ್ಚೆಪಂಚೆ ಧರಿಸಿ ಅದರ ತುದಿಯನ್ನು ಮೊಣಕಾಲದವರೆಗೆ ಮೇಲೇರಿಸಿ ಕಚ್ಚೆ ಹಾಕಿಕೊಂಡು ಚಕಚಕನೇ ಮನೆಯ ಮೆಟ್ಟಿಲುಗಳನ್ನಿಳಿದು ರಸ್ತೆಗೆ ಬಂದ ಮೇಳದವರ ಜೊತೆಗೆ ಸೇರಿ ಅವರ ಕೈಯಲ್ಲಿ ಕೈ ಹಾಕಿ ಶಿಳ್ಳೆ ಹೊಡೆಯುತ್ತಾ ಹುಚ್ಚೆದ್ದು ಅವರೊಡನೆಯೇ ಹೆಜ್ಜೆ ಹಾಕತೊಡಗಿದ. ಇಲ್ಲಿ ಕಥೆಯು ದುರಂತದ ಅಂತ್ಯ ಕಂಡರೂ ನಾಳಿನ ಬದುಕಿನ ಹೋರಾಟಕ್ಕಾಗಿ ಮಾಯೆಯು ನಮ್ಮನ್ನು ಎಷ್ಟು ಕುಬ್ಜರನ್ನಾಗಿಸಿಬಿಡುತ್ತದೆ ಎಂದು ಸಂದೇಶ ನೀಡುತ್ತದೆ. ಒಟ್ಟಿನಲ್ಲಿ ಕಥೆಗಾರರು ಇಲ್ಲಿ ಸಾವಿನ ಭೀಕರತೆಯನ್ನು ಬಹಳ ನಾಜೂಕಿನಿಂದ ಹೆಣೆದು ಅದರ ಮೂಲಕ ಬದುಕು ಮತ್ತೆ ಚೈತನ್ಯಪೂರ್ಣವಾಗಿ ಮುಂದುವರೆಯಲು ಹೇಗೆ ಅನುವು ಮಾಡಿಕೊಡುತ್ತದೆ ನಾಳಿನ ಬದುಕಿಗೆ ಎಂಬುದನ್ನು ವಿಶಿಷ್ಟ ರೀತಿಯಲ್ಲಿ ನಿರೂಪಿಸಿದ್ದಾರೆನ್ನಬಹುದು.

ಮನು ಬಳಿಗಾರರು ಕನ್ನಡದ ಸಣ್ಣಕಥಾ ಪರಂಪರೆಯ ಯಶಸ್ವಿ ಕಥೆಗಾರರಾಗಿದ್ದಾರೆ. ಕಥೆಗಳಲ್ಲಿ ವಾಸ್ತವ ಜಗತ್ತನ್ನು ಅವರು ನಿರೂಪಿಸಿದ್ದಾರೆ. ಅವರ ಎಲ್ಲಾ ಕಥೆಗಳಲ್ಲಿ ಗ್ರಾಮೀಣ ಬದುಕಿನ ಚಿತ್ರಣಗಳು, ಬದುಕಿನ ಆದರ್ಶಗಳು ಅಭಿವ್ಯಕ್ತಗೊಂಡಿವೆ. ದಿನೇ ದಿನೇ ಯಾಂತ್ರಿಕವಾಗುತ್ತಿರುವ ನಮ್ಮ ಬದುಕು ಹಳ್ಳಿಯ ಮುಗ್ಧ ಜನರ ಭಾವಪ್ರಪಂಚವನ್ನು ಸೆರೆ ಹಿಡಿಯುವ ಪ್ರಯತ್ನವನ್ನು ಅವರು ಇಲ್ಲಿ ಮಾಡಿದ್ದಾರೆ. "ವಿಘಟಿತಗೊಳ್ಳುತ್ತಿರುವ ಸಾಮಾಜಿಕ ಜೀವನ, ರಾಜಕೀಯ ಸ್ಥಿತ್ಯಂತರ, ಬಡತನ, ಸಿರಿತನದ ಸಮಸ್ಯೆಗಳು ಅಧಿಕಾರ ಜೀವನದ ಅನುಭವಗಳು, ವೈವಿಧ್ಯಮಯ ಸನ್ನಿವೇಶಗಳು, ಜೀವಂತ ಧೋರಣೆಗಳು ಮೂರ್ತ ಸ್ವರೂಪ ಪಡೆದಿವೆ" (ವಿಮರ್ಶಾ ವಿವೇಕ- (ಸಂ) ಡಾ.ಜಿ.ಎಂ.ಹೆಗಡೆ ಪುಟ-114 ಅವರ ಒಟ್ಟು ಸೃಜನಶೀಲ ಬರಹಗಳ ಹಿಂದೆ ಅವರ ಶಿಗ್ಲಿಯ ಪರಿಸರದ ಚಿತ್ರಣ ಎದ್ದು ಕಾಣುತ್ತದೆ. ಈ ಎಲ್ಲಾ ದೃಷ್ಟಿಯಿಂದ ಬಳಿಗಾರರು ಕನ್ನಡದ ಶ್ರೇಷ್ಠ ಬರಹಗಾರರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಕೆಲವು ಕಥೆಗಳು-ಮನು ಬಳಿಗಾರ್

2. ವಿಮರ್ಶಾ ವಿವೇಕ- (ಸಂ) ಡಾ.ಜಿ.ಎಂ. ಹೆಗಡೆ.

3. ಸಂಸ್ಕೃತಿ ವಿಹಾರ- ಮನು ಬಳಿಗಾರ್

4. ಸಾಂಸ್ಕೃತಿಕ ಅಧ್ಯಯನ-ಡಾ.ರಹಮತ್ ತರೀಕೆರೆ

5. ಕನ್ನಡ ಸಾಹಿತ್ಯ ಪ್ರಕಾರಗಳು (ಸಂ)-ಡಾ.ಸಣ್ಣರಾಮ

# ಮನು ಬಳಿಗಾರರ ಕಥೆಗಳಲ್ಲಿ ಗ್ರಾಮೀಣ ಪರಿಸರದ ಸೊಗಡು

ಡಾ. ಪ್ರಸನ್ನ ಕುಮಾರ್ ಕೆ.

**ಮ**ನು ಬಳಿಗಾರರು ಸಾಹಿತ್ಯ ಕೃಷಿಯಲ್ಲಿ ಅಪಾರ ಆಸಕ್ತಿಯುಳ್ಳ ಉತ್ತಮ ಲೇಖಕರಾಗಿದ್ದಾರೆ, ಇವರು ಶಿಗ್ಲಿ ಎಂಬ ಹಳ್ಳಿಯಲ್ಲಿ ಹುಟ್ಟಿ ಬೆಳೆದು ಅಲ್ಲಿ ಕ್ರಿಯಾತ್ಮಕವಾಗಿ ಕುಸ್ತಿ, ವ್ಯಾಯಾಮಗಳನ್ನು ಕರಗತಮಾಡಿಕೊಂಡು ಬೆಳೆದವರು. ಪಕ್ಕ ಪ್ರಾಮಾಣಿಕತೆಯುಳ್ಳ ಧೀಮಂತರಿವರು. ಹಾಗಾಗಿಯೇ ಇವರು ಒಂದು ಕಡೆ ಆಡಳಿತ ಕ್ಷೇತ್ರದಲ್ಲಿ ಇದ್ದುಕೊಂಡೇ ಸಾಹಿತ್ಯ ಕೃಷಿಯಲ್ಲಿ ಉತ್ತಮ ಸಾಧನೆಯನ್ನು ಮಾಡಿದ್ದಾರೆ. ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕಾಣಿಕೆಯನ್ನು ಕೊಟ್ಟು, ಇಂದು ಇಡೀ ರಾಜ್ಯವೇ ಗುರುತಿಸುವ ಅತ್ಯುತ್ತಮ ಘಟ್ಟಕ್ಕೆ ಕೇಂದ್ರ ಕ.ಸಾ.ಪ. ಅಧ್ಯಕ್ಷ ಪದವಿಗೆ ಏರಿದ್ದಾರೆ.

ಇವರು ಮೂಲತಃ ಹಳ್ಳಿಯಲ್ಲಿ ಹುಟ್ಟಿ ಬಂದು ವಿದ್ಯಾವಂತರಾದವರು ಆದ್ದರಿಂದಲೇ ಇವರು ಆಡಳಿತ ಕ್ಷೇತ್ರದಲ್ಲಿ ಆಧುನಿಕ ಹಾಗೂ ತಂತ್ರಜ್ಞಾನ ಬಳಕೆಯ ಬಗ್ಗೆ ಗೊತ್ತಿರುವಂತಹ ಸೂಕ್ಷ್ಮಮತಿಯಾಗಿದ್ದರೂ ಸಹ ತಮ್ಮ ಬರವಣಿಗೆಯಲ್ಲಿ ಗ್ರಾಮೀಣ ಪರಿಸರ, ಜನಜೀವನ ಆಚಾರ ವಿಚಾರ, ಮಾನವ ಸಂಬಂಧಗಳು, ಜನರ ಮುಗ್ಧತೆ, ಭೀಕರ ಬರಗಾಲದ ಸಂದರ್ಭಗಳು ತಂದೆ - ತಾಯಿ ಮತ್ತು ಮಕ್ಕಳ ಸಂಬಂಧ, ಪ್ರಾಣಿ ಪಕ್ಷಿಗಳೊಂದಿಗಿನ ಒಡನಾಟ, ಕೃಷಿಗೆ ಸಂಬಂಧಿಸಿದ ಆಚರಣೆಗಳು ಹಾಗೂ ಜಾಗತೀಕರಣದ ಪ್ರಭಾವದಿಂದಾಗಿ ವರ್ತಮಾನದ ತಲ್ಲಣಗಳು ಹೀಗೆ ಇನ್ನು ಹಲವಾರು ಅಂಶಗಳನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಗುರುತಿಸುತ್ತಾ ಹೋಗುತ್ತಾರೆ.

ಪ್ರಸ್ತುತ ಸಂದರ್ಭದಲ್ಲಿ ಸಾರ್ವಜನಿಕರು ಹೇಗೆ ಸಮಾಜದಲ್ಲಿ ಆಧುನಿಕತೆಯ ಪ್ರಭಾವದಿಂದಾಗಿ ಎಲ್ಲೋ ಒಂದು ಕಡೆ ತಮಗೆ ತಿಳಿಯದೇ ಮಾನಸಿಕ ತೊಳಲಾಟಗಳಿಗೆ ಸಿಲುಕುವುದನ್ನು ಬಳಿಗಾರರು ತುಂಬಾ ನಯವಾಗಿ ಕಟ್ಟಿಕೊಡುತ್ತಾರೆ, ಅಲ್ಲದೆ ಇಂತಹ ಸಂದರ್ಭಗಳನ್ನು ಎದುರಿಸಿ ಹಲವು ಅವಘಡಗಳಿಗೆ ತುತ್ತಾಗಿ ತಮ್ಮ ಇಡೀ ಜೀವನವನ್ನು ಕಳೆದುಕೊಳ್ಳುವ ಪ್ರಸಂಗವನ್ನು 'ಋಣ' ಕಥೆಯಿಂದ ತಿಳಿದುಕೊಳ್ಳಬಹುದು. ಪ್ರಸ್ತುತ ಈ ಲೇಖನದಲ್ಲಿ ಮನು ಬಳಿಗಾರರ ಕಥೆಗಳಲ್ಲಿನ ಗ್ರಾಮೀಣ ಪರಿಸರದ ಸೊಗಡು ಎನ್ನುವ ಶೀರ್ಷಿಕೆಯ ಅಡಿಯಲ್ಲಿ ವಿಶ್ಲೇಷಿಸಲಾಗಿದೆ.

ಮನು ಬಳಿಗಾರರ ಕಥೆಗಳ ಆರಂಭದಲ್ಲಿ ಪ್ರಕೃತಿಯ ವರ್ಣನೆ, ಗ್ರಾಮೀಣ ಪರಿಸರದ ವರ್ಣನೆಯಲ್ಲಿ ಮನತುಂಬಿ ಹೇಳುವ ಮಾತುಗಳು ಬಹುಶಃ ಎಲ್ಲಾ ಕಥೆಗಳಲ್ಲು ಕಾಣಬಹುದು. 'ವಂಚಿತ' ಕಥೆಯಲ್ಲಿ ಅವರೇ ಹೇಳುವಂತೆ "ಆಕಾಶದ ಕಪ್ಪು ಮೋಡಗಳು ಒಂದರ ಹಿಂದೆ ಇನ್ನೊಂದರಂತೆ ಬೆನ್ನುಹತ್ತಿ ಸರಸ ಸಲ್ಲಾಪ ಮಾಡುತ್ತಿರುವ ತುಸು ಗಾಳಿ ಹೆಚ್ಚಾದಾಗ ಅವು ಒಂದರಲ್ಲೊಂದು ಬೆರೆಯತೊಡಗಿದವು. ಈ ಮಿಲನ ಗಾಢವಾದಾಗ ನೆತ್ತಿಮೇಲಿನ ನೇಸರದ ಕಿರಣಗಳೂ ಸಹ ಭೂಮಿ ತಲುಪದಾದವು. ನಡುಹಗಲು, ರಾತ್ರಿಯ

ರೂಪ ತಾಳುತ್ತ, ಬಾನೊಳಗಿನ ಆ ಮೈಥುನಕ್ಕೆ ಅನುಕೂಲ ಮಾಡಿಕೊಡುತ್ತಿತ್ತು. ಮಳೆರಾಜನಿಗಾಗಿ ಎದುರು ನೋಡುತ್ತಿದ್ದ ಸಸ್ಯ ಶಾಮಲೆಯ ವಿರಹಾಕಾಂಕ್ಷೆಯು ಬಲವಾಗತೊಡಗಿತು. ಭೂಮಿದೇವಿಯ ಬಿರುಕುಗಳು ಚಣದಲ್ಲಿಯೇ ಹೊಯ್ಯಲಿರುವ ಹನಿಹನಿಗಳಿಗಾಗಿ ವಿಸ್ತಾರಗೊಳ್ಳತೊಡಗಿದವು. ಪ್ರಾಣಿ ಪಕ್ಷಿಗಳು ಈ ಅನಿರೀಕ್ಷಿತ ಕಡು ನೆರಳಿನಿಂದ ಬಿಸಿಲಿನ ತಾಪ ಮರೆತು ಚಿನ್ನಾಟವಾಡುತ್ತ ಬರಲಿರುವ ಮಳೆಗಾಲದ ಎದುರು ನೋಡತೊಡಗಿದವು. ರಸ್ತೆಯ ಅಕ್ಕಪಕ್ಕದಲ್ಲಿ ಬಿದ್ದ ತರಗೆಲೆಗಳು ಸುಳಿಗಾಳಿಯಲ್ಲಿ ತೇಲುತ್ತ, ಮಳೆರಾಯನ ಬರುವಿಗಾಗಿ ಜಾಗ ಖಾಲಿ ಮಾಡಿ, ಸ್ವಚ್ಛ ಅಂಗಳದಿ ಕೆಂಪುಮಣ್ಣಿನ ರತ್ನಗಂಬಳಿ ಹಾಸಿದವು" ಎಂದು ಹೇಳುವ ನಿರೂಪಣ ಶೈಲಿ ಅತ್ಯದ್ಭುತವಾಗಿ ಹೊರಹೊಮ್ಮಿದೆ.

'ಒಂದು ಚಪ್ಪಲಿ ಪ್ರಕರಣ'ದ ಕಥೆಯಲ್ಲಿ ಗ್ರಾಮೀಣ ವಾತಾವರಣ ಅದರಲ್ಲೂ ಮಳೆ ಬರುವ ಸಂದರ್ಭವನ್ನು ತುಂಬಾ ಸೊಗಸಾಗಿ ಚಿತ್ರಿಸುತ್ತಾರೆ. "ಮುಂಗಾರು ಮಳೆ ಧೋ ಧೋ ಎಂದು ಸುರಿಯುತ್ತಿದ್ದರೂ ಬಸವಣ್ಣಿಗೆ ಅದರ ಪರಿವೇ ಇಲ್ಲ. ಭರ್ರನೆ ಬೀಸುವ ಚಳಿಗಾಳಿಯಾಗಲಿ, ಆಗಾಗ ಕಡ್ ಕಡಲ್ ಎಂದು ಹೊಡೆಯುವ ಗುಡುಗು ಸಿಡಿಲುಗಳಾಗಲಿ ಅವನ ಏಕಾಗ್ರತೆಯನ್ನು ಕದಲಿಸಲಾರದಾಗಿವೆ. ತಾನೀಗ ಸೀದಾ ರಾವ್ ಸಾಹೇಬರ ದಲಾಲಿ ಅಂಗಡಿ ತಲುಪಬೇಕೆಂಬುದೊಂದೇ ಆತನ ನೇರ ಗುರಿ. ತನ್ನ ಮಾಲನ್ನು ತಾನು ಹೇಳಿದ ರೇಟಿಗಿಂತಲೂ ಕಡಿಮೆ, ಅದೂ ಕ್ವಿಂಟಾಲಿಗೆ ಮೂರುನೂರು ರೂಪಾಯಿ ಕಡಿಮೆ ಮಾಡಿ ವಿಕ್ರಯ ಮಾಡಿದ್ದು ಬಸವಣ್ಣಿಯ ರಕ್ತ ಕುದಿಯುವಂತೆ ಮಾಡಿದೆ" ಎಂದು ಹೇಳುವಲ್ಲಿ ಸಾಮಾನ್ಯವಾಗಿ ಈ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಪ್ರಸಂಗಗಳನ್ನು ಚಿತ್ರಿಸುತ್ತಾ ಹೋಗುತ್ತಾರೆ.

'ಋಣ' ಕಥೆಯಲ್ಲಿ ಸೀತಾಬಾಯಿ ಮತ್ತು ರಮೇಶನ ಪಾತ್ರಗಳು ತುಂಬಾ ಮುಖ್ಯವಾಗುತ್ತವೆ. ಈ ಪಾತ್ರಗಳ ಮುಖಾಂತರವೆ ಕಥಾಹಂದರ ಸಾಗುತ್ತದೆ. ಇಲ್ಲಿ ಸೀತಾಬಾಯಿ ಮತ್ತು ರಮೇಶರ ನಡುವೆ ಋಣಾನುಸಂಬಂಧಗಳು ಗೋಚರಿಸುತ್ತವೆ. ಗ್ರಾಮೀಣ ಜೀವನದಲ್ಲಿ ಇಂತಹ ಘಟನೆಗಳು, ದೃಶ್ಯಗಳು ಮಾಮೂಲು ಎಂಬಂತೆ ಸಹೃದಯರು ಅದನ್ನು ನಗರ ಪ್ರದೇಶಗಳಲ್ಲೂ ಅಳವಡಿಸಿಕೊಂಡು ಗ್ರಾಮೀಣ ವಾತಾವರಣವನ್ನು ಉತ್ತಮಸ್ಥಾನದಲ್ಲಿ ಪಸರಿಸುವಂತೆ ತಿಳಿಸುತ್ತಾರೆ.

ಹಾಗೆಯೇ ಈ ಕಥೆಯಲ್ಲಿ ಮೂಡಿಬರುವ ಆರಂಭದ ಸಾಲುಗಳು ಗ್ರಾಮೀಣ ಪರಿಸರ ಎನ್ನುವ ಮಾತುಗಳು ಕಿವಿಯಿಂದ ಕೇಳಿದ ಕೂಡಲೇ ಕಣ್ಣ ಮುಂದೆ ಕಟ್ಟುವಂತೆ ಬಿಂಬಿಸಲಾಗಿದೆ. "ಮನೆಯ ಭಾವಣಿಯ ಮೇಲೆ ಕುಳಿತ ಸೀತಾಬಾಯಿಯ ದೃಷ್ಠಿ ಪೌಳಿಯ ಹೊರಗಡೆ ತನ್ನ ಮರಿಗಳೊಂದಿಗೆ ಆಡುತ್ತಿದ್ದ ತಾಯಿ ಕೋಳಿಯ ಮೇಲೆ ಬಿತ್ತು. ಕೊಕ್ ಕೊಕ್ ಕೊಕ್ ಎನ್ನುತ್ತ ಎರಡು ಕಾಲಿನಿಂದ ಕಸ ಗೆಬರುತ್ತಲೆ ಮುಖ ಅತ್ತಿತ್ತ ತಿರುಗುಸಿ ನೋಡುತ್ತಿತ್ತು. ಜೊತೆಯಲ್ಲಿ ಆಡುತ್ತಿದ್ದ ಐದಾರು ಮರಿಕೋಳಿಗಳು ತಾಯಿ ಹೆಕ್ಕಿ ತೆಗೆದ ಹುಳು ಹುಪ್ಪಡಿಗೆಗಳನ್ನು ತಿನ್ನುವುದರಲ್ಲಿ ಮಗ್ನವಾಗಿದ್ದವು. ಅಲ್ಲದೆ ಪ್ರತಿದಿನ ಆಕಳಿಗೆ ಕರುಬಿಟ್ಟಾಗ, ಎಮ್ಮೆ ಕಂದನ ಮೈ ನೆಕ್ಕುವಾಗ, ಮನೆಯ ಕಂಬಿಯ ಮೇಲೆ ಕುಳಿತ ಹಕ್ಕಿ ತನ್ನ ಮರಿಗಳಿಗೆ ಮನೆ ಮುಂದೆ ಒಣಹಾಕಿದ

ಅಕ್ಕಡಿ ಕಾಳುಗಳನ್ನು ಚುಂಚದಿಂದ ಬಾಯಲ್ಲಿ ಇಡುವ ಸಂದರ್ಭಗಳು ಗ್ರಾಮೀಣ ಮತ್ತು ಪ್ರಾಣಿಪಕ್ಷಿಗಳ ಸಂಬಂಧಗಳ ಅನ್ಯೋನ್ಯತೆಯ ಬಗ್ಗೆ ಒಂದು ಸ್ಥಬ್ದ ಚಿತ್ರಣವನ್ನೇ ಕಟ್ಟಿಕೊಡುತ್ತಾರೆ. ಇದರ ಜೊತೆಗೆ ಸೀತಾಬಾಯಿಯು ತನ್ನ ಕುಟುಂಬದ ಮಕ್ಕಳೊಂದಿಗಿನ ಸಂಬಂಧಗಳನ್ನು ಗುರ್ತಿಸಿಕೊಳ್ಳುವ ಪರಿಯೂ ಉತ್ತಮ ಉದಾಹರಣೆಯಾಗಿದೆ.

ಇದಲ್ಲದೆ ಡಾ|| ಯು. ಆರ್. ಅನಂತಮೂರ್ತಿ ಅವರು "ಋಣ" ಕಥೆಯ ಮುನ್ನುಡಿಯಲ್ಲಿ ಹೇಳುವಂತೆ ರಮೇಶನು ಒಳ್ಳೆಯವನು. ಆದರೆ ಅವನ ಒಳ್ಳೆಯತನ ಮತ್ತು ಭಾವುಕತೆಗಳು ಸಮಸ್ಯಾತ್ಮಕವಾಗಿ ಮೂಡುವುದು ಬಳಿಗಾರರ ಸಂಕೀರ್ಣವಾದ ದೃಷ್ಟಿಯಿಂದ ಸಾಧ್ಯವಾಗಿದೆ ಎಂದು ಹೇಳುವ ನಿಟ್ಟಿನಲ್ಲಿ ಬಳಿಗಾರರ ದೃಷ್ಟಿಕೋನ ನಿಜಕ್ಕೂ ಕೂಡ ಗ್ರಾಮೀಣ ಜೀವನದ ನೆಲೆಗಟ್ಟಿನಲ್ಲಿ ತುಂಬ ಪರಿಣಾಮಕಾರಿಯಾದ ವಸ್ತುವನ್ನು ಆಯ್ದು ಕಥೆ ಹೆಣೆದಿರುವುದು ಸ್ವಾಗತಾರ್ಹ ಎಂದಿದ್ದಾರೆ.

ಹಾಗೆಯೇ ರಂಜಾನ್ ದರ್ಗಾರವರು ಹಿನ್ನುಡಿಯಲ್ಲಿ "ಇವರೊಬ್ಬ ಸವ್ಯಸಾಚಿಯೇ ಸರಿ. ಆಡಳಿತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಇವರು ತದೇಕಚಿತ್ತದಿಂದ ಸೃಜನಶೀಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಳಿಗಾರರು ಉತ್ತಮ ಆಡಳಿತಗಾರ ಎಂದು ಅನ್ನಿಸಿಕೊಳ್ಳುವ ಜೊತೆಗೆ ಉತ್ತಮ ಸಾಹಿತ್ಯ ಲಕ್ಷಣಗಳನ್ನು ಹೊಂದಿರುವ ವ್ಯಕ್ತಿಯಾಗಿದ್ದಾರೆ. ಇದಲ್ಲದೆ ಇವರ ಕಥೆಗಳಲ್ಲಿ ಪರಿಸರ ಪ್ರಜ್ಞೆ, ದೇಶ ಪ್ರೇಮ, ವಾಸ್ತವಗಳ ನಡುವಿನ ತುಮುಲಗಳ ವೈಚಾರಿಕ ಸಂಘರ್ಷಗಳು ಎದ್ದು ಕಾಣುತ್ತವೆ. ಅಲ್ಲದೆ ಸಹೃದಯರನ್ನು ಓದುಗರನ್ನು ಸ್ವವಿಮರ್ಶೆಗೆ ಒಳಪಡಿಸುವ ಪ್ರಭಾವ ಇವರ ಕಥೆಗಳಲ್ಲಿ ಬಿಂಬಿತವಾಗುತ್ತದೆ. ಜೊತೆಗೆ ಓದುಗರಲ್ಲಿ ಕನ್ನಡದ ಸ್ವಾಭಿಮಾನವನ್ನು ಸೃಷ್ಟಿಸುವ ಛಲವಿದೆ, ಈ ಅಂಶಗಳಿಂದಾಗಿ ಬಳಿಗಾರರ ಕಥೆಗಳು ಹೊಸ ಭರವಸೆ ಹಾಗೂ ಉತ್ತಮ ಲೇಖಕರಾಗಿ ಪ್ರಸಂಶೆಗೆ ಒಳಗಾಗಿದ್ದಾರೆ" ಎಂದು ಹೇಳಿರುವುದು ಬಳಿಗಾರರ ಕಥೆಗಳ ಪ್ರೌಢಿಮೆಗೆ ಸಾಕ್ಷಿಯಾಗಿದೆ.

# ''ಬದುಕು ಮಾಯೆಯ ಮಾಟ' ಕಥೆಗಳ ಹೆಜ್ಜೆ ಗುರುತು

ಲೋಕೇಶ ನೀರಕಲ್ಲು

**ಕು**ಳಿತ ನಿಟ್ಟಿನಲ್ಲಿಯೇ ಸ್ವಲ್ಪ ಸಮಯದಲ್ಲಿ ಓದಿ ಮುಗಿಸಬಹುದಾದ, ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತಹ ವಿಚಾರಗಳನ್ನು ಒಡಲಲ್ಲಿ ಹುದುಗಿಸಿಕೊಂಡಿರುವ ಕಥೆಗಳು ಸಾಹಿತ್ಯಾಸಕ್ತರ ಗಮನ ಸೆಳೆಯುತ್ತವೆ. ಅನಿರೀಕ್ಷಿತವಾಗಿ ಚಿಮ್ಮಿದ ಆಕರ್ಷಕ ಕಣ್ಣಿನ ನೋಟದಂತೆ, ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಕರಿಮೋಡದ ಸೆಳೆಮಿಂಚಿನಂತೆ ಬೆಳಕನ್ನು ಕಂಡವರು ನೆನಪಿನಲ್ಲಿರಿಸಿಕೊಳ್ಳುವಂತೆ, ಕಥೆಯ ಪರಿಣಾಮ ಸತತವಾಗಿ ಮುಂದುವರಿಯುತ್ತದೆ. ಕಥೆಯಲ್ಲಿ ಬರುವ ಘಟನೆ, ಪಾತ್ರ, ಆವರಣಗಳ ಪ್ರಾಧಾನ್ಯತೆ

ಗನುಗುಣವಾಗಿ ವರ್ಗೀಕರಣಗಳು ಹುಟ್ಟಿಕೊಂಡಿರಬಹುದಾದರೂ ಅವೆಲ್ಲವುಗಳ ಅಂತರಾಳದಲ್ಲಿರುವ ಆಶಯ ಒಂದೇ. ಸಮಾಜದ ಹಿತವನ್ನು ಬಯಸುವುದು, ರಕ್ಷಿಸುವುದು. ಓದುಗರು ಮುಕ್ತ ಮನಸ್ಸಿನಿಂದ ಓದಬೇಕು, ಅರಿಯಬೇಕು, ಬಾಳಬೇಕು, ಬದುಕಬೇಕು. ಇಂಥ ದೃಷ್ಟಿಕೋನದಿಂದಲೇ ಮನು ಬಳಿಗಾರ್ ಅವರ ಮೂರನೆಯ ಕಥಾ ಸಂಕಲನ ಬದುಕು ಮಾಯೆಯ ಮಾಟ'ದ ಒಂಬತ್ತು ಕಥೆಗಳನ್ನು ಸಮದರ್ಶಿಯಾಗಿ ಗ್ರಹಿಸಬೇಕಾಗುತ್ತದೆ.

ಈ ಸಂಕಲನದ ಮೊದಲನೇ ಕಥೆಯಾದ 'ಕಥಾವಸ್ತು' ರೇಷ್ಮಾಳ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟವಾಗುತ್ತದೆ. ಆಕೆಯ ಮಾತು, ಸಾಹಿತ್ಯಾಸಕ್ತಿ, ತಿಳಿವಳಿಕೆ, ವಿಚಾರಶಕ್ತಿ ಇಂತಿಷ್ಟೇ ಎಂದು ಹೇಳಲಾಗದು. ವ್ಯಾಸಂಗ ಮಾಡುತ್ತಿದ್ದ ದಿನಮಾನಗಳಲ್ಲಿ ನಡೆಸುತ್ತಿದ್ದ ವಾಗ್ವಾದ, ತಿರುಗಾಟ, ಜಗಳ ಮುಂತಾದವನ್ನು ಗಮನಿಸಿದರೆ ನಮ್ಮ ಸುತ್ತಲಿರುವವರಲ್ಲಿ ಯಾರೋ ಒಬ್ಬರನ್ನು ಕಂಡಂಥ ನೆನಪಾಗುತ್ತಾ, ಪರಿಚಿತಳಾಗಿಬಿಡುತ್ತಾಳೆ. ವ್ಯಾಸಂಗದ ದಿನಗಳ ಧೈರ್ಯ, ಗಡಸುತನದಂಥ ಯಾವ ಗುಣಗಳನ್ನೂ ವಿವಾಹದ ನಂತರವೂ ಬದಲಿಸಿಕೊಂಡವಳಲ್ಲ. ತನ್ನ ಎದುರಾಳಿಗಳು ತನ್ನ ಮುಂದೆ ಸೋಲೊಪ್ಪಿಕೊಂಡಾಗಲೆಲ್ಲ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಾಳೆ. ಇಂಥವಳ ಬಾಯಲ್ಲೂ ಆತ್ಮಹತ್ಯೆಯ ಮಾತು ಹೊರಬೀಳುವುದು ಅಚ್ಚರಿ ಮೂಡಿಸುತ್ತದೆ.

ಕಥೆಯ ಅಂತ್ಯದಲ್ಲಿ ಅವಳ ಗಂಡ ಸುಧೀರನ ಪತ್ರದ ಒಕ್ಕಣೆಯಿಂದ ಬಹಿರಂಗಗೊಳ್ಳುವ ಆತನ ಆತ್ಮಹತ್ಯೆಯ ಸಂಗತಿ ನಮಗೆ ಅನಿರೀಕ್ಷಿತವೆನಿಸುತ್ತದೆ. ಸುಧೀರ ತನ್ನ ತಾಯಿ, ಅಜ್ಜಿಯನ್ನು ತನ್ನ ಹೆಂಡತಿಯಲ್ಲೂ ಕಾಣಬಯಸುತ್ತಾನೆ. ಅವಳ ಮೇಲೆಯೇ ಆಶ್ರಯಿಸತೊಡಗುತ್ತಾನೆ; ಪರಾವಲಂಬಿಯಂತಾಗುತ್ತಾನೆ. ಅವನ ಗಾಢ ಪ್ರೀತಿ, ಅಕಳಂಕ ಒಲವು ಅವಳಿಗೆ ಅರ್ಥವಾಗಲೇಯಿಲ್ಲ. ಆತ್ಮಹತ್ಯೆಯ ಯಾವ ಪಾಪಪ್ರಜ್ಞೆಯೂ ಅವನನ್ನು ಕಾಡುವುದಿಲ್ಲ. ಅವನ ಆತ್ಮಹತ್ಯೆಯ ನಂತರ ರೇಷ್ಮಾ ನಮ್ಮಲ್ಲಿ ಬೆಳೆಯುತ್ತಾ ಹೋಗುತ್ತಾಳೆ. ಕಥೆಯನ್ನು ಓದುವಾಗ ಅವಳ ಬಗೆಗೆ ನಾವು ರೂಪಿಸಿಕೊಂಡಿದ್ದ ಭಾವನೆಗಳು ಬದಲಾಗುತ್ತಾ, ಅನುಕಂಪ ಮೂಡುತ್ತದೆ.

'ದೇವಳ್ಳಿ ಹೋರಿಯೂ ಮಲ್ಲಣ್ಣ ಪೈಲ್ವಾನನೂ' ಕಥೆಯಲ್ಲಿ ಪೈಲ್ವಾನ ಮಲ್ಲಣ್ಣನು ಕುಸ್ತಿ ಸಾಹಸದಲ್ಲಿ ತೋರುವ ಕೌಶಲ, ಪರಿಣತಿಯೊಂದಿಗೆ ತಳುಕು ಹಾಕಿಕೊಂಡಿರುವ ವ್ಯಾಯಾಮ ಸಾಧನೆ, ಊಟದ ವೈಭವ, ಅವರ ಟಾಂಗುಗಳು, ಹೇಳಿಕೆ - ಪ್ರತಿಹೇಳಿಕೆಗಳು ಕುತೂಹಲ ಹುಟ್ಟಿಸುತ್ತವೆ. ಕುಸ್ತಿಯ ಅನುಭವವಿರುವರಿಗೆ ಮತ್ತು ಹೊರಗಿನಿಂದ ವೀಕ್ಷಿಸುವವರಿಗೆ ಇಲ್ಲಿಯ ವಿವರವಾದ ವರ್ಣನೆಗಳು ಮನಸ್ಸಿಗೆ ಲಗ್ಗೆ ಹಾಕುತ್ತವೆ. ಸಾಮಾನ್ಯವಾಗಿ ಸೋಲರಿಯದ ಸರದಾರ ಎಂದೇ ಜನರಿಂದ ಗುರುತಿಸಲ್ಪಡುತ್ತಿದ್ದ ಪೈಲ್ವಾನ್ ಮಲ್ಲಣ್ಣ ಸೋತುಹೋದದ್ದು ಅಚ್ಚರಿಯೆನಿಸುತ್ತಾದರೂ, ಮುಂದೆ ಕಥೆ ಪಡೆದುಕೊಳ್ಳುವ ತಿರುವು ಮನುಷ್ಯ-ಪ್ರಾಣಿಗಳ ಸಂಬಂಧದಲ್ಲಿ ಕಾಣುವ ಸಖ್ಯತೆಯಲ್ಲಿ ಹೋರಿ ಪಡೆದುಕೊಳ್ಳುವ ಪ್ರಾಧಾನ್ಯತೆ ಸ್ಥಳೀಯ ಐತಿಹ್ಯವಾಗಿಬಿಡುತ್ತದೆ.

ದೇವಹಳ್ಳಿ ಹೋರಿಯು ದೇವರೇ ಆಗಿದ್ದು, ಅದರ ಸಮಾಧಿಗೆ ದಿನನಿತ್ಯ ಪೂಜೆ ನಡೆಯುತ್ತದೆ. ಅಲ್ಲೊಂದು ಬಸವಣ್ಣನ ಗುಡಿ ಕಟ್ಟಿಸಿದ್ದು, ಅಲ್ಲಿ ಭಜನಾ ಮೇಳ ನಡೆಯುವುದು. ಪೈಲ್ವಾನ್ ಮಲ್ಲಣ್ಣ ಪೂಜಾರಿ ಮಲ್ಲಣ್ಣನಾದ ಅಂತೂ ಇಂತೂ ಆತನ ಹಾಗೂ ಹೋರಿಯ ಅವಿನಾಭಾವ ಸಂಬಂಧ ಅನೂಚಾನವಾಗಿ ಹೀಗೆಯೇ ಮುಂದುವರೆದುಕೊಂಡೇ ಹೋಯಿತು. ಕತೆಗಾರರು ಎಲ್ಲಿಯೂ ಭಾವಾವೇಶಕ್ಕೆ ಒಳಗಾಗದೆ ಸಮಸ್ಥಿತಿಯಲ್ಲಿ ಕಥೆಯನ್ನು ಮುಂದುವರಿಸಿಕೊಂಡು ಹೋಗುವುದು ಅಚ್ಚರಿಯೆನಿಸುತ್ತದೆ. ಕಥೆಗಾರರಿಗೆ ಭಾಷೆಯ ಪದ ಬಳಕೆಯ ಮೇಲಿರುವ ಹಿಡಿತ ಮೆಚ್ಚುವಂಥದು.

'ಮುತ್ತೈದೆ' ಕಥೆಯಲ್ಲಿ ಅಜ್ಜಿ ದೇವಿರಮ್ಮ, ಮೊಮ್ಮಗ ಡಾ. ಸುರೇಶ ಪ್ರಧಾನ ವ್ಯಕ್ತಿಗಳು. ಇವರಲ್ಲಿ ಎರಡು ಪೀಳಿಗೆಯ ಅಂತರವಿದ್ದು, ಸುರೇಶ ಹಳೆಯ ಕಟ್ಟಡದ ಅಸಾಮಾನ್ಯ ರಚನೆ, ಭದ್ರತೆ, ಭವ್ಯತೆಗಳ ಮೆಚ್ಚುಗೆ ಸೂಚಿಸುತ್ತಲೇ ತನ್ನಜ್ಜಿಯನ್ನು ನೆನಪು ಮಾಡಿಕೊಳ್ಳುತ್ತಾನೆ. ಆಕೆಯ ಅನಾರೋಗ್ಯದ ಸಂಗತಿ ಹಳೆಯದೆನಿಸಿದರೂ, ಆಕೆಯ ಒಂದು ಬಯಕೆ 'ತಾನು ಮುತ್ತೈದೆಯಾಗಿ ಸಾಯಬೇಕು'. ಇದು ಅವಳ ಹಟ ಕೂಡ. ಸುರೇಶನಿಗೆ ತನ್ನಲ್ಲಿ ಯಾಕೆ ಮುತ್ತೈದೆ ಸಾವಿಗಾಗಿ ಹಂಬಲಿಸುತ್ತಾಳೆಂಬ ಪ್ರಶ್ನೆ ಕಾಡುತ್ತದೆ. ಅವಳ ಮನಸ್ಸಿನಲ್ಲಿ ತಾನು ಸತ್ತ ಮೇಲೆ ಆದರೂ ಅಜ್ಜನಿಗೆ ತನ್ನ ಮಹತ್ವ ತಿಳಿಯಲೆಂದೆ? ಅಥವಾ ನೇರ ಸ್ವರ್ಗಕ್ಕೆ ತನಗೆ ದಾರಿ ಸಿಗಲಿಯೆಂದೇ ಅಥವಾ ಆದಷ್ಟು ಬೇಗ ಈ ಸಂಕಟದಿಂದ ಮುಕ್ತಿ ದೊರಕಿಸಿಕೊಳ್ಳಲೆಂದೇ? ಒಂದೂ ಸಷ್ಟವಾಗದಾಯಿತು'. ಈ ಮುತ್ತೈದೆತನದ ಭ್ರಾಂತಿಯೂ ಸತಿಪದ್ಧತಿಯ ಮತ್ತೊಂದು ರೂಪವೇ. ಇಂಥ ಅರ್ಥವಿಲ್ಲದ ಎಷ್ಟೋ ನಂಬಿಕೆಗಳು ಭಾರತೀಯ ಸ್ತ್ರೀಯರನ್ನು ಕಿತ್ತು ತಿನ್ನುವುದನ್ನೂ ನೆನಪಿಸಿಕೊಂಡ.

ಆಕೆಯನ್ನು ಕೊನೆಯ ಕ್ಷಣದಲ್ಲಿ ನೋಡಲು ಬಂದ ಮೊಮ್ಮಗನಿಗೆ ಆಕೆ ಹೇಳಿದ್ದನ್ನು ಕೇಳಿ ಆಶ್ಚರವಾಯಿತು. ಅಜ್ಜಿ 'ಮುತ್ತೈದೆ ಸಾವು' ಎಂಬ ಹಟವನ್ನು ಬದಲಿಸಿಕೊಂಡಿದ್ದಾಳೆ. "ಹೆಂಗರ ಮಾಡಿ ನನ್ನ ಉಳುಸು. ಅವರು ಇರೋತನಕ ನಾನೂ ಇರೋ ಹಂಗ ಮಾಡು. ನನ್ನ ಕಣ್ಣ ಎದುರೇ ನಾನ ಜೀವಂತ ಇದ್ದಾಗನ ಅವರು ಕಣ್ಣುಮುಚ್ಚಲಿ. ಅದಕ್ಕೆ ನನ್ನ ಉಳುಸು ಏನರ ಮಾಡಿ ಆರಾಮ ಮಾಡು" ಎಂಬ ಅಜ್ಜಿಯ ಮಾತು ನಮ್ಮನ್ನು ಆಲೋಚನೆಗೆ ಹಚ್ಚುತ್ತದೆ. ಅಜ್ಜ ಮೊದಲು ಸಾಯಬೇಕು ಎಂದುಕೊಂಡಿದ್ದ ಅಜ್ಜಿ ಈಗ ನಿಜವಾಗಿಯೂ ಸಾಯುತ್ತಿರುವಾಗ ತಾನು ಬದುಕಬೇಕು ಎಂದು ಅನಿಸಿರಬಹುದೆ? ಇದು ಸಾಮಾನ್ಯ ಮಾನವನ ದ್ವಂದ್ವವೇ? ಎಂದೊಮ್ಮೆ ಭಾಸವಾಗುತ್ತದೆ. ಆದರೆ ಅಜ್ಜಿ ಅಸಾಮಾನ್ಯಳು. ಅವಳ ಬದುಕಿಗೆ, ಜೀವಂತಿಕೆಗೆ ಬೇರೆಯದೇ ಕಾರಣವಿತ್ತು. ಕೆಲದಿನಗಳ ಹಿಂದೆ ತನ್ನ ಗಂಡ ಹಾಸಿಗೆ ಹಿಡಿದಿದ್ದಾಗ, ಬಹಳ ಪರಿಶ್ರಮದಿಂದ ಎಲ್ಲವನ್ನೂ ಸಹಿಸಿಕೊಂಡು ಆತನನ್ನು ಗುಣಪಡಿಸಿದ್ದಳು. ಇದರಿಂದ ಅಜ್ಜಿ ಕೂತು ಯೋಚಿಸಿದ್ದಳು. ತನ್ನ ಗಂಡನ ಶುಶ್ರೂಷೆ ಮಾಡಲು ನನ್ನನ್ನು ಬಿಟ್ಟರೆ ಬೇರೆಯಾರಿಂದಲೂ ಸಾಧ್ಯವಾಗುವುದಿಲ್ಲ. ಆಗಲೇ ಅಜ್ಜಿ ತೆಗೆದುಕೊಂಡ ನಿರ್ಧಾರ, ತಾನು ಜೀವಂತವಾಗಿರದಿದ್ದರೆ ತನ್ನ ಗಂಡನ ಹೆಣವೂ ಅನಾಥವಾಗಿಬಿಡಬಹುದು. ಗಂಡನ ಸೇವೆ ಮಾಡಲು ತಾನು ಬದುಕಲೇಬೇಕೆಂದು

ನಿರ್ಧರಿಸಿಕೊಂಡಿದ್ದರಿಂದ, ಮುತ್ತೈದೆ ಸಾವಿನ ಹುಸಿ ಭ್ರಾಂತಿಯಿಂದ ಹೊರಬಂದು ಕರ್ತವ್ಯ ಪ್ರಜ್ಞೆ ಹೊರ ಸ್ಫೋಟಿಸಿತ್ತು.

ಕಥೆಗಾರ ಮನು ಬಳಿಗಾರ್ ಅವರು ಗಹನ ಗಂಭೀರವಾದ ಸಮಸ್ಯೆಯೊಂದನ್ನು ಎರಡೂ ಬದಿಗಳಿಂದ ವಿಚಾರ ಮಾಡುವುದು ಕಂಡುಬರುತ್ತದೆ. ಸಂಪ್ರದಾಯ ಮತ್ತು ವಾಸ್ತವದ ಬಗ್ಗೆ ಬರೆಯುವಾಗ ಎಷ್ಟು ಎಚ್ಚರವಹಿಸಬೇಕೆಂಬುದನ್ನು ಲೇಖಕರು ಚೆನ್ನಾಗಿ ಬಲ್ಲರು. ಮಾನವೀಯ ನೆಲೆಯಲ್ಲಿ ಕಥೆಯನ್ನು ಅರ್ಥೈಸಿಕೊಂಡಾಗ ಮಹತ್ವ ಹೆಚ್ಚಾಗುತ್ತದೆ.

'ಆಶ್ರಯ' ಕಥೆಯಲ್ಲಿ ಬರುವ ಮಹೇಶ - ವಸಂತಕುಮಾರ ಗೆಳೆಯರು. ಆದರೆ ಆಶ್ರಯದಲ್ಲಿ ಬೆಳೆದು ದೊಡ್ಡವನಾದ ವ್ಯಕ್ತಿ ಸಹಜವಾಗಿ ಹಳೆಯದನ್ನು ಮರೆತುಬಿಡುತ್ತಾನೆ. ಬಂದ ಕೆಲಸ ಮಾಡಿಕೊಟ್ಟ ಮೇಲೆ ನಮ್ಮ ನೆನಪು ಆತನಿಗಾಗುವುದು, ಮತ್ತೊಂದು ಕೆಲಸಕ್ಕೆ ಬಂದಾಗ ಮಾತ್ರ ಸಹಾಯ ಯಾಚಿಸಿಬಂದವರು, ಅಕಸ್ಮಾತ್ ಅವರೇ ಇವರಿಗಿಂತ ಉತ್ತಮ ಸ್ಥಿತಿಗೆ ಬಂದುಬಿಟ್ಟರೆ ಅವರಿಗೆ ತಮ್ಮ ಗತಕಾಲದ ನೆನಪು ಬೇಕಿಲ್ಲವೆನಿಸುತ್ತದೆ. ಸಹಾಯ ಮಾಡಿದ್ದವರು ಅವರಿಗೆ ನೋವಿನ ದಿನಗಳನ್ನು ಮರುಕಳಿಸುವಂತೆ ಮಾಡುವುದುಂಟು. ಆದ್ದರಿಂದಲೇ ಹೀಗಾಗುವುದು ಮನುಷ್ಯ ಸ್ವಭಾವ, ಸಹಜ ಕ್ರಿಯೆ. ಕಥೆಯಲ್ಲಿ ಬಾಲ್ಯದ ಗೆಳೆತನ, ಬದುಕು ಕಟ್ಟಿಕೊಳ್ಳುವ ದಿನಗಳಲ್ಲಿ ಆಶ್ರಯವಾಗುವುದು ಕಂಡುಬರುತ್ತದೆ. ಆದರೆ ಸಂಬಂಧಗಳು ಬೆಳೆದು ದೊಡ್ಡವರಾದಂತೆಲ್ಲ ಅರ್ಥವಾಗದ ರೀತಿಯಲ್ಲಿ ರೂಪಗೊಳ್ಳುವುದು ಸಹಜವೆನಿಸಿಬಿಡುತ್ತದೆ. ಮನುಷ್ಯ - ಮನುಷ್ಯರ ಸಂಬಂಧಗಳಲ್ಲಿ ಮೂಡುತ್ತಿರುವ ಶಿಥಿಲತೆಯನ್ನು ಚೆನ್ನಾಗಿ ಗುರುತಿಸಿ ತಿಳಿಸಲಾಗಿದೆ.

'ಸಾವು ಬದುಕು ನಿರಂತರ(ಬದುಕು ಮಾಯೆಯ ಮಾಟ)' ಕಥೆ ಮೊದಲುಗೊಳ್ಳುವುದು ಅಮೇರಿಕಾದಿಂದ ಅಣ್ಣಯ್ಯನ ಹೆಣ ಬರುವ ಸುದ್ಧಿಯಿಂದ. ಇದೊಂದು ವಿಶಿಷ್ಟವಾದ ಕಥೆ. ವಿದೇಶದಿಂದ ಈ ನೆಲಕ್ಕೆ ಹೆಣ ಬಂದು ತಲುಪುವವರೆಗೂ ಕಾಯುತ್ತ ಕಾಲವನ್ನು ಗೋಳಿನ ರೂಪದಲ್ಲಿ ಅನುಭವಿಸುವ ಪರಿ ಒಂದು ರೀತಿಯದಾದರೆ, ಅಣ್ಣಯ್ಯನ ಹೆಣ ಬಂದು ತಲುಪಿದ ನಂತರ ಆ ಶವವನ್ನು ಮುಂದಿರಿಸಿಕೊಂಡು ಬದುಕಿದ್ದಾಗ ಅವನೊಂದಿಗಿದ್ದ ಸಖ್ಯ - ಸಂಬಂಧಗಳನ್ನು ನೆನಪು ಮಾಡಿಕೊಳ್ಳುತ್ತಾ ಸಾವಿನ ಮೀಮಾಂಸೆಗೆ ಬಂದು ತಲುಪುವುದು ಇನ್ನೊಂದು ರೀತಿ. ಈ ಕಥೆಯಲ್ಲಿ ಬರುವ ಚುನಾವಣೆ, ಪ್ರಭುದೇವ, ಅಣ್ಣಯ್ಯನ ಸಾವು, ಶವ, ಚುನಾವಣೆಯ ಬಾಜಾಭಜಂತ್ರಿ ಊರನ್ನೂ ಆವರಿಸಿಬಿಡುತ್ತವೆ. ಕಥೆಯನ್ನು ಓದಿ ಮುಗಿಸಿದ ನಂತರವೂ ಅಲ್ಲಿ ಬರುವ ದೃಶ್ಯಗಳು ಮತ್ತೆ ಮತ್ತೆ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುತ್ತಾ ಹೋಗುತ್ತವೆ.

'ಜಾಲ' ಕಥೆಯು ಉದಯ, ರಂಜನಾ, ಸರಳ, ಕಮಲಮ್ಮ, ಫೋನಿನ ಕರೆಯ ಸಂಶಯದ ಸುತ್ತ ಹೆಣೆದುಕೊಂಡಿದೆ. ಮನುಷ್ಯ ಸಂಬಂಧಗಳಲ್ಲಿ ಸಹಜವಾಗಿ ಉದ್ಭವಿಸಬಹುದಾದ ಸಂಶಯ, ಅದರಿಂದ ಹುಟ್ಟಿಕೊಳ್ಳಬಹುದಾದ ಚಿಂತೆ, ವಾಸ್ತವವನ್ನು ಅರಗಿಸಿಕೊಳ್ಳಲಾಗದೆ ಚಡಪಡಿಸುವ ರೀತಿ ಕಥೆಯ ಒಳ ಸುಳಿಯಲ್ಲಿ ಕಂಡುಬರುತ್ತದೆ.

‘ರಾಜಕಾರಣ’ ಕಥೆ ಅಧಿಕಾರ ಹಿಡಿಯಲು ರಾಜಕಾರಣಿಗಳು ನಡೆಸುವ ತಂತ್ರಗಾರಿಕೆ, ಕೋಮುರಾಜಕಾರಣ, ಆಮಿಷಗಳ ಹುತ್ತ ಮೊದಲಾದ ಅಂಶಗಳನ್ನೊಳಗೊಂಡಿದೆ. ರಾಜಕಾರಣದ ನೆಲೆ ತಿಳಿದವರಂತೂ ಖಂಡಿತ ಇರಲಿಕ್ಕಿಲ್ಲ. ಅಂತೆಯೇ ರಾಜಕಾರಣದಲ್ಲಿ ಖಾಯಂ ಶತ್ರುಗಳಾಗಲಿ ಮಿತ್ರರಾಗಲಿ ಯಾರೂ ಇರುವುದಿಲ್ಲ. ಬಹುಶಃ ಮುಂದಿನ ವಾಕ್ಯಗಳನ್ನು ಓದಿದಾಗ ಇಡೀ ರಾಜಕಾರಣದ ಚಮತ್ಕಾರಗಳು ಸ್ಪಷ್ಟವಾಗಿ ತಿಳಿದೀತು- ‘ಬಹುತೇಕ ಎಲ್ಲರೂ ನಿರೀಕ್ಷಿಸಿದಂತೆ ಸರ್ ದೇಸಾಯಿವರು ಶಾಸಕಾಂಗ ಪಕ್ಷದ ನಾಯಕನಾಗಿ ಒಮ್ಮತದಿಂದ ಆಯ್ಕೆಯಾದರು. ತೀವ್ರ ನಿರಾಶೆಗೊಂಡಿದ್ದರೂ ಬಸವೇಗೌಡರೇ ಅವರ ಹೆಸರನ್ನು ಸೂಚಿಸಬೇಕೆಂದು ವರಿಷ್ಠರ ಆದೇಶ ಇದ್ದುದರಿಂದ ಅದನ್ನು ಗೌಡರು ಶಿರಸಾವಹಿಸಿದ್ದರು. ಹಾಗೆಯೇ ವೀಕ್ಷಕರಾಗಿ ಬಂದ ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿಗಳು ಬಸವೇಗೌಡರು ಉಪಮುಖ್ಯಮಂತ್ರಿ ಸ್ಥಾನದಲ್ಲಿರಬೇಕೆಂದು ಅಧ್ಯಕ್ಷರ ನಿರ್ದೇಶನವಿದೆ ಎಂದಾಗ ಇಡೀ ಸಭೆ ಹೋ! ಎಂದು ಹರ್ಷೋದ್ಗಾರ ಮಾಡಿತು. ಎಲ್ಲಕ್ಕೂ ಹೆಚ್ಚಾಗಿ ಅಪ್ಪಾಸಾಹೇಬ ಹಾಗೂ ಮಿತ್ರರಿಗೆ ಏನಾದರಾಗಲಿ ಪಕ್ಷದ ಇಬ್ಭಾಗ ತಪ್ಪಿಲ್ಲ ಎಂದು ಹೆಚ್ಚಿನ ಸಮಾಧಾನವಾಗಿತ್ತು. ಅಪ್ಪಾಸಾಹೇಬರು ಸೂಚಿಸಿದ್ದ ಎಲ್ಲ ಹೆಸರುಗಳೂ ಸಚಿವ ಸಂಪುಟದ ಯಾದಿಯಲ್ಲಿತ್ತು. ಆದರೆ ಒಂದೇ ಒಂದು ಅವಘಡವಾಗಿತ್ತು. ಅದೇ ಅಪ್ಪಸಾಹೇಬರ ಹೆಸರೇ ಕಾಣದಾಗಿತ್ತು.'

ಇಡೀ ಕಥೆ ರಾಜಕಾರಣದ ಅಂತರಂಗ – ಬಹಿರಂಗವನ್ನು ಬಿಚ್ಚಿಡುತ್ತಾ ಹೋಗುತ್ತದೆ. ಈ ದೇಶದ ರಾಜಕಾರಣವನ್ನು ಬಲ್ಲವರು ಯಾರೂ ಇಲ್ಲಿಯ ಘಟನೆಗಳನ್ನು ಕಾಲ್ಪನಿಕ ಎಂದು ಹೇಳುವುದಿಲ್ಲ. ವಾಸ್ತವಿಕವಾಗಿ ಘಟಿಸಬಹುದಾದ ಘಟನೆಗಳನ್ನು ಸಮರ್ಥವಾಗಿ ಕಟ್ಟಿಕೊಟ್ಟಿರುವ ಮನು ಬಳಿಗಾರ್ ಅವರ ರಾಜಕೀಯ ಚಿಂತನೆ ಮೆಚ್ಚುವಂತಹದು. ಕಥೆಯನ್ನು ಬೆಳೆಸುವಾಗಲೂ ಎಲ್ಲಿಯೂ ಔಚಿತ್ಯ ಮೀರದೆ ರಾಜಕಾರಣದ ಒಳ - ಹೊರಗನ್ನು ಕಥೆಯಾಗಿಸಿದ್ದಾರೆ.

‘ಪೃಥ್ವಿಯ ಮೇಲೊಂದು ಮೊರಡಿ' ಕಥೆಯ ತಂತ್ರಗಾರಿಕೆ ವಿನೂತನವಾದುದು. ಹನ್ನೆರಡನೇ ಶತಮಾನದ ಬಸವಣ್ಣನವರು ಶತಶತಮಾನಗಳ ಕಾಲಘಟ್ಟದಲ್ಲಿ ಐತಿಹಾಸಿಕ ಅಭಿಯಾನ ಕೈಗೊಂಡು, ಆ ಕಾಲಘಟ್ಟದಲ್ಲಿ ನಡೆದ ವಿದ್ಯಮಾನಗಳ ಬಗೆಗೆ ಚಿಂತನಾತ್ಮಕವಾಗಿ ನೀಡುವ ಪಕ್ಷಿನೋಟ ಗಮನೀಯವಾದುದು. ಸಾಹಿತ್ಯಕ ವಿಚಾರಗಳು, ಸಾಮಾಜಿಕ ಸುಧಾರಣೆಗಳು, ಹೋರಾಟಗಳು, ಸಾಂಸ್ಕೃತಿಕ ಬದಲಾವಣೆಗಳು ಕಂಡುಬರುತ್ತವೆ. ಬಸವಣ್ಣನಿಗೆ ಇಪ್ಪತ್ತೊಂದನೆಯ ಶತಮಾನದ ಕೊನೆಯೂ ಸ್ಪಷ್ಟವಾಗಿ ಗೋಚರಿಸುತ್ತದೆ. ಹಲವಾರು ವಿಚಾರಗಳು ಹರಡಿಕೊಂಡಿರುವ ಈ ಕಥೆಯಲ್ಲಿ ಗಾಂಧಿ, ಅಂಬೇಡ್ಕರ್ ಮೊದಲಾದ ಉನ್ನತ ಮಟ್ಟದ ಹೆಸರು ಕೂಡ ಪ್ರಸ್ತಾಪವಾಗುತ್ತದೆ. ಒಟ್ಟಾರೆ ಓದಲು, ಚಿಂತನೆ ಮಾಡಿಸುವ ಈ ಕಥೆ ಸಾಮಾನ್ಯರನ್ನೂ ಆಕರ್ಷಿಸುತ್ತದೆ.

‘ಘಾತ' ಕಥೆಯಲ್ಲಿ ಲೈನ್‌ಮನ್ ನಾಗಣ್ಣನ ಹೆಣದ ಸುತ್ತ ಹಬ್ಬಿಕೊಳ್ಳುವ ಹಾಗಿರಬಹುದು- ಹೀಗಿರಬಹುದು ಎಂದು ರೆಕ್ಕೆಪುಕ್ಕ ಹಚ್ಚಿಕೊಂಡು ಗಾಳಿಯಲ್ಲಿ ಹಾರಾಡುವ ಸುದ್ದಿಗಳು, ಅದನ್ನು ತನ್ನ

ಸ್ವಲಾಭಕ್ಕಾಗಿ ಬಳಸಿಕೊಳ್ಳಲು ಹೊರಟ ಪತ್ರಕರ್ತ, ಅವರಿವರಿಗೆ ಭಯ ಹುಟ್ಟಿಸುವಂತಹ, ಅಧಿಕಾರದ ಸ್ಥಾನಗಳಿಗೆ ಕುತ್ತು ಬರುವಂಥ ಅಗ್ರಲೇಖನವನ್ನು ಬರೆದು ಅವಾಂತರಗಳನ್ನು ಸೃಷ್ಟಿಸುತ್ತಾನೆ. ಅಧಿಕಾರಿಗಳು ಸೂಕ್ತವಾದ ಮಾರ್ಗವನ್ನು ಕಂಡುಕೊಂಡ ನಂತರ 'ದಗಲ್ ಬಾಜಿ' ಪತ್ರಿಕೆ ಮುಖಪುಟದಲ್ಲಿ 'ನಾಗಪ್ಪನ ಸಾವಿನ ಬಗೆಗಿನ ಸಂಶಯ ನಿವಾರಣೆ' ಎಂಬ ತಲೆಬರಹದಡಿ ವಿವರವಾದ ಅಗ್ರಲೇಖನ ಪ್ರಕಟಿಸುವ ಮೂಲಕ ಸಂಪಾದಕ ತಾನು ಸ್ವರಕ್ಷಣೆ ಮಾಡಿಕೊಳ್ಳುತ್ತಾನೆ. ಬಹುಶಃ ಇಂಥವುಗಳನ್ನು ಓದುಗರು ಕೇಳಿರಬಹುದು, ಕಂಡಿರಬಹುದು. ಕಲಾತ್ಮಕವಾಗಿ ಕಥೆಗಾರರು ಇದನ್ನು ಕಟ್ಟಿಕೊಟ್ಟು ಓದುಗರ ಮೆಚ್ಚುಗೆಗೆ ಪಾತ್ರರಾಗುತ್ತಾರೆ.

ಮನು ಬಳಿಗಾರರ ಈ ಸಂಕಲನದ ಕಥೆಗಳು ಬದುಕನ್ನು ಹಲವು ದೃಷ್ಟಿಕೋನಗಳಿಂದ ನೋಡಿದುವಾಗಿದ್ದು, ಕಥೆಗಾರರು ಎಲ್ಲಿಯೂ ಕಲಾತ್ಮಕತೆಗೆ ಧಕ್ಕೆ ಬರದಂತೆ ನೋಡಿಕೊಂಡು, ಭಾಷೆ ಬಳಕೆಯಲ್ಲಿಯೂ ತಮ್ಮ ಸಾಹಿತ್ಯ ಪರಿಣತಿಯನ್ನು ಬಿಂಬಿಸಿದ್ದಾರೆ. ಪ್ರಾದೇಶಿಕವಾದ ವೈಶಿಷ್ಟ್ಯಗಳನ್ನು ಕಥೆಯಲ್ಲಿ ತರುವುದರ ಮೂಲಕ ಉತ್ತರ ಕರ್ನಾಟಕದ ಜನರ ಬದುಕು, ಜೀವನ ವಿಧಾನದ ಸೊಗಡು, ಸೊಗಸನ್ನು ಕನ್ನಡ ಓದುಗರಿಗೆ ನೀಡಿರುವ ಮನು ಬಳಿಗಾರ್ ಅವರ ಶ್ರಮ ಫಲಪ್ರದವಾಗಿದೆ.

❖

# ಮನು ಬಳಿಗಾರ್ ಕತೆಗಳು : ಸಂಘರ್ಷದ ಹಾದಿ ಮತ್ತು ಮಾನವೀಯ ನೆಲೆಗಳ ಶೋಧ

ಚೆನ್ನರಾಜು ಎಂ. ಬಸಪ್ಪನದೊಡ್ಡಿ

**ಆ**ಧುನಿಕ ಕನ್ನಡ ಸಾಹಿತ್ಯದಲ್ಲಿ ಮುಖ್ಯವಾದ ಸಾಹಿತ್ಯ ನಿರೂಪಣ ಮಾದರಿಗಳಲ್ಲಿ ಸಣ್ಣಕತೆ ಪ್ರಕಾರವು ಒಂದು. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪಂಜೆ ಮಂಗೇಶರಾಯರಿಂದ ಇಂದಿನ ತರುಣ ಲೇಖಕರವರೆಗೂ ಸಣ್ಣಕತೆ ಬೆಳೆದು ಬಂದ ಹಾದಿಯನ್ನು ವಿಶ್ಲೇಷಿಸಬಹುದಾಗಿದೆ. ಒಂದು ಘಟನೆ, ಸಂಗತಿ, ವ್ಯಕ್ತಿ, ವಿಚಾರಗಳ ಕುರಿತು ಅಲ್ಪಕಾಲದಲ್ಲಿ ಸಹೃದಯರಿಗೆ ತನ್ನ ಪರಿಣಾಮವನ್ನು ತಲುಪಿಸುವ ಯಶಸ್ವಿ ಮಾರ್ಗಗಳಲ್ಲಿ ಸಣ್ಣಕತೆ ಪ್ರಕಾರವು ಒಂದು ಉತ್ತಮವಾದ ಸಾಹಿತ್ಯ ಪ್ರಕಾರವಾಗಿದೆ. ಒಂದು ಸಂಗತಿ ಅಥವಾ ಘಟಿಸಿದ ಘಟನೆಗಳನ್ನು ಸಮಾಜದಲ್ಲಿ, ಸಂಸ್ಕೃತಿಯಲ್ಲಿ ಉಂಟಾಗುತ್ತಿರುವ ಬದಲಾವಣೆಯ ಆಯಾಮವಾಗಿ ಕಂಡು ಸಾಹಿತ್ಯದ ರೂಪು ನೀಡುವ ಮೂಲಕ ಒಂದು ಸಿದ್ಧಾಂತವನ್ನು ಮಂಡಿಸುವ ಬಗೆಯನ್ನು ಮನು ಬಳಿಗಾರ್ ಕತೆಗಳಲ್ಲಿ ಕಾಣಬಹುದು. ಇದರಿಂದಲೆ ಮನು ಬಳಿಗಾರ್ ಅವರು ಸಣ್ಣಕತೆ ಪ್ರಕಾರವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳಲ್ಲಿ ಉಂಟಾದ ತೀವ್ರ ಬದಲಾವಣೆಯನ್ನು ಮುಖಾಮುಖಿಯಾಗಿಸುವ ಸಂಗತಿಗಳಿಗೆ ಮುಕ್ತವಾಗಿ ಅಭಿವ್ಯಕ್ತಿಸಿದ್ದಾರೆ.

ವಸಾಹತುಶಾಹಿ ಅನುಭವವನ್ನು ಹೊಂದಿದ ತೃತೀಯ ರಂಗದ ಜಗತ್ತುಗಳಲ್ಲಿ ಭಾರತವು ಒಂದಾಗಿದೆ. ಎಂದರೆ ಬ್ರಿಟೀಷ್ ವಸಾಹತುಶಾಹಿ ಭಾರತವನ್ನು ರಾಜಕೀಯವಾಗಿ ಮಾತ್ರವೇ ಆಳ್ವಿಕೆ ಮಾಡಿದ್ದರೆ ದೇಶೀಯ ಪರಂಪರೆಗೆ ಯಾವುದೇ ದಕ್ಕೆಯಾಗುತ್ತಿರಲಿಲ್ಲ. ಅವರು ಮಾಡಿದ ದಾಳಿಯಲ್ಲಿ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಾದರಿಗಳೆಲ್ಲವೂ ನಾಶಹೊಂದುವ ಹಾಗೆ ಮಾಡಿದವು. ಇಂದಿಗೂ ವಸಾಹತುಶಾಹಿ ಪರಿಣಾಮಗಳು ಮತ್ತು ದೇಶೀಯ ಪರಂಪರೆಗಳ ಮುಖಾಮುಖಿ, ಸಂಘರ್ಷದ ಹಾದಿಗಳನ್ನು ನಿಚ್ಚಳವಾಗಿ ಕಾಣಬಹುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಸಾಹತುಶಾಹಿಯ ಆಗಮನ, ಆಧುನಿಕತೆಯ ಪರಿಣಾಮಗಳು, ದೇಶೀಯ ಸಂಸ್ಕೃತಿಯ ಮುಖಾಮುಖಿ, ಸಂಘರ್ಷ ಮತ್ತು ಅನುಸಂಧಾನದ ಬಗೆಗಳನ್ನು ಕಾಣಲು ಸಾಧ್ಯವಿದೆ. ನವೋದಯ ಕಾಲಘಟ್ಟದಲ್ಲಿ ಮೂಡಿಬಂದಂತಹ ಸಣ್ಣಕತೆಗಳಲ್ಲಿ ಆಧುನಿಕತೆಯ ಬಗ್ಗೆ ಒಂದು ಮಾದರಿಯ ಸಂಘರ್ಷವನ್ನು ಕಾಣಬಹುದಾದರೂ ಅಂತಿಮವಾಗಿ ಆಧುನಿಕತೆಯೊಂದಿಗಿನ ಯಾವುದೇ ಸಂಘರ್ಷ ಏರ್ಪಡದೇ ಮೌನ ಚಲನೆಯ ಮೂಲಕ ಸಾಧಿಸುವ ಅನುಸಂಧಾನದ ನೆಲೆಗಳನ್ನು ವಿಶ್ಲೇಷಿಸಬಹುದಾಗಿದೆ. ಆದರೆ ನವೋದಯದ ನಂತರ ರೂಪಗೊಂಡ ಪ್ರಗತಿಶೀಲ, ನವ್ಯ, ದಲಿತಬಂಡಾಯ, ಸ್ತ್ರೀವಾದಿ ಸಣ್ಣಕತಾ ಪರಂಪರೆಯಲ್ಲಿ ಆಧುನಿಕತೆ, ಪರಂಪರೆ, ಸಂಪ್ರದಾಯಗಳ ಮುಖಾಮುಖಿ, ತೊಡಕುಗಳು, ಬಿಡುಗಡೆಯ ಆಯಾಮಗಳು ಸಾಹಿತ್ಯಕ ರೂಪವನ್ನು ತಾಳಿದವು. ಆದ್ದರಿಂದ ಆಧುನಿಕತೆ ಹಾಗೂ ಪರಂಪರೆಯ ಮುಖಾಮುಖಿ ಕನ್ನಡ ಸಾಹಿತ್ಯದಲ್ಲಿ ಹಲಬಗೆಯಲ್ಲಿ ನಿರೂಪಣೆಗೊಂಡಿರುವುದನ್ನು ಕಾಣಲು ಸಾಧ್ಯವಾಗುತ್ತದೆ. ಹೀಗೆ ಮನು ಬಳಿಗಾರ್ ಕತೆಗಳು ಆಧುನಿಕತೆ ಮತ್ತು ಪರಂಪರೆ, ಸಂಪ್ರದಾಯಗಳ ಮುಖಾಮುಖಿಯಲ್ಲಿ ಸಂಘರ್ಷದ ನೆಲೆಗಳು ಮತ್ತು ಅನುಸಂಧಾನದ ಬಗೆಯನ್ನು ಸಾಧಿಸುವುದನ್ನು ಕಾಣಬಹುದಾಗಿದ್ದು ಅಂತಿಮವಾಗಿ ಮಾನವೀಯ ನೆಲೆಗಳ ಶೋಧದಲ್ಲಿ ಅಂತ್ಯಗೊಳ್ಳುತ್ತವೆ. ಇದು ಮನು ಬಳಿಗಾರ್ ಅವರ ಅಭಿವ್ಯಕ್ತಿಯ ಭಿನ್ನತೆಯೂ, ವೈಶಿಷ್ಟ್ಯತೆಯೂ ಆಗಿದೆ.

ಈ ಮೇಲಿನ ಚರ್ಚೆಗಾಗಿ ಮನು ಬಳಿಗಾರ್ ಅವರ “ಗಂಗಮ್ಮನ ಜೀವನ ದೃಷ್ಟಿ” “ಒಂದು ಚಪ್ಪಲಿ ಪ್ರಕರಣ” “ಅಳು” “ಋಣ” “ಜೋಳದ ಬುಟ್ಟಿಯೊಳಗಿಂದ” ಕತೆಗಳನ್ನು ವಿಶ್ಲೇಷಿಸುವ ಮೂಲಕ ಪ್ರಸ್ತುತಪಡಿಸಲು ಪ್ರಯತ್ನಿಸುತ್ತೇನೆ. ಗಂಗಮ್ಮನ ಜೀವನ ದೃಷ್ಟಿ ಕತೆಯಲ್ಲಿ ಆಧುನಿಕತೆ ಸೃಷ್ಟಿಸಿದ ಬಿಕ್ಕಟ್ಟುಗಳಲ್ಲಿ ಒಂದಾದ ಗ್ರಾಮ-ನಗರಗಳ ಸಂಘರ್ಷವನ್ನು ಕಾಣಬಹುದು. ಮೊದಲಿಗೆ ಗಂಗಮ್ಮ ತನ್ನ ಮೊಮ್ಮಗನನ್ನು ಕರೆದುಕೊಂಡು ಬೆಂಗಳೂರಿಗೆ ಬರುತ್ತಾಳೆ. ತನಗೆ ಗೊತ್ತಿರುವ ಅಧಿಕಾರಿಯೊಬ್ಬರನ್ನು ಕಂಡು ತನ್ನ ಮೊಮ್ಮಗನಿಗೆ ಒಂದು ನೌಕರಿ ಕೊಡಿಸಬೇಕು ಎಂಬುದು ಆಕೆಯ ಬಯಕೆಯಾಗಿದೆ. ಗಂಗಮ್ಮ ಬಂದುದನ್ನು ಕಂಡ ಅಧಿಕಾರಿ ತನ್ನ ಊರಿನ ಆಗುಹೋಗುಗಳನ್ನು, ಗಂಗಮ್ಮನ ಜೀವನದಲ್ಲಿ ಉಂಟಾದ ಮಾರ್ಪಾಡುಗಳನ್ನು ಕೇಳಿ ತಿಳಿದುಕೊಳ್ಳುತ್ತಾನೆ. ಗಂಗಮ್ಮನ ಮಾತುಗಳಲ್ಲಿ ಮಾನವೀಯತೆ, ಜೀವನದಲ್ಲಿ

ಎಲ್ಲದಕ್ಕೂ ಎದೆಗುಂದದೆ ನಡೆಯುವ ಗಟ್ಟಿತನವನ್ನು ಅಧಿಕಾರಿ ಗುರುತಿಸುತ್ತಾನೆ. ಆದರೆ ಹಳ್ಳಿಯ ಜೀವನದ ಕಷ್ಟ ಸಾಕಾಗಿ ತನ್ನ ಮೊಮ್ಮಗನಿಗೆ ಬೆಂಗಳೂರಿನಲ್ಲಿ ನೌಕರಿ ಕೊಡಿಸಬೇಕೆಂದು ನೆನೆದು ಬಂದ ಗಂಗಮ್ಮನ ಕಷ್ಟವನ್ನು ಅಧಿಕಾರಿ ಗುರುತಿಸುವಲ್ಲಿ ಅಷ್ಟಾಗಿ ಕಾಳಜಿ ತೋರುವುದಿಲ್ಲ.

ಮುಖ್ಯವಾಗಿ ಈ ಕತೆಯಲ್ಲಿ ಅಧಿಕಾರಿಗೆ ತಾನು ಬಿಟ್ಟು ಬಂದಂತಹ ದೇಶೀಯ ಜೀವನ ಕ್ರಮದಲ್ಲಿ ನಂಬಿಕೆಯಿದೆ, ಗಟ್ಟಿತನವಿದೆ. ಅದನ್ನು ಗಂಗಮ್ಮನ ಮಾತುಗಳಲ್ಲಿ ಗುರುತಿಸುತ್ತಾನೆ. ಇಲ್ಲಿ ಒಂದು ಮಾದರಿಯ ಪರಕೀಯತೆಯನ್ನು ಸಾಧಿಸುವ ಬಗೆ ಅಧಿಕಾರಿಯ ಮಾತುಗಳಲ್ಲಿ ಮೂಡಿಬಂದಿದೆ. ಅಧಿಕಾರಿ ಶಿಷ್ಟ ಬದುಕಿಗೆ ಹೊಂದಿಕೊಂಡು ಬಂದದ್ದರಿಂದ ಅಂತಿಮವಾಗಿ ಶಿಷ್ಟನಾಗಿಯೇ ಇರುವುದರಿಂದ ಒಂದು ತೆರನಾದ ಪರಕೀಯತೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ಗಂಗಮ್ಮನ ಪ್ರತಿ ಮಾತಿನಲ್ಲೂ ಜೀವನ ದೃಷ್ಟಿಯನ್ನು ಶೋಧಿಸುವ ಅಧಿಕಾರಿ ಆಧುನಿಕತೆಯ ಬಗ್ಗೆ ದ್ವಂದ್ವಾತ್ಮಕ ನಿಲುವನ್ನು ಪ್ರಕಟಿಸುತ್ತಾನೆ. ಎಂದರೆ ಶಿಕ್ಷಣ ನೀಡುವ ಆಧುನಿಕತೆ ಅಧಿಕಾರಿಗೆ ಬೇಕಾಗಿದೆ ಆದರೆ ತನ್ನ ದೇಶೀಯ ಬದುಕಿನ ನಂಬಿಕೆಗಳನ್ನು ನಾಶಮಾಡುವ ಆಧುನಿಕತೆ ಬೇಡವಾಗಿದೆ. ಇವೆರಡು ನಿಲುವುಗಳನ್ನು ಈ ಕತೆಯಲ್ಲಿ ಕಾಣಬಹುದು. ಈ ಮಾದರಿಯ ಮುಖಾಮುಖಿಯ ಸಂಘರ್ಷದ ನಂತರವು ಗಂಗಮ್ಮನಿಗಾದ ತೊಂದರೆಗಳಿಗೆ ಮರುಗುವ ಮೂಲಕ ಅವಳ ಮೊಮ್ಮಗನಿಗೆ ನೌಕರಿ ಕೊಡಿಸುವುದರ ಬಗ್ಗೆ ಭರವಸೆಯನ್ನು ನೀಡುತ್ತಾನೆ. ಹೀಗೆ ಕತೆ ಮಾನವೀಯ ನೆಲೆಗಳ ಶೋಧನೆಯಲ್ಲಿ ತೊಡಗುತ್ತದೆ.

“ಒಂದು ಚಪ್ಪಲಿಯ ಪ್ರಕರಣ” ಕತೆಯು ಬಂಡವಾಳಶಾಹಿ ವ್ಯವಸ್ಥೆಗೆ ಹಿಡಿದ ಕನ್ನಡಿಯಂತೆ ತೋರುತ್ತದೆ. ಸ್ಥಳೀಯ ರೈತ ಬೆಳೆದ ಉತ್ಪನ್ನಗಳಿಗೆ ಇನ್ನೆಲ್ಲೋ ನೆರಳಿನಲ್ಲಿ ಕುಳಿತ ದಲ್ಲಾಳಿಯೊಬ್ಬ ಉತ್ಪನ್ನದ ದರವನ್ನು ನಿಗದಿಗೊಳಿಸುತ್ತಾನೆ. ಒಬ್ಬ ದಲ್ಲಾಳಿಯು ನಿಗದಿಗೊಳಿಸಿದ ಮಾಲನ್ನು ಮತ್ತೊಬ್ಬ ದಲ್ಲಾಳಿ ಮುಟ್ಟದಂತೆ ಮಾರುಕಟ್ಟೆಯ ಆಂತರಿಕ ನಿಯಮಗಳ ಹೇರಿಕೆ ಇವೆಲ್ಲಾ ಪ್ರತಿಮಾತ್ಮಕ ರೂಪವನ್ನು 'ಒಂದು ಚಪ್ಪಲಿಯ ಪ್ರಕರಣ' ನಿರೂಪಿಸುತ್ತದೆ. ಹತ್ತಿ ಬೆಳೆದ ಬಸವಣ್ಣೆಪ್ಪ ಸಾಹೇಬರಿಗೆ ಮಾತ್ರ ಮಾರಬೇಕು. ಈ ಮಾಲಿನ ದರವನ್ನು ಸಾಹೇಬ ನಿಗದಿಪಡಿಸಿದ್ದೇ ಅಂತಿಮವಾಗಿರುತ್ತದೆ. ಅತಿ ಕಡಿಮೆ ಮೊತ್ತವನ್ನು ನಿಗದಿಪಡಿಸುವ ಸಾಹೇಬ ಆ ಮಾಲನ್ನು ಮತ್ತಾರು ತೆಗೆದುಕೊಳ್ಳದಂತೆ ನೋಡಿಕೊಳ್ಳುತ್ತಾನೆ. ತನ್ನ ಮಾಲು ಅತಿ ಸಾಧಾರಣ ಮೊತ್ತಕ್ಕೆ ಬಿಕರಿಗೊಳ್ಳುವುದನ್ನು ತಾಳದೆ ದಲ್ಲಾಳಿಗೆ ಚಪ್ಪಲಿಯಲ್ಲಿ ಹೊಡೆಯುತ್ತಾನೆ. ಆರ್ಥಿಕವಾಗಿ ಸಬಲನಾಗಿರುವ ದಲ್ಲಾಳಿಯೆ ಗೆದ್ದು ಈ ತಗಾದೆಯನ್ನು ಕೋರ್ಟಿನ ಮೆಟ್ಟಿಲೇರುವಂತೆ ಮಾಡುತ್ತಾನೆ. ಕೋರ್ಟಿನಲ್ಲಿ ಇತ್ಯರ್ಥಗೊಳ್ಳದ ಈ ವಿಷಯವು ಕೊನೆಗೆ ರಾಜಿಯಲ್ಲಿ ಕೊನೆಯಾಗುತ್ತದೆ. ಇವಿಷ್ಟು ಸಂಗತಿಗಳು ಜಾಗತೀಕರಣ ಮಾರುಕಟ್ಟೆ ವ್ಯವಸ್ಥೆಯಲ್ಲಿ ದೇಶೀಯ ಕಲೆಗಳು, ಬೆಳೆಗಳು, ಕೃಷಿ ಪದ್ಧತಿಗಳು ಸಹ ಅಸ್ಥಿತ್ವವನ್ನು ಕಳೆದುಕೊಳ್ಳುತ್ತಿರುವ ರೂಪಕವಾಗಿ ತೋರುತ್ತದೆ. ಈ ಕತೆಯಲ್ಲೂ ಸಹ ಬಸವಣ್ಣೆಪ್ಪ ಸಾಹೇಬನಿಗೆ ಅಂಗಲಾಚಲು ಕಾರಣ ತನ್ನ ಮಗನನ್ನು ಕಾಲೇಜಿಗೆ ಸೇರಿಸಬೇಕು, ಅವನನ್ನು

ಸುಶಿಕ್ಷಿತನನ್ನಾಗಿ ಮಾಡಬೇಕು ಎಂಬುವ ಹಂಬಲ. ಎಂದರೆ ಶಿಕ್ಷಣ ಈ ಎಲ್ಲಾ ಕಟ್ಟಳೆಗಳಿಂದ ಬಿಡುಗಡೆಗೊಳಿಸಬಲ್ಲ ಅಸ್ತ್ರವಾಗಿ ಕಂಡುಬರುತ್ತದೆ.

"ಅಳು" ಕತೆಯು ಮನು ಬಳಿಗಾರ್ ಅವರ ಸೂಕ್ಷ್ಮ ನಿರೂಪಣೆಗಳಲ್ಲಿ ಒಂದಾಗಿದೆ. ಉತ್ತಮ ಕತೆಗಾರ ತನ್ನೊಳಗಿನ ತತ್ವಗಳಿಗೆ, ತಾನು ನಂಬಿದ ಸಿದ್ಧಾಂತಗಳಿಗೆ ಸಾಹಿತ್ಯಕ ರೂಪಗಳನ್ನು ನೀಡುವಾಗ ಈ ಮಾದರಿ ಸೂಕ್ಷ್ಮತೆಯ ಅರಿವು ಇರಬೇಕಾಗುತ್ತದೆ. ಕಾವ್ಯ, ಕತೆ, ಕಾದಂಬರಿಯಂತಹ ಯಾವುದೇ ಪ್ರಕಾರವಾದರೂ ಒಂದು ಸಂಗತಿಯನ್ನು ಸೂಕ್ಷ್ಮವಾಗಿ ಗಮನಿಸುವ ಕವಿ/ಲೇಖಕ ವಿಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಳಿಸಬಲ್ಲ ಸಾಮರ್ಥ್ಯವನ್ನು ಹೊಂದಿರುತ್ತಾನೆ. "ಅಳು" ಕತೆಯ ಮಂಜುನಾಥನ ಪಾತ್ರ ವಿಶ್ಲೇಷಣೆಯೇ ಇಂತಹ ಸೂಕ್ಷ್ಮ ಮಾದರಿಯ ಕುಸರಿ ಕೆಲಸದಿಂದ ಹೆಣೆಯಲ್ಪಟ್ಟಿದೆ. "ಗಂಗಮ್ಮನ ಜೀವನ ದೃಷ್ಟಿ" ಮತ್ತು "ಅಳು" ಕತೆಯು ಒಂದು ಮಾದರಿಯ ಸಾಮ್ಯತೆಯನ್ನು ಹೊಂದಿವೆ. ಕತೆಯ ಮೊದಲಿನಲ್ಲಿ ಗಂಗಮ್ಮ ಮತ್ತು ಅವಳ ಮೊಮ್ಮಗ ತಮ್ಮ ಊರಿನಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸಿರುತ್ತಾರೆ. ಇದೇ ರೀತಿಯಲ್ಲಿ ಅಳು ಕತೆಯಲ್ಲಿ ಮಂಜುನಾಥ ತನ್ನ ಊರಿನಿಂದ ಮೈಸೂರಿಗೆ ಶಿಕ್ಷಣದ ಸಲುವಾಗಿ ಹಾಸ್ಟೆಲ್ ಸೇರಲು ಪ್ರಯಾಣ ಬೆಳೆಸಿರುತ್ತಾನೆ. ಎಂದರೆ ದೇಶೀಯ ಬದುಕಿನ ತೊಡಕುಗಳನ್ನು ಮೀರಲು ದೇಶೀಯ ನೆಲೆಯಲ್ಲಿಯೇ ಇದ್ದಂತಹ ಪಾತ್ರಗಳು ಆಧುನಿಕತೆಯೆಡೆಗೆ ನಿಧಾನವಾಗಿ ಪ್ರಯಾಣಿಸುತ್ತಿವೆ. ಜೀವನದಲ್ಲಿ ಭದ್ರತೆಯೊದಗಿದ ನಂತರದಲ್ಲಿ ಮತ್ತೆ ತಾವು ಕಳೆದುಕೊಂಡ ದೇಶೀಯತೆಯ ಬಗ್ಗೆ ಗಾಢವಾದ ವಿಷಾದವನ್ನು ಈ ಪಾತ್ರಗಳು ಮಂಡಿಸುವುದನ್ನು ಕಾಣಬಹುದಾಗಿದೆ.

ಒಬ್ಬ ವ್ಯಕ್ತಿಯ ಅಂತರಂಗದ ನೋವು ಒತ್ತಿದರೂ ಸಹ ಕಣ್ಣಿನಲ್ಲಿ ನೀರು ಬರಲಾಗದ ಸ್ಥಿತಿಯು "ಅಳು" ಕತೆಯ ಮೂಲ ವಸ್ತು. ಆಧುನಿಕತೆಯ ಯಾಂತ್ರಿಕ ಜೀವನಕ್ಕೆ ಸಂಪೂರ್ಣವಾಗಿ ಮಾರಿಕೊಂಡ ಸ್ಥಿತಿಯನ್ನು ಸಹ ಕತೆ ಹೇಳುತ್ತದೆ. ಮಂಜುನಾಥ ತನ್ನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಹೊರಡುತ್ತಾನೆ. ತನ್ನ ಉತ್ತಮ ಪರಿಶ್ರಮ ಮತ್ತು ಶ್ರದ್ಧೆಯಿಂದಾಗಿ ಶಿಕ್ಷಣ ಪಡೆದುಕೊಂಡ ಕಾರಣ ಸರ್ಕಾರದ ಉನ್ನತ ಕೆಲಸವು ದೊರೆತು ಸುಖಕರ ಜೀವನವನ್ನು ನಡೆಸುತ್ತಾನೆ. ಹೀಗೆ ಭೋಗ ಜೀವನದಲ್ಲಿ ಮುಳುಗಿದ ಮಂಜುನಾಥ ತನ್ನ ಗ್ರಾಮದ, ಗ್ರಾಮದಲ್ಲಿ ಇದ್ದಂತಹ ತನ್ನ ತಂದೆಯ ಬಗ್ಗೆ ತಾತ್ಸಾರವನ್ನು ತಾಳುತ್ತಾನೆ. ಇವೆಲ್ಲದರ ಪರಿಣಾಮವಾಗಿ ಸಂವೇದನೆಗಳನ್ನು ಕಳೆದುಕೊಳ್ಳುತ್ತಾ, ಯಾಂತ್ರಿಕಗೊಳ್ಳುತ್ತಾ ಹೋಗುತ್ತಾನೆ. ಈ ಸಂಗತಿಗಳನ್ನು ಕತೆಗಾರ ಅತಿ ಸೂಕ್ಷ್ಮವಾಗಿ ಗುರುತಿಸುವುದು ಇಲ್ಲಿಯೆ. ಮಂಜುನಾಥನಿಗೆ ಒಂದು ದಿನ ತನ್ನ ಆಫೀಸ್ಸಿನ ಫೋನು ರಿಂಗಣಿಸಿದಾಗ ಅವನು ತನ್ನ ತಂದೆ ತೀರಿಕೊಂಡ ಕೇಳುತ್ತಾನೆ. ಈ ವಿಷಯವನ್ನು ಕೇಳಿದ ಮಂಜುನಾಥನಲ್ಲಿ ಯಾವುದೇ ರೀತಿಯ ಭಾವನೆಗಳಲ್ಲಿ ವ್ಯತ್ಯಾಸವಾಗುವುದಿಲ್ಲ. ತನ್ನ ಊರಿನವರಿಗೆ ಮುಂದಿನ ಕಾರ್ಯಕ್ಕೆ ಬೇಕಾದ ಎಲ್ಲಾ ರೀತಿಯ ತಯಾರಿಗಳನ್ನು ಮಾಡಿಕೊಳ್ಳಲು ಹೇಳಿ ಹೊರಡುತ್ತಾನೆ. ಈ ಸುದ್ದಿ ಕೇಳಿದ ಆಫೀಸ್ಸಿನ ಇತರ ವ್ಯಕ್ತಿಗಳು ಸಾಹೇಬರ ತಂದೆ ತೀರಿಕೊಂಡರಂತೆ ಎಂದು ಮರುಗುತ್ತಾರೆ.

ಆದರೆ ಈ ರೀತಿಯ ಮರುಗುವಿಕೆ, ವಿಷಾದ, ದುಃಖ ಯಾವುದು ಮಂಜುನಾಥನನ್ನು ಕಾಡುವುದಿಲ್ಲ. ಏಕೆಂದರೆ ತನ್ನ ತಂದೆಯ, ಗ್ರಾಮ್ಯದ, ದೇಶೀಯತೆಯ ಎಲ್ಲಾ ಸಂವೇದನೆಗಳಿಂದ ದೂರ ಸಾಗಿದ ಮಂಜುನಾಥ ಸಂವೇದನೆಗಳಿಲ್ಲದ ಯಾಂತ್ರಿಕ ಜಡವಸ್ತುವಿನಂತೆ ಕತೆಯಲ್ಲಿ ಪ್ರಕಟಗೊಂಡಿದ್ದಾನೆ. ಆಧುನಿಕತೆ ನೀಡುವಂತಹ ಎರಡು ಮುಖ್ಯ ಪರಿಣಾಮಗಳನ್ನು ಈ ಕತೆ ಮಂಡಿಸುತ್ತದೆ. ಶೋಷಣೆಯಿಂದ ಬಿಡುಗಡೆಗೊಳಿಸುವ ಆಧುನಿಕತೆಯು ದೇಶಿಯ ಬದುಕಿನ ವೈವಿಧ್ಯತೆಯನ್ನು ನಾಶಮಾಡುತ್ತದೆ.

"ಋಣ" ಕತೆಯು ಸಹ ಶಿಕ್ಷಣದಿಂದ ಎಂದರೆ ಆಧುನಿಕತೆಯಿಂದ ಒಂದು ಮಾದರಿಯ ಬಿಡುಗಡೆ ಸಾಧ್ಯವಿದೆ ಎಂಬುದನ್ನು ಸಾರುತ್ತದೆ. ಸೀತಾಬಾಯಿಯ ನಾಲ್ಕು ಜನ ಮಕ್ಕಳು ಅವಳನ್ನು ನೋಡಿಕೊಳ್ಳಲು ಮುಂದಾಗುವುದಿಲ್ಲ. ರೋಗ ರುಜಿನಗಳಿಂದ ಜೀವನದ ಅಂತಿಮ ಕ್ಷಣಗಳನ್ನು ಕಳೆಯುತ್ತಿರುವ ಸೀತಾಬಾಯಿ ತಾನು ಸಾಲ ಕೊಟ್ಟಿದ್ದ ಅಕ್ಕನನ್ನು ನೆನೆಸಿಕೊಳ್ಳುವ ಮೂಲಕ ಅಕ್ಕನ ಮಗ ರಮೇಶನ ಜೀವನದಲ್ಲಾದ ಬದಲಾವಣೆಯನ್ನು ಕಣ್ಣಮುಂದೆ ತಂದುಕೊಳ್ಳುತ್ತಾಳೆ. ಸೀತಾಬಾಯಿಯ ಮೊದಲ ಮಗ ಪುಣೆಗೆ ಹೋಗಿ ಜೀವನವನ್ನು ನಡೆಸುತ್ತಾನೆ. ಈತನಿಗೆ ತಾಯಿಯ ಬಗ್ಗೆ ಯಾವುದೇ ರೀತಿಯ ಕಾಳಜಿಯು ಇಲ್ಲ. ಆದರೆ ಸೀತಾಬಾಯಿಯ ಅಕ್ಕನ ಮಗ ರಮೇಶ ಸುಶಿಕ್ಷಿತನಾಗಿ ದೊಡ್ಡ ಹುದ್ದೆಯಲ್ಲಿದ್ದಾನೆ. ಸೀತಾಬಾಯಿಯನ್ನು ಕೊನೆಗಾಲದಲ್ಲಿ ಬಂದು ನೋಡುವುದಾಗಿಯೂ, ಅವಳೊಡನೆ ಮಾತಾನಾಡುವುದಾಗಿಯೂ ಪತ್ರದ ಮೂಲಕ ತಿಳಿಸುತ್ತಾನೆ. ಆದರೆ ಕೆಲಸದ ಒತ್ತಡಗಳಿಂದ ಸೀತಾಬಾಯಿಯನ್ನು ನೋಡಲು ಹೋಗುವ ಮುನ್ನವೇ ಆಕೆ ಸಾವನ್ನಪ್ಪುತ್ತಾಳೆ. ಇದರಿಂದ ಸೀತಾಬಾಯಿ ಕೊಟ್ಟ ಸಾಲ, ಆಕೆಯ ಪ್ರೀತಿ ತುಂಬಿದ ಮಾತುಗಳು, ಆಕೆ ತೋರಿದ ಕಾಳಜಿ ಎಲ್ಲವನ್ನು ರಮೇಶ ಹಿಂತಿರುಗಿಸಲು ಸಾಧ್ಯವಾಗದೆ ಹಾಗೆ ಉಳಿಯುತ್ತದೆ. ಹೀಗೆ ಋಣ ಎಂಬುದು ರಮೇಶನೊಳಗೆ ಹಾಗೆ ಉಳಿದುಹೋಗುತ್ತದೆ. ಈ ಕತೆಯು ಭಾವನೆಗಳನ್ನು ಮಂಡಿಸುವ ಮೂಲಕ ನಿರೂಪಣೆಗೊಳಿಸಿದ್ದರೂ ಸಹ ಆಧುನಿಕತೆಯ ಬಗ್ಗೆ ಇಬ್ಬಗೆಯ ಚರ್ಚೆಯನ್ನು ಮಂಡಿಸುತ್ತದೆ. ಆಧುನಿಕ ಶಿಕ್ಷಣವನ್ನು ಪಡೆದ ರಮೇಶ ಅತ್ಯುನ್ನತ ಸ್ಥಾನದಲ್ಲಿ ಇದ್ದಾನೆ. ಇದೇ ರೀತಿ ಆಧುನಿಕ ಬದುಕಿಗೆ ಒಡ್ಡಿಕೊಂಡ ಸೀತಾಬಾಯಿಯ ಮೊದಲ ಮಗ ಸಂವೇದನೆಗಳಿಲ್ಲದ ಯಾಂತ್ರಿಕ ವಸ್ತುವಾಗಿದ್ದಾನೆ. ಹೀಗೆ ಆಧುನಿಕತೆಯ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಕತೆಯು ಹಿಡಿದಿಡಲು ಪ್ರಯತ್ನಿಸುತ್ತದೆ.

"ಜೋಳದ ಬುಟ್ಟಿಯೊಳಗಿಂದ" ಕತೆಯು ಸ್ತ್ರೀವಾದಿ ದೃಷ್ಟಿಕೋನಗಳಿಂದ ಮೂಡಿಬಂದಿದೆ. ಸ್ತ್ರೀ ಎದುರಿಸುವ ಶೋಷಣೆಗಳನ್ನು ಸ್ತ್ರೀಯರೇ ಸಶಕ್ತವಾಗಿ ಅದನ್ನು ಮೆಟ್ಟಿನಿಲ್ಲುವ ಪ್ರತಿಭಟನೆಯ ಬಗೆಗಳನ್ನು ಕತೆ ನಿರೂಪಿಸುತ್ತದೆ. ದ್ಯಾಮವ್ವ, ಭದ್ರವ್ವ ಜೋಳವನ್ನು ಹಿಟ್ಟು ಮಾಡಿಸಲು ಗಿರಣಿ ಯಂತ್ರದ ಅಂಗಡಿಗೆ ಹೋಗುವಾಗ ಬಾಳಪ್ಪ ಎಂಬುವವನು ಕುಚೇಷ್ಟೆ ಮಾಡುತ್ತಾನೆ. ದ್ಯಾಮವ್ವಳಿಗೆ ಒಂದು ದಿನ ಮಾತಾನಾಡಿಸುವುದು, ಕೈತಾಗಿಸುವುದು ಹೀಗೆ ಮುಂದುವರೆಯುವುದನ್ನು ಸಹಿಸಲಾಗದೆ, ತನ್ನ ಗಂಡನಿಗೂ ಈ ವಿಷಯವನ್ನು ಹೇಳಲಾಗದೇ ತಾನೆ ತನಗೆದುರಾದ ಸಂಕಷ್ಟಗಳಿಗೆ ಉತ್ತರ ಹುಡುಕಿಕೊಳ್ಳುವ ಪ್ರತಿಜ್ಞೆ

ಮಾಡುತ್ತಾಳೆ. ಗಿರಣಿ ಅಂಗಡಿಯ ಬಳಿ ಮಾರ್ಮಿಕವಾಗಿ ಮಾತಾಡಿದ ಬಾಳಪ್ಪನನ್ನು ದ್ಯಾಮವ್ವ ಮತ್ತು ಭದ್ರವ್ವ ಹಿಡಿದು ನಿಲ್ಲಿಸಿ ಬೈಯುತ್ತಾರೆ. ಒಂದೆರಡು ಏಟುಗಳು ಬಿದ್ದಂತೆ ಅವನು ನೆಟ್ಟಗಾಗುತ್ತಾನೆ. ಒಂದು ಸಾಂಪ್ರದಾಯಿಕ ಚೌಕಟ್ಟಿನೊಳಗೆ ಇದ್ದಂತಹ ಸ್ತ್ರೀ ಹೀಗೆ ಇರಬೇಕು ಎಂಬುದಾಗಿ ನಿರ್ಣಯಿಸಿಬಿಡಲಾಗುತ್ತದೆ. ಈ ಮಾದರಿ ಶೋಷಣೆಯ ನಂತರದಲ್ಲೂ ಅವಳು ಎಲ್ಲವನ್ನು ಸಹಿಸುವುದೇ ಆದರೆ ಅವಳಿಗೆ ಸ್ವತಂತ್ರವೆಂಬುದು ಇನ್ನಿಲ್ಲದ ಮಾತು ಎನ್ನಬಹುದು. ಈ ಕತೆಯ ದ್ಯಾಮವ್ವ ಮತ್ತು ಭದ್ರವ್ವ ಈ ಸಂಪ್ರದಾಯದ ಚೌಕಟ್ಟನ್ನು ಮೀರಿ ಶೋಷಣೆಯ ವಿರುದ್ಧ ಪ್ರತಿಭಟಿಸುವ ನೆಲೆಯನ್ನು ಕಾಣಬಹುದಾಗಿದೆ. ಈ ಕತೆಯಲ್ಲಿಯೂ ಸಹ ಆಧುನಿಕತೆಯನ್ನು ಕೆಡುಕಿನ ಸಂಗತಿಯಾಗಿ ಕಾಣಲಾಗಿದೆ. ಊರಿನಲ್ಲಿ ಮೊದಲು ಯಾವುದೇ ಗಿರಣಿ ಯಂತ್ರಗಳು ಇರಲಿಲ್ಲ. ಮನೆಯಲ್ಲಿಯೆ ಹಿಟ್ಟು ಮಾಡುವ ಕಲ್ಲು ಇದ್ದದರಿಂದ ಗಿರಣಿ ಯಂತ್ರಗಳ ಅವಶ್ಯಕತೆ ಇರಲಿಲ್ಲ. ಆದರೆ ಊರಿನಲ್ಲಿ ಕೃಷ್ಣಪ್ಪ ಮತ್ತು ಚನ್ನಪ್ಪ ಎಂಬುವವರು ಎರಡು ಗಿರಣಿ ಯಂತ್ರಗಳನ್ನು ಊರಿಗೆ ತರುತ್ತಾರೆ. ಎಂದರೆ ಆಧುನಿಕತೆಯ ಯಂತ್ರಗಳು ಅಧಿಕೃತವಾಗಿ ದೇಶೀಯ ನೆಲೆಯಲ್ಲಿ ಪ್ರತಿಷ್ಠಾಪನೆಗೊಂಡಂತಾಗುತ್ತದೆ. ಇದರ ನಂತರ ಆ ಗಿರಣಿ ಯಂತ್ರದ ಅವಲಂಬನೆ ಹೆಚ್ಚಿದಂತೆ ಊರಿನ ಹಲವು ಗಂಡಸರು ಮಿಕ್ಕ ಕೆಲಸವನ್ನು ಬಿಟ್ಟು ಅಲ್ಲಿ ಬಂದು ಕುಳಿತು ಸಲ್ಲದ ಮಾತಾಡುವ, ಕುಚೇಷ್ಟೆಗಿಳಿಯುವ ಪರಿಪಾಟಲು ಬಂದಿತು ಎಂಬುದಾಗಿ ಕತೆಯೆ ಗುರುತಿಸುತ್ತದೆ. ಇದರ ಮೂಲಕ ಆಧುನಿಕತೆಯ ಪರಿಣಾಮ ಹಾಗೂ ಸ್ತ್ರೀ ಪ್ರತಿಭಟನೆಯ ನೆಲೆಗಳನ್ನು ಶಕ್ತವಾಗಿ ಕತೆ ನಿರೂಪಿಸುತ್ತದೆ.

ಮನು ಬಳಿಗಾರ್ ಅವರ ಇವಿಷ್ಟು ಕತೆಗಳಲ್ಲಿ ಆಧುನಿಕತೆಯ ಭಿನ್ನ ಪರಿಣಾಮಗಳ ನೆಲೆಗಳು, ಸಂಪ್ರದಾಯದ ತೊಡಕುಗಳು, ಮಾನವ ಸಂಬಂಧಗಳ ಗಾಢತೆ, ಗ್ರಾಮನಗರದ ಸಂಘರ್ಷಗಳ ಬಗೆಯನ್ನು ಅಭಿವ್ಯಕ್ತಿಸಿದ್ದಾರೆ. ಗಂಗಮ್ಮನ ಜೀವನ ದೃಷ್ಟಿ ಕತೆಯ ಗಂಗಮ್ಮನ ಮೂಲಕ, ಒಂದು ಚಪ್ಪಲಿಯ ಪ್ರಕರಣ ಕತೆಯ ಬಸವಣೆಪ್ಪನ ಮೂಲಕ, ಅಳು ಕತೆಯ ಮಂಜುನಾಥನ ಮೂಲಕ, ಋಣ ಕತೆಯ ಸೀತಾಬಾಯಿಯ ಮೂಲಕ ಮಾನವೀಯ ನೆಲೆಗಳ ಶೋಧನೆಯನ್ನು ಮನು ಬಳಿಗಾರ್ ಅವರ ಕತೆಗಳು ಶೋಧಿಸುತ್ತವೆ. ಆಧುನಿಕತೆ, ಗ್ರಾಮ-ನಗರ, ಸಂಪ್ರದಾಯಗಳ ಸಂಘರ್ಷದ ನಡುವೆಯು ಅಂತಿಮವಾಗಿ ಮಾನವೀಯ ತುಡಿತಗಳು, ಸಂವೇದನೆಯ ನೆಲೆಗಳಲ್ಲಿ ಕತೆಗಳು ಅಂತ್ಯಗೊಂಡಿರುವುದನ್ನು ಕಾಣಬಹುದಾಗಿದೆ. ಹೀಗೆ ಮನು ಬಳಿಗಾರ್ ಅವರ ಕತೆಗಳು ವಿಶಿಷ್ಟವಾಗಿ ಗುರುತಿಸಿಕೊಳ್ಳುತ್ತವೆ.

❖

# ಮನು ಬಳಿಗಾರ್ ಅವರ ಕಥೆಗಳಲ್ಲಿ ಸ್ತ್ರೀ ಚಿತ್ರಣ

ಡಾ. ಸಿದ್ದಪ್ಪ ಬೆಳಘಟ್ಟ

ಮನು ಬಳಿಗಾರ್ ಅವರು ತಮ್ಮ ಕಥೆಗಳಲ್ಲಿ ಚಿತ್ರಿಸಿರುವುದು ಆಧುನಿಕ ಮಹಿಳೆಯನ್ನಾದರೂ ಮಹಿಳೆಯನ್ನು 'ಗ್ರಾಮೀಣ ಮಹಿಳೆ', 'ನಾಗರೀಕ ಮಹಿಳೆ' 'ಆಧುನಿಕ ಮಹಿಳೆ' ಎಂಬ ಪ್ರಕಾರಗಳಲ್ಲಿ ಸ್ತ್ರೀ ಚಿತ್ರಣವನ್ನು ಕಥೆಗಳಲ್ಲಿ ಕಾಣಬಹುದು. ಸ್ತ್ರೀ ಶತಶತಮಾನಗಳಿಂದಲೂ ಶೋಷಣೆಗೊಳಗಾದವಳೂ, ದಬ್ಬಾಳಿಕೆ, ದೌರ್ಜನ್ಯಕ್ಕೊಳಗಾಗಿರುವವಳೆಂದು ಕೃತಿಗಳಲ್ಲಿ ವ್ಯಕ್ತವಾಗಿದೆ. ಆದರೆ ಬಳಿಗಾರ್ ಅವರು ಚಿತ್ರಿಸಿರುವುದು ಆಧುನಿಕ ಮಹಿಳೆಯನ್ನಾದರೂ 'ಅಕ್ಷರಸ್ಥ ಮಹಿಳೆ' ಮತ್ತು 'ಅನಕ್ಷರಸ್ಥ ಮಹಿಳೆ'ಯರನ್ನು ಏಕಕಾಲಕ್ಕೆ ಮುಖಾ-ಮುಖಿಯನ್ನಾಗಿಸುತ್ತಾರೆ.

ದಲಿತ ಬಂಡಾಯ ಘಟ್ಟದ ನಂತರ ಕಾಣಿಸಿಕೊಳ್ಳುವ ಸಾಹಿತ್ಯದ ಘಟ್ಟವೇ ಸ್ತ್ರೀವಾದ. ಸ್ತ್ರೀಯನ್ನು ವಸ್ತುವಾಗಿರಿಸಿಕೊಂಡು ಅನೇಕ ಸ್ತ್ರೀವಾದಿ ಲೇಖಕಿಯರು ಸಾಹಿತ್ಯ ಕೃತಿಗಳಲ್ಲಿ ಸ್ತ್ರೀ ಸಂವೇದನೆಯನ್ನು ತರುತ್ತಾರೆ. ಹೆಣ್ಣು ಅಬಲೆ, ಮೂಕಳು ಎಂಬಂತಹ ಮಾತುಗಳೇ ವಿರುದ್ಧವೆಂಬಂತೆ ಮನು ಬಳಿಗಾರ್ ಅವರ ಒಂದೆರಡು ಕಥೆಗಳಲ್ಲಿ ಪಾತ್ರಗಳು ವ್ಯಕ್ತಿತ್ವಗಳ ಮೂಲಕ ಚಿತ್ರಿತವಾಗಿರುವುದು ನಮಗೆ ಗೋಚರವಾಗುವ ಅಂಶವಾಗಿದೆ. ನಿರಂಜನರ 'ಕೊನೆಯ ಗಿರಾಕಿ'ಯಲ್ಲಿ ಬರುವ ಸ್ತ್ರೀ ಪಾತ್ರಕ್ಕೂ, ಬಳಿಗಾರ್ 'ಕಥಾವಸ್ತು', ಕಥೆಯಲ್ಲಿನ ಸ್ತ್ರೀಪಾತ್ರಕ್ಕೂ ಇರುವ ವ್ಯತ್ಯಾಸಗಳನ್ನು ಗಮನಿಸಬಹುದು. ಆದರೆ ಬಳಿಗಾರ್ ಅವರ 'ಕಥಾವಸ್ತು' ಮತ್ತು 'ಎರಡು ದಾರಿ'ಯಲ್ಲಿ ಬರುವ ಸ್ತ್ರೀಪಾತ್ರಗಳನ್ನು ಆಧುನಿಕ ಸಂದರ್ಭದಲ್ಲಿ ನಿಂತು ಪರಂಪರೆ ಮತ್ತು ಆಧುನಿಕ ಸಂದರ್ಭವನ್ನು ಮುಖಾಮುಖಿ ಮಾಡುತ್ತಾರೆ.

ಶತಶತಮಾನಗಳಿಂದ ದಬ್ಬಾಳಿಕೆಗೊಳಗಾದ ಹೆಣ್ಣು ಅದರಿಂದ ಕ್ರೋಧಗೊಂಡು ಈ ರೀತಿ ವರ್ತಿಸುತ್ತಿರಬಹುದೇ ಎಂಬ ಪ್ರಶ್ನೆಗಳು ಓದುಗರನ್ನು ಕಾಡಿಸದೆ ಇರಲಾರವು. ಕೇವಲ ಬೆರಳೆಣಿಕೆಯಷ್ಟು ಕಥೆಗಳು ಇಂತಹ ವ್ಯಕ್ತಿತ್ವಗಳನ್ನೊಳಗೊಂಡಿದ್ದು ಇನ್ನು ಹಲವು ಕಥೆಗಳಲ್ಲಿ ಸ್ತ್ರೀ ಸಂವೇದನೆಯನ್ನೊಳಗೊಂಡಂತೆ ಕಥೆಗಳನ್ನು ಬಳಿಗಾರ್ ಅವರು ಕಟ್ಟಿಕೊಡುತ್ತಾರೆ. ಸ್ತ್ರೀಗೆ ಒಂದು ವಿಶೇಷ ಸ್ಥಾನವನ್ನು ಕಥೆಗಳಲ್ಲಿ ಕಲ್ಪಿಸುತ್ತಾರೆ. ಆದರೂ ಒಂದೆರಡು ಕಥೆಗಳಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರು ಮೇಲುಗೈ ಸಾಧಿಸುವುದನ್ನು ಬಳಿಗಾರರು ಕಥೆಗಳಲ್ಲಿ ಕಟ್ಟಿಕೊಡುತ್ತಾರೆ. ಇದರಿಂದ ಹೆಣ್ಣು ಅಬಲೆ, ಮೂಕಳಲ್ಲ, ಅವಳಿಗೆ ಮಾತು ಬರುತ್ತದೆ. ಪ್ರತಿಭಟಿಸುವ ಸಾಮರ್ಥ್ಯವಿದೆ ಎಂಬುದನ್ನು ಬಳಿಗಾರ್ ಅವರು ವಾಸ್ತವಕ್ಕೆ ಮುಖಾಮುಖಿಯಾಗಿ ಕಟ್ಟಿದ್ದಾರೆ.

ಮನು ಬಳಿಗಾರ್ ಅವರ ಕಥೆಗಳು ಸ್ತ್ರೀ ಸಂವೇದನೆಯನ್ನೊಳಗೊಂಡು ಚಿತ್ರಿತವಾಗಿವೆ. ಕಥೆಗಳು ಒಂದಕ್ಕಿಂತ ಒಂದು ಭಿನ್ನವಾಗಿವೆ. ಈ ಹಿನ್ನೆಲೆಯಲ್ಲಿ ಚರ್ಚೆಗೊಳಪಡುವ ಕಥೆಗಳಲ್ಲಿ ಪ್ರಮುಖವಾದವುಗಳೆಂದರೆ

‘ಗಂಗಮ್ಮನ ಜೀವನ ದೃಷ್ಟಿ', ‘ಕಥಾವಸ್ತು', ‘ಮುತ್ತೈದೆ', ‘ಎರಡು ದಾರಿ', ‘ಋಣ', ‘ಜೋಳದ ಬುಟ್ಟಿಯೊಳಗಿಂದ' ಇವೆಲ್ಲ ಕಥೆಗಳು ಒಂದಕ್ಕಿಂತ ಒಂದು ಸ್ವರೂಪದಲ್ಲಿ ಭಿನ್ನವಾಗಿವೆ. ಇಲ್ಲಿನ ಕಥೆಗಳು ಹೆಣ್ಣಿಗೆ ಹೆಣ್ಣೆ ಶತ್ರು ಎಂಬಂತೆ ಕಂಡು ಬಂದಿವೆ. ಕೆಲವು ಕಥೆಗಳು ಸ್ತ್ರೀಸಂವೇದನೆಯನ್ನೊಳಗೊಂಡು ಯಾರ ಆಶ್ರಯವನ್ನು ಬಯಸದೆ ಒಂಟಿಯಾಗಿ ಜೀವನ ಸಾಗಿಸುವುದು ಕಥೆಗಳಲ್ಲಿ ಬಿಂಬಿತವಾಗುತ್ತದೆ ಮತ್ತು ಕೆಲವು ಕಥೆಗಳು ಪುರುಷ ವ್ಯವಸ್ಥೆಯನ್ನೆ ದಿಕ್ಕರಿಸಿ ತುಳಿಯುವ ಪ್ರಯತ್ನ ಮಾಡಿವೆಯೇನೋ ಎಂಬಂತೆ ಕಂಡುಬರುತ್ತವೆ. ಸ್ತ್ರೀ ಪ್ರಧಾನ ವ್ಯವಸ್ಥೆಯನ್ನು ನಿರ್ಮಿಸುವುದಷ್ಟೇ ಅಲ್ಲದೆ ಸ್ತ್ರೀಯರ ಕೈಗೊಂಬೆಗಳಾಗಿ ಪುರುಷರು ಕಂಡುಬರುವುದು ಬಳಿಗಾರ್ ಅವರ ಒಂದೆರಡು ಕಥೆಗಳ ಮೂಲಕ ಗೋಚರವಾಗುತ್ತದೆ.

ಶತಶತಮಾನಗಳಿಂದಲೂ ತುಳಿತಕ್ಕೊಳಗಾದ ಹೆಣ್ಣು ದೌರ್ಜನ್ಯಕ್ಕೊಳಪಟ್ಟು ಶೋಷಣೆಯೆಂಬ ಕಿಡಿ ಬೆಂಕಿಯಿಂದ ಕ್ರೋಧಗೊಂಡು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಪ್ರತಿಭಟನಾತ್ಮಕ ಧ್ವನಿಯ ಕಿಚ್ಚು ಹಾಯಿಸುತ್ತಿದ್ದಾರೇನೋ ಎಂಬಂತೆ ಓದುಗರಿಗೆ ಭಾಸವಾಗುತ್ತದೆ. ಅಲ್ಲದೆ ಪರಂಪರೆಯಿಂದಲೂ ನಾಲ್ಕು ಗೋಡೆಗೆ ಮಾತ್ರ ಸೀಮಿತವಾಗಿದ್ದ ಹೆಣ್ಣಿನ ಜೀವನ ಇಂದು ಸಡಿಲಗೊಂಡಾಗ ಅದರಿಂದ ಹೊರಬಂದು ರೆಕ್ಕೆ ಬಿಚ್ಚಿ ಹಾರತೊಡಗಿದರು. ಅಕ್ಷರವೆಂಬ ಖಡ್ಗವನ್ನು ಹಿಡಿದು ಆಧುನಿಕ ಸಂದರ್ಭದಲ್ಲಿ ಎಲ್ಲಾ ರಂಗಗಳಲ್ಲೂ ಹೆಸರು ಮಾಡಿರುವುದಷ್ಟೇ ಅಲ್ಲದೆ ಮೇಲುಗೈ ಸಾಧಿಸಿದ್ದಾರೆ. ಅಂದಿನ ಮತ್ತು ಇಂದಿನ ಸ್ತ್ರೀಯರ ಸ್ಥಿತಿಯನ್ನು ನೋಡುವುದಾದರೆ ಇಂದಿನ ಸ್ಥಿತಿ ಸುಧಾರಿಸಿದೆ ಎಂದೇ ಹೇಳಬಹುದು. ಪ್ರಸ್ತುತ ಸಂದರ್ಭದಲ್ಲಿ ಕೆಲವೊಂದು ಕಡೆ ಹೆಣ್ಣಿಗೆ ಅನ್ಯಾಯ, ಶೋಷಣೆ, ದೌರ್ಜನ್ಯ ಆಗುತ್ತಿದ್ದರೂ ಇಂದು ಅದು ಕಡಿಮೆ ಎಂಬ ತೀರ್ಮಾನಕ್ಕೆ ಬರಬಹುದು.

ಸ್ತ್ರೀ ಅಬಲೆಯಲ್ಲ ಸಬಲೆ ಎಂಬಂತಹ ಅಂಶವನ್ನು ಬಳಿಗಾರ್ ಅವರ ಕಥೆಗಳಲ್ಲಿ ಒಂದೆರಡು ಕಥೆಗಳು ಸಾಬೀತುಪಡಿಸುತ್ತವೆ. ಸ್ತ್ರೀವಾದಿ ಹಿನ್ನೆಲೆಯಲ್ಲಿ ಮೂಡಿಬಂದಿರುವ ಕಥೆಗಳಲ್ಲಿ ಸ್ತ್ರೀ ಕೇಂದ್ರಪಾತ್ರವಾಗಿ ಕಂಡುಬರುತ್ತಾಳೆ. “ಗಂಗಮ್ಮನ ಜೀವನ ದೃಷ್ಟಿ” ಕಥೆಯಲ್ಲಿನ ಕೇಂದ್ರ ಪಾತ್ರ ಗಂಗಮ್ಮ, ಶೀರ್ಷಿಕೆಯೇ ಸ್ತ್ರೀಕೇಂದ್ರವಾಗಿದೆ. ಗಂಗಮ್ಮ ಮತ್ತು ಅವಳು ಕಟ್ಟಿಕೊಂಡ ಬದುಕಿನ ಸ್ವರೂಪದ ಅನಾವರಣವನ್ನು ಕಥೆಗಾರರು ಮಾಡಿದ್ದಾರೆ. ಗ್ರಾಮೀಣ ಮಹಿಳೆಯಾದ ಗಂಗಮ್ಮನ ಬದುಕನ್ನೊಳಗೊಂಡ ಕಥೆಯು ನಾಲ್ಕು ಪುಟಗಳಲ್ಲಿ ತನ್ನ ಕಥಾ ಹಂದರವನ್ನು ತೆರೆದುಕೊಳ್ಳುತ್ತದೆ. ಗ್ರಾಮೀಣ ನೆಲೆಯಲ್ಲಿನ ಜೀವಂತ ಪಾತ್ರಗಳನ್ನು ವಾಸ್ತವ ನೆಲೆಯಲ್ಲಿ ನಿಂತು ಕಥೆಗಾರರು ಕಥೆಯನ್ನು ಚಿತ್ರಿಸಿದ್ದಾರೆ.

ಗಂಗಮ್ಮ ತನ್ನ ಗಂಡ ನಿಂಗಪ್ಪಜ್ಜ ಸತ್ತು ವಿಧವೆಯಾದವಳು. ಗಂಡ ಇದ್ದಾಗ ಬದುಕಿದ ರೀತಿ ಮತ್ತು ಗಂಡ ಸತ್ತ ನಂತರ ವಿಧವೆಯಾಗಿ ಬದುಕಿದ ರೀತಿ ಓದುಗರ ಗಮನವನ್ನು ಸೆಳೆಯುವಂತೆ ಕಥೆಗಾರರು ಚಿತ್ರಿಸಿದ್ದಾರೆ. ಈ ಕಥೆಯು ಗಂಗಮ್ಮ ಮತ್ತು ಕಥೆಗಾರರು ಮುಖಾಮುಖಿಯಾದ ಒಂದು ಸಂದರ್ಭದ ಕಥೆಯಾಗಿದ್ದು ಆಧುನಿಕ ಸಂದರ್ಭಕ್ಕೆ ಹಿಡಿದ ಕನ್ನಡಿಯಂತಿದೆ. ಪ್ರಸ್ತುತ ಸಂದರ್ಭದಲ್ಲಿ ಮಗನಿಗೆ

ಮದುವೆಯಾಗಿ ಹೆಂಡತಿ ಬಂದಾಕ್ಷಣಕ್ಕೆ ಹೆತ್ತು ಹೊತ್ತು ಸಾಕಿದ ತಂದೆ ತಾಯಿಗಳನ್ನು ಸಾಕದೆ ವಯಸ್ಸಾದವರನ್ನು ಬೇರೆಯಾಗಿರಿಸುವುದು ವಾಸ್ತವಾಂಶವಾಗಿದೆ. ಗಂಡನಿದ್ದಾಗ ಗಂಗಮ್ಮನ ಬದುಕಿನ ಸ್ಥಿತಿಯನ್ನು ವಿವರಿಸುತ್ತಾರೆ. ಅವಳ ಮತ್ತು ಗಂಡನ ನಡುವಿನ ಸಹಬಾಳ್ವೆಯನ್ನು ಕಥೆಗಾರರು ವ್ಯಕ್ತಪಡಿಸುತ್ತಾರೆ.

ವಿಧವೆಯಾದ ಗಂಗಮ್ಮ ಮತ್ತು ಅವಳ ಮಗಳು ಸೀಮವ್ವ, ಗಂಗಮ್ಮ ಗಂಡ ಸತ್ತು ವಿಧವೆಯಾದರೆ, ಸೀಮವ್ವನ ಗಂಡ ಹೆಂಡತಿಯನ್ನು ಬಿಟ್ಟು ಓಡಿ ಹೋಗಿದ್ದನು. ತನ್ನ ತಾಯಿಗೆ ಸೀಮವ್ವ ಗಂಟು ಬೀಳುತ್ತಾಳೆ. ಇವಳ ಮಗನೇ ಗಂಗಮ್ಮನ ಮೊಮ್ಮಗ. ಅವನಿಗೆ ನೌಕರಿ ಕೊಡಿಸುವ ಸಲುವಾಗಿ ಕಥೆಗಾರರನ್ನು ಭೇಟಿಯಾಗಲು ಗಂಗಮ್ಮ ಬರುತ್ತಾಳೆ. ಗಂಗಮ್ಮನ ಮಗ ಮದುವೆ ಮಾಡಿಕೊಂಡು ತನ್ನ ತಾಯಿಯನ್ನು ತೊರೆದು ಬೇರೆ ಸಂಸಾರ ನಡೆಸುತ್ತಿರುತ್ತಾನೆ. ಇಲ್ಲಿ ಕರುಳ ಬಳ್ಳಿಗೆ ಯಾವುದೇ ಸಂಬಂಧವಿಲ್ಲವೆಂಬಂತೆ ತೋರುತ್ತದೆ. ಗಂಗಮ್ಮನಲ್ಲಿ ದುಃಖ ಸಂವೇದನೆ ಇದೆ. ಆದರೆ ಅದನ್ನು ತೋರದೆ ಬೇರೆಯಿದ್ದರೆ ಸಂತೋಷದಿಂದಿರಬಹುದೆಂದು ಹೇಳುತ್ತಾಳೆ. ತನ್ನ ಅಳಲನ್ನು ತೋಡಿಕೊಳ್ಳದೆ ಪ್ರೀತಿ, ಪ್ರೇಮ, ವಾತ್ಸಲ್ಯಗಳ ಬಗೆಗೆ ಮಾತನಾಡುತ್ತಾಳೆ. ಇದರಿಂದ ನಮಗೆ ಗೋಚರಿಸುವುದು ಹೆಣ್ಣಿನಲ್ಲಿನ ದಯಾಪರತೆ, ದೀನತೆ, ತಾಳ್ಮೆ ಮತ್ತು ಸಹನಶೀಲತೆ, ಇದನ್ನು ಗಂಗಮ್ಮನ ಪಾತ್ರದಲ್ಲಿ ಕಥೆಗಾರರು ನೈಜವಾಗಿ ವ್ಯಕ್ತಪಡಿಸಿದ್ದಾರೆ.

ತನ್ನ ಮಗ ತನ್ನನ್ನು ಬೇರೆ ಇರಿಸಿದರೂ ಗಂಗಮ್ಮ ಮಗನ ಬಗೆಗೆ ಅಪಾರ ಪ್ರೀತಿಯನ್ನು ಇಟ್ಟುಕೊಂಡಿದ್ದಾಳೆ. ಎಷ್ಟಾದರೂ ಕರುಳ ಬಳ್ಳಿಯಲ್ಲವೆ. ಅಲ್ಲದೆ ಮಗನನ್ನು ಶ್ರೀರಾಮಚಂದ್ರನೆಂದು ಹೇಳಿ ವಾತ್ಸಲ್ಯವನ್ನು ಮೆರೆಯುತ್ತಾಳೆ. ಹೆಣ್ಣು ತ್ಯಾಗಮಯಿ. ಭಾವನಾಜೀವಿ, ಅಬಲೆ ಎಂಬಂತಹ ಅಂಶಗಳು ಕೇಂದ್ರಪಾತ್ರವಾದ ಗಂಗಮ್ಮನಲ್ಲಿ ಅಡಕವಾಗಿವೆ. ಕಥಾಪಾತ್ರವಾದ ಗಂಗಮ್ಮ ಆಧುನಿಕ ಸಮಾಜಕ್ಕೆ ಆದರ್ಶಪ್ರಾಯಳಾಗುತ್ತಾಳೆ. ಸ್ವಲ್ಪ ಕಾಲದ ನಂತರ ಗಂಗಮ್ಮನ ಮಗಳು ಬಾವಿ ಹಾರಿಕೊಂಡು ಸತ್ತಳು. ಅವಾಗಿನಿಂದ ಆಗ ಮಗಳು ಎಲ್ಲಿ ಹಾಸಿಗೆಯನ್ನು ಹಿಡಿದ ಗಂಗಮ್ಮ ಊರ ಹಿರಿಯರನ್ನೆಲ್ಲ ಕರೆಸಿ ಒಂದು ಉಯಿಲನ್ನು ಬರೆಸುತ್ತಾಳೆ. ಅದೇನೆಂದರೆ ಅವಳ ಮೂರು ಎಕರೆ ಹೊಲ ಊರಿಗೆ ಮಂಜೂರಾದ ಸರ್ಕಾರಿ ಹೈಸ್ಕೂಲಿಗೆ ದಾನವಾಗಿ ಕೊಡುತ್ತಾಳೆ. ಹಿರಿಯರು, "ನೋಡವ್ವಾ ಇನ್ನೊಮ್ಮೆ ಇಚಾರ ಮಾಡು ಅಂದ್ರೆ ಯೋಚನೆ ಮಾಡು ಅಂದಿದ್ದಕ್ಕೆ ಅದನ್ನ ಇಟಗೊಂಡು ಏನ್ಮಾಡೋದೈತಿ. ಮಕ್ಕಳಿಗೆ ಹಂಚಿದ್ರೂ ಒಂದೊಂದು ಎಕರೆ ಬರೋಂಗಿಲ್ಲ. ಅವರು ಕೂಲಿನಾಲಿ ಮಾಡೋದು ತಪ್ಪೋದಿಲ್ಲವೆಂದು ಹೇಳುತ್ತಾಳೆ. ಕಥೆಯ ಪ್ರಾರಂಭದಲ್ಲಿ ಒಬ್ಬ ಸಾಮಾನ್ಯ ಸ್ತ್ರೀಯಾಗಿದ್ದ ಗಂಗಮ್ಮ ಕಥೆಯ ಕೊನೆಗೆ ತ್ಯಾಗಿಯಾಗಿ ಆಕಾಶದೆತ್ತರಕ್ಕೆ ಬೆಳೆದು ನೈಜ ಸ್ವರೂಪದ ಆದರ್ಶಪ್ರಾಯಳಾಗುತ್ತಾಳೆ. ಇಲ್ಲಿ ಗಂಗಮ್ಮ ಮತ್ತು ಸೀಮವ್ವ ಪಾತ್ರಗಳೆರಡೂ ಸಂವೇದನೆಯನ್ನೊಳಗೊಂಡ ಸ್ತ್ರೀ ಪಾತ್ರಗಳಾಗಿವೆ. ವಾಸ್ತವಾಂಶಗಳನ್ನು ಬಳಿಗಾರ್ ಅವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆಂದರೂ ತಪ್ಪಾಗಲಾರದು.

“ಕಥಾವಸ್ತು” ಕಥೆಯಲ್ಲಿನ ರೇಷ್ಮಾ ಗಂಗಮ್ಮನ ಪಾತ್ರಕ್ಕಿಂತಲೂ ಭಿನ್ನವಾಗಿ ಕಂಡುಬರುತ್ತಾಳೆ. ಗಂಗಮ್ಮನ ವ್ಯಕ್ತಿತ್ವಕ್ಕೂ ರೇಷ್ಮಾಳ ವ್ಯಕ್ತಿತ್ವಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಕಥೆಯ ರೇಷ್ಮಾ ಆಧುನಿಕ ಮಹಿಳೆಯಾಗಿ ಕಂಡುಬರುತ್ತಾಳೆ. ರೇಷ್ಮಾಳ ಗಂಡ ಸುಧೀರ. ದಾಂಪತ್ಯ ಜೀವನದಲ್ಲಿ ಗಂಡ ಮತ್ತು ಹೆಂಡತಿಯ ನಡುವಿನ ವೈರುಧ್ಯವನ್ನು, ವಿರಸವನ್ನೊಳಗೊಂಡ ಕಥೆಯಾಗಿದೆ. ಆಧುನಿಕ ಸಂದರ್ಭಕ್ಕೆ ಹಿಡಿದ ಕನ್ನಡಿಯಂತಿದೆ ಕಥೆ. ಇದೊಂದು ದುರಂತದ ಕಥೆಯೆಂದರೂ ತಪ್ಪಾಗಲಾರದು ರೇಷ್ಮಾ ಹಠದ ಸ್ವಭಾವದವಳು. ಹೆಣ್ಣು ವ್ಯಕ್ತಿತ್ವದ ನಾನಾ ಮುಖಗಳನ್ನು ರೇಷ್ಮ ಪಾತ್ರದ ಮೂಲಕ ಕಥೆಗಾರರು ಪರಿಚಯಿಸುತ್ತಾರೆ. ಕಥೆಯ ಕೇಂದ್ರಪಾತ್ರ ರೇಷ್ಮಾ, ಕಥೆಯು ಕಥೆಗಾರರು ಮತ್ತು ರೇಷ್ಮಾಳ ನಡುವಿನ ಸಂಭಾಷಣೆಯೊಂದಿಗೆ ಪ್ರಾರಂಭವಾಗುತ್ತದೆ. ರೇಷ್ಮಾಳ ವ್ಯಕ್ತಿತ್ವ ಯೋಚಿಸಿದಷ್ಟು ಕ್ಲಿಷ್ಟವಾಗುವ, ಬಿಡಿಸದಷ್ಟೂ ಕಗ್ಗಂಟಾಗುವ ವಿಕ್ಷಿಪ್ತವ್ಯಕ್ತಿತ್ವ. ಎದುರಿನವರ ಸೋಲಿನಿಂದಲೇ ಜೀವಶಕ್ತಿ ಪಡೆದು, ಎದುರಿನವರು ಸೋತರೆ ಸಾಲದು, ಸೋಲನ್ನು ಒಪ್ಪಿಕೊಳ್ಳಬೇಕು. ಇಂತಹ ವ್ಯಕ್ತಿತ್ವ ರೇಷ್ಮಾಳದು. ಆದರೆ ಸುಧೀರ ಮೃದು ಸ್ವಭಾವದವನು ಸೌಮ್ಯ ಗುಣ ಹೊಂದಿರುವಂತಹವನು. ರೇಷ್ಮಾಳಲ್ಲಿ ತನ್ನ ತಾಯಿ ಮತ್ತು ಅಜ್ಜಿಯನ್ನು ಕಾಣಲು ಬಯಸುತ್ತಾನೆ. ರೇಷ್ಮಾಳ ಚುಚ್ಚುಮಾತು, ಅಣುಕು ನುಡಿಗಳು ಮಿತಿಮೀರಿದಾಗ ತಾನು ಬಯಸಿದ್ದು ಸಿಕ್ಕದಿದ್ದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸುಧೀರನ ಆತ್ಮಹತ್ಯೆ ಓದುಗರ ಅಂತರಾಳವನ್ನು ಕಲಕುವಂತೆ ವ್ಯಕ್ತವಾಗಿದೆ. ಗಂಡ ಹೆಂಡತಿಯರ ನಡುವೆ ಹೊಂದಾಣಿಕೆಯ ಮನೋಭಾವವಿಲ್ಲದಿದ್ದಾಗ ಯೋಚಿಸುವುದು ಒಂದೇ ಮಾರ್ಗ. ಅದು ಆತ್ಮಹತ್ಯೆಯ ಮಾರ್ಗ. ಈ ಸಂದರ್ಭದಲ್ಲಿ ನೆನಪಿಗೆ ಬರುವ ಬೇಂದ್ರೆಯವರ ಸಾಲೆಂದರೆ.

“ಸರಸವೇ ಜನನ
ವಿರಸವೇ ಮರಣ
ಸಮರಸವೇ ಜೀವನ” ?

ರೇಷ್ಮಾಳ ವ್ಯಕ್ತಿತ್ವ ಸಮಾಜದ ಎಲ್ಲ ಸ್ತ್ರೀಯರಲ್ಲೂ ಇದ್ದದ್ದೇ ಆದರೆ ಪುರುಷ ಪ್ರಧಾನ ವ್ಯವಸ್ಥೆ, ಸ್ತ್ರೀಪ್ರಧಾನ ವ್ಯವಸ್ಥೆಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಂತಹ ಪರಿಸರವನ್ನು ಸ್ತ್ರೀವಾದಿ ನೆಲೆಯಲ್ಲಿ ನಿಂತು ಬಳಿಗಾರ್ ಅವರು ಕಥೆ ಕಟ್ಟಿದ್ದಾರೆ. ಹೆಣ್ಣಿನ ಗುಣಗಳು ಗಂಡಿನಲ್ಲಿಯೂ, ಗಂಡಿನ ಗುಣಗಳು ಹೆಣ್ಣಿನಲ್ಲಿರುವುದು ಸಹಜವಾದರೂ ಹೆಣ್ಣು ಅಬಲೆಯಲ್ಲ ಎಂಬ ಮಾತನ್ನು ಪ್ರಸ್ತುತ ಸಂದರ್ಭಕ್ಕೆ ಮುಖಾಮುಖಿಯಾಗಿ ರೇಷ್ಮಾಳ ಪಾತ್ರದ ಮೂಲಕ ಕಥೆಗಾರರು ತರುತ್ತಾರೆ. ಸುಧೀರನ ವ್ಯಕ್ತಿತ್ವ ಗುಣಗಳನ್ನು ನೋಡಿದಾಗ ಪುರುಷರಲ್ಲಿಯೂ ಇಂತಹ ಸ್ವಭಾವದವರೂ ಅಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ವ್ಯಕ್ತಿತ್ವದವರಿರಬಹುದೇ ಎಂಬ ಅನುಮಾನವು ಓದುಗರನ್ನು ಕಾಡದೆ ಇರುವುದಿಲ್ಲ.

ರೇಷ್ಮಾಳ ವ್ಯಕ್ತಿತ್ವವನ್ನೇ ಹೋಲುವ ಮತ್ತೊಂದು ಸ್ತ್ರೀಪಾತ್ರವೆಂದರೆ "ಎರಡು ದಾರಿ" ಕಥೆಯಲ್ಲಿನ ಬಲದೇವನ ಹೆಂಡತಿಯ ಪಾತ್ರ. ಕಥೆಯ ಕೇಂದ್ರ ಪಾತ್ರ ಬಲದೇವನಾದರೂ ಅವನ ಹೆಂಡತಿಯ ಪಾತ್ರವು ಪ್ರಮುಖವಾಗುತ್ತದೆ. ಬಲದೇವರು ಮದುವೆಯ ಮುನ್ನ ಕಥಾಸಂಕಲನ, ಕವನ ಸಂಕಲನವನ್ನು ಹೊರತರುತ್ತಿದ್ದರು. ಆದರೆ ಮದುವೆಯ ನಂತರ ಬರೆಯುವುದನ್ನೇ ನಿಲ್ಲಿಸಿದ್ದರು. ಇದಕ್ಕೆ ಕಾರಣ ಅವನ ಹೆಂಡತಿಯ ನಡುವಳಿಕೆಯೇ ಆಗಿದೆ. ಈ ಕಥೆಯಲ್ಲಿ ಹೆಣ್ಣಿಗೆ ಹೆಣ್ಣೆ ಶತ್ರು ಎಂಬಂಶವು ನಿಜವಾಗುತ್ತದೆ. ಬಲದೇವನು ಚಿಕ್ಕವನಿದ್ದಾಗಲೇ ತನ್ನ ತಾಯಿ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ಬಲದೇವನನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಳಜಿಯಿಂದ, ಪ್ರೀತಿಯಿಂದ ಬೆಳೆಸುತ್ತಾಳೆ. ಬಲದೇವನಿಗೆ 27ನೇ ವಯಸ್ಸಿಗೆ ಮದುವೆಯಾಗಿ ತಾಯಿಯಿಂದ ದೂರವಿದ್ದ ಬಲದೇವ ತಾಯಿಯನ್ನು ಮನೆಗೆ ಕರೆತರಲು ಯೋಚಿಸಿದಾಗ ಅವನ ಹೆಂಡತಿ ವಾಗ್ವಾದವನ್ನು ನಡೆಸಿರುತ್ತಾಳೆ. ತಾಯಿಯನ್ನು ಕರೆತರಲು ಬಲದೇವ ಯೋಚಿಸಿದಾಗ ಸೊಸೆಯು ಆಡಿದ ಮಾತೆಂದರೆ "ಇರುವ ಇಷ್ಟು ಮನೆಯಲ್ಲಿ ಅವರು ಬೇರೇನಾ" ? ಅಂದಿದ್ದಳು. ಅತ್ತೆಯೂ ವಿಧವೆ, ತನ್ನಂತೆಯೇ ಒಂದು ಹೆಣ್ಣು ಎಂಬುದನ್ನು ಮರೆತು ಶತ್ರುವಿನಂತೆ, ಮೃಗದ ರೀತಿ ವರ್ತಿಸುತ್ತಾಳೆ. ಈ ವ್ಯಕ್ತಿತ್ವವು ವಾಸ್ತವಕ್ಕೆ ಮುಖಾಮುಖಿಯಾಗಿ ನಿಲ್ಲುತ್ತದೆ.

ಪ್ರಸ್ತುತ ಸಂದರ್ಭದಲ್ಲಿ ಮದುವೆಯಾದ ಮರುದಿನವೇ ಗಂಡನನ್ನು ಬೇರೆ ಕರೆದುಕೊಂಡು ಹೋಗಲು ಸಂಚು ಹಾಕುತ್ತಾರೆ. ಇಂತಹ ಸಂದರ್ಭವನ್ನೇ ಬಳಿಗಾರ್ ಅವರು ತಮ್ಮ ಕಥೆಗಳಲ್ಲಿ ತರುತ್ತಾರೆ. ಬಲದೇವರು ತಾಯಿಯನ್ನು ಕರೆದುಕೊಂಡು ಬರಲು ಹೋದರು. ಆದರೆ ತಾಯಿ ಬರಲು ಸುತರಾಂ ತಯಾರಿರಲಿಲ್ಲ. ಪ್ರೀತಿಯ ಒತ್ತಾಯಕ್ಕೆ ಮಣಿದು ಇದ್ದ ಇಪ್ಪತ್ತು ಎಕರೆ ಜಮೀನನ್ನು ಬೇರೆಯವರಿಗೆ ಒಪ್ಪಿಸಿ ಬರುತ್ತಾರೆ. ಸೊಸೆಯ ನಡಾವಳಿಗಳನ್ನು ಮನಗಂಡು ಮಾತನಾಡಿಸದೇ ತಾನಾಗಿಯೇ ಹೆಚ್ಚು ಮಾತನಾಡುತ್ತಿರಲಿಲ್ಲ. ಏನಾದರೂ ಮಾತನಾಡಿದರೆ ಹೊಸದಾಗಿ ಮದುವೆಯಾದವರಿಗೆ ಸುಖವಾಗಿ ಇರಗೊಡಲು ಮನಸ್ಸಿಲ್ಲವೇನೋ ಎಂದು ಚುಚ್ಚುನುಡಿ ಆಗಾಗ ಹೆಂಡತಿ ಬಾಯಿಂದ ಹೊರಬರುತ್ತಿತ್ತು. ಅದನ್ನು ತಾಯಿ ಕೇಳಿಸಿಕೊಂಡರೆ ರಾತ್ರಿ ಊಟವಿಲ್ಲದೇ ಮಲಗಿಕೊಳ್ಳುತ್ತಿದ್ದರು. ಬಲದೇವರು ಹೆಂಡತಿಯನ್ನು ಏನಾದರೂ ವಿಚಾರಿಸಿದರೆ ಜೋರು ಧ್ವನಿಯಲ್ಲಿ ಉಡಾಫೆ ಉತ್ತರ, ಕೊಡುವುದು, ಅನವಶ್ಯಕ ಅಳುವುದು ಮಾಡುತ್ತಾಳೆ, ಕೋಪಗೊಂಡು ಬಲದೇವರು ಊಟ ಮಾಡದೆ ಮಲಗಿದರೆ ಊಟಕ್ಕೂ ಎಬ್ಬಿಸದೆ ತಾನೊಬ್ಬಳು ಗಡದ್ದಾಗಿ ತಿಂದು ಬಂದು ಪಕ್ಕದಲ್ಲಿ ಉರುಳುವಳು. ಅವ್ವ ಅಳುತ್ತಿರಬಹುದೆಂದು ಬಲದೇವ ಹೋಗಿ ಬಾಗಿಲು ತಟ್ಟಿದ್ದರೆ ಅವ್ವ ಏಳಲೇ ಇಲ್ಲ. ನಿದ್ರೆ ಹತ್ತಿರಬಹುದೆಂದು ತನಗೇ ಖಾತ್ರಿಯಿಲ್ಲದಿದ್ದರೂ ಇನ್ನೂ ಹೆಚ್ಚು ತಟ್ಟುವ ಧೈರ್ಯ ಮಾಡದೆ ಹಾಗೇ ತಿರುಗಿ ಬಂದರು. ಗೆಳೆಯರನ್ನು ಊಟಕ್ಕೆ ಕರೆದಾಗ ಅವರ ಮುಂದೆಯೇ ಅವಮಾನ ಮಾಡಿದಳು. ತಾನು ಯಾರದೋ ಮನೆಯಲ್ಲಿರುವಳೇನೋ ಎಂಬಂತೆ ಅದು ಇಲ್ಲ, ಇದು ಇಲ್ಲವೆಂದು ಭಾವನಾರಹಿತ ನಡೆ ನುಡಿ, ಅತಿಥಿ ಸತ್ಕಾರದ ತಿಳಿವಳಿಕೆ ಇಲ್ಲವೇನೋ ಎನ್ನುವಂತೆ ನಡೆದುಕೊಳ್ಳುವಳು. ತಂದೆ ತಾಯಿಯಂತೆ

ಮಕ್ಕಳಿರುವುದು ಸುಳ್ಳು ಆಕಳಂತೆ ಕರು ತಾಯಿಯಂತೆ ಮಗು ಎಂದು ತಿಳಿದುಕೊಳ್ಳುವುದು ತಪ್ಪೆಂದು ಆಧುನಿಕ ಸಂದರ್ಭಕ್ಕೆ ತಕ್ಕಂತೆ ಬಲದೇವರ ಪಾತ್ರದ ಮೂಲಕ ಬಳಿಗಾರರವರು ವ್ಯಕ್ತಪಡಿಸುತ್ತಾರೆ.

ಅತ್ತೆಯ ಪಾತ್ರದಲ್ಲಿ ಸ್ತ್ರೀ ಸಂವೇದನೆಯನ್ನು ತಂದು ಪಾತ್ರಕ್ಕೆ ವಿರುದ್ಧವಾಗಿ ಬಲದೇವರ ಹೆಂಡತಿಯ ಪಾತ್ರವನ್ನು ತಂದಿರುವುದು ಬಳಿಗಾರ್ ಅವರ ಕಥೆಗಳ ವೈಶಿಷ್ಟ್ಯವೆಂತಲೂ ಹೇಳಬಹುದು. ಗಂಡುಬೀರಿಯಂತಹ ಲಕ್ಷಣಗಳನ್ನು ಒಳಗೊಂಡಿರುವುದನ್ನು ಈ ಪಾತ್ರದ ವ್ಯಕ್ತಿತ್ವ ಬಿಂಬಿಸುತ್ತಿದೆ. ಇಂತಹ ಪಾತ್ರಗಳನ್ನು ನೋಡಿದಾಗ ಸ್ತ್ರೀಯರು ಅಬಲೆಯರಲ್ಲವೆಂಬ ಅಂಶ ಪ್ರಸ್ತುತ ಸಂದರ್ಭದಲ್ಲಿ ಸಾಬೀತಾಗುತ್ತದೆ. ಹೆಂಡತಿಯ ತಾಳಕ್ಕೆ ಕುಣಿಯುವಂತ ಸ್ಥಿತಿ ಬಲದೇವನದಾಗಿದ್ದು ಅವಳ ಕೈಗೊಂಬೆಯೇ ಆಗಿದ್ದಾನೆ. ಸ್ವಭಾವತಃ ಸೌಮ್ಯಗುಣವನ್ನು ಬಲದೇವರು ಹೊಂದಿದ್ದು ಅವನನ್ನು ಆಟದ ಗೊಂಬೆಯಂತೆ ಆಡಿಸುತ್ತಾಳೆ. ಚಳಿಗಾಲದಲ್ಲಿ ತನ್ನ ತಾಯಿಗೆ ಚಳಿ ತಡೆಯಲಾಗದೆಂದು ಹೊಸ ರಗ್ ತರುತ್ತಾನೆ. ಅದು ತನಗೇ ತಂದಿರುವರೆಂದು ಅವನ ಹೆಂಡತಿ ತಿಳಿದಿರುತ್ತಾಳೆ. ರಗ್ ತನ್ನ ತಾಯಿಗೆ ಹೊಚ್ಚಿ ಬಂದಾಗ ಮಾಡಿದ ರಂಪ, ಆಡಿದ ಕಟೋಕ್ತಿಗಳು ಮನೆಬಿಟ್ಟು ಓಡಿಹೋಗಬೇಕೆನ್ನುವಷ್ಟು ಇವರನ್ನು ಕಂಗಾಲು ಮಾಡಿದವು. ಇವೆಲ್ಲಾ ಅಂಶಗಳನ್ನು ಗಮನಿಸಿದರೆ ಸ್ತ್ರೀಯಲ್ಲಿನ ಗಂಡು ಸ್ವಭಾವ, ಹೊಟ್ಟೆಕಿಚ್ಚು ಮತ್ತು ಮೃಗತ್ವವನ್ನು ಎತ್ತಿ ತೋರುವಂತೆ ಕಥೆ ಬಿಂಬಿತವಾಗುತ್ತದೆ. ಬಲದೇವರ ಹೆಂಡತಿಯ ಪಾತ್ರದಲ್ಲಿ ಕರುಣೆ, ಸಹನೆ, ಧನ್ಯತಾ ಮನೋಭಾವದಂತಹ ಅಂಶಗಳಿಗೆ ಬೆಲೆಯಿಲ್ಲ. ಬಲದೇವರಿಗೆ ಗಂಡುಮಗು ಹುಟ್ಟಿ ಅದು ತನ್ನ ತಂದೆ ಮತ್ತು ಅಜ್ಜಿಯನ್ನು ಹಚ್ಚಿಕೊಂಡಿತು. ಮಗುವಿಗೆ ಜ್ವರ ಬಂದು "ಪ್ಯಾರಾಟಾಯ್ ಪಾಯ್ಡ್" ಆಗಿ ಆಸ್ಪತ್ರೆಗೆ ಸೇರಿಸಿದಾಗ ಆಸತ್ರೆಯಲ್ಲಿ ಬಾತ್‌ರೂಮು ಸರಿಯಾಗಿಲ್ಲವೆಂದು ನೆಪಮಾಡಿ ಮನೆಗೆ ಹಿಂದಿರುಗುತ್ತಾಳೆ. ಮಗು ಅಲ್ಲಿದ್ದ ಮೂರು ದಿನವೂ ಬಲದೇವ ಅವರೇ ಜೊತೆಯಲ್ಲಿರಬೇಕಾಗಿ ಬಂತು. ಕಾರಣ ಮಗು ತನ್ನ ಅಜ್ಜಿ ಮತ್ತು ತಂದೆಯನ್ನು ಹಚ್ಚಿಕೊಂಡದ್ದಕ್ಕೆ ಈ ರೀತಿಯ ನಡುವಳಿಕೆ. ಅತ್ತೆಗೆ ಕೆಮ್ಮು ಬಂದುದಕ್ಕೆ ಸೊಸೆಯು ದಮ್ಮು ಜಾಸ್ತಿಯಾಗಿರುವುದರಿಂದ ಅದು ಟೀಬಿಯೋ ಅಸ್ತಮವೋ ಆಗಿದ್ದರೆ ಎಂದು ಇನ್ನು ಏನೇನೋ ಹೇಳುತ್ತಿದ್ದಳು ಅಷ್ಟರಲ್ಲಿ ಬಲದೇವರು ತಡೆಯುತ್ತಾರೆ. ಇಂತಹ ವ್ಯಕ್ತಿತ್ವಗಳು ಸ್ತ್ರೀಯಲ್ಲಿರುವುದನ್ನು ನೈಜವಾಗಿ ಚಿತ್ರಿಸಿದ್ದಾರೆ.

ಬಲದೇವರು ರಚಿಸಿದ ಸಾಹಿತ್ಯ ಕೃತಿಗಳು ಹೊರಬಂದಿವೆ. ಆಗಾಗ ಬಹುಮಾನ ಪ್ರಶಸ್ತಿಗಳು, ಸನ್ಮಾನ ಸತ್ಕಾರ ಮಾಡಿದಾಗ ಸಮಾರಂಭಗಳಿಗೆ ಹೆಂಡತಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಬಲು ಖುಷಿ ಅವಳಿಗೆ ಭರ್ಜರಿಯಾಗಿ ಹೋಗುತ್ತಾಳೆ. ತಾನೇ ಲೇಖಕಿಯೇನೋ ಎಂಬಂತೆ ಬೀಗುತ್ತಾಳೆ. ಗಂಡನ ಯಶಸ್ಸಿಗೆ ತಾನೇ ಕಾರಣವೇನೋ ಎಂಬಂತೆ ಕೊರೆಯುತ್ತಾಳೆ. ಸ್ತ್ರೀಯಲ್ಲಿನ ಗುಣ, ಅಹಂಕಾರ, ದರ್ಪದ ಅನಾವರಣವನ್ನು ಈ ಪಾತ್ರದ ಮೂಲಕ ಕಥೆಗಾರರು ಮಾಡುತ್ತಾರೆ.

'ಕಥಾವಸ್ತು' ಕಥೆಯಲ್ಲಿನ ರೇಷ್ಮಾಳಿಗಿಂತ ಭಿನ್ನವಾಗಿ ಈ ಕಥೆಯ ಸ್ತ್ರೀಪಾತ್ರ ಕಂಡುಬರುತ್ತದೆ. ಇವೆರಡೂ ಪಾತ್ರಗಳು ಆಧುನಿಕ ಸಂದರ್ಭದಲ್ಲಿನ ಹೆಣ್ಣಿನ ವ್ಯಕ್ತಿತ್ವದ ನಾನಾ ಮುಖಗಳನ್ನು ಬಯಲಿಗೆಳೆಯುವ

ಪ್ರಯತ್ನವಾಗಿ ಗೋಚರಿಸುತ್ತವೆ. ಅಲ್ಲದೆ ಈ ಎರಡೂ ಕಥೆಗಳು ಸ್ತ್ರೀ ಪ್ರಧಾನ ವ್ಯವಸ್ಥೆಯ ಪರಿಸರದ ನಿರ್ಮಾಣಕ್ಕೆ ಶ್ರಮಿಸುತ್ತಿವೆ ಎಂದರೂ ತಪ್ಪಾಗಲಾರದು. ಶತಶತಮಾನಗಳಿಂದಲೂ ಶೋಷಣೆಗೊಳಗಾದ ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದಿರಬಹುದೇ ಎಂಬ ಅನುಮಾನವು ಓದುಗರಾದ ನಮ್ಮನ್ನು ಕಾಡುತ್ತವೆ. "ಎರಡು ದಾರಿ" ಕಥೆಯ ವಿರಸ ದಾಂಪತ್ಯವು ಇಬ್ಬರನ್ನೂ ಸಂಬಂಧಪಟ್ಟವರಲ್ಲಿ ಯಾರೊಬ್ಬರನ್ನೂ ಅತಿ ಹಳಿಯದೆ, ಅತಿ ಎತ್ತದೆ ಮನುಷ್ಯ ಸ್ವಭಾವದಲ್ಲೇ ಇರುವ ಸಣ್ಣತನದ ದರ್ಶನವಾಗಿ ಮೂಡುತ್ತದೆ. ಇಲ್ಲಿ ಹೆಣ್ಣು ಸಣ್ಣವಳಾಗುತ್ತಾಳೆ. ಪುರುಷನ ಧನ್ಯತಾ ಮನೋಭಾವ, ಮೃದುತ್ವ ಎರಡು ಕಡೆಗಳಲ್ಲೂ ಗೋಚರವಾಗುತ್ತವೆ.

'ಗಂಗಮ್ಮನ ಜೀವನದ ದೃಷ್ಟಿ' ಕಥೆಯಂತೆಯೇ ಸ್ತ್ರೀಸಂವೇದನೆಯನ್ನೊಳಗೊಂಡ ಮತ್ತೊಂದು ಕಥೆ "ಮುತ್ತೈದೆ". ಈ ಕಥೆಯ ಕೇಂದ್ರಪಾತ್ರ ದೇವೀರಮ್ಮ. ಇವಳ ಮೊಮ್ಮಗ ಸುರೇಶ. ಇವನು ವೃತ್ತಿಯಲ್ಲಿ ವೈದ್ಯನಾಗಿದ್ದು ಹಳೆಪಳೆಯುಳಿಕೆ ಕಟ್ಟಡಗಳ ಅಸಾಮಾನ್ಯ ರಚನೆ, ಭದ್ರತೆ, ಭವ್ಯತೆಗಳನ್ನು ಮೆಚ್ಚಿಕೊಳ್ಳುತ್ತ ತನ್ನಜ್ಜಿ ದೇವೀರಮ್ಮನನ್ನು ಜ್ಞಾಪಿಸಿಕೊಳ್ಳುತ್ತಾನೆ. ಆಕೆಗೆ ಆರಾಮವಿಲ್ಲವೆಂಬ ಸಂಗತಿ ಎರಡು ತಿಂಗಳು ಹಳೆಯದು. ಮುತ್ತೈದೆಯಾಗಿಯೆ ಸಾಯಬೇಕೆಂಬುದು ಅವಳ ಹಟ. ಹೆಣವಾದಾಗಲೂ "ಹಸಿರು ಬಳೆ, ಕೆಂಪು ಕುಂಕುಮ, ಗಲ್ಲದ ತುಂಬ ಅರಿಶಿಣ" ಈ ಸಾಮಾಗ್ರಿಗಳು ತನಗೆ ಸ್ವರ್ಗಕ್ಕೆ ಸೋಪಾನ ತೋರಿಸಬಲ್ಲವೆಂಬ ನಂಬಿಕೆ ಪ್ರತಿಯೊಬ್ಬ ಹೆಣ್ಣಿನ ಸಹಜ ಆಸೆ ಆಕಾಂಕ್ಷೆಯನ್ನು ಬಳಿಗಾರ್ ಅವರು ದೇವೀರಮ್ಮನ ಪಾತ್ರದಲ್ಲಿ ತಂದಿದ್ದಾರೆ. ಅಜ್ಜಿಯ ಈ ಅಭಿಲಾಷೆಯನ್ನು ಬಿಡಿಸಿ ಗುಣಪಡಿಸಬೇಕೆಂದು ಡಾಕ್ಟರಾದ ಮೊಮ್ಮಗನ ಸಂಕಲ್ಪ. ಅಜ್ಜ, "ಬೆಂಕಿ ಸ್ವಾಮಿ" ಎಂದು ಹಿಂದೊಮ್ಮೆ ಅಜ್ಜನಿಗಾಗದ ಅಭಿಪ್ರಾಯ ಹೇಳಿದ್ದಕ್ಕೆ ಅವಳ ಮೈಮೇಲಾದ ಗಾಯಗಳು ಮಾಯಲಿಕ್ಕೆ ಒಂದೂವರೆ ತಿಂಗಳು ಹಿಡಿದಿತ್ತು. ಅದಕ್ಕೆ ಅಜ್ಜನ ಜೊತೆಗಿರುವುದೆಂದರೆ ಏಳು ಹೆಡೆ ಸರ್ಪದ ಜೊತೆಗಿದ್ದಂತೆ ಎಂದು ದೇವೀರಮ್ಮ ಹೇಳಿದ್ದನ್ನು ಮೊಮ್ಮಗ ಜ್ಞಾಪಿಸಿಕೊಂಡು ಅಂಥವಳನ್ನು ಸಾವಿನಿಂದ ಪಾರುಮಾಡುವುದು ಹ್ಯಾಗೆಂದು ಚಿಂತೆ ಮಾಡುತ್ತಾ ಬರುತ್ತಾನೆ. ಬಂದು ನೋಡಿದರೆ ಅವನ ಕಲ್ಪನೆ ತಲೆಕೆಳಗಾಗುತ್ತದೆ "ಏನಾರ ಮಾಡಿ ನನ್ನನ್ನು ಆರಾಮ ಮಾಡು ನಾ ಜೀವಂತ ಇದ್ದಾಗಲೇ ಅವರು ಕಣ್ಣು ಮುಚ್ಚಲಿ" ಎಂದು ಹೇಳಿದ ಅಜ್ಜಿಯ ಮಾತು ಕೇಳಿ ಬೆರಗಾಗುತ್ತಾನೆ. ಕಥೆ ಇದ್ದಕ್ಕಿದ್ದಂತೆ ಹಾಸ್ಯಕ್ಕೆ ತಿರುಗಿತೇ ಎಂದು ಅನುಮಾನ ಬರುವಷ್ಟರಲ್ಲಿ ಗೊತ್ತಾಗುತ್ತದೆ. ಬೆಂಕಿಯಂಥ ಅಸಹಕಾರೀ ಗಂಡ ಹಾಸಿಗೆ ಹಿಡಿದಾಗ ಅವನ ಸೇವೆಗೆ ಯಾವ ಆಳು ತಯಾರಾಗಿರಲಿಲ್ಲ. ಆಗಲೇ ಅಜ್ಜಿ ನಿರ್ಧರಿಸಿದಳು ತಾನು ಜೀವಂತವಾಗಿರದಿದ್ದರೆ ಇವರ ಹೆಣವು ಅನಾಥವಾಗಿ ಬಿಡಬಹುದು ಎಂದು. ಆದ್ದರಿಂದ ತಾನು ಬದುಕಲೇಬೇಕು ಎಂದು ನಿರ್ಧರಿಸಿಕೊಳ್ಳುವ ಸಂದರ್ಭವು ಬೆಂಕಿಯಂತಹ, ಸರ್ಪದಂತಹ ಸ್ವಭಾವವನ್ನು ತನ್ನ ಗಂಡ ಹೊಂದಿದ್ದರೂ ಗಂಡನ ಬಗೆಗಿನ ಕಾಳಜಿ, ಪ್ರೀತಿಯು ಎಷ್ಟರ ಮಟ್ಟಿಗಿರುತ್ತದೆಂದು ತಿಳಿಯುತ್ತದೆ. ಹೆಣ್ಣು ಕ್ಷಮಯಾಧರಿತ್ರಿ, ಭೋಜೇಶುಮಾತಾ ಇಂತಹ ಪದಗಳು ದೇವೀರಮ್ಮನ ಪಾತ್ರಕ್ಕೆ ಸರಿಹೊಂದುತ್ತವೆ. ಗಂಡನ

ಬಗೆಗಿನ ಆಸಕ್ತಿ, ಕಾಳಜಿಯು ಹೆಣ್ಣಿನ ಮತ್ತೊಂದು ಮುಖದ ದರ್ಶನ ಮಾಡಿಸುವುದಷ್ಟೇ ಅಲ್ಲದೆ ಗಂಡನ ವ್ಯಕ್ತಿತ್ವಕ್ಕೆ ವಿರುದ್ಧವಾದ ವ್ಯಕ್ತಿತ್ವ ತರುವ ಪ್ರಯತ್ನವನ್ನು ಕಥೆಗಾರರು ಮಾಡುತ್ತಾರೆ.

ದೇವೀರಮ್ಮನು ಒಂದು ಹೆಣ್ಣಾಗಿ ತನ್ನ ಮಗಳು ಹೆಣ್ಣನ್ನು ಹಡೆದಾಗ ಕಲ್ಲಾಗಿ ಬಿಡುತ್ತಾಳೆ. ಏಕೆಂದರೆ ತನಗೆ ಬಂದ ಕಷ್ಟ, ನೋವು ಅವರಿಗೂ ಬರುತ್ತದಲ್ಲ ಎಂದು ಸಂಕಟವಾಗುತ್ತದೆ. ನಂತರ ಇಡೀ ರಾತ್ರಿ ಜೋಳಿಗೆಯಲ್ಲಿ ಹಾಕಿ ತೂಗುತ್ತಾ ನಿದ್ರೆ ಮಾಡದೇ ಹಾಗೆ ದೀಪದ ಮಂದಬೆಳಕಿನಲ್ಲಿ ತನ್ನನ್ನು ನೋಡುತ್ತ ತುಸು ಒದ್ದೆಯಾದರೂ ತಕ್ಷಣ ಅರಿವೆ ಬದಲು ಮಾಡಿ, ಹೊತ್ತಿಗೆ ಸರಿಯಾಗಿ ಎಣ್ಣೆ ಹಚ್ಚಿ, ತಿಕ್ಕಿ ತೀಡಿ ಹಿತವಾದ ಬಿಸಿನೀರನ್ನು ಎರೆದು ಇಪ್ಪತ್ತೈದರವಳಂತೆ ಓಡಾಡಿದ ದೇವೀರಮ್ಮನ ಅಜ್ಜಿಯ ಪಾತ್ರದಲ್ಲಿ ಹೆಣ್ಣು ಹುಟ್ಟಿದಾಗ ಬೇಸರ ಪಟ್ಟರೂ ತದನಂತರ ಚೆನ್ನಾಗಿ ಆರೈಕೆ ಮಾಡುವ ಹೆಣ್ಣುತನವನ್ನು ಇಲ್ಲಿ ಪ್ರದರ್ಶಿಸಿದ್ದಾರೆ. ದೇವೀರಮ್ಮನ ವಿಚಾರವನ್ನು ಚಿಂತಿಸುತ್ತಿದ್ದ ಸುರೇಶನ ಪಾತ್ರದ ಮೂಲಕ ಹೆಣ್ಣಿಗೆ ಕರುಣೆಯೇ ಸಹಜಗುಣ, ಅನುಕಂಪವೇ ನಿಜಲಕ್ಷಣವೆಂಬ ಮಾತನ್ನು ಕಥೆಗಾರರೇ ಹೇಳುವಂತೆ ತೋರುತ್ತದೆ.

ಮೊದಲು ಮುತ್ತೈದೆಯಾಗಿ ಸಾಯಬೇಕೆಂದು ಇಚ್ಛಿಸಿದ ದೇವೀರಮ್ಮ ನಿಜವಾಗಿಯೂ ಸಾಯುತಿರುವಾಗ ತಾನು ಬದುಕಬೇಕೆಂದು ಅಂದುಕೊಳ್ಳುವುದು ಮಾನವ ದ್ವಂದ್ವವೇ ಎಂಬ ಪ್ರಶ್ನೆ ಬಳಿಗಾರ್ ಅವರನ್ನು ಕಾಡಿದೆ.

ಸ್ತ್ರೀ ನೆಲೆಯಲ್ಲಿ ಮೂಡಿಬಂದಿರುವ ಮತ್ತೊಂದು ಕಥೆ 'ಋಣ'. ಇಲ್ಲಿನ ಕೇಂದ್ರ, ಪಾತ್ರ ಸೀತಾಬಾಯಿ. ಕಥೆಯ ಪ್ರಾರಂಭದ ಆದಿಯಲ್ಲೇ ಸೀತಾಬಾಯಿಯ ಸಂವೇದನೆಯನ್ನು ಮರಿಕೋಳಿಯು ತನ್ನ ಕೋಳಿಗಳೊಂದಿಗೆ ಸಂತೋಷವಾಗಿರುವುದನ್ನು ಎಲ್ಲರೂ ಕೂಡಿದ್ದರೆ ಎಷ್ಟು ಚೆನ್ನಾಗಿರುತಿತ್ತು ಎಂದುಕೊಳ್ಳುತ್ತಾರೆ. ಕೋಳಿ ತನ್ನ ಮರಿಗಳಿಗೆ ಕೊಕ್ಕಿನಲ್ಲಿ ಕಾಳನ್ನು ಎತ್ತಿಕೊಡುತ್ತಿರುವ ಸಂದರ್ಭದಲ್ಲಿ ಹೆಣ್ಣಿನ ಕರುಳ ಮಿಡಿತವನ್ನು ಎತ್ತಿ ತೋರುತ್ತದೆ.

ಸೀತಾಬಾಯಿಯ ಅಕ್ಕ ಬಹಳ ತೊಂದರೆಯಿದೆಯೆಂದು ತನ್ನಿಂದ ಕೆಲವು ವರ್ಷಗಳ ಹಿಂದೆ ಮೂವತ್ತು ಸಾವಿರ ರೂಪಾಯಿ ಕೈಗಡ ತೆಗೆದುಕೊಂಡು ಹೋಗಿರುತ್ತಾಳೆ. ಆ ಹಣವನ್ನು ಸೀತಾಬಾಯಿ ಕೇಳಲು ಹೋದಾಗ ರಂಪವನ್ನೇ ಮಾಡುತ್ತಾಳೆ. "ಈಗ ಸ್ವಲ್ಪನಾದ್ರು ಕೊಟ್ಟಿದ್ರ ಚಲೋ ಇತ್ತು ಯಕ್ಕಾ" ಎಂದು ಕೇಳಿದಾಗ ಸೀತಾಬಾಯಿಯ ಅಕ್ಕ ಹೇಳುತ್ತಾರೆ. ಊಟ ಮಾಡಿಕೊಂಡು ಹೋಗೆಂದು ಸಹ ಹೇಳುವುದಿಲ್ಲ. ಅಕ್ಕನ ಗಂಡ ಎದೆನೋವಿನಿಂದ ಹಾಸಿಗೆ ಹಿಡಿದಾಗ ಅದಕ್ಕೆ ಕಾರಣ ಸೀತಾಬಾಯಿ ಎಂದು ಆರೋಪ ಹೊರಿಸುತ್ತಾಳೆ. ಇಲ್ಲಿ ಸ್ತ್ರೀ ಸ್ತ್ರೀಯನ್ನೇ ದ್ವೇಷಿಸುವುದು ಕಂಡುಬರುವ ಅಂಶವಾಗಿದೆ. ಹಣದಿಂದಲೇ ಸಂಬಂಧಗಳು ಕಡಿದುಹೋಗುತ್ತವೆ. ಹಣ ಇಂದು ನನ್ನ ಬಳಿ ನಾಳೆ ಮತ್ತೊಬ್ಬರ ಬಳಿ. ಹಣ, ಆಸ್ತಿ, ಅಂತಸ್ತು ಮುಖ್ಯವಲ್ಲ. ಮನುಷ್ಯತ್ವಗಳು ಮುಖ್ಯ. ಇಲ್ಲಿಯೂ ಬಳಿಗಾರ್ ಅವರು ಸೀತಾಬಾಯಿಯ ಸೌಮ್ಯ ಸ್ವಭಾವಕ್ಕೆ ಮುಖಾಮುಖಿಯಾಗಿ ಅವಳ ಅಕ್ಕನ ಪಾತ್ರವನ್ನು ತರುತ್ತಾರೆ.

ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ ಎಂಬ ಮಾತಿನಂತೆ “ಜೋಳದ ಬುಟ್ಟಿಯೊಳಗಿಂದ” ಕಥೆಯಲ್ಲಿ ಭದ್ರವ್ವನ ಪಾತ್ರದಲ್ಲಿ ಸಾಬೀತುಪಡಿಸುತ್ತಾರೆ. ಭದ್ರವ್ವ ಮತ್ತು ದ್ಯಾಮವ್ವರು ತಮ್ಮ ಹೆಣ್ಣುತನದ ಅಳುಕನ್ನು ಗೆದ್ದು ನಿಲ್ಲುವುದು ಹದವಾಗಿ ಮೂಡಿದೆ. ಈ ಕಥೆಯಲ್ಲಿ ಹಳ್ಳಿಯ ಧೈರ್ಯವಂತ ನೀತಿನಿಷ್ಠ ಹೆಣ್ಣು ಮಕ್ಕಳ ಪಾತ್ರವನ್ನು ಚಿತ್ರಿಸಲಾಗಿದೆ. ಹಿಟ್ಟು ಮಾಡಿಸಲು ಗಿರಣಿಗೆ ಬಂದ ದ್ಯಾಮವ್ವ ಭದ್ರವ್ವನ ಸೌಂದರ್ಯಕ್ಕೆ ಮೋಹಿತನಾದ ಬಾಳಪ್ಪ ಬಂದು ಜೋಳದ ಬುಟ್ಟಿಗೆ ಇಬ್ಬರು ಗಂಟುಬಿದ್ರ ಹೆಂಗ್ ಅಂತೀನಿ ಎನ್ನುತ್ತಾ ಅಸಭ್ಯವಾಗಿ ವರ್ತಿಸಿದಾಗ ದ್ಯಾಮವ್ವ ಜೋಳದ ಬುಟ್ಟಿಯೊಳಗೆ ಅಡಗಿಸಿ ಇಟ್ಟಿದ್ದ ಚಪ್ಪಲಿಯಿಂದ ಮುಖಕ್ಕೆ ಪಟ್ ಎಂದು ಹೊಡೆದೇ ಬಿಟ್ಟಳು. ಇಲ್ಲಿ ಗ್ರಾಮೀಣ ದಿಟ್ಟ ಮಹಿಳೆಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಮಹಿಳೆಯರು ಸ್ವಾಭಿಮಾನಿಗಳು ತಮ್ಮ ಬಡತನದ ಬದುಕಿನಲ್ಲೂ ನೈತಿಕ ಸಂಪನ್ನತೆ ಕಾಪಾಡಿಕೊಂಡು ಹೋಗಲು ಕಟಿಬದ್ಧರು ಎಂಬುದನ್ನು ಈ ಕಥೆ ತಿಳಿಯಪಡಿಸುತ್ತದೆ.

ಮೇಲಿನ ಎಲ್ಲಾ ಕಥೆಗಳನ್ನು ಸ್ತ್ರೀ ನೆಲೆಯಲ್ಲಿ ನಿಂತು ಬಳಿಗಾರ್ ಅವರು ಚಿತ್ರಿಸಿದ್ದಾರೆ. ಹೆಣ್ಣು ಹೆಣ್ಣಿನ ನಡುವೆಯೇ ಜಗಳ, ವಿರಸಗಳು, ಅನ್ಯೋನ್ಯತೆ, ಹೊಂದಾಣಿಕೆ, ತ್ಯಾಗ, ದಿಟ್ಟತನ ಮುಂತಾದ ಸಹಜ ಸಂಗತಿಗಳು ಸಂಭವಿಸುವುದನ್ನು ಕಥೆಗಳು ಬಿಂಬಿಸುತ್ತವೆ.

❖

# ‘ಋಣ' ಕಥೆಯಲ್ಲಿನ ಸಾವಯವ ಪಾತ್ರ ಸೃಷ್ಟಿ

ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

**ಪ್ರ**ಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಡಾ. ಮನು ಬಳಿಗಾರ್ ಅವರು ಮೂಲತಃ ಕನ್ನಡದ ಒಬ್ಬ ಶ್ರೇಷ್ಠ ಹಾಗೂ ಸೃಜನಶೀಲ ಬರಹಗಾರರು. ತಮ್ಮ ಬದುಕು ಮತ್ತು ವೃತ್ತಿ ಹಾಗೂ ಬರಹಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತ ಬಂದವರು. ಸಾಮಾಜಿಕ ಅಸಮಾನತೆಗಳನ್ನ, ಕ್ರೌರ್ಯ, ಶೋಷಣೆ, ದಬ್ಬಾಳಿಕೆಗಳನ್ನ, ಉಳಿಗಮಾನ್ಯ ವ್ಯವಸ್ಥೆಯನ್ನು ವಿರೋಧಿಸುತ್ತಲೇ ಬಂದವರು. ಬಂಡಾಯ - ದಲಿತ ಸಾಹಿತ್ಯ ಚಳವಳಿಯಲ್ಲಿ ನೇರವಾಗಿ ಗುರುತಿಸಿಕೊಳ್ಳದಿದ್ದರೂ ತಮ್ಮೆಲ್ಲ ಬರಹಗಳಲ್ಲಿ ಶೋಷಿತರ ಪರವಾದ ಧ್ವನಿಯನ್ನ, ಆಶಯವನ್ನು ಅಭಿವ್ಯಕ್ತಿಸುತ್ತಲೇ ಬಂದಿದ್ದಾರೆ. ಅವರಿಗಿರುವ ಸೋಪಜ್ಞತೆ, ನಿಷ್ಕಲ್ಮಶವಾದ ಪ್ರೀತಿ, ಸಾಂಸ್ಕೃತಿ ಜವಾಬ್ದಾರಿ ಹಾಗೂ ಕನ್ನಡ, ಕರ್ನಾಟಕ, ಕನ್ನಡಿಗನ ಬಗ್ಗೆ ಇರುವ ಚಾರಿತ್ರಿಕ ಪ್ರಜ್ಞೆಯೇ ಅವರು ಒಬ್ಬ ಉತ್ತಮವಾದ ಬರಹಗಾರರಾಗಿ ಹಾಗೂ ಉತ್ತಮ ಆಡಳಿತಗಾರರಾಗಿ ಯಶಸ್ವಿಯಾಗಲು ಕಾರಣವಾಗಿದೆ.

ಕಾವ್ಯ, ಲಲಿತ ಪ್ರಬಂಧ, ಜೀವನ ಚರಿತ್ರೆ ಸಂಪಾದನೆ, ನಾಟಕ, ಅಂಕಣ ಬರಹ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಡಾ. ಮನು ಬಳಿಗಾರ್ ಅವರು 'ಅವ್ಯಕ್ತ'' ‘'ಋಣ' ‘ಬದುಕು

ಮಾಯೆಯ ಮಾಟ' ಹಾಗೂ ''ದಿ ಡೆತ್ ಅಂಡ್ ಅದರ್ ಸ್ಟೋರೀಸ್' ''ಹಲವು ಕವಿತೆಗಳು' ಎನ್ನುವ ಕಥಾ ಸಂಕಲನಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಈ ಎಲ್ಲಾ ಕಥೆಗಳಲ್ಲಿಯೂ ಮಾನವೀಯ ಸಂಬಂಧಗಳ ಅನನ್ಯತೆ ಗ್ರಾಮೀಣ ಪರಿಸರದ ನೈಜ ಅಭಿವ್ಯಕ್ತಿಯೇ ಕೇಂದ್ರ ಕಾಳಜಿಯಾಗಿರುವುದು ಕಂಡು ಬರುತ್ತದೆ. ಗ್ರಾಮೀಣ ಪರಿಸರದ ನೈಜ ಘಟನೆಗಳನ್ನ ವಾಸ್ತವದ ಬದುಕಿನ ಕನ್ನಡಿಯಂತೆ ಚಿತ್ರಿಸುತ್ತಾರೆ. ಕಥಾ ರಚನೆಗೆ ಬಳಸಿಕೊಂಡಿರುವ ಹದವಾದ ಭಾಷೆ, ಭಾವನೆಗಳ ಆರ್ದ್ರತೆಯ ಬಳಕೆಯ ವಿವೇಕ, ಆಡಂಬರವಿಲ್ಲದ ನಿರೂಪಣಾಕ್ರಮ, ಘಟನೆಯನ್ನು ಅನಾವರಣ ಮಾಡುವ ತಂತ್ರ ಇವೆಲ್ಲವನ್ನೂ ಗಮನಿಸಿದಾಗ ಕಥೆಯಿಂದ ಕಥೆಗೆ ಸಂಕಲನದಿಂದ ಸಂಕಲನಕ್ಕೆ 'ಮಾಗಿ'ರುವುದು ಕಂಡು ಬರುತ್ತದೆ. ಇದು ಉತ್ತಮ ಕಥೆಗಾರನ ಲಕ್ಷಣವೂ ಹೌದು. ಅವರ ಎಲ್ಲಾ ಕಡೆಗಳಲ್ಲಿಯೂ ಹಳ್ಳಿಯ ಬದುಕು, ಸಂಸ್ಕೃತಿ, ನಿರ್ವ್ಯಾಜ ಪ್ರೀತಿ, ಹೊಂದಾಣಿಕೆಗಳು ಕಥೆಗಾರರನ್ನು ಇನ್ನಿಲ್ಲದಂತೆ ಹಿಡಿದಿಟ್ಟಿವೆ.

ಪ್ರಸ್ತುತ ಚರ್ಚೆಗೆ ಎತ್ತಿಕೊಂಡಿರುವ 'ಋಣ' ಕಥಾ ಸಂಕಲನವು ಮನು ಬಳಿಗಾರ್ ಅವರ ಎರಡನೇ ಕಥಾ ಸಂಕಲನ. ಇದು 1999ರಲ್ಲಿ ಪ್ರಕಟಗೊಂಡಿದೆ. ಇದಕ್ಕೂ ಹತ್ತು ವರ್ಷದ ಹಿಂದೆ 1986 ಅವರ 'ಅವ್ಯಕ್ತ' ಕಥಾ ಸಂಕಲನ ಪ್ರಕಟಗೊಂಡು ಓದುಗರ, ವಿದ್ವಾಂಸರ ಗಮನ ಸೆಳೆದಿತ್ತು. ನವ್ಯ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದ ಅನಂತಮೂರ್ತಿ, ತೇಜಸ್ವಿ, ಲಂಕೇಶ್‌ರಂತ ಹಲವು ದೈತ್ಯ ಪ್ರತಿಭೆಗಳು ಓದುಗರನ್ನು ಸಮ್ಮೋಹಿಸುತ್ತಿದ್ದ ಕಾಲವಾದರೂ, ದಲಿತ-ಬಂಡಾಯದ ಬರಹಗಾರರೂ ಓದುಗರ ಮೇಲಿನ ಬಿಗಿ ಕಳೆದುಕೊಂಡಿರಲಿಲ್ಲ. ಇಂಥ ಸಂಕ್ರಮಣ ಕಾಲದಲ್ಲಿ ಮನು ಬಳಿಗಾರರ ಎರಡನೇ ಕಥಾ ಸಂಕಲನ 'ಋಣ' ಓದುಗರಿಗೆ ಸಿಕ್ಕಿದ್ದು ವಿಶೇಷ. ಉತ್ತರ ಕರ್ನಾಟಕದ ಮೊನಚಾದ, ಹರಿತವಾದ ಭಾಷೆ ಹಾಗೂ ಅಲ್ಲಿನ ಗ್ರಾಮ್ಯ ಪರಿಸರ, ಅಲ್ಲಿನ ಬದುಕು, ಅಧಿಕಾರಿಗಳ ದರ್ಪ, ಮೋಸ, ವಂಚನೆ, ಅದರ ವಿರುದ್ಧ ಸಿಡಿದೇಳುವ ಮುಗ್ಧ ಪಾತ್ರಗಳು, ಶೋಷಣೆಗೆ ಒಳಗಾಗುವ ಶೋಷಿತರ ಧಾರುಣ ಬದುಕು, ಅವರ ನಡುವಿನ ಪ್ರೀತಿ - ದ್ವೇಷ, ಅಸೂಯೆಗಳನ್ನು ಬಹಳ ದಟ್ಟವಾಗಿ, ಮನೋಜ್ಞವಾಗಿ ಚಿತ್ರಿಸಿರುವುದು ಕಥೆಗಳ ವಿಶೇಷವಾದರೆ, ಅಂಥ (ಉತ್ತರ ಕರ್ನಾಟಕದ ಗ್ರಾಮೀಣ ಬದುಕು) ಬದುಕನ್ನು ಅಖಂಡ ಕರ್ನಾಟಕದ ಓದುಗರಿಗೆ ಪರಿಚಯಿಸಿದ್ದು ಕಥೆಗಾರರ ಮತ್ತೊಂದು ವಿಶೇಷವಾಗಿದೆ.

ಒಟ್ಟು ಹದಿಮೂರು ಕಥೆಗಳನ್ನೊಳಗೊಂಡ ಈ ಸಂಕಲನದೊಳಗಿನ ಪಾತ್ರಗಳು ಕತೆಗಾರರ ಹುಟ್ಟೂರಾದ 'ಶಿಗ್ಲಿ' ಪರಿಸರದಲ್ಲಿ ಹುಟ್ಟಿ ಕರ್ನಾಟಕದ ವಿವಿಧ ಪ್ರದೇಶಗಳಿಗೆ ಸಂಚರಿಸುತ್ತವೆ. ಆದಾಗ್ಯೂ ಜೀವನ ಪ್ರೀತಿ ಬತ್ತದ ಸೆಲೆಯಾಗಿ ಪಾತ್ರಗಳು ಚೈತನ್ಯ ಶಕ್ತಿಯಾಗಿ ರೂಪು ತಳೆದಿರುವುದು ಮನು ಬಳಿಗಾರ್ ಸೃಷ್ಟಿಸಿರುವ ಪಾತ್ರಗಳ ಅನನ್ಯತೆಯಾಗಿದೆ. 'ವಂಚಿತ' ಕತೆಯಲ್ಲಿನ ಕೇಂದ್ರ ಪಾತ್ರ* 'ಮಡ್ಡೆಪ್ಪ ದುರುಗಪ್ಪ ಕೊಂಪಿ'. ಈ ಹೆಸರೇ ಕನ್ನಡ ಕಥಾ ಜಗತ್ತಿಗೆ ಹೊಸದು. ಬಡತನ, ಶೋಷಣೆ, ಕಷ್ಟ-ನಷ್ಟಗಳಿಂದ ನೋಯುತ್ತಿರುವ ಈ ಪಾತ್ರಕ್ಕೆ ಸಾಲದೆಂಬಂತೆ ಅವನ ಹೆಸರೇ ಅವನಿಗೆ ಶಾಪವಾಗಿ ಪರಿಣಮಿಸಿದೆ. ಒಂದು

ಕಡೆ ನಿರುದ್ಯೋಗ ಸಮಸ್ಯೆ, ಮತ್ತೊಂದು ಕಡೆ ಮದುವೆಯಾಗಲು ಹುಡುಗಿ ಕಡೆಯವರು ಒಪ್ಪದಿರುವುದು. ಇಂಥ ಸಂಕಷ್ಟದಲ್ಲಿರುವ 'ಮಡ್ಡೆಪ್ಪನಿಗೆ' ಮೈಸೂರಿನಲ್ಲಿರುವ ಗೆಳೆಯನಿಂದ ಬದುಕಿಗೆ ಭರವಸೆ ಸಿಗುತ್ತದೆ. ಸುಖಾಂತ್ಯವೂ ಅಲ್ಲದ ದುಃಖದ ಅಂತ್ಯವೂ ಅಲ್ಲದ ಮಧ್ಯಮ ಮಾರ್ಗದಲ್ಲಿ ಕತೆ ಅಂತ್ಯವಾಗುತ್ತದೆ. ಇದು ಸಾಧ್ಯವಾಗಿರುವುದು ಕತೆಗಾರರ ಕಲೆಗಾರಿಕೆಯಿಂದ, ಗ್ರಾಮೀಣ ಯುವಕರ ಬದುಕಿನ ವಾಸ್ತವಕ್ಕೆ ಕನ್ನಡಿಯಂತೆ ಈ ಕತೆ ಇದೆ. ಈಗಲೂ ಹಳ್ಳಿಯಲ್ಲಿ ಕೃಷಿ ಕೆಲಸ ಮಾಡಿಕೊಂಡಿರುವ ಎಷ್ಟೋ ಯುವಕರು 'ಮದುವೆಯಿಂದ' ವಂಚಿತರಾಗುತ್ತಿದ್ದಾರೆ. ಇವರನ್ನು ಮದುವೆಯಾಗಲು ಅಥವಾ ಹೆಣ್ಣು ಕೊಡಲು ಯಾರೂ ಮುಂದೆ ಬರುತ್ತಿಲ್ಲ ಎಂಬುದು ಇತ್ತೀಚಿನ ಸಂಗತಿ.

ಅನುಕಂಪ, ಹಾಸ್ಯ, ಮುಗ್ಧತೆ, ಕೋಪ, ರೋಷ, ಸ್ವಾಭಿಮಾನ ಎಲ್ಲವನ್ನೂ ಒಳಗೊಂಡ ಅಪರೂಪದ ಕತೆ 'ಒಂದು ಚಪ್ಪಲಿ ಪ್ರಕರಣ' - ಈ ಕಥೆಯಲ್ಲಿ ಬರುವ 'ಬಸವಣ್ಣ' ಸ್ವಾಭಿಮಾನಿ, ಶೋಷಣೆಗೆ ಒಳಗಾಗದವನು, ವಂಚನೆಗೆ ಒಳಗಾದವನು ಅವನಲ್ಲಿ ಅಗಾಧವಾದ ಪುಟಿಯುತ್ತಿರುವ ಜೀವನ ಪ್ರೀತಿ ಇದೆ. ಆದರೆ ಮೋಸಕ್ಕೆ ಒಳಗಾಗಿ ಅವಮಾನಿತನಾದಾಗ ಅವನ ಅಂತರಂಗದಲ್ಲಿದ್ದ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಕೋಪಾಗ್ನಿಯಾಗಿ ಹೊರ ಹೊಮ್ಮುತ್ತದೆ. ಈ ಕ್ರಿಯೆಯಿಂದ ಆ ಪಾತ್ರಕ್ಕೆ ಧಕ್ಕೆಯೊದಗದೆ ಘನತೆ ಉಂಟಾಗುವಂತೆ ಕತೆಗಾರರು ಎಚ್ಚರ ವಹಿಸಿದ್ದಾರೆ. ಹಾಗಾಗಿ ಓದುಗರಿಗೆ, ವಿಮರ್ಶಕರಿಗೆ, ಈ ಪಾತ್ರ ಸೃಷ್ಟಿ ಇಷ್ಟವಾಗುತ್ತದೆ. ಯು.ಆರ್. ಅನಂತಮೂರ್ತಿ ಅವರು ಬಸವಣ್ಣಿ ಪಾತ್ರವನ್ನು ಮೆಚ್ಚಿಕೊಂಡು "ಬಂಡಾಯ ಸಾಹಿತ್ಯದ 'ರೋಷ'ದ ಬರವಣಿಗೆಯಲ್ಲಿ ದಕ್ಕಲಾರದೇ ಹೋಗುವ ಕೋಪಾಗ್ನಿ ಬಸವಣ್ಣಿಗೆ ಘನತೆ ತರುತ್ತದೆ. ಬಸವಣ್ಣಿ ನಮ್ಮ ಕರುಣೆಗೆ ಪಾತ್ರವಾಗದೇ ನಮ್ಮ ಮೆಚ್ಚುಗೆ ಗಳಿಸುವುದು ಕಥೆಯಲ್ಲಿ ಚೆನ್ನಾಗಿ ಮೂಡಿಬಂದಿದೆ" ಎಂದು ಹೇಳಿದ್ದಾರೆ. ಇದು ಡಾ. ಮನು ಬಳಿಗಾರ್ ಅವರ ಹದವಾದ ಬರವಣಿಗೆಗೆ ಉತ್ತಮ ಉದಾಹರಣೆಯಾಗಿದೆ.

'ಅಳು' ಕಥೆಯಲ್ಲಿ ಬರುವ 'ಮಂಜುನಾಥ'ನ ಪಾತ್ರ ನೆಲೆಮೂಲವಾದುದು ಆಧುನಿಕತೆಯ ಸೋಂಕು ಕೈಬೀಸಿ ಕರೆದಾಗ ಅವನ ಮನಸ್ಸಿನಲ್ಲಿ ಆಗುವ ತಳಮಳವನ್ನು ಕಥೆಗಾರರು ಇನ್ನಿಲ್ಲದಂತೆ ಚಿತ್ರಿಸಿದ್ದಾರೆ. ಊರು, ಹೊಲ, ಆಕಳು, ಎಮ್ಮೆ, ಎತ್ತುಗಳನ್ನು ಬಿಟ್ಟು ಮೈಸೂರಿನ ವಸತಿ ಶಾಲೆಗೆ ಹೋಗಬೇಕಾಗಿ ಬಂದಾಗ ತನ್ನ ಬೇರುಗಳೇ ಕತ್ತರಿಸಿ ಹೋಗುತ್ತಿವೆ ಎಂದು ವಿಲವಿಲ ಒದ್ದಾಡುತ್ತಾನೆ. ಪ್ರತಿಯೊಬ್ಬ ಕನ್ನಡದ ಓದುಗ ಅಥವಾ ಗ್ರಾಮ ಪರಿಸರದಿಂದ ಬಂದವರು ಈ ವ್ಯಥೆಯನ್ನು ಅನುಭವಿಸಿಯೇ ತೀರುತ್ತಾರೆ. ಆ ಊರಿನ ದಾರಿ ಹಳ್ಳ, ಗಿಡ, ಮರ, ಬಾವಿ, ತೋಟ, ಗುಡ್ಡ, ಆಟ, ಪಾಠ ಶಾಲೆ, ಗೆಳೆಯರು ಎಲ್ಲರನ್ನೂ, ಎಲ್ಲವನ್ನೂ ಬಿಟ್ಟು ಹೋಗಬೇಕಾದ ಸನ್ನಿವೇಶವೇ ಬರಸಿಡಿಲು ಎರಗಿದಂತೆ ಕಂಡು ಬರುತ್ತದೆ. ಕರುಳು ಬಳ್ಳಿಯ ಸಂಬಂಧಗಳನ್ನೇ ಕತ್ತರಿಸಿಕೊಂಡು ಹೋಗಬೇಕಲ್ಲಾ ಎಂದು ವ್ಯಥೆಯುಂಟಾಗುತ್ತದೆ.

ಆದರೆ ಅವನ ಬುದ್ದಿವಂತಿಕೆಗೆ, ಬೆಳವಣಿಗೆಗಾಗಿ, ಮುಂದಿನ ಭವಿಷ್ಯಕ್ಕಾಗಿ ಮೈಸೂರಿಗೆ ಹೋಗಲೇಬೇಕೆಂದು ತಂದೆಯ ತೀರ್ಮಾನ. ಅದರಂತೆ ಮೈಸೂರಿಗೆ ಹೋಗಿ ಕಲಿತು ವಿದ್ಯಾವಂತನಾದರೂ ಅದಕ್ಕಿಂತಲೂ ಮಿಗಿಲಾದ ಮತ್ತೇನನ್ನೂ ಕಳೆದುಕೊಂಡೆನೆನ್ನುವ 'ಅವಕ್ತ ಭಾವನೆ' ಮಂಜುನಾಥನನ್ನು ಸದಾ ಕಾಡುತ್ತಿರುತ್ತದೆ. ಇದು ಕೇವಲ ಮಂಜುನಾಥನ ಸಮಸ್ಯೆಯಲ್ಲ ಗಾಮೀಣ ಪರಿಸರದಿಂದ ನಗರಕ್ಕೆ ಬಂದು ನೆಲೆನಿಂತ ಎಷ್ಟೋ ಜನರ ಭಾವನೆಗಳಿಗೆ ಮಂಜುನಾಥ 'ಮುಖವಾಣಿ' ಮಾತ್ರ. ಆಧುನಿಕ ಶಿಕ್ಷಣ, ನಗರ ಜೀವನ, ಮಂಜುನಾಥನಲ್ಲಿರುವ ಬ್ರಾಮಕ ಜಗತ್ತನ್ನು, ಭಾವನೆಗಳನ್ನು, ನೆಲಮೂಲ ಸಾವಯವ ಸಂಬಂಧಗಳನ್ನು ಸಾಯಿಸಿರಬಹುದೇ ಎಂಬ ಅನುಮಾನ ಅವನನ್ನೇ ಕಾಡುತ್ತದೆ. ಊರು ಬಿಟ್ಟು ಹೋಗುವಾಗ ಹಸು, ಕರು, ಹಳ್ಳ, ಕೊಳ್ಳ ಮನೆಯವರನ್ನು ಬಿಟ್ಟು ಹೋಗಬೇಕಲ್ಲಾ ಎಂದು ದುಃಖಿಸುತ್ತಿದ್ದ ಅವನಿಗೆ ಅಪ್ಪನ ಸಾವಿನ ಸುದ್ದಿಯಾಗಲಿ, ಹತ್ತಿರಕ್ಕೆ ಹೋಗಿ ನೋಡಿದ 'ಹೆಣ'ವಾಗಲಿ ಅವನನ್ನು ವಿಚಲಿತಗೊಳಿಸುತ್ತಿಲ್ಲ. ಕರುಳಿನಿಂದ 'ಅಳು' ಎಂಬುದು ಕಿತ್ತು ಬರುತ್ತಿಲ್ಲ ಏಕೆ. ಇದಕ್ಕೆ ಕಾರಣವಾದರೂ ಏನು ಎಂಬ ಹುಡುಕಾಟ ಕಥೆಗಾರರಲ್ಲಿ, ಕಥೆಯೊಳಗಿನ ಮಂಜುನಾಥನಲ್ಲಿ, ಅದನ್ನು ಓದಿದ ಓದುಗರಲ್ಲಿ ಸದಾ ನಡೆಯುತ್ತಲೇ ಇರುವ ಸಾರ್ವಕಾಲಿಕ ಸತ್ಯವಾಗಿದೆ.

'ಗಂಗಮ್ಮಳ ಜೀವನದೃಷ್ಟಿ' ಕತೆಯಲ್ಲಿ ಬರುವ ಗಂಗಮ್ಮ ಮತ್ತು ನಿರೂಪಕರ ಮಧ್ಯ ನಡೆಯುವ ಸಂಭಾಷಣೆ ಅದ್ಭುತವಾದದು. ಹಳ್ಳಿಯಿಂದ ದೂರವಿರುವ ನಿರೂಪಕ ಮತ್ತೆ ತನ್ನ ಬಾಲ್ಯದ ಗತಕಾಲಕ್ಕೆ ಸರಿದು ಕಳೆದ ದಿನಗಳನ್ನು ತನ್ನ ಸ್ಮೃತಿ ಪಟಲಕ್ಕೆ ತಂದುಕೊಂಡು ಉಲ್ಲಸಿತನಾಗುತ್ತಾನೆ. ಹಾಗೆಯೇ ಗಂಗಮ್ಮ ತನ್ನ ಮೊಮ್ಮಗನಿಗೆ 'ಜೀವನ ರೂಪಿಸಲು ಮಾಡುವ ಪ್ರಯತ್ನ' ಮೆಚ್ಚುವಂತಹದು. ಇದೊಂದು ಸಾಮಾನ್ಯ ಕಥಾವಸ್ತುವಿನಂತೆ ಮೇಲ್ನೋಟಕ್ಕೆ ಕಂಡರೂ ಅದನ್ನು ನಿರ್ವಹಿಸಿರುವ ರೀತಿ, ಬದುಕು ಕಟ್ಟಿಕೊಳ್ಳಲು ಗ್ರಾಮೀಣರಲ್ಲಿರುವ ಆತಂಕಗಳು, ಜವಾಬ್ದಾರಿ, ಬದಲಾಗುತ್ತಿರುವ ಹಳ್ಳಿಗಳ ಚಿತ್ರಣ ಎಲ್ಲವನ್ನೂ ಕಥೆಗಾರರು ಮುಪ್ಪುರಿಗೊಳಿಸಿ, ಕತೆಗೆ ತಿರುವು ನೀಡಿದ್ದಾರೆ. 'ಗ್ರಾಮೀಣರ ಜೀವನ ಪ್ರೀತಿ' ಕಥೆಗಾರರನ್ನು ಇನ್ನಿಲ್ಲದಂತೆ ಕಾಡುತ್ತಿದೆ. ಹಳ್ಳಿಯಿಂದ ನಗರಕ್ಕೆ ಬಂದ ಎಷ್ಟೋ ಜನ ಪಡೆದುಕೊಂಡಿದ್ದೇನು? ಕಳೆದುಕೊಂಡಿದ್ದೇನು? ಎನ್ನುವ ಪರಾಮರ್ಶೆ ನಡೆಯುತ್ತದೆ. ಜೀವನವೆಂದರೆ ಹಣ ಗಳಿಕೆಯೋ ಅಥವಾ ಮಾನವೀಯತೆಯ ಗಳಿಕೆಯೋ? ಎನ್ನುವ ಪ್ರಶ್ನೆಯನ್ನು ಕತೆ ಎತ್ತುತ್ತದೆ. ಅದು ಕೇವಲ ಕಥೆಗಾರರ ಪ್ರಶ್ನೆಯಲ್ಲ; ಇಡೀ ಮನುಕುಲದ ಮುಂದಿನ ಪ್ರಶ್ನೆ, 'ಗಂಗಮ್ಮನಲ್ಲಿನ ಗೊಮ್ಮಟೇಶ್ವರ'ನ ಎತ್ತರವನ್ನು ಕಂಡು ಅಚ್ಚರಿ ಆಗುತ್ತದೆ.

ಈ ಸಂಕಲನದ ಶೀರ್ಷಿಕೆ ಹೊತ್ತ 'ಋಣ' ಕತೆಯಲ್ಲಿ ಬರುವ 'ರಮೇಶ'ನ ಪಾತ್ರ ಸೃಷ್ಟಿ ಪ್ರತಿಯೊಬ್ಬರ ಮನದಾಳದಲ್ಲಿರುವ ದ್ವಂದ್ವಗಳನ್ನು, ಭಾವುಕತೆಗಳನ್ನು, ಅವುಗಳಿಂದ ಮನುಷ್ಯನಿಗೆ ಎದುರಾಗುವ ಸಮಸ್ಯೆಗಳನ್ನು ಪ್ರತಿನಿಧಿಸುವ ಪ್ರತಿನಿಧಿಯಾಗಿದ್ದಾನೆ. ಇದೊಂದು ಸಂಕೀರ್ಣವಾದ ಕತೆ. ಮನುಷ್ಯನ "ಭ್ರಾಮಕ" ಜಗತ್ತಿಗಿಂತ ವಾಸ್ತವ ಜಗತ್ತು ಹೇಗೆ ಭಿನ್ನವಾಗಿರುತ್ತದೆ ಎಂಬುದನ್ನು ಹೇಳುತ್ತಲೇ ಮನುಷ್ಯನ

ಆಳದಲ್ಲಿರುವ ಸ್ವಾಭಾವಿಕ ಸಣ್ಣತನಗಳು ಅವಕಾಶ ಸಿಕ್ಕಿದಾಗ ಮೊಳಕೆಯೊಡೆದು ಅವನನ್ನು ಅಧಃಪತನದ ಆಳಕ್ಕೆ ತಳ್ಳುತ್ತವೆ. ಅವುಗಳನ್ನು ಮೀರಿದಾಗಲೇ ಎತ್ತರಕ್ಕೆ ಏರಲು ಸಾಧ್ಯ. ಅದು ಹೆಣ್ಣಾಗಿರಲಿ, ಗಂಡಾಗಿರಲಿ ಎಂಬುದನ್ನು ಬಹಳ ಮಾರ್ಮಿಕವಾಗಿ ಈ ಕತೆಯ ನಾಯಕ 'ರಮೇಶ'ನಿಂದ ತಿಳಿಯುತ್ತದೆ.

ಅದೇ ರೀತಿ 'ಎರಡು ದಾರಿ'ಯ ಕಥಾನಾಯಕ "ಬಲ ದೇವರು" ಬಹಳ ಸಂಯಮಿ, ಅಂತರ್ಮುಖಿ, ವಿಚಾರವಂತ, ಕಥೆಗಾರ, ಸೂಕ್ಷ್ಮಮತಿ, ಯಾರಿಗೂ, ಎಂದಿಗೂ ನೋವುಂಟಾಗುವಂತೆ ನಡೆದುಕೊಂಡವನಲ್ಲ. ಇಂಥ 'ಬಲದೇವರ' ಪಾತ್ರ ಹುಟ್ಟಿದ್ದಾದರೂ ಹೇಗೆ ಎಂದು ಯೋಚಿಸಿದರೆ ಮನು ಬಳಿಗಾರರು ಸೃಷ್ಟಿಸಿದ ಅನೇಕ ಪಾತ್ರಗಳು ಗ್ರಾಮೀಣ ಪರಿಸರದ ಶ್ರಮಜೀವಿಗಳ, ಕಷ್ಟ ಸುಖ ಮತ್ತು ಬದುಕಿನ ಏರಿಳಿತಗಳ ಮೂಸೆಯಿಂದಲೇ ಹುಟ್ಟಿ ಬಂದಿವೆ. ಹಾಗೆಯೇ 'ಬಲದೇವ'ನೂ ಸಹ, ಸಂಸಾರದ ಆಳ, ಅಗಲ, ಒಳ ನೋವುಗಳು ಯಾರನ್ನು ಬಿಟ್ಟಿವೆ. ಯಾರೋ ಹೇಳಿದ "ಕಾಲು ನೀರಾಗದಂತೆ ಸಮುದ್ರ ದಾಟಬಹುದು ಕಣ್ಣು ನೀರಾಗದಂತೆ ಸಂಸಾರ ದಾಟಲು ಸಾಧ್ಯವಿಲ್ಲ" ಎನ್ನುವ ಮಾತು ಕತೆಯ ಸಂದರ್ಭದಲ್ಲಿ ನೆನಪಾಗುತ್ತದೆ. ಕಾರನ್ನು ಚಲಾಯಿಸುತ್ತಿರುವ 'ಬಲದೇವನ' ಮನಸ್ಸು ಕಾರಿಗಿಂತ ವೇಗವಾಗಿ ತನ್ನ ಮದುವೆ, ಆನಂತರದ ಐದು ವರ್ಷ, ಆನಂತರದ 28 ವರ್ಷ ಹೀಗೆ ಹಂತ ಹಂತವಾಗಿ ಸಂಸಾರ ಎನ್ನುವುದು ತನ್ನ ಬದುಕಿನಲ್ಲಿ ಉಂಟು ಮಾಡಿದ ಸಂತೋಷ, ನೋವುಗಳನ್ನು ಕುರಿತು ಪರಾಮರ್ಶಿಸುತ್ತಿದೆ. ಇದು ಮೇಲ್ನೋಟಕ್ಕೆ 'ಬಲದೇವನ' ಸಮಸ್ಯೆಯಂತೆ ಕಂಡರೂ ಸಾಮಾಜಿಕವಾದುದು, ಸಾರ್ವಕಾಲಿಕವಾದುದು. ಸರ್ವರದೂ ಆಗಿರಬಹುದು. ಹೊಂದಾಣಿಕೆಯಿಲ್ಲದ, ಪರಸ್ಪರ ಗೌರವವಿಲ್ಲದ ಸಂಸಾರ ಅದು. ಹೆಣ್ಣಿರಬಹುದು, ಗಂಡಿರಬಹುದು. ಇಂಥ ಸಂದರ್ಭಗಳು ವ್ಯಕ್ತಿಗಳ ಕ್ರಿಯಾಶೀಲತೆಯನ್ನೇ ಹಾಳುಮಾಡಿ ಹೆಬ್ಬಂಡೆಗಳಾಗಿ ಅಪ್ಪಳಿಸಿ ಬದುಕನ್ನೇ ಝರ್ಜರಿತವಾಗಿಸುತ್ತವೆ ಎಂಬುದನ್ನು ಹೇಳುತ್ತಲೇ ಅದರಿಂದ ಬಿಡುಗಡೆಗೆ ಎತ್ತಿಸುವ ಶೋಧಕಾರ್ಯವೂ ಓದುಗನ ಮನಸ್ಸಿನಲ್ಲಿ ಏಕಕಾಲಕ್ಕೆ ನಡೆಯುವಂತೆ ಮಾಡುವ ಪರಿಯೇ ಮನು ಬಳಿಗಾರರ ಪಾತ್ರ ಸೃಷ್ಟಿಯ ಹೆಚ್ಚುಗಾರಿಕೆ.

'ಜೋಳದ ಬುಟ್ಟಿಯೊಳಗಿಂದ' ಎನ್ನುವ ಕಥೆಯಲ್ಲಿನ ಬಂಡಾಯ ಮನೋಧರ್ಮದ ಪಾತ್ರಗಳು, ಅವುಗಳಲ್ಲಿರುವ ಪ್ರತಿಭಟನೆಯ ಕಿಚ್ಚು, ಅನ್ಯಾಯದ ವಿರುದ್ಧ ಸೆಟೆದು ನಿಲ್ಲುವ ಎದೆಗಾರಿಕೆ ಇವೆಲ್ಲವೂ 'ಮನುಷ್ಯನಿಗೆ ಗೌರವದ ಬದುಕು' ಎಂಬುದರ ಘನತೆ ಎಂಥದ್ದು ಎಂಬುದನ್ನು ಅಲ್ಲಿನ ಸ್ತ್ರೀ ಪಾತ್ರಗಳು ತಿಳಿಸಿಕೊಡುತ್ತವೆ. ಹೆಣ್ಣು - ಗಂಡು, ಕುಟುಂಬ, ಅದರೊಳಗಿನ ಜೀವನ ಪ್ರೀತಿ, ಓರೆಕೋರೆಗಳನ್ನು ತಿಳಿಸುತ್ತಲೇ ಅದರ 'ಊನ'ಗಳನ್ನೂ ಮೀರಿ ಬದುಕನ್ನು ಘನತೆಯತ್ತ ಕೊಂಡೊಯ್ಯುವ ಮಾರ್ಗಗಳನ್ನು ಈ ಕತೆಯಲ್ಲಿ ಅಭಿವ್ಯಕ್ತಿಸಲಾಗಿದೆ. ಅದರ ಮಧ್ಯದಲ್ಲಿ ಸಂಸಾರದ ಬೇರುಗಳನ್ನು ಅಲುಗಾಡಿಸುವ ಹೊರಗಿನ ಒತ್ತಡಗಳು ಆಗಾಗ ಸುಳಿಯುವುದು ಸಹಜ. ಸಂಸಾರ, ಗಂಡು - ಹೆಣ್ಣುಗಳ ಮಧ್ಯದಲ್ಲಿನ 'ಚಿಕ್ಕ ಪುಟ್ಟ ಊನಗಳೇ ಇಂಥವುಗಳಿಗೆ ಆಹಾರ. ಅಂಥ ಸಂದರ್ಭವನ್ನು 'ಭದ್ರವ್ವ' ಮತ್ತು 'ದ್ಯಾಮವ್ವ' ಇಬ್ಬರೂ

ಭಂಜಕಗೊಳಿಸುತ್ತಾರೆ. ಈ ಕಥೆಯಲ್ಲಿರುವ ರೂಪಕ, ಪ್ರತಿಮೆಗಳು, ಸಂಕೇತಗಳು ಬಳಿಗಾರರ ಗ್ರಾಮ ಜಗತ್ತಿನ ಅನನ್ಯವಾದ ಅನುಭವ ಮತ್ತು ಗ್ರಹಿಕೆಗೆ ಪ್ರತೀಕವಾಗಿ ಬಂದಿವೆ. ದ್ಯಾಮವ್ವ ಮತ್ತು ಭದ್ರವ್ವ ಇಬ್ಬರೂ ಸೇರಿ ತಮಗೆ ಕಿರುಕುಳಕೊಡುತ್ತಿದ್ದ 'ಬಾಳಪ್ಪ'ನನ್ನು 'ಚಪ್ಪಲಿಯ ಹೊಡೆಯ' ಘಟನೆ ಓದುಗರಲ್ಲಿ ಮೆಚ್ಚುಗೆ ಉಂಟುಮಾಡುತ್ತದೆ. ಗಂಡಿನ ಮುಂದೆ ಅಸಹಾಯಕಳಾಗಬೇಕಾಗಿದ್ದ ಸ್ತ್ರೀಯರಲ್ಲಿ ಈ ಬಂಡಾಯದ ಪ್ರತಿಭಟನೆಯ ಕಿಚ್ಚು ಹತ್ತಿದ್ದು ಹೇಗೆ ಅದಕ್ಕೆ ಕಾರಣ, ಪರಿಸರವೇ, ಕುಟುಂಬವೇ, ಘನತೆಯ ಬದುಕೆ ಅಥವಾ ಕತೆಗಾರರ ತಂತ್ರವೆ? ಎಲ್ಲವೂ ಒಂದಕ್ಕೊಂದು ಪೂರಕವಾಗಿ ಮೂಡಿಬಂದು ಇದೊಂದು ಅತ್ಯುತ್ತಮ ಬಂಡಾಯದ ತೀವ್ರತೆಯಿರುವ ಕಥೆ'ಯಾಗಿ ರೂಪುಗೊಂಡಿದೆ.

'ಅನುಭೋಗ' ಕತೆಯಲ್ಲಿ ಬರುವ ನಿರೂಪಕ, ರಾಜು, ಶಿವು ಈ ಮೂರು ಪಾತ್ರಗಳೂ ಒಂದಕ್ಕಿಂತ ಒಂದು ಭಿನ್ನ. ತಮ್ಮ ಹುಟ್ಟೂರಿನಿಂದ ಮೂರು ದಿಕ್ಕಿಗೆ ಸರಿದ ಈ ಮೂರು ಪಾತ್ರಗಳ ಮಧ್ಯೆ ಇರುವ ನಿರ್ವ್ಯಾಜ್ಯ, ಪ್ರೀತಿ, ಅನ್ಯೋನ್ಯತೆ, ಸಂಬಂಧ, ಸೆಳೆತ, ಆಳವಾದ ಸ್ನೇಹ ಓದುಗರಿಗೆ ಇಷ್ಟವಾಗುತ್ತವೆ. ನಿರೂಪಕ ಮತ್ತು ರಾಜೂ ಅವರ ಸಂಭಾಷಣೆ, ಹಳ್ಳಿಯ ಬಗೆಗಿನ ವ್ಯಾಮೋಹ, ಅವರ ಕ್ರಿಯಾಶೀಲತೆ ಇವೆಲ್ಲವೂ ಓದುಗರ ನಡುವಿನ ಪಾತಗಳೇ ಆಗಿ ಕಂಡುಬರುತ್ತವೆ' ಈ ಕತೆಯಲ್ಲಿ ಬರುವ 'ಶಿವು' ವಿಲಾಸಿ, ಜೀವನವನ್ನು ಗಂಭೀರವಾಗಿ ಪರಿಗಣಿಸಿದವನು. ಕಾಲೇಜಿನ ದಿನಗಳಲ್ಲಿ ಆನಂತರ ನಾಟಕದ ನಟನಾಗಿ ಅವನು ನಡೆಸಿದ 'ಭೋಗ ಜೀವನದಿಂದ' ಕುಷ್ಟರೋಗಕ್ಕೆ ಒಳಗಾಗಿದ್ದಾನೆ. ಆಗಲೂ ಅವನು 'ಕುಬ್ಜನಂತೆ' ಕಾಣುವುದಿಲ್ಲ. ಶಾಲಾ - ಕಾಲೇಜು ದಿನಗಳಲ್ಲಿದ್ದ ಹಾಗೆಯೇ ಈಗಲೂ ಕಾಣುತ್ತಾನೆ. ನೋಡುಗರಿಗೆ ಕರುಣಾಜನಕವಾಗಿ ಕಂಡರೂ ಅವನ ನಡತೆಯಲ್ಲಿ ಅದನ್ನು ವ್ಯಕ್ತಪಡಿಸುತ್ತಿಲ್ಲ. ನೋಡುಗರಿಗೆ ಇದರಿಂದ ಸೋಜಿಗವಾಗುತ್ತದೆಯೋ ವಿನಃ ಅವನು ಸುಪ್ತನಾಗಿಯೇ ಇದ್ದಾನೆ, ಇಂಥ ಪಾತ್ರಗಳ ಸೃಷ್ಟಿಯಿಂದ ಮನುಷ್ಯನ ವರ್ತನೆ ಹಿಂದಿರಬಹುದಾದ ನೋವಿನ ಆಯಾಮಗಳ ಹುಡುಕಾಟ, ಸವಾಲುಗಳು ಓದುಗರ ಮುಂದೆ ತೆರೆದುಕೊಳ್ಳುತ್ತದೆ.

ಹೀಗೆಯೇ ಹರ್ಷನಿಕೇತನ ಕತೆಯ 'ಶಾಂತಣ್ಣ' ಬಿಸಿ ಬಿಸಿ ಕಡತ ಕತೆಯ 'ನಿರೂಪಕ' ಪುತ್ರ ಪ್ರೇಮ ಕತೆಯ 'ಯಮನಪ್ಪ' ಹೊಸ ವರ್ಷದ ಶುಭಾಷಯಗಳು ಕತೆಯ 'ಯೋಗೇಶ, ರಾಜೇಶ, ಮಹದೇವಣ್ಣ' ಪಾತ್ರಗಳು ಓದುಗರಿಗೆ ಆಪ್ತವಾಗುತ್ತವೆ. ಆ ಪಾತ್ರಗಳು ಕಳ್ಳುಬಳ್ಳಿಯೊಂದಿಗೆ ಇಟ್ಟುಕೊಂಡಿರುವ ಆತ್ಮೀಯತೆ, ಸಂವೇದನೆ, ಹಳ್ಳಿಯ ಜೀವನದ ಇಂಚಿಂಚೂ ಅನುಭವಿಸಿ ಪ್ರಕಟಿಸಿರುವ 'ಅನುಭವಜನ್ಯ' ಕತೆಗಳು ಮನು ಬಳಿಗಾರರ ಜೀವಪರವಾದ, ಗ್ರಾಮ ಸಂವೇದನೆಯ ಅಂತಃಕರಣ ಸಾಕ್ಷಿಗೆ ಕನ್ನಡಿಯಾಗಿವೆ.

ಋಣ ಕಥಾ ಸಂಕಲನದ ಎಲ್ಲಾ ಕಡೆಗಳಲ್ಲಿಯೂ ಮನು ಬಳಿಗಾರರು ಸೃಜಿಸಿದ "ಗ್ರಾಮ ಸಂವೇದನೆ" ಎಳೆ ಎಳೆಯೂ ಅನಾವರಣಗೊಂಡಿದೆ. ಅಲ್ಲಿನ ಪಾತ್ರಗಳು ಬಿಂದುವಿನಿಂದ ಅನಂತದೆಡೆಗೆ ಸಾಗಿ, ತಮ್ಮ ಇರುವಿಕೆಯ ಧ್ವಜ ನೆಟ್ಟು ಮತ್ತೆ ಬಿಂದುವಿನಲ್ಲಿ ಲೀನವಾಗುವ ಪರಿ ಅನನ್ಯವಾದದ್ದು. ಅವೆಲ್ಲವೂ ತಾವು ಬೆಳೆದ

ನೆಲದ ಘನತೆಯನ್ನು ಶಿಖರಕ್ಕೇರಿಸಿ, ನೆಲ ಮುಗಿಲು ಬೆಸೆಯುವ ಸಾವಯವ ಪಾತ್ರಗಳು, ಸ್ವಾಭಿಮಾನ, ಅಂತಃಸತ್ವ ಮಾನವೀಯತೆ, ಸಾಮಾಜಿಕ ಮೌಲ್ಯಗಳನ್ನು ಎಂದೂ ಬಿಟ್ಟುಕೊಟ್ಟವಲ್ಲ. ಹಾಗಾಗಿಯೇ ಮನು ಬಳಿಗಾರರ ಕತೆಯಲ್ಲಿನ 'ಪಾತ್ರ ಸೃಷ್ಟಿ' ಕಳ್ಳು ಬಳ್ಳಿಯ ಸೆಳೆತ, ನೆಲಮೂಲ ಕಸುವು ತುಂಬಿದ ಉತ್ತರ ಕರ್ನಾಟಕದ ಸಂಪದ್ಭರಿತ ಭಾಷೆಯ ಬಳಕೆ, ಬಂಡಾಯದ ತೀವ್ರತೆ, ಕಥಾ ರಚನೆಯ ಶೈಲಿ, ತಂತ್ರ, ನಿರೂಪಣಾ ಕ್ರಮ ಓದುಗರಿಗೆ, ವಿದ್ವಾಂಸರಿಗೆ ಅಚ್ಚುಮೆಚ್ಚು.

❖

## ಭಾಗ-2

# ಕಾವ್ಯ

## ಎದ್ದವರು ಬಿದ್ದವರು

ಶ್ರೀ ಸಿದ್ಧಯ್ಯ ಪುರಾಣಿಕ

**'ಭೂ**ಪತಿಯು ಕವಿಯಾಗಿ ಕವಿ ಚಮೂಪತಿಯಾಗಿ' ಮೆರೆದ ಕನ್ನಡ ನಾಡಿನಲ್ಲಿ ಸಾರ್ವಜನಿಕ ಆಡಳಿತಕ್ಕೆ ಸೇರಿದವರು ಸಾಹಿತಿಗಳಾಗುವುದು ಅಚ್ಚರಿ ಏನೂ ಇಲ್ಲ. ಆಧುನಿಕ ಕನ್ನಡ ಸಾಹಿತ್ಯದಲ್ಲಂತೂ ಸಾಹಿತಿಗಳಾದ ಸೇವಾಜೀವಿಗಳ ತಂಡವೇ ಇದೆ. ಹುಟ್ಟು ಕವಿಯಾದವನನ್ನು ಸೇವಾ ಜೀವನ ಕಟ್ಟಿಹಾಕಲಾರದು. ಮಾನವನ ಅನೇಕ ಅಭಿಲಾಷೆಗಳಂತೆ ಅಭಿವ್ಯಕ್ತಿಯ ಅಭಿಲಾಷೆಯೂ ಅದಮ್ಯವಾದುದು. ತಾನು ಅನುಭವಿಸಿದ್ದನ್ನು ಇತರರಿಗೆ ತಿಳಿಸದೆ ಯಾವಸ್ತರದ ನರನಾರಿಯರೂ ತೃಪ್ತರಾಗರು. ಸನ್ನೆಯಿಂದಾಗಲಿ, ಮಾತಿನಿಂದಾಗಲಿ, ಬರಹದಿಂದಾಗಲಿ ತನ್ನ ಅನುಭವಗಳನ್ನು, ಅನಿಸಿಕೆಗಳನ್ನು ಅನ್ಯರಿಗೆ ತಿಳಿಸಿದಾಗಲೇ ತೃಪ್ತಿ ಮಾನವನಿಗೆ. ಹೀಗೆ ತಿಳಿಸುವ ಕಲಾ ಮಾಧ್ಯಮಗಳಲ್ಲಿ ಕಾವ್ಯ ಮಾಧ್ಯಮ ಹೆಚ್ಚು ಪ್ರಭಾವಶಾಲಿಯಾದುದು; ಸ್ಥಳ ಕಾಲಗಳನ್ನು, ಮೇರೆಗಳನ್ನೂ ಮೀರಿ ನಿರಂತರವಾಗಿ ರಸಾನಂದವನ್ನೂ ನೀಡಬಲ್ಲದು. ಆದುದರಿಂದ ಇದರ ಆಕರ್ಷಣೆ ಹೆಚ್ಚು. ಮುಂದೆ ಯಾವ ಸಾಹಿತ್ಯ ಪ್ರಕಾರವನ್ನೇ ಆರಿಸಿಕೊಳ್ಳಲಿ, ಮೊದಲು ಪದ್ಯದಿಂದ ಪ್ರಾರಂಭಿಸದವರೇ ಇಲ್ಲವೆಂದರೂ ಸಲ್ಲುತ್ತದೆ.

ಗೆಳೆಯ ಬಳಿಗಾರರೂ ಪದ್ಯದಿಂದಲೇ ಪ್ರಾರಂಭಿಸಿದ್ದಾರೆ. ಸಣ್ಣ ಕತೆಗಳ ಒಂದು ಸಂಗ್ರಹವನ್ನು ಪ್ರಕಟಿಸಿದ್ದಾರೆ ಕವಿತೆಗಳ ಎರಡು ಸಂಗ್ರಹಗಳನ್ನು ಇದಾಗಲೇ ಪ್ರಕಟಿಸಿ ಈಗ ಈ ಮೂರನೆಯ ಸಂಗ್ರಹವನ್ನು ಪ್ರಕಟಿಸುತ್ತಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೇ ಸುವರ್ಣಪದಕಗಳನ್ನು ಪಡೆದ ಇವರು ತಹಸೀಲದಾರರಾಗಿಯೂ ಎರಡು ಸುವರ್ಣ ಪದಕಗಳನ್ನು ಪಡೆದುದಲ್ಲದೆ ಅತ್ಯುತ್ತಮ ಬಿ.ಡಿ.ಓ. ಮತ್ತು ಅತ್ಯುತ್ತಮ ತಹಸೀಲ್ದಾರ

ಪ್ರಶಸ್ತಿಗಳನ್ನೂ ಗಿಟ್ಟಿಸಿಕೊಂಡಿರುವುದೂ, ಜೊತೆಗೆ ಕನ್ನಡ ಕಾವ್ಯ ಪ್ರಪಂಚಕ್ಕೆ ಗಣನೀಯವಾದ ಕೊಡುಗೆಯನ್ನು ನೀಡುತ್ತ ಹೊರಟಿರುವುದೂ 'ಎಲ್ಲರಂಥವರಲ್ಲ ಈ ಅಧಿಕಾರಿ' ಎಂಬುದಕ್ಕೆ ಸಾಕ್ಷಿ ನುಡಿಯುತ್ತಿವೆ.

ಒಂದೊಂದು ವೃತ್ತಿಯವರಿಗೂ ಒಂದೊಂದು ಪರಿಸರ; ಆ ಪರಿಸರದಂತೆ ಅವರ ಭಾವಕೋಶ; ಆ ಭಾವಕೋಶದಂತೇ ಅವರ ಭಾವಗೀತೆಗಳು. ಸರಕಾರದ ಸೇವೆಯಲ್ಲಿರುವುದರಿಂದಲೇ, ಅದರಲ್ಲಿಯೂ ಕಂದಾಯ ಇಲಾಖೆಯಲ್ಲಿ ಇರುವುದರಿಂದಲೇ 'ಕಾಯ್ದೆ', 'ನಾವೂ ಇರಬೇಕು', 'ರಾಜಕಾರಣಿ', 'ಕೇಳುವುದು', 'ತಹಸೀಲ್ದಾರ್', 'ರಸ್ತೆ ನಿಯಮಗಳು', 'ನಾನು ಮತ್ತು ನನ್ನ ಕೆಳಗಿನವರು', 'ಸಾಕು ನಿಲ್ಲಿಸಿ', 'ಪರಿವರ್ತನೆ'ಗಳಂಥ ಕವಿತೆಗಳನ್ನು ಬರೆಯುವುದು ಸಾಧ್ಯವಾಗಿದೆ ಇವರಿಗೆ. ವೃತ್ತಿ ವಿಶಿಷ್ಟ ಅನುಭವ ವಿಭಿನ್ನ ಬಗೆಯ ಕವಿತೆಗಳಿಗೆ ಹಾದಿ ತೆರೆಯುವುದೆಂಬುದು ಗಮನೀಯವಾದುದು.

ಈ ಕವಿತೆಗಳನ್ನು ಇವರು ಬರೆದಿರುವುದು ಆಡಳಿತದಲ್ಲಿ ಮುಚ್ಚುಮರೆಯಲ್ಲಿ ನಡೆಯುವ ಭ್ರಷ್ಟಾಚಾರಗಳನ್ನು ಬಿಚ್ಚಿ ಬಯಲಿಗೆಳೆಯಲೆಂದಷ್ಟೇ ಅಲ್ಲ; ಇವುಗಳನ್ನೋದಿ ಅದರೊಳಗಿರುವವರು ಆತ್ಮ ನಿರೀಕ್ಷಣೆ ಮಾಡಿಕೊಳ್ಳಲೆಂದಷ್ಟೇ ಅಲ್ಲ; ಅಲ್ಲಿರುವವರಿಗೆ ಒಂದಿಷ್ಟು ಹೊಸ ದೃಷ್ಟಿ ಬರಲೆಂದು, ಯಾವುದು ಆ ದೃಷ್ಟಿ :

**ಸಾಕಾಗಿದೆ ನಿನಗೀಗ**
**ಅಲಂಕಾರಿಕ ಕಥೆ ಕವನಗಳು**
**ಆಶ್ವಾಸನೆಯಲೆ ಉಳಿವ ಯೋಜನೆಗಳು**
**ಕಿವುಡು ಕಿವಿಗಳ ಮೇಲೆ ಬೀಳುವ**
**ಭರ್ಜರಿ ಭಾಷಣ, ಬೋಧನೆಗಳು**
**ಬೇಕಾಗಿದೆ**
**ಸಾದಾ ಸೂರು**
**ಗೇಣು ಬಟ್ಟೆ**
**ತುಣುಕು ರೊಟ್ಟಿ**
**ಒಂದಿಷ್ಟು ಹೊಸ ದೃಷ್ಟಿ**
**ಅದೇ ಮಾನವೀಯ ದೃಷ್ಟಿ!** (ಬೇಕಿರುವುದು)

ಈ ಮಾನವೀಯ ದೃಷ್ಟಿ ಎಲ್ಲ ರಂಗಗಳಲ್ಲಿ ಬೇಕಿರುವಂತೆ ಆಡಳಿತರಂಗದಲ್ಲಿಯೂ ಬರಬೇಕೆಂಬುದು ಗೆಳೆಯ ಬಳಿಗಾರರ ಹಂಬಲ. ಅಸಾಧ್ಯವೆಂಬುದನ್ನು ಅವರು ಮನಗಂಡಿದ್ದಾರೆ. ಮನಗಂಡ ಮಾತುಗಳೇ ಕವಿತೆಗಳಾಗಿ ಹೊರಬಿದ್ದಿರುವುದರಿಂದ ಅವುಗಳಲ್ಲಿ ಸಹಜತೆಯಿದೆ, ಸಜೀವತೆಯಿದೆ. ಬುದ್ಧಿಯ ಅಬ್ಬರವಾಗಲೀ, ಭಾವದ ಉಬ್ಬರವಾಗಲಿ ಸೋಂಕದ ಈ ಕವಿತೆಗಳಲ್ಲಿ, ಇನ್ನುಳಿದ ಕವಿತೆಗಳಲ್ಲಿ ಜನರ ಬಗ್ಗೆ ಕವಿಗಿರುವ ಕಾಳಜಿ, ಕಳಕಳಿಗಳು ಮೈವೆತ್ತಿವೆ.

ಬೇರೆ ವಸ್ತುಗಳೂ ಸೆಳೆಯದಿಲ್ಲ ಈ ಉದಿತೋದಿತ ಕವಿಯ ಗಮನವನ್ನು, ಅರ್ಧಾಂಗತಿಯನ್ನು ಕುರಿತು -

"ನಿನ್ನ ನೋಟವು ಅದಕೆ (ಹೃದಯ ಬನಕೆ) ಜೀವ ಜಲವು ನಿನ್ನ ನಗೆಯೇ ಅಲ್ಲಿ ಜೀವ ಕಳೆಯು" ಎಂದು ಉಸಿರಿದ ಕವಿಯೇ ಅದು ಆಗಬೇಕು, ಇದು ಆಗಬೇಕು ಎಂಬ ಎದೆಗುದಿಯಲ್ಲಿದ್ದಾಗ ತನ್ನ ಎರಡು ವರ್ಷದ ಮಗ ಬಂದು

**"ಅಪ್ಪಾ" ಎಂದೊಡನೆ**
**ಮತ್ತೊಮ್ಮೆ ಮಗುವಾಗಬೇಕೆನ್ನಿಸುತ್ತೇ - ಎಂದು ಉದ್ಧರಿಸುತ್ತಾರೆ.**
**ಆ ಅದೂ ಪ್ರೀತಿ, ಈ ಇದೂ ಪ್ರೀತಿ, ಪ್ರೀತಿಯ ಈ ಕಲ್ಪನೆ ಎಷ್ಟು ಸೊಗಸಾಗಿದೆ.**
**"ಮುತ್ತು ಹುಟ್ಟುವುದು,**
**ಮಳೆಯದು ಸ್ವಾತಿ,**
**ಮುತ್ತು ಮಳೆಗರೆವುದು,**
**ಹೆಸರದು ಪ್ರೀತಿ"**
**ಅಂತೆಯೇ,**
**'ನಿನ್ನ ಉಸಿರಿಗೆ**
**ನನ್ನ ಬೆರಳು**
**ನುಡಿಸುವುದು ಜೀವನ**
**ಮಧುರ ಕೊಳಲು**

ಈ ಆಸೆ ನಿಸರ್ಗವಾಗುವ ಬಯಕೆಯನ್ನು ಮೊಳೆಸಿದೆ ಕವಿಯಲ್ಲಿ, ಅದನ್ನು ಇಡಿಯಾಗಿಯೇ ಓದಬೇಕು. ಇವಲ್ಲದೆ, ಬೇರೆ ವಸ್ತುಗಳನ್ನೂ, ಕವನಿಸಿದ್ದಾರೆ. ಈ ತೆರೆದ ಕಣ್ಣಿನ, ತೆರೆದ ಹೃದಯದ, ತರುಣ ಕವಿಗಳು. ಹುಟ್ಟಿನಿಂದ ಸಾವಿನವರೆಗೆ, ಗಾಂಧೀಜಿ, ಶರೀಫ್, ತಾಯಿ ತೆರೇಸಾರಿಂದ ದೀನ ದಲಿತರವರೆಗೆ, ಕಾಲ, ಸೂರ್ಯ, ಭೂತಾಯಿಯರಿಂದ ಕನ್ಯಾಕುಮಾರಿಯವರೆಗೆ ಈ ವಸ್ತುಗಳ ಹರಹಿದೆ. ಎಲ್ಲ ಕವಿತೆಗಳಲ್ಲಿಯೂ ಸ್ವಂತಿಕೆಯ ಸೊಬಗನ್ನು, ಬಾಷೆಯ ಬೆಡಗನ್ನು, ನಿರೂಪಣೆಯ ನಾವೀನ್ಯವನ್ನು ಅಭಿವ್ಯಕ್ತಿಸಿರುವ ಈ ಕವಿಗೆ ಉಜ್ವಲ ಭವಿಷ್ಯವಿದೆಯೆಂದು ಹೇಳಲು ಯಾವ ಭವಿಷ್ಯವಾದಿಯೂ ಬೇಕಿಲ್ಲ. ಇವರು ಎತ್ತರಕ್ಕೆ ಏರಲಿ, ಬಿತ್ತರದ ಕೃತಿ ರಾಶಿ ಕೊಡಲು - ಎಂಬುದೇ ನನ್ನ ಹಾರೈಕೆ ಮುಗಿಸುವ ಮುನ್ನ ಮೆಲುಕು ಹಾಕಿದೆ ಈ ನಾಲ್ಕು ಸಾಲುಗಳನ್ನು :

**ಮೈಯಲ್ಲಿ ನೆಣ**
**ಕೈಯಲ್ಲಿ ಹಣ**
**ಅಪವ್ಯಯಗೊಳಿಸಿದರೆ,**
**ಜೀವನ ಮಸಣ!**

❖

# ನನ್ನ ನಿನ್ನೊಳಗೆ

ಶ್ರೀ ಚೆನ್ನವೀರ ಕಣವಿ

ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಥಮ ದರ್ಜೆಯ ಸ್ನಾತಕರಾಗಿ, ಕಾನೂನು ಪರೀಕ್ಷೆಯನ್ನು ಪಾಸಾಗಿ ವಕೀಲಿ ವೃತ್ತಿಯನ್ನು ನಡೆಸಿ ಕಳೆದ ಒಂದು ವರ್ಷದಿಂದ ಬಿಜಾಪೂರ ತಾಲೂಕಾ ತಹಸೀಲ್ದಾರ್ ಆಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಮನು ಬಳಿಗಾರ್ ಜೀವನೋತ್ಸಾಹದಿಂದ ತುಂಬಿ ತುಳುಕುತ್ತಿರುವ ಯುವಕರು. ಅವರ ಈ ಉತ್ಸಾಹದ ಪ್ರತೀಕವಾಗಿ "ನನ್ನ ನಿನ್ನೊಳಗೆ" ಕವನ ಸಂಕಲನ ಪ್ರಕಟಗೊಳ್ಳುತ್ತಿದೆ. ಇದರಲ್ಲಿ ಮುಕ್ಕಾಲು ಭಾಗ ಕಳೆದ ಒಂದೆರಡು ವರ್ಷಗಳಲ್ಲಿ ಬರೆದವುಗಳೆಂದು ಅವರು ತಿಳಿಸಿದ್ದಾರೆ.

ದಾಂಪತ್ಯ ಜೀವನದ ಪ್ರಾರಂಭ ದೆಸೆಯಲ್ಲಿ ಉಕ್ಕುವ ಪ್ರೀತಿ, ಉನ್ಮಾದ ಈ ರಚನೆಗಳಿಗೆ ಪ್ರೇರಕ. ಅದನ್ನು ಅಭಿವ್ಯಕ್ತಿಗೊಳಿಸಿರುವುದು ಹನಿಗವನ ಅಥವಾ ಚುಟುಕುಗಳ ರೀತಿಯಲ್ಲಿ. ಸಮಕಾಲೀನ ಸಂವೇದನೆಯಿಂದ ನಿಸ್ಸಂಕೋಚವಾದ ನುಡಿಚಿತ್ರಗಳಲ್ಲಿ ಅದನ್ನು ಹಿಡಿದಿಡಲು ಪ್ರಯತ್ನಿಸಿರುವ ಈ ಕವಿ ಅಲ್ಲಲ್ಲಿ ಓದುಗರ ಮನಸ್ಸನ್ನು ಸೆರೆಹಿಡಿಯಬಲ್ಲರು. ಉದಾಹರಣೆಗೆ ಕೆಲವನ್ನು ಇಲ್ಲಿ ನೋಡಬಹುದು.

**ನಿನ್ನ ನೆನಪಿನ ನೆರಳಲ್ಲಿ ಕುಳಿತು**
**ತುಟಿಗಳ ಫ್ರಿಜ್‌ನಲ್ಲಿ**
**ಮನ ಇಟ್ಟಾಗ**
**ಬೇಸಿಗೆಯ ಬಿಸಿಲಲ್ಲೂ**
**ಕಲ್ಬುರ್ಗಿ ಕಾಶ್ಮೀರ್**
**ನೀ ಮಹಾರಾಣಿಯಂತೆ**
**ಮೆರೆಯುವೆ ಏಕೆ?**
**ನಿನ್ನ ಸಾಮ್ರಾಜ್ಯದ ಪ್ರಜೆ**
**ನಾನೊಬ್ಬನೆ**
**ನಾ ಬರೆವ ಉದ್ದುದ್ದ ಪುಟಗಳು**
**ನಿನಗೆ ಆಲಿಂಗನಗಳು**
**ನೀ ಬರೆವ ಪುಟ್ಟ ಪತ್ರಗಳು**
**ನಿನ್ನ ಸಿಹಿ ಮುತ್ತುಗಳು.**

ಕೆಲವೇ ಪದಗಳನ್ನು ಬಳಸಿ, ನವೀನ ಕಲ್ಪನೆಯಿಂದ ಒಂದು ಚಿತ್ರವನ್ನು ಕಟ್ಟುವಲ್ಲಿ, ಮಾತಿನ ಚಮತ್ಕಾರದಿಂದ ಅರ್ಥಕ್ಕೆ ಹೊಸ ಮೆರುಗನ್ನು ತರುವಲ್ಲಿ, ಪ್ರೇಮದ ಉತ್ಕಟತೆ ಭಾವೋದ್ರೇಕದಲ್ಲಿ ಕೊನೆಗೊಳ್ಳದಂತೆ ನೋಡಿಕೊಳ್ಳುವಲ್ಲಿ ಇವು ಯಶಸ್ವಿಯಾಗುತ್ತವೆ. ಕಾವ್ಯಗುಣದಿಂದ ಕಳಕಳಿಸದೆ

ಹೇಳಿಕೆಗಳಂತೆ ತೋರುವ ರಚನೆಗಳೂ ಇಲ್ಲಿವೆ. ಹನಿಗವನದಲ್ಲಿ ಸಾಮಾನ್ಯವಾಗಿ ಕಂಡುಬಂದಿರುವ ಹಿಡಿತ ಇನ್ನುಳಿದ ಕವನಗಳ ಮಾತಿನಲ್ಲಾಗಲಿ, ರೀತಿಯಲ್ಲಾಗಲಿ ಕಂಡುಬರುವುದಿಲ್ಲ. ಅದೇನೇ ಇದ್ದರೂ ರಸಿಕರಿಗೆ ಈ ಸಂಕಲನ ಮೆಚ್ಚುಗೆಯಾಗುವದೆಂದು ಆಶಿಸಿದ್ದೇನೆ.

❖

# ಮನು ಬಳಿಗಾರ್ ಅವರ ಕಾವ್ಯ

ಡಾ. ಎಚ್. ಎಲ್. ಪುಷ್ಪ

ಕಾವ್ಯ ಎನ್ನುವ ಮಾಯಾಜಿಂಕೆ ಯಾರನ್ನೂ ಬಿಟ್ಟಿಲ್ಲ. ವಿಶೇಷವಾಗಿ ಈ ಮಾಧ್ಯಮ ಸಾಹಿತ್ಯ - ಸಾಂಸ್ಕೃತಿಕ ಒಡನಾಟ ಇಟ್ಟುಕೊಂಡವರನ್ನು ಒಂದಲ್ಲ ಒಂದು ಬಾರಿ ಸೆಳೆಯದೆ ಬಿಡುವಂತಹದಲ್ಲ. ಕಾವ್ಯದಿಂದಾಗುವ ಪ್ರಯೋಜನವೇನು ಅಥವಾ ಲಾಭವೇನು ಎನ್ನುವ ಪ್ರಶ್ನೆ ಪುರಾತನವಾದದ್ದಾದರೂ ಯುಗದಿಂದ ಯುಗಕ್ಕೆ ಆ ಪ್ರಶ್ನೆಯನ್ನು ಎದುರಿಸುತ್ತಲೇ ಬಂದಿದ್ದೇನೆ. ಪಂಪನೆಂಬ ನಮ್ಮ ಆದಿಕವಿ ತನ್ನ ಕಾವ್ಯದ ಆರಂಭದಲ್ಲೇ ಆ ಪ್ರಶ್ನೆಯನ್ನು ಕುರಿತಂತೆ ಚರ್ಚಿಸಿದ್ದಾನೆ. ಅರಿಕೇಸರಿಯ ಆಸ್ಥಾನದಲ್ಲಿದ್ದ ಅವನು 'ಬೆಳಗುವೆನಿಲ್ಲಿ ಲೌಕಿಕಂ, ಅಲ್ಲಿ ಜಿನಾಗಮಮಂ' ಎಂದು ತನ್ನ ಕಾವ್ಯದ ಆಯ್ಕೆ ಹಾಗೂ ಉದ್ದೇಶಗಳನ್ನು ಸ್ಪಷ್ಟಪಡಿಸುತ್ತಾನೆ. ಆದಿಪುರಾಣವನ್ನು ಜಿನಾಗಮದ ಧಾರ್ಮಿಕ ಕಾವ್ಯವಾಗಿ ನಿರೂಪಿಸಿದರೆ ಪಂಪಭಾರತವನ್ನು ತನ್ನ ಆಶ್ರಯದಾತ ಹಾಗೂ ಗೆಳೆಯನೂ ಆಗಿದ್ದ ಅರಿಕೇಸರಿಯ ಪರಾಕ್ರಮವನ್ನು ಅರ್ಜುನನೊಂದಿಗೆ ಸಮೀಕರಿಸಿ ಬರೆಯುತ್ತಾನೆ. ಹೀಗೆ ಬರೆಯುವುದರ ಮೂಲಕ ಕವಿತಾ ಗುಣಾರ್ಣವ ಎಂದು ತನ್ನನ್ನು ಉನ್ನತೀಕರಿಸಿಕೊಳ್ಳುತ್ತಾನೆ. ಕಾವ್ಯಕ್ಕೆ ಕಾರಣಗಳಿವೆ ಹಾಗೂ ಕಾಳಜಿಗಳೂ ಇವೆ ಎಂಬುದು ಸಾಧಾರಣವಾಗಿ ಒಪ್ಪಿತವಾದ ಮಾತಾಗಿದೆ.

ಮೇಲಿನ ಮಾತುಗಳನ್ನು ಸರ್ಕಾರದ ವಿವಿಧ ಸ್ಥಾನಗಳಲ್ಲಿ ಕಾರ್ಯ ನಿರ್ವಹಿಸಿದ್ದ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ, ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿರುವ ಮನು ಬಳಿಗಾರ್ ಅವರ ಕಾವ್ಯ ಓದಿದ ನಂತರ ಬರೆಯುತ್ತಿದ್ದೇನೆ. ಪ್ರಭುತ್ವ ಅಥವಾ ಅಧಿಕಾರದ ಸ್ಥಾನದಲ್ಲಿದ್ದ ಮಾತ್ರಕ್ಕೆ ಸಾಹಿತ್ಯ ಬರೆಯಬಾರದೆಂದು ನಿಯಮಗಳೇನೂ ಇಲ್ಲ. ಬಿಜ್ಜಳನ ಭಂಡಾರಿಯಾಗಿದ್ದ ಬಸವಣ್ಣ ಲೌಕಿಕ ಹಾಗೂ ಪಾರಮಾರ್ಥಿಕ ಜಗತ್ತಿನ ದ್ವಂದ್ವಗಳನ್ನು ಅರಿತೇ ವಚನಗಳನ್ನು ರಚಿಸಿದನು. ಸರ್ಕಾರದ ಉನ್ನತ ಹುದ್ದೆಯಲ್ಲಿದ್ದುಕೊಂಡೇ ಮಾಸ್ತಿ, ಸಿದ್ಧಯ್ಯ ಪುರಾಣಿಕ, ಪಿ.ಎಸ್. ರಾಮಾನುಜಂ ಸಾಹಿತ್ಯ ಚಟುವಟಿಕೆಗಳಲ್ಲಿ ಪ್ರೀತಿಯಿಂದ ತೊಡಗಿಸಿಕೊಂಡವರು. ಪ್ರಸಿದ್ಧ ರಾಜಕಾರಣಿ ವೀರಪ್ಪ ಮೊಯ್ಲಿ, ಕೆ.ಎಚ್. ಶ್ರೀನಿವಾಸ - ಈ ಮುಂತಾದವರು ರಾಜಕಾರಣದಲ್ಲಿದ್ದು ತಮ್ಮ ಕೃತಿಗಳನ್ನು

ರಚಿಸಿದರು. ಹೀಗಾಗಿ ಮನು ಬಳಿಗಾರ್ ಕವಿ, ಕಥೆಗಾರ, ನಾಟಕಕಾರ, ಅಂಕಣಕಾರ, ಜೀವನಚರಿತ್ರೆ, ಪ್ರಬಂಧಕಾರರಾಗಿ ತಮ್ಮನ್ನು ತೊಡಗಿಸಿಕೊಂಡಿರುವುದು ಅರ್ಥಪೂರ್ಣವಾಗಿಯೇ ಇದೆ. ಬೇರೆ ಬೇರೆ ಪ್ರಕಾರಗಳಲ್ಲಿ ಬರೆದಿದ್ದರೂ ಅವರಿಗೆ ಪ್ರಿಯವಾದ ಪ್ರಕಾರವೆಂದರೆ ಕಥೆ ಮತ್ತು ಕವಿತೆಯಾಗಿದ್ದು ಸೃಜನಾತ್ಮಕ ಸಾಹಿತ್ಯ ಕೊಡುವ ಆನಂದವನ್ನು ಬಲ್ಲವರಾಗಿದ್ದಾರೆ. ಸಾಮಾಜಿಕ ಕಳಕಳಿ ಮತ್ತು ಮನುಷ್ಯ ಸಂಬಂಧಗಳು ತಮ್ಮನ್ನು ಸೃಜನಶೀಲವಾಗಿಸಿವೆ ಎನ್ನುವ ಅವರ ಸಾಹಿತ್ಯದ ಕೇಂದ್ರ ಪ್ರಜ್ಞೆ ಗ್ರಾಮೀಣ ಜೀವನವೇ ಆಗಿದೆ. ನಗರ ಜೀವನದಲ್ಲಿದ್ದರೂ ಅವರ ಮನಸ್ಸು ಮತ್ತೆ ಮತ್ತೆ ತಮ್ಮ ಗ್ರಾಮೀಣ ಪರಿಸರಕ್ಕೇ ಹೋಗಲೆಳೆಸುತ್ತದೆ.

ಸಾಕಷ್ಟು ಅನುಕೂಲಸ್ಥ ಕುಟುಂಬದಿಂದ ಬಂದ ಇವರು ಉತ್ಕೃಷ್ಟವಾದ ಕೌಟುಂಬಿಕ ಪರಿಸರದಲ್ಲಿದ್ದವರು. ತಂದೆ ಪರಮೇಶ್ವರಪ್ಪನವರು ಪ್ರಗತಿಪರ ರೈತರಾಗಿ, ಸಾವಯವ ಕೃಷಿ, ಜೈವಿಕ ಕೃಷಿಯಲ್ಲಿ, ಒಕ್ಕಲುತನದಲ್ಲಿ ಹೊಸ ಪ್ರಯೋಗ ಮಾಡಿದವರು. ಮೆಣಸಿನಕಾಯಿ, ಉಳ್ಳಾಗಡ್ಡಿ ಬೆಳೆಯುವಲ್ಲಿ ದಾಖಲೆ ನಿರ್ಮಿಸಿದ್ದ ಇವರು ಧಾರವಾಡ ಜಿಲ್ಲೆಯಲ್ಲಿ ಬೆರಳೆಣಿಕೆಯ ಕೃಷಿ ಆದಾಯಕರ (Agricultural income tax) ಕೊಡುವ ಪ್ರತಿಷ್ಠಿತ ರೈತರಲ್ಲೊಬ್ಬರಾಗಿದ್ದರು. ದೇಶಭಕ್ತರೂ, ರಾಷ್ಟ್ರಪ್ರೇಮಿಯೂ ಆಗಿದ್ದು ಅವರು ಹೇಳುವ ಈ ಕುರಿತಾದ ಹಲವಾರು ಕಥೆಗಳು ಅವರ ಎಂಟು ಗಂಡುಮಕ್ಕಳೂ, ಮೂವರೂ ಹೆಣ್ಣುಮಕ್ಕಳೂ ಪ್ರಭಾವಕ್ಕೆ ಒಳಗಾಗುವಂತೆ ಮಾಡಿದ್ದರು. ಬಾಲ್ಯ ಜೀವನದಲ್ಲಿ ಕಂಡುಂಡ ತಮ್ಮ ಊರಾದ ಶಿಗ್ಲಿಯ ಜಾತ್ರೆ ಉತ್ಸವ, ಕ್ರೀಡೆ, ಜಾನಪದ ಜೀವನ ಸಾಕಷ್ಟು ಪರಿಣಾಮ ಬೀರಿವೆ. ಚಿಕ್ಕಂದಿನಲ್ಲಿಯೇ ದೊರಕಿದ ಯೋಗಾಸನ, ಕುಸ್ತಿ, ಮಲ್ಲಕಂಬಗಳಲ್ಲಿ ಪರಿಣತರಿಂದ ಪಡೆದ ತರಬೇತಿಗಳು ಬದುಕನ್ನು ಶಿಸ್ತುಬದ್ಧವಾಗಿ ನಡೆಸಲು ದಾರಿ ತೋರಿವೆ. ಬಾಲ್ಯದಿಂದಲೂ ಪಡೆದ ಉತ್ತಮ ಕೌಟುಂಬಿಕ ಪರಿಸರ, ಅವರ ವ್ಯಕ್ತಿತ್ವವನ್ನು ಪ್ರಭಾವಿಸಿದ್ದಲ್ಲದೆ ಪ್ರತಿಭೆ ಹಾಗೂ ನಾಯಕತ್ವವನ್ನು ಪಡೆಯುವಂತೆ ಮಾಡಿವೆ.

ಈ ಮೇಲಿನ ಎಲ್ಲಾ ಅಂಶಗಳು ಅವರ ಕವಿತೆಯ ಮೇಲೆ ಪ್ರಭಾವ ಬೀರಿವೆ ಕಾವ್ಯದ ಬಗ್ಗೆ, ಬದುಕಿನ ಬಗ್ಗೆ, ದಾಂಪತ್ಯದ ಬಗ್ಗೆ, ಕನ್ನಡವನ್ನು ಕಟ್ಟುವ ಬಗ್ಗೆ ಖಚಿತ ನಿಲುವನ್ನು ರೂಪಿಸಿಕೊಳ್ಳುವಂತೆ ಮಾಡಿವೆ. ವ್ಯಕ್ತಿತ್ವದಲ್ಲಿನ ಪೊಳ್ಳುತನ, ಗಟ್ಟಿತನ ದೌರ್ಬಲ್ಯಗಳು ಕಾವ್ಯವನ್ನು ಕುರಿತಾದ ಅಭಿವ್ಯಕ್ತಿಗಳು ಕಂಡುಬರುತ್ತವೆ. ಕವಿಯ ಒಳಗಿನ ಲೋಕದ ಕಥೆ-ವ್ಯಥೆ, ನೋವು-ನಲಿವು ಏನೇ ಇರಲಿ ಅವನ ಸಮಾಜದ ಕಲ್ಪನೆ ಮಾತ್ರ ಆರೋಗ್ಯಕರವಾಗಿರಲೇಬೇಡ ಇಂತಹ ಸ್ವಾಸ್ಥಲೋಕವೊಂದು ಮತ್ತೆ ಮತ್ತೆ ಕವಿತೆಗಳಲ್ಲಿ ಕಟ್ಟಲ್ಪಡುತ್ತದೆ. ಭೂಮಿ-ಮಕ್ಕಳು ಎಂಬ ಹನಿಗವಿತೆಯಲ್ಲಿ ತನ್ನ ತಂದೆಯ ಕೃಷಿಯನ್ನು ವಿವರಿಸುವುದು ತುಂಬಾ ಆಪ್ತವಾಗಿದೆ.

**ಅಪ್ಪ ಜೀವನ ಪರ್ಯಂತ**
**ಕೇವಲ ಎರಡನ್ನು ಹದ ಮಾಡುತ್ತಿದ್ದ**
**ಒಂದು : ಭೂಮಿ**
**ಎರಡು : ಮಕ್ಕಳು**

ತಮ್ಮ ಬದುಕಿನ ಮೇಲೆ ತಂದೆಯ ವ್ಯಕ್ತಿತ್ವದ ಪ್ರಭಾವವನ್ನು ಇಲ್ಲಿನ ಹನಿಗವಿತೆಗಳು ಮತ್ತೆ ಮತ್ತೆ ಕಟ್ಟಿಡುತ್ತವೆ. ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ, ಉತ್ತಮ ಭವಿಷ್ಯ ಕಟ್ಟಿಕೊಟ್ಟಿದ್ದರ ಕೃತಜ್ಞತೆ ಮೇಲಿಂದ ಮೇಲೆ ವ್ಯಕ್ತವಾಗುತ್ತದೆ. ಮನು ಬಳಿಗಾರ್ ಅವರ ಸಹೋದರರೆಲ್ಲರೂ ಒಳ್ಳೆಯ ವಿದ್ಯಾಭ್ಯಾಸ ಪಡೆದಿದ್ದು ಸರ್ಕಾರದಲ್ಲಿ ಒಳ್ಳೆಯ ನೌಕರಿ ಮಾಡುವ ಸಹೋದರರೆಲ್ಲರೂ ಒಳ್ಳೆಯ ವಿದ್ಯಾಭ್ಯಾಸ ಪಡೆದಿದ್ದು ಸರ್ಕಾರದಲ್ಲಿ ಒಳ್ಳೆಯ ನೌಕರಿ ಮಾಡುವ ಅಧಿಕಾರಿಗಳೂ ಆಗಿದ್ದಾರೆ. ಅಪ್ಪನ ಜೀವನದ ಉದ್ದೇಶ ಹಾಗೂ ಕನಸುಗಳು ಈ ಕೆಳಗಿನಂತಿವೆ.

1. ಅಪ್ಪನ ಜೀವನಕ್ಕೆ ಒಂದೇ ಮಾರ್ಗ
ಕೇವಲ ಒಂದು,
ದ್ವಿತೀಯ ಮಾರ್ಗ
ಅವರಿಗೆ ಹಿಡಿಸುವುದಿಲ್ಲ.
ಅಂತೆಯೇ ಅಪ್ಪ ಅದ್ವಿತೀಯ

2. ಅಪ್ಪ ಎಷ್ಟೊಂದು ಸಾದಾ ಎಂದರೆ
ಅವರ ಬಯಕೆ ಒಂದೇ ಒಂದು
ಕೇವಲ ಒಂದು.
ಅಂದರೆ ಎಲ್ಲಾ ಸ್ಪರ್ಧೆಗಳಲ್ಲೂ
ನಾವು ಪಡೆಯಬೇಕಾದ
ಸ್ಥಾನ 1

3. ಅಪ್ಪ ಮಹಾ ಕೋಪಿಷ್ಟ
ಬೆಂಕಿಯ ಚೆಂಡು,
ಅಂತೆಯೇ ನಮಗೆ
ಕಷ್ಟ, ನೋವು, ಆತಂಕಗಳ ಛಳಿ ಆದಾಗ
ಅಪ್ಪನ ಸಮೀಪವೇ ಹೋಗಬೇಕೆಂದಿನಿಸುತ್ತದೆ.
ಬಹಳ ಹಿತವೆನಿಸುತ್ತದೆ
ಅದಕ್ಕಾಗಿಯೇ ಅಪ್ಪನೆಂದರೆ ಹಿತವಾದ ಬೆಂಕಿ
ನಮಗೆ ಒಲಿದ ಅಗ್ನಿದೇವ.

ಸಾಧಾರಣವಾಗಿ ಆಸ್ತಿ ಪಾಸ್ತಿ ಇರುವಂತಹ ಶ್ರೀಮಂತ ಜಮೀನ್ದಾರಿ ಕುಟುಂಬಗಳಲ್ಲಿ ತಂದೆಯೇ ನಿರ್ಣಾಯಕ ವ್ಯಕ್ತಿಯಾಗಿದ್ದು ತನ್ನ ಸಂತಾನದ ಹಿತರಕ್ಷಣೆ ಕಾಯುವವನೂ ಅವನೇ ಆಗಿರುತ್ತಾನೆ. ತಾನು ಬಲ್ಲ ಲೋಕ ವ್ಯವಹಾರದ ಜ್ಞಾನದಲ್ಲಿಯೇ ಮಕ್ಕಳ ಕೈಹಿಡಿದು ನಡೆಸುತ್ತಾನೆ. ಇಂತಹ ಕುಟುಂಬಗಳಲ್ಲಿ ತಾಯಿಯದು 'ಪಾಲಿಸುವ' ಪಾತ್ರ ಮಾತ್ರವಾಗಿದ್ದು ಆಕೆ ಆದರ್ಶ ಸತಿಯಾಗುತ್ತಾಳೆ. ಹೀಗಾಗಿ ಬಳಿಗಾರ್

ಅವರ ಕಾವ್ಯದಲ್ಲಿ ತಾಯಿಗಿಂತಲೂ ತಂದೆಯ ವ್ಯಕ್ತಿತ್ವದ ಪ್ರಭಾವವೇ ಪ್ರಧಾನವಾಗಿ ಎದ್ದುತೋರುತ್ತದೆ. ತನ್ನೊಡಲಿನ ಬೆಂಕಿಯಲ್ಲಿ ಪುಟಕ್ಕಿಟ್ಟ ಬಂಗಾರವನ್ನಾಗಿಸುವ 'ಅಗ್ನಿದೇವ'ನನ್ನಾಗಿ ತಂದೆಯನ್ನು ಕಾಣಿಸಿರುವುದು ಗೌರವ ಸೂಚಕವಾಗಿಯೇ ತನ್ನ ಸಂತಾನವನ್ನು ಕಂಡುಬರುತ್ತದೆ.

ಮನು ಬಳಿಗಾರ್ ಅವರ ಆಯ್ದ ಕವನಗಳ ಸಂಕಲನದಲ್ಲಿ ವಿಶೇಷವಾಗಿ ಗಮನ ಸೆಳೆಯುವುದು ವ್ಯಕ್ತಿ ಕೇಂದ್ರಿತ ಕವಿತೆಗಳು. ಈಗಾಗಲೇ ಪ್ರಸಿದ್ಧರಾಗಿರುವ, ನಮ್ಮ ನಡುವೆ ಜೀವಂತವಿರುವ, ಹಲವು ಕಾರಣಕ್ಕಾಗಿ ಹೆಸರು ಮಾಡಿರುವ ವ್ಯಕ್ತಿತ್ವಗಳನ್ನು ಕುರಿತಾದ ಕವಿತೆಗಳು ಆಪ್ತವೆನಿಸುತ್ತವೆ. ಇಂತಹ ವ್ಯಕ್ತಿತ್ವಗಳ ಬಗ್ಗೆ ಅಭಿಮಾನ, ಗೌರವಗಳು ಎದ್ದು ಕಾಣುತ್ತಿದ್ದು ಆ ವ್ಯಕ್ತಿತ್ವಗಳ ಐದಾರು ತಲೆಬಾಗಿರುವ ಕವಿಯ ವಿನಯ ಮೆಚ್ಚುವಂತಾದ್ದಾಗಿದೆ. ವಿಶೇಷವಾಗಿ ಗಮನ ಸೆಳೆಯುವುದು 'ಡಾ. ಅಂಬೇಡ್ಕರ್' ಎಂಬ ಕವಿತೆ. ಅಂಬೇಡ್ಕರ್ ಅವರನ್ನು ದಲಿತರ ಪಾಲಿಗೆ ಕಿಚ್ಚನ್ನುಂಟುಮಾಡುವ, ಜ್ಞಾನ ಶಕ್ತಿಯಾದ, ಆಲೋಚನೆಯೇ ಇಲ್ಲದವರ ಪಾಲಿಗೆ ವಿಮೋಚನೆಯಾದ, ಪ್ರಾಣವಾಯುವೇ ಆದ ಪರದೇಶಿಗಳ ಪರಮದೈವನ್ನಾಗಿ ಕಂಡುಕೊಳ್ಳಲಾಗಿದೆ. ಇದೊಂದು ಉತ್ತಮ ಕವಿತೆಯಾಗಿದೆ. ಅಂಬೇಡ್ಕರ್ ಅವರನ್ನು ಕುರಿತಾದ 'ಹುಲ್ಲಿನಲ್ಲಿಯೂ ನೆಲ್ಲು ಬೆಳದೇನೆಂಬ ಛಲ ನೀನು' ಎಂಬ ಮಾತು ಸಾವಿರಾರು ವರ್ಷಗಳಿಂದ ಕತ್ತಲಲ್ಲಿ ಮುಳುಗಿಹೋಗಿದ್ದ ದಲಿತರ, ಪಾಲಿನ ಬೆಳಕು ಎಂಬಂತೆ ಸಂಕೇತಿಸಲ್ಪಡುತ್ತದೆ.

**ಹುಲ್ಲಿನಲ್ಲಿಯೂ ನೆಲ್ಲು**
**ಬೆಳೆದೇನೆಂಬ ಛಲ ನೀನು**
**ಯೋಚನೆ ಆಲೋಚನೆ ಇಲ್ಲದ**
**ನಿರ್ಲೋಚನರ ವಿಮೋಚನೆಯು ನೀನು** (ಡಾ. ಅಂಬೇಡ್ಕರ್)

'ಶರೀಫ'ನನ್ನು ಕುರಿತಾದ ಕವಿತೆಯಲ್ಲಿ 'ಹಿಂದೂ ಮುಸ್ಲಿಂರ' ಐಕ್ಯತೆಯ ಸಂಕೇತವನ್ನಾಗಿಯೇ ನೋಡಲಾಗಿದೆ. ರೆಂಬೆಕೊಂಬೆಗಳಿದ್ದರೂ ಫಲರುಚಿಯಿಂದ, ಮೆಕ್ಕಾ ಕಾಶಿ ಭಕ್ತರಿಗೆಲ್ಲ ಒಬ್ಬನೆ ತಂದೆ" ಎಂಬ ಮಾತುಗಳು ಹಿಂದೂ ಮುಸ್ಲಿಂರನ್ನು ಒಡೆದು ಆಳುವ ವ್ಯವಸ್ಥೆಯನ್ನು ಕುರಿತು ಪ್ರಶ್ನಿಸುತ್ತದೆ. 'ತಾಯಿ ತೆರೇಸಾ' ಕವಿತೆಯಲ್ಲಿ ಲಕ್ಷ, ಲಕ್ಷ ಬಡವರಿಗೆ, ಅನಾಥರಿಗೆ ತಾಯಿಯಾದ ತೆರೇಸಾ ಅವರನ್ನು ಕುರಿತು ಮೆಚ್ಚುಗೆಯಿದೆ. ದೇವತೆಯೆನ್ನುವ ಪದಕ್ಕೆ ತೆರೇಸಾ ಅವರೇ ಪ್ರತಿರೂಪ ಎಂಬ ಅಭಿಮಾನವಿದೆ. ಈ ತರಹದ ವಿಶೇಷ ವ್ಯಕ್ತಿತ್ವ ಕುರಿತಾದ ಕವಿತೆಗಳು ಆಯಾ ಸಂದರ್ಭಗಳಿಗೆ ತಕ್ಕಂತೆ ಹುಟ್ಟಿರಬಹುದಾದರೂ ಅವುಗಳ ಸಿನಿಕತೆಯಿಲ್ಲ. ಕೇವಲ ಕವಿಯಾಗಿ ಕವಿತೆ ಬರೆಯುತ್ತಿದ್ದೇನೆ ಎಂಬ ಒಣ ಅಭಿಮಾನವೂ ಇಲ್ಲ. ಆ ವ್ಯಕ್ತಿತ್ವಗಳ ಹೃದಯ ವೈಶಾಲ್ಯಕ್ಕೆ ಸ್ಪಂದಿಸಿಯೇ ಕವಿ ಕವಿತೆಯನ್ನು ಬರೆದಿದ್ದಾರೆ.

****************

**ದೇಶ ಭಾಷೆಗಳ ಸಾಗರ ದಾಟಿ**
**ಸರ್ವ ಮನುಕುಲದ ಹೃದಯ ಮೀಟಿ**

**ನೈಟಿಂಗೇಲಳ ಪ್ರತಿಸೃಷ್ಟಿ ತಾಯಿ**
**ನಮಗಿಲ್ಲ ಬೇರೆ ದೇವತೆ**

'ಗಾಂಧಿ' ಮಹಾತ್ಮರಾಗಿ, ಜನ ಸಾಮಾನ್ಯರ ಮನಸ್ಸಿನಲ್ಲಿ ತಮ್ಮ ಬಲಿದಾನದಿಂದಾಗಿಯೇ ಹುತಾತ್ಮರಾದವರು. ಗಾಂಧಿಯನ್ನು ಕುರಿತು ಕನ್ನಡದಲ್ಲಿ ಬಂದ ಕವಿತೆಗಳನ್ನು ಕುರಿತು ಅಧ್ಯಯನ ಮಾಡಿದರೆ ಗಾಂಧಿ ಜನಮಾನದಲ್ಲಿ ಬೆರೆತುಹೋದ ಬಗ್ಗೆ ಗೌರವ ಹುಟ್ಟಿಸುತ್ತದೆ. ಗಾಂಧಿಯಂತಹ ಮಹಾತ್ಮ ಭಾರತದಲ್ಲಿ ಮಾತ್ರವಲ್ಲ ದೂರದ ಆಫ್ರಿಕಾದಲ್ಲಿ ವರ್ಣಭೇದದ ಹೋರಾಟದಲ್ಲಿ ನೆಲೆನಿಂತ ಹೆಸರು, ನೆಲ್ಸನ್ ಮಂಡೇಲಾನಂತಹ ಜನ ನಾಯಕನ ಮೇಲೆ ಗಾಂಧಿಯ ಪ್ರಭಾವ ಅಗಾಧವಾದದ್ದು. ''ಗಾಂಧಿ' ಕುರಿತಾದ ಎರಡು ಕವಿತೆಗಳು ಈ ಸಂಕಲನದಲ್ಲಿ ಕಾಣಸಿಗುತ್ತದೆ.

**ಮತ್ತೆ**
**ನಿನ್ನ ಗಟ್ಟಿ ಸಾಲುಗಳು**
**ಮೆಟ್ಟಿ ಮೆಟ್ಟಿ**
**ನೆಲ್ಸನ್ ಮಂಡೇಲಾ**
**ದೂರದ ಆಫ್ರಿಕಾದಲ್ಲಿ**
**ಮೊಳಕೆ ಒಡೆಯ ಬೇಕಾದದ್ದು**
**ಅಷ್ಟೇ ಸೋಜಿಗ! (ಗಾಂಧಿ)**
**ಗಾಂಧೀಜಿಯ**
**ಈ ಪುಟ್ಟ ಭೂಮಿಯಲಿ**
**ಪುಣ್ಯ ಕೋಟಿಗಳಿಗೂ ಗತಿಯಿಲ್ಲದಾಗಿದೆ**
**ಎಲ್ಲೆಡೆ ಕೋಮು ವ್ಯಾಘ್ರಗಳ ಹಾವಳಿ**
**ರಕ್ತ ಪಿಪಾಸುಗಳ ತುಂಬಿದ ಪಿಪಾಯಿ**
**ಅಹಿಂದೆಯು ಅಸುನೀಗಿ**
**ಗಟ್ಟಿಗೊಂಡಿವೆ ಗೋರಿ** (ಗಾಂಧಿ ಜಯಂತಿಯಂದು)

ಈ ಮೇಲಿನ ಕವಿತೆಗಳಲ್ಲದೆ 'ಕಂಬಾರ'ರನ್ನು ಕುರಿತಾದ ಕವಿತೆಯಲ್ಲಿ ''ಸಣ್ಣಾಟ-ದೊಡ್ಡಾಟ ಬಯಲಾಟಗಳಿಗಲ್ಲದೆ ಪಾರಿಜಾತಕ್ಕೂ ಪರಿಮಳ ಪೂಸಿಸಿ, ದಟ್ಟಿ ದಾವಣಿ ತೊಡಿಸಿ, ಶಿಸ್ತಿನಿಂದಾಡಿಸಿ ರಸದೂಟ ಮಾಡಿಸುವ ಶಾಸ್ತ್ರ ಪ್ರವೀಣ" ಎಂಬ ಸಾಲುಗಳು ಕಂಬಾರರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಡಾ. ರಾಜಕುಮಾರ್, ರಾಮಕೃಷ್ಣ ಹೆಗಡೆ ; ಬುದ್ಧನನ್ನು ಕುರಿತು 'ನಡಿಗೆ', ಸರ್ವಜ್ಞ - ತಿರುವಳ್ಳುವರ್ - ಈ ಮುಂತಾದ ಕವಿತೆಗಳು ಈ ವಿಶೇಷ ವ್ಯಕ್ತಿತ್ವಗಳನ್ನು ಕುರಿತು ಬರೆಯಲೇಬೇಕೆಂಬ ಒತ್ತಡದಲ್ಲಿ ಹುಟ್ಟಿರುವುದರಿಂದ ನೈಜತೆ ಎದ್ದು ಕಾಣುತ್ತದೆ. ಸಮಕಾಲೀನ ಸಂದರ್ಭದಲ್ಲಿ 'ಜಯಂತಿ'ಗಳೆಂಬ ಪದಗಳು

ಆಯಾ ಸಂದರ್ಭದಲ್ಲಿ ಮಿನುಗಿ ಮಸುಕಾಗದ ನಾಣ್ಯಗಳಾದುದೂ ಕವಿ 'ಅಭಿವ್ಯಕ್ತಿಯ' ತುಡಿತಗಳನ್ನಾಗಿಸಿ ಬರೆದಿರುವ ಕ್ರಮ, ಬರೆಯಲೇಬೇಕೆನ್ನುವ ಒತ್ತಡ ಮೆಚ್ಚುಗೆ ತರಿಸುತ್ತದೆ.

'ನಯಾಗರಾ ಜಲಪಾತ' ಎಂಬ ಕವಿತೆಯಲ್ಲಿ ನಯಾಗರಾದ ಜಲಪಾತದ ಮುಂದೆ ನಿಂತರೂ ತನ್ನ ನಾಡಿನ 'ನೂರಾರು ಗೇರುಸೊಪ್ಪೆಗಳು ಖ್ಯಾತಿ ಮಾಡಿದಂತೆ' ಎನ್ನುವ ಬಡ್ತಿಕ್ರಮ ಪರಕೀಯತೆಯ ಸೌಂದರ್ಯದ ಎದುರು ತನ್ನ ನಾಡಿನ ಸೌಂದರ್ಯವನ್ನು ಹೋಲಿಸುವಂತಾದ್ದಾಗಿದ್ದು ಆಪ್ತವಾದದ್ದಾಗಿದೆ. ಈ ಕವಿತೆಗಳಲ್ಲಿದೆ ಹೆಣ್ಣು ಗಂಡಿನ ದಾಂಪತ್ಯದ ಬಗ್ಗೆ, ಕನ್ನಡ ನಾಡು-ನುಡಿ ಬಗ್ಗೆ ವಿಶೇಷವಾದ ಕವಿತೆಗಳು ಈ ಸಂಕಲನದಲ್ಲಿವೆ. 'ಸರಕಾರಿ ನೌಕರರ ಸ್ವಗತ ಗೀತೆ' ತನ್ನ ಧ್ವನಾರ್ಥ್ಯ ಹಾಗೂ ವ್ಯಂಗ್ಯಾರ್ಥಗಳಿಂದಲೇ ಗಮನ ಸೆಳೆಯುವ ಕವಿತೆ. ಸರ್ಕಾರಿ ನೌಕರ 'ರಾಜಕಾರಣಿಗಳ ಹಾಗೂ ಉನ್ನತ ಅಧಿಕಾರಿಯ' ಕೈಯಲ್ಲಿ ಸಿಲುಕಿ ಒದ್ದಾಡುವ ಅರಾಜಕ ವ್ಯವಸ್ಥೆಯ ಕಡೆ ಈ ಕವಿತೆ ಕೈದೋರುತ್ತದೆ. ಇಂತಹ ಕಠಿಣವಾದ ಪ್ರಸಂಗಗಳನ್ನು ನಿಭಾಯಿಸುವ ಬಳಿಗಾರ್ ಸರ್ಕಾರಿ 'ನೌಕರನನ್ನು' ಬುಟ್ಟಿಯೊಳಗಣ ಹಾವು ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ಸಿಟ್ಟಿಗೆದ್ದರೂ ರೊಚ್ಚಿಗೇಳಲಾರದ, ಹಲ್ಲುಮುರಿದ ಹಾವಾದ ಸರ್ಕಾರಿ ನೌಕರನ ಚಿತ್ರಣ ಇದುವರೆಗೂ ಕಾವ್ಯ ಪ್ರಪಂಚದಲ್ಲಿ ಕಾಣದಿರುವ ರಚನೆಯಾಗಿದೆ.

**ಸರಕಾರಿ ಸೇವೆಯ**
**ಬುಟ್ಟಿಯೊಳಗಣ ಹಾವು**
**ಕೆರೆಗೊಡ್ಡ ಮಣ್ಮುಕ್ಕ ಯಾವುದೂ ನಾನಲ್ಲ**
**ಶಿವನ ಸೇವೆಯ ಮಾಡಿ**
**ವಿಷ್ಣುವಿನ ಶಯನದಡಿ**
**ಬಹಳ ತಿಳಿದಿರುವ**
**ಬುದ್ಧಿಜೀವಿ**

ರವೀಂದ್ರನಾಥ ಠಾಕೂರ್ ಅವರ ವ್ಯಕ್ತಿತ್ವ ಹಾಗೂ ಕವಿತ್ವಕ್ಕೆ ಮನಸೋತ ಕವಿ ಅವರ ಎರಡು ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸಾಕಷ್ಟು ಸಂಖ್ಯೆಯ ಹನಿಗವಿತೆಗಳು ಈ ಸಂಕಲನದಲ್ಲಿದ್ದು ಠಾಗೂರ್ ಬರೆದ ಹನಿಗವನಗಳನ್ನು 'ಮಿಂಚಿನ ಹನಿಗಳು' ಎಂಬ ಹೆಸರಿನಿಂದ ಕನ್ನಡಿಸಿದ್ದಾರೆ. ಬಹುಮುಖ ಪ್ರತಿಭೆಯನ್ನುಳ್ಳ ಮನು ಬಳಿಗಾರ್ ಕಾವ್ಯವನ್ನು ಲೇಖಕನೊಬ್ಬ ಏಕಕಾಲಕ್ಕೆ ಕವಿಯೂ, ಅಧಿಕಾರಿಯೂ ಆಗಬಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ನೋಡಬಹುದಾಗಿದೆ. ಕವಿಯಾಗಬೇಕು ಎಂಬ ಕೇವಲ ತುರ್ತಿನ ಕವಿತೆಗಳಲ್ಲ ಇವು. ಕವಿ ಮನಸ್ಸಿನ ಸೃಜನಶೀಲತೆಯುಳ್ಳ ಲೇಖಕನೊಬ್ಬನ ಕಂಡುಂಡ ಜೀವನದ ಅಭಿವ್ಯಕ್ತಿಯಾಗಿಯೇ ಇಲ್ಲಿನ ಕವಿತೆಗಳು ಮೈತಾಳಿವೆಯೆಂದು ನಿಸ್ಸಂಶಯವಾಗಿ ಹೇಳಬಹುದು. ಪ್ರಾಮಾಣಿಕ ಮನಸ್ಸಿನ ತುಡಿತಗಳಾಗಿರುವುದರಿಂದಲೇ ಕವಿತೆಗಳು ಓದಿಸಿಕೊಳ್ಳುವ ಶಕ್ತಿ ಪಡೆದಿವೆ ಎಂದು ಧಾರಾಳವಾಗಿ ಹೇಳಬಹುದಾಗಿದೆ.

❖

# ನಯಾಗರಾ ಮತ್ತು ಜಲಪಾತ ಕವನ ಸಂಕಲನದ ವಿಮರ್ಶೆ

ಡಾ.ಮುನಿಯಪ್ಪ

'ನಯಾಗರಾ ಮತ್ತು ಜಲಪಾತ' ಮನು ಬಳಿಗಾರ್ ಅವರು 1998ರಲ್ಲಿ ರಚಿಸಿರುವ ಕವನ ಸಂಕಲನ. ಈ ಸಂಕಲನದಲ್ಲಿ ಶೀರ್ಷಿಕೆಯ ಕವನವನ್ನು ಒಳಗೊಂಡಂತೆ, ಯುದ್ಧದ ಹಾಡು, ಜ್ಯೋತಿಷಿಯ ಹೊಸ ಫಾರ್ಮುಲ, ಮಹಾಸತಿಯರ ಪರಂಪರೆ, ಗಜಲ್, ಭಾಷಾ ವೈಚಿತ್ರ್ಯ, ನಾವು ಇರಬೇಕು, ರಾಜಕಾರಣ, ಹಣ-ಹೆಣ, ಕೇಳುವುದು, ಮಂಡೇಲ, ಬೇಕಿರುವುದು, ರಸ್ತೆ ನಿಯಮಗಳು, ದಲಿತನ ಮಹಿಮೆ, ಗಾಂಧೀ ಜಯಂತಿಯಂದು, ಗಾಂಧೀ, ರಾತ್ರಿಯಲ್ಲಿ.... ಮುಂತಾದ ಕವನಗಳಿವೆ. ಈ ಕವನ ಸಂಕಲನದಲ್ಲಿರುವ ವಸ್ತು ಯಾವುದೇ ಒಂದು ನಿರ್ದಿಷ್ಟವಾದ ಪ್ರಕಾರಕ್ಕೆ ಸೀಮಿತವಾಗದೆ ಹಲವಾರು ನೆಲೆಗಳಲ್ಲಿ ಕವಿಯು ಸಮಾಜವನ್ನು ಕುರಿತು ಅಭಿವ್ಯಕ್ತಿಸಿರುವುದನ್ನು ಗುರುತಿಸಬಹುದಾಗಿದೆ. ಆದ್ದರಿಂದ ಈ ಕವನಗಳ ವಸ್ತು ಸಂಕೀರ್ಣತೆಯಿಂದ ಕೂಡಿರುವುದಾಗಿದೆ. ಕೆಲವು ಕವನಗಳು ಸುದೀರ್ಘವಾಗಿದ್ದರೆ ಮತ್ತೆ ಕೆಲವು ಬಹಳ ಸಂಕ್ಷಿಪ್ತತೆಯಿಂದ ಕೂಡಿವೆ. ನಯಾಗರಾ ಜಲಪಾತ, ಯುದ್ಧದ ಹಾಡು, ಜ್ಯೋತಿಷಿಯ ಹೊಸ ಫಾರ್ಮುಲ, ಮಹಾಸತಿಯರ ಪರಂಪರೆ, ನಾವು ಇರಬೇಕು, ರಾಜಕಾರಣ, ದಲಿತನ ಮಹಿಮೆ, ಗಾಂಧೀ ಜಯಂತಿಯಂದು, ಕವನಗಳು ಸುದೀರ್ಘವಾಗಿದ್ದರೆ, ಹಣ-ಹೆಣ, ಮಂಡೇಲ, ರಸ್ತೆ ನಿಯಮಗಳು, ರಾತ್ರಿಯಲ್ಲಿ ಮುಂತಾದ ಕವನಗಳು ಸಂಕ್ಷಿಪ್ತವಾಗಿದ್ದು ಹನಿಗವನಗಳ ರೂಪದಲ್ಲಿವೆ ಎನ್ನಬಹುದು. ಕವನಗಳ ವಸ್ತು ಸಂಕ್ಷಿಪ್ತವಾಗಿದ್ದರೂ ಪರಿಣಾಮಕಾರಿಯಾಗಿವೆ. ಸಹೃದಯನಿಗೆ ಮುಟ್ಟಬೇಕಾದ ವಿಚಾರವನ್ನು ತಲುಪಿಸುವಲ್ಲಿ ಯಶಸ್ವಿಯಾಗಿವೆ.

"ನಯಾಗರಾ ಜಲಪಾತ" ಕವನವು ನಿಸರ್ಗದ ಸೌಂದರ್ಯಕ್ಕೆ ಕನ್ನಡಿಯನ್ನು ಹಿಡಿಯುವಂತಹ ಕವನವಾಗಿದೆ. ಸಹಜವಾಗಿಯೇ ಪ್ರಕೃತಿಯ ಸೌಂದರ್ಯಕ್ಕೆ ಮನಸೋಲದ ಕವಿಗಳಿರುವುದಿಲ್ಲ. ಸಾಮಾನ್ಯ ಜನರಿಂದ, ಕವಿ ಹೃದಯದ ಮನಸ್ಸಿರುವ ಜನರವರೆಗೂ ಪ್ರಕೃತಿಯ ಸೌಂದರ್ಯವು ಬಹಳ ವಿಶಿಷ್ಟವಾಗಿ ಗೋಚರವಾಗುತ್ತದೆ. ಅಂತಹ ಒಂದು ಸೌಂದರ್ಯದ ಗಣಿಯಾಗಿರುವುದು 'ನಯಾಗರಾ ಜಲಪಾತ' ಇದರ ವರ್ಣನೆಯನ್ನು ಕವಿಯು ಬಹಳ ಅದ್ಭುತವಾಗಿ ಕಟ್ಟಿಕೊಟ್ಟಿರುವರು. ಕನ್ನಡ ಕಾವ್ಯದ ಸಂದರ್ಭದಲ್ಲಿ ಈ ರೀತಿಯ ಜಲಪಾತಗಳು ಮತ್ತು ನಿಸರ್ಗದ ಸೌಂದರ್ಯವನ್ನು ಕುರಿತು ಹಲವಾರು ಕವನಗಳು ರಚನೆಗೊಂಡಿದ್ದರೂ, ಅಮೇರಿಕಾದಲ್ಲಿನ 'ನಯಾಗರಾ ಜಲಪಾತ'ವು ತನ್ನದೇ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಜಾಗತಿಕವಾಗಿ ಅದಕ್ಕಿರುವ ಸ್ಥಾನಮಾನವು ಬೇರೆ ಯಾವುದೇ ಜಲಪಾತಕ್ಕಿಲ್ಲ ಎನ್ನಬಹುದು.

ಈ ಜಲಪಾತವನ್ನು ಕವಿಯು ಕಂಡಂತಹ ಸಂದರ್ಭದಲ್ಲಿ ಅದರ ಸೌಂದರ್ಯದ ವರ್ಣನೆಯನ್ನು ಹೀಗೆ ಅಭಿವ್ಯಕ್ತಿಸಿರುವುದು ಬಹಳ ವಿಶಿಷ್ಟವಾಗಿದೆ. ಅದಕ್ಕೆ ಈ ಸಾಲುಗಳನ್ನು ನಿದರ್ಶನವಾಗಿ ಕಾಣಬಹುದು.

**"ವಿಶ್ವದೊಳಗಣ ಬಿಳಿ ಎಲ್ಲವನ್ನು ಸೇರಿಸಿ**
**ವೈಭವದಿ ಕೆಳಗೆ ಇಳಿಯುತಿಹೆ ನೀನು**
**ನಿನ್ನುದ್ದ ನಿನ್ನಗಲ ಅಳೆವವರ ಕಾಣೆ**
**ಅಗಾಧ ಅಪ್ರತಿಮ ಶಬ್ದಗಳು ಸಾಲವು**
**ಕವಿ ಕಬ್ಬಿಗರೆಲ್ಲ ಸೋತು ಹೋಗಿಹರು**
**ನಿನ್ನ ಮೋಹಕ ರೂಪ ಬಣ್ಣಿಸಲು"**

'ಯುದ್ಧದ ಹಾಡು' ಕವನದ ವಸ್ತು ಅಮೇರಿಕಾ ದೇಶವು ವಿಯೆಟ್ನಾಂ ವಿರುದ್ಧ ಯುದ್ಧವನ್ನು ಮಾಡಿದಾಗ ಅದರ ಭೀಕರ ಪರಿಣಾಮವು ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿತ್ತು ಎನ್ನುವುದನ್ನು ತಿಳಿಸುವಂತಹ ಕವನವಾಗಿದೆ. ಚರಿತ್ರೆಯನ್ನು ಅವಲೋಕಿಸಿದಾಗ ಯುದ್ಧದಿಂದ ಒಳಿತಿಗಿಂತ ಹೆಚ್ಚಾಗಿ ನೋವು, ದುಃಖಗಳೇ ಹೆಚ್ಚಾಗಿರುವುದು ವಾಸ್ತವ ಸತ್ಯವಾಗಿದೆ. ಅಂತಹ ಒಂದು ಯುದ್ಧವು ಯಾವುದೇ ದೇಶದಲ್ಲಿ ನಡೆದರು ಅದರಿಂದ ದುರಂತವೇ ಹೆಚ್ಚುತ್ತದೆ. ಅಂತಹ ದುರಂತವು ವಿಯೆಟ್ನಾಂ ದೇಶದ ಮೇಲಿನ ಯುದ್ಧದ ನಂತರ ಸ್ಪಷ್ಟವಾಗುತ್ತದೆ. ಯುದ್ಧದ ಕಾರಣದಿಂದ ಹಲವಾರು ರಾಸಾಯನಿಕ ಅಣು ಬಾಂಬುಗಳನ್ನು ಪ್ರಯೋಗಿಸಲಾಗುತ್ತದೆ. ಆ ಸಂದರ್ಭದ ಸಾವು ನೋವಿನ ದುರಂತದ ನರಕಯಾತನೆ ಒಂದೆಡೆಯಾದರೆ, ನಂತರ ಹುಟ್ಟುವ ಮಕ್ಕಳೆಲ್ಲ ವಿಕಲಾಂಗರಾಗಿ ಸಾಯುವವರೆಗೂ ನರಳಬೇಕಾಗುತ್ತದೆ. ಯುದ್ಧವು ಎಂದಿಗೂ ಮನುಷ್ಯನಿಗೂ ಸಹಕಾರಿಯಾಗುವುದಿಲ್ಲ. ಅದರಿಂದ ಮನುಷ್ಯ ಮತ್ತು ಜೀವ ಸಂಕುಲದ ವಿನಾಶವಾಗುತ್ತದೆ. ಹಿಂದೊಮ್ಮೆ ಜಪಾನ್ ದೇಶದ ಹಿರೋಶಿಮ ಮತ್ತು ನಾಗಸಾಕಿಯ ಮೇಲೆ ಆದ ಯುದ್ಧದ ಪರಿಣಾಮದಿಂದ ನೂರಾರು ವರ್ಷಗಳವರೆಗೆ ಅಲ್ಲಿ ಹುಟ್ಟಿದ ಮಕ್ಕಳೆಲ್ಲ ಹೇಗೆ ಅಂಗವಿಕಲರಾಗಿ ಹುಟ್ಟಿ ನರಕಯಾತನೆಯನ್ನು ಅನುಭವಿಸಿದರು ಎಂಬುದನ್ನು ಸ್ಮರಿಸಿಕೊಳ್ಳುತ್ತ, ಯುದ್ಧವು ಮನುಷ್ಯ ಕುಲಕ್ಕೆ ಬೇಡ ಎಂಬ ಆಶಯವನ್ನು ಕವಿಯು ವ್ಯಕ್ತಪಡಿಸುವರು.

**"ಹಿಂದೊಮ್ಮೆ ಜಪಾನ ಮಗದೊಮ್ಮೆ ವಿಯೆಟ್ನಾಮ**
**ಶಾಶ್ವತ ಕಪ್ಪುಕಲೆ ಪರಮಾಣು ಪರಿಣಾಮ**
**ಮೃತ್ಯು ಬರೆಯುವ ಮುನ್ನ ಮನುಕುಲದ ರೋಜನಾಮ**
**ವಿಶ್ವ ಆಗಲಿ ಸಕಲರಿಗೂ ಶಾಂತಿಧಾಮ"**

ಎಂಬ ಸೌಹಾರ್ದತೆಯ ಮತ್ತು ಸಹಬಾಳ್ವೆಯ ಸಂದೇಶವನ್ನು ನೀಡುವರು. ಇದು ಪ್ರಸ್ತುತ ಸಂದರ್ಭದ ಜಗತ್ತಿಗೆ ಅತ್ಯಂತ ಅನಿವಾರ್ಯ ಮತ್ತು ಅಗತ್ಯವಾದದ್ದು ಎನ್ನಬಹುದು. ಕವಿಯು ಯುದ್ಧದ ಪರಿಣಾಮಗಳನ್ನು ಕುರಿತು ಅವಲೋಕಿಸುವ ರೀತಿಯು ಶ್ಲಾಘನೀಯವಾಗಿದೆ.

'ಜ್ಯೋತಿಷಿಯ ಹೊಸ ಫಾರ್ಮುಲ' ಕವನದಲ್ಲಿ ಸಮಾಜದಲ್ಲಿ ಪ್ರತಿನಿತ್ಯವು ಹಲವಾರು ಮುಗ್ಧ ಜನರನ್ನು ವಂಚಿಸುತ್ತ, ಅವರಿಗೆ ಮೋಸ ಮತ್ತು ಮೌಢ್ಯದ ಬೀಜವನ್ನು ಬಿತ್ತುತ್ತ, ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿರುವ ವಂಚಕ ಜ್ಯೋತಿಷಿಗಳನ್ನು ಕುರಿತು ಈ ಕವನದಲ್ಲಿ ವ್ಯಂಗ್ಯವಾಗಿ ವಿಡಂಬಿಸಲಾಗಿದೆ. ಯಾವ ಹೊಸ ಫಾರ್ಮುಲವನ್ನು ಜನರ ಮೇಲೆ ಪ್ರಯೋಗಿಸಿದರೆ ಅವರು ಮರುಳಾಗುತ್ತಾರೆ ಎನ್ನುವ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವ ಜ್ಯೋತಿಷಿಗಳು ಜನರನ್ನು ಕುರಿಗಳಂತೆ ಬಲಿಪಶುಗಳನ್ನಾಗಿ ಮಾಡಿಕೊಂಡು ತಮ್ಮ ಕಾರ್ಯವನ್ನು ನಿರ್ವಹಿಸಿಕೊಳ್ಳುವರು. ಈ ರೀತಿಯ ನೂರಾರು ಜ್ಯೋತಿಷಿಗಳನ್ನು ಪ್ರತಿನಿತ್ಯವು ಕಾಣಬಹುದಾಗಿದೆ. ಜ್ಯೋತಿಷಿಗಳು ನಯವಂಚಕರು ಮತ್ತು ಮೋಸಗಾರರು ಎಂಬ ವಾಸ್ತವ ಸತ್ಯ ಗೊತ್ತಿದ್ದರೂ ಜನರು ಅವರ ಬಳಿ ಮತ್ತೆ ಮತ್ತೆ ಹೋಗಿ ಹಣ ಮತ್ತು ಸಮಯವನ್ನು ವ್ಯರ್ಥ ಮಾಡಿಕೊಂಡು ಮಾನಸಿಕವಾಗಿ ನರಳುವುದನ್ನು ಕಂಡಾಗ ವಿಪರ್ಯಾಸವಾಗುತ್ತದೆ. ಜನರು ಸರಿಯಾದ ಚಿಂತನೆ ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ಈ ಡೋಂಗಿ ಜ್ಯೋತಿಷಿಗಳ ಕಾಟವು ತಪ್ಪಿದಲ್ಲ ಎನ್ನಬಹುದು.

'ಮಹಾಸತಿಯರ ಪರಂಪರೆ' ಕವನದಲ್ಲಿ ಚರಿತ್ರೆ ಪುರಾಣ ಮತ್ತು ವಾಸ್ತವ ಸಂದರ್ಭದಲ್ಲಿ ಮಡದಿಯ ಮಹತ್ವವನ್ನು ಕುರಿತು ಹೇಳುವಂತಹ ರೀತಿಯಲ್ಲಿ ಈ ಕವನವಿದೆ. ಜಗದ ದುಃಖಕ್ಕಾಗಿ ಉತ್ತರವನ್ನು ಕಂಡುಕೊಳ್ಳಲು ಬುದ್ಧ ಮಧ್ಯರಾತ್ರಿಯಲ್ಲಿ ಯಶೋಧರೆಯನ್ನು ತೊರೆದು ಹೋಗುವನು. ರಾಮ ಯಾರದೋ ಕುಹುಕ ಮಾತುಗಳನ್ನು ಕೇಳಿ, ಸೀತೆಯನ್ನು ಕಾಡಿಗೆ ಕಳುಹಿಸಿದ, ದ್ರೌಪದಿಯನ್ನು ಪಾಂಡವರು ಜೂಜಿನಲ್ಲಿ ಪಣದ ವಸ್ತುವಾಗಿಟ್ಟರು. ಪುರಾಣದ ಸಂದರ್ಭದಲ್ಲಿ ಸ್ತ್ರೀಯನ್ನು ಪುರುಷ ಪ್ರಧಾನ ವ್ಯವಸ್ಥೆಯ ಅಧೀನತೆಯ ನೆಲೆಯಲ್ಲಿ ಬಳಸಿಕೊಂಡಿರುವುದನ್ನು ಗುರುತಿಸಬಹುದು. ಗಾಂಧೀಜಿಯವರ ಸಂದರ್ಭದಲ್ಲಿ ಕಸ್ತೂರಬಾಳ ತ್ಯಾಗವನ್ನು ಮರೆಯಲು ಸಾಧ್ಯವೇ ಇಲ್ಲ. ಇವರು ಎಂದೆಂದಿಗೂ ಚಿರಸ್ಥಾಯಿಯಾಗಿ ಇರುವವರು.

**"ಇವರು ಅಮರರು**
**ಕೀರ್ತಿಯಲಿ ಅಜರಾಮರರು**
**ಎಂದೂ ಮರೆಯದವರು**
**ನಮ್ಮ ಸಂಸ್ಕೃತಿಯ ರಕ್ಷಕರು"**

ಎಂಬುದಾಗಿ ಅವರ ತ್ಯಾಗವನ್ನು ಸ್ಮರಿಸಿಕೊಂಡು, ನಮ್ಮ ಸಂಸ್ಕೃತಿಯ ರಕ್ಷಕರು ಎಂಬುದಾಗಿ ಅವರನ್ನು ಹೊಗಳಲಾಗಿದೆ. ಹೀಗೆ ಸಮಾಜದ ವಿವಿಧ ಮುಖಗಳನ್ನು ಕವಿಯು ತಾವು ಕಂಡಂತಹ ನೆಲೆಯಲ್ಲಿ ಅಭಿವ್ಯಕ್ತಿಸಿರುವರು.

ಹನಿಗವನಗಳಂತೆ ಕೆಲವು ಕವನಗಳನ್ನು ರಚಿಸಿರುವುದನ್ನು ಈ ಸಂಕಲನದಲ್ಲಿ ಗುರುತಿಸಬಹುದಾಗಿದೆ. ಕೆಲವೇ ಸಾಲುಗಳಲ್ಲಿ ಈ ಕವನಗಳ ವಸ್ತುವಿದ್ದರೂ ಸಾಮಾಜಿಕವಾಗಿ ಆ ವಸ್ತು ಪಡೆದುಕೊಳ್ಳುವ ಮಹತ್ವ ಬಹಳ ಮುಖ್ಯವಾದದ್ದು ಎನ್ನಬಹುದು. ಹಣದ ಮಹತ್ವ ಪ್ರತಿಯೊಬ್ಬರ ಬದುಕಿನಲ್ಲಿ ಎಷ್ಟು ಮುಖ್ಯವಾದದ್ದು

ಎಂದು ಹೇಳುತ್ತ, ಹಣದ ಸಂದರ್ಭದಲ್ಲಿ ಯಾವುದೇ ವ್ಯಕ್ತಿಯು ಸರಿಯಾದಂತಹ ಎಚ್ಚರಿಕೆ ಅಥವಾ ಜಾಗ್ರತೆಯನ್ನು ವಹಿಸದಿದ್ದರೆ ಅವನ ಬದುಕು ಹೇಗಾಗುತ್ತದೆ ಎಂಬುದನ್ನು 'ಹಣ-ಹೆಣ'ಎಂಬ ಕವನದಲ್ಲಿ ವಿಡಂಬನೆ ಮಾಡಿರುವುದು ಅರ್ಥಪೂರ್ಣವಾಗಿದೆ.

**"ಮೈಯಲ್ಲಿ ನೆಣ**
**ಕೈಯಲ್ಲಿ ಹಣ**
**ಅಪವ್ಯಯಗೊಳಿಸಿದರೆ**
**ಜೀವನ ಮಸಣ"**

ಅದೇ ರೀತಿ 'ರಸ್ತೆ ನಿಯಮಗಳು' ಕವನದಲ್ಲಿ ಸಾರಿಗೆ ವ್ಯವಸ್ಥೆಯ ನಿಯಮಗಳನ್ನು ಕುರಿತು ಹೇಳುವರು. ಸಾಮಾನ್ಯ ಓದುಗರಿಗೂ ಸುಲಭವಾಗಿ ಅರ್ಥವಾಗುವಂತೆ ಕವಿತೆಗಳನ್ನು ಈ ಸಂಕಲನದಲ್ಲಿ ರಚಿಸಿರುವುದು ಕವಿಯ ವಿಶಿಷ್ಟತೆಯಾಗಿದೆ. ಸಮಕಾಲಿನ ವಸ್ತು ಪುರಾಣದ ವಿವಿಧ ನೆಲೆಯ ವಿಚಾರಗಳು ಇಲ್ಲಿನ ಹಲವಾರು ಕವಿತೆಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ.

❖

# ಆಯ್ದ ಕವಿತೆಗಳು : ಒಂದು ಅವಲೋಕನ

ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

ಡಾ. ಮನು ಬಳಿಗಾರ್ - ಕನ್ನಡದ ಮಹತ್ವದ ಕವಿ. ಚಿಂತಕ ಹಾಗೂ ಜನಾಂತರಾಳದ ಅಧಿಕಾರಿ. ಸಂಸ್ಕೃತಿಯನ್ನು ಜೀವಾತ್ಮಕವಾಗಿ ಮೈಮನಗಳಲ್ಲಿ ತುಂಬಿಕೊಂಡಿರುವ ಇವರು; ತಾವು ಒಪ್ಪಿತ ಯಾವುದೇ ಜವಾಬ್ದಾರಿಯನ್ನು ಹೃದಯಸ್ಪರ್ಶಿ ಆಸ್ವಾದಿಸುವುದು ಇವರ ಜಾಯಮಾನ. ಶಿಸ್ತುಬದ್ಧತೆ, ದಕ್ಷತೆಯ ಜೊತೆಗೆ ಪ್ರಾಮಾಣಿಕತೆ ಇವರ ಅಂತರ್ಗತ ನಡಾವಳಿ. ಗ್ರಾಮ್ಯ ಪರಿಸರದಿಂದ ಬಂದು; ರಾಜ್ಯಮಟ್ಟದ ಉನ್ನತ ಅಧಿಕಾರ ಪಡೆದು ಮೂರು ದಶಕಗಳಿಗೂ ಮೀರಿ ಕನ್ನಡ-ಕರ್ನಾಟಕ ಸೇವೆಯನ್ನು ಮಾಡಿದವರು. ಈ ಸೇವಾ ಪುಟಗಳಲ್ಲಿ ವಿಸ್ತಾರತೆ ಇರುವಂತೆ ತೀವ್ರ ತುಡಿತ ಹರ್ಷ ವಿಷಾದ; ನೋವು ನಲಿವುಗಳ ಒಳನೋಟವೂ ಇವೆ. ಈ ಎಲ್ಲ ಒಳ ತುಡಿತದ ಅಭಿವ್ಯಕ್ತಿ ರೂಪದ ಒಂದಂಶ ಇವರ ಕಾವ್ಯಾಭಿವ್ಯಕ್ತಿ. ಉಳಿದಂತೆ ಸಂಘಟನೆ, ಆಡಳಿತ, ಪ್ರವಾಸ ಈ ಎಲ್ಲವೂ ಕೊಯ್ದುಕೊಂಡು ಬಳಿಗಾರ್' ಅವರ ಸಾಹಿತ್ಯಕ, ರಸಯಾತ್ರೆ ಹಲವು ಸ್ಥರಗಳಲ್ಲಿ ಮಡುಗಟ್ಟಿವೆ.

"ಮನು ಬಳಿಗಾರ್ ಅವರ ಆಯ್ದ ಕವನಗಳು" - ಇದು ಮನು ಬಳಿಗಾರ ಅವರ ಎಂಭತ್ತು ಕವನಗಳ ಸಂಕಲನ ಇದು ನಾಡಿನ ಪ್ರತಿಷ್ಠಿತ ಪ್ರಕಟಣಾ ಸಂಸ್ಥೆಯಾದ 'ಸ್ವಪ್ನ ಬುಕ್ ಹೌಸ್'ನ ಪ್ರಕಟಣೆ. ಡಾ. ಮನು

ಬಳಿಗಾರ್ ಅವರು ಬರೆದು ಪ್ರಕಟಿಸಿದ ಈ ಹಿಂದಿನ ಆರು ಕವನ ಸಂಕಲನಗಳ ಜೊತೆಗೆ ಹೊಸದಾಗಿ ಬರೆದ ಇಪ್ಪತ್ತಾರು ಕವಿತೆಗಳು ಇಲ್ಲಿ ಸೇರಿಕೊಂಡಿವೆ. ಪ್ರಕಾಶಕರು ಈ ಎಲ್ಲ ಕವಿತೆಗಳನ್ನು ಒಂದೇ ಕಡೆ ತಂದು 'ಮನು ಬಳಿಗಾರ್ ಅವರ ಆಯ್ದ ಕವನಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಹಾಗಾಗಿ ಈ ಹಿಂದಿನ ಕವನ ಸಂಕಲನಗಳಾದ ನಯಾಗರಾ ಮತ್ತು ಜಲಪಾತಗಳು, ಎದ್ದವರು ಬಿದ್ದವರು, ಸಾಕ್ಷರ ತ್ರಿಪದಿಗಳು, ನನ್ನ ನಿನ್ನೊಳಗೆ; ರವೀಂದ್ರರ ಮಿಂಚಿನ ಹನಿಗಳು, ಈ ಸಂಕಲನಗಳ ಕೆಲವು ಕವಿತೆಗಳು ಪ್ರಾತಿನಿಧಿಕ ಎನ್ನುವಂತೆ ಈ ಸಂಕಲನದಲ್ಲಿವೆ. ಈ ಮೂಲಕ ಮನು ಬಳಿಗಾರ್ ಅವರ ಕಾವ್ಯಾ ವ್ಯಾಸಂಗದ ವಿಸ್ತೃತೆಯನ್ನು ಅಭಿವ್ಯಕ್ತಿ ಮಾಧ್ಯಮದ ಕಾವ್ಯ ಜಾಡನ್ನು ಇಡಿಯಾಗಿ ಹೇಳಿದಂತಿದೆ. ಹಾಗಾಗಿಯೇ ಇಲ್ಲಿನ ಕವನಗಳಿಗೆ ನಾಲ್ಕು ದಶಕಗಳ ಸಾಮಾಜಿಕ ಆಯಾಮ, ಪಲ್ಲಟ, ಸಾಂಸ್ಕೃತಿಕ ಪರಿವರ್ತನಾಶೀಲ ಪಥಗಳ ದಿಕ್ಕು ದಿಸೆಗಳಿವೆ. ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಸಮಾಜೋ-ಆರ್ಥಿಕ ವಿದ್ಯಮಾನಗಳನ್ನು ದಾಖಲಿಸುವ ಕಾಳಜಿ; ವರ್ತಮಾನದಲ್ಲಿ ನಿಂತು ಭೂತವನ್ನು ಕಾಣುವ, ಆಗಿರುವುದರತ್ತ ಧನ್ಯತೆ, ಕೆಡಿಕೆಗೆ, ಮೌಲ್ಯಗಳ ಪಳಯುಳಿಕೆಯಂತಿರುವ ವ್ಯಕ್ತಿತ್ವಗಳಿಗೆ, ಅಧಿಕಾರ ರಾಜಕಾರಣಕ್ಕೆ ಮರುಗುವ ಆತಂಕ ತಲ್ಲಣಗಳ ಸುತ್ತಲೂ ಇಲ್ಲಿನ ಕವಿತೆಗಳು ಚೆಲ್ಲಿಕೊಳ್ಳುತ್ತವೆ. ಜೊತೆಗೆ ಪ್ರೀತಿ ಪ್ರೇಮದ ನವೋಲ್ಲಾಸಕರ ಅಭಿವ್ಯಕ್ತಿಯೂ ಇಲ್ಲಿದೆ.

ಈ ಸಂಕಲನದಲ್ಲಿ ಒಟ್ಟು ಎಂಬತ್ತು ಕವನಗಳಿವೆ. ವ್ಯಕ್ತಿಚಿತ್ರ; ಸಾಮಾಜಿಕ ಚಿಂತನೆ; ಹಾಗೂ ಪ್ರೀತಿ-ಪ್ರೇಮದ ಕೆಲವು ಹನಿಗವಿತೆಗಳೂ ಸೇರಿಕೊಂಡಿವೆ. ಇಲ್ಲಿ ಹತ್ತಕ್ಕೂ ಮಿಕ್ಕ ವ್ಯಕ್ತಿ ಚಿತ್ರಗಳು ತಾವು ಆರಿಸಿಕೊಂಡ ವ್ಯಕ್ತಿ ಸುತ್ತ ಅವರ ಭಾವಲಹರಿ, ಸಾಧನೆ-ಸಾರ್ಥಕತೆಯ ಹಲವು ರೂಪಗಳು ಓದುಗರ ಮುಂದೆ ಸಿದ್ಧಮಾದರಿಯಾಗಿ ನಿಲ್ಲುತ್ತವೆ. ಮಹಾತ್ಮಗಾಂಧಿ, ಅಂಬೇಡ್ಕರ್, ಮದರ್ ತೆರಿಸ್ಸಾ, ನೆಲ್ಸನ್ ಮಂಡೇಲಾರಿಂದ ಚಂದ್ರಶೇಖರ ಕಂಬಾರ, ರಾಮಕೃಷ್ಣ ಹೆಗಡೆ, ಡಾ. ರಾಜ್‌ಕುಮಾರ್ ಈ ಬಗೆಯ ಚಿತ್ರ-ವಿಚಿತ್ರ ಸ್ವಭಾವ, ನೂರಾರು ಭಾವ ರೂಪಗಳು ಇಲ್ಲಿ ಸಂಚಯಗೊಂಡಿವೆ. ಶಿಶುನಾಳ ಶರೀಫ; ಸರ್ವಜ್ಞ; ತಿರುವಳ್ಳರ್ ಈ ಬಗೆಯ ಸಾಂಸ್ಕೃತಿಕ ಚಿಂತಕರ ಸಿದ್ಧಿ ಸಾಧನೆಯ ಸಂದೇಶದ ಮಾದರಿಗಳೂ ಅಪ್ಯಾಯಕರವಾಗಿವೆ. ಸರ್ವಜ್ಞ ತಿರುವಳ್ಳುವರ್ ಇವರುಗಳ ಸಾಹಿತ್ಯಕ ಅಂತರಂಗವನ್ನು ಹಿಡಿದುಕೊಟ್ಟಿರುವ ಕವಿಯ ಭಾವ ಹೀಗಿದೆ.

**ಕಾವ್ಯ ಸೆಲೆ ಒಂದೇ ನೆಲೆ**
**ದ್ವಿಪದಿ ತ್ರಿಪದಿ ಹೊಸೆದ ಹಾಗೆ**
**ಸರ್ವಜ್ಞನಿಲ್ಲಿ ನಗುತ ನಿಂತ**
**ತಿರುವಳ್ಳುವರ್ ಅಲ್ಲಿ ಕುಂತ ಶಾಂತ.**

ಈ ಇಬ್ಬರೂ ಜನಪದ ಕವಿಗಳು ಫಕೀರ ಸ್ವರೂಪದ ಬಾಳ್ವೆಯ ಒಳಗೂ ಸಂತರಂತೆ; ದಿಟ್ಟ ವಿಚಾರವಾದಿಗಳಾಗಿ ಸಾರ್ವತ್ರಿಕ ಸತ್ಯ ಬೋಧಿಸಿದ - ಬರೆದ ಸಾಂಸ್ಕೃತಿಕ ಪರಿಧಿ ದೊಡ್ಡದು. ಭಾಷೆ ಬೇರೆ ಭಾವ ಒಂದೆ. ಈ ಇಬ್ಬರೂ ಸಾಂಸ್ಕೃತಿಕ ವೀರರ ಬಗೆಗಿನ ದ್ವಿಪದಿ-ತ್ರಿಪದಿ ಸಾಹಿತ್ಯದ ಮೂಲಕ ಸದಾ

ಸಮಾಜಮುಖಿಯಾಗಿಯೇ ಬೆಳೆದ; ಬರೆದ ಪರಿಕಲ್ಪನೆ ದೊಡ್ಡದು. ಇವರಿಬ್ಬರೂ ಸಮಾಜದೊಂದಿಗೆ ನಿತ್ಯ ಮುಖಾಮುಖಿಯಾಗುತ್ತಲೇ ಇರುವುದನ್ನು; 'ನಗುತ ನಿಂತ' 'ಕುಂತ ಶಾಂತ' ಎಂಬ ವಿಶೇಷ ಕಾವ್ಯಾತ್ಮಕ ನುಡಿಯ ಮೂಲಕ ಸರ್ವಜ್ಞ-ತಿರುವಳ್ಳುವರ್ ಇಬ್ಬರ ಬದುಕನ್ನು ಒಂದೇ ನೆಲೆಯಲ್ಲಿ ಕಾಣಹೊರಟ ಕವಿಯ ಚಿತ್ರ ಕಲಾತ್ಮಕವಾಗಿ ಚಿತ್ತಾರಗೊಂಡಿದೆ. ಮಹಾತ್ಮಗಾಂಧೀ ಗ್ರಾಮ ಸ್ವರಾಜ್ಯ ಭಾರತದ ಸ್ವಾತಂತ್ರ್ಯದ ಎಲ್ಲ ಧಾತುಗಳ ಮೂರ್ತರೂಪ. ಆದರೆ ಇಂದು ಬಾಪೂಜಿಯ ನೆನಕೆ ಸ್ಮರಣಿಕೆಯಾಗಿ ಉಳಿದಿದೆ. ಗಾಂಧಿ ಬಯಸಿದ ಅಹಿಂಸೆ; ಶಾಂತಿ, ಸಹನೆ, ಸಮಾನತೆಯ ಕಡೆ ಹಿಂಸೆ, ಅತ್ಯಾಚಾರ, ಪ್ರಾಣಿ ಬಲಿ, ಈ ಎಲ್ಲ ಮೂಕ ವೇದನೆಯಾಗಿ, ನಿತ್ಯದ ಪಾಡಾಗಿ ಗೋರಿಗಟ್ಟಿದೆ. ಈ ಬಗೆಯ ವಾಸನಾಮಯ ಬದುಕಿನ ಒಳ-ಹೊರಗಿನ ಗಾಂಧಿತನ ಕಾಣೆಯಾಗಿದ್ದು; ಗಾಂಧಿತತ್ವ ಬಾಯಿಚಪಲದ ವಸ್ತುವಾಗಿ ಅಣಕವಾಗುತ್ತಿದೆ ಎಂಬುದನ್ನು ಚಿಂತನಾತ್ಮಕ ಪರಿಧಿಯಲ್ಲಿ ಅವರು ಕಟ್ಟಿಕೊಟ್ಟಿರುವುದು ಸಾರ್ಥಕವಾಗಿದೆ.

ಡಾ. ರಾಜ್ ಕುಮಾರ್ ಅವರನ್ನು ಕುರಿತು ಆತ್ಮೀಯವಾಗಿ ಸಂವಾಧಿಸುತ್ತಾರೆ. ತಮ್ಮ ಇಲಾಖೆ, ಸಂಸ್ಕೃತಿಯ ಒಡನಾಟದಿಂದಾಗಿ ಡಾ.ರಾಜ್ ಅವರನ್ನು ಹತ್ತಿರದಿಂದ ಕಂಡ, ಒಡನಾಟದ ರಸ ಕ್ಷಣದ ಒಂದೆರಡು ತುಣುಕುಗಳೊಂದಿಗೆ; ಪ್ರಧಾನವಾಗಿ ಕನ್ನಡ-ಕರ್ನಾಟಕದ ತನಕ್ಕೆ ಒಪ್ಪಿಸಿಕೊಂಡು ದುಡಿದ, ಸಂಘಟಿಸಿದ ಗೋಕಾಕ್ ಚಳುವಳಿ ಮುಂತಾದ ಕನ್ನಡಪರ ಹೋರಾಟದಿಂದಾಗಿ ಕನ್ನಡ ತನ್ನ ಘನತೆ-ಗೌರವ ಉಳಿಸಿಕೊಂಡು ತಲೆ ಎತ್ತಿ ಬಾಳುವಂತಹ, ವಾತಾವರಣಕ್ಕೆ ಪ್ರೇರಕವಾಯಿತು. ತಾನು ಹುಟ್ಟಿ-ಬೆಳೆದ, ಬೆಳೆಸಿದ ಬಾಳ್ವೆಯ ಒಡಲಾಳದಲ್ಲಿ ಅನ್ಯಭಾಷಿಕ ಮೇಲಾಟದಿಂದ ಕನ್ನಡ ಜರ್ಜರಿತ, ಪರಿಸರಕ್ಕೆ ರಾಜ್ ಹಾಗೂ ಆತರದವರ ಸಂಘಟನಾತ್ಮಕ ಹೋರಾಟ, ಭಾಷಿಕ ಅಭಿಮಾನ ನಿಜಕ್ಕೂ ದೊಡ್ಡದು. ಈ ತನವನ್ನು ಈ ಮನು ಬಳಿಗಾರ್ ನಾಲ್ಕು ಮಾತುಗಳಲ್ಲಿ ಕಟ್ಟಿಕೊಟ್ಟಿರುವ ರೀತಿ ಸೊಗಸಾಗಿದೆ.

ಗೋಕಾಕ್ ಚಳುವಳಿ ಇವ ಕೊಟ್ಟ ಬಳುವಳಿ
ಕರುನಾಡ ಜನಕೆಲ್ಲ ಬಿಟ್ಟಿತು ಮೈ ಚಳಿ

ಹೀಗೆ ನುಡಿ ಸಂಘರ್ಷದ ಕಿಚ್ಚು ಹಚ್ಚಿಸಿದ ಬಗೆಯನ್ನು ವ್ಯಕ್ತಿ ಚಿತ್ರದ ಸಾಧನೆಯ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟ ರೀತಿ ಸೊಗಸಾಗಿದೆ. ವ್ಯಕ್ತಿ ಚಿತ್ರ ಮಾಲಿಕೆಯಲ್ಲಿ ಚಂದ್ರಶೇಖರ ಕಂಬಾರ, ನೆಲ್ಸನ್ ಮಂಡೇಲಾ; ಬಿ.ಆರ್. ಅಂಬೇಡ್ಕರ್, ಮದರ್ ತೆರೆಸಾ ಈ ಬಗೆಯ ಕಿರು ಚಿತ್ರಗಳು ಈ ಸಂಕಲನದ ಮತ್ತೊಂದು ವಿಶೇಷ. ಕವಿ, ನಾಟಕಕಾರ, ಈ ಬಗೆಯ ಸೃಜನಶೀಲತೆಯ ಅತೀವತೆಯ ನಡುವೆಯೂ, ಕಂಬಾರರ ಜಾನಪದತನ, ದೊಡ್ಡಾಟ, ಸಣ್ಣಾಟ, ಪಾರಿಜಾರಿತ ನಾಟಕ ಈ ಬಗೆಯ ದೇಶಿ ತನದ ಸೊಗಡು ಕಂಬಾರರ ಹೃದಯ ಭಾಗ ಎಂಬುದನ್ನು ಬಳಿಗಾರ್ ಹೀಗೆ ವರ್ಣಿಸುತ್ತಾರೆ.

**ಸಣ್ಣಾಟ ದೊಡ್ಡಾಟ ಬಯಲಾಟಗಳಿಗಲ್ಲದೆ**
**ಪಾರಿಜಾತಕ್ಕೂ ಪರಿಮಳವ ಪೂಸಿಸಿ**
**ದಟ್ಟಿ ದಾವಣಿ ತೊಡಸಿ ಶಿಸ್ತಿನಿಂದಾಗಿಸಿ**

ರಸದೂಟ ಮಾಡಿಸುವ ಶಾಸ್ತ್ರ ಪ್ರವೀಣ.

ಕಂಬಾರರ ಬಹುಮುಖ ವ್ಯಕ್ತಿತ್ವದ ಕೆಲವು ತುಣುಕುಗಳನ್ನು ಹೀಗೆ ಪರಿಚಯಿಸಿದರೆ; ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರನ್ನು, ಅವರ ಧೀರಾದ್ದೋತ ಬದುಕನ್ನು ನೆನೆದು ಮರುಗುವ ಮನ; ಮನ ಕರುಗುವಂತಿದೆ.

**ಬಾಣಗಳ ಮೇಲಿನ ಮುದಿ ಭೀಷ್ಮನಂತೆ**

**ಕಳೆದು ಹೋಯಿತು ಜೀವ ಸವೆದು ಸವೆದು**

**ಹರಡಿದಂತೆ ಗಾಳಿ ಶ್ರೀಗಂಧ ತೆಯ್ದು**

**ಧನ್ಯವಾಗುತ್ತಿದೆ ನಾಡು ನಿಮ್ಮ ಕಾರ್ಯಗಳ ನೆನೆದು**

ರಾಮಕೃಷ್ಣ ಹೆಗಡೆ; ನಾಡು ಕಂಡ ವರ್ಣರಂಜಿತ ರಾಜಕಾರಣಿ. ಅವರ ಮುತ್ಸದ್ಧಿತನ ಅವರಿಗೆ ಅವರೇ ಸಾಟಿ. ರಾಜಕಾರಣದ ಏರಿಳಿತಗಳಲ್ಲಿ ಹಲವು ವೈವಿಧ್ಯತೆಗಳಿರುವಂತೆ; ವಿಭಿನ್ನ ಅಭಿಪ್ರಾಯಗಳೂ ಇವೆ. ಆದರೆ ಮನು ಬಳಿಗಾರ್ ಅವರಿಗೆ ಇವರೊಬ್ಬ ಆದರ್ಶ ನಾಯಕನಾಗಿ ಕಾಣುತ್ತಾರೆ. ಶ್ರೀಗಂಧ, ಭೀಷ್ಮ, ಎಂದೆಲ್ಲಾ ನುಡಿ ನಮನ ಸಲ್ಲಿಸುತ್ತಾರೆ. ನಾಡು-ನುಡಿಯ ಧನ್ಯತೆಯ ವಿಶೇಷಣತೆಯನ್ನು ಸೇರಿಸುತ್ತಾರೆ. ಅಂಬೇಡ್ಕರ್ ಅವರನ್ನು ಅಸ್ಪೃಶ್ಯತೆಗೆ 'ಚೈನಾದ ಮಹಾಗೋಡೆ' ಎಂಬ ಉಪಮೆಯೊಂದಿಗೆ ಮೈ ದುಂಬಿ ವರ್ಣಿಸುತ್ತಾರೆ.

**ಭೀಕರ ಅಸ್ಪೃಶ್ಯತೆಯ**

**ಕೊರೆವ ಛಳಿಗಾಳಿಗೆ**

**ಅಡ್ಡವಾದ ಚೈನಾಗೋಡೆ ನೀನು**

ಅಸ್ಪೃಶ್ಯತೆ ಎಂಬ ಮಹಾ ಬಿರುಗಾಳಿಗೆ, ತಡೆಗೋಡೆಯೋಪಾದಿಯಲ್ಲಿ ಹೋರಾಟದ, ವಿಚಾರದ ಕಿಚ್ಚು ಹಚ್ಚಿದ ಅಂಬೇಡ್ಕರ್ ನಿಜವಾಗಿಯೂ ಚೈನಾದ ಮಹಾಗೋಡೆ ಎಂಬುದು ಸಮಪರ್ಕವಾದ ಉಪಮೆ. ಕೊರೆವ ಛಳಿ-ಗಾಳಿಗೆ ಅಡ್ಡಗೋಡೆ; ಕೊಂಚ ಸ್ವಾಂತನ ನೀಡಬಲ್ಲದು. ನೊಂದ-ಬೆಂದ ನೆಲ ಮೂಲ ಜನಕ್ಕೆ; ಶೋಷಿತ ಮೂಲದ ಸಂಕೋಲೆ ಕಳಚಿ ನಿಂತ ಅಂಬೇಡ್ಕರ್; ಒಂದು ಅರ್ಥದಲ್ಲಿ ಮಹಾಗೋಡೆಯೆ !

ಸಾಮಾಜಿಕ ಪರಿವರ್ತನೆಯ ಆಶಯದ ಮೂವತ್ತಕ್ಕೂ ಹೆಚ್ಚು ಕವಿತೆಗಳು ಈ ಸಂಕಲನದ ಮತ್ತೊಂದು ವಿಶೇಷ. ಇಲ್ಲಿ ಜಾತಿ - ಕುಲ ಸಂಬಂಧಿ ಕೆಡುಕುಗಳು; ರೈತರ ಬವಣೆ, ಅಧಿಕಾರಸ್ಥರ ದರ್ಪ, ದೌಜನ್ಯ, ಬಡತನ, ನಿರುದ್ಯೋಗ ಈ ಬಗೆಯ ಜಾಗತಿಕ - ವಾಸ್ತವಕ್ಕೆ ಹತ್ತಿರವಾದ ಹತ್ತಾರು ಕವಿತೆಗಳು ಮುಖಕ್ಕೆ, ವ್ಯವಸ್ಥೆಗೆ ರಾಚುವಂತಿವೆ. ಈ ಸಾಲಿನಲ್ಲಿ ಯುದ್ಧದ ಹಾಡು - ಕವಿತೆ ಮತ್ತೆ ಮತ್ತೆ ಓದಿಸಿಕೊಳ್ಳುತ್ತದೆ. ಮೈಮನ ಮುದುಡಿಸುತ್ತದೆ. ವಿಯೆಟ್ನಾಂ ಮೇಲೆ ಅಮೇರಿಕ ಎಸಗಿದ ದೌರ್ಜನ್ಯ, ಅಣುಬಾಂಬಿನ ಪ್ರಯೋಗ; ಯಾವ ಬಗೆಯ ನರಕ ಸದೃಶ ವಾತಾವರಣ ನಿರ್ಮಿಸಿದೆ; ಅದಕ್ಕೆ ಬಲಿಯಾದ

ಜೀವನಗಳೆಷ್ಟು, ನಿತ್ಯವೂ ಬಲಿಯಾಗುತ್ತಲೇ ಇರುವ; 'ಊನ ಹೊತ್ತ ದೇಹದ' ಕಡು ನರಕ ಯಾತನೆಯ ಒಳಗು-ಹೊರಗನ್ನು ಈ ಕವಿತೆ ಮಾರ್ಮಿಕವಾಗಿ ಚಿತ್ರಿಸುತ್ತದೆ.

**ವಕ್ರವಾದ ನಡವು ವಿಕೃತ ಕೈಕಾಲುಗಳು**
**ನಿಷ್ಕ್ರಿಯ ಎದೆ ಶಿರ ಸಂಧುಗಳು**
**ಅಂಗಾಂಗಗಳಲ್ಲವಿವು ಭಂಗ ಮುದ್ರೆಗಳು**
**ಸಂಗ ಮಾಡಿದ ಸಮರ ಕೊಡುಗೆಗಳು**

ಯುದ್ಧ ಮಾಡಿದ ಘೋರ ಪಾತಕ ಹಾಗೂ ಅದರ ಋಜುವಾತಾಗಿ ಮಕ್ಕಳ ಈ ಬಹು ವಿಧ ಅಂಗ ವೈಕಲ್ಯತೆಯಿಂದ ದೈನಂದಿನ ಯಾತನಾಮಯ ದೀನತೆ; ಯುದ್ಧವೆಂಬ 'ಕೂಗುಮಾರಿ' ಮನುಕುಲಕ್ಕೆ ಹೇಗೆ ಭಯಾನಕವಾಗಿದೆ ಯುದ್ಧ ಎಂದಿಗೂ, ಯಾರಿಗೆ ಬೇಡ ಎಂಬ ಸಾರ್ಥಕ ಸಂದೇಶ ಈ ಕವಿತೆಯ ಆಶಯವಾಗಿದೆ.

**ಹಿಂದೊಮ್ಮೆ ಜಪಾನ ಮಗುದೊಮ್ಮೆ ವಿಯೆಟ್‌ನಾಮ**
**ಶಾಶ್ವತ ಕಪ್ಪುಕಲೆ ಪರಮಾಣು ಪರಿಣಾಮ**
**ಮೃತ್ಯು ಬರೆಯುವ ಮುನ್ನ ಮನುಕುಲದ ರೋಜನಾಮ**
**ವಿಶ್ವ ಆಗಲಿ ಸಕಲರಿಗೂ ಶಾಂತಿಧಾಮ**

ಪಾಪಕ್ಕೆ ಪಾಪ ಮರಿ ಇಕ್ಕುತ್ತದೆ. ರಕ್ತಕ್ಕೆ ರಕ್ತವೇ ಪರಿಹಾರವಲ್ಲ. ಹಿಂಸೆ ಆಚೆಯ ಶಾಂತಿ ಎಲ್ಲರಿಗೂ, ಎಲ್ಲ ಕಾಲಕ್ಕೂ ಅನಿವಾರ್ಯ ಎಂಬುದನ್ನು ಕವಿ ಧ್ಯಾನಿಸುವ ರೀತಿ ಸೊಗಸಾಗಿದೆ.

ಬದುಕನ್ನು ಜೀವನ್ಮುಖಿಯಾಗಿ ಕಾಣುವ ಕವಿ ಬದುಕಿಗೆ ಬೇಕಾಗಿರುವುದು ಹಿಡಿ ಅನ್ನ, ತಲೆ ಮೇಲೊಂದು ಸೂರು; ಬಟ್ಟೆ, ಮಿಕ್ಕದ್ದೆಲ್ಲಾ ವ್ಯರ್ಥ ಎಂಬುದನ್ನು ಮಾರ್ಮಿಕವಾಗಿ ಕಟ್ಟಿಕೊಟ್ಟಿರುವ ಕವಿ

**ಬೇಕಾಗಿದೆ ಸದಾ ನೀರು**
**ಸದಾ ಸೂರು**
**ಗೇಣು ಬಟ್ಟೆ, ತುಣುಕು ರೊಟ್ಟಿ**
**ಒಂದಿಷ್ಟು ಹೊಸ ಸೃಷ್ಟಿ ಅದೇ ಮಾನವೀಯ ದೃಷ್ಟಿ**

ಇನಿತು ಬದುಕಿಗೆ ಒಂದಿನಿತು ಅವಶ್ಯಕ ದ್ರವ್ಯ ಬೇಕು. ಆದರೆ ಅದೇ ಜೀವನವಾಗಬಾರದು. ಸಂಪಾದನೆಯೇ ಬದುಕಾಗಬಾರದು. ಇಲ್ಲಿನ ಹೊಸ ಸೃಷ್ಟಿ ಮಾನವೀಯತೆಯ ವರ್ತನೆ. ಮಾನವೀಯತೆಯೇ ಬದುಕಿನ ಜೀವನ ಮೌಲ್ಯ ಎಂಬ ಆಶಯವೂ ಕವಿಯ ಸಂದೇಶವೂ ಆಗಿದೆ. 'ನಡಿಗೆ' ಕವಿತೆ ನಮ್ಮ ಗತಿಸಿದ ಭವ್ಯ ಮಾನವರ ಆದರ್ಶತೆಗೆ ಹಿಡಿದ ಒಂದು ಸಂದೇಶ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ವಿನೋಬಾಜಿ ಈ ಮೊದಲಾದ ಸತ್ಪುರುಷರು ತಮ್ಮ ಜೀವನ ನಿರ್ವಹಣೆಯ ಒಳಗೂ ಸಮುದಾಯದ ಹಿತಕ್ಕಾಗಿ ಹಂಬಲಿಸಿದ, ಹೋರಾಟ ರೂಪಿಸಿದ ಸಿದ್ಧರು. ಇಂದಿನ ವಾಸನಾಮಯ ಬದುಕಿನೊಳಗೆ ಈ ಬಗೆಯ ಸಿದ್ಧ

ಪುರುಷರ ಪುನರಾವತಾರ ಅತ್ಯಂತ ಅವಶ್ಯ ಎಂಬುದನ್ನು 'ಕಸದ ರಾಶಿ ಸರಿದು ಸತ್ಯ ಶುದ್ಧ ಶಾಂತಿ ಮೂಡಲಿ' ಎಂಬ ಕವಿಯ ಕನಸು ಸರ್ವಕಾಲಿಕ ಸತ್ಯ.

ಈ ಸಂಕಲನದ ನಾಲ್ಕನೆಯ ತೆನೆ ''ಅಪ್ಪ' ತಂದೆ ಏನಾದರೂ ತಂದೆಯೇ ಅವರೊಬ್ಬ ಕುಟುಂಬದ ರೂವಾರಿ. ತಿದ್ದು, ತೀಡುವ ಮೂಲಕ ಮಕ್ಕಳ ಅಭ್ಯುದಯವನ್ನು ಸದಾ ಬಯಸುವುದು ಅಪ್ಪನ ಪರಮ ನಡಾವಳಿ, ಹಾಗಾಗಿ ಕವಿ ಬಳಿಗಾರ್ ಅವರಿಗೆ ಅಪ್ಪ ತಮ್ಮ ಕಾವ್ಯಧ್ವನಿಗೆ ವಿಶಿಷ್ಟವಾಗಿ ಕಾಣಿಸಿದ್ದಾರೆ. ನಾಲ್ಕು ನಾಲ್ಕು ಸಾಲುಗಳಲ್ಲಿ ಅಪ್ಪನ ಎಲ್ಲಾ ಮಹಿಮಾ ತಳಿಯನ್ನು ಕಡೆದು ನಿಲ್ಲಿಸಿದ್ದಾರೆ.

**ಅಪ್ಪ ಜೀವನ ಪರ್ಯಂತ**

**ಕೇವಲ ಎರಡನ್ನು ಹದ ಮಾಡುತ್ತಿದ್ದ**

**ಒಂದು ಭೂಮಿ**

**ಎರಡು ಮಕ್ಕಳು**

ಭೂಮಿಯನ್ನು ಹದ ಮಾಡಲೇಬೇಕು. ಇಲ್ಲದೆ ಹೋದರೆ ನಿರ್ದಿಷ್ಟ ಗುರಿಯ ಕಾಳು ಬೆಳೆಯುವುದೇ ಇಲ್ಲ. ಆದರೆ ಮಕ್ಕಳನ್ನು ಹದ ಮಾಡುವುದು ಎಂದರೆ ಹೇಗೆ? ಉತ್ತರ ಕರ್ನಾಟಕದ ನೆಲ ಮೂಲ ಸೊಗಡು ಮಕ್ಕಳನ್ನು ಹದ ಮಾಡುವುದು ಅತಿ ಮುಖ್ಯ. ಇಲ್ಲದೆ ಹೋದರೆ, ಅವು ಪೋಲಿ ಪುಂಡರಾಗಿ ಬಾಳ ಹಾದಿಗೆ ಬರುವುದೇ ಇಲ್ಲ. ಇಲ್ಲಿ ಮಕ್ಕಳನ್ನು ಶಿಕ್ಷಣ - ಶಿಕ್ಷೆ, ಮಾರ್ಗದರ್ಶನಗಳ ಮೂಲಕ ಹದಗೊಳಿಸಬೇಕು. ಅದನ್ನೇ ಕವಿ ವಿಸ್ತರಿಸದೆ ಅಪ್ಪನ ಪರಮ ಜವಾಬ್ದಾರಿ ಎರಡು ಒಂದು ಅನ್ನದ ಕಾಯಕ. ಇನ್ನೊಂದು ಮಕ್ಕಳಿಗೆ ಅಕ್ಷರದ ಕಾಯಕದ ಹದಗಳಲ್ಲಿಯೇ ತಮ್ಮ ಬದುಕನ್ನು ಮಿತಿಗೊಳಿಸಿಕೊಂಡರು. ಹಾಗಾಗಿಯೇ ನಾವೆಲ್ಲ ಉನ್ನತ ಹುದ್ದೆ, ಸ್ಥಾನಮಾನ ಪಡೆಯುವುದಕ್ಕೆ ಸಾಧ್ಯವಾಯಿತು ಎಂಬುದನ್ನು ಸಾಂಕೇತಿಕವಾಗಿ ಅಭಿವ್ಯಕ್ತಿಸಿದ್ದರೆ. ಅದೇ ಹಾದಿಯಲ್ಲಿ ಮನುಷ್ಯ ಎಚ್ಚರ ತಪ್ಪಿದರೆ ಅಥವಾ ತಪ್ಪುವ ಸ್ಥಾಯಿ ನೆಲೆಗಳನ್ನು ಚುಟುಕಾಗಿ ಪರಿಚಯಿಸಿದ್ದಾರೆ.

**ಮೈಯಲ್ಲಿ ನೆಣ**

**ಕೈಯಲ್ಲಿ ಹಣ**

**ಅಪವ್ಯಯಗೊಂಡರೆ**

**ಜೀವನ ಜೀವಂತ ಮಸಣ**

ತುಂಬಾ ರಸವತ್ತಾದ; ಜೀವನ ಮೌಲ್ಯದ ಸಾರವಾಗಿದೆ ವಿವೇಚನೆ ಹಾಗೂ ವಿವೇಕ ಪ್ರತಿ ಮನುಷ್ಯನ ಬಾಳ ಪುಟದ ಸಾರ್ಥಕ ನೆಲೆಗಳು. ಇವು ಔಚಿತ್ಯವಾಗಿ ಬಳಕೆಯಾಗಬೇಕು. ಹಣವೂ ಆಕಸ್ಮಿಕ, ನೆಣವೂ ಸ್ವಾಭಾವಿಕ. ಆದರೆ ನಿವರ್ಣತೆ ಚಾಕಚಕ್ಯತೆಯಿಂದ ಕೂಡಿರಬೇಕಲ್ಲವೆ. ಅಪ್ಪನ ಹದದ ಪರಿಕಲ್ಪನೆಯೂ ಇದೇ ಮಾದರಿ. ಹಣ – ನೆಣ ಎರಡನ್ನು ಹದಗೊಳಿಸುವ ಪರಿಭಾಷೆ ಎಂದರೆ ವ್ಯವಹಾರ

ಅದು ಹದವರಿತು ಆಡುವ ಮಾತು. ಆಡಿದ್ದನ್ನು ಅರಿತು ಮುನ್ನಡೆಯುವ ಕೊಳುಕೊಡಿಗೆ. ಈ ವ್ಯವಹಾರದಲ್ಲಿನ ಪರಿಪಕ್ವತೆಯೇ ವ್ಯಕ್ತಿಯೊಬ್ಬನ ಭಾಷಿಕ ಸಾಮರ್ಥ್ಯದ ಪರಿಪೂರ್ಣತೆಯ ಓರೆಗಲ್ಲು. ಇಲ್ಲಿನ ಸೃಜನ ಪ್ರತಿಭೆಯಲ್ಲಿ ಅಪಾರ ಪ್ರತಿಭೆಗಳ ಸಮೂಹ ಪ್ರಶಂಸೆಯನ್ನು, ಗೌರವವನ್ನು, ಸಾಮಾಜಿಕ ಸೌಹಾರ್ದತೆಯನ್ನು ಕಾಯ್ದುಕೊಂಡ ರೀತಿ-ನೀತಿ ಸೊಗಸಾಗಿದೆ. ಇಲ್ಲಿನ ಕವಿತೆಗಳು ಸಮಷ್ಟಿ ಮನಸ್ಸಿನ ಭಾವನೆಗಳನ್ನು ಸಹ್ಯ ಪಥದಲ್ಲಿ ಕಟ್ಟಿ ಅದಕ್ಕೊಂದು ಧನ್ಯತೆಯ ಅಸೀಮತ್ವ ಕಲ್ಪಿಸುವ ಮನು ಬಳಿಗಾರ್ ಅವರ ಭಾವಾಂತರಂಗ ಧನ್ಯತೆಯ ಸ್ವರೂಪ ಪಡೆದಿರುವುದು ಇಲ್ಲಿನ ವಿಶೇಷ.

ಮನು ಬಳಿಗಾರ್ ಅವರ ಕವಿತೆಗಳು ಆಡಳಿತ, ಸಮಾಜೋ-ರಾಜಕಾರಣ, ಅಭಿವೃದ್ಧಿ ಪಥದ ಹೆಜ್ಜೆ ಗುರುತುಗಳ ಸಾಕ್ಷಿರೂಪ, ಹೆಸರಿಲ್ಲದೆ ದುಡಿಯುವ, ಮಾನವೀಯ ಅಂತಃಕರಣದ ಹಲವು ಮುಖಭಾವಗಳು ಇಲ್ಲಿ ತೆರೆದುಕೊಂಡಿವೆ.

ಒಟ್ಟಾರೆ ಗ್ರಾಮ ಭಾರತ ಎದುರಿಸುತ್ತಿರುವ ಹಲವು ಬಗೆಯ ನೋವು, ಹಿಂಸೆ, ಇವುಗಳ ಬಗೆಗಿನ ವಿಷಾದ, ತಲ್ಲಣಗಳು ಭಾವಗೀತಾತ್ಮಕ ರೂಪ ಪಡೆದಿರುವುದು ಈ ಸಂಕಲನದ ಹಲವು ಕವಿತೆಗಳಲ್ಲಿ ತೋರುತ್ತದೆ.

❖

# ಮನುಷ್ಯ ಪ್ರೀತಿಯ ಹುಡುಕಾಟದಲ್ಲಿ ಬಳಿಗಾರರ ಕಾವ್ಯ

ಡಾ.ಶಿವರಾಜ್, ಬ್ಯಾಡರಹಳ್ಳಿ

ನಾಲ್ಕು ದಶಕಗಳಿಂದ ಬರೆಯುತ್ತಿರುವ ಶ್ರೀಯುತ ಮನು ಬಳಿಗಾರ್‌ರವರು ಕವಿತೆ, ಕಥೆ, ಅಂಕಣ, ಹೀಗೆ ಹಲವು ಸಾಹಿತ್ಯ ಪ್ರಕಾರಗಳಲ್ಲಿ ತೊಡಗಿಸಿಕೊಂಡು ಗಂಭೀರವಾಗಿ ನಿಭಾಯಿಸಿದವರು. ಮನು ಬಳಿಗಾರ್ ಅವರೊಳಗೆ ಸದಾ ಕವಿಯ ತುಡಿತ ಇರುವುದರಿಂದಾಗಿ ಸೃಜನಶೀಲತೆಯನ್ನು ಸೃಷ್ಟಿಸುತ್ತಿರುವ ಒಳಗಿನ ತುಡಿತವೇ ಅವರನ್ನು ಕವಿಯಾಗಿ, ಕಥೆಗಾರರಾಗಿ ಬೆಳೆಸಿರುವುದು. ಯಾವುದೇ ಹುದ್ದೆಗೆ ಹೋದರೂ ಕ್ರಿಯಾಶೀಲವಾಗಿ ತನ್ನ ಕರ್ತವ್ಯವನ್ನು ನಿಭಾಯಿಸುವುದರ ಜೊತೆಗೆ ಸಾಹಿತ್ಯ ಸಂಸ್ಕೃತಿಯೊಂದಿಗಿನ ನಂಟನ್ನು ನಂಬಿ ಬದುಕುತ್ತಿರುವ ಬಳಿಗಾರ್‌ರವರು ಸಾಹಿತ್ಯ ಲೋಕದ ಹಲವು ಸಾಹಿತಿಗಳ ವ್ಯಕ್ತಿ ಚಿತ್ರವನ್ನು ಕಟ್ಟಿಕೊಡುವಷ್ಟರ ಮಟ್ಟಿಗೆ ಪ್ರಭಾವಿಸಿಕೊಂಡಿದ್ದಾರೆ. ಅಲ್ಲದೇ ಹಲವು ಕವಿತೆಗಳ ಸಂಗೀತದ ಸಂಯೋಜನೆಯೊಂದಿಗೂ ಕೇಳುಗರನ್ನು ತಲುಪಿದ್ದಾರೆ ಎನ್ನುವುದು ಮತ್ತೊಂದು ಹೆಗ್ಗಳಿಕೆ.

ಸಾಹಿತ್ಯ ಪರಂಪರೆಯನ್ನು ತುಂಬಾ ಸೂಕ್ಷ್ಮವಾಗಿ ನೋಡುತ್ತಾ ಬಂದಿರುವ ಲೇಖಕರು, ಅದ್ವಿತೀಯ ಎಂಬ ಭ್ರಮೆಗೆ ಬೀಳದೆ ತನಗೆ ಕಂಡ ಅನುಭವದ ಆಳಕ್ಕಿಳಿದು ದಕ್ಕಿದಷ್ಟನ್ನೇ ಕಾವ್ಯವನ್ನಾಗಿ ಕಟ್ಟುವ ಸಹಜತೆ ಮೇಲ್ನೋಟಕ್ಕೆ ಇವರ ಕಾವ್ಯದಲ್ಲಿ ಎದ್ದು ಕಾಣುತ್ತದೆ. ನೂರಾರು ಕವಿತೆಗಳನ್ನು ಬರೆದಿರುವ ಬಳಿಗಾರ್ ಅವರು

ಬರೆದ ಎಲ್ಲಾ ಕವಿತೆಗಳು ಒಂದೇ ಗುಣಮಟ್ಟದ ಶ್ರೇಷ್ಠತೆಯನ್ನು ತಂದುಕೊಟ್ಟಿವೆ ಎಂದು ಹೇಳಲಾರೆ. ಆದರೆ ಕವಿಯ ಸೂಕ್ಷ್ಮತೆಯ ಒಳಹುಗಳನ್ನು ತಮ್ಮ ಹಲವಾರು ಕವಿತೆಗಳಲ್ಲಿ ಹಿಡಿದಿಟ್ಟಿರುವುದರಿಂದಲೇ ಹಲವು ಸಂಕಲನಗಳನ್ನು ತರಲು ಸಾಧ್ಯವಾಗಿದೆ. ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೂತ ಹಲವರು ಕಳೆದುಹೋಗುತ್ತಿರುವ ಈ ದಿನಮಾನದಲ್ಲಿ ಕವಿತೆಯೊಂದಿಗಿನ ಕುತೂಹಲ, ಕಾವ್ಯವನ್ನು ಪ್ರೇಮಿಸುವ ಅವರ ಹಂಬಲದಿಂದಾಗಿ ಬಳಿಗಾರರ ಸಾಹಿತ್ಯಕ್ಕೆ ಎಂದೂ ಬರವೇ ಬಂದಿಲ್ಲ ಎನ್ನಬಹುದು. ಘಟನೆ, ವ್ಯಕ್ತಿ ಸಂಗತಿಗಳನ್ನು ಹತ್ತಿರದಿಂದ ನೋಡಿ ಅನುಭವಿಸಿ ಕಟ್ಟಿಕೊಟ್ಟಿರುವ ಕೆಲವು ಕವಿತೆಗಳು ನೆನಪಾಗಿ ಕಾಡುತ್ತವೆ. ಸಾಹಿತ್ಯವನ್ನೂ ಬರೆಯುತ್ತಲೋ ಮತ್ತಷ್ಟು ಹಗುರವಾಗುವ ಮನಸಿನ ತಾಕಲಾಟವನ್ನು ಕಟ್ಟಿಕೊಡುವುದು ಸವಾಲಿನ ಕೆಲಸವೇ, ಎಲ್ಲರೊಳಗೂ ಭಾವನೆಗಳು ಹುಟ್ಟುತ್ತವೆ. ಆದರೆ ಭಾವನೆಯೊಳಗೆ ಕವಿತೆಯ ಬೆಳಕಿಂಡಿ ಇಲ್ಲದಿದ್ದರೆ ಕಾವ್ಯ ಕಟ್ಟುವುದಿಲ್ಲ. ಹಳೆಯದ್ದನ್ನೇ ನೆನೆಸಿಕೊಳ್ಳುತ್ತಾ ಹೊಸದನ್ನು ಸ್ವೀಕರಿಸುವ ಮನಸ್ಸು ಇವರಿಗಿದೆ. ಎಲ್ಲಾ ತನ್ನ ಬರವಣಿಗೆಯ ಬಾವುಣಿಕೆಯನ್ನೂ ಬಿಟ್ಟುಕೊಟ್ಟಿಲ್ಲ, ಹೀಗಾಗಿ ಅವರ ಆಯ್ದ ಕವನಗಳಲ್ಲಿ ಹಲವು ಕವಿತೆಗಳು ಗಮನ ಸೆಳೆಯುತ್ತವೆ. ಬರವಣಿಗೆಯನ್ನು ಒಂದು ಉತ್ಸಾಹದಿಂದ ತೆಗೆದುಕೊಳ್ಳುವ ಕವಿ ಬರೆಯಲೇಬೇಕೆಂಬ ಹಠದಿಂದ ಯಾವ ಕ್ರಾಂತಿಯನ್ನು ಮಾಡಬೇಕೆಂಬ ಆಸೆಯಿಂದಲ್ಲ ಎಂಬ ಅವರ ವಿನಮ್ರತೆಯ ಆದಿಯೊಂದಿಗೆ ಕವಿತೆಯ ಸಾಲುಗಳು ಮುಂದುವರಿಯುತ್ತದೆ.

ಹೊಸತನದ ತುಡಿತಕ್ಕೆ ತೊಯ್ದಾಡುವ ಅಂತರಂಗದ ಅಭೀಪ್ಸೆಯ ಭಾವನೆಗಳನ್ನು ತೀರಿಸಿಕೊಳ್ಳಲು ನಾನು ಕವಿತೆ ಬರೆಯುವೆ ಎನ್ನುವ ಅವರ ಆಸೆಯ ಮಿಡಿತ ಮೀರುವ ಸೂರ್ಯೋದಯವಾಗುವ, ಚಂದ್ರನ ನಗುವಿನಲ್ಲಿ ಮುಗುಳ್ನಗುವಿನ ಮಮತೆಗೋಸ್ಕರ ಕವಿತೆಯ ಬೀಡು ಇವರನ್ನೂ ಹಿಂಬಾಲಿಸುತ್ತದೆ. ಪ್ರಭುತ್ವದ ಜೊತೆಯಲ್ಲಿಯೇ ಅಧಿಕಾರದುದ್ದಕ್ಕೂ ಹಲವರನ್ನೂ ಹತ್ತಿರದಿಂದಲೂ ಹಲವರನ್ನು ಅಸಲಿ, ನಕಲಿತವನ್ನೋ ಕಣ್ಣ ಎದುರೇ ಕಂಡಿರುವ ಕವಿ ಬೆಕ್ಕಿನ ಮಾರ್ಜಾಲತೆಗೆ ಹೋಲಿಸಿ ನೋಡುವ ಪರಿ ಹೊಸದೇನಲ್ಲ. ವಚನಗಳಲ್ಲಿ ಇದರ ಕುರುಹು ಕಂಡರೂ ಬಳಿಗಾರರಿಗೆ ತನಗೆ ಕಂಡ ಸತ್ಯವನ್ನು, ಅನ್ಯಾಯವನ್ನೂ ಪ್ರತಿಕ್ರಿಯಿಸುವ ಮನೋಧರ್ಮದಿಂದಲೇ ಮನುಷ್ಯನ ಹುಟ್ಟು ಒಂದು ಅಣುವಿನಿಂದಾಗಿ ಬೆಳೆದು ಆಸೆಯ ಗೋಪುರಕ್ಕೆ ಮುಗಿಬಿದ್ದು ಎಲ್ಲವನ್ನೂ ನುಂಗಿ ನೀರು ಕುಡಿಯಬೇಕೆನ್ನುವ ಇಂದಿನ ರಾಜಕಾರಣಿಗಳ ಮುಖವಾಡವನ್ನು ಬಯಲಿಗೆಳೆದಿದ್ದಾರೆ.

'ರಾಜ ಸಿಂಹಾಸನದ ಬುಡದಲ್ಲಿ ಬೆಳೆದು / ಅಧೀಕಾರಂಗಳದಿ ಮುಕ್ತವಾಗಿಯೇ ಆಡಿ / ಹಿರಿಸೌಧ, ಮರಿಸೌಧ ಕರಿಸೌಧಗಳ ಹೊಕ್ಕು / ಬಹುಮಹಡಿಗಳೊಳು ಹಾಯ್ದು ಬಿಳಿ ಕೆಂಪು ಕಟ್ಟಡದಲ್ಲೂ ತೂರಿ / ಅಂಡಲೆಯುತಿದೆ ಮಾರ್ಜಾಲ ತುಡುಗಿನಲಿ' ಎಂಬ ಕವಿತೆಯ ಸಾಲೊಳಗೆ ಬರುವ ಮಾತುಗಳು ಕೇವಲ ಒಬ್ಬಿಬ್ಬರನ್ನು ಗುರಿಯಾಗಿಸಿಕೊಂಡದ್ದಲ್ಲ. ಸೇವೆ ಮಾಡಬೇಕಾದವರೇ ಜನರಿಗೆ ವಂಚಿಸಿ ತಮ್ಮ ಜೋಬುಗಳನ್ನು ಭದ್ರಮಾಡಿಕೊಳ್ಳುವವರ ಬಗೆಗೆ ತಣ್ಣನೆಯ ಸಾತ್ವಿಕ ಸಿಟ್ಟನ್ನೇ ಹೊರಹಾಕುತ್ತಾರೆ ಕಾನೂನುಗಳನ್ನು

ಪುಸ್ತಕಗಳಲ್ಲಿ ಬಂಧಿಸಿ ಸಮಾಜದ ಕಡೆ ಬೆನ್ನು ತಿರುಗಿಸಿ, ಬರದಲ್ಲೂ ಬರಪೂರ ನಗುವ ನವ ಶ್ರೀಮಂತ ರಾಜಕಾರಣಿಗಳ ನೆನೆದು ವ್ಯಥೆಯಾಗುತ್ತದೆ. ಬಡವರ ಕಣ್ಣೆತ್ತಿ ನೋಡದ ನಮ್ಮನ್ನಾಳುವ ನಾಯಕರು. ಬಡವರ ಕಣ್ಣೀರಲ್ಲಿ ಕೈ ತೊಳೆಯಲು ಹಂಬಲಿಸುವಂತಹ ದುಷ್ಟರು ಎಂಬುದನ್ನು ಮಾರ್ಮಿಕವಾಗಿ ಹೇಳುತ್ತಾರೆ. ಸಂಕಟದ ಕವಲುಗಳು ಕಣ್ಣಿಗೆ ತೋಡಿಸಿದಾಗ ತಾವೇ ಕರಗಿಹೋಗುವ ಹೃದಯವಂತಿಕೆ ಮನಮಿಡಿಯುತ್ತದೆ.

ಬುದ್ದಯಾನ ಕವಿತೆಯೊಳಗೆ ಕಣ್ಣ ಮುಂದಿನ ದೃಶ್ಯವು ಕವಿಯೊಬ್ಬನ ಅಂತರಂಗವನ್ನು ಎಚ್ಚರಿಸುವ ಭಾವುಕತೆಯು ಅದು ಕೇವಲ ಕನಿಕರವಾಗಿರಬಾರದು. ಅದರೊಳಗೆ ಮಿಡಿಯುವ, ಸ್ಪಂದಿಸುವ ಸಾಮಾಜಿಕ ಬದ್ಧತೆ ಇದ್ದರೆ ಅದು ಮಾನವೀಯತೆ ಸ್ಪರ್ಶವಾಗಿ ಹೊರಹೊಮ್ಮುತ್ತದೆ. ಅದಕ್ಕಾಗಿಯೇ ಕವಿಯ ಕಣ್ಣ ಮುಂದಿನ ದೃಶ್ಯವು ಬಡವರ ಕಂಡಂತೆ ಗೋಚರಿಸುತ್ತದೆ.

**ಬಡವಿಯ ಬಗಲೊಳಗಿನ ಕನಸು**
**ಬರಿ ಎದೆಯ ಬಡಿ ಬಡಿದು**
**ಬಾರದ ದಾರಿಗಾಗಿ ಹಸಿವಿನಲಿ ಅಳುವಾಗ**
**ದನಿಗೂಡಿಸಲಾಗದೇ ಒಳಗೊಳಗೆ ಕುದಿಯುತ್ತೇನೆ.**

ಬಡತನದೊಂದಿಗೆ ಬಡವಿ ಬದುಕು ಹಿಂಬಾಲಿಸಿ ಬರ್ಬರ ಸಾಮಾಜಿಕ ಸನ್ನಿವೇಶಗಳು ಕಣ್ಣ ಮುಂದೆ ಬಂದರೆ 'ಬಡವರಿಗೆ ಸಾವ ಕೊಡಬೇಡ ಶಿವನೆ' ಎನ್ನುವ ಜಾನಪದ ಸಮೂಹ ಸೃಷ್ಟಿಯ ಒಡಲ ಬೆಂಕಿ ಎಷ್ಟು ಕ್ರೂರವಾದದ್ದು ಎಂದು ಅಳೆಯಲಿಕ್ಕೆ ಆಗುವುದಿಲ್ಲ. ಧರ್ಮ, ಕರ್ಮದ ಫಲವಾಗಿಯೇ ಬಡಿದಾಡುವ ನಮ್ಮ ಮುಂದಿರುವ ಹಲವು ನಾಯಕರು, ಬಡತನದ ಸವಾಲುಗಳನ್ನು ಮೊದಲು ಬಿಡಿಸಬೇಕಾಗಿದೆ. ಇಲ್ಲದಿದ್ದರೆ ನಾವು ಬದುಕಿರುವ, ನಂಬಿರುವ ಯಾವ ಧರ್ಮವೂ ನ್ಯಾಯಯುತವಾಗುವುದಿಲ್ಲ. ಅದು ಕೇವಲ ನಂಬಿಕೆಯ ಭ್ರಮೆ ಹುಟ್ಟಿಸುತ್ತದೆ ಹೊರತು ಮಾನವೀಯತೆ ಎಂಬ ಧರ್ಮವನ್ನಲ್ಲ, ಬುದ್ಧನ ಮಾನವ ಪ್ರೀತಿ ಜಗತ್ತಿನಾದ್ಯಂತ ಬಂದರೆ ಮಾತ್ರ ಎಲ್ಲರೂ ಶಾಂತಿಯಿಂದ ಬದುಕುವ, ಎಲ್ಲರಿಗೂ ಸರಿಸಮವಾದ ಬದುಕು ಸಿಗಲಿ ಎಂಬುದು ಕವಿಯ ಆಶಯವಾಗಿದೆ.

ದ್ರಾವಿಡ ಭಾಷೆಗಳೊಂದಿಗಿನ ನಂಟಿನೊಂದಿಗೆಯೇ ಸೋದರ ಪ್ರೇಮವು ಬೇಕೆಂಬ ಆಶಯದೊಂದಿಗೆ ನೆರೆಯ ರಾಜ್ಯದೊಂದಿಗೆ ಇಟ್ಟುಕೊಳ್ಳಬೇಕಾದ ಸೌಹಾರ್ದಯುತವಾದ ಸ್ನೇಹಪರತೆಯನ್ನು ಸರ್ವಜ್ಞ - ತಿರುವಳ್ಳವರ್ ಮಾದರಿಯಾಗಿದ್ದಾರೆ. ಆದರೆ ರಾಜಕೀಯ ಲಾಭ ಪಡೆಯುವುದಕ್ಕಾಗಿ ಹೊಂದಾಣಿಕೆಯ ಸಾಮರಸ್ಯವನ್ನು ಇನ್ನೂ ಮೂಡಿಸಿಕೊಂಡಿಲ್ಲದ ನೆರೆಯ ರಾಜ್ಯಗಳು ಅಷ್ಟೇ ಪ್ರೀತಿಯಿಂದ ನೆಲ, ಜಲದ ವಿಷಯ ಬಂದಾಗ ಬಗೆಹರಿಸಿಕೊಳ್ಳಬೇಕೆಂಬ ಭಾವನಾತ್ಮಕ ಸಂಬಂಧವೇ ಮರೆತುಹೋಗುತ್ತದೆ. ಇದರಿಂದ ಸಾಮಾಜಿಕವಾಗಿ ಮತ್ತಷ್ಟು ಬಹುದ್ವೇಷಿಗಳಾಗುತ್ತಾ ತಮ್ಮ ಹಳೆಯ ನಂಟನ್ನೂ ಕಳೆದುಕೊಳ್ಳುತ್ತಾರೆ. ಕವಿ, ಕುಟುಂಬ ಯಾವುದೇ ಜಾತಿ, ಧರ್ಮ, ರಾಜ್ಯಕ್ಕೆ ಮೀಸಲಾದವರಲ್ಲ. ಅದೆಲ್ಲವನ್ನೂ ಮೀರಿಸುತ್ತಾ ಅವರ

ಸಂದೇಶವೇ ಸತ್ಯವಾಗಿ ಸ್ವೀಕರಿಸುವ ಮನೋಧರ್ಮವು ಮತ್ತಷ್ಟು ಗಟ್ಟಿಯಾಗಬೇಕಾಗಿದೆ. ಹೀಗಾಗಿ ಬ್ರಿಟೀಷರು ಅಧಿಕಾರದಲ್ಲಿದ್ದಾಗ ಹಲವಾರು ಜನ ಸ್ತುತ್ಯವಾದ ಕೆಲಸವನ್ನೂ ಮಾಡಿರುವುದನ್ನು ಗಮನಹರಿಸಬೇಕಿದೆ. ಭಾಷಿಕ ಹೋರಾಟದಲ್ಲಿಯೇ ಎಲ್ಲ ಸೋದರ ಭಾಷೆಗಳು ಒಗ್ಗೂಡುತ್ತಾ ಹೋರಾಟವನ್ನು ಮುಂದುವರಿಸಬೇಕಾದರು ತಮ್ಮ ತಮ್ಮಲ್ಲಿಯೇ ವೈಯಕ್ತಿಕ ರಾಜ್ಯದ ಹಿತಾಶಕ್ತಿಯನ್ನೂ ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಿರುವಾಗ ಪ್ರಾದೇಶಿಕತೆಯ ಅಸ್ತಿತ್ವವನ್ನು ಹೇಗೆ ಕಾಪಾಡಿಕೊಳ್ಳುವುದು. ದೇಶದ ಯಾವ ಭಾಷೆಯಲ್ಲಿಯೇ ಬರೆಯುವ ಕವಿಯಾದರೂ ಅದನ್ನು ಓದುವ ಮತ್ತು ಗೌರವಿಸುವ ಸಾಮಾಜಿಕ ಸೌಹಾರ್ದತೆ ಮೊದಲಿಂದಲೂ ಇದೆ. ಆದರೆ ಅದನ್ನೂ ಅಭಿವ್ಯಕ್ತಿಸುವ ಸಂದರ್ಭಗಳು ಕಾಲದ ಒತ್ತಡಕ್ಕೂ, ಸರ್ಕಾರಗಳ ತಪ್ಪು ತೀರ್ಮಾನಗಳಿಂದಾಗಿ ಅಕ್ಕಪಕ್ಕದ ರಾಜ್ಯಗಳೆರಡೂ ಬದ್ಧದ್ವೇಷಿಯಂತೆ ಬದುಕಬೇಕಾದ ವ್ಯವಸ್ಥೆ ಮಂಡಿತವಾಗುತ್ತಿರುವುದನ್ನೂ ನೋಡಿದರೆ ತಿರುವಳ್ಳವರ್ - ಮತ್ತು ಸರ್ವಜ್ಞಮೂರ್ತಿಗಳ ಮೇಲೆ ಇರುವ ಮಮಕಾರ ಅದು ಮುಂದುವರಿದರೂ ಹಲವು ವಿಷಯಗಳಲ್ಲಿ ಸೌಹಾರ್ದತೆ ಮೂಡಬೇಕಾಗಿದೆ. ಸಾಹಿತ್ಯದ ಜೊತೆಗೆ ಹಿಡಿತಯಿಟ್ಟುಕೊಂಡಿರುವ ಬಳಿಗಾರರು ಕೆಲವು ಕವಿತೆಗಳಲ್ಲಿಯೂ ನೋಡಿರುವುದು ಕಾಣಬಹುದು. ರವೀಂದ್ರನಾಥ ಠಾಕೂರ್ ಅವರ ಕೃಷ್ಣಸುಂದರಿ ಈ ಮೂಲಕ ಗಮನಸೆಳೆಯುತ್ತದೆ.

ಈ ಸಂಕಲನದೊಳಗೆ ಹಲವು ವ್ಯಕ್ತಿ ಚಿತ್ರಗಳನ್ನೂ ಕಟ್ಟಿಕೊಟ್ಟಿದ್ದಾರೆ. ರಾಮಕೃಷ್ಣ ಹೆಗಡೆ, ಡಾ.ರಾಜ್ ಕುಮಾರ್, ಕಂಬಾರರು, ಮಂಡೇಲಾ, ತಾಯಿ ತೆರೇಸಾ, ಶರೀಫ, ಅಂಬೇಡ್ಕರ್ ಇಂತಹ ದೊಡ್ಡ ಸಾಧಕರು ತನ್ನನ್ನು ಪ್ರಭಾವಿಸಿಕೊಂಡ ಮೇಲೆ ಏನನ್ನಾದರು ಬರೆಯಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬಲವಂತವಾಗಿ ಬರೆದ ಕಾವ್ಯಗಳು ಒತ್ತಾಯದ ಕಾವ್ಯಗಳಾಗಿ ಎಲ್ಲೂ ಸಲ್ಲದೇ ಸವಕಲಾಗುತ್ತವೆ. ವ್ಯಕ್ತಿಗಳು ಇನ್ನೊಬ್ಬರಿಗೆ ಕಾಡಿದಾಗಲೇ ಅವನ ಬಗ್ಗೆ ಎಚ್ಚರದ ಪ್ರಜ್ಞೆ ಮೂಡಲಿಕ್ಕೆ ಸಾಧ್ಯವಾಗುವುದು. ಎಷ್ಟೇ ಎತ್ತರಕ್ಕೇರಲಿ, ಎಷ್ಟೇ ಅಧಿಕಾರವಿರಲಿ ಕಳೆದು ಹೋದ ಬಾಲ್ಯ ಕಾಡುವಷ್ಟು ಯಾವುದೂ ಕಾಡಲಾರದು. ಗ್ರಾಮಭಾರತದ ಹಳ್ಳಿ ಚಿತ್ರಗಳೇ ಒಂದು ವಿಸ್ಮಯ ವಿಚಿತ್ರಗಳು, ಬಹುಶಃ ಈ ತಲೆಮಾರಿನಲ್ಲಿ ಬೆಳೆಯುತ್ತಿರುವ ಹಲವರು ತಮ್ಮ ಬಾಲ್ಯದ ನಿಜವಾದ ವಾತಾವರಣವನ್ನು ಕಳೆದುಕೊಳ್ಳುತ್ತಿದ್ದಾರೆ. ನಗರದ ಒತ್ತಡದ ಟೈಮ್‌ಟೇಬಲ್‌ನೊಳಗೆ ಹಚ್ಚ ಹಸಿರಿನ ಹಳ್ಳಿಗಾಡಿಗೆ ಪ್ರಯಾಣ ಬೆಳೆಸಿದಾಗೆಲ್ಲಾ ಮನಸ್ಸು ಮುದಗೊಳ್ಳುವುದನ್ನು 'ನನ್ನ ಹಳ್ಳಿಯ ನೆನಪು' ಕಟ್ಟಿಕೊಡುತ್ತದೆ.

**ನನ್ನ ಹಳ್ಳಿಯ ನೆನಪು**
**ಅರಳುವುದು ಹೃದಯದಲಿ**
**ಸೂಸುತ್ತ ಮಧುರಮಲ್ಲಿಗೆ ಕಂಡು**

ಮಲ್ಲಿಗೆಯ ಕಂಪಾಗಿ ಸೂಸುವ ಮಧುರ ನೆನಪುಗಳನ್ನೂ ಮರೆಯುವುದಾದರೂ ಹೇಗೆ ಬಹಳಷ್ಟು ವ್ಯಕ್ತಿಗಳ ಆತ್ಮಕಥಾ ಚಿತ್ರದಲ್ಲಿ ತಮ್ಮ ಅಪರೂಪದ ಬಾಲ್ಯದ ನೆನಪುಗಳು ಸ್ವಾರಸ್ಯವಾಗಿರುತ್ತವೆ. ಅದು

ಸಮುದ್ರದೊಳಗಿನ ಮುತ್ತಿನಂತೆ ಸದಾ ಹೊಳೆಯುವ ನೆನಪಾಗಿ ಪ್ರತಿಯೊಬ್ಬರಿಗೂ ಕಾಡುವಂತದ್ದೆ. ಕಳೆದುಕೊಂಡಿರುವುದರ ಬಗ್ಗೆ ಮತ್ತಷ್ಟು ಮನವರಿಕೆಯಾಗುತ್ತಾ ಮುಗ್ಧತೆ, ಬಾಲ್ಯ ಕಾಲವನ್ನೂ ಇಂದು ನಗರದಲ್ಲಿರುವ ಎಲ್ಲರೂ ಕಳೆದುಕೊಳ್ಳುತ್ತಿದ್ದೇವೆ ಎಂಬ ಭಾವನೆ ನಗರ ಮಾಡಿಬಿಟ್ಟಿದೆ. ಅವರವರ ಹಳೆಯ ನೆನಪು ನೆನಪಾಗಿಯೇ ಉಳಿಯುವ ಅಪಾಯವೂ ಆಗಿರುವುದರಿಂದ ಅಂದು ಇಂದುಗಳ ಕಲ್ಪನೆಗೆ ವಾಸ್ತವತೆಯ ಕನ್ನಡಿ ಮುಖ್ಯವಾಗುತ್ತದೆ. ಮಹಾಭಾರತದ ಪ್ರತಿನಾಯಕನಾದ ಕರ್ಣನ ಬಗೆಗಿನ ಕುತೂಹಲ ಮತ್ತು ಕರ್ಣನಂತವರ ಮೇಲಿನ ಪ್ರೀತಿಯಿಂದಾಗಿ ಹರಿಯುವ ನದಿಯಲ್ಲಿ ತೇಲಿ ಬಿಡುವ ಕುಂತಿಯು ತನ್ನ ಕಣ್ಣೀರ ಧಾರೆಯನ್ನು ಹರಿಸುತ್ತಾ ಹೆಣ್ಣೊಬ್ಬಳು ಅನುಭವಿಸುವ ಸಾಮಾನ್ಯ ಸಂಕಟದಂತೆ ಕುಂತಿ ಅನುಭವಿಸುವ ನೋವು ಕಾಡುವುದು. ಕೌಮಾರ್ಯದಲ್ಲಿಯೇ ಮಗುವನ್ನೂ ಪಡೆದಳೆಂಬ ಅಪಖ್ಯಾತಿಯನ್ನೂ ತಡೆದುಕೊಳ್ಳಲಾರದೆ, ರಾಜಪ್ರತಿಷ್ಠೆಗೆ ಕುಂದು ನನ್ನಿಂದ ಆಗಬಹುದೆಂಬ ಅಳುಕಿನಿಂದಲೇ ಕುಂತಿ ತನ್ನ ಮಗನನ್ನು ನದಿಯಲ್ಲಿ ತೇಲಿಬಿಡುವ ಸಂದರ್ಭ ಎಂಥ ತಾಯಂದಿರಿಗೂ ಸಮಾಧಾನ ತರುವುದಲ್ಲ. ಪರಿಸ್ಥಿತಿ, ಸಂದರ್ಭಗಳು ಭಾವನಾತ್ಮಕ ಸಂಬಂಧಗಳನ್ನು ಕತ್ತರಿಸಿಕೊಳ್ಳುವ ಅನಿವಾರ್ಯತೆಯೊಳಗೆ 'ಕುಂತಿಯ ಕಣ್ಣೀರು ಹಾಗೂ ಕರ್ಣ' ಕವಿತೆಯು ಇಬ್ಬರನ್ನೂ ನೆನಪಿಸುತ್ತದೆ.

ಇಲ್ಲಿನ ಹಲವು ಕವಿತೆಗಳು ವಾಚ್ಯದಲ್ಲಿಯೇ ಮೂಡಿರುವುದರಿಂದ ಕಾವ್ಯದ ಬಂಧ ಸಡಿಲವಾಗಿದೆ ಎಂಬುದು ತೋರುತ್ತದೆ. ಆದರೆ ಬರೆಯುವ ಹದ ಸಂಪತ್ತನ್ನೇ ಅಗಾಧವಾಗಿಟ್ಟುಕೊಂಡಿರುವ ಇವರು ವಸ್ತುವಿಷಯಗಳನ್ನು ಹುಡುಕಿ ಹೋಗುವುದಿಲ್ಲ. ತನಗೆ ಅನಿಸಿದ್ದನ್ನು ಆಗಲೇ ಕಾವ್ಯ ರೂಪಕ್ಕಿಳಿಸುವ ವೇಗದಲ್ಲಿ ಗದ್ಯಸ್ವರೂಪವನ್ನು ಪಡೆದುಕೊಂಡು ಕಾವ್ಯದ ಬಂಧವೇ ಬೀಳು ಬೀಳಾಗುತ್ತದೆ. ಇಲಾಖೆಯ ಅನುಭವಗಳು, ಸಭೆಗೆ ಬರುವ ಸುಂದರಿ ನಿರೂಪಕಿಯರು, ಸ್ವದೇಶಿಯರೋ, ವಿದೇಶಿಯರೋ ಗೊತ್ತೇ ಆಗದೇ ಬದಲಾಗುತ್ತಿರುವ ಇಂದಿನ ಯುವ ಜನಾಂಗದ ಬಗೆಗೆ ಅವರಿಗೆ ಕಾಳಜಿ ಇದೆ. ಅದರ ಹಿನ್ನೆಲೆಯಲ್ಲಿ ಹಲವು ಕಡೆ ತುಣುಕುಗಳಾಗಿ ತಮ್ಮ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಸಂಕೋಲೆಯೊಳಗೆ ನಲುಗುತ್ತಿರುವ ಜೀವನಸ್ಥಿತಿಯ ಕಡೆಗೆ ಕಣ್ಣ ದೃಷ್ಟಿಯನ್ನು ಹರಿಸುತ್ತ ಹಲವು ಮಹಾತ್ಮರ ಕಡೆಗೆ ಕವಿತೆಯ ಸಾಲನ್ನು ಹರಿಯಬಿಟ್ಟಿರುವುದು ನೋಡಬೇಕಾದ್ದು. ಹಾಗಾಗಿ ಮನು ಬಳಿಗಾರ್‌ರವರು ಸಾಹಿತ್ಯದ ಜೊತೆಗೆಯೇ ಜಂಟಿಯಾಗಿ ವ್ಯವಹಾರ ನಡೆಸುತ್ತಬಂದರೂ ಸಂದರ್ಭಗಳು ಕೂಡಿ ಸಾಹಿತ್ಯವನ್ನು ಒಗ್ಗೂಡಿಸುವ ಕನ್ನಡಿಗನ ಪ್ರಾತಿನಿಧಿಕತೆಯನ್ನು ಪ್ರತಿನಿಧಿಸುವ ಸಂಸ್ಥೆಯಲ್ಲಿ ಕೆಲಸ ಮಾಡಬೇಕಾಗಿ ಬಂದದ್ದು ಯೋಗಾಯೋಗವೇ ಸರಿ. ಸಂಸ್ಕೃತಿ ಇಲಾಖೆಯೊಳಗೆ ಮಾಡಿರುವ ಕೆಲಸ ಕಾರ್ಯಗಳು ಮತ್ತು ಸಾಹಿತಿಗಳ ನಿಕಟ ಒಡನಾಟವಿಟ್ಟುಕೊಂಡಿರುವ ಶ್ರೀಯುತರದು ಕಿರಿಯರೂ, ಹಿರಿಯರೂ ಎಂಬ ಬೇಧ ತೋರದ ದೊಡ್ಡಸ್ಥಿಕೆ. ಅಂಕಣ ಬರಹದೊಂದಿಗೆ ಭರವಸೆಯನ್ನು ಮೂಡಿಸಿದ ಇವರ ಒಲವು ಸಹಜವಾದದ್ದು. ಕನ್ನಡದಷ್ಟೆ ಇಂಗ್ಲೀಷ್ ಭಾಷೆಯ ಮೇಲೆ ಹಿಡಿತ ಸಾಧಿಸಿರುವ ಇವರಿಂದ ಅನುವಾದವೂ ಸೇರಿದಂತೆ ಮತ್ತಷ್ಟು ಬರೆಯುವ ಹುಮ್ಮಸ್ಸು

ಅವರಿಗಿದೆ. ಬರೆದದ್ದೆಲ್ಲಾ ಶ್ರೇಷ್ಠವಾಗುವುದಿಲ್ಲ. ಅದೂ, ಶ್ರೇಷ್ಠವಾಗಲೂ ಬೇಕಿಲ್ಲ. ಆದರೆ ಬರೆಯುತ್ತಾ ಹೋದಂತೆ ಹೊಸತನದ, ಹೊಸಹಾದಿಯ ಬೆಳಕಿಂಡಿಗಳು ಕಣ್ಣಿಗೆ ಗೋಚರವಾಗುತ್ತವೆ' ಎಂಬುದು ಸತ್ಯ ಆದ್ದರಿಂದ ಸಾಹಿತ್ಯ ಬರೆಯುವ ಇಂದಿನ ದಿನಗಳಲ್ಲಿ ಬರೆಯುವವನ ಮೇಲೆ ಸಮಾಜ ಹಲವು ನಿರೀಕ್ಷೆ ಮತ್ತು ಭರವಸೆಗಳನ್ನಿಟ್ಟುಕೊಂಡಿರುತ್ತದೆ. ಅದು ಸಮಾಜದೊಂದಿಗೆ ಇಟ್ಟುಕೊಂಡ ಬದ್ಧತೆಯ ನಡೆಯನ್ನು ಎಚ್ಚರದಿಂದ ಕಾಯ್ದುಕೊಂಡಾಗ ಮಾತ್ರ ಸಫಲವಾಗುತ್ತದೆ. ಈ ಹೊಸತನ, ಹೊಸ ಭರವಸೆಯಲ್ಲಿಯೇ ಸಾಗುತ್ತಿರುವ ಶ್ರೀಯುತ ಮನು ಬಳಿಗಾರ್‌ರವರು ತೋರಿಸುವ ಅವರ ಪ್ರೀತಿ ದೊಡ್ಡದು. ಈ ದೊಡ್ಡವರ ಸಂಗದಲ್ಲಿ ನನ್ನ ಈ ಬರಹಗಳು ನಿರ್ಧಾರಿತವಾದವುಗಳಲ್ಲ. ಸಾಹಿತ್ಯದ ವಿದ್ಯಾರ್ಥಿ ಹಂಬಲದಲ್ಲಿಯೇ ಇರುವ ನಾನು ಸಾಹಿತ್ಯವನ್ನು ಮೋಹಿಸುವ, ಇದರ ಮೂಲಕ ಭಿನ್ನ ಭಿನ್ನ ಅಭಿರುಚಿ ಕಾವ್ಯಗಳನ್ನು ಓದುವುದಕ್ಕೆ ಸಾಧ್ಯವಾಯಿತು. ಬರವಣಿಗೆಗಾಗಿ ಬಿಡುವು ಮಾಡಿಕೊಳ್ಳುವ ಅವರ ಸಾಹಿತ್ಯದ ಅಭಿರುಚಿಗಳು ನಿರಂತರವಾಗಿ ನಡೆಯುತ್ತಿರುವುದರಿಂದ ಸಾಮಾಜಿಕತೆ, ಸಾಮಾಜಿಕ ನ್ಯಾಯ ಅವರ ತೀರ್ಮಾನದಲ್ಲಿ ಅಡಗಿದೆ. ತೆಗೆದುಕೊಳ್ಳಬೇಕಾದುದನ್ನೆ ತೆಗೆದುಕೊಂಡು ಅದನ್ನು ಕಾರ್ಯರೂಪಕ್ಕೆ ತರುವ ನಿರ್ಧಾರಿತ ರೂಪ ಕಾರ್ಯವೈಖರಿಗಳು ಈ ಕಾಲದ ತುರ್ತುವ್ಯವಸ್ಥೆಗೆ ಅಗತ್ಯವಾಗಿ ಬೇಕಾಗಿದೆ. ಇಷ್ಟೆಲ್ಲಾ ಕಾರ್ಯ ಬಾಹುಳ್ಯದ ನಡುವೆ ಕೈ ತುಂಬಾ ಕೆಲಸವನ್ನಿಟ್ಟುಕೊಂಡು ಬಿಡುವಿಲ್ಲದೇ ಇಡೀ ನಾಡನ್ನು ಸುತ್ತುತ್ತಾ ಕನ್ನಡದ ಕೆಲಸವನ್ನು ಮಾಡುತ್ತಾ ಬಂದಿರುವ ಬಳಿಗಾರರ ಸಾಹಿತ್ಯ ಸೇವೆ ಮತ್ತಷ್ಟು ಮುಂದುವರೆಯಲಿ.

❖

# ಮನು ಬಳಿಗಾರ್ ಅವರ ಕಾವ್ಯ

ಡಾ. ಎಂ. ನಾಗರಾಜ

**ಕ**ವಿಯಾದವರಿಗೆ ಒಳ್ಳೆಯದನ್ನು ಅರಿತುಕೊಳ್ಳುವ ಹಾಗೂ ಅದನ್ನು ಪ್ರಚುರಪಡಿಸುವ ಗುಣ ತೀವ್ರವಾಗಿರಬೇಕು. ತನ್ನ ಸುತ್ತಮುತ್ತಲಿನ ಜನಜೀವನದಲ್ಲಿ ಅದು ಬೆಳೆದು ಬರಬೇಕೆಂಬ ಆಕಾಂಕ್ಷೆ ಮಹತ್ತರವಾಗಿರಬೇಕು. ಲೋಕ ಒಮ್ಮೆ ಉತ್ತಮ ಹಾದಿ ಹಿಡಿದರೆ ಸಾಕು ಎನ್ನುವ ಮನೋಭಾವ ಹಾಗೂ ಹಂಬಲಿಕೆ ಅತ್ಯುಗ್ರವಾಗಿರಬೇಕು. ಇಂತಹ ಭಾವನೆಗಳಿಂದಲೇ ಕವಿಯ ನೈತಿಕತೆ ಸುಸಂಬದ್ಧವಾದೊಂದು ಹೊಸ ಸಮಾಜ ನಿರ್ಮಿಸಲು ಹಗಲಿರುಳು ಕವಿಯ ಮನಸ್ಸು ಹೆಣಗಾಡಬೇಕು. ಜೂಜಾಟಿಕೆ, ದೈತ್ಯಕೃತ್ಯಗಳಿಂದ ಸಮಾಜ ಅಧಃಪತನಗೊಳ್ಳುವುದು ನೋಡಿ ಹೃದಯವಿರುವ ಯಾವೊಬ್ಬ ಕವಿಯೂ ಸುಮ್ಮನಿರಲಾರ, ಸಮಾಜದಲ್ಲಿ ಶ್ರೇಷ್ಠತೆ ಅವಿರ್ಭಾಸವಾಗಬೇಕೆಂದು ಬಯಸಿ ಶ್ರೇಷ್ಠತೆಯನ್ನೇ ಉತ್ತಿ ಬೆಳೆ ಬೆಳೆಯಲು ನಿರಂತರವಾಗಿ ಕವಿ ಹೃದಯ ಪ್ರಯತ್ನಿಸುತ್ತಿರಬೇಕು.

ಎಲ್ಲಡೆಯಲ್ಲೂ ಶೈಥಿಲ್ಯ ಆವರಿಸಿಕೊಂಡಿರುವುದನ್ನು ಕಂಡ ಯಾವ ಕವಿ ಹೃದಯವೂ ಸ್ಪಂದಿಸದಿರದು. ಆರ್ಥಿಕವಾಗಿ, ನೈತಿಕವಾಗಿ, ರಾಜಕೀಯವಾಗಿ, ಹೆಣಗಿ ಹದಗೆಟ್ಟಿದ್ದ ಸಂದರ್ಭವನ್ನು ಆಯಾ ಕಾಲದ ಕವಿಗಳು

ಸಕಲ ಜನಮನಗಳನ್ನು ಸಂಸ್ಕರಿಸುವ ಗುರುತರವಾದ ಜವಾಬ್ದಾರಿಯನ್ನು ತನಗೆ ತಾನೇ ಹೊತ್ತುಕೊಂಡು ಅದರ ಫಲ-ಸಫಲಗಳನ್ನು ಸುಧಾರಕನ ಪ್ರಜ್ಞೆಯಂತೆ ನೀತಿ ಬೋಧನೆಯ ಒಲವನ್ನು ತೀವ್ರವಾಗಿ ನಿರೂಪಿಸುವ ಕವಿಯ ಅಭಿವ್ಯಕ್ತಿ, ಆತನ ವೈಯಕ್ತಿಕ ಬದುಕಿಗಿಂತ ಭಿನ್ನವಾಗಿರುತ್ತದೆ. ಅಲ್ಲದೇ ಬಹುಪಾಲು ಪ್ರಕೃತಿ, ತ್ಯಾಗ, ಭೋಗ, ಜೀವನದ ವೈವಿಧ್ಯಪೂರ್ಣವಾದ ವಿಷಯಗಳನ್ನು ಹೊಕ್ಕಿ ಶೋಧಿಸಿ ಅವುಗಳ ಅನಿವಾರ್ಯತೆ ಮತ್ತು ವೈಜ್ಞಾನಿಕತೆಯನ್ನು ಕವಿ ಕಾವ್ಯದ ಮೂಲಕ ಅಭಿವ್ಯಕ್ತಿಸುತ್ತಾನೆ.

ಮನು ಬಳಿಗಾರ್ ಅವರು ಈ ಸಾಲಿನಲ್ಲಿ ಗುರುತಿಸಿಕೊಳ್ಳುವ ಕವಿ ಹೃದಯಿಗಳು. ಬಾಲ್ಯದ ಸವಿನೆನಪುಗಳೊಂದಿಗೆ ಜೀವನದುದ್ದಕ್ಕೂ ಕಂಡುಂಡ ಸೌಂದರ್ಯತೆಯನ್ನು ಕವಿಯಾಗಿ ಹಾಡಿದ್ದಾರೆ. ನಿಸರ್ಗದ ವಿದ್ಯಮಾನಗಳ ಜೊತೆ-ಜೊತೆಯಲ್ಲಿ ಹೆಜ್ಜೆ ಹಾಕಿದ್ದಾರೆ. ಭಾವನೆಗಳಿಗೆ ಗೆಜ್ಜೆಕಟ್ಟಿ ಕುಣಿಸಿದ್ದಾರೆ. ಅವರಲ್ಲಿನ ಭಾವ ತೀವ್ರತೆ ಬದುಕಿನ ವಾತ್ಸಲ್ಯತೆಯನ್ನು, ದುಡಿಯುವ ಜನರ ಬೆವರಿನ ನಿಜತ್ವವನ್ನು, ಢಾಂಭಿಕತೆಯ ಕ್ರೂರತ್ವವನ್ನು, ಪ್ರಾಮಾಣಿಕತೆಯ ಸತ್ಯ-ಆಸತ್ಯತೆಗಳನ್ನು ಕಾಣುತ್ತೇವೆ. ಇದರಿಂದಲೇ ಅವರೊಳಗೆ ಹುದುಗಿದ್ದ ಅಮೋಘವಾದ ಕವಿತ್ವದ ಧೀಃಶಕ್ತಿ ಹೊರಹೊಮ್ಮಿದೆಯೆಂದೇ ಹೇಳಬೇಕು. ಇದರ ಜೊತೆಗೆ ಅವರು ಪ್ರೀತಿಸುವ ಆಳವಾದ ಬದುಕಿನ ನೈಜತೆಯೂ ಇಲ್ಲಿ ಕಾಣಬಹುದಾಗಿದೆ. ಇದನ್ನೇ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರು ಒಂದು ಪದ್ಯದಲ್ಲಿ ಹೇಳಿರುವಂತೆ,

**ಪ್ರೀತಿ ಇಲ್ಲದ ಮೇಲೆ**
**ಹೂವು ಅರಳೀತು ಹೇಗೆ?**
**ಮೋಡ ಕಟ್ಟೀತು ಹೇಗೆ?**
**ಹನಿಯೊಡೆದು ಕೆಳಗುದುರಿ**
**ನೆಲಕ್ಕೆ ಹಸಿರು ಮೂಡೀತು ಹೇಗೆ?**
**ಪ್ರೀತಿ ಇಲ್ಲದ ಮೇಲೆ**
**ಮಾತಿಗೆ ಮಾತು ಕೂಡೀತು ಹೇಗೆ?**
**ಅರ್ಥ ಹುಟ್ಟೀತು ಹೇಗೆ?**
**ಬರೀಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ**
**ಪದ್ಯವಾದೀತು ಹೇಗೆ?**

ಅಂದರೆ ಪ್ರೀತಿಯೆಂಬ ಕಲ್ಪನೆ ಆಕಾಶಕ್ಕೂ ಮೀರಿದ್ದು, ಆಕಾಶದಷ್ಟೇ ವಿಶಾಲವಾದದ್ದು. ಮನುಷ್ಯನನ್ನು ಮನುಷ್ಯನಾಗಿ ಮನುಷ್ಯನೊಡನೆ ಮನುಷ್ಯನನ್ನಾಗಿಸುವ ಧೀಶಕ್ತಿಯೇ ಈ ಪ್ರೀತಿ. ಪ್ರೀತಿಯನ್ನು ಆವರಿಸಿಕೊಂಡ ವ್ಯಕ್ತಿ ಜಗತ್ತನ್ನೇ ಸೌಂದರ್ಯತೆಯಲ್ಲಿ ಕಾಣುತ್ತಾನೆ. ಒಂದು ರೀತಿಯಲ್ಲಿ ಪ್ರೀತಿ ಇಲ್ಲದಿದ್ದರೆ ಮರುಭೂಮಿಯಂತೆ ನಿಷ್ಪ್ರಯೋಜನಕಾರಿಯಾಗಿ ಬದುಕುತ್ತಾನೆ. ಆದ್ದರಿಂದ ಪ್ರೀತಿಯಿಂದ ಇದ್ದರೆ ಮಾತ್ರ ನಾವು ಈ ಜಗತ್ತನ್ನು ಗೆಲ್ಲಬಹುದು. ನಮ್ಮೊಳಗಿನ ಕ್ರೌರ್ಯ ಕಳೆದುಕೊಳ್ಳಬಹುದು. ಆ ಪ್ರೀತಿಯೇ ಕವಿಯನ್ನಾಗಿಸುತ್ತದೆ.

ಕಲಾವಿದನನ್ನಾಗಿಸುತ್ತದೆ. ಈ ಜಗತ್ತನ್ನೇ ಸುಂದರಗೊಳಿಸುತ್ತದೆ ಎನ್ನುವ ಸಂದೇಶ ಈ ಪದ್ಯದಲ್ಲಿ ಸಾರಿದ್ದಾರೆ. ಇಂತಹ ಪ್ರೀತಿಯ ತುಡಿತವನ್ನು ಮನು ಬಳಿಗಾರ್ ಅವರು ಹೀಗೆ ಅಭಿವ್ಯಕ್ತಿಸುತ್ತಾರೆ.

**ಒಳ್ಳೆಯದನ್ನು ಮಾಡುವವನು**
**ಗುಡಿಯ ಹೆಬ್ಬಾಗಿಲವರೆಗೆ ಬರುತ್ತಾನೆ**
**ಪ್ರೀತಿಯ ಮಾಡಿದವನು**
**ಗರ್ಭಗುಡಿಯೊಳಗೆ ತಲುಪುತ್ತಾನೆ**

ಹೀಗೆ ಪ್ರೀತಿಯ ಅನನ್ಯತೆಯನ್ನು ಅವರದ್ದೇ ಆದ ಭಾವ ಪ್ರಪಂಚದಲ್ಲಿ ಕಾಣುತ್ತಾರೆ. ಪ್ರೀತಿಯನ್ನು ಅವಲಂಬಿಸಿದ ಮನಸ್ಸಿಗೊಂದು ಜೀವನದ ಸಾಕ್ಷಾತ್ಕಾರವಿದೆ ಎನ್ನುವುದನ್ನು ಸಾರುತ್ತಾರೆ.

"ಜೀವನಕ್ಕೂ ಕಾವ್ಯಕ್ಕೂ ಅನನ್ಯವಾದ ಸಾದೃಶ್ಯವಿದೆ. ಜೀವನದ ಭವ್ಯತೆ ದಿವ್ಯತೆಗಳನ್ನು ಜನತೆಗೆ ತೋರಿಸಿಕೊಡಲು ಕಾವ್ಯವೇ ಕೈಗನ್ನಡಿ, ಹಿಂದಿನ ಜೀವನಕ್ಕೂ ಇಂದಿನ ಜೀವನಕ್ಕೂ ಇರುವ ಭೇದವನ್ನು ನೋಡಿ ಇಂದಿನ ಜೀವನ ಧರ್ಮಕ್ಕೊಪ್ಪುವ ನೂತನ ಪಥದಲ್ಲಿ ಮುಂದುವರೆಯಲು ಇಂದಿನ ಕವಿಗಳು ಯತ್ನಿಸುತ್ತಾರೆ. ಛಂದಸ್ಸನ್ನು ಹೊಸ ರೂಪಕ್ಕೆ ಮಾರ್ಪಡಿಸಿಕೊಂಡು ನವಜೀವನದ ಸುಖದುಃಖಗಳನ್ನು ಯಥಾರ್ಥವಾಗಿ ಬಣ್ಣಿಸಲು ಹವಣಿಸುತ್ತಲಿರುತ್ತಾರೆ. ಹೊಸ ವಿಚಾರಗಳನ್ನು ಹೊಸ ಸಾಹಿತ್ಯದ ಮೂಲಕ ಜನರಿಗೆ ತಿಳಿಸಿ ವಿಚಾರ ಪಲ್ಲಟವನ್ನುಂಟುಮಾಡಲು ಸನ್ನದ್ಧರಾಗಿದ್ದಾರೆ" ಎನ್ನುವ ಈ ಹೇಳಿಕೆಯಲ್ಲಿ ಒಬ್ಬ ಕವಿಯು ಅನುಸರಿಸುವ ಎಲ್ಲ ಕಾವ್ಯ ಬದ್ಧತೆಯನ್ನು ಗುರುತಿಸಬಹುದಾಗಿದೆ. ಕೃತಕತೆಯ ಸೋಂಕಿಲ್ಲದೆ ಆಪ್ತವಲಯದ ಕಾವ್ಯ ಕಟ್ಟುವ ಕಲೆಗಾರಿಕೆ ಮನು ಬಳಿಗಾರರ ಅಭಿವ್ಯಕ್ತಿಯಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಪ್ರಕೃತಿ ಸೌಂದರ್ಯಾನುಭವಕ್ಕೆ ಕಾವ್ಯರೂಪದಲ್ಲಿ ಆಕಾರವನ್ನು ನೀಡುವ ವಿಧಾನವನ್ನು ಕಲಿತುಕೊಂಡರೂ ಪಶ್ಚಿಮದ ರೊಮ್ಯಾಂಟಿಕ್ ಕವಿತೆಗಳಂತೆ ಬದುಕಿನ ಬವಣೆಗೆ ಬೇಸತ್ತು ಅಲ್ಲದೆ ಕೈಗಾರೀಕರಣ, ಯಾಂತ್ರೀಕರಣ, ನಗರೀಕರಣ ಇತ್ಯಾದಿ ಆಧುನಿಕ ಯುಗ ನಿರ್ಮಿತ ಭ್ರಮೆಗಳಿಂದ ಪಾರಾಗಿ ಸಮಾಧಾನವನ್ನು ಕಂಡುಕೊಳ್ಳಲು ಪ್ರಕೃತಿ ಕಡೆ ತಿರುಗಿಸುವುದನ್ನು ಮನು ಬಳಿಗಾರ್ ಅವರ ಕಾವ್ಯಾಭಿವ್ಯಕ್ತಿಯಲ್ಲಿ ಕಾಣುತ್ತೇವೆ. ಅದನ್ನು ನಯಾಗರಾ ಜಲಪಾತ ಕವನದಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ.

**ಸಪ್ತ ಸಾಗರಗಳೊಮ್ಮೆಲೆ ಮೇಲಿಂದ ಧುಮ್ಮಿಕ್ಕಿ**
**ಭೋರ್ಗರೆದು ಬೀಳುತಿವೆ ಪಾತಾಳನಪ್ಪಲು**
**ಚೆಲ್ಲಿದೆ ಮುಂದೆಲ್ಲ ಬೆಳಕಿನಾ ಹೊನಲು**

ಹೀಗೆ ಪ್ರಕೃತಿಯ ರಮಣೀಯತೆಯನ್ನು ಕಣ್ಣಿಗೆ ಕಟ್ಟುವಂತೆ ಅಭಿವ್ಯಕ್ತಿಸುತ್ತಾರೆ.

ಕನ್ನಡ ಕಾವ್ಯ ಪರಂಪರೆ ವೈವಿಧ್ಯಮಯವಾದದ್ದು. ನವೋದಯ ಕಾವ್ಯದ ಹೊಸತನದಿಂದ ನವ್ಯ, ದಲಿತ, ಬಂಡಾಯ, ಸ್ತ್ರೀವಾದಿ ಅಂಶಗಳನ್ನೊಳಗೊಂಡ ಆಯಾಮಗಳ ಆಶಯಗಳು ಕಾವ್ಯದ ಅಭಿವ್ಯಕ್ತಿಗೆ ನಿದರ್ಶನಗಳಾಗಿವೆ. ಸಾಂಸ್ಕೃತಿಕವಾದ ಬದಲಾವಣೆಗಳಿಂದಲೂ ಇಂದು ಕಾವ್ಯದ ಧೋರಣೆ

ರೂಪುಗೊಳ್ಳುತ್ತಿದೆ. ಜಾಗತೀಕರಣ ಹಾಗೂ ಮಾನವೀಕರಣದ ಹಿನ್ನೆಲೆಯಲ್ಲಿ ಒಡಮೂಡುವ ಮಹಿಳಾ ಸಂವೇದನೆಗಳ ಅಭಿವ್ಯಕ್ತಿ ಕನ್ನಡ ಕಾವ್ಯ ಪರಂಪರೆಗೊಂದು ವಿಶಿಷ್ಟತೆಗೆ ಕಾರಣವಾಗಿದೆ. ಹೀಗೆ ಕಾವ್ಯ ಕಾಲಕಾಲಕ್ಕೆ ಹೊಸತನ ಮೂಡಿಸಿಕೊಳ್ಳುತ್ತಾ, ಕನ್ನಡ ಸಾಹಿತ್ಯ ಹೊಸ ಪ್ರತಿಮೆಗಳನ್ನು ಹೊಸ ಸಾಂಕೇತಿಕತೆಗಳನ್ನು ಹೊಸ ಹೊಸ ವಿದ್ಯಮಾನಗಳೊಂದಿಗೆ ತನ್ನೊಳಗೆ ಹುದುಗಿಸಿಕೊಂಡು ಬೆಳೆಯುತ್ತಿದೆ. ಇಂತಹ ಹೊಸತನದಲ್ಲಿ ಮನು ಬಳಗಾರ್ ಅವರ ಕಾವ್ಯವೂ ಒಂದು ನಿದರ್ಶನ. ಅವರ 'ಬೇಕಿರುವುದು' ಎನ್ನುವ ಕವನದಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

**ಸಾದಾ ನೀರು**
**ಸಾದಾ ಸೂರು**
**ಗೇಣು ಬಟ್ಟೆ**
**ತುಣುಕು ರೊಟ್ಟಿ**
**ಒಂದಿಷ್ಟು ಹೊಸ ಸೃಷ್ಟಿ**
**ಅದೂ ಮಾನವೀಯ ದೃಷ್ಟಿ**

ಈ ಕವನದ ಸಾಲುಗಳಲ್ಲಿ ಕವಿಯ ಧೋರಣೆ ಸ್ಪಷ್ಟವಾಗಿ ಕಾಣುತ್ತೇವೆ. "ಸರ್ವರಿಗೆ ಸಮ ಪಾಲು ಸರ್ವರಿಗೆ ಸಮ ಬಾಳು" ಇದು ಪ್ರಕೃತಿ ನಿಯಮ. ಇದಲ್ಲದೆ ದುರಾಸೆ, ಕ್ರೌರ್ಯದಿಂದ ಗಳಿಸುವ ಸಂಪತ್ತು ವಿನಾಶಕ್ಕೆ ದಾರಿಯೆಂಬ ಸರಳ ಸಿದ್ಧಾಂತ ಇಲ್ಲಿ ಕಾಣುತ್ತೇವೆ. ಶರಣರು ಸಾರಿದ ದಾಸೋಹದ ಪರಿಕಲ್ಪನೆ, ಸರಳ ಜೀವನ ಉನ್ನತವಾದ ವಿಚಾರಗಳೇ ಮಾನವೀಯತೆಯ ಮೌಲ್ಯಗಳೆಂಬ ಸಂದೇಶ ಇಲ್ಲಿ ಕಾಣುತ್ತದೆ. ಇಂತಹ ಕವನಗಳ ಮೂಲಕ ಮನು ಬಳಿಗಾರ್ ಅವರು ವಿಶೇಷ ಕವಿಯಾಗಿ, ಸರ್ವರಿಗೂ ಮೆಚ್ಚುಗೆಯಾಗುತ್ತಾರೆ. ಇಲ್ಲಿ ಬಳಸುವ ಭಾಷೆಯೂ ಕೂಡ ಅಧ್ಯಯನಕ್ಕೆ ಒಪ್ಪುವಂತದ್ದು. ನೀರು, ಸೂರು, ಬಟ್ಟೆ, ಹೊಟ್ಟೆ, ಸೃಷ್ಟಿ, ದೃಷ್ಟಿ ಎಂಬ ಸರಳವಾದ ಪ್ರಾಸ ಕವಿಯ ಭಾಷೆಯ ಮೇಲಿನ ಪ್ರೀತಿಯನ್ನು ಕಾಣುತ್ತೇವೆ. ಕವನ ಅರ್ಥವಾದರೆ ಕವಿಯ ಮನಸ್ಸು ನಲಿಯುತ್ತದೆ. ಅಂತಹ ಸಹಜತೆಯ ಕವಿ ಮನು ಬಳಿಗಾರ್ ಅವರು.

ಸಾಹಿತ್ಯವೆಂಬ ಕಲ್ಪನೆಯನ್ನು ಮರು ಪರಿಶೀಲಿಸುವ ಅಗತ್ಯವಿರುವುದರಿಂದ ಎಲ್ಲ ಜ್ಞಾನ ಶಿಸ್ತುಗಳಿಗೂ ಸಮಾನ ಆಸಕ್ತಿ ಮೂಡುವಂತದ್ದಾಗಿದೆ. ಯಾವುದೇ ಸೃಜನಶೀಲ ಕ್ಷೇತ್ರ ತನಗೆ ತಾನೇ ಸ್ವತಂತ್ರವಾಗಿರುವಂತದಲ್ಲ. ಅದು ಅನ್ಯ ಜ್ಞಾನ ಶಿಸ್ತುಗಳ ಜೊತೆ ಅಂತರ್‌ಸಂಬಂಧವನ್ನು ಪಡದೇ ಇರುತ್ತದೆ. ಇದನ್ನು ಹೊರತುಪಡಿಸಿ ನಾವು ಆ ಕ್ಷೇತ್ರವೊಂದರ ಅನನ್ಯತೆಯೇ ಮುಖ್ಯವೆಂದು ಹೇಳುವಂತಿಲ್ಲ. ಸಾಹಿತ್ಯವನ್ನೇ ತೆಗೆದುಕೊಂಡರೆ ಅದು ಕೇವಲ ಭಾಷಿಕ ಕಲಾ ಕೃತಿಯಾಗಿರುವುದಿಲ್ಲ. ಅದೊಂದು ಸಾಮಾಜಿಕ ರಚನೆ, ಸಾಹಿತ್ಯದ ಶಾಬ್ದಿಕ ರಚನೆಗೂ ಅದು ರಚನೆಯಾದ ಕಾಲ ಸಮಾಜದ ಅಧಿಕಾರ ವಿನ್ಯಾಸಕ್ಕೂ ಇರುವ ಸಂಬಂಧವನ್ನು ತಿಳಿಯುವುದು ಇಂದಿನ ಅಧ್ಯಯನಗಳಲ್ಲಿ ಮುಖ್ಯವಾಗಿರುತ್ತದೆ. ಜಾಗತೀಕರಣದ

ಪ್ರಪಂಚದಲ್ಲಿ ಜ್ಞಾನ ವ್ಯವಸ್ಥೆಗಳ ಬಗ್ಗೆ ಆಧುನಿಕ ಶಿಕ್ಷಕರಿಗೆ ಅರಿವು ಮೂಡದ ಬಹು ಚಿಂತನ ಕ್ರಮಗಳು ಮನು ಬಳಿಗಾರ್ ಅವರ ಕಾವ್ಯದಲ್ಲಿ ಕಾಣುತ್ತವೆ. ಆಧುನಿಕ ಜ್ಞಾನ ಮೂಲಗಳಾದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಲಾಭ ಕೋರತನದ ವಿಶ್ವಮಾಲಿಕತ್ವ, ವಿಶ್ವ ಒಂದು ಕುಟುಂಬವೆಂಬ ಕಲ್ಪನೆಯ ಆಧುನಿಕತೆಯ ವಿತ್ತ ನೀತಿ ಇಂತಹ ಬಹುಮುಖಿ ಚಿಂತನೆಗಳಿಂದಾಗಿ ಕಾಲ ದೇಶ ಗಡಿಯನ್ನು ಮೀರಿದ ಅಭಿವ್ಯಕ್ತಿಯ ನೆಲೆಗಳನ್ನು ಮನು ಬಳಿಗಾರ್ ಅವರ ಕಾವ್ಯವು ಧ್ವನಿಸುತ್ತದೆ. ನಿದರ್ಶನಕ್ಕಾಗಿ

**ನೂರ್ಕೋಟಿ ಕೈಗಳಲ್ಲಿ ಶಕ್ತಿಯುಂಟೇ**
**ಕಟ್ಟಲು ಇದಕ್ಕೊಂದು ಕಿರುಗಂಟೆ**
**ನಿಗ್ರಹಿಸದಿರೆ ದೇಶ ಉಳಿವದುಂಟೆ**
**ಬಾರಿಸುವ ಸಮಯವಿದು ಜಾಗೃತಿಯ ಜಾಗಟೆ.**

ಇಲ್ಲಿ ಜನಸಂಖ್ಯೆಯ ಬಲಕ್ಕಿಂತ ಯುಕ್ತಿಯಿಂದ ನೆರವೇರಿಸುವ ಸಾಧಿಸಿ ತೋರಿಸುವ ಎದೆಗಾರಿಕೆಯು ಇರಬೇಕೆಂಬ ಆಶಾಭಾವನೆಯನ್ನು ಕಾಣುತ್ತೇವೆ. ಜಗತ್ತಿನ ಸವಾಲುಗಳಿಗೆ ನಮ್ಮನ್ನೊಡ್ಡಿಕೊಳ್ಳುವ ಸ್ಥೈರ್ಯ ನಮ್ಮೊಳಗೆ ಮೂಡಬೇಕೆಂಬ ವಿಶ್ವಾಸ ನಮಗಿರಬೇಕು ಎನ್ನುವ ಧೋರಣೆ ಕವಿಯ ಭಾವನೆಯಾಗಿದೆ.

ಮನು ಬಳಿಗಾರ್ ಅವರ ಸಾಮಾಜಿಕ ಕಳಕಳಿ ಮೆಚ್ಚುವಂತಹದ್ದು. ಗ್ರಾಮೀಣ ಪರಿಸರದಿಂದ ಬಂದ ಅವರ ಕಾವ್ಯದಲ್ಲಿ ಗ್ರಾಮೀಣ ಬದುಕಿನ ಚಿತ್ರಣ ಕಾಣಸಿಗುತ್ತವೆ. ಅವರ ಸುತ್ತಮುತ್ತಲಿನ ಬಡತನ, ನಿರುದ್ಯೋಗ, ಅಸಹಾಯಕತೆ, ಮೂಢನಂಬಿಕೆ ಮೊದಲಾದ ವಸ್ತುಗಳನ್ನು ಒಳಗೊಂಡ ಅಂಶಗಳನ್ನು ಅವರ ಕಾವ್ಯದ ಅಭಿವ್ಯಕ್ತಿಯಲ್ಲಿ ಕಾಣುತ್ತೇವೆ. ಸಹಜವಾದ ಬದುಕಿನ ಚಿತ್ರಗಳು ಪ್ರತಿಬಿಂಬಿಸುವ ಅವರ ಕಾವ್ಯಕ್ಕೊಂದು ಸೊಗಸನ್ನು ಭಾಷೆಗೊಂದು ಸೊಗಡನ್ನು ನೀಡಿದೆ ಎಂದರೆ ತಪ್ಪಾಗಲಾರದು. ನಿದರ್ಶನಕ್ಕಾಗಿ ಈ ಕವನದ ಸಾಲುಗಳನ್ನು ನೋಡಬಹುದು.

**ಬಡವಿಯ ಬಗಲೊಳಗಿನ ಕೂಸು**
**ಬರಿ ಎದೆಯ ಬಡಿ ಬಡಿದು**
**ಬಾರದ ಹಾಲಿಗಾಗಿ ಹಸಿವಿನಲ್ಲಿ ಅಳುವಾಗ**
**ದನಿಗೂಡಿಸಲಾಗದೆ ಒಳಗೊಳಗೆ ಕುದಿಯುತ್ತಿದ್ದೇನೆ**

ಹೀಗೆ ಬಡತನದ ಕ್ರೌರ್ಯತೆಯನ್ನು ಸಮಾಜದ ಬದುಕಿನ ಸಹಜತೆಯನ್ನು ಚಿತ್ರಿಸುವಲ್ಲಿ ಬಳಿಗಾರ್ ಅವರು ವಿಶೇಷವಾಗಿ ಕಾಣುತ್ತಾರೆ. ಅಲ್ಲದೇ ಅವರಲ್ಲಿನ ರಾಷ್ಟ್ರ ಪ್ರೇಮವಾಗಲೀ ಭಾಷಾಭಿಮಾನವಾಗಲೀ ನಿಚ್ಚಲವಾಗಿ ಅವರ ಕಾವ್ಯಾಭಿವ್ಯಕ್ತಿಯಲ್ಲಿ ಕಾಣುತ್ತೇವೆ. ಅದಕ್ಕೊಂದು ನಿದರ್ಶನವಾಗಿ ಈ ಕವನದ ಸಾಲುಗಳನ್ನು ನೋಡಬಹುದು.

**ಜಯಭಾರತ ಜಯಭಾರತ**
**ಜಯ ಘೋಷವೇ ಅನವರತ**
**ಹೂವ ಕೆಂಪು ಬನದ ಕಂಪು**

**ಜಯಗೀತೆಯ ಹೃದ್ಯ ತಂಪು**
**ಮುಗಿಲ ಮೋರೆ ಮಿನುಗುತಾರೆ**
**ಜಂಬುದ್ವೀಪ ಮನಸಾರೆ**

"ಜಯಭಾರತ' ಎನ್ನುವ ಕವನದ ಈ ಸಾಲುಗಳಲ್ಲಿ ಭಾರತದ ವೈಶಾಲ್ಯತೆಯನ್ನು ಜೊತೆಗೆ ಭಾರತೀಯರ ಧ್ಯೇಯತೆಯನ್ನು ಒಡಮೂಡಿಸುವ ಭಾವವನ್ನು ಕಾಣುತ್ತೇವೆ. ಭಾರತ ಕೇವಲ ಒಂದು ಪ್ರದೇಶವಲ್ಲ. ಇಲ್ಲಿನ ವಿವಿಧತೆ ಪ್ರಾಕೃತಿಕ ಸೌಂದರ್ಯ, ಅಪಾರವಾದ ಚೆಲುವು ವಿಶ್ವವನ್ನೇ ಬೆರಗುಗೊಳಿಸುವಂತದ್ದು, ಇಂಥ ದೇಶದ ಅನವರತ ಧ್ಯಾನವೇ ಪಾವನ, ಜೀವನವನ್ನೇ ಸಾರ್ಥಕ್ಯವಾಗಲು ಇಲ್ಲಿ ಜನಿಸುವುದೇ ಪುಣ್ಯ. ಈ ಪುಣ್ಯ ನಾಡು ಜಗತ್ತಿನ ಧರ್ಮ ಸಂಸ್ಕೃತಿಗಳಿಗೆ ಹೆಸರುವಾಸಿ ಎನ್ನುವ ತುಂಬು ಹೃದಯದಿಂದ ಭಾರತಾಂಬೆಯನ್ನು ಹೊಗಳಿದ್ದಾರೆ ಹಾಡಿದ್ದಾರೆ. ಇಂತಹ ಭಾವಕತೆಯಲ್ಲಿ ಬಳಿಗಾರರ ಸಹಜವಾದ ಕವಿತ್ವವನ್ನು ಕಾಣುತ್ತೇವೆ. ಅದು ಅವರ ಅಪಾರವಾದ ಜೀವನೋತ್ಸಾಹವನ್ನು ಅನಾವರಣಗೊಳಿಸುತ್ತದೆ.

ಇಂತಹದ್ದೇ ಭಾವನೆಯನ್ನು ವ್ಯಕ್ತಪಡಿಸುವ ಇನ್ನೊಂದು ಕವನ 'ಕನ್ನಡ ಕನ್ನಡ' ಈ ಕವನದಲ್ಲಿ ಕನ್ನಡಾಭಿಮಾನ ವ್ಯಕ್ತಗೊಂಡಿದೆ. ಜೊತೆಗೆ ಕನ್ನಡದ ನೆಲ, ಜಲ, ಜನರ ಔದಾರ್ಯತೆಯನ್ನು ಹಿಡಿದಿಡಲು ಯತ್ನಿಸಿದ್ದಾರೆ. ಅದನ್ನು

**ಕನ್ನಡವೆಂದೂ ಕಳೆಗುಂದದಿರಲಿ**
**ಕನ್ನಡ ಕಳೆ ಹೊಳೆಹೊಳೆಯುತಲಿರಲಿ**
**ರಾಷ್ಟ್ರ ಭಕ್ತಿಗೆ ಕನ್ನಡ ಮುಂದು**
**ಕನ್ನಡತನ ಉಳಿಯಲಿ ಎಂದೆಂದು**

ಹೀಗೆ ಕನ್ನಡ ಭಾಷೆಯ ಹಾಗೂ ಕನ್ನಡಾಂಬೆಯ ವೈಶಾಲ್ಯತೆಯನ್ನು ಹಾಡಿ ಹೊಗಳಿದ್ದಾರೆ. ಇದು ಪ್ರತಿಯೊಬ್ಬ ಕನ್ನಡಿಗನಿಗೆ ಇರಬೇಕಾದ ಕಾಳಜಿಯೂ ಎನ್ನುವ ಸಂದೇಶ ಇಲ್ಲಿ ಕಾಣುತ್ತೇವೆ.

ಕಾವ್ಯವು ಹೊಸ ಜಗತ್ತಿನ ಅನಾವರಣ. ಇಲ್ಲಿ ಕವಿ ಕಟ್ಟುವ ಅತೀತವಾದ ಭಾವ ಸೌಂದಯ್ಯ ಸಹೃದಯನಲ್ಲಿ ನಿರಂತರತೆ ನಿಲುವನ್ನು ಹೊಂದುತ್ತದೆ. ಹಾಗಾದಾಗಲೇ ಕವಿಯ ಭಾವ ಸೌಂದರ್ಯ ಶಾಶ್ವತತೆಗೆ ಕಾರಣವಾಗುತ್ತದೆ. ಇದು ಕವಿಯ ಗೆಲುವೂ ಹೌದು. ಕಾವ್ಯದ ಸಾರ್ಥಕ್ಯವೂ ಹೌದು. ಇಂಥಾ ಕವನಗಳನ್ನು ಮನು ಬಳಿಗಾರ್ ಅಪಾರವಾಗಿ ಕಟ್ಟಿದ್ದಾರೆ.

ಕಾವ್ಯದ ಬಂಧ, ಆಶಯ, ಸ್ವರೂಪಗಳು ಆಯಾ ಕಾಲದ ಆಯಾ ಪರಿಸರದ ಕಟ್ಟನ್ನು ಕಟ್ಟಿಕೊಂಡು ಕವಿಯ ಕೈಯಲ್ಲಿ ಪಳಗುವ ಬಗೆಗೆ ಹಲವಾರು ನಿದರ್ಶನಗಳು ಸಿಗುತ್ತವೆ. ಉತ್ಕಟವಾದ ಬದುಕನ್ನು ಅನುಭವಿಸುವ ಹಂಬಲ ಅದರ ಅಂಗ ಪತಂಗಗಳನ್ನು ಅರ್ಥೈಸಿಕೊಳ್ಳುವ ತವಕ ಸಹಜವಾಗಿ ಒಗ್ಗಿಸಿಕೊಳ್ಳಬಲ್ಲ

ಸೃಜನಶೀಲತೆ ಮನು ಬಳಿಗಾರ್ ಅವರ ಕಾವ್ಯಕ್ಕಿದೆ. ಬದುಕನ್ನು ಸರಳ ವ್ಯಾಖ್ಯಾನದಲ್ಲಿಯೇ ಸ್ವೀಕರಿಸಿದೆ. ನಮನಶೀಲತೆಯ ಪರಿಗಣಿಸುವ ಮನೋಭಾವಗಳು ಇವರ ಕಾವ್ಯದಲ್ಲಿ ಒಡಮೂಡಿಬಂದಿವೆ.

ಮತ್ತೆ ಕೆಲವು ಕವನಗಳಲ್ಲಿ ಬದುಕನ್ನು ಇಡೀಯಾಗಿ ಗ್ರಹಿಸಬಲ್ಲ ಸಮಗ್ರ ದೃಷ್ಟಿಯನ್ನು ಹಿನ್ನೆಲೆಯಾಗಿ ಕಟ್ಟಿಕೊಂಡಿರುವ ಕವಿ. ತಮ್ಮ ಪರಿಪಕ್ವವಾದ ಮನಸ್ಸಿನಲ್ಲಿಯೂ ಸುತ್ತಲಿನ ಬಗೆಗಿನ ಪ್ರಾಮಾಣಿಕತೆಯ ಕರ್ತವ್ಯನಿಷ್ಠೆ ಹಾಗೂ ಜೀವಂತಿಕೆಯ ಕಸುಬುಗಾರಿಕೆಯನ್ನು ಹುದುಗಿಸಿಕೊಂಡಿರುವುದನ್ನು ಹಲವಾರು ಕವನಗಳಲ್ಲಿ ಸಾಕ್ಷೀಕರಿಸಿದ್ದಾರೆ. ಆದುದರಿಂದಲೇ ಇಂತಹ ಕವನಗಳಲ್ಲಿ ದೇಶೀಯತೆ ಸತ್ವ ಹಾಗೂ ಆಧುನೀಕರಣದ ಅನನ್ಯತೆಯನ್ನು ಘನೀಕರಿಸಿರುವುದು ಕಾಣುತ್ತೇವೆ. ಕಾವ್ಯವು ಹನಿಗವನಗಳಲ್ಲಿ ಮೂಡಿಬರುವ ಸಾಧ್ಯತೆಗಳನ್ನು ಕವಿ ನಡೆಸುವ ಅನುಸಂಧಾನಕ್ಕೂ ಇಂತಹದ್ದೇ ಮಹತ್ವವಿದೆ. ಇಂತಹ ಬಹಳಷ್ಟು ಹನಿಗವನಗಳನ್ನು ಇವರು ಬರೆದಿರುವುದನ್ನು ಕಾಣುತ್ತೇವೆ. ಆಕಾರದಲ್ಲಿ ಚಿಕ್ಕ ಚಿಕ್ಕ ಮುಕ್ತಕಗಳಂತಿದ್ದರೂ ಅರ್ಥ ಮಾತ್ರ ಜ್ಞಾನದ ಪರಿಧಿಯ ಮೇರೆಯನ್ನು ಮೀರಿದ್ದು, ಪ್ರಾಚೀನ ಕವಿಗಳ ಅಭಿಪ್ರಾಯದಂತೆ ‘ಕಿರಿಯದರಲ್ಲಿ ಪಿರಿಯರ್ಥಮಂ' ಹೇಳುವಂತೆ, ನಿಶ್ಯಬ್ದವಾಗಿ ಭಾವಕೋಶದ ಭಾಗವಾಗುವ ಸೊಬಗು ಅನುಭವಕ್ಕಷ್ಟೇ ವೇದ್ಯ ಎನ್ನುವ ಸತ್ಯತೆಯನ್ನು ಕಾಣುತ್ತೇವೆ. ಉದಾಹರಣೆಗಾಗಿ

**ನಿನ್ನ ನೆನಪಿನ ನೆರಳಲ್ಲಿ ಕುಳಿತು**
**ತುಟಿಗಳ ಫ್ರಿಜ್‌ನಲ್ಲಿ**
**ಮನ ಇಟ್ಟಾಗ**
**ಬೇಸಿಗೆಯ ಬಿಸಿಲಲ್ಲೂ**
**ಕಲ್ಬುರ್ಗಿ ಕಾಶ್ಮೀರ**

ಎನ್ನುವ ಹನಿಗವನದಲ್ಲಿ ವ್ಯಕ್ತವಾಗುವ ಅರ್ಥದಲ್ಲಾಗಲೀ,

**ಅಪ್ಪ ಜೀವನ ಪರ್ಯಾಂತ**
**ಕೇವಲ ಎರಡನ್ನೆ ಹದಮಾಡುತ್ತಿದ್ದ**
**ಒಂದು : ಭೂಮಿ**
**ಎರಡು : ಮಕ್ಕಳು**

ಅಪ್ಪನ ವ್ಯಕ್ತಿತ್ವದ ವಿಷಯವನ್ನು ಹೇಳುವಂಥ ಸರಳ ವಸ್ತುವನ್ನು ಮನು ಬಳಿಗಾರ್ ಅವರ ಕವಿತಾ ಶಕ್ತಿ ಭಾವಸ್ಪಂದಿಯಾಗಿ ಮಾಡುತ್ತದೆ. ಅಲ್ಲದೇ ಲೋಕೋಕ್ತಿಯಂತೆ ಹೊಸದಾದ ಸಂದೇಶವನ್ನು ನೀಡುತ್ತದೆ. ಅಪ್ಪ ಎಂದರೆ ಆಕಾಶ, ಅಪ್ಪನ ವಿಶಾಲತೆ ಆಕಾಶಕ್ಕಿಂತ ಮಿಗಿಲು, ಬದುಕನ್ನು ಕಟ್ಟಲು ಭೂಮಿ, ಜೀವನವನ್ನು ಸಾರ್ಥಕ್ಯಗೊಳಿಸಲು ಮಕ್ಕಳು ಇವೇ ಅವನ ಜೀವನ ಅಧ್ಯಯನದ ಉಡುಗೊರೆಗಳೆಂಬುದನ್ನು ಇಲ್ಲಿ ಮನು ಬಳಿಗಾರ್ ಅವರು ವ್ಯಕ್ತಪಡಿಸುತ್ತಾರೆ.

ಬಯಲೊಳಗೆ ದಿಗಿಲು, ಪ್ರಶ್ನೆಗಳು, ಭಯ, ನಿರಾಶೆ, ಹೇಡಿತನ ಎಲ್ಲಕ್ಕೂ ಉತ್ತರ ಆಧುನಿಕ ವೈಜ್ಞಾನಿಕತೆಯ ವಿಚಾರಗಳ ಮಾತಿನಂತೆ ಜೀವಂತಿಕೆ ಹೊಸ ಸೃಷ್ಟಿಯು ನೀಡುವ ಬದುಕಿನ ಮಾರ್ಗ ಅದೇ ಸಮಾಜವಾದ, ಅದೂ ಒಂದು ರೀತಿಯ ಬೆಳವಣಿಗೆ ನವ್ಯ ಕಾವ್ಯದಿಂದ ಕವಲೊಡೆದ ಕೆಂಪು ಕಾವ್ಯ ಮಾರ್ಗ, ಒಂದು ಐತಿಹಾಸಿಕ ಅಗತ್ಯ ಮತ್ತು ಬೆಳವಣಿಗೆ ನವ್ಯದಿಂದೀಚೆಗೆ ಕಾವ್ಯದಲ್ಲಿ ಬೇಕಾದಷ್ಟು ಬದಲಾವಣೆ ಆಗುತ್ತಿದೆ. ಅತ್ಯಂತ ವ್ಯತ್ಯಾಸವೆಂದರೆ ಕಾವ್ಯದ ಧೋರಣೆಯಲ್ಲಿ ಆದ ಬದಲಾವಣೆ ಕನ್ನಡ ಸಾಹಿತ್ಯದ ಪ್ರಾರಂಭ ಕಾಲದಿಂದ ಇಲ್ಲಿವರೆಗಿನ ಸಾಹಿತ್ಯ ಪರಂಪರೆಯ ಧೋರಣೆಯಲ್ಲಿ ವ್ಯತ್ಯಾಸವಾಗಿದೆ. ಕಾವ್ಯ ಪ್ರಕಾರ, ಛಂದಸ್ಸು, ಕವಿತ್ವ ಇವುಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದರೂ ಒಟ್ಟಾರೆಯ ಈ ಪರಂಪರೆ ಎಂದು ಹೇಳಬೇಕಾಗುತ್ತದೆ. ದೇಶದ ಭವಿಷ್ಯತ್ತಿನ ಬಗ್ಗೆ ತೀವ್ರ ಆಲೋಚಿಸುವ, ಸಾಮಾಜಿಕವಾಗಿ ತೊಡಗಿಕೊಳ್ಳುವ ಬರಹಗಾರನಿಗೆ ಇಲ್ಲಿಯ ವಸ್ತುಸ್ಥಿತಿಯ ಸರಿಯಾದ ಅರಿವಿದ್ದರೆ. ಇಲ್ಲಿಯ ಕ್ರೂರ, ದರಿದ್ರ, ಶೋಷಣೆಯ ವ್ಯವಸ್ಥೆಯು ನಾಶವಾಗಿ ಹೊಸ ವ್ಯವಸ್ಥೆಯು ಬಂದಾಗ ಮಾತ್ರ ಸಮರ್ಥವಾಗಿ ಮೇಲೆಳಲು ಸಾಧ್ಯವಾದೀತು ಎಂಬುದನ್ನು ತಿಳಿಯುತ್ತಾನೆ. ಆಗ ಮಾತ್ರ ಸರಳತೆ, ಶಾಂತಿ, ಪ್ರಜಾಪ್ರಭುತ್ವ ಮೌಲ್ಯ ಮುಂತಾದವುಗಳಿಗೆ ನಿಜವಾದ ಅರ್ಥ ಬರುತ್ತದೆ.

ಇಲ್ಲಿಯವರೆಗೂ ಹೊಟ್ಟೆ ತುಂಬಿದ ಲೇಖಕರಲ್ಲಿ ಹೊಟ್ಟೆ ತುಂಬಿದವರಿಗಾಗಿ ರಚಿಸುತ್ತ ಬಂದಿದ್ದಾರೆ. ಕೂಳಿಗಾಗಿ ಬದುಕಲು ಪಕ್ಕದಲ್ಲಿ ಕುಳಿತು ಚೀರುವ, ನರಳುವ ದುಡಿದರೂ ಪೂರ್ತಿ ಹೊಟ್ಟೆ ತುಂಬದೆ, ಒದ್ದಾಡುವ ಕೋಟಿ ಕೋಟಿ ಜನರ ಪ್ರತಿನಿಧಿಗಳಾಗಿ ಬರೆಯಲು ಒಂದು ತಾತ್ವಿಕ ತಳಹದಿ, ಚಿಂತನೆ, ಬದ್ಧತೆ ಜೊತೆಗೆ ಅವರ ಜೊತೆ ಬೆರೆತು ಅನುಭವಿಸುವುದಾಗಬೇಕು, ಯಾವ ಸಾಹಿತ್ಯಕ್ಕೂ ಒಂದಿಲ್ಲೊಂದು ರೀತಿಯ ಬದ್ಧತೆ ಇದ್ದೇ ಇರುತ್ತದೆ. ಆ ಅರ್ಥದಲ್ಲಿ ಇಲ್ಲಿಯವರೆಗಿನ ಸಾಹಿತ್ಯ ಅರ್ಥಹೀನ ಸಾಹಿತ್ಯವೆಂದು ಹೇಳಲಾಗದು.

ಸಮಾಜ, ದೇಶ, ಸಂಸ್ಕೃತಿ ಅನ್ನ ಬಟ್ಟೆ ಎಲ್ಲವೂ ದುಡಿಮೆಗಾರರಿಂದ ನಿರ್ಮಾಣಗೊಳ್ಳಬೇಕು. ಈ ದುಡುಮೆಗಾರರ ಪರವಾಗಿ ಯಾರೂ ನಿಲ್ಲಲಿಲ್ಲ. ಅವರದೇ ರಾಜ್ಯ, ಅವರದೆ ಸಂಸ್ಕೃತಿ ರೂಪಿಸಿಕೊಳ್ಳಬೇಕು. ಎಲ್ಲರೂ ದುಡಿಯುವಂತರಾಗಬೇಕು. ಅಂತವರು ಕಾವ್ಯ ಬರೆಯಬೇಕು. ಸಾಹಿತ್ಯ, ಸಮಾಜ ಪ್ರಗತಿಯಲ್ಲಿ ಒಂದು ಸಾಧನವಾಗಬೇಕು. ಐತಿಹಾಸಿಕ ಪರಂಪರೆಯಲ್ಲಿ ಅದಕ್ಕೆ ಮಹತ್ವದ ಅಥವಾ ಯೋಗ್ಯತೆಯ ಸ್ಥಾನ ಲಭಿಸುವಂತಾಗಬೇಕು. ಅಂತಹ ಉತ್ತರ ಅವರ ಹಲವಾರು ಕವನಗಳಲ್ಲಿ ಕಾಣಬಹುದಾಗಿದೆ.

ಮನು ಬಳಿಗಾರ್ ಅವರ ಭಾಷೆಯ ಸೊಗಡು ಹೃದ್ಯವಾದುದು. ಸರಳ ಮತ್ತು ಅರ್ಥಗರ್ಭಿತವಾದ ಪದ ಬಳಕೆಯಲ್ಲಿ ಸಿದ್ಧಹಸ್ತರು. ಇದು ಕಾವ್ಯದ ಗೆಲುವು ಹೌದು, ಅವರ ಭಾವನೆಯ ಒಲುಮೆಯು ಹೌದು. ಕಾವ್ಯ ಹೆಚ್ಚು ಆಕರ್ಷಿಸುವುದೇ ಸರಳ ಶೈಲಿಯಲ್ಲಿ. ಈ ಸರಳತೆಯು ಅವರ ಗ್ರಾಮೀಣ ಬದುಕಿಗೆ ಹತ್ತಿರವೆನಿಸುತ್ತದೆ. ಬಾಲ್ಯದ ದಿನಗಳು ಗ್ರಾಮೀಣ ಪ್ರದೇಶದಲ್ಲಿ ಕಳೆದ ನೂರಾರು ನೆನಪುಗಳು ಅವರ ಕಾವ್ಯದಲ್ಲಿ ಪ್ರತಿಧ್ವನಿಸುತ್ತವೆ. ಹಾಗೇ ನೋಡಿದರೆ ಅವರೊಬ್ಬ ಸಹಜ ಕವಿ ಅಲ್ಲದೇ ಆಶುಕವಿ. ಇವರ ಸ್ಪಷ್ಟತೆ

ಅವರ ಕಾವ್ಯದ ಓದುವಿನಿಂದ ತಿಳಿಯಬಹುದಾಗಿದೆ. ನಿಸರ್ಗದ ವರ್ಣನೆಗಳಲ್ಲಾಗಲೀ ಹೊಲಗದ್ದೆಗಳಲ್ಲಿ ದುಡಿಯುವ ಜನರ ಬೆವರಿನ ಬವಣೆಗಳಾಗಲೀ ಸೂಕ್ಷ್ಮಾತಿಸೂಕ್ಷ್ಮವಾಗಿ ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸುತ್ತಾರೆ. ಅವರ 'ನನ್ನ ಹಳ್ಳಿಯ ನೆನಪು' ಎಂಬ ಕವನ ಸಾಕ್ಷಿಯಾಗಿದೆ. ಅವರೇ ಹೇಳುವಂತೆ

**"ನನ್ನ ಹಳ್ಳಿಯ ನೆನಪು**
**ಅರಳುವುದು ಹೃದಯದಲ್ಲಿ**
**ಸೂಸುತ್ತಾ ಮಧುರ ಮಲ್ಲಿಗೆಯ ಕಂಪು**
**ಸಮುದ್ರದೊಳಗಿನ ಮುತ್ತು**
**ಹೊರಬಂದು ತೆರೆದಂತೆ**
**ಬಿಚ್ಚಿ ನಿಲ್ಲುವವು ಬಾಲ್ಯದ ದಿನಗಳು"**

ಇಲ್ಲಿ ಸ್ಪಷ್ಟವಾಗಿ ಹಳ್ಳಿಯ ಮಧುರ ದಿನಗಳ ನೆನಪು ಬಾಲ್ಯದ ಸುಮಧುರವಾದ ಕ್ಷಣಗಳು ಈ ಕವನದಲ್ಲಿ ವೇದ್ಯವಾಗಿರುವುದು ಕಾಣುತ್ತೇವೆ. ಮಕ್ಕಳ ಮನಸ್ಸಿನ ಹಲವು ಪ್ರಶ್ನೆಗಳು ಉತ್ಸಾಹದಿ ಚಿಮ್ಮುವ ಭಾವನೆಗಳ ಗೊಂಚಲು, ನಿಂತಲ್ಲೆ ಸ್ವರ್ಗವನ್ನು ಅಂಗೈಯಲ್ಲಿ ಕೆತ್ತುವ ಕಲೆಗಾರಿಕೆ ಜಗವನ್ನೇ ಗೆಲ್ಲುವ ಬಿಸಿರಕ್ತದ ಅಪಾರನಂಬಿಕೆ ಈ ಕವನದಲ್ಲಿ ಕಾಣುತ್ತೇವೆ. ಕೊನೆಗೆ ಹತಾಶರಾಗಿ ನೆನಪುಗಳನ್ನು ಮೆಲುಕುಹಾಕುತ್ತಾ ಕಳೆದ ಆ ದಿನಗಳ ಸಂಭ್ರಮವನ್ನು ಮರೆಯಲಾಗದೆ

**"ಗರಿಗೆದರಿ ನಿಲ್ಲುವವು**
**ಕಳೆದ ಆ ದಿನಗಳು**
**ಆನಂದ ಭಾಷ್ಪಗಳ ಸುರಿಸುತ್ತ"**

ಎನ್ನುವ ಅವರ ಭಾವನೆಯಲ್ಲಿ ಬಾಲ್ಯದ ಭವ್ಯ ಕ್ಷಣಗಳನ್ನು ಮರುಕಳಿಸುವ ನೆನಪಿನ ಚಿತ್ತಾರವನ್ನು ಈ ಕವನ ಚಿತ್ರಿಸುತ್ತದೆ. ಇಂದಿನ ಕಾಲದ ಗ್ರಾಮೀಣ ಪರಿಸರದ ಬದಲಾವಣೆಗಳು ರಾಜಕೀಯ ವಿದ್ಯಮಾನಗಳು, ವೈಜ್ಞಾನಿಕ ಸೋಗಿನ ಡಾಂಭಿಕತೆಗಳು, ಕ್ರೌರ್ಯ ದ್ವೇಷದಿಂದ ತುಂಬಿದ ಕುಟುಂಬಗಳನ್ನು ಕಂಡು ಮರುಗುತ್ತಾರೆ. ಈ ನೋವಲ್ಲಿ ಆ ದಿನಗಳ ಅಳುವೇ ಇಂದಿನ ಆನಂದ ಭಾಷ್ಪಗಳಾಗಿ ಸುರಿಯುತ್ತದೆ ಎನ್ನುವ ಮೂಲಕ ಸಮಾಧಾನಪಟ್ಟುಕೊಳ್ಳುತ್ತಾರೆ. ಅಲ್ಲದೇ ಮನು ಬಳಿಗಾರ್ ಅವರು ಪೌರಾಣಿಕ ವಸ್ತುಗಳನ್ನು ಕಾವ್ಯದ ರೂಪದಲ್ಲಿ ನಿರೂಪಿಸುವಲ್ಲಿ ಸಿದ್ಧಹಸ್ತರು. ಮಹಾಭಾರತದ ದುರಂತನಾಯಕನಾದ ಕರ್ಣನ ವೃತ್ತಾಂತ ಶೋಚನೀಯ ಮತ್ತು ಮಾನಸಿಕವಾಗಿ ಸೆರೆಹಿಡಿಯುವಂಥದ್ದು. 'ಕುಂತಿಯ ಕಣ್ಣೀರು ಹಾಗೂ ಕರ್ಣ' ಎನ್ನುವ ಕವನವನ್ನು ಹೆಸರಿಸಲೇಬೇಕು. ಕುಂತಿಯ ತಪ್ಪಿನಿಂದ ಜನಿಸಿದ ಕರ್ಣನ ಬದುಕೆಲ್ಲ ಕಣ್ಣೀರಿನಲ್ಲಿ ಕಳೆಯುವ ದೃಶ್ಯಗಳು ಇಡೀ ಮಹಾಭಾರತದಲ್ಲಿ ಚಿತ್ರಿತವಾಗಿದೆ. ಅದನ್ನು ಮನು ಬಳಿಗಾರ್ ಅವರು 'ಹೊಳೆಯಾಗಿ

ಹರಿದಿತ್ತು ಕುಂತಿಯ ಕಣ್ಣೀರು' ಎನ್ನುವ ಸಾಲಿನೊಂದಿಗೆ ಆರಂಭವಾಗುವ ಈ ಕವಿತೆಯಲ್ಲಿ ಕರ್ಣನ ಅಸಹಾಯಕತೆಯನ್ನು ಚಿತ್ರಿಸುತ್ತಾರೆ. ಹಾಗೇ ನೋಡಿದರೆ ಕರ್ಣ ಪರಾಕ್ರಮಿ ಅಷ್ಟೇ ಅಲ್ಲ ದಾನವೀರ ಶೂರನು ಆದವನು. ಆದರೆ ಈತನ ಜೀವನ ವೃತ್ತಾಂತದ ಹಿಂದೆ ಕುಂತಿಯ ದೌರ್ಬಲ್ಯತೆಯು ಕಂಡುಬರುವುದು ಸಹಜ. ಅದನ್ನು ಮನು ಬಳಿಗಾರ್ ಅವರು ಹೀಗೆ ಅಭಿವ್ಯಕ್ತಿಸುತ್ತಾರೆ.

**"ಓ ಕಂದನೇ ಧನ್ಯಳಾ ತಾಯಿ**
**ನೀನು ದೊರಕಿದವಳು**
**ಆದರೆ ಸಿಗಲಿಲ್ಲ ಕೂಸಿಗೆ ಬೇರಾವ ತಾಯಿ**
**ಮತ್ತೆ**
**ಕರ್ಣನಿಗ ರಣವೀರ**
**ಸಿಕ್ಕಿತ್ತು ಮತ್ತದೇ ಕುಂತಿ ಮತ್ತದೆ ಕಣ್ಣೀರು"**

ಹೀಗೆ ಕವನದುದ್ದಕ್ಕೂ ಕುಂತಿಯ ಅಸಹಾಯಕತೆ ಕರ್ಣನ ದೌರ್ಭಾಗ್ಯ ಎರಡು ಮುಖಗಳನ್ನು ಪರಿಚಯಿಸುತ್ತಾರೆ. ಒಂದು ರೀತಿ ಕುಂತಿ ಮತ್ತು ಕರ್ಣರಿಬ್ಬರ ನಡುವಿನ ಬಿಡಿಸಲಾರದ ಮಾನವೀಯ ಸಂಬಂಧದ ಅನುಸಂಧಾನವನ್ನೇ ಈ ಕವನದಲ್ಲಿ ನಿರೂಪಿಸಿದ್ದಾರೆ.

ಇವರ ಅಭಿವ್ಯಕ್ತಿಯಲ್ಲಿ ಕಾಣುವ ವಿಶೇಷ ಕವಿತೆ 'ತಾಜಮಹಲ್', ತಾಜಮಹಲ್ ಕವನವು ಒಂದು ಸಾಮ್ರಾಜ್ಯದ ಸಾಂಕೇತಿಕವಾಗಿ, ಪ್ರೇಮದ ಕುರುಹಾಗಿ, ಸಾಂಸ್ಕೃತಿಕವಾಗಿ, ಹಿರಿಮೆಯಾಗಿ ಗುರುತಿಸಿರುವುದು ಕಾಣುತ್ತೇವೆ. ಅವರ ಕವನಗಳಲ್ಲಿ ತಾಜಮಹಲ್ ಕವನವು ಒಂದು ವಿಶೇಷವಾದ ಕವನವಾಗಿದೆ. ಅಲ್ಲದೇ ವಿಶ್ವಮಾನವರಾಗಿ ಮಾನವೀಯ ಮೌಲ್ಯಗಳನ್ನು ಸಾರಿದ ಮಹಾಪುರುಷರ ಕುರಿತಾದ ಕವನಗಳು ಇವರ ಅಭಿವ್ಯಕ್ತಿಯಲ್ಲಿ ಒಡಮೂಡಿವೆ. ಉದಾಹರಣೆಗೆ 'ಮಂಡೇಲಾ', 'ಶರೀಫಾ', 'ಗಾಂಧೀ', 'ಡಾ. ಅಂಬೇಡ್ಕರ', 'ತಾಯಿ ತೆರೇಸಾ' ಮುಂತಾದ ಕವನಗಳು 'ವ್ಯಕ್ತಿಯಾಗಿ ಅಳಿದರೂ ವ್ಯಕ್ತಿತ್ವದಿಂದ ಅಳಿಯಲಾರರು' ಎಂಬ ಅವರ ಜೀವನದ ಮೌಲ್ಯಗಳನ್ನು ಸಮಾಜ ಸುಧಾರಣೆಯ ಸಮಾನತೆಯನ್ನು ಸಾರಿದ ನಿಲುವುಗಳನ್ನು ಹಲವಾರು ಕವನಗಳಲ್ಲಿ ಕಾಣುತ್ತೇವೆ.

ಒಟ್ಟಾರೆ ಹೊಸಗನ್ನಡ ಕಾವ್ಯ ಪರಂಪರೆಯಲ್ಲಿ ಹೊಸತನವನ್ನು ಮೂಡಿಸಿಕೊಂಡ ಕವಿ ಮನು ಬಳಿಗಾರ್. ವೃತ್ತಿಯಿಂದ ಹಲವಾರು ಹುದ್ದೆಗಳನ್ನು ಅಲಂಕರಿಸಿ ಕಾರ್ಯತತ್ಪರರಾದರೂ ಕಾವ್ಯ ಕಟ್ಟುವಲ್ಲಿ ಅವರ ಮನಸ್ಸು ತುಡಿಯುವ, ಕಾವ್ಯಕ್ಕಾಗಿ ದುಡಿಯುವ ಭಾವನೆಗಳನ್ನು ಅವರ ಕಾವ್ಯದಲ್ಲಿ ಕಾಣುತ್ತೇವೆ. ಇವರು ನಿರ್ವಹಿಸಿದ ವೃತ್ತಿ ಏನೇ ಇದ್ದರೂ ಇವರ ಕಾವ್ಯ ಪ್ರವೃತ್ತಿ ಧೀಮಂತವಾದುದು. ಹೀಗಾಗಿಯೇ ಕನ್ನಡ ಸಾಹಿತ್ಯ ಲೋಕದಲ್ಲಿ ಮನು ಬಳಿಗಾರ್ ಅವರು ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ಉಳಿಯುವ ಕವಿ ಎನ್ನಬಹುದು.

# ಬರೆಯಬೇಕಿದೆ ಕವನ

## (ಮನು ಬಳಿಗಾರ್ ಅವರ ಆಯ್ದ ಕವನಗಳ ಸಂಕಲನದ ಒಂದು ಓದು)

ಡಾ. ಗಜಾನನ ನಾಯ್ಕ

ಜಗತ್ತಿನ ಬಹುತೇಕ ಸಾಹಿತ್ಯದಂತೆ ಕನ್ನಡ ಸಾಹಿತ್ಯವು ಸಹ ಸದಾ ವಿಭಿನ್ನ ಸಂವೇದನೆಯ ಧಾರೆಗಳಲ್ಲಿ ಹರಿಯುತ್ತಾ ತನ್ನ ಅಸ್ಮಿತೆಯನ್ನು ಕಾಪಿಟ್ಟುಕೊಂಡಿದೆ. ಇದಕ್ಕೆ ಪೂರ್ಣ ರೂಪದ ಬರಹಗಾರರು, ಹವ್ಯಾಸಿ ಬರಹಗಾರರು, ವೃತ್ತಿ ಬರಹಗಾರರು ಹಾಗೂ ಪ್ರವೃತ್ತಿ ಬರಹಗಾರರೂ ಹೀಗೆ ವಿವಿಧ ಸ್ವರೂಪದ ಬರಹಗಾರರಿಂದ ಕನ್ನಡದ ಕೈಂಕರ್ಯ ನಿರಂತರವಾಗಿ ನಡೆಯುತ್ತಿದೆ. ವೃತ್ತಿಯಲ್ಲಿ ಬೇರೆ-ಬೇರೆಯಾಗಿದ್ದು ಪ್ರವೃತ್ತಿಯಲ್ಲಿ ಬರಹಗಾರರಾಗಿರುವ ಮಾಸ್ತಿ, ಅನುಪಮಾ ನಿರಂಜನ, ಕೆ. ಸದಾಶಿವ, ಕೆ.ಎನ್. ಗಣೇಶಯ್ಯ ಮುಂತಾದವರಂತೆ ವೃತ್ತಿಯಿಂದ ಕೆ.ಎ.ಎಸ್ ಅಧಿಕಾರಿಗಾಳಾಗಿದ್ದ ಮನು ಬಳಿಗಾರ್ ಪ್ರವೃತ್ತಿಯಲ್ಲಿ ಲೇಖಕರಾಗಿ ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಮಾಡಿ ಕನ್ನಡದ ಕಾಯಕದಲ್ಲಿ ತೊಡಗಿದ್ದಾರೆ. ಆಡಳಿತಾವಧಿಯ ಅನುಭವದ ಬುತ್ತಿಯನ್ನು ಸಾಹಿತ್ಯದ ಭಿತ್ತಿಯಲ್ಲಿ ಚಿತ್ರಿಸುವ ಜೊತೆಯಲ್ಲಿ, ಸಾಮಾನ್ಯ ಹಳ್ಳಿಯ ಪರಿಸರದಲ್ಲಿ ಬೆಳೆಯುತ್ತಾ ಆ ನಂತರದಲ್ಲಿ ಬದುಕಿನ ಬಹುಭಾಗವನ್ನು ಮಹಾನಗರದಲ್ಲಿ ಕಳೆದರೂ ಇವರ ಬರಹ ಗ್ರಾಮೀಣ ಸೊಗಡನ್ನು ಬಿಟ್ಟಿಕೊಟ್ಟಿಲ್ಲ.

2011ರಲ್ಲಿ ಪ್ರಕಟಗೊಂಡ ಬಳಿಗಾರ್ ಅವರ 'ಆಯ್ದ ಕವನಗಳು' ಸಂಕಲನದಲ್ಲಿ ಏಳು ಸಂಕಲನದಿಂದ ಆಯ್ದ 80 ಪ್ರಾತಿನಿಧಿಕ (ಕಿರುಕವಿತೆ, ಚುಟುಕುಗಳೂ ಸೇರಿ)ಕವಿತೆಗಳಿವೆ. ಇಲ್ಲಿನ ಪ್ರತಿ ಕವಿತೆಗಳು ಸಮಾಜಮುಖಿಯೂ ಜೀವನ್ಮುಖಿಯೂ ಆಗಿರುವವು. ಹಲವು ಕವಿತೆಗಳು ಘಟನೆ, ವ್ಯಕ್ತಿಸಂದರ್ಭಗಳೇ ಮುಖಾಮುಖಿಗೊಂಡು ಆ ಪರಿಣಾಮದ ಅಭಿವ್ಯಕ್ತಿಯಾಗಿ ಹೊರಹೊಮ್ಮಿವೆ. ಈ ಸಂಕಲನದಲ್ಲಿನ ಮೊದಲ ಕವಿತೆ ಇಡೀ ಸಂಕಲನಕ್ಕೆ ಮುನ್ನುಡಿ ಸ್ವರೂಪದಲ್ಲಿದೆ. 'ಬರೆಯಬೇಕಿದೆ ಕವನ' ದಲ್ಲಿ

**ಬರೆಯಬೇಕಿದೆ ಕವನ ಈಗ ಮತ್ತೊಂದು**
**ಕ್ರಾಂತಿ ಮಾಡಲೆಂತಲ್ಲ**
**ಅಚ್ಚನ್ನ ಬೆಚ್ಚನ್ನ ಪ್ರಚ್ಚನ್ನ**
**ಸ್ವರ್ಗ ನಿರ್ಮಿಸಲಂತಲ್ಲ**
**ಯುಗದ ಮುಂಗೋಳಿಯಾಗಲೂ ಅಲ್ಲ.**
**ಉದಯ ರವಿ ಮೈ ಕೊಡವಿದಂತೆ**
**ಬಿದಿಗೆಯ ಚಂದ್ರ ಮುಗುಳ್ನಕ್ಕಂತೆ**
**ಬರೆಯಬೇಕಿದೆ ಕವನ.**

ಇಲ್ಲಿನ ಪ್ರತಿಸಾಲೂ ಕಾವ್ಯ ರಚನೆಯ ಪ್ರಸ್ತುತತೆ ಮತ್ತು ಕವಿಯಿಂದ ರೂಪುಗೊಂಡ ಕವಿತೆಯ ಸಾರ್ಥಕ್ಯವನ್ನು ದಾಖಲಿಸುತ್ತದೆ. ಕವಿತೆಯ ಹುಟ್ಟು ಕೇವಲ ಕವಿಯ ಭಾವಬಂಧದ ಬಿಡುಗಡೆ ಮಾತ್ರ ಆಗಿರದೆ. ಓದುಗನ(ಸಹೃದಯಿಯ) ಆ ಕ್ಷಣದ ಬೆಳಕು ಮತ್ತು ಬಿಂಬವೂ ಆಗಬೇಕು/ಆಗುತ್ತದೆ. ಹೇಗೆ ಹಗಲಿಡಿ ಜಗವನ್ನು ಬೆಳಗುವ ರವಿ ಕತ್ತಲನ್ನು ದೂರನೂಕಿ ಬಂದರೂ ಕತ್ತಲಾವರಿಸಿದಾಗ ಬೆಳಗುವ ಚಂದ್ರ ತನ್ನ ತಂಪನೆಯ ಬೆಳದಿಂಗಳ ಬೆಳಕಿಂದ ಮುದವನ್ನು ಉಣಿಸುತ್ತಾನೆ. ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ' ಎಲ್ಲವೂ ಇದ್ದಾಗ ಮಾತ್ರ ಜೀವನ ಮುದವಾಗುವುದು, ಚಲುವಾಗಿ ಸೊಗಸಾಗುವುದು.

ಲೇಖಕರಾದ ಮನು ಬಳಿಗಾರ್ ಹಿರಿಯ ದಕ್ಷ ಆಡಳಿತಾಧಿಕಾರಿಯಾಗಿ ಕರ್ನಾಟಕದಲ್ಲಿ ಸಲ್ಲಿಸಿದ ಸೇವೆ ಗಮನೀಯವಾದುದು. ಅದರಲ್ಲೂ ಸಂಸ್ಕೃತಿ ಇಲಾಖೆಯಲ್ಲಿ ಆಯುಕ್ತರಾಗಿ ಇವರು ಮಾಡಿದ ಕನ್ನಡದ ಚಾರಿತ್ರಿಕ ಕೆಲಸಗಳು ವಿಶೇಷವಾದುವು. ಹಾಗೆಯೇ 2011ರಲ್ಲಿ ಇವರ ಸಾರಥ್ಯದಲ್ಲಿ ಗಡಿನಾಡು ಬೆಳಗಾವಿಯಲ್ಲಿ ನಡೆದ ಎರಡನೆಯ ವಿಶ್ವಕನ್ನಡ ಸಮ್ಮೇಳನ ದೊಡ್ಡ ಮೈಲಿಗಲ್ಲಾಗಿದೆ. ಹಾಗೂ ಪ್ರಸ್ತುತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನಿರ್ವಹಿಸುತ್ತಿರುವ ಕನ್ನಡದ ಬಹು ಆಯಾಮದ ಯೋಜನೆ, ಸಮ್ಮೇಳನ ಮತ್ತು ಸಂಘಟನೆ ವಿಶಿಷ್ಟವಾದವು. ಈ ಬಗೆಯಲ್ಲಿ ವೃತ್ತಿ ಬದುಕಿನಲ್ಲಿನ ಕಾರ್ಯಕ್ಷಮತೆ, ಕಾಳಜಿಯಂತೆ ಇವರ ಬಹುತೇಕ ಕವಿತೆಗಳು ಈ ನೆಲದ ಸಾಂಸ್ಕೃತಿಕ ಕಂಪನ್ನು ಸೂಸುವುದರೊಂದಿಗೆ ಸಾಮಾಜಿಕ ಕಾಳಜಿ, ರಾಜಕೀಯ ಸ್ಥಿರತೆ, ಬದುಕಿನ ಔನತ್ಯದ ಹಂಬಲವಾಗಿದೆ.

ಈ ಸಂಕಲನದ ಕವಿತೆಗಳು, ಕಾವ್ಯವೆಂದರೆ, ಕಾವ್ಯ ಏನನ್ನು ಹೇಳಬೇಕು, ಕೆಲವು ವ್ಯಕ್ತಿಚಿತ್ರಣ (8, ಸರ್ವಜ್ಞ, 13. ಹೆಗಡೆ, 18, ಕಂಬಾರರು, 37. ಮಂಡೇಲಾ, 42. ಗಾಂಧೀ, 48.ತಾಯಿ ತೆರೇಸಾ, 62. ಡಾ. ಅಂಬೇಡ್ಕರ್), ರಾಜಕೀಯ ವ್ಯವಸ್ಥೆ, ಹಳ್ಳಿಯ ಬದುಕು ಈ ಮುಖ್ಯ ವಸ್ತುಗಳನ್ನು ಹೊಂದಿದೆ. ಈ ಬಗೆಯಲ್ಲಿನ ಕೆಲವೊಂದು ಪ್ರಾತಿನಿಧಿಕ ಕವಿತೆಗಳನ್ನು ಚರ್ಚಿಸುವ ನೆಲೆಯಲ್ಲಿ ಈ ಬರಹ ರೂಪುಗೊಂಡಿದೆ.

**ಭೂಮಿ- ಮಕ್ಕಳು**
**ಅಪ್ಪ ಜೀವನ ಪರ್ಯಂತ**
**ಕೇವಲ ಎರಡನ್ನು ಹದ ಮಾಡುತ್ತಿದ್ದ**
**ಒಂದು : ಭೂಮಿ**
**ಎರಡು : ಮಕ್ಕಳು**

ಈ ಕವಿತೆ ಪ್ರಸ್ತುತ ಸಮಾಜದ ಗುರುತರ ಜವಾಬ್ದಾರಿಯನ್ನು ನೆನಪಿಸುವಂತಿದೆ. ಬದುಕು ಹಸನಾಗಬೇಕಾದರೆ ಕಾಲ ಸಂದರ್ಭದ ಜೊತೆಗೆ ಸುಖ-ದುಃಖಗಳ ಕಡಲಲ್ಲಿ ಮಥನವಾಗಬೇಕು. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಗುಣಾತ್ಮಕವಾಗಿ ರೂಪುಗೊಳ್ಳಲು ಆತನ ತಂದೆ-ತಾಯಿಗಳಿಂದಾದ ಸಂಸ್ಕಾರ ಮುಖ್ಯವಾದುದು. ಹೇಗೆ ಫಲವತ್ತಾದ ನೆಲದಲ್ಲಿ ಉತ್ತಮ ಬೆಳೆ ಬರಲು ಸಾಧ್ಯವೋ ಹಾಗೆಯೇ ಉತ್ತಮ

ಕುಟುಂಬದಿಂದ ಗುಣವಂತ ಮಗು ರೂಪುಗೊಳ್ಳಲು ಸಾಧ್ಯ. ಹೀಗೆ ಈ ಕಿರು ಕವಿತೆ ತಂದೆಯಾದವನ ಕರ್ತವ್ಯಜವಾಬ್ದಾರಿಯಂತೆ ಅವನ ಜೀವನದ ಸಾರ್ಥಕ್ಯ ಯಾವುದರಲ್ಲಿ ಸಾಕಾರಗೊಳಿಸುತ್ತದೆ ಎಂಬುದನ್ನು ದಾಖಲಿಸಿದೆ. ಜಗಕ್ಕೆ ಅನ್ನ ನೀಡುವ ಭೂಮಿ ಮಳೆ-ಗಾಳಿ-ಬೆಳಕಿಂದ ಹದಗೊಂಡು ಹಸಿರಿಂದ ಹಸನಾದಂತೆ. ಉತ್ತಮ ಸಮಾಜದ ನಿರ್ಮಾಣಕ್ಕೆ ಉತ್ತಮ ನಾಗರೀಕರೂ ಅಗತ್ಯ. ಈ 'ಉತ್ತಮಿಕ'ದಲ್ಲಿ ತಾಯಿಯ ಜವಾಬ್ದಾರಿಯಂತೆ ತಂದೆಯ ಜವಾಬ್ದಾರಿಯೂ ಮುಖ್ಯವೆಂಬುದು ಈ ಕವಿತೆಯ ಫಲಿತ. ಈ ಬಗೆಯಲ್ಲಿ ಪ್ರತಿಯೊಂದು ಕವಿತೆ ತನ್ನ ಕಾವ್ಯ ಗುಣದೊಂದಿಗೆ ಓದುಗನ ಆ ಕ್ಷಣದ ಬಿಂಬವನ್ನು ಹೊಂದಿರಬೇಕಾಗುತ್ತದೆ.

**ಕಾಯ್ದೆ**
**ಮಂತ್ರಿಗಳ, ಶಾಸಕರ**
**ಅಧಿಕಾರಿಗಳ ಸಿರಿವಂತರ**
**ಎಲ್ಲಾ ಕೆಲಸಗಳೂ**
**ಕಾಯದೆಯ ಆಗುತ್ತವೆ**
**ಇದು ನಮ್ಮ ಕಾಯ್ದೆ.**

ಸಮಕಾಲೀನ ಸಂದರ್ಭದಲ್ಲಿ ನಮ್ಮೆಲ್ಲರ ಬದುಕ ಬಹುತೇಕವಾಗಿ 'ರಾಜಕೀಯ'ಗೊಂಡು ಕಲುಷಿತವಾಗಿ ಮಾನವೀಯ ಸಂಬಂಧ, ಸತ್ಯ-ಧರ್ಮ, ನ್ಯಾಯ-ನೀತಿ ನೈತಿಕತೆಗಳು ಮಾತು, ಪುಸ್ತಕಗಳಿಗೆ ಸೀಮಿತವಾಗಿವೆ. ಇವುಗಳ ತುರ್ತಿನ ಅರಿವಿನಲ್ಲಿ ಕವಿತೆ ರಾಜಕೀಯ ವಿಡಂಬನೆಯ ಜೊತೆ ಜೊತೆಯಲ್ಲಿ ಪರ್ಯಾಯಗಳ ಅಗತ್ಯವನ್ನು ಹೇಳುವಂತಿದೆ.

ಈ ರೀತಿಯಲ್ಲಿ ಆಯ್ದ ಕವಿತೆಗಳ ಸಂಕಲನದ ಕವಿತೆಗಳು ಬೇರೆ ಬೇರೆ ಕಾಲಘಟ್ಟದಲ್ಲಿ ರಚನೆಯಾದರೂ ಸಮಕಾಲೀನವಾಗಿವೆ. ಹಳ್ಳಿಯ ಶುದ್ಧಪರಿಸರ ಮತ್ತು ಜನರ ಮುಗ್ಧತೆಯಲ್ಲಿ ನಿರೂಪಿತವಾದ ಮಾನವೀಯ ಗುಣಗಳು, ನಗರದಲ್ಲಿ ಮರೆತುಹೋದ ಮನುಷ್ಯತ್ವ, ಅಕ್ಷರವಂತರಲ್ಲಿ ಕಳೆದುಹೋದ ಅರಿವು, ನೆಲ-ಜಲಮುಖಿಯಾದ ಸಂಸ್ಕೃತಿ, ಭಾಷೆ ಇತ್ಯಾದಿಗಳ ನಿರಂತರ ಎಚ್ಚರ ಮತ್ತು ಅರಿವನ್ನು ಇಲ್ಲಿನ ಬಹುತೇಕ ಕವಿತೆಗಳು ಮೈಗೂಡಿಸಿಕೊಂಡು ಸಂಪನ್ನಗೊಂಡಿವೆ.

'ಆತ್ಮಾಭಿಮಾನದ ಆತ್ಮಹತ್ಯೆ' ಪ್ರಸ್ತುತ ಸಂದರ್ಭಕ್ಕೂ ನಿಲ್ಲುವ ಕವಿತೆಯಾಗಿದೆ.

ಮಾನವೀಯ ಕಾಳಜಿಯೇ ಮುಖ್ಯ ಎನ್ನುವ ಧೋರಣೆಯನ್ನು ಪ್ರತಿಪಾದಿಸುವ ಇವರ ಕವನಗಳು ಶಾಂತಿ, ಸದ್ಭಾವನೆ, ಸಮಾಧಾನದ ಸಾಂಕೇತಿಗಳಾಗಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ. ಜೀವನ ಜಲಪಾತದಲ್ಲಿ 'ನಯಗರಾ'ದಂತಹ ಸೌಂದರ್ಯ, ಪ್ರೀತಿ ಮತ್ತೆ ಮತ್ತೆ ಧುಮ್ಮಿಕ್ಕಲಿ ಎನ್ನುವ ಆಶಾ ಭಾವನೆ ಕವಿತೆಗಳುದ್ದಕ್ಕೂ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ.

❖

## ಮನು ಬಳಿಗಾರ್ ಅವರ "ನಯಾಗರ ಮತ್ತು ಜಲಪಾತ" :

## ಮನುಷ್ಯ ಪ್ರೀತಿಯ ಕೊರಳ ತಬ್ಬಿ...

ಚೆನ್ನರಾಜು ಎಂ. ಬಸಪ್ಪನದೊಡ್ಡಿ

ಕಣ್ಣೀರನ್ನು ಪ್ರವಾಹವಾಗಿಸಬಲ್ಲದು ನನ್ನ ಕಾವ್ಯ
ಪ್ರವಾಹವನ್ನು ಚಂಡಮಾರುತವಾಗಿಸಬಲ್ಲದು
ಚಂಡಮಾರುತವನ್ನು ಹೊಸ ಮುಂಜಾವಿನ
ಸ್ವಾತಂತ್ರ್ಯ ಮತ್ತು ಭರವಸೆಯಾಗಿಸಬಲ್ಲದು

**- ಕಾಶ್ಮೀರಿ ಕವಯತ್ರಿಯೊಬ್ಬರ ಕವಿತೆಯ ಸಾಲುಗಳು**

ಆಧುನಿಕ ಕನ್ನಡ ಕಾವ್ಯ ಪರಂಪರೆಯನ್ನು ತೀರ ಗಂಭೀರವಾಗಿ ಗ್ರಹಿಸಿದ ನಂತರ ಈ ಹೊಸ ಶತಮಾನದ ಕಾಲದಲ್ಲಿ ಶಕ್ತಿಯುತವಾದ ಕಾವ್ಯವೊಂದು ಮೂಡುತ್ತಿಲ್ಲ ಎಂಬ ಹಿರಿಯ ವಿದ್ವಾಂಸರ ಮಾತುಗಳನ್ನು ಗಮನಿಸಿದ್ದೇನೆ. ಕಾವ್ಯವೊಂದು ಆಯಾ ಸಮಾಜದ ಆಂತರಿಕ ಮಾತಾಗಿದ್ದು, ಸಮಾಜ ರೂಪಿಸುವ ಮತ್ತು ಸಂಸ್ಕೃತಿಯಲ್ಲಿ ಪಲ್ಲಟಗೊಳ್ಳುತ್ತಿರುವ ಅತಿ ಸೂಕ್ಷ್ಮ ಸಂಗತಿಗಳನ್ನು ಸಾಹಿತ್ಯದ ಎಲ್ಲ ನಿರೂಪಣಾ ಮಾದರಿಗಳು ಹಿಡಿದಿಡುತ್ತವೆ. ಎಂದು ನಂಬುತ್ತೇನೆ. ಇದಾಗಿಯೂ ಕಾವ್ಯ ತನ್ನ ಸಮಾಜದಲ್ಲಿ ತರಬಲ್ಲ ಬದಲಾವಣೆಗಳನ್ನು, ಸ್ವಾಸ್ಥತೆಯನ್ನು ಶಕ್ತಿಯನ್ನು ಹೊಂದಿದೆ ಎಂಬುದನ್ನು ಬಲವಾಗಿ ನಂಬಿದ ನಾನು ಗಂಭಿರವಾಗಿಯೇ ಪರಿಗಣಿಸುತ್ತೇನೆ. ಮೇಲಿನ ಕಾಶ್ಮೀರಿ ಕವಯತ್ರಿಯೊಬ್ಬರ ಕವಿತೆಯ ಸಾಲುಗಳು ಮತ್ತು ಆಧುನಿಕ ಕನ್ನಡದ ದಲಿತ ಬಂಡಾಯ ಕಾಲಘಟ್ಟದಲ್ಲಿ ಮೂಡಿದ ಕಾವ್ಯ ಶೈಲಿ, ತಾತ್ವಿಕತೆ, ನಿರೂಪಣಾ ತಂತ್ರಗಳು ಒಂದನೊಂದು ಹೋಲುತ್ತವೆ. ಸ್ವಾತಂತ್ರ ಮತ್ತು ಭರವಸೆಯ ಒಟ್ಟು ರೂಪಕವಾಗಿ ಕಾವ್ಯವನ್ನು ನಾನು ಕಾಣುತ್ತೇನೆ. ಹೀಗೆ ಇತ್ತಿಚೇನ ಬರಹಗಾರರಲ್ಲಿ ಈ ರೀತಿಯ ಭರವಸೆಯನ್ನು ಮೂಡಿಸುವ ಹಲವು ತಾತ್ವಿಕ ಆಯಾಮಗಳನ್ನು ಮನು ಬಳಿಗಾರ್ ಅವರ ಕಾವ್ಯದಲ್ಲಿ ಕಾಣಲು ಸಾಧ್ಯವಿದೆ. ಮನು ಬಳಿಗಾರ್ ಅವರ "ನಯಾಗರ" ಕವನ ಸಂಕಲನವು ಈ ಎಳೆಗಳನ್ನು ಶೋಧಿಸುತ್ತವೆ.

ಇಂದಿನ ಜಾಗತಿಕ ವ್ಯವಸ್ಥೆಯಲ್ಲಿ ಯುದ್ಧದ ಭೀಕರತೆಗಳು ಹಲಬಗೆಯಲ್ಲಿ ಜಗತ್ತನ್ನು ತಲ್ಲಣಗೊಳಿಸಿವೆ. ಅಂತರಾಷ್ಟ್ರೀಯ ಒಪ್ಪಂದಗಳು, ಯುದ್ಧ ಯೋಜನೆಗಳು, ಪರಮಾಣು ಬಳಕೆ, ಯುದ್ಧ ನೌಕೆಗಳ ತಯಾರಿಕೆಗಳು ಒಂದು ದೇಶದ ರಕ್ಷಣೆಗಾಗಿ ಎಂಬುದು

ಹೌದು, ಮತ್ತೊಂದು ದೇಶವು ತನ್ನ ಸುಪರ್ಧಿನಲ್ಲಿ ಮೌನವಾಗಿರುವಂತೆ ಮಾಡುವ ತಂತ್ರವೂ ಹೌದಾಗಿದೆ. ಸಮಕಾಲೀನ ಸಂದರ್ಭದಲ್ಲಿ ಹಿರೋಷಿಮ, ನಾಗಸಾಕಿಯ ಪರಮಾಣು ಅಣು ಬಾಂಬುಗಳ ಬಳಕೆಯ ಪರಿಣಾಮಗಳನ್ನು ಇಂದು ಸಹ ಕಣ್ಣೆದುರು ಕಾಣುತ್ತೇವೆ. ಇದನ್ನು ಮನು ಬಳಿಗಾರ್ ಅವರು ಮತ್ತೊಂದು ಬಗೆಯಲ್ಲಿ ಕಟ್ಟಿಕೊಡುತ್ತಾರೆ.

ತನ್ನ ಊನದೇಹ ಕಾಣುತ್ತಿದೆಯಲ್ಲ
ಪೀಲಿಯೋ ಪಾರ್ಶ್ವವಾಯು ಯಾವುದರಿಂದಲೂ
ಅಂಬೆಗಾಲಿಕ್ಕಲೂ ಎನಗಾಗುತ್ತಿಲ್ಲ
ಮಾಡುವುದೆಂಬ ತಾಕತ್ತು ಕಿಂಚಿತ್ತೂ ಇಲ್ಲ
ವಕ್ರವಾದ ನಡುವು ವಿಕೃತ ಕೈಕಾಲುಗಳು
ನಿಷ್ಕ್ರಿಯ ಎದೆ ಶಿರ ಸಂದುಗಳು
ಅಂಗಾಂಗಗಳೆಲ್ಲವಿವು ಭಂಗಮುದ್ರೆಗಳು
ಸಂಗಮಾಡಿದ ಸಮರ ಕೊಡುಗೆಗಳು (ಯುದ್ಧದ ಹಾಡು)

ವಿಯೆಟ್ನಾಂ ವಿರುದ್ಧ ಅಮೇರಿಕಾ ನಡೆಸಿದ ಯುದ್ಧ ಮುಗಿದು ಹಲವು ವರ್ಷಗಳು ಸಂದಿವೆ. ಆದರೆ ವಿಯೆಟ್ನಾಂನ ಮೇಲೆ ಅಮೇರಿಕಾ ನಡೆಸಿದ ದೌರ್ಜನ್ಯದ ಪರಿಣಾಮಗಳು ಇಂದಿಗೂ ಆ ನೆಲದಲ್ಲಿ ಕಾಣಲು ಸಾಧ್ಯವಿದೆ. ಯುದ್ಧ ಸಮಯದಲ್ಲಿ ರಾಸಾಯನಿಕ ಅಸ್ತ್ರಗಳನ್ನು ವಿಯೆಟ್ನಾಮಿನ ಕಾಡು, ಊರು ಕೇರಿಯ ಮೇಲೆ ಎಸೆದು ಅಲ್ಲಿನ ಒಟ್ಟು ಪರಿಸರವನ್ನು ನಾಶಮಾಡಿತು. ಅಲ್ಲಿನ ಊಸಿರಾಡುವ ಗಾಳಿಯಲ್ಲಿಯೂ ಸಹ ರಾಸಾಯನಿಕಗಳಿಂದ ಕೂಡಿದ್ದರಿಂದ ಅಲ್ಲಿ ಹುಟ್ಟುವ ಮಕ್ಕಳು ಇಂದಿಗೂ ಹುಟ್ಟುತ್ತಲೇ ಊನಗೊಂಡಿರುತ್ತವೆ. ಬಾಲ್ಯ, ಯೌವನ, ವೃದ್ಧಾಪ್ಯದಂತಹ ಯಾವುದೇ ಹಂತವನ್ನು ತಲುಪದೆಯೂ ಬೆಳವಣಿಗೆಯಲ್ಲಿ ಕುಂಠಿತಗೊಳ್ಳುವುದರಿಂದ ಬಾಲ್ಯದಲ್ಲಿಯೇ ವೃದ್ಧಾಪ್ಯವನ್ನು ಅನುಭವಿಸುತ್ತವೆ. ಈ ಕ್ರೌರ್ಯದ ಪರಿಣಾಮವನ್ನು "ಯುದ್ಧದ ಹಾಡು" ಕವನವು ಸಮಗ್ರವಾಗಿ ಗ್ರಹಿಸಿದೆ. ಈ ರೀತಿಯ ಜಗದ ನೋವು ತನ್ನದೆಂದುಕೊಂಡಾಗ ಮಾತ್ರ ಮಾನವೀಯತೆಗಿರುವ ವಿಶಾಲತೆಯು ಅರ್ಥ ಪಡೆದುಕೊಳ್ಳುತ್ತದೆ. ಈ ಕವಿತೆಯು ಯುದ್ಧೋತ್ತರ ಪರಿಣಾಮಗಳ ಪಟ್ಟಿಯನ್ನು ನೀಡುವ ಮೂಲಕ ಯುದ್ಧದ ಪರಿಣಾಮವನ್ನು ತಿಳಿಸುವ ಕಾರ್ಯ ಮಾಡುತ್ತದೆ. ಅಂತಿಮವಾಗಿ ಯುದ್ಧವನ್ನು ಮೀರಿ ಮಾನವೀಯತೆಯ ಶಾಂತಿಗಾಗಿ ಶೋಧಿಸುವ ಕವಿತೆಯು ಮನು ಬಳಿಗಾರ್ ಅವರ ದೃಷ್ಟಿಕೋನಗಳಿಗೆ ಹಿಡಿದ ಕೈಗನ್ನಡಿಯಾಗಿದೆ.

ದಲಿತ ಬಂಡಾಯ ಕಾವ್ಯಗತಿಯಲ್ಲಿ ಆಕ್ರೋಶಭರಿತ ನಿರೂಪಣೆ ಹಾಗೂ ಮೌನ ವ್ಯಾಖ್ಯಾನದ, ವಿಡಂಬನೆ ರೂಪಕದ ಕಾವ್ಯ ಮಾದರಿಗಳನ್ನು ಕಾಣಬಹುದು. ಎಂಬತ್ತರ ದಶಕದಲ್ಲಿ ಬಂದಂತಹ ಬಹುತೇಕ ಕಾವ್ಯದಲ್ಲಿ ಈ ಮಾದರಿಯನ್ನು ಗುರುತಿಸಬಹುದು. ಅಂದಿನ ಅಸ್ಪೃಶ್ಯತೆ, ಸಮಾನತೆ, ಮಾನವೀಯತೆಗಾಗಿ ಮಾರ್ಕ್ಸ್, ಲೆನಿನ್, ಲೋಹಿಯಾ, ಪೆರಿಯಾರ್, ಅಂಬೇಡ್ಕರ್ ವಿಚಾರಧಾರೆಗಳು ನೆರವಾಗಿವೆ. ಶಾಂತಿ ಮತ್ತು ಸೌಹಾರ್ದತೆಗಾಗಿ ಶೋಧಿಸುವ ಪ್ರಯತ್ನವಾಗಿಯೂ ಅಂದಿನ ಕಾವ್ಯದಲ್ಲಿ ಕಂಡುಬಂದಿದೆ. ಈ ರೀತಿಯ ಮಾದರಿಗಳನ್ನು ಮನು ಬಳಿಗಾರ್ ಅವರ ಕಾವ್ಯದಲ್ಲಿ ಗುರುತಿಸಬಹುದು.

ಸಾಕಾಗಿದೆ ನನಗೀಗ
ಆಲಂಕಾರಿಕ ಕಥೆ ಕವನಗಳು

**ಆಶ್ವಾಸನೆಯಲೆ ಉಳಿವ ಯೋಜನೆಗಳು**

**ಕಿವುಡು ಕಿವಿಗಳ ಮೇಲೆ ಬೀಳುವ**

**ಭರ್ಜರಿ ಭಾಷಣ ಬೋಧನೆಗಳು** (ಬೇಕಿರುವುದು)

ಹೀಗೆ ಆಕ್ರೋಶದ ಧ್ವನಿಯ ನಿರೂಪಣೆಯಲ್ಲಿ ನಿರಾಕರಿಸುವ ಒಂದು ತಳ ವರ್ಗದ ಎಚ್ಚರವನ್ನು ಕಾಣಬಹುದು. ಕಾವ್ಯ ಏಕ ಕಾಲಕ್ಕೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಆಯಾಮಗಳಲ್ಲಿಯೂ ತನ್ನ ಶಕ್ತವಾದ ಪರಿಣಾಮವನ್ನು ಬೀರುವ ಪ್ರಕರತೆಯನ್ನು ಹೊಂದಿರುತ್ತದೆ. ಕಾವ್ಯ ಆಕ್ರೋಶದ ಧ್ವನಿ ಅಥವಾ ಶಾಂತದ ಮೌನ ಚಲನೆಯಲ್ಲಿ ನಿರೂಪಣೆಗೊಂಡಿದೆ ಎಂಬುದು ಮುಖ್ಯವಾಗುವುದಕ್ಕಿಂತ ಅಲ್ಲಿನ ವಸ್ತು, ಉದ್ದೇಶ ಮತ್ತು ವಿಶಾಲ ಅರ್ಥಗ್ರಹಿಕೆಗಳನ್ನು ಪಡೆದುಕೊಳ್ಳಬಲ್ಲ ಮಾದರಿಗಳು ಮುಖ್ಯವಾಗುತ್ತವೆ. ಮತ್ತೊಂದು "ಗಾಂಧೀ ಜಯಂತಿಯಂದು" ಎಂಬ ಕವನವು ಹೀಗಿದೆ.

**ಬೇಕಾಗಿದೆ**

**ಸಾದಾ ನೀರು**

**ಸಾದಾ ಸೂರು**

**ಗೇಣು ಬಟ್ಟೆ**

**ತುಣುಕು ರೊಟ್ಟಿ**

**ಒಂದಿಷ್ಟು ಹೊಸ ಸೃಷ್ಟಿ**

**ಅದೇ ಮಾನವೀಯ ದೃಷ್ಟಿ.** (ಗಾಂಧೀ ಜಯಂತಿಯಂದು)

ಈ ಕವನದಲ್ಲಿ ಗಾಂಧೀಜಿಯವರ ಸ್ವಾತಂತ್ರ್ಯ, ಸಮಾನತೆಯ ದೃಷ್ಟಿಕೋನಗಳನ್ನು ಕಾಣಬಹುದು. ಹಾಗೆಯೆ ಸಮಾಜವಾದ, ಸಮತವಾದದ ಚಿಂತನೆಗಳು ಹಾಗೂ ಸಮಷ್ಟಿ ಪ್ರಜ್ಞೆಯನ್ನು ಇಲ್ಲಿ ಕಾಣಬಹುದಾಗಿದ್ದು, ಕಾವ್ಯವೊಂದರ ಅಂತಿಮ ಉದ್ದೇಶವು ಮಾನವೀಯ ಗುಣಗಳನ್ನು ಹೊಂದುವುದು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇತ್ತೀಚಿನ ದಿನಮಾನಗಳಲ್ಲಿ ಭಯೋತ್ಪಾದನೆ, ನಕ್ಸಲಿಸಂ, ಗಡಿ ಸಂಘರ್ಷಗಳು, ಯದ್ಧೋತ್ಪಾದನೆಗಳ ನೇರ ದಾಳಿಯಿಂದ ನಲುಗುತ್ತಿರುವ ಮನುಷ್ಯ ಸಂಕುಲವು, ಇವುಗಳ ನಡುವೆ ಹೇಗೆ ಶಾಂತಿ, ಸುವ್ಯವಸ್ಥೆಯ ಶೋಧ ನಡೆಸುತ್ತವೆ ಹಾಗೂ ಈ ಶೋಧನೆಗಳ ಅಂತಿಮ ಪರಿಣಾಮ ಎಷ್ಟು ಶಕ್ತವಾಗಿವೆ ಎಂಬುದು ಸಹ ಕೂತುಹಲಕಾರಿ ಸಂಗತಿಯಾಗಿದೆ. ಒಂದು ರೀತಿ ಸಾವಿನ ನಡುವೆ ಜೀವಂತಿಕೆಯ ಪರಿಶೋಧದ ಹಾಗೆ. ಯುದ್ಧದ ರೂಪಕ, ಪ್ರತಿಮೆಗಳು, ಹಿಂಸೆಯ ಹಲವು ಬಗೆಗಳು ಹಲವಾರು ಕವನಗಳಲ್ಲಿ ದೊರಕುತ್ತವೆ. ಅದೇ ರೀತಿ ಈ ಹೊಸ ನೆಲೆಗಟ್ಟಿನಲ್ಲಿ ಶಾಂತಿಯ, ಸಹಬಾಳ್ವೆಯ, ಮನುಷ್ಯ ಪ್ರೀತಿಯ ಆಧುನಿಕ ರೂಪಕ ಮಾದರಿಗಳು ರೂಪುಗೊಂಡಿರುವ ಬಗೆಯು ಭಿನ್ನವಾಗಿರುತ್ತದೆ. ಮನು ಬಳಿಗಾರ್ ಅವರು ಹೀಗೆ ಈ ಎರಡು ಬಗೆಯನ್ನು ಅಭಿವ್ಯಕ್ತಿಸಿದ್ದಾರೆ.

**ನಿತ್ಯ ಷೋಡಶಿ ಮೇಲೆ**
**ನಿತ್ಯ ಅತ್ಯಾಚಾರ**
**ನಡೆದಿದೆ ನಿರಂತರ**
**ಗಾಂಧಿ ನಾಮ ಸಂಹಾರ** (ಗಾಂಧೀ)

ಈ ಸಾಲುಗಳಲ್ಲಿ ಗಾಂಧಿ ಚಿಂತನೆಗಳು, ಚಳುವಳಿಗಳು ಆಧುನಿಕ ಕಾಲದಲ್ಲಿ ನಾಶವಾಗುವತ್ತಿರುವುದರ ಬಗೆಗಿನ ತೀವ್ರವಾದ ವಿಷಾದವನ್ನು ಕಾಣಬಹುದು. ಗಾಂಧಿ ರೂಪಕಗಳು ಶಾಂತಿಯ ಮತ್ತೊಂದು ಅರ್ಥವನ್ನು ಹೊರಗೆಡುವುದರಿಂದ ಶಾಂತಿಯ ನಾಶವೂ ಸಹ ಇಲ್ಲಿ ಮತ್ತೊಂದು ಅರ್ಥ ಪಡೆದುಕೊಳ್ಳುತ್ತದೆ. ಇದರ ನಂತರದಲ್ಲಿ ಗಾಂಧೀ ಚಿಂತನೆಗಳು, ರೂಪಿಸಿದ ಚಳುವಳಿಗಳು, ಸ್ವಾತಂತ್ರದ ಕನಸು, ಸಮಾಜವಾದದ ಪ್ರಜ್ಞೆಯು ಮೊಳೆಯುತ್ತಿರುವ ಧನಾತ್ಮಕ ಮಾದರಿಗಳನ್ನು ಹೀಗೆ ಕಟ್ಟುತ್ತಾರೆ.

**ಮತ್ತೆ**
**ನಿನ್ನ ಗಟ್ಟಿಗಾಲುಗಳು**
**ಮೆಟ್ಟಿ ಮೆಟ್ಟಿ**
**ಈ ನೆಲ ಗಟ್ಟಿಯಾಗಿ**
**ನೆಲನ್ ಮಂಡೇಲಾ**
**ದೂರದ ಆಫ್ರಿಕಾದಲಿ**
**ಮೊಳಕೆ ಒಡೆಯಬೇಕಾದದ್ದೂ**
**ಅಷ್ಟೇ ಸೋಜಿಗ** (ಗಾಂಧೀ)
**ಬ್ರಿಟೀಷರ ಭೀಭತ್ಸ**
**ಬಂಧನದಿಂದ**
**ಬಿಡುಗಡೆಗೊಂಡ**
**ನೆಲ್ಸನ್ ಮಂಡೇಲಾ**
**ಜಗವನೇ ಬಂಧಿಸಿದ**
**ಪ್ರೀತಿ ವಾತ್ಸಲ್ಯದಿ.** (ಮಂಡೇಲಾ)

ಈ ಎರಡು ಕವನಗಳಲ್ಲಿ ಗಾಂಧೀ ಚಿಂತನೆಗಳು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳುತ್ತಿರುವುದರ ರೂಪಕವಾಗಿದೆ. ಗಾಂಧೀ ಭಾರತದಲ್ಲಿ ಹುಟ್ಟಿದ್ದಾರೆ, ಅವರ ಚಳುವಳಿಗಳು ರೂಪುಗೊಂಡ ನೆಲವೆಂದ ಮಾತ್ರಕ್ಕೆ ಭಾರತೀಯರು ಮಾತ್ರ ಅವರಿಂದ ಪ್ರೇರಣೆ ಪಡೆದುಕೊಳ್ಳಬೇಕೆಂದೇನು ಇಲ್ಲ. ಆದ್ದರಿಂದ ಇಡೀ ವಿಶ್ವವನ್ನೆ ಶಾಂತಿಯಿಂದ ಗೆಲ್ಲಬಹುದು ಎಂಬ ಶಾಂತಿ ಮಂತ್ರವನ್ನು ಬಳಸಿಯೆ ನೆಲ್ಸನ್ ಮಂಡೇಲಾ ಗಾಂಧೀಯ ಮತ್ತೊಂದು ಚಹರೆಯಾಗಿ ಕಾಣಿಸುತ್ತಾರೆ. ಹೀಗೆ ಮನು ಬಳಿಗಾರ್ ಅವರ ಕಾವ್ಯವು ಮತ್ತೆ ಮತ್ತೆ ಮಾನವೀಯತೆ, ಮನುಷ್ಯ ಪ್ರೀತಿ, ಸಮಾಜವಾದ, ಸಮತಾವಾದ ಹಾಗೂ ಶಾಂತಿ, ಸಹಬಾಳ್ವೆಯನ್ನು

ಮರುಶೋಧಿಸಲು ಪ್ರಯತ್ನಿಸುತ್ತವೆ. ಈ ರೀತಿಯ ವಸ್ತು ಮತ್ತು ಉದ್ದೇಶಗಳು ಇಂದಿನ ಜಗತ್ತಿಗೆ ಅವಶ್ಯಕವಾಗಿ ಬೇಕಾದ ಕಾರಣ ಎಲ್ಲಾ ಕಾಲಕ್ಕೂ ಸಮಕಾಲೀನಗೊಳ್ಳುವ ಗುಣ ಪಡೆದುಕೊಂಡಿವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- **ನಯಾಗರಾ** : ಮನು ಬಳಿಗಾರ್, ಸಪ್ನ ಬುಕ್ ಹೌಸ್, ಬೆಂಗಳೂರು
- **ಆಯ್ದ ಕವನಗಳು** : ಮನು ಬಳಿಗಾರ್, ಸಪ್ನ ಬುಕ್ ಹೌಸ್, ಬೆಂಗಳೂರು
- **ಹಾಡೇ ಹಾದಿಯ ತೋರಿತು** : ಎಚ್. ಎಸ್. ರಾಘವೇಂದ್ರ ರಾವ್, ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು
- **ಶಕ್ತಿ ಶಾರದೆಯ ಮೇಳ** : ಡಿ.ಆರ್.ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು.


❖

# ಮನು ಬಳಿಗಾರ್ ಅವರ ಕಾವ್ಯಗಳಲ್ಲಿ ಜೀವಪರ ಆಶಯಗಳು


ದೀಪಿಕಾ ಬಿ.


ಕನ್ನಡ ಸಾಹಿತ್ಯದಲ್ಲಿ ಕಾವ್ಯ ಪ್ರಕಾರವು ಬಹುಕಾಲದ ಚರಿತ್ರೆಯನ್ನು ಹೇಳುವುದರ ಜೊತೆಗೆ ಆ ಕಾಲದ ಸಮಾಜದ ಬಿಕ್ಕಟ್ಟುಗಳನ್ನು ಮತ್ತು ಪಲ್ಲಟಗಳನ್ನು ಕಟ್ಟಿಕೊಡುತ್ತದೆ. ಹಳಗನ್ನಡ, ತ್ರಿಪದಿಗಳು, ಚಂಪೂ ಸಾಹಿತ್ಯ, ಹರಿಹರ, ರಾಘವಾಂಕ, ಆಂಡಯ್ಯ, ಜನ್ನ, ಕುಮಾರವ್ಯಾಸನಿಂದ ಮುದ್ದಣ್ಣನವರೆವಿಗೂ ತಮ್ಮ ಅಭಿವ್ಯಕ್ತಿ ಭಾಷೆಯಾಗಿ ಬಳಸಿಕೊಂಡಿರುವುದು ಕಾವ್ಯಭಾಷೆಯನ್ನೆ. ನವೋದಯ ಮತ್ತು ನವ್ಯಕಾಲಘಟ್ಟದಲ್ಲಿ ಕಾವ್ಯ ಪ್ರಕಾರಕ್ಕೆ ಪಶ್ಚಿಮದ ಕಾವ್ಯಭಾಷೆಯ ಪ್ರಭಾವವಾಗುವ ಮೂಲಕ ಕಾವ್ಯದ ಇತರ ಪ್ರಕಾರಗಳು ಪ್ರಚಾರಕ್ಕೆ ಬಂದವು. ಮುಂದುವರೆದು ದಲಿತ ಬಂಡಾಯ ಕಾಲಘಟ್ಟದಲ್ಲಿ ಕಾವ್ಯದ ಭಾಷೆ ಹೋರಾಟದ ಅಸ್ತ್ರವಾಗುವ ಮೂಲಕ ಇದುವರೆಗಿನ ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಬಿರುಕು ಮೂಡಿಸಲು ಕಾರಣವಾಯಿತು. ಎಪ್ಪತ್ತು-ಎಂಬತ್ತರ ದಶಕದ ನಂತರ ಕನ್ನಡ ಸಾಹಿತ್ಯ ಜಾಗತಿಕ ಮಾರುಕಟ್ಟೆಯ ಪರಿಣಾಮದಿಂದಾಗಿ ಮನುಷ್ಯ ಸಂಬಂಧದಲ್ಲಿ ಉಂಟಾದ ವಿಘಟನೆಗೆ ಪರಿಹಾರವನ್ನು ಹುಡುಕಲೊರಟಿತು. ಅಭಿವೃದ್ಧಿ, ಆಧುನಿಕತೆ, ಅತಿಯಾದ ನಗರೀಕರಣ, ಅನೈತಿಕತೆ, ಭ್ರಷ್ಟತೆ, ಅರಾಜಕಾರಣ, ಜಾತೀಯತೆ, ಹಿಂಸೆ, ಲಿಂಗತ್ವ ಹಾಗೂ ಸಾಮಾಜಿಕ ಅಸಮಾನತೆ ಈ ಮಾದರಿಯ ಸವಾಲುಗಳಿಗೆ ಎದುರುಗೊಂಡ ಕಾವ್ಯಗಳ ಸಾಲಿನಲ್ಲಿ ಬಳಿಗಾರ್ ಅವರ ಕಾವ್ಯಗಳನ್ನು ಗುರುತಿಸಬಹುದಾಗಿದೆ. 'ಮನು ಬಳಿಗಾರ್ ಅವರ ಆಯ್ದ ಕವನಗಳು', 'ನಯಾಗರಾ' ಮತ್ತು 'ಜಲಪಾತ', 'ಎದ್ದವರು ಬಿದ್ದವರು', 'ಸಾಕ್ಷರ ತ್ರಿಪದಿಗಳು' ಮತ್ತು 'ನನ್ನ ನಿನ್ನೊಳಗೆ' ಕವನ ಸಂಕಲನಗಳು ಮುಖ್ಯವಾಗಿವೆ.

ಮನು ಬಳಿಗಾರ್ ಅವರ ಕವನಗಳ ಮುಖ್ಯ ಆಶಯ ಸಾಮಾಜಿಕ ಕಾಳಜಿಯಾಗಿದ್ದು ಸಮಕಾಲೀನ ಸಮಾಜವನ್ನು ವಿಶ್ಲೇಷಣೆಗೆ ಗುರಿಪಡಿಸುತ್ತವೆ. ಅಲ್ಲದೆ ಒಬ್ಬ ಕವಿಯಾದವನ ಜವಾಬ್ದಾರಿಯ ಬಗ್ಗೆ ಹೇಳುವ ಮೂಲಕ ಸಾಹಿತ್ಯದ ತಾತ್ವಿಕತೆಯನ್ನು ಒಳಗೊಂಡಿವೆ. ಇವತ್ತಿನ ಭ್ರಷ್ಟತೆ, ಲಂಚಗುಳಿತನ, ಅಸಮಾನತೆ ಮತ್ತು ಶೋಷಣೆಯನ್ನು ಕಂಡ ಕವಿ ಬೇಸರಪಟ್ಟು

**"ಕಿಂಚಿತ್ತೂ ಬದಲಾಗದ ಪರಿಸ್ಥಿತಿ**
**ಕೈಕಟ್ಟಿ ಕುಳಿತರೆ**
**ಬೆಳೆಯುತ್ತ ಹೋದೀತು ಹುತ್ತ**
**ದುಷ್ಟ ಸಂತತಿ ಸುತ್ತಮುತ್ತ.**
**ಇನಿತಾದರೂ ಇರಲಿ ಇತಿ ಮಿತಿ**
**ಅದಕ್ಕಾದರೂ ಹೊಸೆಯ ಬೇಕಿದೆ ಕವನ'**

(ಬರೆಯಬೇಕಿದೆ ಕವನ, ಪುಟ ಸಂ-4)

ಎನ್ನುವ ಮೂಲಕ ಅಧಿಕಾರಶಾಹಿ ಧೋರಣೆಗಳ ವಿರುದ್ಧ ಮುಖಾಮುಖಿಯಾಗಬೇಕೆಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ.

'ನವಿಲ್ಗುದುರೆ' ಕವನವು ಅಭಿವೃದ್ಧಿ, ಆಧುನಿಕತೆಯು ಮನುಷ್ಯ ಸಂಬಂಧಗಳಲ್ಲಿ ಸೃಷ್ಟಿಸುತ್ತಿರುವ ಗೋಡೆಯನ್ನು ಬೀಳಿಸಲು ಮತ್ತೆ ನಾವು ಗತಕಾಲದ ಮಾನವೀಯತೆಗೆ, ಸಹಬಾಳ್ವೆಗೆ ಹಿಂದಿರುಗಬೇಕಾದ ಅನಿವಾರ್ಯತೆಯನ್ನು ಕುರಿತು ಹೇಳುತ್ತದೆ. ಮಣ್ಣಿನ ವಾಸನೆಯಲ್ಲಿ ಜೀವಂತಿಕೆಯ ಬೇರುಗಳನ್ನು ಕಾಣಬೇಕಾದ ತುರ್ತು ಇಂದಿನವರಿಗೆ ಇದೆ ಎಂಬುದನ್ನು ನವಿಲ್ಗುದುರೆ ಕವನದ

**'ಏನು ಸ್ವಾಮಿ ಎಂಥ ಜೀವಂತಿಕೆ**
**ಈ ಅಕ್ಷರಗಳಲ್ಲಿ ಮಣ್ಣಿನ ಋಜುವಾಸನೆ**
**ಅಪ್ಪಟ ದೇಸಿ ಹೊಳವು**
**ಬತ್ತದ ಹಳೆಬೇರಿನಿಂದ ಚಿಗಿತ**
**ಹೊಸ ದಿಟ್ಟಿಯ ಮಾಮರ'** (ನವಿಲ್ಗುದುರೆ, ಪು.ಸಂ- 6)

ಈ ಸಾಲುಗಳು ಹಳೆಬೇರು ಹೊಸಚಿಗುರು ಪರಿಕಲ್ಪನೆಯನ್ನು ನೆನಪಿಸುತ್ತವೆ. ಹೊಸದರ ಜೊತೆಗೆ ನಮ್ಮ ದೇಸೀತನವನ್ನು ಉಳಿಸಿಕೊಂಡಾಗ ಮಾತ್ರ ಅದಕ್ಕೆ ಅರ್ಥ ಬರುತ್ತದೆ. ಇಲ್ಲವಾದರೆ ನಮ್ಮದಲ್ಲದ ಸಂಸ್ಕೃತಿಯಲ್ಲಿ ನಾವು ಪರಕೀಯತೆಯನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಈ ಕವನ ತಿಳಿಸುತ್ತದೆ.

ಮನು ಬಳಿಗಾರರ 'ಬೆಕ್ಕಿನ ಗಂಟೆ' ಕಾವ್ಯವು ಮಹಾಭಾರತ ಪುರಾಣದಲ್ಲಿ ಅಧಿಕಾರದಾಸೆಯಿಂದ ಹುಟ್ಟುವ ಕೌರವರ ಮೂಲವನ್ನು ನೆನಪಿಸುತ್ತದೆ.

**‘ವಿಕಾರ ಮನಸ್ಸಿನ ಅಂಡಾಣು**
**ಕಲುಷಿತ ಹೃದಯದ ಬೀಜಾಣು**
**ಸಂಕರಗೊಂಡು ಹುಟ್ಟಿದೀ ಬೆಕ್ಕು**
**ಆಹಾ! ಎಂಥಾ ಸೊಕ್ಕುಎಲ್ಲೆಂದರಲ್ಲಿ,**
**ಎಲ್ಲೆಇನಿತಿಲ್ಲದೆ**
**ಹರಿಹಾಯುತಿದೆ ಮರಿಹಾಕುತಿದೆ**
**ತುಡುಗು ಬೆಕ್ಕು'** (ಬೆಕ್ಕಿನ ಗಂಟೆ, ಪು.ಸಂ- 7)

ಇಲ್ಲಿ ಬೆಕ್ಕು ‘ಅಧಿಕಾರಶಾಹಿ'ಯ ರೂಪಕವಾಗಿ ಬಳಕೆಯಾಗಿದ್ದು, ರಾಜತ್ವವಾಗಿರಲಿ ಪ್ರಜಾಪ್ರಭುತ್ವವಾಗಿರಲಿ ಇವುಗಳ ಮುಖ್ಯ ಉದ್ದೇಶ ಆಳುವಿಕೆಯ ಹಿಂಸೆಯೇ ಆಗಿರುತ್ತದೆ. ಆಡಳಿತ ನಡೆಸುವ ಮನುಷ್ಯನೇ ವಿಷವಾಗಿದ್ದು ಅವನ ಮಾಡುವ ಕೆಲಸಗಳೆಲ್ಲವೂ ಸಾಮಾನ್ಯ ಜನರನ್ನು ಬಲಿಯಾಗಿಸುತ್ತಿರುತ್ತವೆ. ರಾಜರ ಕಾಲದಿಂದ ಬಡವರನ್ನು, ಅಸಹಾಯಕರನ್ನು ಅಪ್ರಮುಖರೆಂದು ಪರಿಗಣಿಸುವ ಅಧಿಕಾರಶಾಹಿಗೆ ಯಾವುದೇ ಕಾನೂನಿನ ಭಯವಿರುವುದಿಲ್ಲ. ನೈತಿಕತೆಯ ಅರಿವಿರುವುದಿಲ್ಲ. ಇಂದು ಇಡೀ ವ್ಯವಸ್ಥೆಯೇ ಭ್ರಷ್ಟಾಚಾರ, ಲಂಚಗುಳಿತನಕ್ಕೆ ಒಳಗಾಗಿದ್ದು ಸುಧಾರಣೆಯ ಹೆಸರಲ್ಲಿ ನಡೆಯುವ ಅಭಿವೃದ್ಧಿ ಕೆಲಸಗಳಲ್ಲಿ ಲಾಭವನ್ನು ಕಬಳಿಸಲು ಇರುವ ಸಾಧ್ಯತೆಗಳನ್ನು ಹುಡುಕುತ್ತಿರುತ್ತವೆ. ಮನುಷ್ಯ ಮನುಷ್ಯರನ್ನೇ ಕೊಲ್ಲುತ್ತಿರುವ ಮತ್ತು ತಿನ್ನುತ್ತಿರುವ ಇಂತಹ ಅಧಿಕಾರಶಾಹಿ ಮತ್ತು ಆಡಳಿತಶಾಹಿಯ ವಿರುದ್ಧ ಕ್ರಾಂತಿ ಮಾಡಬೇಕೆನ್ನುವ ಮೂಲಕ ಹೊಸ ಸಮಾಜವನ್ನು, ರಾಜಕೀಯ ವ್ಯವಸ್ಥೆಯನ್ನು ನಿರ್ಮಿಸುವ ಧ್ಯೇಯವನ್ನು ಈ ಕಾವ್ಯ ಒಳಗೊಂಡಿದೆ.

ಬಳಿಗಾರರ ‘ಹೊಸ ವರ್ಷಕ್ಕೊಂದು ವಚನ' ಮತ್ತು ‘ಹೊಸ ವರುಷ ಬಂತೆಂದರೆ' ಎರಡೂ ಕವನಗಳು ಹೊಸವರ್ಷವನ್ನೇ ಕುರಿತು ಹೇಳುತ್ತವೆಯಾದರೂ ಅವುಗಳಲ್ಲಿಯ ವಸ್ತುವಿನ ಆಶಯಗಳು ಭಿನ್ನತೆಯಿಂದ ಕೂಡಿರುತ್ತವೆ. ‘ಹೊಸ ವರ್ಷಕ್ಕೊಂದು ವಚನ ಕವನವು ನಾಳೆಯ ಬದುಕಿನ ಬಗೆಗೆ ಆಶಾದಾಯಕವಾಗಿದ್ದು ಸುಧಾರಣಾವಾದಿ ನೆಲೆಯಲ್ಲಿ ರೂಪುಗೊಂಡಿದೆ. ಮೇಲುನೋಟದ ಕಪಟಗಳೆಲ್ಲವೂ ಶಾಶ್ವತವಲ್ಲ, ಮನುಷ್ಯ ಮಾನಸಿಕವಾಗಿ ಶುದ್ಧವಾದಾಗ ಮಾತ್ರ ಬೆಲೆದಕ್ಕುವುದು ಎಂಬ ನಿಲುವನ್ನು ಇಲ್ಲಿ ಕಾಣಬಹುದು. ಪ್ರಕೃತಿಯ ನಿಯಮಗಳಿಗೆ ಎದುರಾಗಿ ಮನುಷ್ಯ ಕಟ್ಟಿದ ವ್ಯವಸ್ಥೆ ನಿಲ್ಲಲು ಅಸಾಧ್ಯವಾಗಿದ್ದು ಸಮಾನತೆಯ ಬದುಕನ್ನು ಕಟ್ಟಿಕೊಳ್ಳುವ ಮೂಲಕ ಹೊಸ ವರ್ಷ ಆಗಮಿಸಲಿ ಎಂಬ ಆಶಯವನ್ನು ಈ ಸಾಲುಗಳು ಬಿಂಬಿಸುತ್ತವೆ

**‘ಒಸರಲಿ ಸಮತೆಯ ಸಣ್ಣಸೆಲೆ**
**ಕೊಚ್ಚಿ ಹೋಗಲಿ ಜಾತಿ ವಿಜಾತಿಯ ಕೊಳೆ”**

(ಹೊಸ ವರ್ಷಕ್ಕೊಂದು ವಚನ - ಪು.ಸಂ -10)

ಈ ಕವನಕ್ಕೆ ಭಿನ್ನವಾಗಿ ಎಷ್ಟೇ ಹೊಸ ವರುಷಗಳು ಉರುಳಿದರೂ ಬಡವ ಬಡವನಾಗಿಯೇ, ದಲಿತ ಶೋಷಿತನಾಗಿಯೇ, ಹೆಣ್ಣು ಬಂದಿತಳಾಗಿಯೇ ಇರುವ ವಿಪರ್ಯಾಸದ ಬಗೆಗೆ 'ಹೊಸ ವರುಷ ಬಂತೆಂದರೆ' ಕವನ ವಿಷಾಧಿಸುತ್ತದೆ. ಬಡವ ತುತ್ತು ಅನ್ನಕ್ಕಾಗಿ, ದಲಿತ ತನ್ನ ಇರುವಿಕೆಗಾಗಿ ಬಳಲುತ್ತಲೇ ಇದ್ದರೂ ಯಾವುದೇ ಸುಧಾರಣೆಗಳಾಗಿಲ್ಲ. ಉಳ್ಳವರಿಗೆ ಅವರದ್ದೇ ಆದ ಸ್ವಾರ್ಥತೆಯೇ ಮುಖ್ಯವಾಗಿರುತ್ತದೆಯೇ ಹೊರತು ಸಾಮಾಜಿಕ ಸಮಾನತೆಯಲ್ಲ. ಇಲ್ಲದವರ ಬದುಕಿನ ಜೊತೆ ಆಟವಾಡುವ ರಾಜಕಾರಣಿಗಳು, ಮೇಲ್ವರ್ಗದವರು, ಅಧಿಕಾರಿಗಳು, ಧರ್ಮಾಂಧರು ಮತ್ತು ಪುರುಷಶಾಹಿ ಸಮಾಜವನ್ನು ಸದಾ ಸಂಘರ್ಷದಲ್ಲಿಡಲು ಪ್ರಯತ್ನಿಸುತ್ತಿರುತ್ತದೆ.

**"ಎಲ್ಲ ಎಂದಿನಂತೆಯೇ ಇದೆ**
**ಗರಬಡಿದಂತೆ ಹೊಸವರ್ಷ ತೆವಳುತಿದೆ**
**ಯಾರಿಗೂ ತಿಳಿಯದಂತೆ**
**ನಿಲ್ಲದದು ಬೇಡವೆಂದರೂ ತನ್ನ ಗತಿ ಅದಕೆ**
**ವಿಧವಿಧ ಆಶೆ ಆಕಾಂಕ್ಷೆಗಳ**
**ಹೊತ್ತ ಹೊಸತನಕೆ'**

(ಹೊಸ ವರುಷ ಬಂತೆಂದರೆ, ಪು.ಸಂ- 29)

ನಾಯಿ ತನ್ನ ಮರಿಗಳೊಂದಿಗೆ ಊಟಕ್ಕಾಗಿ ಕಿತ್ತಾಡುವುದಕ್ಕಿಂತ ಬಡವರ ಗೋಳು ಬೇರೆಯಾಗಿಲ್ಲ. ದುಡಿದ ಶ್ರಮಕ್ಕೆ ಸರಿಯಾದ ಪ್ರತಿಫಲವಿಲ್ಲದೆ ಮೂಲ ಸೌಕರ್ಯಕ್ಕಾಗಿ ಕಷ್ಟಪಡುವ ಸಂದರ್ಭದಲ್ಲೂ ಅವರು ತಮ್ಮ ಜೀವಂತಿಕೆಯನ್ನು ಕಳೆದುಕೊಳ್ಳಲಾರರೆಂಬ ಆಶಯವನ್ನೂ ಸಹ ಈ ಕವನ ಹೇಳುತ್ತದೆ. 'ಧೂಳು ಹೊದ್ದು ಮಲಗಿದ ರಸ್ತೆ ಬದಿ ಬದುಕು' ಎಂಬ ಕವಿಯ ಮಾತು ಇಡೀ ವ್ಯವಸ್ಥೆಯ ಸ್ವರೂಪವನ್ನು ಮಾರ್ಮಿಕವಾಗಿ ವಿಡಂಬಿಸುತ್ತದೆ. ಯಾವುದೇ ಹೊಸತನವನ್ನುಂಟು ಮಾಡದ ಹೊಸ ವರ್ಷ ಕ್ಯಾಲೆಂಡರ್ ಅಲ್ಲಿ ಬಂದು ಹೋಗುತ್ತದೆ. ಆದರೆ ನಿಜವಾದ ಹೊಸವರ್ಷ ಕ್ರಾಂತಿಯಲ್ಲಿ ಅಡಗಿದೆ.

ಕನ್ನಡ ಸಾಹಿತ್ಯವು ನಾಡು ನುಡಿ, ರಾಷ್ಟ್ರೀಯತೆ, ದೇಶಪ್ರೇಮದ ಬಗೆಗೆ ಯಾವಾಗಲೂ ಸ್ಪಂದಿಸುತ್ತಲೇ ಬರುತ್ತಿದೆ. ಅಲ್ಲದೆ ಇತ್ತೀಚೆಗೆ ಉಪರಾಷ್ಟ್ರೀಯತೆಯ ಕೂಗೂ ಅಲ್ಲಲ್ಲಿ ಕೇಳುತ್ತಿದೆಯಾದರೂ ದೇಶ ಎಂದಾಗ ಎಲ್ಲರೂ ಭಾರತದೇಶ ಎಂಬ ಐಕ್ಯತೆಯ ಮಂತ್ರ ಮೂಡುತ್ತದೆ. ಆದರೆ ಇತ್ತೀಚೆಗಿನ ಜಾಗತಿಕ ಮಾರುಕಟ್ಟೆಯ ಎದುರು ನಾವೆಲ್ಲಾ ಒಂದೇ ಎಂಬ ಭಾವನೆ ಇಲ್ಲವಾಗುತ್ತಿರುವುದು ವಿಪರ್ಯಾಸ. ಈ ಬಗೆಯ ಸವಾಲುಗಳನ್ನು ವಸ್ತುವಾಗಿಸಿಕೊಂಡಿರುವ 'ಹಾರು ಧ್ವಜವೆ ಮೇಲೆ ಮೇಲೆ', 'ಕನ್ನಡ ಕನ್ನಡ', 'ಜಯ ಭಾರತ' ಕವನಗಳನ್ನು ಬಳಿಗಾರರು ರಚಿಸುವ ಮೂಲಕ ಭಾಷೆ ಮತ್ತು ದೇಶದ ವಾಸ್ತವ ಕಾಳಜಿಯ ಬಗೆಗೆ ಅರಿವು ಮೂಡಿಸುತ್ತಾರೆ.

**‘ಗುಡಿಯಲಿ ಕನ್ನಡ ಗಂಟೆಯು ಮೊಳಗಲಿ**

**ಅಲ್ಲಾ ಎನ್ನಲಿ ಮಸೀದಿಯಲಿ**

**ಚರ್ಚುಗಳಲ್ಲಿ ಕನ್ನಡ ಚರ್ಚೆ**

**ಸರ್ವತ್ರ ಕನ್ನಡ ಅದು ನಮ್ಮಿಚ್ಛೆ’** (ಕನ್ನಡ ಕನ್ನಡ, ಪು.ಸಂ- 13)

ಎಲ್ಲೆಲ್ಲೂ ಕೋಮುದಂಗೆಯಲ್ಲಿ ಮುಳುಗಿರುವ ಕರ್ನಾಟಕದ ಪರಿಸ್ಥಿತಿಗೆ ಈ ಕವನ ಹೆಚ್ಚು ಪ್ರಸ್ತುತ ಎನಿಸುತ್ತದೆ. ಧರ್ಮವನ್ನು ರಾಜಕೀಯದ ಅಸ್ತ್ರವಾಗಿಸಿಕೊಂಡಿರುವ ರಾಜಕಾರಣಿಗಳ ವಿರುದ್ಧ ಈ ಕಾವ್ಯ ಸಂಘರ್ಷವನ್ನು ಏರ್ಪಡಿಸುತ್ತದೆ. ಪ್ರಾದೇಸಿಕತೆ ಮತ್ತು ಭೌಗೋಳಿಕ ಪರಿಸರದಲ್ಲಿ ವಾಸಿಸುವ ಯಾವುದೇ ಧರ್ಮ, ಜಾತಿ ಜನಾಂಗಗಳು ಆ ಭಾಗದ ದೇಸೀ ಭಾಷೆಯನ್ನು ಬಳಸಿ, ಬೆಳಸಿ ಕಾಪಾಡಿಕೊಳ್ಳಬೇಕು. ಆಗ ಮಾತ್ರ ನಮ್ಮ ದೇಸೀತನವನ್ನು ಉಳಿಸಿಕೊಳ್ಳಲು ಸಾಧ್ಯ ಎಂಬುದು ಬರಹಗಾರರ ಕಾಳಜಿ. ಆದರೆ ಕೆಲವೊಮ್ಮೆ ಭಾಷಾ ಮತ್ತು ದೇಶ ಪ್ರೇಮ ಅತಿರೇಕಕ್ಕೆ ಹೋಗುವ ಮೂಲಕ ಅಲ್ಪಸಂಖ್ಯಾತರನ್ನು ಹಿಂಸೆಗೆ ಗುರಿ ಮಾಡುವ ಸಾಧ್ಯತೆಗಳು ಹೆಚ್ಚಿರುತ್ತವೆ. ಹಾಗಾಗಿ ಮಾನವೀಯತೆಯ ಒಳಗೆ ನಾಡು ನುಡಿಯ ಕುರಿತು ಚಿಂತಿಸಬೇಕಾದ ಸೂಕ್ಷ್ಮತೆ ಇರಬೇಕಾಗುತ್ತದೆ. ಭಾರತದ ಭೌಗೋಳಿಕ ಪರಿಸರದ ವಿಂಗಡಣೆಯ ಗಡಿ ಪ್ರದೇಶದ ಜನರಲ್ಲಿ ಉಂಟಾಗುವ ಅತಂತ್ರ ಸ್ಥಿತಿಯನ್ನು ಮತ್ತು ಆ ಸಮಸ್ಯೆಯನ್ನು ಯಾವಾಗಲೂ ಜೀವಂತವಾಗಿ ಇರುವಂತೆ ನೋಡಿಕೊಳ್ಳುವ ರಾಜಕೀಯ ಪಕ್ಷಗಳನ್ನು ‘ಸರ್ವಜ್ಞ ತಿರುವಳ್ಳುವರ್' ಕವನ ವಿಡಂಬಿಸುತ್ತದೆ.

**‘ಸುಳಿದು ಬರುವ ಗಾಳಿ, ಹರಿವ ನೀರೊಂದೆ**

**ಎಲ್ಲಿದೆ ರಾಜ್ಯ ಬೇದದ ಬಿರುಕು ?**

**ಗಡಿ ವಿಭಜನೆಯಕೊರಳು ಕೊಳಕು ಸರಕು ?**

(ಸರ್ವಜ್ಞ-ತಿರುವಳ್ಳುವರ್, ಪು.ಸಂ- 17)

ಇಲ್ಲಿ ಮಣ್ಣಿನ ಬಣ್ಣ, ಬೆಳೆಯುವ ಬೆಳೆ ಒಂದೇ ರೀತಿ ಇರುತ್ತವೆ. ನಾವು ನಾವು ಮಾಡಿಕೊಂಡಿರುವ ಗೆರೆಗಳು ನಮ್ಮನ್ನೇ ನಾಶಮಾಡುತ್ತವೆ. ಸರ್ವಜ್ಞ ತಿರುವಳ್ಳುವರ್, ಬಸವಣ್ಣ, ಕಬೀರ ಇವರೆಲ್ಲರೂ ಸುಧಾರಣೆಗಾಗಿ ಹೋರಾಡಿದವರೇ. ಇವರು ಯಾವುದೇ ಜಾತಿ ಧರ್ಮಕ್ಕೆ ಸೀಮಿತವಲ್ಲ. ಕರ್ನಾಟಕ-ತಮಿಳುನಾಡಿನ ಜಲವಿವಾದ, ಕರ್ನಾಟಕದ ಎದುರು ಆಂಧ್ರ ಮತ್ತು ಮಹಾರಾಷ್ಟ್ರದ ಗಡಿವಿವಾದಗಳು ಇವತ್ತಿನ ಸಾಮಾಜಿಕ ಅರಾಜಕತೆಗೆ ಕಾರಣವಾಗಿವೆ. ಹಾಗಾಗಿ ನಮಗೆ ಇವತ್ತು ವಚನಗಳ, ತ್ರಿಪದಿಗಳ ನೈತಿಕತೆ, ಮಾನವೀಯತೆ, ಸಹಬಾಳ್ವೆ ಮತ್ತು ಸಮಾನತೆಯ ಪರಿಕಲ್ಪನೆಗಳ ಅನಿವಾರ್ಯತೆ ಇರುವುದರ ಕುರಿತು ಕಾವ್ಯ ಸ್ಪಂದಿಸುತ್ತಿದೆ.

ಪುರೋಹಿತಶಾಹಿ ಮತ್ತು ಹಿಂದುತ್ವ ರಾಜಕೀಯದ ಬಗೆಗೆ ಮುಖಾಮುಖಿಯಾಗುವ ‘ಕವಿತೆಯೊಳಗಿನ ಬುದ್ಧಯಾನ' ಕವನವು ಶೋಷಣೆಯ ಪರಿಹಾರಕ್ಕೆ ಮತ್ತು ಜಾಗೃತಿಗೆ ಸಾಹಿತ್ಯ ಸಹಕರಿಸುವ ಮೂಲಕ

ಸಾಂಸ್ಕೃತಿಕ ಬದಲಾವಣೆಗೆ ಕಾರಣವಾಗುವ ವಿವಿಧ ಮಾದರಿಗಳನ್ನು ಶೋಧಿಸುತ್ತದೆ. ಇತಿಹಾಸವನ್ನು ತಮಗೆ ಬೇಕಾದಂತೆ ಬರೆದುಕೊಂಡಿರುವ ಪುರೋಹಿತಶಾಹಿ ಮತ್ತು ಅಧಿಕಾರಿಶಾಹಿ ವರ್ಗವನ್ನು ಎದುರಿಸಲು ಲೇಖನಿ ಬಹಳ ಮುಖ್ಯ ಅಸ್ತ್ರ ಎಂಬುದು ಈ ಸಾಲುಗಳಲ್ಲಿ ಮೂಡಿದೆ.

**'ಧರ್ಮದೊಳಗಿನ ಸದುಪದೇಶವನ್ನೆಲ್ಲ**
**ತಿರುಚಿ ವಿಕಾರಗೊಳಿಸಿ**
**ಶಾಂತಿ ಪಾಠ ಮಾಡುವಾಗ**
**ದಾರಿಕಾಣದೆ ಜೀವಚ್ಛವವಾಗುತ್ತೇನೆ'**

(ಕವಿತೆಯೊಳಗಿನ ಬುದ್ಧಯಾನ, ಪು.ಸಂ- 16)

ಅಂದರೆ ಲಿಂಗ ಅಸಮಾನತೆಯಿಂದ ಹೆಣ್ಣು ಮಕ್ಕಳು, ಹಸಿವಿನಿಂದ ಬಡವರು, ಜಾತಿಯಿಂದ ಶೋಷಿತರು ನೋವು ಪಡುವಾಗ ಅವರನ್ನು ಜಾಗೃತರಾಗಿಸಲು ಬರಹ ಮತ್ತು ವಿದ್ಯೆ ಅನಿವಾರ್ಯ ಎಂಬುದು ಈ ಕವನದ ಧೋರಣೆಯಾಗಿದೆ.

ಚರಿತ್ರೆಯ ಮಹಾಪುರುಷರನ್ನು ಮತ್ತು ನಾಯಕರನ್ನು ವಸ್ತುವಾಗಿಸಿಕೊಂಡಿರುವ 'ನಡಿಗೆ' ಕವನವು ಮತ್ತೊಮ್ಮೆ ಇತಿಹಾಸವನ್ನು ಓದುಗನಿಗೆ ಪರಿಚಯಿಸುತ್ತದೆ. ಸಾಂಪ್ರದಾಯಿಕ ಮತ್ತು ಅಧಿಕಾರಿಶಾಹಿ ಧೋರಣೆಗಳಿಗೆ ಪರ್ಯಾಯವಾಗಿ ಎದುರಾದ ಅನೇಕ ಚಳವಳಿಯನ್ನು ಹಾಗೂ ಬಂಡಾಯವನ್ನು ನಿರೂಪಿಸುತ್ತದೆ. ವೈದಿಕಶಾಹಿ ಧೋರಣೆಗಳಿಗೆ ಮತ್ತು ಹಿಂಸೆಗೆ ಬೇಸತ್ತ ಸಿದ್ಧಾರ್ಥ ವೈಯಕ್ತಿಕ ಬದುಕನ್ನು ತೊರೆದು ಸಾಮೂಹಿಕ ಬದುಕಿನೆಡೆಗೆ ಸಾಗುತ್ತಾನೆ. ಅಧಿಕಾರ ಆಶೆಗಾಗಿ ಸಹೋದರರನ್ನ ಕೊಂದ ಬಾಹುಬಲಿ ರಾಜತ್ವವನ್ನು ತೊರೆದ, ಸಮಾನತೆಗಾಗಿ ಬಸವ ಕಲ್ಯಾಣವನ್ನು ಬಿಟ್ಟು ಸಾಮಾನ್ಯ ಜನರನ್ನು ಸೇರಿದಂತೆ ವಾಸ್ತವದ ಅರಾಜಕತೆಯ ವ್ಯವಸ್ಥೆಯನ್ನು ತೊಲಗಿಸಲು ಎಲ್ಲರೂ ಒಗ್ಗೂಡಬೇಕಿದೆ.

**'ನಡೆವವರು ನಡೆಯುತ್ತಲೇ ಇರಲಿ**
**ಕುಳಿತವರೆದ್ದು ನಡೆವವರ ಜೊತೆ ಸೇರಲಿ**
**ನಡೆದಾಡಿ ದೋಷ ನಿವಾರಿಸಿಕೊಂಡು**
**ನ್ಯಾಯ ನೀತಿಯ ಅಳವಡಿಸಿಕೊಂಡು'** (ನಡಿಗೆ, ಪು.ಸಂ - 21)

ಕವಿ ಇಲ್ಲಿ ಎಪ್ಪತ್ತರ ದಶಕದ ಚಳವಳಿಯ ತೀವ್ರತೆಯನ್ನು ಹೇಳುತ್ತಲೇ ಅದರಲ್ಲುಂಟಾಗಿರುವ ಭಿನ್ನತೆಗಳಿಗೆ ವಿಷಾದವನ್ನು ವ್ಯಕ್ತಪಡಿಸುತ್ತಿದ್ದಾನೆ. ಗಾಂಧಿಯ ಅಹಿಂಸೆ, ಅಂಬೇಡ್ಕರ್ ಅವರ ಜಾತಿ ವಿನಾಶ, ಭೂದಾನ ಚಳವಳಿ ನಡೆಸಿದ ವಿನೋಬಾಜಿ ಅವರ ಆಶಯಗಳು, ಧೋರಣೆಗಳು ಇವತ್ತು ಆಚರಣೆಗಳಾಗಿ ಮಾತ್ರ ಉಳಿದುಬಿಟ್ಟಿರುವ ಅಸಹಾಯಕತೆಯನ್ನು ಕಾವ್ಯ ಹೇಳುತ್ತಿದೆ. ತಮ್ಮದೇಯಾದ ಮುನಿಸುಗಳನ್ನು ಮರೆತು ಸಂಘಟನೆಗಳು ಸಾಮೂಹಿಕ ಕಾಳಜಿಯನ್ನು ಮುಖ್ಯವೆಂದು ಪರಿಗಣಿಸಬೇಕಿದೆ. ಹಿರಿಯ ಹೋರಾಟಗಾರರು ಯುವ ಸಮುದಾಯಗಳಿಗೆ ಹೋರಾಟದ ಸೂಕ್ಷ್ಮತೆಯನ್ನು ಕಲಿಸಿಕೊಟ್ಟಾಗ ಮಾತ್ರ ಇಂದಿನ

ಜಾತಿ ಆಚರಣೆ, ಮರ್ಯಾದ ಹತ್ಯೆ, ಕೋಮು ಗಲಭೆ ಮತ್ತು ಸಾಂಸ್ಕೃತಿಕ ಅಸಮಾನತೆಯನ್ನು ಎದುರಿಸಲು ಸಾಧ್ಯ ಎಂಬುದನ್ನು ಕಟ್ಟಿಕೊಡುತ್ತದೆ.

ಬಳಿಗಾರ್ ಅವರ ಆಯ್ದ ಕವನ ಸಂಕಲನದಲ್ಲಿ ಡಾ|| ರಾಜ್‌ಕುಮಾರ್ ಮತ್ತು ಚಂದ್ರಶೇಖರ ಕಂಬಾರ ಅವರ ವ್ಯಕ್ತಿಚಿತ್ರವನ್ನು ಕುರಿತ ಕವನಗಳಿದ್ದು ನಾಡು ನುಡಿಗೆ ಇವರ ಕೊಡುಗೆಗಳನ್ನು ಹೇಳುವ ಮೂಲಕ ಆದರ್ಶ ಪಾತ್ರಗಳಾಗಿ ಚಿತ್ರಿಸಿದ್ದಾರೆ. ಐವತ್ತರ ದಶಕದ ಕರ್ನಾಟಕದ ಏಕೀಕರಣ ಮತ್ತು ಗೋಕಾಕ್ ಚಳವಳಿಯಲ್ಲಿ ರಾಜ್‌ಕುಮಾರ್ ಅವರ ಭಾಗವಹಿಸುವಿಕೆ ಮತ್ತು ಅವರಿಗೆ ಲಭಿಸಿದ ಪ್ರಶಸ್ತಿಗಳ ಪರಿಚಯವಿದೆ. ಕಂಬಾರರು ಸಾಹಿತ್ಯ, ಸಿನಿಮಾ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಹೇಳುವ ಮೂಲಕ ನವವಸಾಹತುಶಾಹಿ ನಿಲುವುಗಳಿಗೆ ಪರ್ಯಾಯವಾಗಿ ದೇಸೀತನವನ್ನು ಪರಿಚಯಿಸಬೇಕಾದ ಅವಶ್ಯಕತೆಯನ್ನು ಈ ಕವನ ಹೇಳುತ್ತದೆ.

**'ಜಾನಪದ ಗಣಿಯೊಳಗಿಂದ ಹೆಕ್ಕಿ ತಂದ**
**ರತ್ನ ಹವಳಗಳನ್ನು ಕೆತ್ತಿ ಆವಿಷ್ಕರಿಸಿ**
**ನೈಪುಣ್ಯತೆಯ ಶಿಷ್ಟದಾರಕ್ಕೆ ಪೋಣಿಸಿ**
**ಸೌಂದರ್ಯ ವೃದ್ಧಿಸುವ ಕುಶಲಕರ್ಮಿ' (**ಕಂಬಾರರು, ಪು.ಸಂ- 36).

ಕಂಬಾರರು ಸಾಹಿತ್ಯ ಪ್ರಕಾರಗಳ ಮೂಲಕ ಜಾಗತಿಕ ಬದುಕಿಗೆ ಗಾಂಧಿ ಬಯಸಿದ ಗ್ರಾಮ ಸಮಾಜವನ್ನು ಮುಖಾಮುಖಿಯಾಗಿಸಿದವರು. ನಮ್ಮ ದೇಸೀತನದಲ್ಲೇ ನಮ್ಮ ಉಳಿಗಾಲವಿರುವುದು ಎಂಬ ಆಶಯವಿರುವ ಕಂಬಾರರ ಸಾಹಿತ್ಯ ನಮಗೆ ಹೆಚ್ಚು ಪ್ರಸ್ತುತ ಎನಿಸುತ್ತದೆ. ಜಾನಪದ ಸಾಹಿತ್ಯ ಪ್ರಕಾರವನ್ನು ಬಳಸಿಕೊಳ್ಳುವ ಮೂಲಕ ಜಾಗತೀಕರಣ, ಆಧುನಿಕತೆ ಮತ್ತು ಬಂಡವಾಳಶಾಹಿ ಧೋರಣೆಗಳ ಯುದ್ಧಾಕಾಂಕ್ಷೆಯನ್ನು ಪ್ರತಿಭಟಿಸಿದವರು ಕಂಬಾರರು. ಇವರ ವ್ಯಕ್ತಿಚಿತ್ರವನ್ನು ನೀಡುವ ಈ ಕಾವ್ಯವು ಮುಖ್ಯ ಎನಿಸುತ್ತದೆ.

ಮನು ಬಳಿಗಾರ್ ಅವರ ಈ ಎಲ್ಲಾ ಕವನಗಳ ಭಾಷೆ ಸರಳವಾಗಿದ್ದು ಓದುಗನ್ನು ಬಹು ಬೇಗ ಆವರಿಸಿಕೊಳ್ಳುತ್ತವೆ. ಚರಿತ್ರೆಯ ಹಾಗೂ ಪುರಾಣಗಳ ಪಾತ್ರಗಳನ್ನು ಸಮಕಾಲೀನಗೊಳಿಸುವ ಮೂಲಕ ಮಾನವೀಯ ನೆಲೆಯಲ್ಲಿ ಮನುಷ್ಯ ಸಮಾಜವನ್ನು ನಿರ್ಮಿಸಬೇಕೆನ್ನುವ ಆಶಯವನ್ನು ಇವು ಒಳಗೊಂಡಿವೆ. ಕಾವ್ಯ ಮೀಮಾಂಸೆಯ ನಿಯಮಗಳನ್ನು ಮೀರಿ ಇಲ್ಲಿಯ ಕಾವ್ಯದ ಮುಖ್ಯ ಧೋರಣೆಗಳನ್ನು ಗ್ರಹಿಸಬೇಕಾಗುತ್ತದೆ. ರವೀಂದ್ರನಾಥ ಠಾಗೂರರ ಪದ್ಯಗಳನ್ನು ಅನುವಾದ ಮಾಡುವ ಮೂಲಕ ಜಾಗತಿಕ ಮಟ್ಟದಲ್ಲಿ ಶಾಂತಿಯ ಅನಿವಾರ್ಯತೆಯನ್ನು ಕವಿ ಹೇಳುತ್ತಾರೆ. ಅಲ್ಲದೆ ಈ ಕವನ ಸಂಕಲನದ ಎಲ್ಲಾ ಕಾವ್ಯಗಳು ಮಾನವೀಯತೆ, ಕ್ರಾಂತಿ, ಸಮಾನತೆ ಮತ್ತು ಸಮಾಜವಾದವನ್ನು ತಮ್ಮ ತಾತ್ವಿಕ ಧೋರಣೆಗಳಾಗಿಸಿಕೊಂಡಿವೆ. ಹಾಗಾಗಿ ಇಲ್ಲಿಯ ವಸ್ತು ಹಾಗೂ ಅದರ ಅಭಿವ್ಯಕ್ತತೆಯಲ್ಲಿ ಜೀವಪರ

ಕಾಳಜಿಗಳನ್ನು ಗುರುತಿಸಬಹುದಾಗಿದ್ದು ಇಂದಿನ ಅನೇಕ ವಿಕೃತ ಸಮಸ್ಯೆಗಳಿಗೆ ಈ ಕವನಗಳಲ್ಲಿ ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ.

**ಆಕರಗ್ರಂಥ**

ಮನು ಬಳಿಗಾರ್ ಅವರ ಆಯ್ದ ಕವನಗಳು- ಮನು ಬಳಿಗಾರ್, ಎರಡನೆಯ ಮುದ್ರಣ - 2017, ಸಪ್ನ ಬುಕ್ ಹೌಸ್, ಬೆಂಗಳೂರು-560009.

❖

# ಡಾ. ಮನು ಬಳಿಗಾರ್ 'ಕಾವ್ಯ ಕಾಯಕ'

ಸಂಗಮೇಶ ಉಪಾಸೆ

ಕಲೆ, ಸಾಹಿತ್ಯ, ಸಂಗೀತಗಳು ಮನುಷ್ಯನ ಮನಸ್ಸನ್ನು ಮುದಗೊಳಿಸುವ, ಮನಸ್ಸನ್ನು ಅರಳಿಸುವ, ಮನಸ್ಸಿನ ಭಾರ ಇಳಿಸುವ, ಆ ಮೂಲಕ ಮನುಷ್ಯನ ಬದುಕಿಗೆ ಪೂರಕವಾಗಿ ಬದುಕು ಕಟ್ಟಿಕೊಳ್ಳಲು ಕಾರಣವಾದ ಪ್ರೇರಕ ಶಕ್ತಿಗಳು. ಇವು ಮನುಷ್ಯನ ಸಾಂಸ್ಕೃತಿಕ ಭಾಗಗಳು. ಇವುಗಳಲ್ಲಿ ಸಾಹಿತ್ಯ ಉಳಿದವುಗಳಿಂದ ಪ್ರಮುಖ ಸ್ಥಾನ ಪಡೆದಿದೆ. 'ಸಾಹಿತ್ಯ' ಎನ್ನುವುದು ಭಾವಾಭಿವ್ಯಕ್ತಿಯ ಭಾಷಾ ರಚನೆ. ಭಾವನೆಗಳನ್ನು ಭಾಷೆಯ ಶಬ್ದ, ಅರ್ಥ, ನಾದಗಳಲ್ಲಿ ತುಂಬಿ ವಿಶಿಷ್ಟ ಶೈಲಿಗಳ ಪ್ರತಿಭೆ ಮೂಲಕ ಕಟ್ಟಿಕೊಡುವ ಭಾಷಾ ಶರೀರ! ಸಾಹಿತ್ಯದಲ್ಲಿ ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಲೇಖನ, ರೂಪಕ, ವಿಮರ್ಷೆ ಮುಂತಾದ ಪ್ರಕಾರಗಳು ಸೇರಿವೆ. ಭಾಷೆ ಹುಟ್ಟಿದಾಗಿಂದಲೂ ಈ ಭಾಷಾಭಿವ್ಯಕ್ತಿ ಒಂದಿಲ್ಲೊಂದು ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತಾ ಬಂದಿದೆ. ಹಿಂದಿನಿಂದಲೂ ಶಾಸನಗಳಲ್ಲಿ, ಶಿಲ್ಪಗಳಲ್ಲಿ, ಗುಡಿಗೋಪುರಗಳಲ್ಲಿ ಅಭಿವ್ಯಕ್ತಿಗೊಂಡಿವೆ. ಕಾವ್ಯ ರಚನೆಯ ಪ್ರತಿಭೆಯಿಂದಾಗಿಯೇ ಕವಿಗೆ ಪ್ರಮುಖ ಸ್ಥಾನವಿದೆ. ಈ ಹಿಂದೆ 'ಕಾವ್ಯ ಮೀಮಾಂಸೆ'ಯನುಗುಣವಾಗಿಯೇ ಕಾವ್ಯ ರಚನೆ ಮಾಡಬೇಕಾಗಿತ್ತು. ಛಂದಸ್ಸು, ಮಾತ್ರೆ, ಗಣ, ಆದಿಪ್ರಾಸ, ಅಂತ್ಯಪ್ರಾಸ, ಪದ್ಯ, ನಡುವೆ ಗದ್ಯ, ದ್ವಿಪದಿ, ತ್ರಿಪದಿ, ಚೌಪದಿ ಷಟ್ಪದಿ, ಚಂಪೂ ಮುಂತಾದ ಪ್ರಕಾರಗಳಲ್ಲಿ ಹಿಂದೆ ಆದಿಕವಿ ಪಂಪ, ರನ್ನ, ಪೊನ್ನ, ಜನ್ನರ ಪ್ರಾಚೀನ ಕಾಲದಲ್ಲಿ ಕಾವ್ಯ ರಚನೆ ಆಗಿವೆ. ಆದರೆ ಆಧುನಿಕವಾಗಿ ಮುಕ್ತ ಛಂದಸ್ಸಿನ ಮೂಲಕ ಕಾವ್ಯ ರಚನೆ ಪ್ರಾರಂಭವಾಗಿ, ಅಂದರೆ ಹನ್ನೆರಡನೆಯ ಶತಮಾನದ ಶರಣರ ವಚನ ಸಾಹಿತ್ಯ, ಹದಿನೈದನೆಯ ಶತಮಾನದ ದಾಸ ಸಾಹಿತ್ಯ, ಆಧುನಿಕವಾಗಿ ನವೋದಯ, ನವ್ಯ, ದಲಿತ, ಬಂಡಾಯ, ಮಹಿಳಾ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ ಮುಕ್ತ ಛಂದಸ್ಸಿನ ಮೂಲಕ ರಚನೆಗೊಂಡಿದೆ.

ಕಾವ್ಯ ಇಂದು ತನ್ನ ಮೂಲ ರೂಪ ಕಳೆದುಕೊಂಡು ಹಿನ್ನೆಲೆಗೆ ಸರಿದು, ಕಥೆ, ಕಾದಂಬರಿ, ನಾಟಕ, ವಿಮರ್ಶೆಗಳು ಮುನ್ನೆಲೆಗೆ ಬಂದಿವೆ ಎನಿಸುತ್ತದೆ. ಕಾವ್ಯಕ್ಕೆ ಮತ್ತು ಕವಿಗೆ ಇಂದು ಮಹತ್ವವಿದೆ; ಆದರೆ ಮಾರುಕಟ್ಟೆ ಇಲ್ಲ! ಕಥೆ, ಕಾದಂಬರಿ ನಾಟಕಗಳನ್ನು ಪ್ರಕಟಿಸುವಷ್ಟು ಕಾವ್ಯ ಪ್ರಕಟಿಸಲು ಹಿಂದೆ ಮುಂದೆ ನೋಡುವ ಕಾಲ ಬಂದಿದೆ. ಕಾವ್ಯ ಪ್ರಕಟಿಸಿದರೆ ಪ್ರಕಟಿಸಿದ ಖರ್ಚು ಮರಳಿ ಬರುವುದಿಲ್ಲವೆಂದು! ಹಾಡು ಗಬ್ಬವಾದರೆ ಮಾತ್ರ ಜನ ಕೇಳುತ್ತಾರೆ. ಕಾವ್ಯ ಕವಿತೆಗಳನ್ನು ಗೀತೆಗಳಾಗಿ ಸಂಗೀತಕ್ಕೆ ಅಳವಡಿಸಿ ಇಂದು ಜನರಿಗೆ ಕೇಳಿಸಬೇಕಾಗಿದೆ. ಇಲ್ಲವಾದರೆ ಕವಿ ಬರೆದ ಕವಿತೆ, ಕವಿಯ ಹಾಗೂ ಅನಿವಾರ್ಯವಾಗಿ ಅವರ ಮನೆಯವರ ಕಿವಿಗಳಿಗೆ ಸೀಮಿತವಾಗಿ ಪ್ರಕಾಶನ ಭಾಗ್ಯ ಬಂದರೆ ಪುಸ್ತಕಗಳಲ್ಲಿ ಪ್ರಕಟಗೊಂಡು ಮೂಲೆ ಗುಂಪಾಗುವ ಪರಿಸ್ಥಿತಿ ಬಂದಿದೆ. ಪ್ರಕಟಣೆ ಭಾಗ್ಯವಿಲ್ಲದೆ ಹೋದರೆ, ಹೇಗೆ ಹುಟ್ಟುತ್ತದೋ ಹಾಗೆ ಅಕಾಲಿಕ ಮರಣಹೊಂದಿ ಮಸಣ ಸೇರಬೇಕಾಗುತ್ತದೆ. ಮಾಧ್ಯಮಗಳ ಬೆಳವಣಿಗೆಯಿಂದ ಇಂದು ಓದುವ ಪರಿಸರ ಕಡಿಮೆಯಾಗಿದೆ. 'ಓದು ಮಾಧ್ಯಮ' ಇಂದು 'ಕೇಳು ಮಾಧ್ಯಮ'ವಾಗಿ ಬದಲಾಗಿ 'ನೋಡು ಮಾಧ್ಯಮ'ವಾಗಿ ರೂಪಾಂತರ ಹೊಂದಿದೆ. ಓದುವ ಸರಕೆಲ್ಲ ಇಂದು ನೋಡುವ ಅಥವಾ ಕೇಳುವ ಸರಕಾಗಿ ಬದಲಾಯಿಸುವುದು ಅನಿವಾರ್ಯವಾಗಿದೆ.

'ಮನು ಬಳಿಗಾರ್ ಅವರ ಆಯ್ದ ಕವನಗಳು' ಸಂಗ್ರಹದಲ್ಲಿ ಅವರೇ ತಮ್ಮ 'ಎರಡು ಮಾತು' ಅಲ್ಲಿ ಹೇಳಿದಂತೆ, ಕಳೆದ ನಾಲ್ಕು ದಶಕದಲ್ಲಿ ಅವರು ಹೊರತಂದ ಐದು ಕವನ ಸಂಗ್ರಹಗಳಿಂದ ಆಯ್ದ ಕೆಲ ಪ್ರಾತಿನಿಧಿಕ ಕವಿತೆಗಳ ಸಂಗ್ರಹವಿದು. ನನ್ನ ನಿನ್ನೊಳಗೆ, ಸಾಕ್ಷರ ತ್ರಿಪದಿಗಳು, ಎದ್ದವರು ಬಿದ್ದವರು, ನಯಾಗರಾ ಮತ್ತು ಜಲಪಾತಗಳು, ರವೀಂದ್ರರ ಮಿಂಚಿನ ಹನಿಗಳು ಮತ್ತು ಅಪ್ಪ ಸಂಗ್ರಹಗಳಿಂದ ಒಟ್ಟು ಎಂಭತ್ತು ರಚನೆಗಳಿವೆ. ಇದರಲ್ಲಿ ಕೃಷ್ಣ ಸುಂದರಿ, ಶಾಂತಿನಿಕೇತನ, ತಾಜ್‌ಮಹಲ್, ರವೀಂದ್ರರ ಮಿಂಚಿನ ಹನಿಗಳನ್ನು ಬಂಗಾಲಿ ಲೇಖಕ ರವೀಂದ್ರನಾಥ ಠಾಕೂರ್‌ರವರ ಮೂಲ ರಚನೆಗಳನ್ನು ಭಾವಾನುವಾದ ಮಾಡಲಾಗಿದೆ. ಹತ್ತೊಂಬತ್ತನೂರ ಎಂಭತ್ತಮೂರರಲ್ಲಿ ಪ್ರಕಟಗೊಂಡ 'ನನ್ನ ನಿನ್ನೊಳಗೆ' ಸಂಗ್ರಹದಲ್ಲಿನ ತಲೆಬರಹವೇ ಹೇಳುವಂತೆ, ಬಹುಪಾಲು ಗಂಡ ಹೆಂಡಿರ ಮಧ್ಯದ ದಾಂಪತ್ಯದ ಸಖ-ಸಖಿ ಗೀತಗಳಿವೆ. ಜಗತ್ತಿನಲ್ಲಿ ಯಾವ ವಿಜ್ಞಾನಿಗಳು ಏನೇ ಸೃಷ್ಟಿಸಿದರೂ, ಹೊಸದಾಗಿ ಏನೇ ಕಂಡು ಹಿಡಿದರೂ, ನ್ಯೂಟನ್, ಎಡಿಸನ್, ಐನ್‌ಸ್ಟೀನ್, ರಾಮನ್, ಕ್ಯೂರಿ, ಜಗದೀಶ್ ಚಂದ್ರ ಬೋಸ್ ಕಂಡು ಹಿಡಿದಿರುವುದಕ್ಕಿಂತ,

**'ನಾನೂ ನಿನ್ನೊಡನೆ**
**ಒಂದಾಗಿ ಉಸಿರಾಡಿಸಿ**
**ಬೆವರ ಸುರಿಸಿ ಸೃಷ್ಟಿಸುವೆ**
**ಹೊಸ ಜೀವ**
**ನಿರ್ಜೀವಕ್ಕಿಂತ ಸಜೀವ ಮೇಲು'**

ಎಂಬ 'ಯಾರು ಹೆಚ್ಚು' ರಚನೆಯಲ್ಲಿ ಹೊಸ ಜೀವಕ್ಕೆ ಜೀವ ನೀಡುವ ನಾನೇ ಎಲ್ಲರಿಗಿಂತ ಹೆಚ್ಚು ಎಂಬ ಕವಿಯ ಭಾವ ಪ್ರಕಟಗೊಂಡಿದೆ. ಸರಕಾರಿ ನೌಕರಿಗೆ ಸೇರಿದ ಹೊಸದರಲ್ಲಿ ಹೊಸ ಹುಮ್ಮಸ್ಸಿನಿಂದ, ಹುರುಪಿನಿಂದ, ಎಲ್ಲಾ ಬದಲಾಯಿಸಿ ಬಿಡುತ್ತೇನೆ, ಜಗತ್ತನ್ನೇ ಗೆಲ್ಲುತ್ತೇನೆ ಎಂದು ಹೊರಟ ಕಲಿಪುರುಷ ಸಮುದ್ರದ ಆಳ, ಅಗಲ ಗೊತ್ತಿಲ್ಲದೆ ನೀರಿಗಿಳಿದಾಗ ಎದುರಾಗುವ ಎಲ್ಲ ಸಮಸ್ಯೆಗಳಿಗೆ ಹಲ್ಲು ಮುರಿದ ಹಾವಿನಂತಾಗುವುದು, ಕಿವಿಯಿಲ್ಲದ ಕಿವುಡನಂತಾದ ಭಾವ 'ಸರಕಾರಿ ನೌಕರನ ಸ್ವಗತ ಗೀತೆ' ಯಲ್ಲಿ ಹಿಡಿದಿಡಲಾಗಿದೆ. 'ಬಿಸಿಲುಗಂಬಳಿ ಹೊದ್ದವರು' ಕವಿತೆಯಲ್ಲಿ ತನ್ನ ತಲೆ ಬರಹದಲ್ಲೇ ರೂಪಕವಾಗಿ ಉತ್ತರ ಕರ್ನಾಟಕದ ಜನರ ಕಷ್ಟಗಳನ್ನು ಕಟ್ಟಿಕೊಡಲಾಗಿದೆ.

**'ಬನತುಂಬಿ ನಿಂತಾಗ**
**ಧಣಿ ಮನಸು ಬಂದಾಗ**
**ಭರ್ಪೂರ ಉಣ್ಣುವೆವು**
**ಬರಗಾಲ ಬಂದರೆ**
**ಧಣಿ ಮುನಿಸುಗೊಂಡರೆ**
**ಬರೀಮೈಲೆ ಇದ್ದೇವು'**

ಎಂಬ ಭಾವನೆಗಳಲ್ಲಿ ಉತ್ತರ ಕರ್ನಾಟಕ ಭಾಗದ ಜನರು ಉಂಡರೆ ಹಗಲು, ಉಪವಾಸವಿದ್ದರೆ ರಾತ್ರಿಯಾಗಿ ಬದುಕಿನ ಮಗ್ಗುಲಲ್ಲಿ ಹಗಲು ರಾತ್ರಿಗಳು ಮಾತ್ರ ಅವರಿಗೆ ಸಮವಾಗಿ ಹಂಚಿಕೆಯಾಗಿ ಸಮಾನತೆ ಸಾರಿರುವುದರ ವ್ಯಂಗ್ಯವಾಗಿದೆ. ಎರಡು ಸಾವಿರ ನಾಲ್ಕರಲ್ಲಿ ಪ್ರಕಟಗೊಂಡ 'ರವೀಂದ್ರರ ಮಿಂಚಿನ ಹನಿಗಳು' ಸಂಗ್ರಹದಲ್ಲಿರುವ,

**'ದೇವರು ತನ್ನ ದೇಗುಲವು**
**ಪ್ರೀತಿ ಪ್ರೇಮಗಳಿಂದ ಕಟ್ಟಲ್ಪಡಬೇಕೆಂದು**
**ಕಾಯುತ್ತಿದ್ದರೆ**
**ಜನ ಕಲ್ಲನ್ನು ತರುತ್ತಾರೆ'**

ಈ ಚುಟುಕಿನಲ್ಲಿ ಭಕ್ತರ ಭಾಯಾಡಂಬರವನ್ನು ಮತ್ತು ದೇವರ ನಿರಾಡಂಬರವನ್ನು ಏಕಕಾಲಕ್ಕೆ ಧ್ವನಿಸುತ್ತದೆ. ಮತ್ತು ಅಳಿವಿರುವ ಸ್ಥಾವರವನ್ನು ನಿರಾಕರಿಸಿ, ಅಳಿಯದ ಪ್ರೀತಿ, ಪ್ರೇಮ ಭಾವಗಳ ಜಂಗಮವನ್ನು ಅಂಗೀಕರಿಸುತ್ತದೆ. ಹಾಗೆಯೇ,

'ಸಾವಿನ ಭಾವ ಒಂದು
ಬದುಕಿನ ಭಾವ ಹಲವಾರು
ದೇವರು ಸತ್ತಾಗ ಧರ್ಮ ಒಂದಾಗುತ್ತದೆ'

ಈ ರಚನೆಯಲ್ಲಿ ಬದುಕಿನ ಹಲವು ಮುಖಗಳ ಅನೇಕತೆಯಲ್ಲಿ, ದೇವರು, ಧರ್ಮಗಳ ವಿವಿಧತೆಯಲ್ಲಿ ಏಕತೆಯನ್ನು ಕಾಣಲು ತೋರಿಕೆಯ ದೇವರು ಸತ್ತಾಗ ಮಾತ್ರ ಮಾನವ ಧರ್ಮ ಒಂದಾಗಲು ಸಾಧ್ಯವೆಂದು ಹೇಳಿರುವುದು ಸಾವಿನಲ್ಲಿ ಎಲ್ಲವೂ ಒಂದಾಗುವ, ಸಾವಿನಲ್ಲಿ ಎಲ್ಲರೂ ಸಮಾನರಾಗುವ ಪರಿ ಎದ್ದು ಕಾಣುತ್ತದೆ.

**‘ನನ್ನ ಕಲ್ಪನೆಗಳು**
**ಮಿಂಚುಹುಳಗಳು**
**ಕತ್ತಲಲ್ಲಿ ಮಿನಿಗುವ**
**ಜೀವಂತ ಬೆಳಕಿನ ಬಿಂದುಗಳು'**

ಎನ್ನುವ ಈ ರಚನೆಯಲ್ಲಿ ಬದುಕಿನ ಕತ್ತಲಲ್ಲಿ ನುಡಿಸುವ ಭಾವ-ರಾಗಳಿಗೆ ಬೆಳಕಾಗುವ ಭಾವನೆಗಳೇ ಬೆಳಕಾಗಿ ದಾರಿ ದೀಪವಾಗುವ ಪರಿಯಿದೆ. ಕತ್ತಲೆ ಮತ್ತು ಬೆಳಕಿನ ಮಧ್ಯವಿರುವ ಬದುಕಿನ ಭಾವದ ಕಲ್ಪನೆಗಳು ಕತ್ತಲಲ್ಲಿ ಬೆಳಕಿನ ಬಿಂದುಗಳಾಗಿ ಬದುಕಿಗೆ ದಿಕ್ಸೂಚಿಯಾಗುವ ನೋಟವಿದೆ.

**‘ಒಂಟಿಯಾಗಿದ್ದರೂ**
**ಪುಷ್ಪ**
**ಬಹುಸಂಖ್ಯಾತ ಮುಳ್ಳುಗಳ ಬಗ್ಗೆ**
**ಅಸೂಯೆ ಪಡಬೇಕಿಲ್ಲ'**

ಎನ್ನುವ ಮಾತುಗಳಲ್ಲಿ ಭಾಳಷ್ಟು ಅರ್ಥಗಳು ಅಡಗಿವೆ ಎನಿಸುತ್ತದೆ. ಯಾವುದೇ ಬಹುಸಂಖ್ಯಾತರ ಮಧ್ಯ ಇರುವ ಅಲ್ಪಸಂಖ್ಯಾತರು, ಪುರುಷ ಪ್ರಧಾನ ಸಮಾಜದೊಳಗಿರುವ ಮಹಿಳೆಯರು, ಶಾಂತಿಪ್ರಿಯರ ಮಧ್ಯದಲ್ಲಿರುವ ಅಶಾಂತಿಪ್ರಿಯರು, ಉಳ್ಳವರ ಮಧ್ಯದಲ್ಲಿರುವ ಇಲ್ಲದವರು, ಭ್ರಷ್ಟರ ಮಧ್ಯದಲ್ಲಿರುವ ಪ್ರಾಮಾಣಿಕರು ‘ಪುಷ್ಪ'ದ ರೀತಿ ವರ್ತಿಸಬೇಕು ಎನ್ನುವ ಧೈರ್ಯ ತುಂಬುತ್ತದೆ ಕವಿತೆ! ಎರಡು ಸಾವಿರದ ಎರಡರಲ್ಲಿ ಪ್ರಕಟಣೆಗೊಂಡ ‘ಅಪ್ಪ' ಕವನ ಸಂಗ್ರಹದಲ್ಲಿರುವ ‘ಅಪ್ಪ ಅಗ್ನಿದೇವ' ದಲ್ಲಿ,

**‘ಅದಕ್ಕಾಗಿಯೇ ಅಪ್ಪನೆಂದರೆ ಹಿತವಾದ ಬೆಂಕಿ**
**ನಮಗೆ ಒಲಿದ ಅಗ್ನಿದೇವ'**

ಎನ್ನುವ ರಚನೆಯಲ್ಲಿ ಅಪ್ಪನ ಕೋಪ, ತಾಪಗಳನ್ನು ಕಟ್ಟಿಕೊಡುವುದರೊಂದಿಗೆ ಅವನನ್ನು ಬೆಂಕಿಯ ಚಂಡಿಗೆ ಹೋಲಿಸಲಾಗಿದೆ. ಆದರೆ ಇದು ಸುಡುವ ಬೆಂಕಿ ಚಂಡಾಗಿರದೆ, ಕಷ್ಟ, ನೋವು, ಚಳಿ, ಮಳೆ, ಗಾಳಿ, ಬಿಸಿಲು ಬಂದಾಗ ಹಿತ ನೀಡುವ ಆಸರೆಯಾಗುವ, ಮಾರ್ಗದರ್ಶನ ಮಾಡುವ ಅಗ್ನಿದೇವನಾಗಿ ಪರಿವರ್ತನೆಯಾಗುವ ಪರಿಯಿದೆ.

**‘ಅಪ್ಪ ಜೀವನ ಪರಿಯಂತ**
**ಕೇವಲ ಎರಡನ್ನೇ ಹದ ಮಾಡುತ್ತಿದ್ದ**
**ಒಂದು : ಭೂಮಿ**

**ಎರಡು : ಮಕ್ಕಳು'**

ಎನ್ನುವ ರಚನೆಯಲ್ಲಿ ಅಪ್ಪನ ಹದ ಮಾಡುವಿಕೆಯ ಮಿತಿಯನ್ನು ಹೇಳುವುದರ ಜೊತೆಗೆ ಭೂಮಿ ಮತ್ತು ಮಕ್ಕಳ ಮೇಲೆ ಅಪ್ಪನಿಗಿರುವ ಅಪಾರವಾದ ನಂಬಿಕೆಯನ್ನು, ಬದುಕಿನ ಕನಸುಗಳನ್ನು ಮಕ್ಕಳ ಮನಸ್ಸುಗಳಲ್ಲಿ ಬಿತ್ತಿ ಭವಿಷ್ಯದಲ್ಲಿ ಬೆಳೆ ತೆಗೆಯುವ ಆಸೆಯ ರೀತಿ ಮತ್ತು ಭೂಮಿ ಮತ್ತು ಮಕ್ಕಳು ಎರಡು ಫಲವತ್ತಾದ ನೆಲಗಳು ಎನ್ನುವ ಅರ್ಥದಲ್ಲಿ ಭೂಮಿಯೊಂದಿಗೆ ಮಕ್ಕಳಲ್ಲೂ ಕನಸುಗಳನ್ನು ಬಿತ್ತಿ ಬೆಳೆ ತೆಗೆದ ಪರಿ ಎದ್ದು ಕಾಣುತ್ತದೆ. ಸಾವಿರದ ಒಂಬೈನೂರ ತೊಂಭತ್ತನಾಲ್ಕರಲ್ಲಿ ಪ್ರಕಟವಾದ 'ಎದ್ದವರು ಬಿದ್ದವರು' ಕವನ ಸಂಗ್ರಹದಲ್ಲಿ ಉಳ್ಳವರು ಮತ್ತು ಇಲ್ಲದವರನ್ನು ಹಂಗಿಸುವ ರೀತಿ, 'ನಾನು ಮತ್ತು ನನ್ನ ಕೆಳಗಿನವರು' ಕವಿತೆಯಲ್ಲಿ ಸರಕಾರಿ ಅಧಿಕಾರಿ ಮತ್ತು ಸಿಬ್ಬಂದಿಗಳ ಮಧ್ಯವಿರುವ ತಾರತಮ್ಯವನ್ನು, 'ತಾಯಿ ತೆರೇಸ' ದಲ್ಲಿ ಮಾತೃ ಹೃದಯವನ್ನು, 'ಪ್ರೇಮ ಕಾಮ'ದಲ್ಲಿ ಪ್ರೇಮ ಕಾಮಗಳ ಮುಖಗಳನ್ನು, 'ಸಾವು' ಅಲ್ಲಿ ಸಾವನ್ನು ವ್ಯಾಖ್ಯಾನಿಸುವ ಪರಿ, 'ಶರೀಫ'ದಲ್ಲಿ ಭಾವೈಕ್ಯತೆಯ ಭಾವವನ್ನು ಕಾಣಬಹುದಾಗಿದೆ. ಸಾವಿರದ ಒಂಬೈನೂರ ತೊಂಭತ್ತೆಂಟರಲ್ಲಿ ಪ್ರಕಟವಾದ 'ನಯಾಗರಾ ಜಲಪಾತಗಳು' ಕವನ ಸಂಗ್ರಹದಲ್ಲಿ ನಯಾಗರಾ ಜಲಪಾತದ ವರ್ಣನೆ ಮತ್ತು 'ಯುದ್ದದ ಹಾಡು' ದಲ್ಲಿ

**'ವಕ್ರವಾದ ನಡವು ನಿಕೃತ ಕೈ ಕಾಲುಗಳು**
**ನಿಷ್ಕ್ರಿಯ ಎದೆ ಸಿರ ಸಂದುಗಳು**
**ಅಂಗಾಂಗಗಳಲ್ಲವಿವು ಭಂಗ ಮುದ್ರೆಗಳು**
**ಸಂಗ ಮಾಡಿದ ಸಮರ ಕೊಡುಗೆಗಳು'**

ಎಂಬ ಸಾಲುಗಳಲ್ಲಿ ದೇಹದ ಅಂಗಾಂಗಗಳ ನ್ಯೂನ್ಯತೆ ಮತ್ತು ಅದಕ್ಕೆ ಕಾರಣವಾದ ಭೀಕರತೆಯನ್ನೂ ಲೇಖಕರು ವಿಯೆಟ್ನಾಮಿನ ಹೊಚಿಮಿನ್ ನಗರದ ಆಸ್ಪತ್ರೆಯಲ್ಲಿ ಅಮೇರಿಕಾ ಮತ್ತು ವಿಯೆಟ್ನಾಂ ಯುದ್ಧದ ಉತ್ಪನ್ನವಾಗಿ ಇಂದಿಗೂ ಮುಂದುವರೆದ ದೈಹಿಕ ಅಂಗವಿಕಲತೆಯ ಜೊತೆಗೆ ಅವರ ಬದುಕಿನ ಅಂಗವಿಕಲತೆಯನ್ನು ಎತ್ತಿ ಹೇಳುತ್ತದೆ. 'ಜ್ಯೋತಿಷಿಯ ಹೊಸ ಫಾರ್ಮುಲಾ' ದಲ್ಲಿ ಜ್ಯೋತಿಷಿಗಳ ಸಮಯ ಸಾಧಕತೆಯನ್ನು, 'ಮಹಾಸತಿಯರ ಪರಂಪರೆ'ಯಲ್ಲಿ ಯಶೋಧರೆಯನ್ನು ಮರೆತ ಬುದ್ಧ, ಸೀತೆಯನ್ನು ಮರೆತ ರಾಮ, ದ್ರೌಪದಿ ಮರೆತ ಪಾಂಡವರು, ಕಸ್ತೂರಿಯನ್ನು ಮರೆತ ಗಾಂಧಿ ಮುಂತಾದವರು ಹೆಣ್ಣಿನ ಹಿತಾಸಕ್ತಿ ನಿರಾಕರಣೆ ದೋಣಿಯಲ್ಲಿ ಪಯಣಿಸಿದವರನ್ನು ವಿಢಂಬಿಸಲಾಗಿದೆ. 'ಭಾಷಾ ವೈಚಿತ್ರ್ಯ' ದಲ್ಲಿ,

**'ತಿಳಿದರೆ ಸ್ವದೇಶಿ**
**ತಿಳಿಯದಿರೆ ವಿದೇಶಿ**
**ಪರದೇಶಿ'**

ಎನ್ನುವಲ್ಲಿ ಭಾಷಾ ವ್ಯತ್ಯಾಸವನ್ನು ಸರಳವಾಗಿ ಕಟ್ಟಿಕೊಟ್ಟಿದ್ದಾರೆ ಎನಿಸುತ್ತದೆ. 'ನಾವೂ ಇರಬೇಕು' ರಚನೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳು ಯೋಜನೆ ರೂಪಿಸಿ, ಹಲವಾರು ವರ್ಷಗಳಿಂದ ಮಾಡದ

ಅಭಿವೃದ್ಧಿಯನ್ನು ಮತ್ತು ಎಷ್ಟೇ ಯೋಜನೆಗಳು ರೂಪಿಸಿದರೂ ಇನ್ನೂ ಹಾಗೇ ಉಳಿದ ಸಮಸ್ಯೆಗಳನ್ನು, ನಾವು ಎಷ್ಟೇ ಅಭಿವೃದ್ಧಿ ಮಾಡಿದರೂ ಮಹಡಿಗಳ ಮೇಲೆ ಮಹಡಿ ಕಟ್ಟಿದರೂ ಹಾಗೇ ಉಳಿದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗಿದೆ. 'ದಲಿತರ ಮಹಿಮೆ'ಯಲ್ಲಿ ದಲಿತರ ಬಗ್ಗೆ ಎಷ್ಟೇ ಯೋಜನೆ, ಮೀಸಲಾತಿ, ಭೋಧನೆ, ಸಂಶೋಧನೆ, ಬರಹಗಳು ಬಂದರೂ ದಲಿತರ ಒಡಲುರಿ ಇನ್ನೂ ಒಂಚೂರು ಆರಿಲ್ಲ ಎಂಬುದನ್ನು, 'ಬರೆಯಬೇಕಿದೆ ಕವನ'ದಲ್ಲಿ ಕವನ ಯಾವುದೇ ಬದಲಾವಣೆ ಮಾಡಲು ಬರೆಯುವುದಿಲ್ಲ, ಕವನ ಬರೆಯುವುದರಿಂದ ಯಾವುದೇ ಬದಲಾವಣೆ ಆಗುವುದಿಲ್ಲ ಎನ್ನುವ ರೀತಿ,

**'ಹೊಸೆಯ ಬೇಕಿದೆ ಕವನ**
**ಹೊರ ಹಾಕಿದಂತೆ ನಿಟ್ಟುಸಿರ**
**ತುಸು ಎದೆ ಭಾರ ಹಗುರ**
**ಚಿಂತೆ ಕೊಂಚ ದಮನ**
**ಅಂತೆಯೇ ನಿರಂತರವೀ ತನನನ'**

ಎನ್ನುವ ಭಾವದಲ್ಲಿ ಕಾವ್ಯ ರಚನೆ ಪ್ರಭಾವ, ಪರಿಣಾಮ ಶೂನ್ಯಗೊಳಿಸಲಾಗಿದೆ. 'ಕಲೆ ಕಲೆಗಾಗಿ'ಯಾಗಲಿ, 'ಕಲೆ ಸಮಾಜಕ್ಕಾಗಿ' ಆಗಲಿ ಇರದೆ, 'ಕಲೆ ಕಲಾವಿದನಿಗಾಗಿ' ಮಾತ್ರ ಎನ್ನುವುದನ್ನು ಕವಿತೆ ಧ್ವನಿಸುತ್ತದೆ. 'ಬೆಕ್ಕಿಗೆ ಗಂಟೆ' ರಚನೆಯಲ್ಲಿ ಭಯಂಕರವಾದ ಬೆಕ್ಕೊಂದು ಎಲ್ಲವನ್ನು ಕಿತ್ತು ತಿನ್ನುತ್ತಿದೆ. ಎಲ್ಲರೂ ನೋಡಿಕೊಂಡು ಸುಮ್ಮನಿದ್ದಾರೆ. ಈ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂಬ ಪ್ರಶ್ನೆ ಕವಿಗೆ ಕಾಡಿದಂತಿದೆ. ಹಾಗಾಗಿ

**'ನೂರ್ಕೋಟಿ ಕೈಗಳಲ್ಲಿ ಶಕ್ತಿಯುಂಟೆ?**
**ಕಟ್ಟಲು ಇದಕ್ಕೊಂದು ಕಿರುಗಂಟೆ'**

ಎಂದು ಕವಿ ಪ್ರಶ್ನಿಸುತ್ತಾನೆ. ಈ ಬೆಕ್ಕಿಗೆ ಗಂಟೆ ಕಟ್ಟದಿರೆ ದೇಶ ಉಳಿಯುವುದಿಲ್ಲ ಎಂಬ ಭಾವ ಕವನದಲ್ಲಿದೆ. 'ಹೊಸ ವರ್ಷಕ್ಕೊಂದು ವಚನ'ದಲ್ಲಿ 'ಹೂಸ ವರುಷ ಬರುವಾಗ ಎದೆಯು ಹದವಾಗಿರಲಿ' ಎಂಬ ಆಶಯವಿದ್ದರೆ, 'ಹಾರು ಧ್ವಜವೆ ಮೇಲೆ ಮೇಲೆ' ರಚನೆಯಲ್ಲಿ,

**'ಮಾಂಸದಿಂದ ಕಟ್ಟೆಕಟ್ಟಿ**
**ಮೂಳೆ ಕೆತ್ತಿ ಕಂಬ ಮಾಡಿ**
**ನರದ ಹುರಿಯ ದಾರ ಹೊಸದು**
**ಧ್ವಜವ ಮೇಲೆ ಹಾರಿಸುವೆ'**

ಎಂಬ ಉತ್ಕಟವಾದ ದೇಶ ಭಕ್ತಿ ಮೆರೆದಿದ್ದಾರೆ. 'ಕನ್ನಡ ಕನ್ನಡ' ರಚನೆಯಲ್ಲಿ,

**'ಕಣ್ಣಾಲೆಗಳಲ್ಲಿ ಕನ್ನಡ ತೇಲಲಿ**
**ಗಾಳಿಯೂ ಕನ್ನಡವನೆ ಉಸಿರಾಡಲಿ**

**ಕರುವಿನ ಅಂಬಾ ಕನ್ನಡವಾಗಲಿ'**

ಎಂಬ ಸಾಲುಗಳ ಆಶಯದಲ್ಲಿ ಬದುಕಿನ ಸರ್ವಾಂಗವು ಕನ್ನಡಮಯವಾಗಿರಲಿ ಎಂಬ ಆಶಯವಿದೆ. 'ಕವಿತೆಯೊಳಗಿಂದ ಬುದ್ಧಯಾನ'ದಲ್ಲಿ,

**'ಬಡವಿಯ ಬಗಲೊಳಗಿನ ಕೂಸು**
**ಬರಿ ಎದೆಯ ಬಡಿ ಬಡಿದು**
**ಬಾರದ ಹಾಲಿಗಾಗಿ ಹಸಿವಿನಲಿ ಅಳುವಾಗ**
**ದನಿಗೂಡಿಸಲಾಗದೆ ಒಳಗೊಳಗೆ ಕುದಿಯುತ್ತೇನೆ'**

ಎನ್ನುವ ಮಾತುಗಳಲ್ಲಿ ಬಡವರ ಬಗ್ಗೆ, ದೀನ ದಲಿತರ ಬಗ್ಗೆ ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. 'ನಡಿಗೆಯಲ್ಲಿ ಬುದ್ಧ, ಬಸವ, ಗಾಂಧಿ, ಅಂಬೇಡ್ಕರ, ಕನಕ, ಪುರಂದರ, ಸರ್ವಜ್ಞ, ವಿನೋಭಾ ಭಾವೆ ಮುಂತಾದವರು ಒಂದೊಂದು ಮಹತ್ವದ ಕಾರಣಗಳಿಗಾಗಿ ಪಾದಯಾತ್ರೆ ಮಾಡಿರುವುದನ್ನು ಹೇಳಲಾಗಿದೆ. ಕೃಷ್ಣ ಸುಂದರಿ, ಶಾಂತಿನಿಕೇತನ, ತಾಜಮಹಲ್, ರವೀಂದ್ರರ ಮಿಂಚಿನ ಹನಿಗಳು ಮುಂತಾದವುಗಳನ್ನು ಮೂಲ ಬಂಗಾಳಿ ಕವಿ ರವೀಂದ್ರನಾಥ ಠಾಕೂರರ ಕವಿತೆಗಳನ್ನು ಕನ್ನಡದ ಕವಿತೆಗಳೇ ಎನ್ನುವಂತೆ ಅನುವಾದ ಮಾಡಲಾಗಿದೆ. ಹೆಗಡೆ, ರಾಜಕುಮಾರ, ಕಂಬಾರರು, ಪುಟ್ಟದೇವರು, ವೀರಯುದ್ಧ ಮುಂತಾದ ರಚನೆಗಳಲ್ಲಿ ವ್ಯಕ್ತಿಗಳ ವ್ಯಕ್ತಿತ್ವದ ಅನಾವರಣವಿದೆ. 'ಶಾಂತಿ ಸಂದೇಶ'ದಲ್ಲಿ,

**'ನೆಗೆದು ಹಾರುವ ಹಕ್ಕಿ**
**ಅಳುತಿಹುದು ಬಿಕ್ಕಿ ಬಿಕ್ಕಿ**
**ಭುಗಿಲೆದ್ದಿವೆ ವಿಷಜ್ವಾಲೆಗಳು**
**ವಿಶ್ವಶಾಂತಿಯ ನೆಕ್ಕಿ'**

ಈ ಮಾತುಗಳಲ್ಲಿ ಜಾಗತಿಕ ಅಶಾಂತಿಯನ್ನು ಧ್ವನಿಸಲಾಗಿದೆ.

ಸರ್ಕಾರಿ ಕೆಲಸದಲ್ಲಿರುವವರು ಅದರಲ್ಲೂ ಕಂದಾಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರು, ಕಲೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ತುಂಬಾ ಕಷ್ಟಕರ. ಹಲವಾರು ಕೆಲಸಗಳ ಜವಾಬ್ದಾರಿಯ ಬಾಹುಳ್ಯದೊಳಗೆ ಬಂಧಿಯಾಗಿರುವವರು ಬದುಕಿನಲ್ಲಿ ಏನಾದರೂ ವಿಶೇಷ ಹವ್ಯಾಸ ಬೆಳಸಿಕೊಂಡಿದ್ದಾರೆಂದರೆ, ಅದು ಅವರ ಹಗಲು ರಾತ್ರಿ ಸತತ ಪರಿಶ್ರಮದ ಫಲವೆಂದೇ ಹೇಳಬೇಕು. ಆ ಸಾಲಿಗೆ ಸೇರಿದವರು ಡಾ|| ಮನು ಬಳಿಗಾರ್, ಸರಳ ಭಾಷಾ ಬಳಕೆ, ನೇರನುಡಿ, ಸಾಮಾಜಿಕ ಕಳಕಳಿ, ಸಮಾಜದ ಆಗು ಹೋಗುಗಳಿಗೆ ಸ್ಪಂದಿಸುವ ಗುಣ ಅವರ ಕವನಗಳ ವೈಶಿಷ್ಟ್ಯ ಎಂದು ಹೇಳಬೇಕು. ಯಾರು ಹೆಚ್ಚು, ಬಿಸಲುಗಂಬಳಿ ಹೊದ್ದವರು, ರವೀಂದ್ರರವರ ಮಿಂಚಿನ ಹನಿಗಳು, ಅಪ್ಪ, ಯುದ್ಧದ ಹಾಡು, ಭಾಷಾ ವೈಚಿತ್ರ್ಯ, ಬರೆಯಬೇಕಿದೆ ಕವನ, ಬೆಕ್ಕಿಗೆ ಗಂಟೆ, ಹಾರು ಧ್ವಜವೆ ಮೇಲೆ ಮೇಲೆ, ಶಾಂತಿ ಸಂದೇಶ

ಮುಂತಾದ ರಚನೆಗಳಲ್ಲಿ ಅದನ್ನು ಕಾಣಬಹುದಾಗಿದೆ. ಹೇಳುವುದನ್ನು ಸರಳವಾಗಿ ಹೇಳುವುದು ರೂಢಿಸಿಕೊಂಡಿರುವ ಬಳಿಗಾರ್‌ರವರು ಯಾವುದೇ ಸಾಹಿತ್ಯದ ಸಂಕೀರ್ಣ ರಚನಾ ಕ್ರಮಗಳಿಗೆ ಮಾರುಹೋಗಿರುವುದು ಕಾಣುವುದಿಲ್ಲ. ಆದರೆ ಅಲ್ಲಲ್ಲಿ ಅವರ ರಚನೆಗಳಲ್ಲಿ ವಾಚಾಳಿತನ ಎದ್ದು ಕಾಣುತ್ತದೆ. ಅದು ಕೂಡ ಇಲ್ಲಿ ಅಭಿವ್ಯಕ್ತಿಯ ಒಂದು ಭಾಗವಾಗಿದೆ ಎಂದೇ ಹೇಳಬೇಕು. ಸಹಜವಾಗಿಯೇ ಸಾವಿರದ ಒಂಬೈನೂರ ಎಂಭತ್ತಮೂರರಲ್ಲಿ ಪ್ರಕಟವಾದ ಅವರ ಮೊದಲ ಕವನ ಸಂಗ್ರಹ 'ನನ್ನ ನಿನ್ನೊಳಗೆ' ರಚನೆಗಳಿಗೂ, ಅವರ ಇತ್ತೀಚಿನ ರಚನೆಗಳನ್ನು ಗಮನಿಸಿದರೆ, ಕವನ ರಚನೆಯಲ್ಲಿ ಸಾಕಷ್ಟು ಏರುಮುಖದ ಬದಲಾವಣೆಯನ್ನು ಗಮನಿಸಬಹುದಾಗಿದೆ. ಕೃಷ್ಣಸುಂದರಿ, ಶಾಂತಿನಿಕೇತನ, ತಾಜ್‌ಮಹಲ್, ರವೀಂದ್ರರವರ ಮಿಂಚಿನ ಹನಿಗಳನ್ನು ಯಶಸ್ವಿಯಾಗಿ ಭಾವಾನುವಾದ ಮಾಡಿದ ಬಳಿಗಾರ್‌ರವರಿಂದ ಇನ್ನಷ್ಟು ಸ್ವತಂತ್ರ ರಚನೆಗಳ ಜೊತೆಗೆ ಭಾವಾನುವಾದವನ್ನೂ ನಿರೀಕ್ಷಿಸಬಹುದಾಗಿದೆ. ಸರ್ಕಾರಿ ಸೇವೆಯ ವೃತ್ತಿಯೊಂದಿಗೆ, ಸಾಹಿತ್ಯ ರಚನೆಯ ಪ್ರವೃತ್ತಿಯನ್ನು ರೂಢಿಸಿಕೊಂಡಿರುವ ಮನುಬಳಿಗಾರ್ ರವರು ಸಾಹಿತ್ಯ ಕೃಷಿಯಲ್ಲಿ ಯಶಸ್ವಿ ಹೆಜ್ಜೆ ಇಟ್ಟಿದ್ದಾರೆಂದು ಹೇಳಬೇಕು. ಜೊತೆಗೆ 'ಕನ್ನಡ ಸಾಹಿತ್ಯ ಪರಿಷತ್ತು'ನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಅದರ ಮೆರಗನ್ನು ಮತ್ತಷ್ಟು ಹೆಚ್ಚಿಸಿದೆ. ಈ ಯಶಸ್ಸಿಗೆ ಕಾರಣವಾದ ಅವರ ಪರಿಶ್ರಮಕ್ಕೆ ನಮ್ಮದೊಂದು ಸಲಾಮ್!

❖

## ಭಾಗ-3

# ನಾಟಕ

# ಅಪ್ರತಿಮ ಹೋರಾಟಗಾರ : ಮೈಲಾರ ಮಹಾದೇವ

ಡಾ. ಜ್ಯೋತ್ಸ್ನಾ ಚಂದ್ರಕಾಂತ

1930ರ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕನ್ನಡ ನಾಡಿನ ಏಕಮೇವ ಸ್ವಾತಂತ್ರ್ಯ ಹೋರಾಟಗಾರನೆಂದರೆ ಮೈಲಾರ ಮಹಾದೇವಪ್ಪ. ಕರ್ನಾಟಕದ ಮೋಟೆಬೆನ್ನೂರಿನವರಾದ ಮೈಲಾರ ಮಹಾದೇವಪ್ಪ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧಿಯವರ ಕಟ್ಟಾ ಅನುಯಾಯಿಯಾಗಿ ಅಹಿಂಸಾ ಮಾರ್ಗದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದವರು ಧೀರ ಮೈಲಾರ ಮಹಾದೇವಪ್ಪ ಅವರು.

ಭಾರತದ ಚರಿತ್ರೆಯನ್ನು ಪರಿಪೂರ್ಣವಾಗಿ ಬರೆದಿಲ್ಲ ಎನ್ನುವುದಕ್ಕೆ ನೂರಾರು ಉದಾಹರಣೆಗಳು ಸಿಗುತ್ತವೆ. ಅಂಥದ್ದರಲ್ಲಿ ಮೈಲಾರ ಮಹಾದೇವಪ್ಪ ಅವರ ಚರಿತ್ರೆಯೂ ಒಂದು ಅತ್ಯುತ್ತಮ

ಉದಾಹರಣೆಯಾಗುತ್ತದೆ. ದೇಶಭಕ್ತ, ಸ್ವಾತಂತ್ರ್ಯ ಸೇನಾನಿ ಭಗತ್‌ಸಿಂಗ್, ಚಂದ್ರಶೇಖರ ಆಜಾದ್ ಅವರ ಸಾಲಿನಲ್ಲಿ ಪ್ರಾತಃಸ್ಮರಣೀಯರಾದಂಥ ಮೈಲಾರ ಮಹಾದೇವಪ್ಪ ಅವರ ಕುರಿತು ನಮ್ಮ ಭಾರತೀಯ ಚರಿತ್ರೆ ಏನೂ ಮಾಹಿತಿ ನೀಡುವುದಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿಯೇ ಮನು ಬಳಿಗಾರ್ ಅವರು ಮೈಲಾರ ಮಹಾದೇವ ಎಂಬ ಕಿರುನಾಟಕವನ್ನು ರಚಿಸಿದ್ದಾರೆ.

ಉತ್ತರ ಕರ್ನಾಟಕದ ಲಾವಣಿಗಳನ್ನು ಬಳಸಿಕೊಂಡು ಮನು ಬಳಿಗಾರ್ ಅವರು ಮೈಲಾರ ಮಹಾದೇವಪ್ಪ ಅವರ ತ್ಯಾಗ, ನಿಸ್ವಾರ್ಥ ದೇಶಭಕ್ತಿಯನ್ನು ಯುವಪೀಳಿಗೆಗೆ ಪರಿಚಯಿಸಿಕೊಟ್ಟಿದ್ದಾರೆ. ಭಾರತೀಯ ಇತಿಹಾಸವನ್ನು ಸರಿಯಾಗಿ ದಾಖಲಿಸಿಲ್ಲ ಎಂಬುದನ್ನು ನಾಟಕದಲ್ಲಿ ವಿಮರ್ಶಿಸಿದ್ದಾರೆ. 'ನಿರ್ದಿಷ್ಟವಾಗಿ ತಾರೀಖು ತಿಂಗಳು ಇಸ್ವಿ ಎಲ್ಲ ಗೊತ್ತಿದ್ದೂ ಮೈಲಾರ ಮಹಾದೇವಪ್ಪನವರು ಭಾಗಿಯಾದ ದಂಡೀ ಸತ್ಯಾಗ್ರಹದ ಬಗ್ಗೆ ಅದೂ ಇಡೀ ಕನ್ನಡ ನಾಡಿನಿಂದ ಏಕೈಕ ಪ್ರತಿನಿಧಿಯಾಗಿ ಭಾಗವಹಿಸಿ 'ಉಪ್ಪಿನ ಮೈಲಾರ' ಎಂದು ಪ್ರಸಿದ್ಧಿ ಪಡೆದ ಬಗ್ಗೆ, ಈ ಗ್ರಂಥಕಾರರೇ ಅವನ ಸಮಕಾಲೀನರಾಗಿದ್ದುಕೊಂಡೂ.... (ನಿಟ್ಟುಸಿರು ಹಾಕಿ) ಆ ಬಗ್ಗೆ, ಚಳುವಳಿಗಳ ಇತಿಹಾಸದ ಈ ಗ್ರಂಥದಲ್ಲಿ ದಾಖಲೆಯಾಗಿಲ್ಲವಲ್ಲ!" (ಪು. 8) ಎಂದು ವಿದ್ಯಾರ್ಥಿಯೊಬ್ಬ ವಿಷಾದಿಸುವುದು ನಾಟಕದ ಒಂದು ತುಣುಕು.

ಗಾಂಧೀಜಿ ಅವರ ಕರೆಗೆ ಓಗೊಟ್ಟು ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಅಖಂಡ ಕರ್ನಾಟಕದಿಂದ ಒಬ್ಬನೇ ಒಬ್ಬ ವೀರ ಭಾಗವಹಿಸಿರುವುದು ಇತಿಹಾಸ. ತರುಣನಾದ ಮೈಲಾರ ಮಹಾದೇವಪ್ಪ ತನ್ನ ತಂದೆ - ತಾಯಿ, ಹೆಂಡತಿ - ಮಗುವನ್ನು ಬಿಟ್ಟು ದೂರದ ಗುಜರಾತ್‌ನಲ್ಲಿ ದಂಡೀ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸುತ್ತಾನೆ. ಜೈಲಿನಲ್ಲಿರುವಾಗಲೇ ಪೋಷಕರಿಗೆ ಪತ್ರ ಬರೆದು ತನ್ನ ಸ್ಥಿತಿಯನ್ನು, ಹೋರಾಡುವ ಕೆಚ್ಚೆದೆಯನ್ನು ಪ್ರದರ್ಶಿಸುತ್ತಾನೆ. 'ಸತ್ಯಾಗ್ರಹಿ ಆದವನಿಗೆ ಯಾವ ದುಷ್ಟಶಕ್ತಿಗಳೂ ಕಾಡಿಸಲಾರವು. ಆತನ ಆತ್ಮಸ್ಥೈರ್ಯ ಅಪಾರವಾದದ್ದು; ಅದು ಎಂದೂ ಕುಗ್ಗಲಾರದ್ದು..... ಪ್ರಜಾಪ್ರಭುತ್ವದ ತೊಟ್ಟಿಲೆನಿಸಿರುವ ದೇಶಗಳ ಜನ, ಪ್ರಜೆಗಳ ಪೀಡನೆ ಸಂಕಷ್ಟ ತಾರಕಕ್ಕೇರಿದಾಗ ತೋರುವ ದಿವ್ಯ ನಿರ್ಲಕ್ಷ್ಯ, ಕರ್ತವ್ಯ ವಿಮುಖತೆ ಪಾಪದ ಪರಾಕಾಷ್ಠೆಯೆಂದೇ ಗಾಂಧೀ ತತ್ವದ ಅಭ್ಯಾಸದಿಂದ ನಾನು ಅರಿತಿದ್ದೇನೆ' (ಪು. 19), ಪತ್ರದ ಮೂಲಕ ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ತೊಡೆ ತಟ್ಟಿ ಹೇಳಿರುವ ಮಹಾದೇವಪ್ಪ ಅವರ ಮಾತುಗಳಿವು.

ಜೈಲುವಾಸ ಅನುಭವಿಸಿ ಬಂದ ಮೈಲಾರ ಮಹಾದೇವ ಅವರು ಊರಿನ ಜನರನ್ನು ಉದ್ದೇಶಿಸಿ ಮಾತನಾಡುತ್ತ "ಭಾರತವೆಂಬ ಮಹಾವೃಕ್ಷ ಬದುಕಿರುವುದೇ ತನ್ನ ಬೇರುಗಳಾದ ಹಳ್ಳಿಗಳಲ್ಲಿ, ಅವುಗಳ ಏಳ್ಗೆಯೇ ನಿಜವಾದ ದೇಶದ ಏಳಿಗೆ ಎಂದಿದ್ದಾರೆ ಗಾಂಧಿ ಅವರು. ಅದಕ್ಕಾಗಿ ಇನ್ನು ಸ್ವಲ್ಪ ದಿನಗಳಲ್ಲೇ ನಾನು, ಸಾಬರಮತಿ ಆಶ್ರಮದಲ್ಲಿ ಕಲಿತು ಬಂದು ಸ್ವದೇಶಿ ಖಾದಿ ತಯಾರಿಕೆ, ಅಸ್ಪೃಶ್ಯತಾ ನಿವಾರಣೆ, ಸಾಕ್ಷರತೆ, ಜನಜಾಗೃತಿ ಮುಂತಾದ ವಿಧಾಯಕ ಕಾರ್ಯಗಳ ವಿಸ್ತರಣೆಗಾಗಿ ತೀರ ಹಿಂದುಳಿದ ಗ್ರಾಮವಾದ

ಕೊರಡೂರಿನಲ್ಲಿ ಒಂದು ಗ್ರಾಮ ಸೇವಾಶ್ರಮ ಸ್ಥಾಪಿಸುತ್ತೇನೆ" (ಪು. 25) ಎಂದು ಆಶ್ವಾಸನೆ ನೀಡುತ್ತಾರೆ. ಹಾಗೆಯೇ 1937ರಲ್ಲಿ ಗ್ರಾಮ ಸೇವಾಶ್ರಮವನ್ನು ಮಹಾದೇವಪ್ಪ ಅವರು ಸ್ಥಾಪಿಸಿದ್ದನ್ನು ನಾಟಕದ ಲಾವಣಿಕಾರ ದೃಢಪಡಿಸುತ್ತಾನೆ. ಎಲ್ಲ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಮಹಾದೇವಪ್ಪ ಬ್ರಿಟಿಷರಿಗೆ ತಲೆನೋವಾಗಿ ಪರಿಣಮಿಸಿದರು. ಅಂತೆಯೇ ಮಹಾದೇವಪ್ಪನನ್ನು ಹಿಡಿದುಕೊಟ್ಟವರಿಗೆ ಬಹುಮಾನ ನೀಡುವುದಾಗಿ ಘೋಷಿಸಿತು ಬ್ರಿಟಿಷ್ ಸರ್ಕಾರ.

ಮೈಲಾರ ಮಹಾದೇವಪ್ಪ ಅವರನ್ನು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿಡಲಾಯಿತು. 1934ರಲ್ಲಿ ಗಾಂಧೀಜಿಯವರು ಕರ್ನಾಟಕಕ್ಕೆ ಬಂದಾಗ ಮೋಟೆಬೆನ್ನೂರಿಗೆ ಭೇಟಿ ನೀಡಿ ಮಹಾದೇವಪ್ಪ ಅವರ ತಂದೆ - ತಾಯಿಯರನ್ನು ಭೇಟಿ ಮಾಡಿದ್ದರು. ಕೊನೆಗೆ ಬ್ರಿಟಿಷರ ಸಂಚಿಗೆ ಬಲಿಯಾಗಿ ಮೈಲಾರ ಮಹಾದೇವಪ್ಪ ಅವರು ಪ್ರಾಣತೆತ್ತರು. ಸುಮಾರು 10 ದೃಶ್ಯಗಳಲ್ಲಿ ಅಪ್ರತಿಮ ಹೋರಾಟಗಾರರಾದ ಮೈಲಾರ ಮಹಾದೇವಪ್ಪ ಅವರ ತ್ಯಾಗ, ದೇಶಭಕ್ತಿ, ದೇಶಪ್ರೇಮವನ್ನು ಹಿಡಿದಿಟ್ಟಿದ್ದಾರೆ. ತ್ಯಾಗ, ಬಲಿದಾನ ಇತ್ಯಾದಿ ನಗೆಪಾಟಲಿಕ್ಕೀಡಾಗುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಮೈಲಾರ ಮಹಾದೇವಪ್ಪ ಅವರಂಥ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸುವ ನಾಟಕ ಅನುಕರಣೀಯ.

ಯುವ ಪೀಳಿಗೆಗೆ ಸ್ವಾತಂತ್ರ್ಯ ಹೋರಾಟಗಾರರ, ದೇಶಪ್ರೇಮಿಗಳ ನಿಸ್ವಾರ್ಥ ಸೇವೆಯನ್ನು ನೆನಪಿಸುವ ಕೆಲಸ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಮನು ಬಳಿಗಾರ್ ಅವರ ಮೈಲಾರ ಮಹಾದೇವ ನಾಟಕ ಸ್ಮರಣೀಯ. ವರ್ಷದಲ್ಲಿ ಎರಡು - ಮೂರು ದಿನಗಳಲ್ಲಷ್ಟೇ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸುತ್ತಿರುವ ಇಂದಿನ ಸಮಾಜ - ಆಡಳಿತ - ರಾಜಕಾರಣಿಗಳು - ಸ್ವಾರ್ಥಿಗಳು ಮೈಲಾರ ಮಹಾದೇವಪ್ಪ ಅವರಂಥ ಹೋರಾಟಗಾರರ ಜೀವನವನ್ನು ತಿಳಿದುಕೊಳ್ಳಬೇಕಾಗಿರುವುದು ಅತ್ಯವಶ್ಯಕ. ಕಪಟ ದೇಶಭಕ್ತಿ, ಸ್ವಾರ್ಥ ಮನೋಭಾವನೆಯನ್ನು ಹೊಂದಿರುವ ಇಂದಿನ ರಾಜಕಾರಣಿಗಳು ಮಹಾದೇವಪ್ಪ ಅವರ ಜೀವನವನ್ನು, ತ್ಯಾಗವನ್ನು ಅರಿತರೆ ಸಮಾಜ, ಸಮುದಾಯ ಅಭಿವೃದ್ಧಿಯತ್ತ ಮುಖ ಮಾಡುವುದರಲ್ಲಿ ಎರಡು ಮಾತಿಲ್ಲ.

❖

# ಮೈಲಾರ ಮಹಾದೇವ ನಾಟಕ : ಒಂದು ಅವಲೋಕನ

ಡಾ. ಚನ್ನವೀರಯ್ಯ

ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಅಹಿಂಸಾತ್ಮಕವಾದ ಹೋರಾಟ ಭಾರತದ ಇತಿಹಾಸದ ಪುಟದಲ್ಲಿ ಬಹು ಪ್ರಾಮುಖ್ಯತೆ ಪಡೆದಿದೆ. ಅಪ್ರತಿಮ ದೇಶಭಕ್ತ ಗಾಂಧೀಜಿಯವರ ಪ್ರಿಯ ಶಿಷ್ಯ ಮೈಲಾರ ಮಹದೇವಪ್ಪ, ಗಾಂಧೀಜಿಯವರ ಮುಂದಾಳತ್ವದಲ್ಲಿ ನಡೆದ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕರ್ನಾಟಕದ ಏಕೈಕ ಪ್ರತಿನಿಧಿ ಹತ್ತೊಂಬತ್ತರ ಹರೆಯದ ಮೈಲಾರ

ಮಹಾದೇವ. 1930 ಮಾರ್ಚ್ 12ರಂದು 78 ಜನ ಚಳುವಳಿಗಾರರರು(ಅರ್ಥಾತ್ ದೇಶಭಕ್ತರು) ಸಾಬರಮತಿಯಿಂದ ಉಪ್ಪಿನ ಸತ್ಯಾಗ್ರಹಕ್ಕಾಗಿ ದಾಂಡಿಯಾತ್ರೆ ಆರಂಭಿಸಿದರು. ಸುಮಾರು 25 ದಿನಗಳಲ್ಲಿ 385 ಕಿಲೋಮಿಟರ್‌ಗಳಷ್ಟು ಕ್ರಮಿಸಿ ದಂಡಿ ತಲುಪಿ ಉಪ್ಪನ್ನು ಕೈಗೆತ್ತಿಕೊಂಡು ಕಾಯ್ದೆಭಂಗ ಚಳುವಳಿಗೆ ಸಾಕ್ಷಿಯಾಗಿ ಗಾಂಧೀಜಿಯವರೊಡನೆ ಆರು ತಿಂಗಳ ಕಾರಾಗೃಹ ಶಿಕ್ಷೆಗೆ ಗುರಿಯಾದ ಏಕೈಕ ಕನ್ನಡಿಗ ದೇಶಭಕ್ತ ಮೈಲಾರಮಹಾದೇವ.

ಶ್ರೀಯುತ ಮನು ಬಳಿಗಾರ್ ಅವರು ರಚಿಸಿರುವ ನಾಟಕ 'ಮೈಲಾರ ಮಹಾದೇವ'ದ ಮೊದಲ ದೃಶ್ಯದಲ್ಲಿ ಸಮ್ಮದ್ ಸಾಹೇಬ್ ಪಾತ್ರದ ಮೂಲಕ ಬ್ರಿಟಿಷರ ಗುಂಡಿಗೆ ತನ್ನ ಗುಂಡಿಗೆ ಒಡ್ಡಿ ವೀರ ಬಲಿದಾನ ಮಾಡಿದ ಸಾಕ್ಷತ್ ಮಹಾದೇವನೇ ಸರಿ. ಗಾಂಧೀಜಿಯವರ ಕರೆಗೆ ಓಗೊಟ್ಟು ಸಬರಮತಿ ಆಶ್ರಮಕ್ಕೆ ಹೋಗಿ ಮಹಾತ್ಮರ ಅಂತರಂಗದ ಶಿಷ್ಯರಾಗಿ ಖಾದಿ ಚರಕ, ಹರಿಜನೋದ್ಧಾರ ಎಂದು ಮನೆಗಿಂತ ಜೈಲಿನೊಳಗೆ ಹೆಚ್ಚುದಿನ ಕಳೆದ ಸಮರವೀರನ ಕಥೆಯನ್ನು ಮುಂದೆ ನೋಡಬಹುದು ಎಂದು ಈ ಪಾತ್ರ ಹೇಳುತ್ತದೆ. ಮೊದಲ ದೃಶ್ಯದಲ್ಲಿ ಬರುವ ವಿಚಾರಪೂರ್ಣ ನಿರೂಪಣೆ ಮುಂದೆ ನಾಟಕದ ತಿರುಳನ್ನು ವಿವರಣಾತ್ಮಕವಾಗಿ ಚಿತ್ರಿಸುತ್ತಾ ಹೋಗುತ್ತದೆ.

ಎರಡನೇ ದೃಶ್ಯದಲ್ಲಿ ಮೂರುಜನ ವಿದ್ಯಾರ್ಥಿಗಳ ನಡುವೆ ನಡೆಯುವ ಸಂಭಾಷಣೆ ತುಂಬಾ ಸ್ವಾರಸ್ಯಕರವಾಗಿ ಮೂಡಿಬಂದಿದೆ.

ಇತಿಹಾಸ ಮತ್ತು ಪುರಾಣಗಳ ಬಗೆಗಿನ ಚರ್ಚೆಯಲ್ಲಿ ಉಹಾಪೋಹಗಳೇ ಇತಿಹಾಸವಾದವು ನಮ್ಮ ಪುರಾಣಗಳಂತೆ, ಕಾಲಾತೀತ ಅಥವಾ ಕಾಲರಹಿತವಾದುದು ಅಂದರೆ ಕಾಲವನ್ನು ಕಾಲುಗಳನ್ನಾಗಿ ಮಾಡಿಕೊಂಡು ನಡೆಯುವುದು ಇತಿಹಾಸ. ನಿಗದಿತ ಅಥವಾ ನಿರ್ದಿಷ್ಟ ಕಾಲ ಅಥವಾ ಸಮಯವಿಲ್ಲದ್ದು ಪುರಾಣ. ಕಾಲನ ಪರೀಕ್ಷೆಗೆ ಒಳಪಡದಿರುವುದು ಪುರಾಣ. ಚಲೇಜಾವ್ ಚಳುವಳಿ, ಬಾರ್ದೋಲಿ ಕರನಿರಾಕರಣೆ ಅಥವಾ ಉಪ್ಪಿನ ಸತ್ಯಾಗ್ರಹದ ಬಗ್ಗೆ ಕನ್ನಡಿಗ ಬರೆದ ಕನ್ನಡ ವೀರನ ಬಗ್ಗೆ ಪ್ರಸ್ತಾಪವಿಲ್ಲ. ನಮ್ಮ ತಾತ ಸ್ವತ: ಕಂಡನುಭವಿಸಿದ ಉಪ್ಪಿನ ಸತ್ಯಾಗ್ರಹದಿಂದ ಹಿಂದಿರುಗಿದಾಗ ಮಹಾದೇವಪ್ಪನವರ ಮೆರವಣಿಗೆ ಮತ್ತೆ ಬ್ರಿಟಿಷರ ಗುಂಡಿಗೆ ಬಲಿಯಾಗಿ ಅವರ ಅಂತಿಮಯಾತ್ರೆಯನ್ನು ಕಂಡದ್ದನ್ನು ಹೀಗೆ ಮೈಲಾರ ಮಹಾದೇವಪ್ಪರ ಬಗ್ಗೆ ಹೇಳುತ್ತಾರೆ. 'ಉಪ್ಪಿನ ಮೈಲಾರ' ಎಂದು ಕರೆಸಿಕೊಂಡವರು. ಇಂತಹ ಮಹಾನ್ ದೇಶಭಕ್ತ ಮೈಲಾರಮಹಾದೇವಪ್ಪನವರನ್ನು ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕಿತ್ತೂರುರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಭಗತ್ ಸಿಂಗ್, ಚಂದ್ರಶೇಖರ್ ಅಜಾದ್‌ರವರ ಸಾಲಿನಲ್ಲಿ ಸುವರ್ಣಾಕ್ಷರಗಳಲ್ಲಿ ಚಿತ್ರಿಸಬೇಕಾದ ಹೆಸರು ಮೈಲಾರಮಹಾದೇವಪ್ಪ ಅವರದ್ದು. ಕನ್ನಡ ನಾಡಿನ ಕೆಚ್ಚೆದೆಯ ಹೋರಾಟದ ಹುಲಿ ಮಹಾದೇವಪ್ಪನ ದೇಶಭಕ್ತಿ ಎಂತಹುದು ಎಂಬುದನ್ನು ಗುರುತಿಸುವ ಕಾರ್ಯ ನಡೆದಿದೆ ಎಂಬುದನ್ನು ಈ ದೃಶ್ಯದಲ್ಲಿ ನಾಟಕಕಾರ ಚಿತ್ರಿಸಿದ್ದಾರೆ.

ನಾಟಕದ ಮೂರನೇ ದೃಶ್ಯದಲ್ಲಿ ಗಾಂಧೀಜಿಯವರ ಪ್ರಮುಖ ಕನಸು ಏನಾಗಿತ್ತು ಎನ್ನುವುದನ್ನು ಮಹಾದೇವಪ್ಪನ ಪಾತ್ರದ ಮೂಲಕ ಹೇಳಲು ಹೇಳಿಸಲು ಹೊರಟಿರುವುದು ಸಚಿತ್ರಣವಾಗಿ ಮೂಡಿಬಂದಿದೆ. ಭಾರತಮಾತೆಯ ಮಕ್ಕಳಾದ ಭಾರತೀಯರನ್ನು ದಾಸ್ಯದ ಸಂಕೋಲೆಗಳಿಂದ ಬಿಡುಗಡೆಗೊಳಿಸಬೇಕೆಂಬ ನಿಸ್ವಾರ್ಥ ಸೇವೆಯನ್ನು 'ಯಂಗ್ ಇಂಡಿಯಾ'ದಲ್ಲಿ ಗಾಂಧೀಜಿ ಬರೆದ ಲೇಖನ ಓದಿದ ಮಹಾದೇವ ಹೇಡಿಯಾಗಿ ನೂರು ವರ್ಷ ಬಾಳುವುದಕ್ಕಿಂತ ಹುಲಿಯಾಗಿ ಮೂರೇ ವರ್ಷ ಬದುಕಿದರೆ ಸಾಕು ಎಂಬ ದೃಢನಿರ್ಧಾರ ನಿಜವಾಗಿಯು ಅಪ್ಪಟ ದೇಶಪ್ರೇಮಿಗಳಿಗೆ ಒಂದು ವೇದವಾಕ್ಯವಾಯಿತು. ಗುದ್ಲೆಪ್ಪ ಹಳ್ಳಿಕೇರಿಯವರು ನುಡಿದ ನುಡಿಗಳು ಯುವಕರಿಗೆ ದಾಸ್ಯದ ನೋವು, ಸ್ವಾತಂತ್ರ್ಯದ ಪುಳಕ ತುಂಬುವ ರೀತಿಯಲ್ಲಿ ರಾಷ್ಟ್ರಪ್ರಜ್ಞೆ, ದೇಶಾಭಿಮಾನ, ತ್ಯಾಗಭಾವನೆ ಬಗ್ಗೆ ಅವರ ಕಾಳಜಿ ಎಲ್ಲವೂ ಇಲ್ಲಿ ಮೂಡಿ ಬಂದಿದೆ. ಕಾಲೇಜು ವಿದ್ಯಾರ್ಥಿಗಳು, ಯುವಕ-ಯುವತಿಯರು ಸಕ್ರಿಯವಾಗಿ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸುವಂತೆ ಮತ್ತು ನರಿ ಬುದ್ಧಿಯ ಕುಹಕಿಗಳ ಬಗ್ಗೆ ಎಚ್ಚರಿಕೆ ವಹಿಸಬೇಕೆಂಬುದು ಮಹಾದೇವನ ಜವಾಬುದಾರಿ ಮಾತಿನ ಜೊತೆಗೆ ಅಹಿಂಸಾತ್ಮಕ ಮಾರ್ಗವೇ ಸೂಕ್ತ. ಅಹಿಂಸಾತ್ಮಕ ಮಾರ್ಗ ಹೇಡಿತನವಲ್ಲ ಸ್ವಯಂ ಕಷ್ಟ, ತ್ಯಾಗ ಮಾಡಲು ಕೊನೆಗೆ ಪ್ರಾಣ ಕೊಡಲು ಧೈರ್ಯವಿರಬೇಕು. ಸತ್ಯಾಗ್ರಹಿಗೆ ಸತ್ಯ ಅಹಿಂಸೆಯ ಋಜುಮಾರ್ಗ ಎಂಬುದು ಮಹಾದೇವನ ಧ್ಯೇಯವಾಕ್ಯ. ಗಾಂಧೀಜಿಯವರಿಂದ ಪತ್ರ ಬಂದಿರುವುದನ್ನು ಉಪ್ಪಿನಸತ್ಯಾಗ್ರಹದಲ್ಲಿ ಭಾಗವಹಿಸಲು ಇಬ್ಬರು ತರುಣರು ಬೇಕೆಂದು ತಿಳಿದು ಪುಳಕಿತನಾದ ಮಹಾದೇವ. ಮಹಾದೇವನ ತಾಯಿ ಬಸಮ್ಮ ಅಪ್ಪಟ ದೇಶಪ್ರೇಮಿ ಬ್ರಿಟಿಷರ ವಿರುದ್ಧ ಹೋರಾಡಿ ಜೈಲುವಾಸ ಅನುಭವಿಸಿದವರು. ಆ ತಾಯಿಗೆ ತಕ್ಕ ಮಗ ಆ ಮಹಾದೇವ. ಈ ದೃಶ್ಯದಲ್ಲಿ ಸಬರಮತಿಗೆ ಹೋಗುವ ಗಾಂಧೀಜಿಯವರನ್ನು ಕಾಣುವ ಕುತೂಹಲ ಹೆಚ್ಚಿದ ಮಹಾದೇವನಿಗೆ ಈ ರೀತಿ ಅನಿಸಿತು. ಹದಿನೆಂಟು ವರ್ಷಗಳ ತಪಸಿನ ಫಲದಿಂದ ಮತ್ತು ಮನೆದೇವರು ಮೈಲಾರಮಹಾದೇನ ಕೃಪಾಶೀರ್ವಾದ ಎಂದು ಮನಗಾಣುತ್ತಾನೆ. ಇದು ನಿಜವಾಗಿಯು ಮಹಾದೇವನಲ್ಲಿ ನವೋಲ್ಲಾಸ ನವಚೈತನ್ಯವನ್ನು ಮೂಡಿಸುತ್ತದೆ.

ದೃಶ್ಯ ನಾಲ್ಕರಲ್ಲಿ ಮಹಾದೇವನ ಅಪ್ಪಟ ದೇಶಭಕ್ತಿ ಎಂತಹುದು ಎಂಬುದು ಅನಾವರಣಗೊಳ್ಳುತ್ತದೆ. ಆತನ ಮನಸ್ಸಿನಲ್ಲಿ ಗಾಂಧೀಜಿ ಚಿತ್ರಣದ ಸ್ವರೂಪವೇ ತುಂಬಿದಂತೆ ಮನವರಿಕೆ. ತನ್ನ ಹೆಂಡತಿ ಸಿದ್ಧಮ್ಮನಿಗೆ ತಿಳಿಸಿದ ಮೇಲೆ ಮನೆಯಲ್ಲಿ ಬೇರೆಯವರಿಗೆ ಹೇಳಬಾರದು ಎಂದು ವಚನ ಪಡೆಯುತ್ತಾನೆ. ಬ್ರಿಟಿಷರ ದಬ್ಬಾಳಿಕೆಯನ್ನು ಧಿಕ್ಕರಿಸುವ ಸದುದ್ದೇಶದಿಂದ ಪ್ರತಿಜ್ಞೆಗೈಯಲು ಸಬರಮತಿಗೆ ಹೋಗಲು ಉತ್ಸುಕನಾಗುತ್ತಾನೆ. ನಂತರ ರೈಲು ಪ್ರಯಾಣದ ಮೂಲಕ ಸಬರಮತಿಗೆ ಹೋಗಿ ಗಾಂಧೀಜಿ ಭೇಟಿಮಾಡುತ್ತಾನೆ. ಗಾಂಧೀಜಿ ಹರ್ಷಚಿತ್ತರಾಗಿ ಆಶ್ರಮದ ಕಠಿಣ ನಿಯಮಾವಳಿಗಳನ್ನು ತಿಳಿಸುತ್ತಾರೆ. ಎಲ್ಲದಕ್ಕೂ ಸಿದ್ಧನಾಗಿ ಬಂದಿದ್ದ ಮಹಾದೇವ ನನ್ನ ಜನ್ಮ ಸಾರ್ಥಕ, ಪಾವನ ಹಾಗೂ ಧನ್ಯ ಎಂದು ಸಂಭ್ರಮಿಸುತ್ತಾನೆ. ನೀನು ಪ್ರಾಂಜಲ ಮನಸ್ಸಿನಿಂದ ಆಶ್ರಮವಾಸಿಯಾಗಲು ಒಪ್ಪುವುದಾದರೆ ನನ್ನದೇನು

ಅಭ್ಯಂತರವಿಲ್ಲ ಆದರೆ ಯಾವುದೇ ಬಾಹ್ಯ ಒತ್ತಡಕ್ಕೆ ಒಳಗಾಗಬಾರದು ಎಂದು ಗಾಂಧೀಜಿ ಮಹಾದೇವನಿಗೆ ಹೇಳುವುದರಲ್ಲಿ ಶ್ರದ್ಧೆ ಪ್ರಾಮಾಣಿಕತೆ ಮುಂದಿನ ಗುರಿಗೆ ಇರಬೇಕಾದ ಮಾನಸಿಕ ಸಿದ್ಧತೆ ಬದ್ಧತೆ ಗುರುತರ ಜವಾಬ್ದಾರಿಗಳ ಮನವರಿಕೆ ಇದೆ. ಆಶ್ರಮವಾಸಿಗಳೊಡನೆ ತನ್ನ ಎಲ್ಲಾ ವಿಚಾರಗಳನ್ನು ಮುಕ್ತವಾಗಿ ಹೇಳಿ ಇಲ್ಲಿಗೆ ಬರುವ ಮುನ್ನ ಖಾದಿ ತಯಾರಿ, ನೂಲುವುದು, ವ್ಯಾಯಾಮ ತಾಲೀಮು ಮಾಡಿ ಪೂರ್ವ ತಯಾರಿ ಮಾಡಿಕೊಂಡಿರುವ ಬಗ್ಗೆ ತಿಳಿಸುತ್ತಾನೆ.

ಐದನೇ ದೃಶ್ಯದಲ್ಲಿ ಮಹಾದೇವನ ಊರಿನಲ್ಲಿ ಮಹಾದೇವನ ಪತ್ರ ಬಂದಿರುವುದನ್ನು ಗಮನಿಸಿದ ತಂದೆತಾಯಿ ಕುತೂಹಲಭರಿತರಾಗಿ ಪತ್ರದಲ್ಲಿರುವ ವಿಚಾರ ತಿಳಿದು ಹೆಂಡತಿಯೊಡನೆ ಸಂಸಾರಿಕ ಜೀವನದಲ್ಲಿ ಸಂತಸ ಅನುಭವಿಸಬೇಕಾದವನು ಜೈಲಿನಲ್ಲಿರುವ ವಿಚಾರ ತಿಳಿದು ತಂದೆ ದುಃಖಿತರಾಗುವುದು ಕಂಡುಬರುತ್ತದೆ. ಮುಂದುವರೆದು ನಾಟಕದಲ್ಲಿ ಉಪ್ಪಿನ ಸತ್ಯಾಗ್ರಹದ ಸಂಪೂರ್ಣವಾದ ವಿವರ ಪತ್ರದಲ್ಲಿರುತ್ತದೆ. ಸಬರಮತಿಯಿಂದ ದಂಡಿವರೆಗೆ 250 ಮೈಲಿ ಪಾದಯಾತ್ರೆ ಮೂಲಕ ಕ್ರಮಿಸಿ ಸಮುದ್ರ ತಟದಲ್ಲಿ ಉಪ್ಪನ್ನು ಕೈಗೆತ್ತಿಕೊಂಡದ್ದು ಏಪ್ರಿಲ್ 6. 1930ರಂದು. ಕಾನೂನುಭಂಗ ಮಾಡಿದ ಕಾರಣ ಗಾಂಧೀಜಿ ಸಮೇತ ಬಂಧಿಸಲಾಯಿತು. ನಮ್ಮ ತಂಡವನ್ನು ಸ್ವಾಗತಿಸಲು ಬಂದಿದ್ದ ಉಕ್ಕಿನ ಮನುಷ್ಯ ಸರದಾರ್ ವಲ್ಲಭಭಾಯಿ ಪಟೇಲ್‌ರನ್ನು ಒಂದು ದಿನ ಮುಂಚಿತವಾಗಿ ಬಂಧಿಸಲಾಯಿತು. ಅವರ ಅನುಪಸ್ಥಿತಿಯಲ್ಲಿ ಆ ಕಾರ್ಯ ನೆರವೇರಿಸಿದವರು ಭಾರತದ ಕೋಗಿಲೆ ಸರೋಜಿನಿನಾಯ್ಡು. ಪೊಲೀಸರ ಕ್ರೌರ್ಯದ ಬಗ್ಗೆ ಪತ್ರದಲ್ಲಿ ದಾಖಲಿಸಿರುವ ರೀತಿಯನ್ನು ಕಂಡು ಮಹಾದೇವನ ತಂದೆ ಮರುಗುತ್ತಾರೆ. ನಂತರ ಸಮಾಧಾನಚಿತ್ತರಾಗಿ ಮೋಟೆಬೆನ್ನೂರಿನ ಜೋಳ, ಗೋಧಿ ಮುಂತಾದುವನ್ನು ತಿಂದು ಬೆಳೆದ ನಮ್ಮ ಮಗ ಇಷ್ಟು ಎತ್ತರಕ್ಕೇರಿದ್ದಾನೆಂದರೆ ದುಃಖ ಸುಖಾನುಭವವಾಗುತ್ತದೆ ಎಂದು ಮಹಾದೇವನ ತಂದೆ ಹೇಳಿದರೆ, ತಾಯಿ ದೇಶಭಕ್ತ ಮಗನನ್ನು ಪಡೆದ ನಾವೇ ಧನ್ಯರು ಎನ್ನುತ್ತಾಳೆ. ಇಲ್ಲಿ ಮಗನ ಆದರ್ಶ ಗುಣಗಳನ್ನು ಕಂಡು ತಂದೆ-ತಾಯಿ ಸಂಭ್ರಮಿಸುವ ರೀತಿ ಬೆರಗುಗೊಳಿಸುತ್ತದೆ.

ಆರನೆ ದೃಶ್ಯದಲ್ಲಿ ಜೈಲಿನಿಂದ ಬಿಡುಗಡೆಯಾದ ಮೇಲೆ ಒಂದು ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ. ಸಭೆಯನ್ನು ಕೆ. ಎಫ್. ಪಾಟೀಲರು ಸಭೆ ಕುರಿತು ನುಡಿದ ನುಡಿಗಳು ಬೇರೆ ಯುವಕರಲ್ಲಿ ದೇಶಭಕ್ತಿ ಮೂಡಿಸುವಂತೆ ಪ್ರೇರಣಸ್ವರೂಪವಾಗಿವೆ. ನಮ್ಮ ನಾಡಿಗೆ ದೇಶಕ್ಕೆ ಕೀರ್ತಿ ತಂದ ಮಹಾಸುಪುತ್ರನನ್ನು ಸ್ವಾಗತಿಸಿ ಸನ್ಮಾನಿಸಿದರು. ಯುವಕರಲ್ಲಿ ಉತ್ಸಾಹ, ದೇಶಸೇವೆ ಮಾಡಬೇಕೆನ್ನುವ ಪ್ರೇರಣಾತ್ಮಕ ಮನಸ್ಥಿತಿ ಇವರ ಮಾತುಗಳಿಂದ ವ್ಯಕ್ತವಾಗುತ್ತದೆ. ಕೇವಲ ಉಪ್ಪಿನ ಸತ್ಯಾಗ್ರಹಕ್ಕೆ ಸೀಮಿತವಾಗದೆ ಮನುಷ್ಯ ಹುಟ್ಟಿದ ಮೇಲೆ ನಮ್ಮ ಮಹಾನ್ ಸೇವೆಯನ್ನು ದೇಶಕ್ಕೋಸ್ಕರ ಹೋರಾಡಲು ಸಿದ್ಧರಾಗಬೇಕೆಂಬ ಅರಿವನ್ನು ಮಹಾದೇವ ಎಲ್ಲಾ ಐತಿಹಾಸಿಕ ಸ್ಥಳಗಳನ್ನು ಉಲ್ಲೇಖಿಸಿ ಆದಿಕವಿ ಪಂಪನ 'ಆರಂಕುಶ ವಿಟೊಡಂ ನೆನೆವುದೆನ್ನ ಮನ ಬನವಾಸಿ ದೇಶಮಂ' ನೆನಪಿಸುತ್ತಾ ನಾಡಪ್ರೇಮ

ದೇಶಪ್ರೇಮಗಳನ್ನು ಬೆಳೆಸಿಕೊಂಡು ನಮ್ಮ ಜನ್ಮಭೂಮಿಗೆ ಅಳಿಲು ಸೇವೆಸಲ್ಲಿಸಲು ಸಿದ್ಧರಾಗುವಂತೆ ವಿನಂತಿಸುತ್ತಾನೆ.

ದೃಶ್ಯ ಏಳರಲ್ಲಿ ನುಡಿದಂತೆ ನಡೆದನು ಹಾವೇರಿ ಹತ್ತಿರದ ಕೊರಡೂರಿನಲ್ಲಿ 1937 ರಲ್ಲಿ 'ಗ್ರಾಮಸೇವಾಶ್ರಮ' ತೆರೆದು ಖಾದಿ ಪ್ರಚಾರಮಾಡಿ 'ಮಹಾದೇವನ ಖಾದಿ' ಎನ್ನುವ ಮಟ್ಟಿಗೆ ಮನೆಮಾತಾದ ಮಹಾದೇವ, ಚಳುವಳಿಗಳು ನಿಲ್ಲದೆ ಕಂದಾಯ ಕಛೇರಿ ಲೂಟಿ ರೈಲು, ಅಂಚೆಕಛೇರಿಗಳ ದಾಖಲೆ ಸುಡುವುದು ಹೀಗೆ ಸ್ವಾತಂತ್ರ್ಯ ಹೋರಾಟ ಭುಗಿಲೆದ್ದಿತು. ಮಹಾದೇವ ತನ್ನ ಹೆಂಡತಿ ಸಿದ್ದಮ್ಮಳನ್ನು ಸಬರಮತಿ ಆಶ್ರಮದಲ್ಲಿ ಕಸ್ತೂರಿಬಾ ಜೊತೆ ಬಿಟ್ಟಿದ್ದನು. ಸಿದ್ಧಮ್ಮ ಕೂಡ ಸ್ವಾತಂತ್ರ್ಯ ಹೋರಾಟದಲ್ಲಿ ಎರಡು-ಮೂರು ಬಾರಿ ಜೈಲಿಗೆ ಹೋಗಿಬಂದಿದ್ದಳು. 1934ರಲ್ಲಿ ಮಹಾದೇವ ಬೆಳಗಾವಿ ಹಿಂಡಲಗಾ ಜೈಲಿನಲ್ಲಿದ್ದಾಗ ಗಾಂಧೀಜಿಯವರು ಬೆಳಗಾವಿಗೆ ಬಂದು ಅವರ ಮನೆಯವರನ್ನು ಸಂಪರ್ಕಿಸಿ ಅವರ ತಾಯಿಯನ್ನು ಕುರಿತು ಹೀಗೆ ಹೇಳುತ್ತಾರೆ. ದೇಶಕ್ಕೆ ಮಗನನ್ನು ಕೊಟ್ಟ ಮಹಾತಾಯಿ ನೀನು ಎಂದು ಪ್ರಶಂಸಿಸುತ್ತಾರೆ. ನಂತರ ಮಹಾದೇವನ ಧರ್ಮಪತ್ನಿ ಸಿದ್ಧಮತಿ ಕುರಿತು ಮೌಲ್ಯಯುತವಾದ ಮಾತಾಡುತ್ತಾರೆ. ಗಾಂಧೀಜಿ ಮಾಡಿದ ಭಾಷಣದಲ್ಲಿ ಮಹಾದೇವನ ಗುಣಗಾನ ಆಗುತ್ತದೆ. ಅಲ್ಲಿ ಸೇರಿದ್ದ ಎಲ್ಲ ಯುವಕರಲ್ಲಿ ಮಹಾದೇವನ ಪ್ರತಿರೂಪ ಕಂಡಂತೆ ಅನುಭವವಾಗುತ್ತದೆ. ಹರಿಜನರನ್ನು ಹಿಂದೂಧರ್ಮದಿಂದ ಬೇರೆ ಮಾಡಬೇಕೆನ್ನುವ ಅವರ ಹುನ್ನಾರ ನಮ್ಮ ಪ್ರತಿಭಟನೆಗಳಿಂದ ವಿಫಲವಾಗುತ್ತದೆ. ಹರಿಜನೋದ್ಧಾರದ ಕಾರ್ಯಕ್ರಮ. ಜಾತಿ ನಿರ್ಮೂಲನೆ ಆಗದೆ ಹೋದರೆ ಭಾರತಕ್ಕೆ ಭವಿಷ್ಯವಿಲ್ಲ ಎಂದು ತಿಳಿ ಹೇಳಿದರು. ಮಹಾದೇವನ ತಾಯಿಯಾದ ಬಸಮ್ಮನನ್ನು ಕುರಿತು ಹೇಳುವ ಮಾತೆಂದರೆ 'ನಿನ್ನ ಮುಖದಲ್ಲಿ ನನಗೆ ಭಾರತಮಾತೆಯ ಭವ್ಯತೆ ಗೋಚರಿಸುತ್ತದೆ ತಾಯಿ' ಎಂದು ಹೇಳಿದಾಗ ತಾಯಿ ಬಸಮ್ಮನಿಗೆ ಇದಕ್ಕಿಂತ ಅನ್ಯತಾ ಭಾಗ್ಯಬೇಡವೆನಿಸಿರಬೇಕು.

ಎಂಟನೇ ದೃಶ್ಯದಲ್ಲಿ ಚಲೇಜಾವ್ ಚಳುವಳಿ ತೀವ್ರಗೊಳಿಸುವಂತೆ ಗಾಂಧಿ ಕೊಟ್ಟ ಕರೆಯಿಂದ ಉತ್ಸುಕನಾದ ಮಹಾದೇವ ಹೆಂಡತಿಗೆ ತಿಳಿಸಿದಾಗ ಹೋಗಿ ಬಾ ನನ್ನ ದೊರೆಯೆ ಎಂದು ಹೇಳುತ್ತಾಳೆ. ಮುಂದಿನ ದೃಶ್ಯದಲ್ಲಿ ಇತರೆ ಸ್ವಾತಂತ್ರ್ಯ ಹೋರಾಟಗಾರರಾದ ಗೋಣೆಪ್ಪ, ವಾಸುರೆಡ್ಡಿ, ಚಾಂದೂ, ಯುವಕ ವೀರಯ್ಯ, ತಿರುಕಪ್ಪ, ಮುದುಕಪ್ಪ ಹಡದಪ್ಪ, ನಿಂಗಪ್ಪ ಎಲ್ಲರೂ ಒಟ್ಟುಗೂಡಿ 'ಬ್ರಿಟಿಷರೇ ಭಾರತಬಿಟ್ಟು ತೊಲಗಿ' ಈ ಗಳಿಗೆಯಿಂದ ಸ್ವಾತಂತ್ರ್ಯ ಲಭಿಸುವವರೆಗೂ ವಿರಮಿಸುವುದಿಲ್ಲ ಇದು ನಮ್ಮ ಕೊನೆ ಹೋರಾಟ ಎಂದು ಪ್ರತಿಜ್ಞೆ ಮಾಡಿದಂತೆ ಒಂದೊಂದು ಪಾತ್ರಗಳು ಮಾತನಾಡುತ್ತವೆ.

ನಾಟಕದ ಕೊನೆ ದೃಶ್ಯದಲ್ಲಿ ಪೈ ಎನ್ನುವ ಪೊಲೀಸ್ ಅಧಿಕಾರಿ ಮಹಾದೇವನನ್ನು ಹಿಡಿದೇ ತೀರುತ್ತೇನೆಂದು ಪಣತೊಟ್ಟಿರುವ ವಿಚಾರ ಎಲ್ಲಾ ಕಡೆ ಪ್ರಚಾರವಾಗಿತ್ತು. ಮಹಾದೇವಪ್ಪ ಪೊಲೀಸರ ಗುಂಡಿಗೆ ಬಲಿಯಾಗುತ್ತಾನೆ. ಬೇರೆ ಸಹಪಾಠಿಗಳು ಎಷ್ಟೇ ಹೇಳಿದರು ಕೇಳದೆ ಮಹಾದೇವ ಸತ್ಯ-ಅಹಿಂಸೆಗೆ ನಿಷ್ಠನಾಗಿ ತನ್ನ ಪ್ರಾಣವನ್ನು ದೇಶಸೇವೆಗೆ ಮುಡಿಪಿಟ್ಟ ಗಾಂಧಿಯ ಅಂತರಂಗದ ಶಿಷ್ಯನಾಗಿ, ಮಹಾಸತ್ಯಾಗ್ರಹಿಯಾಗಿ

ಹೋರಾಡಿ ಮಡಿದ ಮಹಾವೀರ. ಈ ನಾಟಕವನ್ನು ಶ್ರೀಯುತ ಮನು ಬಳಿಗಾರ್ ಅವರು ತುಂಬಾ ಸರಳ ಸುಂದರ ಭಾಷೆಯಲ್ಲಿ ರಚಿಸಿ ಓದುಗರಲ್ಲಿ ನವಚೈತನ್ಯ, ದೇಶಭಕ್ತಿ ಮೂಡುವಂತೆ ಮಾಡಿದ್ದಾರೆ.

❖

# ಗಾಂಧಿಯುಗದ ಕನ್ನಡದ ಕೊಂಡಿ ದಂಡಿ ಮೈಲಾರ

ಡಾ. ಆರ್. ನಟರಾಜ್ ತಲಘಟ್ಟಪುರ

"**ಮಾ**ತು ಮೌನವಾಗಿ, ಶಬ್ಧ ಮೂಕವಾಗಿ, ಹುತಾತ್ಮನ ಹಾಡಾಗಿ ಎದೆಯೊಳಗ ದುಃಖ ಹೆಪ್ಪುಗಟ್ಟಿ, ಆ ಹೆಪ್ಪು ಕರಗಿ ಝರಿ ಹರಿದಾಗ ನಾ ಬರೆದದ್ದು ಈ ಲಾವಣಿ"-ಮನು ಬಳಿಗಾರರ ಮೈಲಾರ ಮಹಾದೇವ ನಾಟಕದ ಮೊದಲ ದೃಶ್ಯದಲ್ಲಿ ಸಮ್ಮದ್ ಸಾಹೇಬ್ ಹೀಗೆ ಹೇಳುತ್ತಾನೆ. ಈ ಪಾತ್ರದ ಮಾತುಗಳು ನಾಟಕಕಾರರಿಗೂ ಅನ್ವಯಿಸುತ್ತವೆ. ಉತ್ತರ ಕರ್ನಾಟಕದ ಮೂಲದವರಾದ ಬಳಿಗಾರರು ಸಂವೇದನಾಶೀಲರು. ತನ್ನೂರಿನ ಐತಿಹಾಸಿಕ ವ್ಯಕ್ತಿ ಮೈಲಾರ ಮಹಾದೇವನ ಬಗೆಗಿನ ಆರ್ದ್ರತೆ ಹಾಗೂ ಕಾಡಿದ್ದರ ಫಲ ಮೈಲಾರ ಮಹಾದೇವ ನಾಟಕ.

ಮೈಲಾರ ಮಹಾದೇವ ಬಳಿಗಾರರ ಮೊದಲ ಹಾಗೂ ಏಕೈಕ ಪ್ರಕಟಿತ ನಾಟಕ. ಈ ನಾಟಕ ರಚನೆಗೂ ಮುಂಚೆ ಬಳಿಗಾರರೇ ಹೇಳಿಕೊಳ್ಳುವಂತೆ ಅಂದರೆ 28 ವರ್ಷಗಳ ಹಿಂದೆ 32 ಪುಟಗಳ ನಾಟಕವೊಂದನ್ನು ಬರೆದಿದ್ದು ಗೆಳೆಯರೊಬ್ಬರು ಅದನ್ನು ಕಳೆದು ಹಾಕಿದ್ದು ಅದು ಪ್ರಕಟವಾಗದೇ ನಷ್ಟವಾಗಿದೆ - ಹೀಗಾಗಿ ಮೈಲಾರ ಮಹಾದೇವ ನಾಟಕ ಲೇಖಕರ ಏಕೈಕ ನಾಟಕವಾಗಿದೆ. ಕಥೆ, ಪ್ರಬಂಧ, ಜೀವನ ಚರಿತ್ರೆ, ಕಾವ್ಯ ಹೀಗೆ ಹಲವು ಪ್ರಕಾರಗಳ ಸರಿಸುಮಾರು ಇಪ್ಪತ್ತೈದು ಕೃತಿಗಳನ್ನು ರಚಿಸಿದ್ದಾರೆ. ಈ ನಾಟಕವೂ ಒಂದು.

ಮೈಲಾರ ಮಹಾದೇವ ಹತ್ತು ದೃಶ್ಯಗಳ ಒಂದು ಪರಿಪೂರ್ಣ ಐತಿಹಾಸಿಕ ನಾಟಕ. ಲಾವಣಿ ಹಾಡುಗಳು ಹಾಗೂ ಪ್ರತಿಮಾತ್ಮಕ ಸಂಭಾಷಣೆಯ ಕಾರಣಗಳಿಂದಾಗಿ ನಾಟಕ ಶ್ರೇಷ್ಠತೆಯ ಕಡೆಗೆ ತುಡಿದಿದೆ. ಧಾರವಾಡ ಜಿಲ್ಲೆಯ ಮೋಟೆಬೆನ್ನೂರು ಗ್ರಾಮದ ಮಹಾದೇವನನ್ನು ಕೇಂದ್ರವಾಗಿಸಿಕೊಂಡು ರಚನೆಯಾಗಿರುವ ಈ ನಾಟಕದಲ್ಲಿ ಸ್ವಾತಂತ್ರ್ಯಪೂರ್ವದ ಗಾಂಧಿ ಚಳುವಳಿಯನ್ನು ಗಾಂಧೀ ಆಹ್ವಾನದ ಮೇರೆಗೆ ಹಮ್ಮಿಕೊಂಡ ಉಪ್ಪಿನ ಸತ್ಯಾಗ್ರಹ, ರಾಷ್ಟ್ರ ಪ್ರೇಮದ ಐತಿಹಾಸಿಕ ವಿವರಗಳನ್ನು ನಾಟಕ ಒಳಗೊಂಡಿದೆ.

ಬ್ರಿಟಿಷರ ವಿರುದ್ಧದ ಅನೇಕ ಚಳುವಳಿಗಳಲ್ಲಿ ದಂಡಿ ಉಪ್ಪಿನ ಸತ್ಯಾಗ್ರಹ ಪ್ರಮುಖವಾದದ್ದು. ಬ್ರಿಟಿಷರು ಭಾರತದಲ್ಲಿ ಸಾಮಾನ್ಯಾತಿ ಸಾಮಾನ್ಯರು ಬಳಸುವ ಉಪ್ಪಿನ ಮೇಲೆ ತೆರಿಗೆ ವಿಧಿಸಿದಾಗ

ಮೂಲಭೂತ ಅವಶ್ಯಕ ವಸ್ತುವಿನ ಮೇಲಿನ ತೆರಿಗೆಯ ಕಾನೂನನ್ನು ಇಡೀ ದೇಶವೇ ವಿರೋಧಿಸಿತು. ಗಾಂಧಿ ನೇತೃತ್ವದಲ್ಲಿ ಗುಜರಾತ್‌ನ ದಂಡಿಯಿಂದ ನಾನೂರು ಕಿಲೋಮೀಟರ್ ಕಾಲ್ನಡಿಗೆ ಸತ್ಯಾಗ್ರಹದ ಹೋರಾಟಕ್ಕೆ ದೇಶದಾದ್ಯಂತ ಜನತೆ ಜೊತೆಗೂಡುತ್ತಾರೆ. ದೇಶದ 78 ಸತ್ಯಾಗ್ರಹಿಗಳಲ್ಲಿ ಕರ್ನಾಟಕದ ಏಕೈಕ ವ್ಯಕ್ತಿ ಮೈಲಾರ ಮಹಾದೇವ ಈ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿ, ಹೊರ ಬಂದ ನಂತರ ಭೂಗತರಾಗಿದ್ದುಕೊಂಡು ಕಡೆಗೆ ಬ್ರಿಟಿಷರ ಗುಂಡಿಗೆ ಬಲಿಯಾಗಿ ಹುತಾತ್ಮನಾಗುತ್ತಾನೆ.

ಇಂತಹ ಐತಿಹಾಸಿಕ ಘಟನೆ ಹಾಗೂ ಘಟನೆಯ ಭಾಗಿಯಾದ ಉಪ್ಪಿನ ಮೈಲಾರನನ್ನು ಕೇಂದ್ರವಾಗಿರಿಸಿಕೊಂಡಿರುವ ಈ ನಾಟಕ ಚರಿತ್ರೆಗೆ ಹೆಚ್ಚು ಋಣಿಯಾಗಿದೆ. ಗಾಂಧಿ ಕುರಿತ ವಿವರಗಳ ಜೊತೆಗೆ ಮೈಲಾರನ ವೈಯಕ್ತಿಕ ಬದುಕನ್ನು ನಾಟಕ ಅತ್ಯಂತ ಸರಳವಾಗಿ ವಾಚ್ಯದ ನೆಲೆಯಲ್ಲಿ ಅನಾವರಣಗೊಂಡಿದೆ. ನಾಟಕದ ಉದ್ದಕ್ಕೂ ಮೈಲಾರನ ವ್ಯಕ್ತಿತ್ವವನ್ನು ಆದರ್ಶೀಕರಿಸಲಾಗಿದೆ. ಹಾಗೆಯೇ ಆತನ ಬದುಕನ್ನು ಸಾರಸ್ವತ ಲೋಕದಲ್ಲಿ ಈ ನಾಟಕ ಬರೆಯುವುದರ ಮೂಲಕ ಚಿರಸ್ಥಾಯಿಯಾಗಿಸುವಲ್ಲಿ ಪ್ರಯತ್ನಿಸಿ ಅದರಲ್ಲಿ ಯಶಸ್ವಿಯೂ ಆಗಿದ್ದಾರೆ. ಚರಿತ್ರೆಯಿಂದ ಕತ್ತಲೆಗೆ ಸರಿಸಿದ ವ್ಯಕ್ತಿತ್ವಕ್ಕೊಂದು ರೂಪುಕೊಡುವಲ್ಲಿ ಲೇಖಕರು ಶ್ರಮಿಸಿದ್ದಾರೆ. ‘ಅಂಥ ಪರಂಪರೆಯ ಕಣ್ತೆರೆಸುವುದು, ಯೋಗ್ಯರಿಗೆ ತಕ್ಕ ಸ್ಥಾನ ಕೊಡಿಸುವುದು". ನಾಟಕದ ಆಶಯವಾಗಿದೆ.

ನಾಟಕದ ದೃಶ್ಯ ನಿರ್ಮಿತಿ, ಕಥನಾತ್ಮಕವಾಗಿ ರಂಗ ಪಠ್ಯವಾಗಿಸುವ ನಿಟ್ಟಿನಲ್ಲಿ ನಾಟಕ ಸಫಲತೆಯನ್ನು ಪಡೆದಿದೆ. ಅಲ್ಲಲ್ಲಿ ಬಳಕೆಯಾಗಿರುವ ಲಾವಣಿಗಳು, ವಚನಗಳು, ಕವಿತೆಯಂತಿರುವ ಸಾಲುಗಳು ನಾಟಕವನ್ನು ಕ್ರಿಯಾಶೀಲಗೊಳಿಸಿವೆ. ನಾಟಕದ ಉತ್ತರ ಕರ್ನಾಟಕದ ಭಾಷೆ ಇದಕ್ಕೆ ಪೂರಕವಾಗಿದೆ.

ಕನ್ನಡದಲ್ಲಿ ಅನೇಕ ಐತಿಹಾಸಿಕ ನಾಟಕಗಳು ರಚನೆಗೊಂಡಿವೆ ಅದರಲ್ಲೂ ವಚನಯುಗ ಹಾಗೂ ಗಾಂಧಿ ಕಾಲಘಟ್ಟದ ವಿವರ, ಘಟನೆಗಳು ಆ ಕಾಲ ಘಟ್ಟದ ಇತಿಹಾಸ, ಐತಿಹಾಸಿಕ ವ್ಯಕ್ತಿಗಳ ಕುರಿತಂತೆ ಅನೇಕ ಕೃತಿಗಳು ರಚನೆಯಾಗಿದೆ. ಈ ಎರಡು ಕಾಲವೂ ಸಹ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹಳ ಮಹತ್ತರವಾದವು. ಹಕ್ಕೊತ್ತಾಯದ ಪ್ರಶ್ನೆಗಳು ಆ ಮೂಲಕ ಹುಟ್ಟಿಕೊಂಡ ಚಳುವಳಿಯಲ್ಲಿ ಆದರ್ಶ, ಅಭಿಮಾನಗಳು ಸೂಕ್ಷ್ಮ ಸಂವೇದನೆಯ ವ್ಯಕ್ತಿಗಳು ಬಂದು ಹೋಗಿದ್ದಾರೆ. ಅಂತಹ ವ್ಯಕ್ತಿಗಳನ್ನು ಕೇಂದ್ರವಾಗಿರಿಸಿಕೊಂಡ ನಾಟಕಗಳು ಮುಖ್ಯವಾದವು. ಹೀಗಾಗಿ ಐತಿಹಾಸಿಕ ವ್ಯಕ್ತಿಗಳನ್ನು ಆಧರಿಸಿ ಬರೆದಂತಹ ಕನ್ನಡದ ಅನೇಕ ನಾಟಕಗಳ ಸಾಲಿನಲ್ಲಿ ಮೈಲಾರ ಮಹಾದೇವ ನಾಟಕವು ನಿಲ್ಲುವಂತದು. ಈ ನಾಟಕದಲ್ಲಿ ಚರಿತ್ರೆಯ ದಾಖಲೆಯ ಮಿತಿ ಹಾಗೂ ಅಜ್ಞಾತದ ಅನಿವಾರ್ಯದ ದುರಂತವನ್ನು ಹೇಳಲಾಗಿದೆ. ಅದರಲ್ಲೂ ಅನಕ್ಷರಸ್ಥ ಐತಿಹಾಸಿಕ ವ್ಯಕ್ತಿ ಮೂಲೆಗುಂಪಾಗುವ, ನಿರ್ಲಕ್ಷಿಸಲ್ಪಟ್ಟಿರುವ ವಿಪರ್ಯಾಸವನ್ನು ನಾಟಕ ಪ್ರಶ್ನಿಸುತ್ತದೆ. ‘ಅಕ್ಷರ ಜ್ಞಾನ ಇಲ್ಲದವರ ಚರಿತ್ರೆಯೆಂದರೆ ಒಂಟಿಕಾಲಿನ ಓಟವಿದ್ದಂತೆ. ಸಾವಿರ ಸಾವಿರ

ವರ್ಷಗಳ ಇತಿಹಾಸದಲ್ಲಿನ ಓಟದ ಸ್ಪರ್ಧೆಯಲ್ಲಿ ಅವರು ಹಿಂದುಳಿಯುತ್ತ, ಹಿಂದುಳಿಯುತ್ತ ಎಲ್ಲೋ ಅಗೋಚರರಾಗಿದ್ದಾರೆ. ಅಷ್ಟೆ" ಎಂಬ ನಾಟಕದಲ್ಲಿನ ಇತಿಹಾಸದ ವಿದ್ಯಾರ್ಥಿಯ ಮಾತು ನಾಟಕದ ಆಶಯದಂತಿವೆ. ಇಂತಹ ಧ್ವನಿಯನ್ನು ವ್ಯಕ್ತಪಡಿಸಲಿಕ್ಕೇನೆ ನಾಟಕಕಾರರು ನಾಟಕದ ಆರಂಭದಲ್ಲೇ ಒಂದು ದೃಶ್ಯವನ್ನೇ ಹೆಣೆದಿದ್ದಾರೆ. ಇತಿಹಾಸದ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಮಂಡಿಸುವಲ್ಲಿ ಭಾರತೀಯರ ಐತಿಹಾಸಿಕ ಪ್ರಜ್ಞೆಯ ಮಿತಿಯನ್ನು ಟೀಕಿಸುತ್ತಾರೆ.

ಇನ್ನುಳಿದಂತೆ ನಾಟಕವು ಮಹಾದೇವನ ಪಾತ್ರವನ್ನು ಕೇಂದ್ರವಾಗಿಸಿಕೊಂಡು ರಚನೆಯಾಗಿದ್ದರೂ, ಇಡೀ ನಾಟಕದಲ್ಲಿ ಗಾಂಧಿ ಹಾಗೂ ಉಪ್ಪಿನ ಸತ್ಯಾಗ್ರಹ ಚಳುವಳಿಯೇ ಆವರಿಸಿಕೊಂಡಿದೆ. ಆದರ್ಶದ ಬೆನ್ನು ಹತ್ತಿದ ಯುವಕನಾದ ಮೈಲಾರ ದಂಡಿ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದು ಒಂದು ನೆಲೆಯ ಚಿತ್ರಣವಾದರೆ ಆತ ಗಾಂಧಿ ಬಗೆಗೆ ಇಟ್ಟುಕೊಂಡಿದ್ದ ಅಭಿಮಾನದ ನೆಲೆಯು ಮತ್ತೊಂದು ಕಡೆಯಾಗಿದೆ. ಹೀಗಾಗಿ ನಾಟಕವು ಮೈಲಾರನ ವ್ಯಕ್ತಿಗತ ಜೀವನ ಕಟ್ಟಿಕೊಡುವಷ್ಟೇ ಅಷ್ಟೇ ಏಕೆ ಅದಕ್ಕಿಂತಲೂ ಸಮರ್ಥವಾಗಿ ಗಾಂಧಿ ಪಾತ್ರವನ್ನು ಕಡೆಯಾಗಿದೆ. ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟ ಮಾಡಿದ ವ್ಯಕ್ತಿಯ ಮಗನಾಗಿರುವ ಮನು ಬಳಿಗಾರರಿಗೂ ಗಾಂಧಿ ಆದರ್ಶವಾಗಿರುವ ಕಾರಣಗಳು ಅವರಿಗೆ ಗೊತ್ತಿಲ್ಲದಂತೆ ಈ ನಾಟಕದಲ್ಲಿ ಹೆಚ್ಚು ಭಾಗ ಗಾಂಧಿ ಆವರಿಸಿಕೊಂಡಿದ್ದಾರೆ. ಇದೊಂದು ಬಗೆಯ ಸೃಜನಶೀಲತೆಯ ಸವಾಲು. ಅಂದುಕೊಂಡದ್ದಕಿಂತ ಮೇಲಾಗಿ ಅದರಾಚೆಗೂ ಪ್ರತಿಭೆ ಚಾಚಿಕೊಳ್ಳುವ ದ್ಯೋತಕವಾಗಿದೆ. ಸಬರಮತಿ ಆಶ್ರಮದ ಪ್ರಸಂಗವು ಇದಕ್ಕೆ ಸಾಕ್ಷಿಯಾಗಿದೆ.

ಮಹಾದೇವನಿಗೆ ಆತನ ಚಳುವಳಿಗೆ ಆದರ್ಶಗಳಿಗೆ ತಾಯಿಯೇ ಮೂಲ ಪ್ರೇರಕ ಶಕ್ತಿಯಾಗಿದ್ದವಳು. ರಾಷ್ಟ್ರಪ್ರೇಮ ಉಳ್ಳ ತಂದೆ ತಾಯಿಯರು, ಆತನ ಎಲ್ಲಾ ಚಲನೆಗಳಿಗೆ ಚಕಾರವೆತ್ತದ ಹೆಂಡತಿ ಸಿದ್ಧಮತಿ. ಈ ಪಾತ್ರಗಳು ನಾಟಕದಲ್ಲಿ ಜೀವತಳೆಯುವ ರೀತಿ ಮೆಚ್ಚಬೇಕು. ಆದರೆ ಇವು ಅಷ್ಟೊಂದು ಸಶಕ್ತ ಪಾತ್ರಗಳಾಗಿಲ್ಲ. ನಾಟಕಕಾರರು ಮಹಾದೇವನ ರಾಷ್ಟ್ರಪ್ರೇಮದ ಐತಿಹಾಸಿಕ ಸತ್ಯಗಳನ್ನು ನಾಟಕೀಯಗೊಳಿಸುವುದರ ಜೊತೆಗೆ ಆತನ ವಯಕ್ತಿಕ ಹಾಗೂ ಸಾಂಸಾರಿಕ ಬದುಕಿನ ಅನಾವರಣವನ್ನು ಅಲ್ಲಿನ Conflict ಅನ್ನು ಉತ್ತಮವಾಗಿ ನಿಭಾಯಿಸಿದ್ದಾರೆ. ಅಲ್ಲದೆ ಇನ್ನು ಅನೇಕ ಕಾರಣಗಳಿಂದಾಗಿಯೂ ನಾಟಕ ಸಂಕೀರ್ಣತೆಯನ್ನು ಪಡೆಯುವಲ್ಲಿ ಸಫಲವಾಗಿದೆ. ಒಂದು ನೇರಗೆರೆಯಂತೆ ಮಹಾದೇವನ ಬದುಕನ್ನು ನಾಟಕವಾಗಿಸಿದ್ದಾರೆ.

ನಾಟಕದಲ್ಲಿನ ಮಹಾದೇವನ ಮಾತುಗಳಲ್ಲಿ ಸಮಕಾಲೀನ ಸಂದರ್ಭದ ಭಾಷಣ ಸ್ವರೂಪದ ಮಾತುಗಳು ನಾಟಕದ ಗಟ್ಟಿತನಕ್ಕೆ ಪೂರಕವಾಗಿವೆ. "ಮನು ಬಳಿಗಾರ್ ನಮ್ಮ ನಡುವಿನ ಸಮರ್ಥ ಲೇಖಕ. ಇನ್ನೂ ಬೆಳೆಯಬಲ್ಲ ಮುಕ್ತ ಮನಸ್ಸಿನ ಲೇಖಕ. ಹದವಾದ ದೃಷ್ಠಿಯ ಲೇಖಕ ಎಂದು ನನಗೆ ಅನ್ನಿಸಿದೆ" ಎನ್ನುವ ಅನಂತಮೂರ್ತಿಯವರ ಮಾತನ್ನು ನಾನೂ ಅನುಮೋದಿಸುತ್ತೇನೆ. ಮೈಲಾರ ಮಹಾದೇವನಂತಹ

ಐತಿಹಾಸಿಕ ವ್ಯಕ್ತಿಯನ್ನು ನಾಟಕವಾಗಿ ದಾಖಲಿಸಿದ್ದು ಅವರ ಸೂಕ್ಷ್ಮ ಸಂವೇದನಾಶೀಲ ವ್ಯಕ್ತಿತ್ವದ ದ್ಯೋತಕವಾಗಿದೆ.

ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸಿ ಅವರನ್ನು ಒಂದು ನೆಲೆಗೆ ತರುವ ಮನೋಭಾವ ಅವರ ಈ ಕೃತಿಗಿಂತಲೂ ಅವರ ಸುತ್ತಲಿನವರ ಬಗೆಗೂ ಇದೆ. ಇದು ಆರೋಗ್ಯಪೂರ್ಣ ಸಮಾಜದ ನಿರ್ಮಾಣಕ್ಕೆ ಪೂರಕವಾಗಿರುವಂತದು. ಅಜ್ಞಾತನಾಗಿದ್ದ ದಂಡಿ ಮಹಾದೇವನನ್ನು ಒಂದು ನಾಟಕದ ಮೂಲಕ ಚಿರಸ್ಥಾಯಿಯಾಗಿಸಿದ್ದಕ್ಕೆ ಧನ್ಯವಾದಗಳು.

❖

# ಡಾ. ಮನು ಬಳಿಗಾರ್ ಅವರ ಮೈಲಾರ ಮಹಾದೇವ

ಡಾ. ಚಿತ್ರಲಿಂಗಯ್ಯ ಡಿ.ಸಿ.

ಮನು ಬಳಿಗಾರ್ ಅವರದು ಬಹುಮುಖ ಪ್ರತಿಭೆ. ಇವರು ಲೇಖಕರಾಗಿ, ಕವಿಗಳಾಗಿ, ನಾಟಕಕಾರರಾಗಿ, ಹಾಡುಗಾರರಾಗಿ, ಉತ್ತಮ ವಾಗ್ಮಿಗಳಾಗಿ ಕನ್ನಡ ನಾಡಿನ ಜನತೆಗೆ ಚಿರಪರಿಚಿತರಾಗಿದ್ದಾರೆ. ಅಷ್ಟೇ ಅಲ್ಲದೆ ಕರ್ನಾಟಕ ಸರ್ಕಾರದ ಅತಿ ದಕ್ಷ ಆಡಳಿತಗಾರರೆಂದು ಹೆಸರು ಪಡೆದಿದ್ದಾರೆ. ತಮ್ಮ ವೃತ್ತಿಕ್ಷೇತ್ರ ಆಡಳಿತದ ಕ್ಷೇತ್ರವಾದರೂ ಸಾಹಿತ್ಯ ಕೃಷಿಯನ್ನ ತಮ್ಮ ಪ್ರವೃತ್ತಿಯ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡು ವೃತ್ತಿ ಮತ್ತು ಪ್ರವೃತ್ತಿಯ ಕ್ಷೇತ್ರದಲ್ಲಿ ಅಪಾರವಾದ ಸಾಧನೆಯನ್ನು ಮಾಡಿರುವುದು ಇವರ ವ್ಯಕ್ತಿತ್ವದ ವೈಶಿಷ್ಟ್ಯವೆನ್ನಬಹುದು.

ಮನು ಬಳಿಗಾರ್ ಅವರು ಆಡಳಿತ ಕ್ಷೇತ್ರದಲ್ಲಿ ಅಪಾರವಾದ ಅನುಭವವುಳ್ಳವರೆಂಬುದಕ್ಕೆ ನಿದರ್ಶನವಾಗಿ ಅವರು ಯಶಸ್ವಿಯಾಗಿ ನಿರ್ವಹಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಜವಾಬ್ದಾರಿ, ಪ್ರಸ್ತುತವಾಗಿ ನಿರ್ವಹಿಸುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರ ಜವಾಬ್ದಾರಿಗಳನ್ನು ಗಮನಿಸಬಹುದು. ಅಷ್ಟೇ ಅಲ್ಲದೆ ಇವರು ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಯ ಮರಾಠಿ ಮಾತನಾಡುವವರ ಮನಸ್ಸನ್ನು ಗೆದ್ದು ಅವರನ್ನು ಕನ್ನಡ ಕಲಿಯುವಂತೆ ಮಾಡಿದ ಮೊದಲ ಕನ್ನಡದ ಅಧಿಕಾರಿಯೆಂಬ ಪ್ರಶಂಸೆಯೂ ಸಹ ಇವರದ್ದಾಗಿದೆ.

ಇವರು ತಮ್ಮ ಪ್ರವೃತ್ತಿಯ ಕ್ಷೇತ್ರವಾದ ಕನ್ನಡ ಸಾಹಿತ್ಯದ ಕೃಷಿಯಲ್ಲಿ ಸುಮಾರು 22 ಪುಸ್ತಕಗಳನ್ನು, 5 ಕವನ ಸಂಕಲನಗಳನ್ನು, 3 ಜೀವನ ಚರಿತ್ರೆಗಳನ್ನು, 2 ಪ್ರಬಂಧಗಳನ್ನು ಮತ್ತು 4 ಸಣ್ಣಕತೆಗಳ ಸಂಗ್ರಹವನ್ನು ನೀಡಿದ್ದಾರೆ. ಇವರ ಸೃಜನಶೀಲತೆಯ ಸಂಕೇತವಾಗಿ 'ಮೈಲಾರ ಮಹಾದೇವ' ಎಂಬ

ನಾಟಕವು ಹೊರಬಂದಿರುವುದನ್ನು ಕಾಣಬಹುದು. ಮನು ಬಳಿಗಾರ್ ಅವರ ಈ ನಾಟಕವು ದೇಶಭಕ್ತಿಯ ಸಂಕೇತವಾಗಿ ಮೂಡಿಬಂದಿದೆ. ‘ಜನ್ಮಭೂಮಿಯ ಮೀರಿದ ಸ್ವರ್ಗವಿಲ್ಲ, ಮಾತೃಭಾಷೆಯ ಮೀರಿದ ಅಮೃತವಿಲ್ಲ'ವೆಂಬ ಸಾಹಿತಿ ಅರವಿಂದ ಮಾಲಗತ್ತಿಯವರ ನುಡಿಯಂತೆ ಈ ಜನ್ಮಭೂಮಿಗೆ ವಿಶಿಷ್ಟವಾದ ಹೆಸರನ್ನು ತಂದುಕೊಟ್ಟ ಮೈಲಾರ ಮಹಾದೇವಪ್ಪನ ತ್ಯಾಗದ ಬದುಕನ್ನು ಕುರಿತು ಈ ನಾಟಕ ಸಹೃದಯರಿಗೆ ಮನಮುಟ್ಟುವ ಹಾಗೆ ಚಿತ್ರಿಸುತ್ತದೆ.

ಈ ನಾಟಕದ ಅಧ್ಯಯನದಿಂದ ಮೈಲಾರ ಮಹಾದೇವಪ್ಪನ ಬದುಕು ಬೇರೆ ವ್ಯಕ್ತಿಗಳ ಬದುಕಿಗಿಂತ ಹೇಗೆ ಭಿನ್ನವಾದದ್ದು ಎಂಬುದು ತಿಳಿಯುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಮುಂಚೂಣಿ ನಾಯಕರ ಹೆಸರಿನ ಬಗ್ಗೆ ತಿಳಿದುಕೊಂಡಿರುವಂತೆ ಅವರಿಗೆ ಬೆನ್ನಲುಬು ಆಗಿರುವ ಅನೇಕ ಶೂರರ ಬಗೆಗೆ ನಾವು ತಿಳಿದುಕೊಂಡಿರುವುದಿಲ್ಲ. ಸ್ವಾತಂತ್ರ್ಯದ ಜಯದಲ್ಲಿ ಈ ಶೂರರ ಪಾತ್ರವು ಸಹ ಅತ್ಯಧಿಕವಾಗಿರುತ್ತದೆ. ಹಾಗಾಗಿ ಇಂತಹ ಶೂರರ ನೆನಪು ಅತ್ಯಗತ್ಯವೆಂಬುದರ ಸಂಕೇತವಾಗಿ ಈ ನಾಟಕ ಮೂಡಿಬಂದಿದೆ.

ಈ ನಾಟಕದ ಕೇಂದ್ರ ಪಾತ್ರವಾಗಿರುವ ಮೈಲಾರ ಮಹಾದೇವಪ್ಪ ಅವರು ಧಾರವಾಡ ಜಿಲ್ಲೆಯ ಮೋಟೆಬೆನ್ನೂರು ಗ್ರಾಮದವರು. ಸ್ವಾತಂತ್ರ್ಯ ಚಳುವಳಿಗಾಗಿ ಈ ಚಾರಿತ್ರಿಕ ದಂಡಿಯಾತ್ರೆಯಲ್ಲಿ ಗಾಂಧೀಜಿಯ ಜೊತೆ ಹೆಜ್ಜೆ ಹಾಕಿದ ದೇಶದ ಕೇವಲ ಎಪ್ಪತ್ತೆಂಟು ಸತ್ಯಾಗ್ರಹಿಗಳಲ್ಲಿ ಇವರು ಕನ್ನಡ ನಾಡಿನ ಏಕಮೇವ ಪ್ರತಿನಿಧಿಯಾಗಿದ್ದರು. ತನ್ನ ಹೋರಾಟದಿಂದಾಗಿ ‘ಉಪ್ಪಿನ ಮೈಲಾರ'ನೆಂದೆ ಹೆಸರು ಪಡೆದರು. ಅಲ್ಲದೆ ಮಹಾತ್ಮಗಾಂಧೀಜಿಯವರಿಂದಲೇ ‘ಮಹಾದೇವ ನನ್ನ ಅಂತರಂಗದ ಶಿಷ್ಯ'ನೆಂದು ಕರೆಯಿಸಿಕೊಳ್ಳುತ್ತಾರೆ. ಚಂದ್ರಶೇಖರ್ ಆಝಾದ್, ಭಗತ್‌ಸಿಂಗ್ ಅವರಂತಹ ವೀರರಿಗೆ ಸರಿಸಮನಾದ ಶೂರ ಇವರಾಗಿರುತ್ತಾರೆ. ಇಂತಹ ಶೂರನ ಬದುಕು ಎಂತಹ ನಿಸ್ವಾರ್ಥಮಯವಾಗಿತ್ತೆಂಬುದರ ಮೇಲೆ ಈ ನಾಟಕ ಬೆಳಕು ಚೆಲ್ಲುತ್ತದೆ.

ನಾಟಕದ ಆರಂಭದಲ್ಲಿ ನಾಟಕಕಾರ ಮೂವರು ಯುವ ಇತಿಹಾಸ ವಿದ್ಯಾರ್ಥಿಗಳು ಸಮದ್ ಸಾಹೇಬ್ ತಿಳಿಸಿದ ಮೈಲಾರ ಮಹಾದೇವಪ್ಪನ ಸಾಧನೆಯ ಬಗೆಗೆ ಇತಿಹಾಸದ ಪುಸ್ತಕದಲ್ಲಿ ಹುಡುಕುವ ಕಾರ್ಯವನ್ನು ತರುತ್ತಾರೆ. ಈ ಸಂಗತಿಯು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು, ಸಮಾಜದ ಮುಂಚೂಣಿಗೆ ಬರದೆ ಎಲೆ ಮರೆಯ ಕಾಯಿಯಂತೆ ಇರುವ ಅನೇಕ ಯೋಧರನ್ನು ಪತ್ತೆ ಹಚ್ಚಿ ಅವರನ್ನು ಗೌರವಿಸಬೇಕೆಂದರೆ ಮೊದಲು ಇತಿಹಾಸದ ಶೋಧ ತುಂಬ ಪ್ರಾಮಾಣಿಕವಾಗಿ ನಡೆಯಬೇಕು ಎಂಬುದರ ಸಂಕೇತವಾಗಿ ನಾಟಕಕಾರರು ಈ ನಾಟಕವನ್ನು ಹೀಗೆ ಆರಂಭಿಸುತ್ತಾರೆನ್ನಬಹುದು.

ಆ ವಿದ್ಯಾರ್ಥಿಗಳು ಇತಿಹಾಸ ಪುಸ್ತಕದಲ್ಲಿ ಪುಟಗಳನ್ನು ತಿರುವಿ ಹಾಕುತ್ತಿರುವಾಗ ‘ಉಪ್ಪಿನ ಸತ್ಯಾಗ್ರಹ'ದಲ್ಲಿ ಮೈಲಾರ ಮಹಾದೇವಪ್ಪನ ಹೆಸರು ಇಲ್ಲದಿದ್ದಾಗ ಅವರಿಗೆ ನಿರಾಶೆಯಾಗುತ್ತದೆ. ಆಗ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನ ಇಲ್ಲದವರ ಚರಿತ್ರೆಯೆಂದರೆ ಒಂಟಿ ಕಾಲಿನ ಓಟವಿದ್ದಂತೆ, ಸಾವಿರ ಸಾವಿರ ವರ್ಷಗಳ ಇತಿಹಾಸದಲ್ಲಿನ ಓಟದ ಸ್ಪರ್ಧೆಯಲ್ಲಿ ಅವರು ಕಣ್ಮರೆಯಾಗುತ್ತಾರೆಂಬ ಅಂಶ ಅರಿವಾಗುತ್ತದೆ. ಇಲ್ಲಿ

ನಾಟಕಕಾರರ ಪ್ರಮುಖ ಉದ್ದೇಶವೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಪ್ರತಿಯೊಬ್ಬ ಶೂರನ ಬಗೆಗೂ ಇತಿಹಾಸದಲ್ಲಿ ದಾಖಲಾಗಬೇಕಾಗುತ್ತದೆ. ಆಗ ಮಾತ್ರ ನಾವು ಆ ವೀರನಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಇಲ್ಲದಿದ್ದರೆ ಆ ಇತಿಹಾಸ ಅಪರಿಪೂರ್ಣ ಇತಿಹಾಸವಾಗುತ್ತದೆ.

ಇಲ್ಲಿ ನಾಟಕಕಾರರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಇತಿಹಾಸದಲ್ಲಿ ನಿರ್ಲಕ್ಷಿತವಾದ ವ್ಯಕ್ತಿಗಳ ಬಗೆಗಿನ ನೋವನ್ನು ವ್ಯಕ್ತಪಡಿಸುತ್ತಾರೆ. ನಂತರ ಈ ನಾಟಕದ ರಚನೆಯಿಂದಲೇ ಇತಿಹಾಸದ ಅಂಧ ಪರಂಪರೆಯ ಕಣ್ತೆರೆಸುವುದನ್ನು ಮತ್ತು ಯೋಗ್ಯರಿಗೆ ತಕ್ಕ ಸ್ಥಾನ ದೊರಕಿಸಿಕೊಡುವ ಪ್ರಯತ್ನವನ್ನು ಮಾಡುತ್ತಾರೆ.

ಮೈಲಾರ ಮಹಾದೇವಪ್ಪ ಮಹಾತ್ಮಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ತನ್ನ ಇಡೀ ಜನ್ಮವನ್ನು ದೇಶಸೇವೆಗೆ ಸಂಪೂರ್ಣವಾಗಿ ಮೀಸಲಿಡುತ್ತಾನೆ. ಇದೇ ರೀತಿ ಅನೇಕ ವ್ಯಕ್ತಿಗಳು ಸಹ ಸಂಪೂರ್ಣವಾಗಿ ತಮ್ಮ ಜೀವನವನ್ನು ಈ ನಾಡಿಗೆ ಮುಡಿಪಾಗಿಟ್ಟಿರುವ ಬಗೆಗೆ ಓದುಗರು ವಿವೇಚಿಸುವಂತೆ ಈ ನಾಟಕ ಅವರನ್ನು ಪ್ರೇರೇಪಿಸುತ್ತದೆ. ನಾಟಕಕಾರರು ಆಧ್ಯಾತ್ಮಿಕತೆಯ ಸ್ವರೂಪದಂತಿದ್ದ ಸಾಬರಮತಿ ಆಶ್ರಮದ ನಿಯಮಗಳನ್ನು ಈ ನಾಟಕದಲ್ಲಿ ತುಂಬ ವಿಸ್ತಾರವಾಗಿ ತಿಳಿಯಬಯಸುತ್ತಾರೆ. ಅಂದರೆ ಆಶ್ರಮದಲ್ಲಿ ಇರುವವರು ನಸುಕಿನಲ್ಲಿ ಏಳುವುದು, ಪ್ರಾರ್ಥನೆ, ಧ್ಯಾನ, ಯೋಗ, ಚರಕ ತಿರುಗಿಸುವುದು (ನೂಲುವುದು), ಉಪವಾಸ, ಸರಳ ಮಿತ ಆಹಾರ, ಶ್ರಮದಾನ, ಹರಿಜನ ಸೇವೆ, ಪಾದಯಾತ್ರೆ ಮುಂತಾದವುಗಳನ್ನು ತುಂಬ ನಿಷ್ಠೆಯಿಂದ ಪಾಲಿಸಬೇಕಾಗುತ್ತದೆ. ಈ ನಿಯಮಗಳನ್ನು ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಪಾಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ಶ್ರೇಷ್ಠ ವ್ಯಕ್ತಿತ್ವದಿಂದ ಕೂಡಿದ ವ್ಯಕ್ತಿಯಿಂದ ಮಾತ್ರ ಸಾಧ್ಯವಾಗುವುದು. ಆದ್ದರಿಂದಲೆ ಗಾಂಧೀಜಿಯವರು ತಮ್ಮ ಸಾಬರಮತಿ ಆಶ್ರಮಕ್ಕೆ ಬಂದ ಮೈಲಾರ ಮಹಾದೇವನಿಗೆ ಆರಂಭದಲ್ಲಿಯೇ ಆಶ್ರಮದ ನಿಯಮಾವಳಿಗಳು ಬಹಳ ಕಠಿಣವಾದವುಗಳೆಂದು ತಿಳಿಸುತ್ತಾರೆ. ಮೈಲಾರ ಮಹಾದೇವನು ಅಪಾರವಾದ ದೇಶಭಕ್ತಿಯನ್ನು ಹೊಂದಿದ್ದರಿಂದ ಈ ನಾಡ ಸೇವೆಗಾಗಿ ಈ ಎಲ್ಲಾ ನಿಯಮಗಳನ್ನು ನಾನು ಪ್ರಾಮಾಣಿಕವಾಗಿ ಪಾಲಿಸುತ್ತೇನೆಂಬ ಒಪ್ಪಿಗೆಯನ್ನು ನೀಡಿ ಅದರಂತೆಯೇ ನಡೆದುಕೊಳ್ಳುತ್ತಾನೆ.

ಗಾಂಧೀಜಿಯವರ ಸಾಬರಮತಿ ಆಶ್ರಮದ ನಡೆ ತುಂಬ ಅದ್ಭುತವಾದದ್ದು. ಸಮಾಜದಲ್ಲಿನ ಯಾವ ಆಧ್ಯಾತ್ಮಿಕ ಮಠಗಳು ಸಹ ಈ ಆಶ್ರಮಕ್ಕೆ ಸರಿಸಮವೆನಿಸಲಾರವು. ಹಾಗಾಗಿಯೇ ಈ ನಾಡು ಕಂಡಂತಹ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕ ಸಂತ ಮಹಾತ್ಮಗಾಂಧೀಜಿ ಎಂದು ಹೇಳಬಹುದು. ಹಾಗೆಯೇ ಶ್ರಮ ಸಂಸ್ಕೃತಿಯ ಪರಿಕಲ್ಪನೆಯನ್ನು ಮಹಾತ್ಮಗಾಂಧೀಜಿಯವರ ಜೀವನದಲ್ಲಿ ಕಾಣಬಹುದೆಂಬುದನ್ನು ಈ ನಾಟಕವು ತಿಳಿಸುತ್ತದೆ.

ನಾಟಕಕಾರರಲ್ಲಿ ನಾಟಕ ರಚಿಸುವಂತಹ ಶೈಲಿ ಅತ್ಯದ್ಭುತವಾಗಿದೆ. ಗಾಂಧೀಜಿಯ ಸಾಬರಮತಿ ಆಶ್ರಮದ ವರ್ಣನೆಯಂತೂ ಓದುಗರನ್ನು ಆಶ್ರಮಕ್ಕೆ ಕರೆತಂದಂತೆಯೇ ಆಗುತ್ತದೆಂಬುದನ್ನು ಮಹಾದೇವ ತನ್ನ ಸಹಪಾಠಿಗೆ ಹೇಳುವ ಮಾತಿನಲ್ಲಿ ಕಾಣಬಹುದು. "ಈ ಆಶ್ರಮದ ಗಾಳಿಯಲ್ಲಿ ಏನೋ ಒಂದು ಪರಿಮಳ ಇದೆ. ಇಡೀ ವಾತಾವರಣಕ್ಕೆ ಒಂದು ವಿಶಿಷ್ಟ ಆಕರ್ಷಣ ಗುಣವಿದೆ. ಪಾತಾಳದಿಂದ ಸ್ವರ್ಗಕ್ಕೆ, ಮರುಭೂಮಿಯಿಂದ ಓಯಸಿಸ್‌ಗೆ ಬಂದಂತಹ ಅನುಭವವಾಗುತ್ತದೆ ನನಗೆ. ದೂರದ ನನ್ನ ನಾಡಿನಿಂದ ಸಾವಿರಾರು ಮೈಲಿ ಪ್ರಯಾಣಿಸಿ ಬರುತ್ತಿದ್ದಾಗ ನನಗೆ ದಾರಿಯಲ್ಲಿನ ಗುಡ್ಡ ಬೆಟ್ಟ, ಗಿಡಗಂಟೆ ಬಳ್ಳಿ, ಹಳ್ಳ ಕೊಳ್ಳ ಹಸಿರು ಯಾವುದು ಸರಿಯಾಗಿ ಕಾಣುತ್ತಲೇ ಇರಲಿಲ್ಲ. ರೈಲಿನಲ್ಲಿಯ ವಿಪರೀತ ಗದ್ದಲ ಮಾತು ಕಿವಿಯೊಳಗೆ ಹೋಗುತ್ತಲೇ ಇರಲಿಲ್ಲ. ಎಲ್ಲ ವಿಚಿತ್ರಾನುಭವವಾಗುತ್ತಿತ್ತು. ಗಾಡಿ ಓಡುತ್ತಿದ್ದರೂ ವೇಗ ಸಾಲದು ಎನಿಸಿ ಪಕ್ಕನೆ ಇಳಿದು ಸಾಬರಮತಿಗೆ ಓಡಿಬಿಡಲೇ ಎಂಬ ಧಾವಂತ ನನ್ನದಾಗಿತ್ತು" (ಪು. 15), ಈ ಮಾತಿನಲ್ಲಿ ಮಹಾದೇವನಲ್ಲಿ ಇರುವ ಗುರಿಯ ಬಗೆಗಿನ ತವಕವನ್ನು ಹಾಗೂ ಆಶ್ರಮದಲ್ಲಿನ ಉತ್ತಮ ವಾತಾವರಣವನ್ನು ಗಮನಿಸಬಹುದು.

ಈ ನಾಟಕದಲ್ಲಿ ಗುರುವಾಗಿ ಗಾಂಧೀಜಿ, ಶಿಷ್ಯನಾಗಿ ಮಹಾದೇವ ಎಂಬ ಪಾತ್ರಗಳನ್ನು ತರುವ ಮೂಲಕ ನಾಟಕಕಾರ ಗುರುಶಿಷ್ಯರ ಒಡನಾಟ ಯಾವ ರೀತಿ ಉತ್ತಮವಾಗಿತ್ತು, ಶಿಷ್ಯನು ತನ್ನ ಗುರುವಿನ ಮಾತನ್ನು ಇಡೀ ಜೀವಮಾನದುದ್ದಕ್ಕೂ ಯಾವ ರೀತಿ ಪಾಲಿಸುತ್ತಿದ್ದನೆಂಬುದನ್ನು ತಿಳಿಸುತ್ತಾರೆ. ಮೈಲಾರ ಮಹಾದೇವನಲ್ಲಿ ಅಪಾರವಾದ ಸಂಘಟನಾ ಶಕ್ತಿ ಇತ್ತು. ಆದರೆ ಆ ಸಂಘಟನೆಯ ಶಕ್ತಿಯು ದೇಶದ ಗೌರವವನ್ನು ಹೆಚ್ಚಿಸುವಂತೆ ಇರಬೇಕೆಂಬುದು ಅವನ ಮನದಾಸೆಯಾಗಿತ್ತು. ಆದ್ದರಿಂದ ಮಹಾದೇವ ತುಂಬಾ ಶೂರನಾದರೂ ಸಹ ಯುದ್ಧದಲ್ಲಿ ತನ್ನ ಗುರುಗಳಾದ ಮಹಾತ್ಮಗಾಂಧೀಜಿಯ ಅಹಿಂಸೆಯ ತತ್ವವನ್ನು ಮೀರುತ್ತಿರಲಿಲ್ಲ. ಕೊನೆಗೆ ಈ ತತ್ವಕ್ಕೆ ತನ್ನ ಪ್ರಾಣವನ್ನೆ ಸಮರ್ಪಿಸುತ್ತಾನೆ. ಅಲ್ಲದೆ ತನ್ನ ಗುರುಗಳ ಸಾಬರಮತಿ ಆಶ್ರಮದಿಂದ ಪ್ರೇರಣೆ ಪಡೆದ ಮಹಾದೇವ 1937ರಲ್ಲಿ ಗ್ರಾಮಸೇವಾಶ್ರಮವನ್ನು ಕೊರಡೂರಲ್ಲಿ ತೆರೆಯುವ ಮೂಲಕ ಸಮಾಜ ಸೇವೆಗೆ ತನ್ನನ್ನು ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳುತ್ತಾನೆ. ಗುರುಶಿಷ್ಯರ ಉತ್ತಮ ಬಾಂಧವ್ಯದ ಮೇಲೆ ಈ ನಾಟಕ ಬೆಳಕನ್ನು ಚೆಲ್ಲುತ್ತದೆ.

ಈ ನಾಟಕದಲ್ಲಿ ನಾಟಕಕಾರ ಗಾಂಧೀಜಿಯ ನೈಜ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದ್ದಾರೆ. ಬಹುತೇಕವಾಗಿ ನಾಯಕರಾದವರು ತನ್ನ ಸಹಪಾಠಿಗಳಿಂದ ಹೊಗಳಿಕೆಯನ್ನು ಅಪೇಕ್ಷಿಸುತ್ತಾರೆ. ಆದರೆ ಗಾಂಧೀಜಿಯವರು ತನ್ನ ಸಹಪಾಠಿಗಳ, ಶಿಷ್ಯರ ಹೊಗಳಿಕೆಯನ್ನು ಸ್ವಲ್ಪವೂ ಇಷ್ಟಪಡದೆ ಅದನ್ನು ನೇರವಾಗಿಯೇ ಖಂಡಿಸುತ್ತಿದ್ದರು. ಮಹಾದೇವ ಸಾಬರಮತಿ ಆಶ್ರಮಕ್ಕೆ ಬಂದು ಗಾಂಧೀಜಿಯವರನ್ನು ಕಂಡಾಗ "ನಿಮ್ಮನ್ನು ನೋಡಿ ನನಗೆ ದೇವರ ದರ್ಶನವಾದಷ್ಟು ಅತಿಶಯವಾದ ಆನಂದವಾಗಿದೆ. ನನ್ನ ಕಣ್ಣುಗಳು ಪಾವನವಾದವು. ನನ್ನ ಜನ್ಮ ಸಾರ್ಥಕವಾಯಿತೆಂದೇ ನನ್ನ ಭಾವನೆ" ...(ಪು. 13) ಎಂದು ಹೇಳಿದಾಗ ಅದಕ್ಕೆ ಗಾಂಧೀಜಿಯವರು ಮಹಾದೇವನ ಈ ರೀತಿಯ ಮಾತನ್ನು ಖಂಡಿಸಿ ಹೀಗೆ ಹೇಳುತ್ತಾರೆ. "ಅತಿಯಾದ

ಹೊಗಳಿಕೆ ಸಲ್ಲದು, ಅದು ಮನುಷ್ಯನನ್ನು ಕೃತಿಮ ಎತ್ತರಕ್ಕೆ ಒಯ್ಯುತ್ತದೆ. ಒಂದು ರೀತಿಯ ಹೊನ್ನ ಶೂಲವದು. ಹೊಗಳುಭಟ್ಟರ ಹಾಗೂ ಅದಕ್ಕೆ ಕಾರಣರಾಗುವ ಅ ಪಾತ್ರರ ಆಡಳಿತ ಬರುವುದಕ್ಕಿಂತಲೂ ಅದು ಬಾರದಿರುವುದು ಲೇಸು. ನನ್ನ ಕನಸಿನ ಭಾರತದಲ್ಲಿ ವಾಸ್ತವಕ್ಕೇನೆ ಮಹತ್ವ. ಅದನ್ನು ಮರೆಮಾಚಿ ಇಲ್ಲಸಲ್ಲದ ವರ್ಣನೆ ಬಣ್ಣನೆಯ ಪ್ರಗತಿ ವರದಿಗಳು ಸುಳ್ಳು ಸಂಖ್ಯೆಯ ಯೋಜನೆಗಳು ಆತ್ಮಘಾತುಕಗಳು. ಅವು ಅವನ ತಲೆಗೆ ಎಡೆಮಾಡಿಕೊಡುತ್ತವೆ. ಇದು ತೀರ ಅಪಾಯಕಾರಿ, ಅದು ಸತ್ಯವನ್ನು ಮರೆಮಾಚುತ್ತದೆ. ಹಾ! ಇರಲಿ, ನೀನು ಪ್ರಾಂಜಲ ಮನಸ್ಸಿನಿಂದ ಆಶ್ರಮವಾಸಿಯಾಗಲು ಒಪ್ಪುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಯಾವ ಬಾಹ್ಯ ಒತ್ತಡಕ್ಕೆ ಒಳಗಾಗದೇ ನಿನ್ನ ಆತ್ಮದ ಕೂಗನ್ನು ಕೇಳು. ಆತ್ಮ ಬಲ ಮನೋಬಲ ಎಲ್ಲಕ್ಕಿಂತ ಮಿಗಿಲಾದವುಗಳು, ಸ್ವವಿಮರ್ಶೆ ಮಾಡಿಕೊಳ್ಳುತ್ತ ಮುಂದುವರೆ, ದೇವರು ಒಳ್ಳೆಯದು ಮಾಡುತ್ತಾನೆ" (ಪು. 14) ಎಂದು ತನ್ನ ಶಿಷ್ಯನಾದ ಮಹಾದೇವನಿಗೆ ವಾಸ್ತವತೆಯ ಅರಿವನ್ನು ಮೂಡಿಸುತ್ತಾರೆ. ವ್ಯಕ್ತಿಯ ಜೀವನದಲ್ಲಿ ವಾಸ್ತವತೆ ಅತ್ಯಧಿಕವಾಗಿದ್ದಾಗ ಅವನ ನಡೆ ಮತ್ತು ನುಡಿ ಪರಿಶುದ್ಧವಾಗಿರುತ್ತದೆ. ನಾಟಕದಲ್ಲಿ ರಚಿತವಾಗಿರುವ ಹಾಡುಗಳು ನಾಟಕಕಾರರ ಸೃಜನಶೀಲತೆಯನ್ನು ಸಹೃದಯರಿಗೆ ಬಹಳ ಸ್ಪಷ್ಟವಾಗಿ ಅರ್ಥಮಾಡಿಸುತ್ತವೆ.

**ಹೊರಟಿತು ಮಹಾತ್ಮರ ದಂಡೀಯಾತ್ರೆ**
**ಮಣಿಯಿತು ಭಾರತ ಮಹಾಜನತೆ**
**ಹುಚ್ಚೆದ್ದು ಕುಣಿಯಿತು ಜನಜಾತ್ರೆ**
**ಉಪ್ಪಿನ ತೆರಿಗೆಯನ್ನು ಒಪ್ಪಲಾರೆವು ನಾವು**
**ಕಪ್ಪ ಕಾಣಿಕೆಯ ಯಾರಪ್ಪಗೂ ಕೊಡೆವು**
**ಮಹಾದೇವ ನಾಡಿನ ಏಕಾಂಗಿ ವೀರ,**
**ಹೆಸರನ್ನು ಪಡೆದನು 'ಉಪ್ಪಿನ ಮೈಲಾರ'** (ಪು. 16)

ಈ ಹಾಡು ಮಹಾತ್ಮ ಗಾಂಧೀಜಿಯವರ ದಂಡೀಯಾತ್ರೆಯ ವೈಭವವನ್ನು, ಅಲ್ಲಿನ ಜನಗಳ ಸಂತಸವನ್ನು, ದಂಡಿಯಾತ್ರೆಯಲ್ಲಿ ಮೈಲಾರ ಮಹಾದೇವ ಪಾಲ್ಗೊಂಡಿದ್ದನ್ನು ಪ್ರಾಸಬದ್ಧವಾಗಿ ಓದುಗರಿಗೆ ಪರಿಚಯಿಸುತ್ತದೆ. ಈ ಹಾಡಿನ ರಚನೆಯನ್ನು ಕಂಡಾಗ ನಾವು ನಾಟಕಕಾರರನ್ನು ಸಮರ್ಥ ಕವಿಗಳೆಂದು ಸಹ ತಿಳಿಯಬಹುದು. ಈ ನಾಟಕದಲ್ಲಿನ ಹಾಡುಗಳು ತುಂಬ ಸರಳವಾಗಿದ್ದು, ಭಾವಮಯವಾಗಿದ್ದು, ಪ್ರಾಸಬದ್ಧವಾಗಿದ್ದು, ಐತಿಹಾಸಿಕ ವಸ್ತುಸ್ಥಿತಿಯ ಸಂಗತಿಯನ್ನು ಎಳೆ-ಎಳೆಯಾಗಿ ಓದುಗರ ಮುಂದೆ ಬಿಚ್ಚಿಡುತ್ತವೆ. ಅಲ್ಲದೆ ನಾಟಕಕಾರರು ಈ ನಾಟಕದ ಪ್ರತಿಯೊಂದು ವಸ್ತು ವಿಚಾರದ ನಿರೂಪಣೆಯಲ್ಲಿಯೂ ನಾವಿನ್ಯತೆಗೆ ಆದ್ಯತೆ ನೀಡುವ ಮೂಲಕ ಓದುಗರ ಕುತೂಹಲವನ್ನು ಮತ್ತಷ್ಟು ರೀತಿಯಲ್ಲಿ ಕೆರಳುವ ಹಾಗೆ ತುಂಬ ಜಾಣ್ಮೆಯಿಂದ ಈ ನಾಟಕದ ರಸದೌತಣವನ್ನು ಸಹೃದಯರಿಗೆ ಉಣಬಡಿಸುತ್ತಾರೆ.

ನಾಟಕಕಾರರು ಈ ನಾಟಕದಲ್ಲಿ ನಾಡಿನ ವೀರಯೋಧರು ಸ್ವಾತಂತ್ರ್ಯದ ಹೋರಾಟದಲ್ಲಿ ಪಾಲ್ಗೊಳ್ಳಲು ಮುಂದೆ ಬಂದಾಗ ಅವರ ತಂದೆ ತಾಯಿಯರು ಅವರಿಗೆ ಯಾವ ರೀತಿಯ ಬೆಂಬಲವನ್ನು ಕೊಡುತ್ತಿದ್ದರು ಎಂಬುದನ್ನು ತಿಳಿಸುತ್ತಾರೆ. ಒಂದು ಕಡೆ ಮೈಲಾರ ಮಹಾದೇವಪ್ಪನ ತಂದೆ ತಾಯಿಗಳು ಮಗನನ್ನು ನೆನೆಸಿಕೊಂಡು ದುಃಖಿತರಾದರೂ ಪುನಃ ಮಗನ ಹೋರಾಟದ ಬಗೆಗಿನ ಉತ್ಸಾಹ ಕಂಡು ಹೆಮ್ಮೆ ಪಡುತ್ತಾರೆ.

ಅಲ್ಲದೆ ಅವರು ಪುತ್ರ ವ್ಯಾಮೋಹಕ್ಕಿಂತ ದೇಶವ್ಯಾಮೋಹದ ಕಡೆಗೆ ಹೆಚ್ಚಿನ ಗಮನ ಹರಿಸುವುದು ಈ ನಾಟಕದ ಅಧ್ಯಯನದಿಂದ ತಿಳಿಯುತ್ತದೆ. ಮೈಲಾರ ಮಹಾದೇವನ ತಂದೆ ತಾಯಿಗಳ ಈ ಆದರ್ಶದ ಗುಣಗಳು ಇಂದಿನ ತಂದೆ-ತಾಯಿಯರ ವ್ಯಕ್ತಿತ್ವದ ಮೇಲೆ ಅಗಾಧವಾದ ಪ್ರಭಾವ ಬೀರಿದಾಗ ಈ ನಾಡಿನ ಭವಿಷ್ಯ ಇನ್ನು ಉಜ್ವಲಗೊಳ್ಳುವುದರಲ್ಲಿ ಅನುಮಾನವಿಲ್ಲವೆನ್ನಬಹುದು.

ಈ ನಾಟಕವು ದೇಶಸೇವೆಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರಿಗೆ ಹಳ್ಳಿಗಳಲ್ಲಿನ ಜನರು ಅವರಿಗೆ ಎಂತಹ ಗೌರವವನ್ನು ನೀಡುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ಇದಕ್ಕೆ ನಿದರ್ಶನವಾಗಿ ಮಹಾದೇವನನ್ನು ಕುರಿತು ಕೆ.ಎಫ್.ಪಾಟೀಲರು ಮಾತನಾಡುತ್ತಾ "ಮೋಟೆಬೆನ್ನೂರು ಮತ್ತು ಸುತ್ತಮುತ್ತಲಿಂದ ಆಗಮಿಸಿರುವ ಮಹಾಜನರೆ, ನಮ್ಮ ನಾಡಿಗೆ ದೇಶದೆಲ್ಲೆಡೆ ಕೀರ್ತಿ ತಂದ ಮಹಾಪುತ್ರನನ್ನು ಸ್ವಾಗತಿಸುವ ಹಾಗೂ ಸತ್ಕರಿಸುವ ಸುದಿನ ಇದು. ಇಲ್ಲಿ ಒಂದೆರಡು ಮಾತು ಹೇಳುವ ಭಾಗ್ಯ ನನ್ನದಾಗಿದೆ. ವಯಸ್ಸಿನಲ್ಲಿ ಕಿರಿಯನಾದರೂ ಬಹುದೊಡ್ಡ ಕಾರ್ಯ ಮಾಡಿದ್ದಾನೆ ಮಹಾದೇವಪ್ಪ. (ಚಪ್ಪಾಳೆ) ಹೇಳುವದಕವರಲ್ಲ, ಕೇಳುವದಕವರಲ್ಲ ಮಾಡಿ ಮಡಿಯುವದಕದವರು ಎಂಬ ಮಾತೊಂದಿದೆ. ಅದರಂತೆ ಮಹಾದೇವಪ್ಪನು ತನ್ನ ವಿಧಾಯಕ ಚಟುವಟಿಕೆಗಳ ಬಗ್ಗೆ ದೇಶಕಾರ್ಯಗಳ ಬಗ್ಗೆ ಏನೂ ಹೆಚ್ಚು ಮಾತನಾಡದೇ ಐತಿಹಾಸಿಕ ಉಪ್ಪಿನ ಸತ್ಯಾಗ್ರಹ ದಂಡಿಯಾತ್ರೆಯಲ್ಲಿ ಭಾಗವಹಿಸಿ, ಕನ್ನಡ ನಾಡಿನ ಏಕಮೇವ ಪ್ರತಿನಿಧಿಯಾಗಿ ಸಾಕ್ಷಾತ್ ಮಹಾತ್ಮ ಗಾಂಧೀಜಿಯವರೊಡನೆ ಇದ್ದು, ಕಾರಾಗೃಹ ಅನುಭವಿಸಿ ನಮ್ಮ ಊರಿಗೆ ನಾಡಿಗೆ ದೊಡ್ಡ ಹೆಸರು ತಂದಿದ್ದಾನೆ. ಇವನಿಗೆ ನಾಡಿಗೆ ನಾಡೇ ಉಪಕೃತವಾಗಿರಬೇಕೆಂದು ನನ್ನ ಬಲವಾದ ಅನಿಸಿಕೆ. (ಪುನಃ ಚಪ್ಪಾಳೆ ಹಾಗೂ ಮಹಾದೇವಪ್ಪ ಮೈಲಾರರಿಗೆ, ಊರಿನ ಹೆಮ್ಮೆಯ ಪುತ್ರಗೆ ಜಯವಾಗಲಿ ಎಂಬ ಘೋಷಣೆ) ಮಹನೀಯರೆ, ದೇಶ ಸೇವೆ ಮಾಡುವವರನ್ನು ಪ್ರೋತ್ಸಾಹಿಸುವುದು, ಗೌರವಿಸುವುದು ಎಂದರೆ ಪರೋಕ್ಷವಾಗಿ ರಾಷ್ಟ್ರಕಾರ್ಯದಲ್ಲಿ ಭಾಗವಹಿಸಿದಂತೆಯೇ (ಪು. 23) ಎಂದು ಹೇಳುವ ಮೂಲಕ ಮಹಾದೇವಪ್ಪನಿಗೆ ಕೆ. ಎಫ್.ಪಾಟೀಲರು ಗೌರವವನ್ನು ಸಮರ್ಪಿಸುತ್ತಾರೆ.

ಈ ನಾಟಕವು ಕರ್ನಾಟಕದ ಸಾಂಸ್ಕೃತಿಕ ವೈಭವದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಮಹಾದೇವಪ್ಪ ತನ್ನ ಅಭಿನಂದನೆಯ ಸಮಾರಂಭದಲ್ಲಿ ಹೇಳುವ ಮಾತುಗಳು ಇದಕ್ಕೆ ಸಾಕ್ಷಿಯೆನ್ನಬಹುದು. ಮಹಾದೇವಪ್ಪನು ತನ್ನ ಮಾತಿನಲ್ಲಿ ಬಾದಾಮಿ, ಬನವಾಸಿ, ಬೇಲೂರು, ಹಳೆಬೀಡು, ಹಂಪಿ, ಕಿತ್ತೂರು ಮುಂತಾದ ಐತಿಹಾಸಿಕ

ಸ್ಥಳಗಳ ಮಹತ್ವತೆಯನ್ನು ನೆನೆಯುತ್ತಾನೆ. ಹಾಗೆಯೇ ತಮ್ಮ ದೇಶ ಮತ್ತು ಮಾತೃಭೂಮಿಗಾಗಿ ಹೋರಾಟ ಮಾಡಿದ ಪುಲಿಕೇಶಿ, ಕಿತ್ತೂರು ಚೆನ್ನಮ್ಮ, ಟಿಪ್ಪುಸುಲ್ತಾನ್, ಸಂಗೊಳ್ಳಿ ರಾಯಣ್ಣ, ಬೆಳವಡಿಮಲ್ಲಮ್ಮ, ರಾಣಿ ಅಬ್ಬಕ್ಕ ಮುಂತಾದವರನ್ನು ಸ್ಮರಿಸುತ್ತಾನೆ. ಅಲ್ಲದೇ ಆದಿಕವಿ ಪಂಪನನ್ನೊಳಗೊಂಡಂತೆ ಅನೇಕ ಕವಿ ಪರಂಪರೆಯ ಬಗ್ಗೆ ಹೇಳುತ್ತಲೇ ಈ ನಾಡಿನ ಸಾಂಸ್ಕೃತಿಕ ವೈಭವವನ್ನು ಅಲ್ಲಿರುವ ಜನರಿಗೆ ತಿಳಿಸುತ್ತಾನೆ. ಈ ಸಂಗತಿಯು ರಾಷ್ಟ್ರಪ್ರೇಮ ಮತ್ತು ನಾಡಪ್ರೇಮದ ಸಂಕೇತವಾಗಿ ಈ ನಾಟಕದಲ್ಲಿ ಮೂಡಿಬಂದಿದೆಯೆನ್ನಬಹುದು. ಈ ನೆಲೆಯಲ್ಲಿ ಸಹೃದಯರಲ್ಲಿ ರಾಷ್ಟ್ರಭಕ್ತಿಯನ್ನು ಬೆಳೆಸುವಲ್ಲಿ ಈ ನಾಟಕ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

ಈ ನಾಡಿನ ಸರ್ವತೋಮುಖ ಬೆಳವಣಿಗೆಗೆ ಏನೆಲ್ಲಾ ಅಂಶಗಳು ಕಾರಣವಾಗುತ್ತವೆಯೋ ಆ ಎಲ್ಲಾ ಅಂಶಗಳನ್ನು ಇಲ್ಲಿನ ಪಾತ್ರಗಳು ಸಮಗ್ರವಾಗಿ ಓದುಗರ ಮುಂದೆ ಇಡುವ ಮೂಲಕ ಓದುಗರ ಆಸಕ್ತಿ ರಾಷ್ಟ್ರದ ಪ್ರಗತಿಯ ಕಡೆಗೆ ಕೊಂಡೊಯ್ಯುವ ಹಾಗೆ ಈ ನಾಟಕ ಚಿತ್ರಿತವಾಗಿದೆ. ಜೊತೆಗೆ ಬಂಡವಾಳಶಾಹಿಯ ಮೋಸತನವನ್ನು ಈ ನಾಟಕ ಬಯಲಿಗೆಳೆಯುತ್ತದೆ.

ಬಂಡವಾಳದಾರರು ಸರ್ಕಾರಕ್ಕೆ ನೀಡಬೇಕಾದ ತೆರಿಗೆ ಹಣವನ್ನು ಸರಿಯಾಗಿ ನೀಡದೆ ತಮ್ಮ ಸ್ವಾರ್ಥಕ್ಕೆ ದೇಶದ ಸಂಪತ್ತನ್ನು ಲೂಟಿ ಹೊಡೆಯುತ್ತಾರೆ. ಇಂತಹ ಬಂಡವಾಳದಾರರಿಗೆ ಸರ್ಕಾರ, ದೇಶಗಳೆ ಹೆದರುವುದನ್ನು ನಾಟಕಕಾರರು ಈ ನಾಟಕದಲ್ಲಿ ಬಹು ಸೂಕ್ಷ್ಮವಾಗಿ ತಿಳಿಸುತ್ತಾರೆ. ಇಂದು ಸಹ ಬಂಡವಾಳದಾರರು ನಾಡಿನ ಪ್ರಗತಿಗೆ ಹೆಚ್ಚು ಗಮನ ನೀಡದೆ ತಮ್ಮ ಸ್ವಾರ್ಥದ ಆಸೆಗೆ ಒಳಗಾಗಿ ದೇಶದ ಸಂಪತ್ತನ್ನೆಲ್ಲಾ ಕೊಳ್ಳೆಹೊಡೆದು ಈ ಸಂಪತ್ತನ್ನು ಬೇರೆ ಬೇರೆ ರಾಷ್ಟ್ರಗಳ ಬ್ಯಾಂಕುಗಳಲ್ಲಿ ಇರಿಸುವ ಮೂಲಕ ಆ ರಾಷ್ಟ್ರಗಳ ಶ್ರೇಯೋಭಿವೃದ್ಧಿಗೆ ಒಂದು ರೀತಿಯಲ್ಲಿ ಪರೋಕ್ಷವಾಗಿ ದುಡಿಯುತ್ತಾರೆ. ಇದರಿಂದ ನಮ್ಮ ನಾಡಿನ ಪ್ರಗತಿ ಕುಂಠಿತವಾಗುತ್ತದೆ ಎಂಬುದರ ಕಡೆಗೆ ಸ್ವಲ್ಪವೂ ಗಮನಹರಿಸುವುದಿಲ್ಲ. ಈ ಬಂಡವಾಳದಾರರು ನಮ್ಮ ದೇಶದ ಸಂಪತ್ತನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರೆ ತಮ್ಮ ಆದಾಯಕ್ಕನುಗುಣವಾಗಿ ಸರ್ಕಾರಕ್ಕೆ ಸರಿಯಾದ ತೆರಿಗೆ ನೀಡದೆ ಮೋಸಮಾಡುತ್ತಾರೆಂಬ ಅಂಶವನ್ನು ಈ ನಾಟಕ ಬಹಳ ಸೂಕ್ಷ್ಮವಾಗಿ ಸಹೃದಯರಿಗೆ ತಿಳಿಸುತ್ತದೆ. “ಒಟ್ಟಿನಲ್ಲಿ ಎಲ್ಲಾ ನೀವ್ ಹೇಳಿದಂಗ ನಡೀಲಿ ಭಾರಿ ಉದ್ದಿಮೆದಾರರೆ, ಬೌದ್ಧಿಕ ಸಂಪತ್ತುದಾರರೆ, ಇನ್‌ಕಂ ಟ್ಯಾಕ್ಸ್ ಕೊಡಲಿಕ್ಕೆ ನೌಕರದಾರ ಇದ್ದಾರೆ, ಕಾರ್ಮಿಕರು ಇದ್ದಾರೆ, ಸಣ್ಣಪುಟ್ಟ ಉದ್ದಿಮೆದಾರ ಇದ್ದಾರೆ, ನೀರಿನ ಕರಾ ಕೊಡಾಕ ರೈತರು ಇದ್ದಾರೆ. (ವಿಷಾದದ ನೋಟವನ್ನು ಅತ್ತಿತ್ತ ಬೀರುತ್ತ) ಬಾಗಿದ ಬೆನ್ನುಗಳ ಮೇಲೆ ನಡೀಲಿ ನಿಮ್ಮ ಸವಾರಿ” (ಪು.28) ಎಂಬ ಮಾತು ಸರ್ಕಾರಕ್ಕೆ ತೆರಿಗೆಯನ್ನು ಪ್ರಾಮಾಣಿಕವಾಗಿ ಯಾರು ಯಾರು ಕಟ್ಟುತ್ತಿದ್ದಾರೆ. ಯಾರು ಯಾರು ಕಟ್ಟುವುದಿಲ್ಲ ಎಂಬುದನ್ನು ತಿಳಿಸುತ್ತದೆ. ಇಲ್ಲಿ ನಾಟಕಕಾರರು ಪ್ರಚಲಿತ ಸಮಾಜದ ವಾಸ್ತವ ಸಮಸ್ಯೆಯನ್ನು

ಐತಿಹಾಸಿಕ ನಾಟಕದಲ್ಲಿ ಸಮೀಕರಿಸುವ ಮೂಲಕ ಸಹೃದಯರ ವಿವೇಚನೆ ಮತ್ತಷ್ಟು ರೀತಿಯಲ್ಲಿ ವಾಸ್ತವ ಸಮಸ್ಯೆಯ ಕಡೆಗೆ ಸೂಕ್ಷ್ಮವಾಗಿ ಹರಿಯುವ ಹಾಗೆ ಈ ನಾಟಕವನ್ನು ಹೆಣೆದಿದ್ದಾರೆ.

ಹಳ್ಳಿಗಳು ಉದ್ಧಾರವಾಗದೆ ದೇಶವು ಉದ್ಧಾರವಾಗುವುದಿಲ್ಲ ಎಂಬ ತತ್ವವನ್ನು ಈ ನಾಟಕವು ತಿಳಿಸುತ್ತದೆ. ಮಹಾತ್ಮ ಗಾಂಧೀಜಿಯವರ ಮಹಾದಾಸೆಯು ಗ್ರಾಮಗಳ ಉದ್ಧಾರವೇ ಆಗಿತ್ತೆಂಬುದನ್ನು ನಾಟಕಕಾರರು ಓದುಗರಿಗೆ ಮನವರಿಕೆ ಮಾಡಿಕೊಡುತ್ತಾರೆ. ಮಹಾದೇವಪ್ಪನು ತನ್ನ ಮೋಟೆಬೆನ್ನೂರಿನ ಸಭೆಯಲ್ಲಿ ಮಾತನಾಡುತ್ತಾ "ಗಾಂಧೀಜಿಯ ಅಪೇಕ್ಷೆಯಂತೆ ನಾವೆಲ್ಲಾ ಗ್ರಾಮಭಾರತವನ್ನು ಬಲಪಡಿಸಬೇಕಿದೆ. ಭಾರತವೆಂಬ ಮಹಾವೃಕ್ಷ ಬದುಕಿರುವುದೇ ತನ್ನ ಬೇರುಗಳಾದ ಹಳ್ಳಿಗಳಲ್ಲಿ, ಅವುಗಳ ಏಳ್ಗೆಯೇ ನಿಜವಾದ ದೇಶದ ಏಳಿಗೆ ಎಂದಿದ್ದಾರೆ ಅವರು". (ಪು. 25) ಈ ರೀತಿ ಗಾಂಧೀಜಿಯ ಮಾತನ್ನು ಮಹಾದೇವಪ್ಪನು ಉಲ್ಲೇಖಿಸುತ್ತಾ ತಾನು ಸಬರಮತಿ ಆಶ್ರಮದಲ್ಲಿ ಕಲಿತು ಬಂದ ಸ್ವದೇಶಿ ಖಾದಿ ತಯಾರಿಕೆ, ಅಸ್ಪೃಶ್ಯತೆ ನಿವಾರಣೆ, ಸಾಕ್ಷರತೆ ಮುಂತಾದ ಕಾರ್ಯಗಳನ್ನು ಮುಂದುವರೆಸಿಕೊಂಡು ಬರುತ್ತಾನೆ.

ಈ ದಿನ ಜಾಗತೀಕರಣದ ಪ್ರಭಾವದಿಂದಾಗಿ ಗ್ರಾಮಗಳ ಸಂಸ್ಕೃತಿ ಕ್ಷೀಣಿಸಿರುವುದರಿಂದ ಈ ನಾಡಿನ ಸರ್ವತೋಮುಖ ಪ್ರಗತಿಯನ್ನು ಕಾಣುವುದಕ್ಕೆ ಸಾಧ್ಯವಾಗಿಲ್ಲವೆಂದೇ ಹೇಳಬಹುದು. ಹಾಗಾಗಿ ಈ ನಾಡು ಪ್ರಗತಿಯ ಪಥದಲ್ಲಿ ಕಂಗೊಳಿಸಬೇಕೆಂದರೆ ಹಳ್ಳಿಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಮೂಲಕ ಗ್ರಾಮಗಳ ಉದ್ಧಾರದ ಕಡೆಗೆ ಹೆಚ್ಚು ಗಮನವನ್ನು ನೀಡಬೇಕಾಗುತ್ತದೆ. ಅಲ್ಲದೆ ಮರಳಿ ಮಣ್ಣಿಗೆ ಎಂಬ ಸತ್ಯವನ್ನು ಅರಿಯಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ನಾಟಕಕಾರರು ಜನಪದ ಸಾಹಿತ್ಯದ ಪ್ರಕಾರಗಳಲ್ಲಿ ಒಂದಾದ ಲಾವಣಿಯ ಮೂಲಕ ಮೈಲಾರ ಮಹಾದೇವಪ್ಪನ ಜೀವನದ ಘಟನೆಗಳನ್ನು ಬಹಳ ಸೊಗಸಾಗಿ ಓದುಗರಿಗೆ ಪರಿಚಯಿಸುತ್ತಾರೆ.

**"ಮಹಾದೇವಪ್ಪ ಮೈಲಾರನೆಂಬ**
**ಮಹಾತ್ಮಾ ನಮ್ಮ ಊರಿಗೆ ಬರತಾನಾ|**
**ಗಾಂಧೀ ತತ್ವ ಸಾರಿ ಹೇಳತಾನಾ ದಿನಾ ದಿನಾ|**
**ಸತ್ಯವಂತರು ಸಾವಿರ ಗಟ್ಲೆ**
**ನಿತ್ಯಬಂದು ಕೇಳುತಾರಾ|**
**ಸುತ್ತಮುತ್ತಲ ಜನ ಕಿತ್ತಿ ಬರತಾರಾ||**
**ನಕ್ಕರೊಂದು ಚಂದ ಅವನು |**
**ನುಡಿದರೊಂದು ಚಂದ ನಮಗ |**
**ಸಿಕ್ಕೊದಿಲ್ಲೋ ಇಂಥಾ ಚೊಕ್ಕ ಬಂಗಾರದಂಥವಾ"** (ಪು. 26).

ಐತಿಹಾಸಿಕ ವ್ಯಕ್ತಿಗಳ ಜೀವನದ ಶ್ರೇಷ್ಠತೆಯನ್ನು ಲಾವಣಿಯು ಬಹಳ ಪರಿಣಾಮಕಾರಿಯಾಗಿ ಸಹೃದಯರಿಗೆ ಅರ್ಥಮಾಡಿಸುತ್ತದೆ. ಹಾಗಾಗಿ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣನನ್ನು

ಒಳಗೊಂಡಂತೆ ಅನೇಕ ಯೋಧರ ಜೀವನದ ವೃತ್ತಾಂತವು ಲಾವಣಿಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು. ಈ ಲಾವಣಿ ಪ್ರಕಾರವು ಬಹಳ ಸರಳವಾಗಿ ಅಂದಿನ ಯೋಧರ ಜೀವನ, ಅವರು ಎದುರಿಸಿದ ಕಷ್ಟ, ಅವರ ತ್ಯಾಗ, ಅವರ ಶ್ರೇಷ್ಠತೆಯ ಬಗ್ಗೆ ಎಳೆ ಎಳೆಯಾಗಿ ಓದುಗರ ಮುಂದೆ ಬಿಚ್ಚಿಡುತ್ತದೆ. ಐತಿಹಾಸಿಕ ವ್ಯಕ್ತಿಗಳ ಮಹತ್ವವನ್ನು ಸಾರುವಲ್ಲಿ ಲಾವಣಿಯು ಅತ್ಯಂತ ಮಹತ್ವದ್ದಾಗಿದೆ.

ನಾಟಕಕಾರರು ಸ್ತ್ರೀ ಸಂವೇದನೆಯಲ್ಲಿ ಸಿದ್ದಮ್ಮನ ಪಾತ್ರ ಚಿತ್ರಿತವಾಗಿರುವಂತೆ ಈ ನಾಟಕವನ್ನು ರಚಿಸಿದ್ದಾರೆ. ಸಿದ್ದಮ್ಮಳು ಮೈಲಾರ ಮಹಾದೇವನ ಪತ್ನಿಯಾಗಿದ್ದು, ಅವನ ಎಲ್ಲಾ ಸಾಹಸಮಯವಾದ ಕಾರ್ಯಗಳಿಗೆ ಪ್ರೇರಕ ಶಕ್ತಿಯಾಗಿರುತ್ತಾಳೆ. ಅಲ್ಲದೆ ಗಂಡನ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ ಆದರ್ಶ ಸ್ತ್ರೀಯಾಗಿ ಕಂಡುಬರುತ್ತಾಳೆ. ಜೊತೆಗೆ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧನಾದ ಗಂಡನನ್ನು ಹೆಂಡತಿ ಹೇಗೆ ಕಳುಹಿಸಬೇಕೆಂಬುದನ್ನು ಸಿದ್ದಮ್ಮನ ವ್ಯಕ್ತಿತ್ವದಿಂದ ತಿಳಿಯಬಹುದು. ಇವಳ ಬದುಕು ಇಂದಿನ ಸ್ತ್ರೀ ಕುಲಕ್ಕೆ ಮಾದರಿಯಾಗಬೇಕಾಗಿದೆ.

ಸಿದ್ದಮ್ಮಳು ಸಾಬರಮತಿಯಲ್ಲಿ ಕಸ್ತೂರಿ ಬಾ ಅವರಿಗೆ ಬಹಳ ಅನ್ನೋನ್ಯವಾಗಿ ಹೊಂದಿಕೊಂಡಿದ್ದಳು. ಕಸ್ತೂರಿ ಬಾ ಅವರಿಗೆ ಸಿದ್ದಮ್ಮನನ್ನು ಕಂಡರೆ ಮಗಳೆಂಬ ಮಮಕಾರದ ಜೊತೆಗೆ ತುಂಬಾ ಅಭಿಮಾನವು ಇತ್ತು. ಒಟ್ಟಾರೆ ಪತಿ ಪತ್ನಿಯರಿಬ್ಬರು ಸಹ ತಮ್ಮ ಬದುಕನ್ನು ರಾಷ್ಟ್ರಸೇವೆಗೆ ಮುಡಿಪಾಗಿಟ್ಟಿದ್ದನ್ನು ಕಂಡರೆ ಇವರದು ಅತ್ಯಂತ ನಿಸ್ವಾರ್ಥಮಯವಾದ ಜೀವನ, ಆದರ್ಶಮಯ ಜೀವನವೆಂದು ಹೇಳಬಹುದು.

ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಹಳ್ಳಿಗೆ ಆಗಮಿಸಿದಾಗ ಹಳ್ಳಿಯ ಜನರು ತಮ್ಮ ಪ್ರತಿಕ್ರಿಯೆಯನ್ನು ಪತ್ರದ ಮೂಲಕ ಹೇಗೆ ತಿಳಿಸುತ್ತಿದ್ದರೆಂಬುದನ್ನು ನಾಟಕಕಾರರು ಈ ನಾಟಕದಲ್ಲಿ ತಿಳಿಸುತ್ತಾರೆ. ಹಳ್ಳಿಯ ನಾಗರೀಕರು, ಮಹಿಳೆಯರು, ಹರಿಜನರು ಹೀಗೆ ಮುಂತಾದವರು ತಮ್ಮ ತಮ್ಮ ಪತ್ರಗಳಲ್ಲಿ ಗಾಂಧೀಜಿಯವರ ಆದರ್ಶ ತತ್ತ್ವವನ್ನು ನಮ್ಮ ಜೀವನದಲ್ಲಿ ಪಾಲಿಸುತ್ತಿದ್ದೇವೆ ಎಂಬುದನ್ನು ಪತ್ರದಲ್ಲಿ ಬರೆದು ಆ ಪತ್ರವನ್ನು ಗಾಂಧೀಜಿಯವರಿಗೆ ನೀಡುತ್ತಿದ್ದರು.

ನಿದರ್ಶನವಾಗಿ ಒಂದು ಪತ್ರವನ್ನು ಗಮನಿಸಬಹುದು: "ಜಾತಕ ಪಕ್ಷಿಯ ಪರ್ಜನ್ಯ ನಿರೀಕ್ಷಣೆಯವೋಲ್, ತಮ್ಮ ಬರುವನ್ನೇ ಕಾಯುತ್ತಿದ್ದ ನಮಗೆ ಇಂದು ಸುದಿನ, ತಮ್ಮ ಪಾದದೂಳಿಯಿಂದ ನಮ್ಮೂರು ಹಾಗೂ ಕನ್ನಡ ನಾಡು ಪವಿತ್ರವಾಯಿತೆಂದು ತಿಳಿಯುತ್ತೇವೆ.

ಭಾರತದಲ್ಲೆಲ್ಲ ಹರಿಜನೋದ್ಧಾರ ಕಾರ್ಯದಲ್ಲಿ ತೊಡಗಿದ ಮಹನೀಯರಿಗೆ ಜಗನ್ನಿಯಾಮಕ ಶಕ್ತಿಯನ್ನೀಯಲಿ, ತಮ್ಮಿ ಹರಿಜನೋದ್ಧಾರ ಯಾತ್ರೆ ಯಶಸ್ವಿಯಾಗಲಿ; ತಮ್ಮ ಆಯುರಾರೋಗ್ಯವು ಹೆಚ್ಚಲೆಂದು ಪರಮಾತ್ಮನಲ್ಲಿ ಮೊರೆ".

ಮೋಟೆ ಬೆನ್ನೂರು — ತಮ್ಮ ವಿಧೇಯರು

ದಿನಾಂಕ : 1-3-1934 — ನಾಗರೀಕರು (ಪು. 32).

ಹೀಗೆ ಪ್ರತಿಯೊಬ್ಬರು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟವನ್ನು ಅವರ ಆದರ್ಶ ತತ್ತ್ವಗಳನ್ನು ಶ್ಲಾಘಿಸುತ್ತಾ ಈ ತತ್ತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವುದನ್ನು ತಮ್ಮ ಪತ್ರದ ಮೂಲಕ ಗಾಂಧೀಜಿಯವರಿಗೆ ತಿಳಿಸುತ್ತಿರುವುದು ಕಂಡುಬರುತ್ತದೆ. ಈ ಸಂಗತಿಯನ್ನು ಗಮನಿಸಿದರೆ ಈ ನಾಟಕವು ಐತಿಹಾಸಿಕ ಸಂಗತಿಗಳಿಗೆ ಸಂಬಂಧಿಸಿದ ಅನೇಕ ಮಾದರಿಗಳನ್ನು ಓದುಗರಿಗೆ ಪರಿಚಯಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದೆ ಎನ್ನಬಹುದು. ಜೊತೆಗೆ ಈ ನಾಟಕವು ಈ ದೇಶದ ಯೋಧನ ತಂದೆ-ತಾಯಿಗಳ ಮೇಲೆ ಜನರು ಎಂತಹ ಗೌರವವನ್ನು ಹೊಂದಿರುತ್ತಿದ್ದರು ಎಂಬುದರ ಕಡೆಗೂ ಹೆಚ್ಚು ಗಮನವನ್ನು ಸಹ ನೀಡಿದೆ.

ಒಟ್ಟಾರೆಯಾಗಿ ಮನು ಬಳಿಗಾರ್ ಅವರ ಸೃಜನಶೀಲತೆಯ ಸಂಕೇತವಾಗಿ ಮೂಡಿಬಂದ 'ಮೈಲಾರ ಮಹಾದೇವ' ಎಂಬ ನಾಟಕವು ಓದುಗರಲ್ಲಿ ಐತಿಹಾಸಿಕ ಸಂಗತಿಗಳ ಬಗ್ಗೆ ವಿಶಿಷ್ಟ ಅರಿವನ್ನು ಮೂಡಿಸುತ್ತದೆ. ಅಲ್ಲದೆ ಅನೇಕ ಐತಿಹಾಸಿಕ ವಸ್ತು ವಿಷಯದ ಮಾದರಿಗಳನ್ನು ಓದುಗರ ಕಣ್ಮುಂದೆ ಇಡುತ್ತದೆ. ಜೊತೆಗೆ ಸ್ವಾತಂತ್ರ್ಯ ಯೋಧರ ಬದುಕು ಎಂತಹ ತ್ಯಾಗದ ಬದುಕಾಗಿತ್ತೆಂಬುದನ್ನು ಸಹೃದಯರ ಮುಂದೆ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಜಾನಪದ ಸಾಹಿತ್ಯದ ಪ್ರಕಾರವಾದ ಲಾವಣಿಯ ಮೂಲಕ ಮೈಲಾರ ಮಹಾದೇವಪ್ಪನ ಜೀವನದ ಘಟನೆಗಳನ್ನು ಬಹಳ ಸೊಗಸಾಗಿ ನಿರೂಪಿಸುತ್ತದೆ.

ಗಾಂಧೀಜಿಯ ಆದರ್ಶ ತತ್ತ್ವಗಳಿಗೆ ಈ ನಾಟಕವು ಹೆಚ್ಚು ಆದ್ಯತೆಯನ್ನು ನೀಡುತ್ತದೆ. ಅನೇಕ ವೈವಿಧ್ಯಮಯವಾದ ಸಂಗತಿಗಳು ಈ ನಾಟಕದಲ್ಲಿ ಕಂಡುಬರುತ್ತವೆ. ಭಾಷೆ ಸೊಗಸಾಗಿ ಈ ನಾಟಕದಲ್ಲಿ ಮೂಡಿ ಬಂದಿದ್ದು ಓದುಗರ ಆಸಕ್ತಿಯನ್ನು ಸೆಳೆಯುವಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ನಾಡಿನ ಪ್ರಜೆಗಳಲ್ಲಿ ರಾಷ್ಟ್ರಭಕ್ತಿಯನ್ನು ಮೂಡಿಸುವಲ್ಲಿ ಮನು ಬಳಿಗಾರ್ ಅವರ ಈ ನಾಟಕ ಅತ್ಯಂತ ಪ್ರಧಾನವಾದ ಪಾತ್ರ ವಹಿಸುತ್ತೆಂಬುದು ನನ್ನ ಅಭಿಪ್ರಾಯವಾಗಿದೆ.

❖

## ಭಾಗ-4

# ಲಲಿತ ಪ್ರಬಂಧಗಳು

## ಏಕಾಂತ ಮತ್ತು ಏಕಾಗ್ರತೆ

ಡಾ. ದೇಜಗೌ

**ನ್ಯಾ**ಯನಿಷ್ಠ ದಕ್ಷ ಐ.ಎ.ಎಸ್. ಅಧಿಕಾರಿ ಶ್ರೀ ವಿ.ಪಿ.ಬಳಿಗಾರ್ ಕವಿತಾ ಸಾಮರ್ಥ್ಯವುಳ್ಳ ಪ್ರತಿಭಾವಂತರು. ಅವರಣ್ಣ, ಕೆ.ಎ.ಎಸ್. ಅಧಿಕಾರಿ ಶ್ರೀ ಮನು ಬಳಿಗಾರ್ ಕವಿ, ಕತೆಗಾರ, ಜೀವನಚರಿತ್ರಕಾರ, ಭಾಷಾಂತರಕಾರ, ಸಂಪಾದಕರೆಂದು ಹಲವು ಪ್ರಶಸ್ತಿಗಳನ್ನು ಪಡೆದವರೆಂದು ಡಾ.

ಟಿ.ಸಿ.ಪೂರ್ಣಿಮಾ ಅವರನ್ನು ಪರಿಚಯಿಸಿಕೊಟ್ಟಾಗ ನನಗೆ ಸಂತೋಷವಾಯಿತು. ಅವರ ತಮ್ಮ ಶ್ರೀ ಶಿವಲಿಂಗು ಬಳಿಗಾರ್ ಸಹ ಕಥೆಗಾರರೆಂಬುದನ್ನು ತಿಳಿದಾಗ, ಈ ಮೂವರು ಅಣ್ಣತಮ್ಮಂದಿರು ನಾಡು ನುಡಿಗಳ ಅಭ್ಯುದಯಕ್ಕಾಗಿ ಸಲ್ಲಿಸುತ್ತಿರುವ ಅಮೂಲ್ಯ ಸೇವೆಯಿಂದ ಕರ್ನಾಟಕ ಮಾತೆಯ ಆಶೀರ್ವಾದಕ್ಕೆ ಪಾತ್ರರಾದವರೆಂಬ ಕಾರಣಕ್ಕಾಗಿ ನನಗವರಲ್ಲಿ ಅಭಿಮಾನ ಮೂಡಿತು. ಅದರಿಂದಾಗಿ ಮನು ಬಳಿಗಾರರ ಈ ಗ್ರಂಥಕ್ಕೆ ನನಗೆ ತಿಳಿದ ಎರಡು ಮಾತು ಬರೆಯಲೊಪ್ಪಿಕೊಂಡೆ.

ಇಲ್ಲಿಯ ಲೇಖನಗಳ ಪೈಕಿ ಆರು ವ್ಯಕ್ತಿ ಚಿತ್ರಗಳು, ಸಾಹಿತ್ಯ ವಿಮರ್ಶೆ, ಒಂದು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ್ದು, ಉಳಿದುವು ವಿವಿಧ ವಸ್ತುಗಳನ್ನೊಳಗೊಂಡ ಲಘು ಗಂಭೀರ ಪ್ರಬಂಧಗಳು.

ಸಂಸ್ಕೃತಿ ಕೃಷಿ ಮೂಲವಾದದ್ದು, ಅದೊಂದು ಸುಗುಣ ಸಾಮರಸ್ಯವೆಂಬ ಗ್ರಂಥಕರ್ತರ ವ್ಯಾಖ್ಯೆ ಗ್ರಾಹ್ಯವಾದುದು. ಸಂಸ್ಕೃತಿ ರೂಪುಗೊಳ್ಳುವಲ್ಲಿ ಭೌಗೋಳಿಕ ಅಂಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆನ್ನುವುದು ಸರಿಯೇ ಪರಿ. ಲಲಿತ ಕಲೆಗಳು, ವ್ಯಕ್ತಿ ಸ್ವಾತಂತ್ರ್ಯದ ಅಧ್ಯಾತ್ಮಿಕತೆ ಸತ್ಯಾನ್ವೇಷಣೆ, ಮೋಕ್ಷಸಾಧನೆ, ಪರಮತ ಸಹಿಷ್ಣುತೆ, ಸಮಾನತೆ, ಸಮನ್ವಯಗಳು 'ಭಾರತೀಯ ಸಂಸ್ಕೃತಿ'ಯ ವಿಶಿಷ್ಟ ಲಕ್ಷಣಗಳೆಂದವರು ಸಮರ್ಥಿಸಿಕೊಳ್ಳುತ್ತಾರೆ. ಭಾರತವು ಎಲ್ಲ ಜನಾಂಗಗಳ, ತತ್ವಜ್ಞಾನಗಳ, ಯುರೋಪಿನ ಭಾಷೆಗಳ, ಗಣಿತಶಾಸ್ತ್ರದ ತಾಯಿಯೆಂದು ಹೇಳುವ ಅಮೇರಿಕೆಯ ಚಿಂತಕ ವಿಲ್ ಡುರಾಂಟ್‌ನ ಮಾತುಗಳನ್ನು ಅಭಿಮಾನದಿಂದ ಉಲ್ಲೇಖಿಸುತ್ತಾರೆ. ಅಸಮಾನತೆ, ಜಾತೀಯತೆ, ಅಸ್ಪೃಶ್ಯತೆಗಳು ಭಾರತೀಯ ಸಂಸ್ಕೃತಿಗಂಟಿಕೊಂಡಿರುವ ಕಳಂಕವೆಂಬುದನ್ನು ಅವುಗಳ ವಿನಾಶಕ್ಕಾಗಿ ಬಸವೇಶ್ವರರು ಮಾಡಿದ ಪ್ರಯತ್ನವನ್ನು ವಿವರಿಸಬಹುದಿತ್ತೇನೋ!

ಬಳಿಗಾರ್‌ರು ಬರೆದಿರುವ ಕಿತ್ತೂರು ಚೆನ್ನಮ್ಮ, ವಿಶ್ವೇಶ್ವರಯ್ಯ, ಕನಕದಾಸ, ಚಂಬಾ ಮುತ್ನಾಳ, ಮಹಾದೇವ ಮೈಲಾರ ಮತ್ತು ಶ್ರೀಲ ಪ್ರಭುಪಾದರ ವ್ಯಕ್ತಿ ಚಿತ್ರಗಳು ಭಾರತೀಯ ಸಂಸ್ಕೃತಿಯ ಪ್ರತಿರೂಪಗಳೆಂದೇ ಹೇಳಬಹುದು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿಯೆಂದು ಕಿತ್ತೂರು ಚೆನ್ನಮ್ಮನನ್ನು ಕರೆದು, ಅವರ ಸಾಹಸ ಪ್ರತಾಪಗಳ ಹಾಗೂ ದುರಂತದ ವರ್ಣನೆಯನ್ನು ಕೇಳುವಾಗ ಕನ್ನಡಿಗರು ಅತ್ತು ನಿವೇದನೆ ಸಲ್ಲಿಸುತ್ತಾರಲ್ಲದೆ, ಅಭಿಮಾನದಿಂದ ಹಿಗ್ಗುತ್ತಾರೆ. 'ಭಾರತ ರತ್ನ ವಿಶ್ವೇಶ್ವರಯ್ಯನವರು ತಮ್ಮ ಕನಸುಗಾರಿಕೆಯಿಂದ, ಮೇಧಾವಿತನದಿಂದ, ಕಾರ್ಯಕುಶಲತೆಯಿಂದ, ಸೃಜನಶೀಲ ಪ್ರತಿಭೆಯಿಂದ, ಭವಿಷ್ಯ ಪ್ರಜ್ಞೆಯಿಂದ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಭೂಷಣಪ್ರಾಯರಾದವರೆಂದು ಮನು ಅವರು ಚಿತ್ರಿಸಿದ್ದಾರೆ. ಕುಸ್ತಿಕಲೆಯಲ್ಲಿ ಸಾಧಿಸಿದ 'ಹಿಂದ್ ಕೇಸರಿ' ಸಿದ್ಧಿಯಿಂದಾಗಿ ಚಂಬಾ ಮುತ್ನಾಳರು ಕರ್ನಾಟಕಕ್ಕೆ ಗೌರವ ತಂದುಕೊಟ್ಟರೆಂಬುದು ಹೆಮ್ಮೆಯ ಸಂಗತಿ. ದೇಶೀಯ ಪದ್ಧತಿಯ ಆಟಗಳಾದ ಕುಸ್ತಿ, ಖೋಖೋ, ಕಬಡ್ಡಿ, ಅಟ್ಯಾಪಟ್ಯಾ ಮುಂತಾದವು ವಿದೇಶೀಯ ಕ್ರಿಕೆಟ್ ಟೆನ್ನಿಸ್ ಆಟಗಳ ದಾಳಿಯಿಂದಾಗಿ ದುಸ್ಥಿತಿಗೊಳಗಾಗುತ್ತಿರುವ ಸಂಕಟವನ್ನು ಅಭಿವ್ಯಕ್ತಗೊಳಿಸುವ

ಮನು ಅವರ ದೇಶಭಿಮಾನವನ್ನು ಈ ದೇಶದ ಕ್ರೀಡಾಪ್ರೇಮಿಗಳು ಸರಿಯಾಗಿ ಅರ್ಥಮಾಡಿಕೊಳ್ಳಬೇಕು, ಲಾವಣಿಗಳಿಗೂ ಸುಗ್ರಾಸವಾದ ಮೈಲಾರ ಮಹಾದೇವನ ಬಲಿದಾನದ ವೀರಗಾಥೆ ಅಂಜುಕುಳಿಗಳ ಹೃದಯಕ್ಕೆ ಶೌರ್ಯದಾನ ಮಾಡುವ ರೀತಿಯಲ್ಲಿ ಭಾವಾತ್ಮಕವಾಗಿ ರಚನೆಗೊಂಡಿದೆ.

'ಕನಕದಾಸ' ಮತ್ತು 'ಪ್ರಭುಪಾದರ' ಅಭೂತಪೂರ್ವ ಜೀವನ ವಿಕಾಸ, ಸಾಧನೆಸಿದ್ಧಿಗಳನ್ನು ಬಳಿಗಾರರು ಅನನ್ಯ ಆತ್ಮೀಯತೆಯಿಂದ ಸುಂದರವಾಗಿ ಬರೆದಿದ್ದಾರೆ. ತಿಮ್ಮಪ್ಪ ತಿಮ್ಮಪ್ಪನಾಯಕನಾಗಿ, ತದನಂತರ ಕನಕಪ್ಪ, ಕನಕದಾಸರಾಗಿ ಪರಿಣಾಮ ಹೊಂದಿದ ಲೌಕಿಕಾಲೌಕಿಕದ ಭವ್ಯಕಥನವನ್ನು ಪುಳಕ ಹುಟ್ಟಿಸುವಂತೆ ವರ್ಣಿಸಿದ್ದಾರೆ. ಅಪರೂಪದ ಕ್ರಾಂತಿಕಾರಿ ವಿಚಾರಪರ ಕವಿಪುಂಗವರವರು, ಜಾತಿ ಕುಲ ವಿನಾಶಕ್ಕಾಗಿ ಹೋರಾಡಿದ, ವೈಷ್ಣವ ಮಾಧ್ವ ಶೈವ ವೀರಶೈವ ಮತಗಳ ನಡುವಣ ಸಮನ್ವಯಕಾರರು, ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದೆಂದು ಘೋಷಿಸಿ, ಮೂರ್ತಿಪೂಜೆಯನ್ನು ಖಂಡಿಸಿ, ಏಕದೇವತೋಪಾಸನೆಯನ್ನು ಎತ್ತಿ ಹಿಡಿದ ಮಹಾಪುರುಷರವರು, ಈ ಲೋಕದಲ್ಲಿ ಜ್ಞಾನವೇ ಸರ್ವಶ್ರೇಷ್ಠವೆಂದು, ಅದಕ್ಕೆ ಸಮನಾದದ್ದು ಬೇರೊಂದಿಲ್ಲವೆಂದು ಡಂಗುರಿಸಿ, ಸಂಪ್ರದಾಯದ ನಡುವೆಯೂ ಸ್ವತಂತ್ರ ಮನೋಭಾವನೆಯನ್ನೂ ವ್ಯಕ್ತಿ ವೈಶಿಷ್ಟ್ಯವನ್ನೂ ಮೆರೆದ ಮಹಾಮಹಿಮರು - ಇದು ಗ್ರಂಥಕರ್ತರು ಕನಕದಾಸರಿಗೆ ಸಲ್ಲಿಸಿರುವ ಗೌರವ.

ಅಂತರಾಷ್ಟ್ರೀಯ ಮಟ್ಟದಲ್ಲಿ ಕೃಷ್ಣ ಪ್ರಜ್ಞೆಯ ಪ್ರಸಾರಕ್ಕೆ ಅಡಿಪಾಯ ಹಾಕಿದ ಶ್ರೀಲ ಪ್ರಭುಪಾದರ ಅದ್ಭುತ ಜೀವನ ಸಾಧನೆ ಸಿದ್ಧಿಗಳನ್ನು ಬಳಿಗಾರರು ಓದುಗರ ಮನಮುಟ್ಟುವಂತೆ ದೀರ್ಘವಾಗಿಯೇ ಚಿತ್ರಿಸಿದ್ದಾರೆ. ೧೮೯೬ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ ಅಭಯಚರಣರು ಸದ್ಗುರುಗಳ ಸಂಪರ್ಕದಿಂದ ವೇದ ವೇದಾಂತ ಭಾಗವತ ಭಗವದ್ಗೀತೆಗಳನ್ನು ಜೀರ್ಣಿಸಿಕೊಂಡು, ಇಂಗ್ಲೀಷ್ ಭಾಷೆಯಲ್ಲಿಯೂ ವ್ಯಾಖ್ಯಾನಗಳನ್ನು ರಚಿಸಿ, ಮಹಾದಾರ್ಶನಿಕರಾಗಿ, ಕೃಷ್ಣಪ್ರಜ್ಞೆಯಲ್ಲಿ ಮುಳುಗಿ, ಅದರ ಪ್ರಸಾರಕ್ಕಾಗಿ, ಸಂಸಾರವನ್ನು ತೊರೆದು, ಸನ್ಯಾಸ ಸ್ವೀಕರಿಸಿ, ಶ್ರೀ ಭಕ್ತಿವೇದಾಂತಸ್ವಾಮಿ ಪ್ರಭುಪಾದರಾದ, ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಕೃಷ್ಣನ ಆಜ್ಞೆಯಿಂದ ಅಮೇರಿಕಾಕ್ಕೆ ಹೋಗಿ, ಕಠಿಣ ಸಮಸ್ಯೆಗಳ ಮಧ್ಯೆಯೂ ವಿಶ್ವವಿಖ್ಯಾತರಾಗಿ, ಗುರಿ ಮುಟ್ಟಿದ ಸಂತೃಪ್ತಿಯಿಂದ ೧೯೭೭ರಲ್ಲಿ ವಿಶ್ವಚೇತನದಲ್ಲಿ ವಿಲೀನಗೊಂಡ ಜಗದ್ವಂದ್ಯರ ಸಾಹಸವಿಜಯಗಾಥೆಯಿದು. ಶ್ರೀರಾಮಾನುಜ ಮಧ್ವರ ತತ್ವಗಳಿಗೆ ಮಾರುಹೋದ, ಚೈತನ್ಯ ಮಹಾಪ್ರಭುಗಳ ಆರಾಧಕರಾದ ಅವರು ಸ್ಥಾಪಿಸಿದ ಅಂತರಾಷ್ಟ್ರೀಯ ಕೃಷ್ಣ ಪ್ರಜ್ಞಾ ಸಂಸ್ಥೆ (ಇಸ್ಕಾನ್) ವಿಶ್ವದಲ್ಲೆಲ್ಲ ವ್ಯಾಪಿಸಿದೆ. ಮಾಯೆಯ ಸೇನೆಯ ಅಜ್ಞಾನವನ್ನು ಸೋಲಿಸಲು ನಮ್ಮ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಅತ್ಯಂತ ಪ್ರಮುಖ ಪ್ರಚಾರ ಆಯುಧಗಳು. ಅಂತಹ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಉತ್ಪಾದಿಸಿ, ಪ್ರಪಂಚದಾದ್ಯಂತ ಹೇರಳವಾಗಿ ವಿತರಣೆ ಮಾಡಿದಷ್ಟು ಪ್ರಪಂಚವನ್ನು ನಾವು ಆತ್ಮಹತ್ಯ ಪಥದಿಂದ ಪಾರು ಮಾಡಿದಂತಾಗುತ್ತದೆ ಎಂಬ ಪ್ರಭುಪಾದರ ಸಂದೇಶ ಪುಸ್ತಕ ಶತ್ರುಗಳಿಗೆ ಅರ್ಥವಾಗುತ್ತದೆಯೆ? ಅನೇಕ ಸಮಸ್ಯೆಗಳ ನಡುವೆಯೂ ಕೃಷ್ಣ

ಆಂದೋಲನ ಜಗತ್ತಿನಲ್ಲಿ ಹರಡುತ್ತದೆ ಎಂಬ ಅವರ ಭವಿಷ್ಯ ನಿಜವಾಗಿದೆ. ಶಿಷ್ಯರಿಗೂ ಗುರುಗಳಿಗೂ ವಿಯೋಗವೆಂಬುದೇ ಇಲ್ಲ. ಏಕೆಂದರೆ ಶಿಷ್ಯರು ತಮ್ಮ ಗುರುಗಳ ಉದ್ದೇಶಗಳನ್ನು ಅನುಸರಿಸುತ್ತಿರುವವರೆಗೂ, ಗುರುಗಳು ಶಿಷ್ಯರ ಸಮೀಪದಲ್ಲೇ ಇರುತ್ತಾರೆ. ಇದನ್ನು ವಾಣಿ ಸಾನ್ನಿಧ್ಯವೆನ್ನುತ್ತಾರೆ.

ಕಾದಂಬರೀ ಸಾಮ್ರಾಟ ಶ್ರೀ ಶಿವರಾಮ ಕಾರಂತರ 'ಜಗದೋದ್ಧಾರನಾ' ಕೃತಿಯ ವಿಶ್ಲೇಷಣೆಯಲ್ಲಿ ನಿರ್ಮೋಹಕ ವಸ್ತುದೃಷ್ಟಿಯಿದೆ, ಪ್ರಭುದ್ಧತೆಯಿದೆ, ಸಮತೋಲನವಿದೆ. ಅನ್ಯಾಯ ಅನಿಷ್ಟಗಳನ್ನು ಕಾರಂತರು ನಿರ್ದಾಕ್ಷಿಣ್ಯವಾಗಿ ಎದುರಿಸುತ್ತಾರೆಂದು, ವ್ಯಂಗ್ಯತಂತ್ರದ ಮೂಲಕ ವಿಡಂಬಿಸುತ್ತಾರೆಂದು, ಮಾನವತೆ ಮತ್ತು ವೈಚಾರಿಕತೆ ಅವರ ಬದುಕಿನ ಮಹಾಮಂತ್ರಗಳೆಂದು ಬಳಿಗಾರ್ ಸರಿಯಾಗಿಯೇ ಅವರ ನಿಲವೊಲವುಗಳನ್ನು ಎತ್ತರ ಬಿತ್ತರಗಳನ್ನು ಅಳೆಯುತ್ತಾರೆ. ಶೋಷಣೆ ಯಾವ ರೂಪದಲ್ಲಿದ್ದರೂ ಕಾರಂತರಿಗಾಗದೆಂಬುದನ್ನು ಸೋದಾಹರಣವಾಗಿ ತೋರಿಸುತ್ತಾರೆ. ಉಪನಿಷತ್ತು ಭಗವದ್ಗೀತೆಗಳಲ್ಲಿಲ್ಲದ ವಿಚಾರಗಳನ್ನು ಸೃಷ್ಟಿಸಿ, ಜನಮನದಲ್ಲಿ ಬಿತ್ತುವ ಸಾಧುಸನ್ಯಾಸಿಗಳ ಮೋಸಗಾರಿಕೆಯನ್ನು ಬಯಲಿಸಿ, ಸಮಾಜವನ್ನು ಸತ್ಯದ ಮಾರ್ಗದಲ್ಲಿ ಕೊಂಡೊಯ್ಯುವುದೆ ಕಾದಂಬರಿಯ ಉದ್ದೇಶವೆಂದು ವಿಮರ್ಶಕರು ಸ್ಪಷ್ಟಪಡಿಸುತ್ತಾರೆ. ತಮ್ಮ ಕಾದಂಬರಿಗಳಿಗೆ ಬೇಕಾದ ವಸ್ತು ವಿಷಯ ನಾಯಕ ಪಾತ್ರಗಳ ಅನ್ವೇಷಣೆ ಕಾರಂತರ ನಿರಂತರ ವ್ಯವಸಾಯವಾಗಿದೆಯೆಂಬುದು ಮನು ಅವರ ಅಭಿಪ್ರಾಯ. ಓದುಗರೊಡನೆ ಲೇಖಕರೇ ನೇರ ಸಂಭಾಷಣೆ ನಡೆಸಿದಂತೆ ತೋರುವುದರಿಂದ, ಕಾದಂಬರಿಯ ಓಟದಲ್ಲಿ ಲೇಖಕರೆ ಭಾಗಿಯಾಗುವುದರಿಂದ, ಅಲ್ಲಿ ಜರಗುವ ಸಣ್ಣಪುಟ್ಟ ಘಟನೆಗಳ ಬಗ್ಗೆ ಅನುಮಾನಗಳು ಓದುಗನ ಮನಸ್ಸಿನಲ್ಲಿ ಏಳಬಹುದೆಂಬ ತಮ್ಮ ಅನಿಸಿಕೆಯನ್ನು ದಾಖಲಿಸಲು ವಿಮರ್ಶಕರು ಮರೆತಿಲ್ಲ.

ಉಳಿದ ಲೇಖನಗಳಲ್ಲಿ ಒಂದೆರಡು ಹೊರತಾಗಿ ಮಿಕ್ಕವು ಕಿರು ಪ್ರಬಂಧಗಳ ರೂಪದಲ್ಲಿವೆ. ಕಾಲಹರಣವೇ ಪತನಕ್ಕೆ ದಾರಿಯೆಂದು ಸಮಯಾವಕಾಶದಲ್ಲಿ ವಿವರಿಸುತ್ತ ಟಿವಿಯನ್ನು ಸೋಮಾರಿ ಪೆಟ್ಟಿಗೆಯೆಂದು ಕರೆದಿದ್ದಾರೆ. 'ಏಕಾಂತ ಮತ್ತು ಏಕಾಗ್ರತೆ'ಯಲ್ಲಿ ಬರುವ ಲೇಖಕನ ಜೀವನ ಏಕಾಂಗಿಯಾದದ್ದು, ಆತ ಏಕಾಂಗಿತನ ಬಿಟ್ಟಿದ್ದಾದರೆ ಆತನ ಕೃತಿಗಳು ಸೊರಗಿಹೋಗುತ್ತವೆ. ಏಕಾಗ್ರತೆಯು ಆಧ್ಯಾತ್ಮಿಕ ಸ್ಥಿತಿ. ಇಚ್ಛಾಶಕ್ತಿಯ ಮೂಲನೆಲೆ ಏಕಾಗ್ರತೆ ಎಂಬ ಸೂತ್ರಪ್ರಾಯದ ಸೂಕ್ತಿಗಳು ಮನು ಅವರ ಅಡಕಶೈಲಿಗೆ ನಿದರ್ಶನವಾಗಿವೆ. ಸಾರ್ವತ್ರಿಕ ವಸ್ತು ಸೌಲಭ್ಯಗಳ ಬಗೆಗಿರಬೇಕಾದ ಎಲ್ಲ ಜನರ ಜವಾಬ್ದಾರಿಯನ್ನು 'ಸಾಮಾಜಿಕ ಹೊಣೆ'ಯಲ್ಲಿ ವಿವರಿಸಿದ್ದಾರೆ. ಸರ್ವರೂ ನೆನಪಿಡಬೇಕಾದ ಸಂಗತಿಗಳು ಇಲ್ಲಿವೆ. ಅನುಕರಣೆ ಎರವಲು ಮೂಲಕ 'ಕೃತಕತೆ' ತಾಂಡವವಾಡುತ್ತಿರುವ ಈ ಯುಗದಲ್ಲಿ ಸಹಜತೆ ಸರಳತೆಗಳ ಛಾಪು ಸಾಧ್ಯವೇ ಎಂದು ಪ್ರಬಂಧಕಾರರು ಕಳವಳಿಸುತ್ತಾರೆ. ನಮ್ಮ ನಾಡಿನಲ್ಲಿ ೧೩೦೪ರಲ್ಲಿ ದೊರೆತ ಕೊಹಿನೂರ್ ವಜ್ರದ ಇತಿಹಾಸವನ್ನು ಅಭಿಮಾನದಿಂದ 'ಭಾರಿ ಬೆಳಕಿನ ಬೆಟ್ಟ - ಕೊಹಿನೂರ್ ವಜ್ರ' ಎಂಬ ಪ್ರಬಂಧದಲ್ಲಿ ವಿವರಿಸುತ್ತಾರೆ.

'ಕಬಿನಿ ನದಿ ಅರಣ್ಯಧಾಮ' ಪ್ರವಾಸಿಗಳಿಗೆ ಪ್ರಿಯವಾದ ಪರಿಚಯ ಲೇಖನ, ಆಹಾರ ಪದಾರ್ಥಗಳನ್ನು ಪೋಲುಮಾಡಬಾರದೆಂಬ ಎಚ್ಚರಿಕೆ ನೀಡುವ 'ಅನ್ನಬ್ರಹ್ಮ', ಮಾತಿನ ಸ್ವರೂಪ ಹಾಗೂ ಜಾದೂಗಾರಿಕೆಯನ್ನು ವಿವರಿಸುವ 'ಮಾತು', ಅಮೆರಿಕೆಯ ವಾಣಿಜ್ಯ ಕಟ್ಟಡಕ್ಕೊದಗಿದ ದುರಂತವನ್ನು ದಾಖಲಿಸುವ 'ಸೆಪ್ಟೆಂಬರ್-೧೧' ಇವು ಇಲ್ಲಿಯ ಕಿರುಲೇಖನಗಳು.

ನಮ್ಮಲ್ಲಿ ಲೇಖನವೊಂದನ್ನೇ ವೃತ್ತಿಯಾಗುಳ್ಳ, ಅದಕ್ಕಾಗಿಯೇ ತಮ್ಮೆಲ್ಲ ಶಕ್ತಿಸಾಮರ್ಥ್ಯಗಳನ್ನು ಸವೆಸುವ ಲೇಖಕರು ವಿರಳ. ಶಿಕ್ಷಕ ವೃತ್ತಿಯೊಡನೆ ಲೇಖನ ವೃತ್ತಿಯನ್ನೂ ಹೊಂದಿಸಿಕೊಂಡು ಹೋಗುವವರೇ ಹೆಚ್ಚು. ಆಡಳಿತ ಚಕ್ರದಲ್ಲಿ ಕೈ ಸಿಕ್ಕಿಸಿಕೊಂಡಿರುತ್ತ, ಲೇಖನ ವೃತ್ತಿಯನ್ನೂ ನಿಭಾಯಿಸಿಕೊಂಡು ಹೋಗುವವರು ವಿರಳಾತಿ ವಿರಳ. ಇಂಥ ವಿರಳರಲ್ಲಿ ಶ್ರೀ ಮನುಬಳಿಗಾರ್ ಒಬ್ಬರು. ವಿವಿಧ ಅಧಿಕಾರ ವಲಯಗಳ ಅನುಭವ ಸಂಪತ್ತು ಭಾವಕೋಶದ ಮೂಲಕ ಕನ್ನಡ ಸಾಹಿತ್ಯಕ್ಕಿಳಿದಾಗ, ಭಾಷಾ ಸಾಹಿತ್ಯಗಳ ಬನಿ, ಕೆಚ್ಚು ಕಸುವು ಚೆಲುವುಗಳು ಬಹುಗುಣವಾಗುವುದರಲ್ಲಿ ಅನುಮಾನವಿಲ್ಲ. ವೈವಿಧ್ಯಮಯ ಪಕ್ವಾನುಭವವುಳ್ಳ ಶ್ರೀ ಮನು ಬಳಿಗಾರ್ ಅವರ ಲೇಖನಿಯಿಂದ ಕನ್ನಡದಲ್ಲಿ ಹುಲುಸು ಬೆಳೆಯೊದಗಿ, ನಾಡಿಗೆ ಸಿರಿಸುಗ್ಗಿಯ ಆನಂದ ದೊರೆಕೊಳ್ಳಲೆಂದು ಹಾರೈಸುತ್ತೇನೆ.

# 'ಸಂಸ್ಕೃತಿ ವಿಹಾರ', ಒಳಹೊಕ್ಕಾಗ....

ಪ್ರೊ.ಎಂ. ಎಲ್. ನರಸಿಂಹಮೂರ್ತಿ

ಸಾಹಿತಿ ತಾನು ಬದುಕುತ್ತಿರುವ ಕಾಲಮಾನದ ಜೊತೆ ಜೊತೆಗೆ ಸ್ಪಂದಿಸುತ್ತಾ, ಸಂವಾದ ನಡೆಸುತ್ತಾ, ಪ್ರತಿಕ್ರಿಯೆ ನೀಡುತ್ತಾ ತನ್ನ ಜೀವಂತಿಕೆಯನ್ನು ಋಜುವಾತು ಮಾಡಬೇಕಾಗುತ್ತದೆ. ವರ್ತಮಾನದ ವಿಷಯ, ವಿಚಾರಗಳು ಇತಿಹಾಸವನ್ನು ಕೆದಕುತ್ತಾ, ಭವಿಷ್ಯತ್ತಿನೊಂದಿಗೆ ತಳುಕು ಹಾಕಿಕೊಂಡುಬಿಡುತ್ತವೆ. ಸಕಲರನ್ನೂ ಆಕರ್ಷಿಸುತ್ತವೆ, ಮೆಚ್ಚಿಸುತ್ತವೆ ಎಂಬ ಅತಿಯಾದ ಭರವಸೆ, ಎಲ್ಲ ಬದಲಾವಣೆಗೆ ಕಾರಣವಾಗುತ್ತವೆ ಎಂಬ ಪ್ರಬಲವಾದ ಆಕಾಂಕ್ಷೆ ಮನದಾಳದಲ್ಲಿದ್ದರೂ ಲೋಕಾನುಭವದಿಂದ ಅದು ಸಾಧ್ಯವೇ? ಎಂಬ ಪ್ರಶ್ನೆ ಎದುರಾಗುತ್ತದೆ. ಆ ಸಂದರ್ಭದಲ್ಲಿ ಅಸಲು ಕಸುಬಿನ ಸಾಹಿತಿ ಕಂಡುಕೊಳ್ಳುವುದು, ಶ್ರೀಸಾಮಾನ್ಯರ, ಆಸಕ್ತರ ಮನಸೆಳೆಯುತ್ತಾ, ಅರಿವನ್ನು ವಿಸ್ತರಿಸುವ ಕಾರ್ಯವನ್ನು ತನ್ನ ಬರವಣಿಗೆ ಮಾಡುತ್ತದೆ ಎಂಬ ಆತ್ಮವಿಶ್ವಾಸ.

ಈ ಎಲ್ಲ ಮಾತುಗಳ ಹಿನ್ನೆಲೆಯಲ್ಲಿ ಮನು ಬಳಿಗಾರ್ ಅವರ 'ಸಂಸ್ಕೃತಿ ವಿಹಾರ' ಎಂಬ ಕೃತಿಯನ್ನು ಒಳಹೊಕ್ಕು ನೋಡುವುದು ಔಚಿತ್ಯಪೂರ್ಣವಾದುದು. "ಈ ಸಂಕಲನದಲ್ಲಿ ಇವರ ಸಾಹಿತ್ಯದ ಓದಿನ ಹರಹು,

ಗ್ರಹಿಕೆಯ ನೆಲೆ, ವಿಶ್ಲೇಷಣೆಯ ಸಮದೃಷ್ಟಿ ತೊದಲಿಲ್ಲದ ಬಗೆಯಲ್ಲಿ ಮೂಡಿಬಂದಿವೆ. ಭಾಷೆ, ನೆಲ, ಜಲದ ವಿಷಯಗಳ ಜೊತೆಗೆ ಸಾಹಿತ್ಯ ಸಂಸ್ಕೃತಿ, ಸಾಮಾಜಿಕ ಚಿಂತನೆ, ಮಾಧ್ಯಮಗಳ ವಿಚಾರ ಶಿಕ್ಷಣ ಈ ಎಲ್ಲ ಕ್ಷೇತ್ರಗಳ ಬಗೆಗೆ ನಿರ್ದಿಷ್ಟ ಹಾಗೂ ನಿಖರ ಭಾವದಲ್ಲಿ ಮಾತನಾಡುವ ಮನು ಅವರಿಗೆ ವಿಷಯಗಳ ಆಳ ವಿಸ್ತಾರಗಳ ಅರಿವು ಇದೆ. ಆರ್ದ್ರ ಹಾಗೂ ಆಪ್ತ ಭಾವದಲ್ಲಿ ವಿಷಯವನ್ನು ಮಂಡಿಸುವ ಶೈಲಿ ಕರಗತವಾಗಿದೆ" ಎಂಬ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಅವರು ಪುಸ್ತಕದ ಬೆನ್ನುಡಿಯಲ್ಲಿ ತಿಳಿಸಿರುವುದನ್ನು ಎಲ್ಲರೂ ಒಪ್ಪಬಹುದಾಗಿದೆ.

ಈ ಸಂಕಲನದಲ್ಲಿ ಇಪ್ಪತ್ತೊಂಬತ್ತು ಲೇಖನಗಳು ವಿಷಯ, ವಿಚಾರ ವೈಶಿಷ್ಟ್ಯದಿಂದ ಗಮನ ಸೆಳೆಯುತ್ತವೆ. 'ಗಾಂಧಿ ಎಂಬ ಶಾಶ್ವತ ಸತ್ಯ'ದಲ್ಲಿ ಅಹಿಂಸೆ, ಸತ್ಯಾಗ್ರಹ, ಉಪವಾಸಗಳ ಬಗೆಗೆ ಬಾಪೂ ಬೀರಿದ ಹೊಸ ಬೆಳಕನ್ನು ಕುರಿತು ಹೇಳಿದ್ದಾರಲ್ಲದೆ 'ಎಲ್ಲ ಜೀವಿಗಳು ಸರಿಸಮಾನರು' ತ್ಯಾಗ ಹಾಗೂ ಸೇವೆಗಳ ಮುಖಾಂತರವೆ ಇವರನ್ನು ಗೆಲ್ಲಬೇಕೆಂಬುದನ್ನು ಗಮನಕ್ಕೆ ತರುತ್ತಾರೆ. ಆದರೆ ಗಾಂಧಿ ತತ್ವಗಳ ಬಗ್ಗೆ ನಾವು ಅಂದುಕೊಂಡಿರುವುದು, ಕಣ್ಣೆದುರು ನಡೆಯುತ್ತಿರುವುದರ ಬಗ್ಗೆ ಗಹನವಾದ ಆತ್ಮವಿಮರ್ಶೆ ಅತ್ಯಗತ್ಯ ಎಂಬ ಎಚ್ಚರವನ್ನೂ ನೀಡುತ್ತಾರೆ.

'ಕುವೆಂಪು ಸಾಹಿತ್ಯದಲ್ಲಿ ಶೂದ್ರ ಸಂಸ್ಕತಿ ದರ್ಶನ'- ಗಹನ ಗಂಭೀರವಾದ ಲೇಖನ. ಇದರಲ್ಲಿ 'ಕಾನೂರು ಹೆಗ್ಗಡತಿ' ಕಾದಂಬರಿಯು ಶೂದ್ರ ಜನಾಂಗದ ಹಾಗೂ ಶೂದ್ರ ಸಂಸ್ಕೃತಿಯ ವರ್ಣನೆಯ ಬಹುಭಾಗವನ್ನು ಹೊಂದಿದೆ. ಹಾಗೆಯೇ 'ಮಲೆಗಳಲ್ಲಿ ಮದುಮಗಳು'ದಲ್ಲಿಯೂ ಒಟ್ಟಾರೆಯಾಗಿ ಶೂದ್ರ ಸಂಸ್ಕೃತಿಯೇ ಚಿತ್ರಿತವಾಗಿರುವುದನ್ನು ಸಂಕ್ಷಿಪ್ತ ಆಧಾರಗಳನ್ನು ನೀಡಿ ಗಮನ ಸೆಳೆಯುತ್ತಾರೆ. 'ಗೊಬ್ಬರ' ಕವಿತೆ, ನಾಟಕಗಳಲ್ಲಿ ಜಲಗಾರ, ಶೂದ್ರ ತಪಸ್ವಿಯ ಬಗ್ಗೆ ವಿಚಾರಗಳಿದ್ದು ಪುಟ ಮಿತಿಯಲ್ಲಿ ಅಚ್ಚುಕಟ್ಟಾಗಿ ಲೇಖನದ ಶೀರ್ಷಿಕೆಗೆ ನ್ಯಾಯ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

'ಗದಗ ಜಿಲ್ಲಾ ದ್ವಿತೀಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ'ದಲ್ಲಿ ಸಾಹಿತ್ಯ, ಸಂಸ್ಕೃತಿ, ಭಾಷೆಗಳ ಮೂಲ ನೆಲೆ, ಹಿನ್ನೆಲೆ, ಅವುಗಳ ಪರಂಪರೆಯ ಬಗ್ಗೆ ಸಂಕ್ಷಿಪ್ತವಾಗಿ ವಿಚಾರ ಮಾಡಿದ್ದಾರಲ್ಲದೆ, ಕನ್ನಡ ಸಾಹಿತ್ಯ ಕಂಡ ವಿವಿಧ ಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ, ಸ್ತ್ರೀವಾದಿ ಪ್ರಕಾರಗಳ ಬಗ್ಗೆ ಪ್ರಸ್ತಾಪ ಕಂಡುಬರುತ್ತದೆ. ವಿಶೇಷವಾಗಿ 'ಮಹಾಜನ್ ವರದಿ'ಯ ಬಗ್ಗೆ ಹಲವು ಮಾಹಿತಿಗಳನ್ನು ಕ್ರೋಢೀಕರಿಸಿ ನೀಡುತ್ತಾರೆ. ಸರೋಜಿನಿ ಮಹಿಷಿ ವರದಿ, ಕರ್ನಾಟಕದ ಏಕೀಕರಣದ ಬಗ್ಗೆ ಹತ್ತಾರು ವಿಚಾರಗಳನ್ನು ತಂದುಕೊಡುವುದರ ಮೂಲಕ ಸಮ್ಮೇಳನದ ಸಭಿಕರನ್ನು ಜಾಗೃತಿಗೊಳಿಸುವ ಉಮೇದು ತೋರಿದ್ದಾರೆ.

'ಮುತ್ತು ಒಡೆದರೂ ಹೊತ್ತು ನಮಗಿರಲಿ' - ಪ್ರಬಂಧದಲ್ಲಿ ಕಾಲದ ಮಹತ್ವದ ಬಗ್ಗೆ ಅತ್ಯಂತ ಎಚ್ಚರದ ಮಾತುಗಳಿವೆ. ಸಮಯವನ್ನು ಸದಾವಕಾಶವನ್ನಾಗಿ ಮಾಡಿಕೊಳ್ಳದೆಹೋದರೆ ನಮಗೆ ಸಿಗಬೇಕಾದ ಫಲ

ಸಿಗಲಾರದು, ಸಿದ್ಧಿಯೂ ಆಗಲಾರದು. ಕಾಲ ಯಾರಿಗೂ ಕಾಯುವುದಿಲ್ಲ. ಇಂಥ ಮಾತುಗಳಿಗೆ ಪೂರಕವಾಗುವಂಥ ವಿಶ್ವ ಪ್ರಸಿದ್ಧರಿಗೆ ಸಂಬಂಧಿಸಿದ ಪ್ರಸಂಗಗಳನ್ನು ಉದಾಹರಿಸಿ ಗಮನ ಸೆಳೆಯುತ್ತಾರೆ.

'ಶಿಥಿಲಗೊಳ್ಳದಿರಲಿ ಸಂಬಂಧಗಳು' –ಇದರಲ್ಲಿ ನಮ್ಮ ಸಂಬಂಧಗಳು ಮೊದಲು ಆಪ್ಯಾಯಮಾನದವುಗಳಾಗಿದ್ದು, ಈಗೀಗ ಅವು ತಮ್ಮ ಮೂಲ ಸ್ವರೂಪವನ್ನು ಬದಲಾಯಿಸುತ್ತಿರುವ ರೀತಿ. ಅದಕ್ಕೆ ಕಾರಣವಾಗುವ ಅಧಿಕಾರ, ಸಂಪತ್ತು, ರಕ್ತ ಸಂಬಂಧಗಳ ಬಹುಮಗ್ಗುಲಿನ ವಿಚಾರಗಳನ್ನು ನಮ್ಮ ಮುಂದೆ ಹರಡುವುದರ ಮೂಲಕ ವಿವೇಚನೆಗೆ, ಆಯ್ಕೆಗೆ ತೀರ್ಮಾನಕ್ಕೆ ಅವಕಾಶ ಮಾಡಿಕೊಡುತ್ತಾರೆ. ಒಟ್ಟಿನಲ್ಲಿ ನಮ್ಮ ಆರೋಗ್ಯ, ಆಯಸ್ಸು, ಸೃಷ್ಟಿಶೀಲತೆ, ದಕ್ಷತೆ ಇತ್ಯಾದಿಗಳನ್ನು ಉನ್ನತೀಕರಿಸುವ ನಮ್ಮ ಉತ್ತಮ ಸಂಬಂಧಗಳನ್ನು ಬಹು ಜಾಗ್ರತೆಯಾಗಿ ನಾವೆಲ್ಲ ಕಾಯ್ದುಕೊಳ್ಳಬೇಕಾಗಿದೆ' ಎಂಬ ಸಂಬಂಧಗಳ ಮಹತ್ವವನ್ನು ತಿಳಿಸುತ್ತಲೇ ಜೀವನಮುಖಿ ಚಿಂತನೆ ಮಾಡಿದ್ದಾರೆ.

'ಪ್ರಾಮಾಣಿಕತೆಯ ಅರ್ಥವ್ಯಾಪ್ತಿಯ ವಿಸ್ತರಿಸುತ್ತ' - ಆಡಳಿತ, ರಾಜಕೀಯ, ನ್ಯಾಯಾಲಯ, ವ್ಯಾಪಾರ ಉದ್ಯೋಗಗಳು, ಬಹುಮುಖ್ಯವಾಗಿ 'ಪ್ರಾಮಾಣಿಕತೆ' ಇರಲೇಬೇಕಾದ ಕ್ಷೇತ್ರಗಳಾಗಿವೆ. ಪ್ರಾಮಾಣಿಕತೆಯ ಬಗ್ಗೆ ಹೇಳುವಾಗ ಸರ್.ಎಂ.ವಿಶ್ವೇಶ್ವರಯ್ಯ, ಲಾಲ್‌ಬಹದ್ದೂರ್ ಶಾಸ್ತ್ರಿ, ಗಾಂಧೀಜಿ ಮುಂತಾದವರ ವಿಚಾರಗಳನ್ನು, ಪ್ರಸಂಗಗಳನ್ನು ಪ್ರಸ್ತಾಪಿಸುವ ಮುಖಾಂತರ 'ಪ್ರಾಮಾಣಿಕತೆ ಕೇವಲ ಬಾಹ್ಯಾಡಂಬರವಾಗದೇ ಅಂತರಂಗದ ಅರಿವಾಗಬೇಕು. ಆತ್ಮದ ಧ್ವನಿಯಾಗಬೇಕು. ಅದು ಕುಟುಂಬ, ಸಮಾಜ, ನಾಡು, ದೇಶಗಳಿಗೆ ವಿಸ್ತಾರಗೊಳ್ಳಬೇಕು' ಎಂಬ ಆಶಯವನ್ನೂ ವ್ಯಕ್ತಪಡಿಸುತ್ತಾರೆ.

'ಸ್ಮಾರಕವೆನೆ ಕುಣಿದಾಡುವುದನ್ನದೆ'- ಎಲ್ಲ ಕವಿಗಳ, ಸಾಧಕ ಮಹನೀಯರ ಸ್ಮಾರಕಗಳ ರಚನೆ, ಅವುಗಳ ಕಾರ್ಯನಿರ್ವಹಣೆಯಲ್ಲಿ ತೋರಬೇಕಾದ ಸಾರ್ವಜನಿಕರ, ಸರ್ಕಾರದ ಜವಾಬ್ದಾರಿಯ ಬಗ್ಗೆ ತಿಳಿಸುತ್ತಾರಲ್ಲದೆ, ಅವುಗಳನ್ನು ಸರ್ಕಾರ ಸಂರಕ್ಷಿಸಿ ಮುಂದಿನವರಿಗಾಗಿ ಕಾಪಾಡುವುದು ಅನಿವಾರ್ಯ, ಆವಶ್ಯಕ ಎಂದು ಮರೆಯದಂತೆ ಹೇಳಿದ್ದಾರೆ.

'ಶಿಕ್ಷಕ ಪಾಲಕರ ಕರ್ತವ್ಯಗಳ ಕುರಿತು' - ಹೇಳುವಾಗ ಹೆತ್ತವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ತೋರಬೇಕಾದ ಮುತುವರ್ಜಿ, ಶಿಕ್ಷಕರು ನಿರ್ವಹಿಸಬೇಕಾದ ಕರ್ತವ್ಯ, ಸಮಾಜದ ಹೊಣೆಗಾರಿಕೆ ಮುಂತಾದ ವಿಚಾರಗಳನ್ನು ಅವರವರ ಮನಮುಟ್ಟುವಂತೆ ತಿಳಿಸಿದ್ದಾರೆ. ಹಾಗೆಯೇ ಯಾರೂ ತಮ್ಮ ಕಾರ್ಯವನ್ನು ನಿರ್ಲಕ್ಷಿಸದಂತೆ ಪವಿತ್ರವಾದುದೆಂದು ಭಾವಿಸಿ ನಿರ್ವಹಣೆ ಮಾಡಿದಾಗ ದೇಶದ ಪ್ರಗತಿ ಸಾಧ್ಯವೆಂದಿದ್ದಾರೆ.

'ನಯ-ವಿನಯ-ಜಯ'ಕ್ಕೆ ಸಂಬಂಧಿಸಿದಂತೆ ಕೆಲವು ಮಹಾನ್ ವ್ಯಕ್ತಿಗಳ ಜೀವನದಲ್ಲಿ ನಡೆದಿರುವ ಪ್ರಸಂಗಗಳನ್ನು ಪ್ರಸ್ತಾಪ ಮಾಡುತ್ತಾರೆ. ಹಾಗೆಯೆ ಪುರಾಣ ಪುಣ್ಯ ಕಥೆಗಳಲ್ಲಂತೂ ವಿನಯಶೀಲರಿಗೇನು ಯಶ ಹಾಗೂ ಕೀರ್ತಿ ದೊರೆತಿರುವುದನ್ನು, ಹೆಸರುಗಳನ್ನು ಉದಾಹರಿಸಿ ಹೇಳುತ್ತಾರೆ.

'ನೀರು-ವಿದ್ಯುತ್, ವ್ಯಯ ಭಯ' ಲೇಖನದಲ್ಲಿ ಹಿಮಶಿಖರಗಳು ಕರಗುತ್ತಿರುವುದರಿಂದ ಉಂಟಾಗುವ ಪ್ರಾಕೃತಿಕ ವೈಪರೀತ್ಯವನ್ನು ಸ್ಥೂಲವಾಗಿ ತಿಳಿಸಿ, ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ, ಅಣುವಿಕಿರಣ ಪರೀಕ್ಷೆ ಸ್ಫೋಟ, ಅರಣ್ಯನಾಶ, ಕಾರ್ಖಾನೆ, ಕಾರ್ಯಾಗಾರ, ವಾಹನಗಳಿಂದುಂಟಾಗುತ್ತಿರುವ ಮಾಲಿನ್ಯದ ಬಗ್ಗೆ ಎಲ್ಲರೂ ತಿಳಿಯಬೇಕಾದ ಅಗತ್ಯ ಮಾಹಿತಿಗಳನ್ನು ನೀಡಿದ್ದಾರೆ. ವಿದ್ಯುತ್ ಕೂಡ ನೀರನ್ನು ಅವಲಂಬಿಸಿರುವ ವಿಚಾರ ಪ್ರಸ್ತಾಪಿಸಿ, ಅಗತ್ಯಕ್ಕಿಂತ ಹೆಚ್ಚು ಹೆಚ್ಚು ಬಳಸಿಕೊಳ್ಳುವುದರಿಂದ ಎಲ್ಲ ವಸ್ತುಗಳು 'ನಮ್ಮನ್ನು ಉಳಿಸಿಕೊಳ್ಳಿ, ನಿಮ್ಮನ್ನು ಉಳಿಸಿಕೊಳ್ಳುತ್ತೇವೆ' ಎಂಬ ಎಚ್ಚರದ ನುಡಿಗಳಾಗುತ್ತಿರುವುದು ನಮ್ಮ ಕಿವಿಗೆ ಕೇಳಿಸಬೇಕು. ಮುನ್ನೆಚ್ಚರಿಕೆ ವಹಿಸಿದರೆ ಮುಂದಿನ ಪೀಳಿಗೆಗೆ ಉಪಯೋಗಿಸುವ ಸೌಲಭ್ಯ ದೊರಕಿಸಿಕೊಡಬಹುದು.

'ತಿಂಗಳೊಂದರ ತಿರುಗಾಟ'ದಲ್ಲಿ ಕೆಲವು ಸಂಘ ಸಂಸ್ಥೆಗಳು ಸಾಹಿತ್ಯ, ಕಲೆ, ಸಂಸ್ಕೃತಿ ಪ್ರಸಾರಕ್ಕಾಗಿ ನಡೆಸುತ್ತಿರುವ ತಿರುಗಾಟಗಳ ಬಗ್ಗೆ ತಿಳಿಸಿದ್ದಾರೆ.

'ಆಡಳಿತದಲ್ಲಿ ಕನ್ನಡ' ಕೇವಲ ವೇದಿಕೆಯ ಘೋಷಣೆಯಾಗದೆ, ಕಾರ್ಯರೂಪಕ್ಕೆ ತರಬೇಕು ಎಂಬ ನಿಜವಾದ ಕಾಳಜಿಯಿದ್ದು, ಅದನ್ನು ತಿಳಿಸಲು ಅತ್ಯಂತ ಹಳತಾದ ಶಾಸನಗಳನ್ನು, ಕರ್ನಾಟಕವನ್ನು ಆಳಿದ ರಾಜ ಮಹಾರಾಜ ಚಕ್ರವರ್ತಿಗಳ ಕಾಲದಲ್ಲಿ ಕನ್ನಡದಲ್ಲಿಯೇ ಆಡಳಿತ ನಡೆಸುತ್ತಿದ್ದರು ಎಂಬ ವಿಚಾರವನ್ನು ಗಮನಕ್ಕೆ ತರುವುದರ ಮೂಲಕ ನಮ್ಮ ಕಣ್ತೆರೆಸುವ ಕಾರ್ಯ ಮಾಡಿದ್ದಾರೆ. ಬ್ರಿಟೀಷರ ಆಳ್ವಿಕೆಯಲ್ಲಿ ಕೂಡ ಆಡಳಿತದಲ್ಲಿ ಕನ್ನಡದ ಸರ್ಕಾರಿ ಪ್ರಕಟಣೆ, ಸುತ್ತೋಲೆ, ಅಧಿಸೂಚನೆ, ಪತ್ರ ವ್ಯವಹಾರ, ರಸೀದಿ ನಮೂನೆ, ಕೈಪಿಡಿಗಳನ್ನು ತಂದಿರುವುದನ್ನು ದಾಖಲೆ ಸಹಿತ ವಿವರಿಸಿದ್ದಾರೆ.

'ಶಾಂತಿ-ಒಂದು ಸಮರ್ಥ ನಿರ್ವಹಣೆ, ಸುಂದರ ಸಂದೇಶ' ಲೇಖನದಲ್ಲಿ ಪ್ರೊ.ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ ಪ್ರಶಸ್ತಿ ವಿಜೇತ ಚಲನಚಿತ್ರದ ಬಗ್ಗೆ ತಿಳಿಸಲಾಗಿದೆ. ಚಿತ್ರದ ನಾಯಕಿ ಶಾಂತಿ ಒಬ್ಬಂಟಿ. ಇಡೀ ಚಿತ್ರದಲ್ಲಿ ಇವಳ ಹೊರತಾಗಿ ಬೇರೆ ಪಾತ್ರಗಳ ಭೌತಿಕ ಹಾಜರಿಯೇ ಇಲ್ಲ. ಇದೊಂದು ಜಗತ್ತಿನಾದಾದ್ಯಂತ ಜನರನ್ನು ಚಿಂತನೆಗೆ ಒಳಗು ಮಾಡಿದ ಚಿತ್ರವಾಗಿದೆ.

ಕಣವಿ ಕಾವ್ಯ-"ಒಂದು ಮುಂಜಾವು", "ಇದೇನು ಒಂದು ದೀರ್ಘ ಕವನವಲ್ಲ. ಮಧ್ಯಮ ಗಾತ್ರದ ಈ ಗೀತೆ ನಿಸರ್ಗದ ಆಟ, ಚೆನ್ನಾಟ, ಲವಲವಿಕೆ, ನಿತ್ಯ ಹರಿದ್ವರ್ಣತೆ, ಉಲ್ಲಾಸ, ಉನ್ಮಾದ ಇತ್ಯಾದಿಗಳನ್ನೆಲ್ಲಾ ಇಡಿಯಾಗಿ ಕಟ್ಟಿಕೊಟ್ಟು ಮಳೆಯಲಾಸ್ಯ ನಿನಾದಗಳ ಅಪೂರ್ವ ಸವಿಯುಣ್ಣಿಸಿ ನಮ್ಮನ್ನು ಮೈಮರೆಸುತ್ತದೆ" ಎನ್ನುವುದು ಬಳಿಗಾರ್ ಅವರ ಅಭಿಪ್ರಾಯ.

'ಮಾನವೀಯತೆಯು ಉಕ್ಕಿ ಹರಿದ ಅಪರೂಪದ ಪ್ರಸಂಗ' ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರೂಪಿಸಿದ್ದ ಕಾರ್ಯಕ್ರಮವೊಂದರ ವಿವರಣೆಯಿಂದ ಕೂಡಿದ್ದು, ಆ ಕಾರ್ಯಕ್ರಮದಲ್ಲಿ ನಡೆದದ್ದು ಕಂಡದ್ದರ ಬಗ್ಗೆ ಒಂದು ಟಿಪ್ಪಣಿ ರೂಪದಲ್ಲಿದ್ದು ಜನಜಾಗೃತಿಗೊಳಿಸುವ ವಿಚಾರಗಳನ್ನು ಅಡಗಿಸಿಕೊಂಡಿದೆ.

‘ಶ್ವೇತಾಂಬರಿ ಸುಮಿತ್ರಾಗಾಂಧಿ'ಯಲ್ಲಿ ರಾಜ್ಯಸಭಾ ಸದಸ್ಯರಾಗಿದ್ದ ಸುಮಿತ್ರಾ ಗಾಂಧಿಯವರು ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾದವರು. ಇವರು ಹಾಗೂ ಕುಟುಂಬದವರು ಸಾದಾ ಸೀದಾ ಜೀವನಶೈಲಿ ಅಳವಡಿಸಿಕೊಂಡು, ಗಾಂಧಿ ತತ್ವ ಹೇಳುವುದಕ್ಕಲ್ಲ, ಬಾಳುವುದಕ್ಕೆ ಎಂಬುದನ್ನು ನಡೆದು ತೋರಿಸುತ್ತಿರುವ ಆದರ್ಶ ಜೀವಿಗಳು ಎಂಬ ವಿಚಾರವನ್ನು ಅರ್ಥವಾಗುವಂತೆ ತಿಳಿಸಿದ್ದಾರೆ.

‘ಕೂಡಲ ಸಂಗಮದಲ್ಲಿ ಮಿಡಿದ ಮನ'ದಲ್ಲಿ ಲೇಖಕರು 2007ರ ಏಪ್ರಿಲ್ ತಿಂಗಳಲ್ಲಿ ಅಲ್ಲಿಗೆ ಭೇಟಿ ನೀಡಿದಾಗಿನ ಒಂದು ಅನಿಸಿಕೆ. ‘ದಾಸೋಹ ಭವನ'ದ ಭೇಟಿ, ಶರಣ ಸಾಹಿತ್ಯ ಭಂಡಾರ, ಸಭಾಭವನ, ಬಸವವೇದಿಕೆ, ‘ವಚನ ವೈಭವ', ‘ಬಸವ ಅಂತರರಾಷ್ಟ್ರೀಯ ಕೇಂದ್ರಗಳು ಮುಖ್ಯವಾದ ಕಟ್ಟಡಗಳಾಗಿದ್ದು, ಅಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಹೊಮ್ಮುವ ವಿಚಾರಗಳು ದಾಖಲಾಗಿವೆ.

‘ಎದೆಯಾಳದ ಎರಡು ಮಾತು' ಶ್ರೀ ವಿಶ್ವೇಶ್ವರಭಟ್ ಅವರು ‘ಕನ್ನಡ ಪ್ರಭ' ಪತ್ರಿಕೆಯ ಸಂಪಾದಕರು, ಸುವರ್ಣವಾಹಿನಿಯ ಪ್ರಧಾನ ನಿರ್ದೇಶಕರು ಆಗಿದ್ದಾಗ ಬರೆದ ಲೇಖನ.

‘ಸುಧಾ ಸಾರಾಭಿವರ್ಷಿಣಿ' ಇನ್‌ಫೋಸಿಸ್‌ನ ಸುಧಾಮೂರ್ತಿಯವರ ಸಾಧನೆ, ಸಾಹಸ, ಸಾಹಿತ್ಯ ನಿರ್ಮಾಣವನ್ನು ಕುರಿತಾದ ಲೇಖನ. ಹಲವಾರು ಮಾಹಿತಿಗಳನ್ನು ಒದಗಿಸುತ್ತದೆ.

‘ಜೆ.ಎಸ್.ಎಸ್. ಅವರ ಪುನಶ್ಚೇತನ ಶಿಬಿರಗಳು' ಮೈಸೂರಿನ ಜೆ.ಎಸ್.ಎಸ್. ಮಹಾವಿದ್ಯಾಪೀಠವು ತನ್ನ ನೌಕರ ವರ್ಗದವರಿಗೆ ನಡೆಸುವ ಶಿಬಿರದ ಕಾರ್ಯ ವಿಧಾನಗಳ ಬಗ್ಗೆ ಉಪಯುಕ್ತವಾದ ಮಾಹಿತಿ ವಿವರಗಳು ದಾಖಲಾಗಿವೆ.

‘ದೇಜಗೌ' ಎಂಬ ಅದ್ಭುತ ಮಂತ್ರ - ಈ ಲೇಖನದಲ್ಲಿ ಕನ್ನಡದ ಕಟ್ಟಾಳು ದೇ.ಜವರೇಗೌಡರ ಬಗ್ಗೆ ಮೆಚ್ಚುಗೆಯ ಮಾತುಗಳಿವೆ. ಸಹಜವಾಗಿ ಅವರ ಕನ್ನಡ ಸೇವೆ, ಸಂದ ಪುರಸ್ಕಾರ, ಪ್ರಶಸ್ತಿಗಳ ಬಗ್ಗೆ ಮಾಹಿತಿಯಿದೆ.

‘ಸತ್ಯ ಸಂಶೋಧಕ'ದಲ್ಲಿ ಡಾ.ಎಂ.ಎಂ.ಕಲಬುರ್ಗಿ ಅವರನ್ನು ಕುರಿತಾದ ಅವಿರಳ ಜ್ಞಾನಿ, ಹೃದಯ ಶ್ರೀಮಂತಿಕೆ ಎಂಬ ಮೆಚ್ಚುಗೆ ಮಾತುಗಳು, ಸಾಧನೆಗಳು ದಾಖಲಾಗಿವೆ.

‘ಪ್ರಾಂಜಲ ಪ್ರತಿಭೆ'ಯಲ್ಲಿ ಡಾ.ಎಚ್.ಬಿ.ವಾಲೀಕಾರ್ ಜೀವನಕ್ಕೆ ಸಂಬಂಧಿಸಿದ ಕೆಲವು ವಿಚಾರಗಳು ಕಂಡುಬರುತ್ತವೆ.

ವಿಶ್ವನಾಥರ ವೈವಿಧ್ಯಮಯ ‘ಮಂಥನ', ಮಂಥನ ಕಾಲಕಾಲಕ್ಕೆ ಬರೆದ ಮೂವತ್ತಾರು ಲೇಖನಗಳ ಗುಚ್ಛ, ಶಾಂತಿ, ದುಃಖ, ಪ್ರಾರ್ಥನೆ, ಸಫಲತೆ, ಆಹಾರ, ಸ್ಥಿರತೆ, ಗುಟ್ಟು ಇತ್ಯಾದಿ ತರೆಬರಹದ ಜನಾಕರ್ಷಕ ಕಿರು ಲೇಖನಗಳಿವೆ. ಅವು ಜೀವನದ ಮಹತ್ವವನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂಬ ಮೆಚ್ಚುಗೆಯ ಮಾತು ದಾಖಲಾಗಿದೆ.

‘ಪುಟಿನೆಗೆವ ಚೈತನ್ಯದ ರಂಗಭೂಮಿ-ಸಾಣೇಹಳ್ಳಿ' ಇದು ಇಂದು ಕೇವಲ ಸಣ್ಣಹಳ್ಳಿ ಮಾತ್ರವಲ್ಲ. ಕ್ರಿಯಾಶೀಲ ಜೀವಂತ ರಂಗಭೂಮಿಯ ದ್ಯೋತಕ ನಾಡು ಹೆಮ್ಮೆ ಪಡುವಂಥ ‘ರಂಗಸ್ಥಳ' ಎಂಬ ವಿಚಾರಗಳು ಹ್ರಸ್ವವಾಗಿ ಪ್ರಸ್ತಾಪಗೊಂಡಿದೆ.

‘ಚುರುಕು ಚಟುವಟಿಕೆಗಳ ಒಂದು ವಾರ' - ಹತ್ತಾರು ಚಟುವಟಿಕೆಗಳು ಜೆ.ಎಸ್.ಎಸ್. ಅಂತರರಾಷ್ಟ್ರೀಯ ಶಾಲೆಯಲ್ಲಿ ನಡೆಯುವುದನ್ನು ಪ್ರಸ್ತಾಪಿಸಿರುವ ಲೇಖನ.

ದೊಡ್ಡರಂಗೇಗೌಡರ ಕರುಳ ಕರಗಿಸುವ ಕಾವ್ಯ. ದೊಡ್ಡರಂಗೇಗೌಡರ ಬಗ್ಗೆ ಒಂದು ಕಿರುಟಿಪ್ಪಣಿ ಇಲ್ಲಿದೆ.

ಸಾದಾ ಸೀದಾ ಜೀವನಶೈಲಿ ಅಳವಡಿಸಿಕೊಂಡು, ಗಾಂಧಿ ತತ್ವ ಹೇಳುವುದಕ್ಕಲ್ಲ, ಬಾಳುವುದಕ್ಕೆ ಎಂಬುದನ್ನು ನಡೆದು ತೋರಿಸುತ್ತಿರುವ ಆದರ್ಶ ಜೀವಿಗಳು ಎಂಬ ವಿಚಾರವನ್ನು ಅರ್ಥವಾಗುವಂತೆ ತಿಳಿಸಿದ್ದಾರೆ.

‘ಗತ ವೈಭವ ಮರುಕಳಿಸುವ ಕಾವ್ಯಧಾರೆ'ಯಲ್ಲಿ ಸತ್ಯ ವಿಠಲರ ಕೃತಿಗಳ ಪಟ್ಟಿ, 17ನೇ ಶತಮಾನದ ಕವಿಸಾಗರವರ್ಣಿಯ ಸಾಹಿತ್ಯವನ್ನು ಬೆಳವಾಡಿ ಮಂಜುನಾಥರು ವಸ್ತುನಿಷ್ಠವಾಗಿ ನೀಡಿರುವುದನ್ನು ದಾಖಲಿಸಿದ್ದಾರೆ.

‘ಗದ್ಯಪದ್ಯಗಳ ಲಯಬದ್ಧ ಲಾವಣಿ' - ಪ್ರಾಧ್ಯಾಪಕ ಬಿ.ಆರ್. ಪೊಲೀಸ್ ಪಾಟೀಲರ ಬೂದಿ ಮುಚ್ಚಿದ ಕೆಂಡ' ಕಥಾಸಂಕಲನವನ್ನು ಕುರಿತು ಬರೆದಿರುವ ಲೇಖನ.

ಇಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಬಿಡಿ ಬಿಡಿಯಾಗಿ ಓದಿಕೊಂಡಾಗಲೂ ಆಯಾ ಕಾಲಘಟ್ಟದ ವಿಚಾರಗಳ ವಿಶೇಷ ಮಹತ್ವವನ್ನು ತಿಳಿಯಬಹುದು. ಅಂತೆಯೇ ಎಲ್ಲವನ್ನೂ ಓದುವಾಗಲೂ ಒಂದಕ್ಕೊಂದು ಮುಂದುವರೆದ ಕೊಂಡಿಯಾಗಿ ನಿಂತು ನಮ್ಮನ್ನು ಚಕಿತಗೊಳಿಸುತ್ತವೆ. ಕಛೇರಿ ಕಾರ್ ಬಾಹುಳ್ಯದ ನಡುವೆಯೂ ಲೇಖನ ವ್ಯವಸಾಯವನ್ನು ಮುಂದುವರೆಸಿಕೊಂಡು ಬಂದಿರುವ ಮನು ಬಳಿಗಾರ್ ಅವರ ಕ್ರಿಯಾಶೀಲತೆ ನಿಜಕ್ಕೂ ಮೆಚ್ಚುವಂಥದ್ದು.

## ಏಕಾಂತ ಮತ್ತು ಏಕಾಗ್ರತೆ.... ಕೃತಿಯ ವಿಶ್ಲೇಷಣೆ

ಡಾ. ಶ್ವೇತಾ

ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಮನು ಬಳಿಗಾರ್ ಅವರು ಸೃಜನಶೀಲ ಬರಹಗಾರರು. ಒಳ್ಳೆಯ ಆಡಳಿತಗಾರರು. ಸಜ್ಜನ ಮತ್ತು ಸಾಮಾಜಿಕ ಮೌಲ್ಯಗಳ ಜೊತೆ ತನ್ನನ್ನೂ ತೊಡಗಿಸಿಕೊಂಡು ಹೊಸದನ್ನು ಏನಾದರೂ ಕಟ್ಟಿಕೊಡಬೇಕು ಎಂಬ ತವಕದಿಂದಲೇ ಬದುಕುತ್ತಿರುವ

ಧೀಮಂತ ವ್ಯಕ್ತಿಯಾಗಿ ನಮ್ಮ ಜೊತೆ ಇದ್ದಾರೆ. ಇವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡು ವಿವಿಧ ಆಯಾಮಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಅವರ ಹೆಸರು ಜಾಗತಿಕ ಮಟ್ಟದಲ್ಲಿ ಪ್ರಸಿದ್ಧಿಯಾಯಿತು. ಹಾಗಾಗಿ ಇಂತಹ ಸಂದರ್ಭದಲ್ಲಿ ಅವರ "ಏಕಾಂತ ಮತ್ತು ಏಕಾಗ್ರತೆ" ಕೃತಿಯನ್ನು ಕುರಿತು ವಿಶ್ಲೇಷಣೆ ಮಾಡುತ್ತಿರುವುದು ತುಂಬಾ ಅರ್ಥಪೂರ್ಣವಾಗಿದೆ.

ಮೂಲತಃ ಈ ಕೃತಿ ೧೬ ಲಲಿತ ಪ್ರಬಂಧಗಳ ಗುಚ್ಛವಾಗಿದೆ. ಇದು ಸಾಹಿತ್ಯಾಸಕ್ತ ಓದುಗರಿಗೆ ಒಂದೊಂದು ವಿಷಯಗಳನ್ನು ಸೂಕ್ಷ್ಮವಾಗಿ ಪರಿಚಯ ಮಾಡುವ ಕೆಲಸವನ್ನು ಮಾಡಿರುತ್ತದೆ. ಸಮಾಜ, ಸಂಸ್ಕೃತಿ ಮತ್ತು ವ್ಯಕ್ತಿಗಳನ್ನು ಕೇಂದ್ರೀಕರಿಸಿ ಲಲಿತ ಪ್ರಬಂಧಗಳು ರಚಿತವಾಗಿವೆ. ಇಲ್ಲಿ ಲೇಖನಗಳು ಲಲಿತ ಪ್ರಬಂಧದ ಲಕ್ಷಣಗಳನ್ನು ಹೊಂದಿದ್ದರೂ ಅದರಾಚೆಗೆ ವೈಚಾರಿಕತೆ ಮತ್ತು ವಿಮರ್ಶಾತ್ಮಕ ಗುಣಗಳನ್ನು ಹೊಂದಿರುತ್ತವೆ. ಮಾನವನ ದಿನನಿತ್ಯದ ಬದುಕಿನ ಸಂದರ್ಭದಲ್ಲಿ ಎದುರಾಗುವ ಮತ್ತು ಕಾಡುವ ಹಾಗೂ ಲೆಕ್ಕಕ್ಕೆ ಪರಿಗಣಿಸದೆ ಬಿಟ್ಟು ಬಿಡುವಂತಹ ವಿಷಯಗಳನ್ನು ವಸ್ತುವನ್ನಾಗಿ ಮಾಡಿಕೊಂಡು ಅದಕ್ಕೊಂದು ಸ್ಥಾನವನ್ನು ಕೊಟ್ಟು ಜೀವ ತುಂಬಿದ್ದಾರೆ. ಇಲ್ಲಿನ ಪ್ರತಿಯೊಂದು ಲಲಿತ ಪ್ರಬಂಧಗಳನ್ನು ಓದುಗರು ವಸ್ತುವನ್ನು ಉದ್ದೇಶಿಸಿ ಆಲೋಚನೆ ಮೂಡುವಂತೆ ಮಾಡಿರುತ್ತದೆ.

ಮನು ಬಳಿಗಾರ್ ಅವರ ಸೋಪಜ್ಞತೆ, ನಿಷ್ಕಲ್ಮಷವಾದ ಪ್ರೀತಿ ಮತ್ತು ಸಾಂಸ್ಕೃತಿಕ ಜವಾಬ್ದಾರಿಗಳು ಇಲ್ಲಿನ ಲಲಿತ ಪ್ರಬಂಧಗಳಲ್ಲಿ ದಾಖಲೆಯಾಗಿರುತ್ತವೆ. ಅವರಿಗೆ ಚಾರಿತ್ರಿಕ ಪ್ರಜ್ಞೆ ಇರುವುದರಿಂದಲೇ ಕಿತ್ತೂರು ಚೆನ್ನಮ್ಮ, ಕನಕದಾಸ, ವಿಶ್ವೇಶ್ವರಯ್ಯ ಹಾಗೂ ಮಹಾದೇವ ಮೈಲಾರರ ವಿಷಯವನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದ್ದಾರೆ. ಐತಿಹಾಸಿಕವಾಗಿ ಮತ್ತು ಚಾರಿತ್ರಿಕವಾಗಿ ಹೆಸರು ಮಾಡಿದಂತಹ ಕಿತ್ತೂರು ರಾಣಿ ಚೆನ್ನಮ್ಮನವರ ಸಾಧನೆ ಮತ್ತು ಸಿದ್ಧಿಯನ್ನು ಪರಿಚಯಿಸಿದ್ದಾರೆ. ಹೋರಾಟದಲ್ಲಿ ಮಹಿಳೆಯರು ಪಾಲ್ಗೊಳ್ಳಲು ಸಾಧ್ಯವಾಗದೇ ಇರುವ ಸಂದರ್ಭದಲ್ಲಿ ಕಿತ್ತೂರು ಚೆನ್ನಮ್ಮ ಬ್ರಿಟೀಷರ ವಿರುದ್ಧ ಹೋರಾಟ ಮಾಡಿ ಪ್ರಸಿದ್ಧಿ ಹೊಂದಿದ ಅಂಶಗಳನ್ನು ಲೇಖಕರು ಇಲ್ಲಿ ಹೊರಹಾಕುತ್ತಾರೆ. ಹಾಗಾಗಿ ಕಿತ್ತೂರು ಚೆನ್ನಮ್ಮ ಮಹಾಪ್ರಬಂಧ ನಮ್ಮ ಮನಸ್ಸಿನಲ್ಲಿ ಉಳಿದುಕೊಳ್ಳುತ್ತದೆ.

ಅದೇ ರೀತಿ ವಿಶ್ವೇಶ್ವರಯ್ಯ ಅವರು ಭಾರತಕ್ಕೆ ಕೊಟ್ಟ ಕೊಡುಗೆ ಮತ್ತು ಅವರ ಕಾರ್ಯ ವೈಖರಿಗಳು, ಆಡಳಿತ ಪ್ರಜ್ಞೆ ತಾಂತ್ರಿಕ ಜಾಣ್ಮೆಯನ್ನು ನಮಗೆ ತಿಳಿಸಿಕೊಟ್ಟಿದ್ದಾರೆ. ವಿಶ್ವೇಶ್ವರಯ್ಯ ಅವರು ಅಂದಿನ ಕಾಲದಲ್ಲಿ ಹೇಗೆ ಜನಪರ ಕಾರ್ಯಕ್ರಮಗಳನ್ನು ಮಾಡಿದರು ಮತ್ತು ಸಮುದಾಯಗಳ ಕಲ್ಯಾಣಕ್ಕೆ ಹೇಗೆ ಅವರು ವೈಜ್ಞಾನಿಕವಾಗಿ ದುಡಿದು ಖ್ಯಾತಿ ಪಡೆದುಕೊಂಡರು ಎನ್ನುವುದನ್ನು ಮನು ಬಳಿಗಾರ್‌ರವರು ತಿಳಿಸಿರುತ್ತಾರೆ. ಹಾಗೆಯೇ ಮಹಾದೇವ ಮೈಲಾರರವರು ಹೋರಾಟದಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದರು ಮತ್ತು ಅವರ ಕಾರ್ಯತಂತ್ರಗಳನ್ನು ಸೂಕ್ಷ್ಮವಾಗಿ ಪರಿಚಯಿಸಿರುತ್ತಾರೆ. ಹೀಗೆ ಇನ್ನು

ಹತ್ತು ಹಲವು ವ್ಯಕ್ತಿಗಳ ಸಾಧನೆ ಮತ್ತು ಜನಪರ ಕಲ್ಯಾಣಾತ್ಮಕ ಕಾರ್ಯಕ್ರಮಗಳನ್ನು ಲೇಖಕರು ತಮ್ಮ ಲಘುಪ್ರಬಂಧಗಳ ಮುಖಾಂತರ ಪರಿಚಯಿಸುತ್ತಾರೆ.

ಮನು ಬಳಿಗಾರ್ ಅವರಿಗೆ ಸಾಂಸ್ಕೃತಿಕವಾಗಿ ತುಂಬಾ ಜವಾಬ್ದಾರಿ ಇದೆ. ಅದರಲ್ಲೂ ವಿಶೇಷವಾಗಿ ಸಂಸ್ಕೃತಿಯನ್ನು ಕುರಿತು ಅದರ ತಾತ್ವಿಕತೆಯ ಬಗ್ಗೆ ಚಿಂತನೆ ಮಾಡಿದ್ದಾರೆ. ಸಂಸ್ಕೃತಿಯ ಹುಟ್ಟು, ವಿಕಾಸ ಮತ್ತು ಅದರ ಚಲನೆಯಲ್ಲಿನ ಸೈದ್ಧಾಂತಿಕ ವಿಷಯಗಳನ್ನು ಪರಿಗಣಿಸಿ ಲಲಿತ ಪ್ರಬಂಧಗಳನ್ನು ಬರೆದಿರುತ್ತಾರೆ. ಸಂಸ್ಕೃತಿಯ ವಿಚಾರಗಳನ್ನು ಪರಿಚಯಿಸುವಾಗ ಭಾರತೀ ಮತ್ತು ಜಾಗತಿಕ ಮಟ್ಟದಲ್ಲಿನ ಸಾಹಿತ್ಯ ಮತ್ತು ಲೇಖಕರ ಮೊರೆ ಹೋಗುತ್ತಾರೆ. ಪ್ರಸಿದ್ಧ ಬರಹಗಾರರ ಚಿಂತನೆಗಳನ್ನು ಪ್ರಸ್ತಾಪ ಮಾಡುತ್ತಾ ತಮ್ಮದೇ ಆದ ಶೈಲಿಯಲ್ಲಿ ಸಂಸ್ಕೃತಿಯನ್ನು ವಿಶ್ಲೇಷಣೆ ಮಾಡಿರುತ್ತಾರೆ. ಈ ಲೇಖಕರಿಗೆ ಭಾರತೀಯ ಸಂಸ್ಕೃತಿಯಲ್ಲಿನ ಕೃಷಿಯ ಮೇಲೆ ತುಂಬಾ ಹಿಡಿತವಿದೆ. ಕೃಷಿಕೇಂದ್ರಿತವಾಗಿ ಸಂಸ್ಕೃತಿ ಭಾರತೀಯ ಸಮಾಜದಲ್ಲಿ ಬೆಳೆದು ಬಂದಿದೆ ಎನ್ನುವುದನ್ನು ಇವರು ಲಲಿತ ಪ್ರಬಂಧದಲ್ಲಿ ಪ್ರಸ್ತಾಪಮಾಡಿರುತ್ತಾರೆ. ಅಷ್ಟೇ ಅಲ್ಲದೆ ಸಂಸ್ಕೃತಿಯಲ್ಲಿನ ಜಿಜ್ಞಾಸೆ ಮತ್ತು ಸಂಸ್ಕಾರಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಅನೇಕ ಸಾಹಿತಿಗಳ ಹೇಳಿಕೆಗಳನ್ನು ಪ್ರಸ್ತಾಪ ಮಾಡುತ್ತಾ ಸಂಸ್ಕೃತಿಯನ್ನು ಚರ್ಚೆ ಮಾಡಿರುತ್ತಾರೆ. ಹಾಗೆಯೇ ಲೇಖಕರು ಮುಂದುವರೆದು "ಏಕಾಂತ ಮತ್ತು ಏಕಾಗ್ರತೆ" ಯಲ್ಲಿ ಸೂಕ್ಷ್ಮಾತಿಸೂಕ್ಷ್ಮ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತಾರೆ. ಈ ಪ್ರಬಂಧವು ಅತಿಮುಖ್ಯವಾದ ಪ್ರಬಂಧವಾಗಿದೆ. ಈ ಕೃತಿಗೆ ಇದೇ ಹೆಸರನ್ನು ಇಡಲಾಗಿದೆ. ಇದು ಪ್ರಧಾನವಾಗಿ ಮನುಷ್ಯನ ಮಾನಸಿಕ ಸ್ಥಿತಿಯನ್ನು ಕುರಿತು ಚಿಂತನೆ ಮಾಡುತ್ತದೆ.

ದೇಶ-ವಿದೇಶದಲ್ಲಿನ ಪ್ರಸಿದ್ಧ ವ್ಯಕ್ತಿಗಳ ಆಲೋಚನೆಗಳನ್ನು ಕೇಂದ್ರವಾಗಿಟ್ಟುಕೊಂಡು ಏಕಾಂತ ಮತ್ತು ಏಕಾಗ್ರತೆ ಕೃತಿಯಲ್ಲಿ ಬರೆದಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗಳಲ್ಲಿ ಏಕಾಂತ ಮತ್ತು ಏಕಾಗ್ರತೆಗಳು ಸಮ್ಮಿಲನಗೊಂಡು ಕಾರ್ಯಸಿದ್ಧಿ ಪಡೆಯುವುದು ತುಂಬಾ ಅಪರೂಪ. ಒಂದು ವೇಳೆ ಏಕಾಂತ ಮತ್ತು ಏಕಾಗ್ರತೆಗಳು ಪುರುಷ ಮತ್ತು ಮಹಿಳೆ ಯಾರೇ ಇರಲಿ ಅವರಲ್ಲಿ ಕಾರ್ಯಸಿದ್ಧಿಯಾದರೆ ಅವರು ಬಹುದೊಡ್ಡ ವಿದ್ವಾಂಸರಾಗುವುದರಲ್ಲಿ ಯಾವುದೇ ಸಂಶಯ ಇರುವುದಿಲ್ಲ. ಹಾಗಾಗಿ ಏಕಾಂತ ಮತ್ತು ಏಕಾಗ್ರತೆಗಳು ಎಲ್ಲರಲ್ಲಿಯೂ ಸಿದ್ಧಿಯಾಗುವುದಿಲ್ಲ. ಅವುಗಳು ಸಿದ್ಧಿಯಾಗಬೇಕಾದರೆ ವ್ಯಕ್ತಿಯು ದೊಡ್ಡ ತ್ಯಾಗಿ, ಸಹನಮಯಿ ಆಗಿರಬೇಕಾಗುತ್ತದೆ. ಮಾನವನ ಮನಸ್ಸು ತುಂಬಾ ಚಂಚಲ. ಚಂಚಲತೆಯೊಳಗೆ ಈ ಏಕಾಂತ ಮತ್ತು ಏಕಾಗ್ರತೆಗಳು ಸಾಕಷ್ಟು ಬಾರಿ ಸಂಘರ್ಷಕ್ಕೊಳಗಾಗುತ್ತವೆ. ಈ ಕಾರಣಕ್ಕಾಗಿಯೇ ತುಂಬಾ ಸವಾಲಿನ ವಿಷಯವಾಗಿ ಇದು ಪರಿಣಮಿಸುತ್ತದೆ. ಆದ್ದರಿಂದಲೇ ಲೇಖಕರು ಲಲಿತಪ್ರಬಂಧದ ಮುಖಾಂತರ ಏಕಾಂತ ಮತ್ತು ಏಕಾಗ್ರತೆಯನ್ನು ವೈವಿಧ್ಯಮಯವಾಗಿ ಓದುಗರಿಗೆ ತಿಳಿಸಿಕೊಟ್ಟಿದ್ದಾರೆ.

ಅದೇ ರೀತಿ 'ಸಾಮಾಜಿಕ ಹೊಣೆ' ಎನ್ನುವ ಲಲಿತ ಪ್ರಬಂಧದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸಾಮಾಜಿಕವಾಗಿ ಹೇಗೆ ಬದುಕಬೇಕು ಎನ್ನುವುದರ ಬಗ್ಗೆ ತಿಳಿಸಿರುತ್ತಾರೆ. ಸಮಾಜ-ಸಂಸ್ಕೃತಿಗಳು ಮಾನವನ

ಜೀವನದಲ್ಲಿ ಹೇಗೆ ಪ್ರಾಮುಖ್ಯತೆ ಪಡೆಯುತ್ತವೆ ಎನ್ನುವ ಅಂಶವನ್ನು ತಿಳಿಸಿರುತ್ತಾರೆ. ಪ್ರತಿಯೊಬ್ಬ ವ್ಯಕ್ತಿಗೂ ಸಾಮಾಜಿಕ ಹೊಣೆ ಇರಬೇಕು ಎನ್ನುವ ಸತ್ಯವನ್ನು ಸೂಕ್ಷ್ಮವಾಗಿ ಈ ಪ್ರಬಂಧದಲ್ಲಿ ಪರಿಚಯಿಸಿರುತ್ತಾರೆ.

ರಾಷ್ಟ್ರಾಭಿಮಾನಿಯಾದಂತಹ ಲೇಖಕರು ನಮ್ಮ ಭಾರತದ 'ರಾಷ್ಟ್ರಗೀತೆ'ಯನ್ನು ಕುರಿತು ವ್ಯಾಖ್ಯಾನಿಸುತ್ತಾರೆ. ಅದರಲ್ಲಿನ ದೇಶ-ಭಾಷೆ-ಸಂಸ್ಕೃತಿ-ನಾಡು-ನುಡಿಗಳನ್ನು ಕುರಿತು ಚರ್ಚೆ ಮಾಡಿರುತ್ತಾರೆ. ಅದರಲ್ಲೂ ವಿಶೇಷವಾಗಿ ದ್ರಾವಿಡ ಮತ್ತು ದ್ರಾವಿಡರನ್ನು ಕುರಿತು ಮುಖ್ಯವಾಗಿ ಚರ್ಚೆ ಮಾಡಿರುತ್ತಾರೆ. ಹೀಗೆ ಹಲವು ವಿಷಯಗಳನ್ನು ಪ್ರಧಾನ ವಾಹಿನಿಯಲ್ಲಿಟ್ಟುಕೊಂಡು ಪ್ರಬಂಧ ರಚಿಸಿರುತ್ತಾರೆ. ಪ್ರತಿಯೊಂದು ಪ್ರಬಂಧಗಳು ಓದುಗರನ್ನು ಮತ್ತು ಅವರ ಮನಸ್ಸುಗಳನ್ನು ಬೇಧಿಸಿ ಹೊಸದಾದ ಆಲೋಚನಾ ಕ್ರಮವನ್ನು ಹುಟ್ಟಿಹಾಕಿವೆ. ಈ ಹಿನ್ನೆಲೆಯಲ್ಲಿ ಮನು ಬಳಿಗಾರ್‌ರವರು ಬರೆದ ಈ ಕೃತಿಯು ಪ್ರಸ್ತುತ ಸಮಾಜದಲ್ಲಿ ಒಂದು ಒಳ್ಳೆಯ ಸಂದೇಶ ನೀಡುತ್ತದೆ ಎಂದು ಹೇಳಬಹುದಾಗಿದೆ.

## ಏಕಾಂತ ಮತ್ತು ಏಕಾಗ್ರತೆ

ಶ್ವೇತಾ ಎನ್.

ಮನುಷ್ಯ ಮೂಲತಃ ಸಂಘಜೀವಿಯಾಗಿದ್ದು, ಮತ್ತೊಬ್ಬರೊಂದಿಗೆ ಸಂವಹನ ನಡೆಸದೆ, ಭಾವಾಭಿವ್ಯಕ್ತಗೊಳಿಸದೆ ಇರಲಾರನು. ತನ್ನ ಒಂಟಿತನವನ್ನು ಹೋಗಲಾಡಿಸಲು ಮನೋರಂಜನೆಯನ್ನು ಆರಂಭಿಸಿ ಅದರ ಮೂಲಕ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಿದನು. ಮನುಷ್ಯ ಜಾಗತೀಕರಣಗೊಂಡಷ್ಟು ಸಂಬಂಧಗಳು ಸಡಿಲಗೊಳ್ಳುತ್ತಾ ಹೋದವು. ಉತ್ತಮ ಜೀವನ ಸಾಗಿಸಲು ಹೊರ ಊರು, ಹೊರ ದೇಶಗಳಿಗೆ ತಾನು ಹುಟ್ಟಿದ ಸ್ಥಳವನ್ನು, ತನ್ನ ಕುಟುಂಬವನ್ನು ತೊರೆದು ವಲಸೆ ಹೊರಟರು. ಇದರಿಂದಾಗಿ ಅವಿಭಕ್ತ ಕುಟುಂಬಗಳು, ವಿಭಕ್ತ ಕುಟುಂಬಗಳಾಗಿ ಮಾರ್ಪಟ್ಟವು. ಹೊಸ ಪ್ರದೇಶ, ಸಂಸ್ಕೃತಿ, ಸಮಾಜ, ಆಚರಣೆಗಳು ಸಮೂಹವನ್ನು ಆಕರ್ಷಿಸಿದವು. ಇದರಿಂದ ಮನುಷ್ಯ ತನ್ನ ವೈಯಕ್ತಿಕ ಹಿತಾಸಕ್ತಿಗೆ ಹೆಚ್ಚು ಒತ್ತು ನೀಡಲಾರಂಭಿಸಿ ನಾಗರೀಕತೆಯ ಸೋಗಿನಲ್ಲಿ, ಅಸ್ತಿತ್ವವನ್ನು ರೂಪಿಸುವ ಭರದಲ್ಲಿ ಮಾನಸಿಕ ಒತ್ತಡಕ್ಕೆ ಸಿಲುಕುತ್ತಾ ಸಾವಿನ ಕಡೆ ಮುಖಮಾಡುತ್ತಿದ್ದಾನೆ.

ಹೀಗೆ ತನ್ನನ್ನು ತಾನು ನಿಯಂತ್ರಿಸಿ, ನಿಭಾಯಿಸಿಕೊಳ್ಳುವಲ್ಲಿ ಆಧ್ಯಾತ್ಮಿಕತೆ, ಮನಃಶಾಸ್ತ್ರಜ್ಞರೊಂದಿಗೆ ಮುಕ್ತಚರ್ಚೆ, ಏಕಾಂತ ಮತ್ತು ಏಕಾಗ್ರತೆ ಸಾಧನೆ, ನಗುವಿನ ತರಬೇತಿ (Laughing Class) ಮಾರ್ಗವನ್ನು ಹುಡುಕಿಕೊಂಡನು. ಅದರಲ್ಲಿ ಪ್ರಮುಖವಾಗಿ ಏಕಾಂತ ಮತ್ತು ಏಕಾಗ್ರತೆ ಸಾಧನೆ ಮುಖ್ಯವಾದದ್ದು.

ಡಾ. ಯು.ಆರ್.ಅನಂತಮೂರ್ತಿಯವರು ಒಂದೆಡೆ ಮಾತನಾಡುತ್ತಾ "ಒಳ್ಳೆಯ ಬರಹಕ್ಕೆ ಏಕಾಗ್ರತೆ ಬೇಕು, ಈ ಏಕಾಗ್ರತೆ ಏಕಾಂತದಲ್ಲಿ ದೊರಕುವಂತೆ ಬೇರೆಡೆ ಸಾಧ್ಯವಾಗಲಾರದೆಂದು ತಿಳಿಸಿದ್ದಾರೆ". ಈ ಮಾತುಗಳು ಪ್ರಸ್ತುತವೂ ಹೌದು. ಎಷ್ಟೋ ಜನ ಸಾಹಿತ್ಯ ರಚನಾಕಾರರಿಗೆ ಏಕಾಂತವಿರದ ಹೊರತು

ಏಕಾಗ್ರತೆ ಸಾಧ್ಯವಾಗದು, ಏಕಾಗ್ರತೆ ಇರದ ಹೊರತು ಸಾಹಿತ್ಯ ರಚನೆಯಾಗದು. ದೇವನೂರರು ತಮ್ಮ ಕುಟುಂಬ ಸದಸ್ಯರನ್ನು ಹೊರಕಳಿಸಿ ಒಬ್ಬರೆ ಕೋಣೆಯಲ್ಲಿ ಏಕಾಂಗಿಯಾಗಿ ಕೂತು ಏಕಾಗ್ರತೆಯಿಂದ ಸಾಹಿತ್ಯ ಕೃತಿ ರಚಿಸುತ್ತಿದ್ದರು ಎಂಬ ಮಾತು ಇಲ್ಲಿ ನೆನಪಾಗುತ್ತದೆ.

ಪ್ರತಿಯೊಬ್ಬ ಸಾಹಿತಿಗೂ ತನ್ನದೇ ಆದ ಸಾಹಿತ್ಯ ರಚನಾಕ್ರಮವಿರುತ್ತದೆ. ಕೆಲವರು ಸಂತೆಯಲ್ಲಿ ಬೇಕಾದರೂ ಏಕಾಗ್ರತೆಯಿಂದ ಸಾಹಿತ್ಯ ರಚಿಸಬಲ್ಲರು ಮತ್ತೂ ಕೆಲವರು ಏಕಾಂತವಿರದ ಹೊರತು ಒಂದು ಅಕ್ಷರವನ್ನೂ ರಚಿಸಲಾರರು. ಮನುಬಳಿಗಾರರು ಹೇಳುವಂತೆ "ವೇದ, ಪುರಾಣಗಳ ಕಾಲದಲ್ಲಂತೂ ಇದರ ಮಹತ್ವ ಉತ್ತುಂಗಕ್ಕೇರಿದ್ದನ್ನು ಕಾಣಬಹುದಾಗಿದೆ. ದೇವ ಸಾಕ್ಷಾತ್ಕಾರಕ್ಕಾಗಿ ಏಕಾಗ್ರತೆ ಅವಶ್ಯವೆಂದು ಮನಗಂಡ ಋಷಿಮುನಿಗಳು ಪರಿಪೂರ್ಣ ಏಕಾಗ್ರತೆ ಸಾಧಿಸಲು ನಿರ್ಜನ ಪ್ರದೇಶಕ್ಕೆ ತೆರಳಿ ತಪಸ್ಸು ಮಾಡುತ್ತಿದ್ದರು. ಯಾವುದೇ ಒಂದು ಮಹಾನ್ ಸಾಧನೆಯಾಗಬೇಕಾದರೆ ತಪಸ್ಸು ಅವಶ್ಯವಾಗಿತ್ತೆನ್ನಬಹುದು." ಈ ತಪಸ್ಸು ಅನೇಕ ಸಲ ಉಗ್ರವಾಗಿರುತ್ತಿದ್ದುದ್ದನ್ನು ನಾವು ಅರಿತಿದ್ದೇವೆ. "ಒಟ್ಟಿನಲ್ಲಿ ತಪಸ್ಸೆಂದರೆ ಏಕಾಂತ ಹಾಗೂ ಏಕಾಗ್ರತೆಯ ಸಮ್ಮಿಳಿತ ಎಂದು ವ್ಯಾಖ್ಯಾನಿಸಬಹುದು".

ಕಳ್ಳನಾಗಿದ್ದ ವಾಲ್ಮೀಕಿ ಜಗತ್ತಿನಲ್ಲಿ ತಲೆ ಎತ್ತಿ ನಿಲ್ಲುವಂತಹ ಒಂದು ಮಹಾ ಪುರಾಣವನ್ನು ರಚಿಸಲು ಕಾರಣ ಆತನ ಏಕಾಂತ ಮತ್ತು ಏಕಾಗ್ರತೆ ಎಂದರೆ ತಪ್ಪಾಗಲಾರದು. ಕುವೆಂಪುರವರ 'ಶೂದ್ರತಪಸ್ವಿಯಲ್ಲಿ ಶೂದ್ರನಾದ ಶಂಬೂಕನು ಅತ್ಯಂತ ಏಕಾಗ್ರತೆಯಿಂದ ತಪಸ್ಸನ್ನಾಚರಿಸುತ್ತಾನೆ. ಏಕಾಂತ ಮತ್ತು ಏಕಾಗ್ರತೆ ಸಿದ್ಧಿಸಿದರೆ ಕೇವಲ ಬ್ರಾಹ್ಮಣರು ಮಾತ್ರರಲ್ಲ ಶೂದ್ರನೊಬ್ಬನು ಸಹ ತಪಸ್ಸನ್ನು ಆಚರಿಸಿ ತನ್ನ ಭಕ್ತಿ, ನಿಷ್ಠೆಯನ್ನು ವ್ಯಕ್ತಪಡಿಸಲು ಸಾಧ್ಯ ಎಂಬ ಆಶಯ ಇಲ್ಲಿದೆ. ಶಂಬೂಕ ಮಾತ್ರವಲ್ಲದೆ, ಏಕಲವ್ಯನೂ ಸಹ ಇದೇ ವರ್ಗದಲ್ಲಿಯೇ ಸೇರುತ್ತಾನೆ. ಜಾತಿ ಹಿನ್ನೆಲೆಯಿಂದ ದ್ರೋಣಾಚಾರ್ಯರ ಬಳಿ ವಿದ್ಯೆ ಕಲಿಯಲು ಅನರ್ಹನೆನಿಸಿದ ಏಕಲವ್ಯ ಗುರುವಿನ ಮೂರ್ತಿಯೊಂದನ್ನು ನಿರ್ಮಿಸಿ ಛಲ ಮತ್ತು ಏಕಾಗ್ರತೆಯಿಂದ ತಾನೇ ಸ್ವತಃ ವಿದ್ಯಾಕಲಿಕೆಗೆ ಮುಂದಾಗುತ್ತಾನೆ. ಇದು ಕೇವಲ ಏಕಲವ್ಯನ ಏಕಾಗ್ರತೆಯನ್ನು ಮಾತ್ರ ಸೂಚಿಸದೆ, "ಬೇಡರಿಗೆ ಬಿಲ್ವಿದ್ಯೆ ಮೈಗಂಟಿದ ಕವಚವಿದ್ದಂತೆ" ಎಂಬ ಕುವೆಂಪುರವರ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಏಕಾಂತ ಮತ್ತು ಏಕಾಗ್ರತೆ ಎಂಬುದು ಎಲ್ಲಾ ಜಾತಿ, ಧರ್ಮ, ವರ್ಗ, ವರ್ಣ, ದೇಶ, ಕಾಲಗಳನ್ನು ಮೀರಿದ್ದು ಎಂಬ ಅಂಶವನ್ನು ಇಲ್ಲಿ ಕಾಣಬಹುದಾಗಿದೆ.

ಕೆಲವೊಮ್ಮೆ ವ್ಯಕ್ತಿಯೋರ್ವ ಏಕಾಂಗಿಯಾದಷ್ಟು ಹಲವಾರು ಗಂಭೀರ ವಿಷಯಗಳು ಅವನ ಸ್ಮೃತಿಪಟಲದಲ್ಲಿ ಸುಳಿಯುತ್ತವೆ. ಇದಕ್ಕೆ ಉದಾಹರಣೆಯೆಂದರೆ ಕುವೆಂಪು, ದೇವನೂರು ಮಹಾದೇವ, ಶ್ರೀರಂಗ ಮುಂತಾದವರು. ಅಷ್ಟೆ ಅಲ್ಲದೆ ತನ್ನ ಬಲ ಮತ್ತು ದೌರ್ಬಲ್ಯ ಎರಡನ್ನು ಅರಿಯುತ್ತಾನೆ ಹಾಗೂ ತನಗೆ ತಾನೇ ಸಮಯ ಕೊಟ್ಟಷ್ಟು ತನ್ನ ದೃಢಚಿತ್ತ ನಿರ್ಮಾಣಕ್ಕೆ ಸಹಾಯಕವಾಗುತ್ತದೆ. ಒಬ್ಬೊಂಟಿತನ ಸ್ವಾಸ್ಥ್ಯವನ್ನು ಹಾಳು ಮಾಡಿದರೆ, ಏಕಾಂಗಿತನ ಮನವನ್ನು ಹದ ಮಾಡುತ್ತದೆ.

"ಒಟ್ಟಿನಲ್ಲಿ (ಮನೋನಿಗ್ರಹ ಮಾಡಿ) ಏಕಾಗ್ರತೆಯನ್ನು ಸಾಧಿಸುವುದೆಂದರೆ ಮನುಷ್ಯ ತನ್ನನ್ನೇ ತಾನು ಗೆದ್ದಂತೆ ಎನ್ನುವುದು" ಎನ್ನುತ್ತಾ ಲೇಖಕರು ಇದಕ್ಕೆ ಪೂರಕವಾಗಿ ಕೆಲವು ಸಾಲುಗಳನ್ನು ನೀಡಿದ್ದಾರೆ.

**"ಒಂದೆಡೆ ಒಬ್ಬ ಯುದ್ಧದಲ್ಲಿ ಸಾವಿರ ಬಾರಿ ಸಾವಿರ ಜನರನ್ನು ಗೆಲ್ಲಬಹುದು, ಇನ್ನೊಂದೆಡೆ ಮತ್ತೊಬ್ಬ ತನ್ನನ್ನೇ ತಾನು ಜಯಿಸಬಹುದು"**

ಇದು ಬಳಿಗಾರರ ಏಕಾಂತ ಮತ್ತು ಏಕಾಗ್ರತೆಯ ಕುರಿತಾದ ಒಂದು ನೋಟ.

## ಸಂಸ್ಕೃತಿ ಮತ್ತು ಸಾಹಿತ್ಯ :

'ಸಂಸ್ಕೃತಿ' ಎಂದರೆ ಮೊದಲು ನಮ್ಮ ಯೋಚನೆಗೆ ಬರುವುದು ಆ ಪದದ ಉತ್ಪತ್ತಿ ಕುರಿತು. ಹಾಗೆಯೇ ಮನುಬಳಿಗಾರರು "ಭಾರತೀಯ ಸಂಸ್ಕೃತಿ" ಎಂಬ ಲೇಖನದ ಶೀರ್ಷಿಕೆಯಡಿ 'ಸಂಸ್ಕೃತಿ' ಪದದ ವ್ಯುತ್ಪತ್ತಿಯನ್ನು ಮಾತ್ರ ತಿಳಿಸದೆ ಅದರ ಒಳನೋಟಗಳನ್ನು ಸೂಚಿಸುತ್ತಾ 'ಸ್ಥಳೀಯ ಸಂಸ್ಕೃತಿ' ಮಾತ್ರವಲ್ಲದೆ 'ಪಾಶ್ಚಾತ್ಯ ಸಂಸ್ಕೃತಿ'ಯ ಕುರಿತು ಪ್ರಸ್ತಾಪಿಸಿದ್ದಾರೆ.

'ಸಂಸ್ಕೃತಿ' ಎಂಬುದು ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಸಂಬಂಧಿಸಿದ್ದು, "ಸಂಸ್ಕೃತಿ ಎಂದರೆ ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ" ಎಂಬ ಎಂ. ಎಂ. ಕಲಬುರ್ಗಿಯವರ ವ್ಯಾಖ್ಯಾನ ಇಲ್ಲಿ ಪ್ರಸ್ತುತವಾಗಿದೆ.

ಹರಪ್ಪ, ಮಹೆಂಜೋದಾರೊ, ಸಿಂಧೂ ನಾಗರೀಕತೆಯ ಮೂಲಕ ಆರಂಭವಾದ ಭಾರತೀಯ ಸಂಸ್ಕೃತಿ ಇಂದು ಪ್ರಪಂಚದಾದ್ಯಂತ ಒಂದು ಮುಖ್ಯ ಭೂಮಿಕೆಯಲ್ಲಿ ನಿಂತಿದೆ. ಪ್ರಪಂಚದಾದ್ಯಂತ ಕಂಡುಬರುವ ನೂರಾರು ಸಂಸ್ಕೃತಿಗಳು ಒಂದಾನೊಂದು ಕಾಲದಲ್ಲಿ ತೊಟ್ಟಿಲಲ್ಲಾಡುವ ಮಗುವೆ, ನಂತರ ಅದಕ್ಕೆ ಮಾನವನಿಂದ ಆಂತರಿಕ ಹಾಗೂ ಬಾಹ್ಯ ಪ್ರೇರಣೆ ದೊರೆತು ಬಲಿಷ್ಠ ವ್ಯಕ್ತಿತ್ವವಾಗಿ ಎದ್ದು ನಿಂತಿತು. ಈ ಹಿನ್ನೆಲೆಯಲ್ಲಿ ನಮ್ಮ ಹಿಂದಿನ ಮತ್ತು ಇಂದಿನ ಸಂಸ್ಕೃತಿಗೂ ಹಾಗೂ ಪಾಶ್ಚಾತ್ಯ ಸಂಸ್ಕೃತಿಗೂ ಅಜಗಜಾಂತರ ವ್ಯತ್ಯಾಸವಿದೆ. ಸಂಸ್ಕೃತಿಯೆಂದರೆ ಒಂದು ಕಾಲಘಟ್ಟದಲ್ಲಿನ ರೀತಿ-ರಿವಾಜು, ಆಚರಣೆ, ನಂಬಿಕೆ ಮುಂತಾದವುಗಳೇ ಆಗಿದ್ದವು. ಉದಾ: ಹಿಂದೆ ಇದ್ದ ಸತಿಪದ್ಧತಿ, ಜೋಹಾರ್ ಪದ್ಧತಿಗಳು ಆ ಸಂದರ್ಭ ಅಥವಾ ಕಾಲಘಟ್ಟದಲ್ಲಿ ಒಂದು ಪದ್ಧತಿಯಾಗಿ ನಡೆದುಕೊಂಡು ಬಂದು ಸಂಸ್ಕೃತಿಯಾಗಿ, ಆಚರಣೆಯ ಭಾಗವಾಗಿಯೇ ಬೆಳೆದಿದ್ದವು. ನಂತರದಲ್ಲಿ ಇದರಿಂದಾಗುವ ತೊಂದರೆ, ಮಾನಸಿಕ ಕ್ಷೋಭೆ, ಜೀವ ಹಿಂಸೆಯನ್ನರಿತು ಈ ಆಚರಣೆಯನ್ನು ರದ್ದುಗೊಳಿಸಲಾಯಿತು.

ಸಂಸ್ಕೃತಿಯನ್ನು ಕುರಿತು ಇನ್ನೂ ಆಳವಾಗಿ ನೋಡುವುದಾದರೆ 'ಮಹಾಭಾರತ'ವನ್ನು ಮೀರಿ ಇನ್ನಾವುದು ಕಾಣಸಿಗದು. ಇದರಲ್ಲಿ ಕಂಡುಬರುವ ಕರ್ಣ ಮತ್ತು ದುರ್ಯೋಧನನ ಸ್ನೇಹ ಚರಿತ್ರೆಯಲ್ಲಿ ಅಜರಾಮರವಾಗಿ ನಿಂತು ಮೇಲ್ಜಾತಿ ಮತ್ತು ಕೆಳಜಾತಿ ಎಂಬ ಜಾತಿವಾದವನ್ನು ಒಡೆದು ಒಂದೇ

ಸಂಸ್ಕೃತಿಯವರಂತೆ ಕಂಡುಬಂದರೂ ಆ ಸಂಸ್ಕೃತಿಯ ಆಳದಲ್ಲಿ ಇರುವ ಒಳಸುಳಿಯನ್ನು ಸೂಕ್ಷ್ಮವಾಗಿ ಕಾಣುವವರು ಮಾತ್ರ ಅರಿಯಬಲ್ಲರು.

ಏಕೆಂದರೆ ದುರ್ಯೋಧನನಿಗೆ ಹಲವಾರು ಜನ ಆಪ್ತರು, ಗುರುಗಳು, ಹಿತೈಷಿಗಳು ಇದ್ದರೂ ಕರ್ಣನಿಗೆ ಪಟ್ಟಕಟ್ಟುವ ಉದ್ದೇಶದ ಹಿಂದಿನ ಮರ್ಮ ಆಲೋಚಿಸಬೇಕಾದ ಸಂಗತಿಯೇ. ಅಷ್ಟೇ ಅಲ್ಲದೆ ಕರ್ಣ ಪಾಂಡವರ ಅಣ್ಣನೆಂದು ತಿಳಿದರೂ, ದುರ್ಯೋಧನ ಎಲ್ಲೂ ಅದರ ಪ್ರಸ್ತಾಪ ತೆಗೆಯುವುದಿಲ್ಲ. ಇದು ಸಹ ಸಂಸ್ಕೃತಿ ರಾಜಕಾರಣದ ಎಳೆಯೇ ಎಂದೆನಿಸುತ್ತದೆ.

'ಮಾಲಿಸೊವಸ್ಕಿ'ಯು - "ಸಂಸ್ಕೃತಿಯು ಪರಂಪರಾಗತವಾದ ವಿಚಾರ, ಮೌಲ್ಯ, ರೀತಿ-ನೀತಿ, ತಾಂತ್ರಿಕ ಆಯಾಮ, ಪರಿಕರ ಪದಾರ್ಥ ಇತ್ಯಾದಿಗಳನ್ನು ಹೊಂದಿರುತ್ತದೆ ಎನ್ನುತ್ತಾನೆ". ಅಂದರೆ "ಸಂಸ್ಕೃತಿಯು ಭೌತಿಕ ವಸ್ತುಗಳಂತೆಯೇ ಬೌದ್ಧಿಕ ಜ್ಞಾನ ಹಾಗೂ ನೈತಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನೂ ಒಳಗೊಳ್ಳುತ್ತದೆ ಎಂದರ್ಥವಾಗುತ್ತದೆ" ಎಂದು ಬಳಿಗಾರರು ವಿವರಿಸುತ್ತಾರೆ.

ಸಂಸ್ಕೃತಿಯು ಸದಾ ಚಲನಶೀಲ ಹಾಗೂ ಕ್ರಿಯಾಶೀಲವಾದುದು. ಬದಲಾವಣೆಗಳನ್ನು ಒಳಗೊಳ್ಳುತ್ತಾ ಬೆಳೆಯುತ್ತಲೇ ಇರುತ್ತದೆ. ರಾಚನಿಕವಾದದ ಮೂಲಕ ಸಂಸ್ಕೃತಿಯ ರಚನೆಯನ್ನು, ಆಚಾರ-ವಿಚಾರ, ನಂಬಿಕೆಯನ್ನು ಕಂಡವರು, ನಿರಚನವಾದದ ಮೂಲಕ ಸಂಸ್ಕೃತಿ ಆಳದ ತಳಮಳಗಳನ್ನರಿತು ರಾಚನಿಕ ಪರಿಕಲ್ಪನೆಯನ್ನು ಒಡೆದರು. **ಸಾಹಿತ್ಯ :**

ಸಾಹಿತ್ಯವನ್ನು ಕುರಿತು ನೋಡುವುದಾದರೆ ಸಂಸ್ಕೃತಿಯ ಪ್ರಭಾವವೂ ಸಾಹಿತ್ಯದ ಮೇಲಾಗಿದೆ. ವಸಾಹತುಶಾಹಿ ಮತ್ತು ಶಿಕ್ಷಣದ ಪ್ರವೇಶದಿಂದ ಹೊಸ ಯುಗವೊಂದು ಆರಂಭವಾಗಿ ಸಾಹಿತ್ಯ ರಚನೆಯಲ್ಲಿ ಅಂದಿನ ಕಾಲಘಟ್ಟಕ್ಕೆ ಹೊಸ ಪಥ ಸೃಷ್ಟಿಯಾಯಿತು. ವಸಾಹತುಶಾಹಿಯ 3 ಬಗೆಯ ಪ್ರಭಾವವನ್ನು ಕಾಣಬಹುದು. ಅದೆಂದರೆ: (ಅ) ಅನುಕರಣೆ (ಆ) ಅನುಸಂಧಾನ (ಇ) ಪುನಶ್ಚೇತನಾ ನೆಲೆ.

ಕೆಳಜಾತಿಯವರ ಕುರಿತು ಮಾತನಾಡುವುದು ಮೈಲಿಗೆ ಎಂದು ತಿಳಿದ ಸಂದರ್ಭದಲ್ಲಿ ಕುವೆಂಪುರವರು ಅದೇ ವರ್ಗವನ್ನು ಕೇಂದ್ರವಾಗಿರಿಸಿಕೊಂಡು ಸಾಹಿತ್ಯ ರಚನೆಗೆ ಮುಂದಾದರು.

ಉದಾ: ಕುವೆಂಪುರವರ ಶೂದ್ರತಪಸ್ವಿ, ಜಲಗಾರ, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮುಂತಾದವು.

"ಮಲೆಗಳಲ್ಲಿ ಮದುಮಗಳು" ಕಾದಂಬರಿಯಲ್ಲಿ ನಿಸರ್ಗದ ಅತ್ಯದ್ಭುತ ಪರಿಚಯದೊಂದಿಗೆ ಶೂದ್ರ ಅಥವಾ ಕೆಳವರ್ಗದವರ ಜೀವನ ವಿಧಾನವನ್ನು ಅನಾವರಣಗೊಳಿಸಿದ್ದಾರೆ. ನಾಯಿಗುತ್ತಿ, ಪೀಂಚಲು, ಮುಕುಂದಯ್ಯ, ಚಿನ್ನಮ್ಮ ಮುಂತಾದ ಪಾತ್ರಗಳ ಮೂಲಕ ಶೂದ್ರ ಸಂಸ್ಕೃತಿಯ ನೋವು-ನಲಿವು, ನಿಸರ್ಗದಲ್ಲಿ ನೆಮ್ಮದಿ ಕಾಣುವ ಬಗೆಯನ್ನು ನವಿರಾದ ಹಾಸ್ಯದ ಮೂಲಕ ಹೇಳಿದ್ದಾರೆ.

ಪ್ರಕೃತಿಯೊಂದಿಗಿನ ಅವರ ಸಂಬಂಧ ಅವಿನಾಭಾವವಾದುದು. ಮದುಮಗಳಾಗಿ ಸಿಂಗರಿಸಿಕೊಂಡು ಬಂದಿದ್ದ ಚಿನ್ನಮ್ಮನನ್ನು ಕುವೆಂಪು ದೇವತಾಸ್ವರೂಪಿಣಿಯಾಗಿಸಿ ಆನಂದಿಸಿದ್ದಾರೆ. ಇದೊಂದು ಹೊಸ ನೋಟವೆಂದರೆ ಸರಿಯೇ. ಹಾಗೆಯೇ "ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ" ಎಂದು ಹೇಳುತ್ತಾ ಸಮಾಜಮುಖಿಯಾಗಿ ಚಿಂತಿಸಿದ್ದಾರೆ.

"ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದು, ಅಸಂಸ್ಕೃತರಿಂದ ಪೋಷಿತವಾಗಿ, ಅವರ ನಡೆನುಡಿ, ಆಚಾರ, ವ್ಯವಹಾರ ಶೀಲಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ, ಗಾಂಭೀರ್ಯ, ನಯವಿನಯ, ಸಮಯ ಸಂಚಲನಗಳು ಒಂದಿನಿತೂ ಇರಲಿಲ್ಲ. ಆದ ಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡತಿಯಾದ ಕೂಡಲೆ ಭಯಾನಕವಾಗಿ ಹೆಡೆಯೆತ್ತಿ ನಿಂತುವು".

(ಕಾನೂರು ಹೆಗ್ಗಡಿತಿ -ಪುಟ:40,41)

"ಇಲ್ಲಿ ಕುವೆಂಪುರವರು ಶೂದ್ರ ಜನಾಂಗ ಹಾಗೂ ಶೂದ್ರ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ" ಎಂಬ ಬಳಿಗಾರರ ಮಾತು ಸತ್ಯ. ಆದರೆ ಅವಕಾಶ ಸಿಕ್ಕ ಕೂಡಲೆ ತಲೆ ಎತ್ತಿದ ದರ್ಪ, ಅಹಂಕಾರ ಎಷ್ಟೋ ಕಾಲದಿಂದ ತುಳಿಸಿಕೊಂಡುದರ ಪ್ರತಿರೂಪವಾಗಿದೆ. ಮಡುಗಟ್ಟಿದ್ದ ದುಃಖ ಒಮ್ಮೆಲೆ ವಿವಿಧ ಭಾವಾಭಿವ್ಯಕ್ತಿ ಹಾಗೂ ಕ್ರಿಯೆಗಳ ಮೂಲಕ ಹೊರಬಂದವಾಗಿವೆ. ಒತ್ತಡ ಹೆಚ್ಚಾದಾಗ ಭಾವನೆಗಳು ಹೊರಬಂದಂತೆಯೇ ಇಲ್ಲಿಯೂ ಸಹ ಅವಕಾಶ ದೊರೆತಾಗೊಮ್ಮೆ ಇಷ್ಟು ವರ್ಷ ಆಕೆ ಅನುಭವಿಸಿದ ಕಷ್ಟಕೋಟಲೆಗಳನ್ನು ಹೊರಹಾಕುವ ಪ್ರಯತ್ನವಾಗಿದೆ.

"ಭಾರತೀಯ ಸಂಸ್ಕೃತಿಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಮಾತೃಭೂಮಿಯ ಬಗ್ಗೆ ಇಲ್ಲಿಯ ಜನಾಂಗದ ತೀವ್ರ ಒಲವು" ಎಂದ ಲೇಖಕರ ಮಾತು ಗಮನಾರ್ಹವಾದುದು. ದೇಶಭಕ್ತಿ, ರಾಷ್ಟ್ರಪ್ರೇಮ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಕುರಿತು ಹಲವಾರು ಸಾಹಿತ್ಯ ರಚನೆಯಾಗಿವೆ. ಈ ಸಂದರ್ಭದಲ್ಲಿಯೇ ಕುವೆಂಪುರವರ ‘’ನೇಗಿಲಯೋಗಿ', ‘’ಪಕ್ಷಿಕಾಶಿ', ಯಂತ್ರರ್ಷಿ' ಎಂಬ ಪದಗಳು ಜನ್ಮತಾಳಿದವು.

"ಬರೀ ಸಾಹಿತ್ಯಕ್ಕಾಗಿ ಸಾಹಿತ್ಯ ಎಂಬ ಹಳೆಯ ಧೋರಣೆಯ ಬದಲಾಗಿ ಸಾಹಿತ್ಯದಿಂದ ಜನಜಾಗೃತಿ, ಭಾಷಾಭಿಮಾನವೃಧ್ಧಿ, ಆಧ್ಯಾತ್ಮಿಕ, ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯ ಬೆಳವಣಿಗೆ ಸಾಧ್ಯವೆಂದು ಕುವೆಂಪು ಬಲವಾಗಿ ನಂಬಿ ಸಾಹಿತ್ಯ ಸೃಷ್ಟಿಸಿದವರು. ಸಾಹಿತ್ಯ ತನ್ನ ಅಂತರಂಗದ ಅರಿವಿನಲ್ಲಿ ಹಾಗೂ ಬಹಿರಂಗದ ಕ್ರಿಯೆಯಲ್ಲಿ ಅಭಿವ್ಯಕ್ತಿಸತೊಡಗಿತು. ಇಡೀ ಸಾಹಿತ್ಯ ಇಂತಹ ಒಂದು ಹೊಸ ಹುಡುಕಾಟಕ್ಕೆ, ನವ ಚರಿತ್ರೆ ನಿರ್ಮಾಣಕ್ಕೆ ಅನನ್ಯ ಮಾನವೀಯ ನೆಲೆಗೆ ಒಂದು ಸುಭದ್ರ ಚೌಕಟ್ಟನ್ನು ಒದಗಿಸಿಕೊಡುತ್ತದೆ" ಎಂದು ಮನುಬಳಿಗಾರರು ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಇನ್ನಷ್ಟು ಆಳವಾಗಿ ಅರಿಯಲು ಅವಕಾಶ ಮಾಡಿಕೊಟ್ಟಿದ್ದಾರೆ. **ಅಂತರಂಗ ಶುದ್ಧಿ :**

ಇಂದು ಮನಸ್ಸು ದೇಹ, ಅಂತರಂಗ, ಬಹಿರಂಗ ಇವುಗಳ ನಡುವೆ ವ್ಯತ್ಯಾಸವೇ ಇಲ್ಲದಷ್ಟು ಅಥವಾ ವ್ಯತ್ಯಾಸವನ್ನೇ ಗುರುತಿಸಲಾರದಷ್ಟು ನಾವು ಬದಲಾಗಿದ್ದೇವೆ ಎಂಬುದು ವಿಷಾದದ ಸಂಗತಿಯೇ ಹೌದು. ITBT ಕಂಪನಿಗಳಲ್ಲಂತೂ ಹಗಲು-ರಾತ್ರಿಗಳ ಪರಿವೇ ಇಲ್ಲದೆ, ಉತ್ತಮ ಜೀವನ ಸಾಗಿಸಲು ತಮ್ಮನ್ನೇ ಮರೆತು ಭಾವನೆಗಳನ್ನು ಬಟನ್‌ಗಳನ್ನಾಗಿಸಿ ಕಾರ್ಯನಿರ್ವಹಿಸುತ್ತಾರೆ. ಇದು ದೇಹದ ವಿಷಯವಾದರೆ, ಇನ್ನು ಮನಸ್ಸಿನ ಕುರಿತು ಅರಿಯುವುದು ಕಷ್ಟವೆ.

"ನಾವು ಯಾವಾಗಲೂ ಒಳ್ಳೆಯ ವಿಚಾರ ಮಾಡಬೇಕು ಹಾಗೂ ದುಷ್ಟ ವಿಚಾರಗಳು, ಕೆಟ್ಟಗುಣಗಳು, ದುಶ್ಚಟಗಳು ನಮ್ಮ ಸಮೀಪವೂ ಸುಳಿಯದಂತೆ ನೋಡಿಕೊಳ್ಳಬೇಕು" ಎಂಬ ಬಳಿಗಾರರ ಮಾತು ಸತ್ಯವಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯೂ ತನಗೆ ತಾನು ಪ್ರಾಮಾಣಿಕನಾಗಿರಲು, ಒಳ್ಳೆಯ ವಿಚಾರಗಳನ್ನು ಮೈಗೂಡಿಸಿಕೊಳ್ಳಲು ಪ್ರಯತ್ನಿಸಿದರೆ ಸಾಕು. ಇಡೀ ಸಮಾಜ ಬದಲಾಗುವುದರಲ್ಲಿ ಸಂಶಯವಿಲ್ಲ.

"ಅಂತರಂಗ, ಬಹಿರಂಗ ಶುದ್ಧತೆಯ ಬಗ್ಗೆ ಸಪ್ತಸೂತ್ರಗಳನ್ನರಹುವ ಬಸವಣ್ಣನವರ ವಚನಕ್ಕಿಂತ ಮಿಗಿಲಾದ ಬೇರೆ ದೃಷ್ಟಾಂತ ಸಿಗಲಿಕ್ಕಿಲ್ಲವೆನಿಸುತ್ತದೆ" ಎಂಬ ಬಳಿಗಾರರ ಮಾತು ಒಪ್ಪುವಂತದ್ದು.

**"ಕಳಬೇಡ, ಕೊಲಬೇಡ**
**ಹುಸಿಯ ನುಡಿಯಲು ಬೇಡ**
**ಮುನಿಯಬೇಡ, ತನ್ನ ಬಣ್ಣಿಸಬೇಡ**
**ಇದಿರ ಹಳಿಯಲು ಬೇಡ**
**ಅನ್ಯರಿಗೆ ಅಸಹ್ಯ ಪಡಬೇಡ**
**ಇದೇ ಅಂತರಂಗ ಶುದ್ಧಿ**
**ಇದೇ ಬಹಿರಂಗ ಶುದ್ಧಿ.**
**ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ"**

ಇಲ್ಲಿ ವಿಶದಪಡಿಸಿದ್ದು, ಅಂತರಂಗ ಶುದ್ಧಿಯಿದ್ದರೆ ಸಾಕ್ಷಾತ್ ದೇವರನ್ನು ಒಲಿಸಿಕೊಳ್ಳಬಹುದೆಂಬ ಭಾವ, ಚಿಂತನೆ, ಆಲೋಚನೆ, ಕಲ್ಪನೆ ನಮ್ಮ ಅಂತರಂಗಕ್ಕೆ ಸಂಬಂಧಿಸಿದ ವಿಷಯವಾದರೆ, ನಮ್ಮ ನಡೆ-ನುಡಿ, ಆಚರಣೆ ಬಹಿರಂಗಕ್ಕೆ ಸಂಬಂಧಿಸಿದ ಅಂಶಗಳಾಗಿವೆ. ಇಂದಿನ ಕಾಲಘಟ್ಟದಲ್ಲಿ ಬೋಧನೆಗಳು ಹೆಚ್ಚಾಗುತ್ತಿವೆಯೇ ಹೊರತು ಪಾಲನೆಯಲ್ಲ. ಇದಕ್ಕೆ ನಮ್ಮ ಕಣ್ಣಮುಂದೆಯೇ ಸಾಕಷ್ಟು ಉದಾಹರಣೆಗಳು ದೊರಕುತ್ತವೆ. "ಜನಕಂಜಿ ನಡೆಯದೇ ಮನಕಂಜಿನಡೆ" ಎಂಬ ಗಾದೆಯೂ ಸಹ ಬದಲಾಗುತ್ತಿದ್ದು, ಮನಕಂಜಿ ನಡೆಯುವವರ ಸಂಖ್ಯೆಯೂ ಕಡಿಮೆಯಾಗಿದ್ದು, ಇದರಿಂದ ವಿಕಾರ, ವಿಕೃತ ಮನೋಭಾವ ಹೆಚ್ಚಾಗುತ್ತಿದೆ. ಮಾತು, ಪ್ರೀತಿ, ಸತ್ಯ, ನಿಷ್ಠೆ, ಮಮತೆ ಎಲ್ಲವನ್ನೂ ಮಾರಿಕೊಳ್ಳುವಷ್ಟು ನಮ್ಮ ಅಂತರಂಗ ಕಲುಷಿತಗೊಳ್ಳುತ್ತಿದೆ.

"ಕೆಟ್ಟದ್ದನ್ನು ಕೇಳಲಾರೆ, ಕೆಟ್ಟದ್ದನ್ನು ನೋಡಲಾರೆ, ಕೆಟ್ಟದ್ದನ್ನು ಆಡಲಾರೆ" ಎಂಬ ಗಾಂಧೀಜಿಯ ಮೂರು ಮಂಗಗಳ ಉಪದೇಶದೊಂದಿಗೆ "ಕೆಟ್ಟದ್ದನ್ನು ಮಾಡಲಾರೆ" ಎಂಬ ಅಂಶವನ್ನು ಮೈಗೂಡಿಸಿಕೊಂಡರೆ ಸಾಕು ಅಂತರಂಗ ಶುದ್ಧಿಯಾದಂತೆ. ಇದೇ "ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ".

**ಸಮಯಾವಕಾಶ ಮತ್ತು ಕಾಲ:**

'ಸಮಯಾವಕಾಶ'ದ ಕುರಿತು ಮನು ಬಳಿಗಾರರು ತಮ್ಮ ಲಲಿತ ಪ್ರಬಂಧಗಳಲ್ಲಿ ಗಂಭೀರವಾಗಿ ಚರ್ಚಿಸಿದ್ದಾರೆ. "A busy man always gets time". (ಕ್ರಿಯಾಶೀಲ ನಾದವನಿಗೆ ಸದಾ ಸಮಯಾವಕಾಶವಿರುತ್ತದೆ) ಎಂಬ ಅವರ ಮಾತುಗಳೇ ಸಾಕ್ಷಿಯಾಗಿದೆ. ಇದನ್ನು ಹಾಗೆಯೇ ಮುಂದುವರೆಸಿ "... and a lazy man never gets time" (ಸೋಮಾರಿಯಾದವನಿಗೆ ಸಮಯವೆಂದೂ ಸಿಗದು) ಎಂದು ಪೋಣಿಸಿದ್ದಾರೆ. "Time and tide wait for none"ಎಂಬ ಭಾವ ಇವರ ಮಾತಲ್ಲಿದೆ. ಕಾಲ ಯಾರಿಗೂ ಕಾಯುವುದಿಲ್ಲ. ಅದರ ಕಾರ್ಯ ನಿರ್ವಹಿಸುತ್ತಲೇ ಇರುತ್ತದೆ. ಅದಕ್ಕೆ ಹೊಂದಿಕೊಂಡು ನಮ್ಮ ಯಶಸ್ಸಿಗೆ ಅನುಕೂಲವಾಗುವಂತೆ ಬಳಸಿಕೊಳ್ಳಬೇಕು.

ಪ್ರತಿಯೊಬ್ಬ ವ್ಯಕ್ತಿಯೂ ಪ್ರತಿದಿನ 24 ಘಂಟೆ ಪಡೆಯುತ್ತಾನೆ. ನಂತರ ಅದನ್ನು ಸದುಪಯೋಗ ಮಾಡಿಕೊಳ್ಳುವುದರ ಮೇಲೆ ಆತನ ಸಂಪೂರ್ಣ ಜೀವನ ನಿರ್ಧಾರಿತವಾಗಿರುತ್ತದೆ.

'ಕಾಲ' ಎಂದಾಕ್ಷಣ ಕಾರಂತರು ನನಗೆ ಹೆಚ್ಚು ಆತ್ಮೀಯರೆನಿಸುತ್ತಾರೆ. ಅವರು ಕಾಲವನ್ನಿಡಿದು ಸಾಗಿದವರು. ತಮ್ಮ ಜೀವನದಲ್ಲಿ ಕಂಡ ವ್ಯಕ್ತಿತ್ವದ ಜಾಡನ್ನಿಡಿದು ಅವರ ಗತಕಾಲಕ್ಕೆ ಮರಳಿದವರು. ಉದಾಹರಣೆ ಎಂದರೆ "ಅಳಿದ ಮೇಲೆ" ಕಾದಂಬರಿ ರೈಲಿನಲ್ಲಿ ಪರಿಚಯವಾದ ಮುಂಬೈ ನಿವಾಸಿ 'ಯಶವಂತರಾಯ'ರ ವ್ಯಕ್ತಿತ್ವದ ಶೋಧವೇ ಈ ಕಾದಂಬರಿ. ಯಶವಂತರಾಯರು ಕಾಲಾಂತರಾದ ನಂತರ ಅವರ ಜೀವನವನ್ನು ಕಾರಂತರು ಅರಿಯುತ್ತಾರೆ. ಹೀಗೆ ಕಾಲ ಮುಂದಿನದ್ದನ್ನೇ ತಿಳಿಸಬೇಕೆಂದೇನಿಲ್ಲ. ಹಿಂದಿನ ಜೀವನದ ಜೊತೆಗೆ ಇಂದಿನ ಜೀವನವನ್ನು ಅರಿಯಲು ಸಹಾಯಕವಾಗಿದೆ.

ಹೀಗೆ ಮನುಬಳಿಗಾರರು 'ಸಮಾಯಾವಕಾಶ, ಕಾಲದ' ಕುರಿತು ಮಾತನಾಡುತ್ತಾ ಓದುಗರಿಗೆ ಕಾಲದ ಕುರಿತು ನೂರಾರು ಯೋಚನೆ ಪುಟಿದೇಳುವಂತೆ ಮಾಡಿದ್ದಾರೆ. ಸಮಯಾವಕಾಶವನ್ನು ಸದುಪಯೋಗ ಮಾಡಿಕೊಂಡು ಸಾಧಿಸಬೇಕೆಂಬುದು ಇವರ ಅಭಿಪ್ರಾಯವಾಗಿದೆ.

## ಮಾತು ಮತ್ತು ಪ್ರಜ್ಞೆ:

ಲೇಖಕರ ಮಾತುಗಳು ಒಂದು ಪರಿಕಲ್ಪನೆಯಿಂದ ಮತ್ತೊಂದು ಪರಿಕಲ್ಪನೆಯೆಡೆಗೆ ಸಂಬಂಧ ಹೊಂದಿರುವುದನ್ನು ಕಾಣಬಹುದಾಗಿದೆ. ಇವರು 'ಮಾತಿನ' ಬಗ್ಗೆ ಕುರಿತು ಮಾತನಾಡುತ್ತಾ, ಸಂಬಂಧಗಳಲ್ಲಿ ಇರಬೇಕಾದ ಪ್ರಜ್ಞೆಯನ್ನು ತಿಳಿಸುತ್ತಾರೆ.

"ಮಾತು ಆಡಿದರೆ ಹೋಯಿತು, ಮುತ್ತು ಹೊಡೆದರೆ ಹೋಯಿತು", "ಮಾತು ಬೆಳ್ಳಿ, ಮೌನ ಬಂಗಾರ" ಎಂಬ ನೂರಾರು ಗಾದೆಗಳು ಬಂದರೂ ಜನರು ಮಾತಿಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಾರೆ. ಮಾತು, ವಚನ, ಭಾಷೆ ಎಂಬಿತ್ಯಾದಿಯಾಗಿ ಕರೆದು 12ನೇ ಶತಮಾನದಲ್ಲಿ ವಚನಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗುತ್ತಿತ್ತು. "ಇನ್ನು ಮಾತಿಗೆ ಸಂಬಂಧಿಸಿದಂತೆಯೇ 'ಮಾತು ನೀಡು ಹಾಗೂ ಮಾತು ಕೊಡು ಎಂಬ ಮಾತುಗಳೂ ಬೆಳೆದು ಬಂದಿವೆ", "ನಡೆನುಡಿ ಒಂದಾಗಿರಬೇಕು" ಎಂಬ ಮಾತು ಸಹ ರೂಢಿಯಲ್ಲಿದೆ.

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು"

ಎಂಬ ಮಾತು ಸಹಾ ನಮ್ಮ ನೆನಪಿನಲ್ಲಿರಬೇಕಾಗುತ್ತದೆ. ಮಾತನ್ನು ಆಡಬಹುದೇ ಹೊರತು ಮರಳಿ ಮರಳಿ ಪಡೆಯಲಾಗದು. ಅದಕ್ಕಾಗಿಯೇ ಇಲ್ಲಿ "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂದು ನುಡಿದಿರಬಹುದು ಮುತ್ತು ಎಷ್ಟು ಬೆಲೆಬಾಳುತ್ತದೋ, ಎಷ್ಟು ಅನರ್ಘ್ಯವಾದುದೋ, ಅದೇ ರೀತಿ ನಾವು ಆಡುವ ಮಾತು ಸಹ. ಮಾತನ್ನು ನಾವು ಅರಸಬಾರದು, ಮಾತುಗಳೇ ನಮ್ಮನ್ನು ಅರಸಿ ಬರಬೇಕು. ಆಗ ಮಾತ್ರ ನಾವಾಡುವ ಮಾತಿಗೆ ತೂಕವಿರುತ್ತದೆ ಮಾತು ಪೋಣಿಸಿದಂತಿರುತ್ತದೆ, ಕೇಳುಗರನ್ನು ಆಕರ್ಷಿಸುತ್ತದೆ.

ಇಂದು ಮಾತಿಗಿಂತ, ಬರಹಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತದೆ. ಅದಕ್ಕಾಗಿಯೇ ಬರಗೂರರ "ಬರಹ ಮತ್ತು ಬದ್ಧತೆ" ಎಂಬ ಲೇಖನ ಮುಖ್ಯವೆನಿಸುತ್ತದೆ. ಎಷ್ಟೋ ಜನರ ಮಾತು ಅಥವಾ ಭಾಷಣಗಳನ್ನು ನಾವು ಕೇಳಿದ್ದೇವೆ. ಅವರ ಮಾತುಗಳು ಕೇವಲ ಭಾಷಣಗಳಿಗೆ ಸೀಮಿತವಾಗಿರುತ್ತವೆಯೋ ಹೊರತು ಜಾರಿಗೊಳ್ಳುವಲ್ಲಿ ಅಲ್ಲ. ಆದ್ದರಿಂದಲೇ ನಾವು ಬರಹದ ದಾಸರಾಗಿದ್ದೇವೆ. ಮದುವೆಯನ್ನು, ಜನನ-ಮರಣವನ್ನು ದಾಖಲಾದ ರೂಪದಲ್ಲಿ ಮಾತ್ರ ಮಾನ್ಯ ಮಾಡುತ್ತೇವೆ. ಸಂಬಂಧಗಳ ನಡುವೆ ಬರಹ ಆರಂಭವಾಗಿ ಮಾತನ್ನು ಮೌನಗೊಳಿಸುತ್ತಿವೆ. ಸಾಕಷ್ಟು ಸಮಸ್ಯೆಗಳಿಗೆ ಮೌನ ಉತ್ತರವಾದರೆ, ಮತ್ತಷ್ಟು ಸಮಸ್ಯೆಗಳಿಗೆ ಮಾತು ಮುಖ್ಯವೆನಿಸುತ್ತದೆ. ಆಡಿದ ಮಾತಿನ ಭಾವನೆಗಳನ್ನು ಅರಿತವರು, ಮೌನವನ್ನು ಅರಿಯುತ್ತಾರೆ. ಮಾತೇ ಅರಿಯದ ಮೇಲೇ ಮೌನವನ್ನೇ ಗ್ರಹಿಸಬಲ್ಲರು.

"ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ, ರಸಿಕನಲ್ಲದವನ ಬರೀ ಮಾತು ಕಿವಿಗೆ ಕೂರಂಬುವನಿಟ್ಟಂತೆ". ಕೆಲವೊಮ್ಮೆ ನಾವು ಆಡುವ ಮಾತು ನಮ್ಮ ವ್ಯಕ್ತಿತ್ವವನ್ನು ಬಿಂಬಿಸುತ್ತವೆ ಎಂಬ

ಮಾತು ಸತ್ಯ. ಮನುಷ್ಯ ಬೈಗುಳವನ್ನಾದರೂ ಸಹಿಸುತ್ತಾನೆ ಹೊರತು, ವ್ಯಂಗ್ಯವನ್ನು ಸಹಿಸಲಾರ. ಈ ವ್ಯಂಗ್ಯ ಮಾತು ಹಲವಾರು ಅನಾಹುತಕ್ಕೆ ಎಡೆ ಮಾಡಿಕೊಡುತ್ತದೆ. ಇದನ್ನು ಜನ್ನನ 'ಯಶೋಧರ ಚರಿತೆ'ಯಲ್ಲಿ ಕಾಣಬಹುದಾಗಿದೆ. "ಅಕಟಕಟ ತೊಂದರೆ ಸುಕುಮಾರಿಯನ್" ಎಂಬ ಯಶೋಧರನ ವ್ಯಂಗ್ಯ ನುಡಿ ಅಮೃತಮತಿಯನ್ನು ಕ್ರೂರಳನ್ನಾಗಿಸಿ ಆತನ ಪ್ರಾಣವನ್ನು ಬಲಿತೆಗೆದುಕೊಳ್ಳುವಂತೆ ಮಾಡುತ್ತದೆ. ಅಷ್ಟೇ ಅಲ್ಲದೆ "ಸಂನ್ಯಾಸಿಯೂ ವ್ಯಂಗ್ಯವನ್ನು ಸಹಿಸಲಾರ" ಎಂದು ಜನ್ನನು ವ್ಯಾಖ್ಯಾನಿಸಿದ್ದಾನೆ.

ಇಲ್ಲಿ ನಾವು ಮುಖ್ಯವಾಗಿ ಮಾತು, ಬದ್ಧತೆ, ಪ್ರಜ್ಞೆ ಇವುಗಳ ನಡುವಿನ ಕೊಂಡಿಯನ್ನು ಕಾಣಬಹುದಾಗಿದೆ. ನಮ್ಮ ನಡೆ-ನುಡಿ ಒಂದಾದರೆ ಮಾತ್ರ ಮತ್ತೊಬ್ಬರಿಗೆ ಹೇಳುವ ಅಥವಾ ಉಪದೇಶಿಸುವ ಅರ್ಹತೆಯನ್ನು ಪಡೆಯುತ್ತೇವೆ ಎಂಬ ಅಂಶ ಇಲ್ಲಿ ಸ್ಪಷ್ಟವಾಗಿದೆ.

**ಕಚಗುಳಿಯ ಚಳಿಗಾಲ :**

**"ಚಳಿಗಾಲ ಬಂದಾಗ ಎಷ್ಟು ಚಳಿ ಎಂಬರು**
**ಬಂತಲ್ಲ ಬೇಸಿಗೆ ಕೆಟ್ಟ ಬಿಸಿಲೆಂಬರು**
**ಮಳೆಬಿತ್ತೊ ಬಿಡದಲ್ಲ ಶನಿ ಎಂಬ ಟೀಕೆ**
**ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ"**

ಎಂಬ ಸಾಲುಗಳು ಸಾರ್ವಕಾಲಿಕ ಸತ್ಯವಾಗಿದೆ.

ಬೇಸಿಗೆ ಆರಂಭವಾಗಿ ಎಲ್ಲರಿಂದ ಬೈಗುಳ ಪಡೆದರೂ, ಅದರ ತಾಪ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುವುದಿಲ್ಲ. ಜನರ ಕರೆಗೆ ಓಗೊಟ್ಟ ಮಳೆರಾಯ ಬಂದು ಹೋದನು. ಆಗ ಬೈಗುಳ ಮತ್ತಷ್ಟು ಹೆಚ್ಚಾದವು. ಇಳೆ ತಂಪಾಗಲಿಲ್ಲ, ಬೆಳೆ ಸೊಂಪಾಗಲಿಲ್ಲವೆಂದು. ಇಂತಹ ಸಂದರ್ಭದಲ್ಲಿ ಲೇಖಕರ "ಕಚಗುಳಿ ಇಡುತಿದೆ ಚಳಿಗಾಲ" ಎಂಬ ಲೇಖನ ಪ್ರಸ್ತುತವೆ. "ಪ್ರತಿ ಡಿಸೆಂಬರ್ ತಿಂಗಳ ಅವಧಿಯಲ್ಲಿ ನಾವು ಎರಡು ಬಹುಮುಖ್ಯ ಘಟನೆಗಳಿಗೆ ಸಾಕ್ಷಿಯಾಗುತ್ತವೆ. ಒಂದು ವರ್ಷದ ಮುಕ್ತಾಯ ಹಾಗೂ ಮತ್ತೊಂದು ವರ್ಷದ ಆರಂಭ. ಅತಿ ಮಹತ್ವದ ಈ ಅಂತ್ಯ ಹಾಗೂ ಉದಯ ಎರಡನ್ನೂ ಗರ್ಭೀಕರಿಸಿಕೊಂಡ ಕಾಲವೇ ಈಗ ನಮಗೆಲ್ಲ ಕಚಗುಳಿ ಇಡುತ್ತಿರುವ ಚಳಿಗಾಲ" ಎಂದು ಬಳಿಗಾರರು ಒಂದೇ ತಿಂಗಳಿನ 2 ಬಗೆಯ ನೋಟವನ್ನು ನೀಡಿದ್ದಾರೆ. ಪ್ರಕೃತಿಯಲ್ಲಿ ಘಟಿಸುವ ಪ್ರತಿಯೊಂದು ಕ್ರಿಯೆಗೂ ನಿರ್ದಿಷ್ಟ ಕಾಲವೆಂಬುದಿರುತ್ತದೆ. ಇದರಲ್ಲಿ ಸೂರ್ಯನ ಕಿರಣಗಳ ಪಾತ್ರ ಬಹುಮುಖ್ಯ. ಬೀಜವೊಂದು ಮೊಳಕೆಯೊಡೆದು ಸಸಿಯಾಗಿ, ಗಿಡವಾಗಿ, ಮರವಾಗಿ, ಹೂ ಬಿಟ್ಟು, ಕಾಯಾಗಿ, ಹಣ್ಣಾಗಿ, ಮತ್ತೆ ಬೀಜವಾಗಿ ಮಣ್ಣು ಸೇರುವವರೆಗೂ ಇದರ ಕಾಣ್ಕೆಯಿದೆ. ಆದರೆ ಸೂರ್ಯನ ತಾಪ ಹೆಚ್ಚಾದಷ್ಟು ಗಿಡಗಳು ಒಣಗಿ ನಿಶ್ಚೇತನಗೊಳ್ಳುತ್ತದೆ. ಹೀಗೆ ಪ್ರಕೃತಿಯ ಕೊಡುಗೆಯಲ್ಲಿ ಚಳಿಗಾಲವೂ ಒಂದು.

“ಬೇಸಿಗೆಯಲ್ಲಿ ಹೊಲಗದ್ದೆಗಳನ್ನು ಉತ್ತಿ, ಮಳೆಗಾಲದಲ್ಲಿ ಬೀಜ ಬಿತ್ತಿ, ಬೆಳೆದು, ನಂತರ ಕೊಯ್ಲು ಮಾಡುವ ಕಾಲವೇ ಚಳಿಗಾಲ; ಅಂತೆಯೇ ಅದು ಸುಗ್ಗಿಯ ಕಾಲ”. ಹೀಗೆ ನಿಸರ್ಗದ ಪ್ರತಿಯೊಂದು ಕಾಲವು ಸಮಯಕ್ಕನುಸಾರವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಾ ಬಂದಿದೆ. ಇದಕ್ಕೆ ಇರಬಹುದು ಕುವೆಂಪುರವರು “ಆನಂದಮಯ ಈ ಜಗಹೃದಯ”, “ಚೇತನ ಮೂರ್ತಿಯು ಆ ಕಲ್ಲು; ಜಡವೆಂಬುದು ತೆಗೆ ಸುಳ್ಳು” ಎಂದು ತಿಳಿಸಿರುವುದು ಕುವೆಂಪುವರವರು ಜಗತ್ತಿನ ಅಣು-ಅಣುವಿನಲ್ಲೂ ಆನಂದವನ್ನು ಕಂಡವರು ಘನವಸ್ತು, ಕಲ್ಲುಬಂಡೆ ಎಂದು ಕರೆದ ಆ ಕಲ್ಲಿನಲ್ಲೂ ಚೇತನವನ್ನು ಕಂಡು ತಮ್ಮ ಸಾಲುಗಳ ಮೂಲಕ ಜೀವ ತುಂಬಿದವರು. ‘ಕಾನೂರು ಹೆಗ್ಗಡತಿ' ಮತ್ತು ‘ಮಲೆಗಳಲ್ಲಿ ಮದುಮಗಳು', ‘ಮಲೆನಾಡ ಚಿತ್ರಣ' ಇವುಗಳಲ್ಲಿ ಪ್ರಕೃತಿಯನ್ನು ಅತ್ಯಂತ ಸೂಕ್ಷ್ಮಗ್ರಾಹಿಯಾಗಿ ಗ್ರಹಿಸಿ, ಎಲೆಗಳಲ್ಲಿ ಬದಲಾಗುವ ಬಣ್ಣ, ಸೂರ್ಯೋದಯ, ಸೂರ್ಯಾಸ್ತ, ಹೂ ಅರಳುವಿಕೆ, ಋತುಮಾನ ಬದಲಾವಣೆ ಹೀಗೆ ಪ್ರತಿಯೊಂದು ಓದುಗರಿಗೆ ಕಣ್ಕಟ್ಟುವಂತೆ ಚಿತ್ರಿಸಿದ್ದಾರೆ.

ಹಾಗೆಯೇ

“ಹೂಗಳ ಮೇಲೆ, ಎಲೆಗಳ ಒಳಗೆ
ಅಮೃತದಾ ಬಿಂದು ಕಂಡವು
ಅಮೃತದಾ ಬಿಂದು . . . . .”

ಎಂದು ಬೇಂದ್ರೆಯವರು ನೀರಿನ ಹನಿ, ಇಬ್ಬನಿ, ತುಂತುರು ಎಂಬೆಲ್ಲಾ ಪದಗಳಿಗದ್ದರೂ ಸಹ “ಅಮೃತದ ಬಿಂದು” ಎಂದು ಕರೆದದ್ದು ಅನನ್ಯವೆನಿಸುತ್ತದೆ. ಇದು ಹೊಸ ಪದ ಸೃಷ್ಟಿಗಾಗಿ ಬಂದ ಪದವಲ್ಲ, ಕವಿಯೋರ್ವನ ಅನುಭವಕ್ಕೆ ದಕ್ಕಿದ್ದನ್ನು ಓದುಗನ ಮುಂದೆ ಅಭಿವ್ಯಕ್ತಿಸಲು ತಾನಾಗಿಯೇ ಅರಸಿ ಬಂದ ಪದಗಳಿವು.

“ಇನ್ನೂ ರೈತರಿಗೆ ಸುಗ್ಗಿಯ ಕಾಲವಾದ ಈ ಚಳಿಗಾಲ ಪ್ರೇಮಿಗಳಿಗೆ ಪ್ರೀತಿಯ ಕಾಲ”. ಇಡೀ ಪ್ರಕೃತಿಯೇ ಹೊಸತನದ ಬರುವಿಕೆಗಾಗಿ ಕಾಯುತ್ತಾ, ಸಜ್ಜಾಗುತ್ತಿರುವಾಗ, ಇನ್ನು ಪ್ರೇಮಿಗಳ ಮನಸ್ಸು ಉನ್ಮಾದದಲಿ ಅರಳಿ ಮುದಗೊಳ್ಳುತ್ತದೆ. ಹೊಸ ಚೈತನ್ಯ ಬಂದಂತೆ ಚಿಗುರೊಡೆಯುತ್ತದೆ. ಇದಕ್ಕೆ ಪೂರಕವಾಗಿ ಎಂಬಂತೆ ಕಾಳಿದಾಸ ತನ್ನ ‘ಮೇಘದೂತ' ಕೃತಿಯಲ್ಲಿ ಪ್ರಕೃತಿ ಮತ್ತು ಪ್ರೇಮಿಗಳ ಕುರಿತು ಹೀಗೆ ಹೇಳಿದ್ದಾನೆ.

**“ಇರಲಿ ಬೆಟ್ಟ ನದಿ, ಇರಲಿ ಶಿವನು ಸತಿ, ಇರಲಿ ಕಾಡುನಾಡು**
**ಇರಲಿ ಕಾಮರತಿ, ಅಜನು-ಇಂದುಮತಿ, ಬರಲಿ ಸಾವು ಕೇಡು**
**ಯಕ್ಷ-ಯಕ್ಷಿ, ಇರಲಕ್ಷಿ-ಪಕ್ಷಿ ಕಣ್ಗಂಡ ಪಾತ್ರದಿಂದ**
**ಪ್ರೇಮದಾಟವನ್ನು ಕವಿಯು ಆಡಿಸಿದ ಕಾಮಸೂತ್ರದಿಂದ”**

ಎನ್ನುತ್ತಾ ಪ್ರೇಮಿಗಳ ಆಟವನ್ನು ಯಾವುದೇ ಕಾಲವಾದರೂ ಕವಿಯೇ ಆಡಿಸುವಾತ, ಓದುಗರಲ್ಲಿ ಅಡಗಿದ್ದ ಸುಪ್ತಭಾವವನ್ನು ಕವಿಯು ಅರಿತು ಅದನ್ನು ತನ್ನ ಕೃತಿಯಲ್ಲಿ ಮೂಡಿಸುತ್ತಾನೆ. ಇದು ಸಹೃದಯರನ್ನು ಪ್ರೇರೇಪಿಸುತ್ತದೆ. ಆದ್ದರಿಂದಲೇ ಪ್ರೇಮಿಗಳು ಮಳೆಗಾಲ ಮತ್ತು ಚಳಿಗಾಲವನ್ನು ಹೆಚ್ಚಾಗಿ ಮೆಚ್ಚುತ್ತಾರೆ.

"ಹೀಗೆ ಕವಿಪುಂಗವರಿಗೆ, ರೈತರಿಗೆ, ಪೈಲ್ವಾನರಿಗೆ, ಯುವಪ್ರೇಮಿಗಳಿಗೆ ಸ್ಫೂರ್ತಿಯ ಸೆಲೆ, ಉತ್ಸಾಹದ ಬುಗ್ಗೆ ಆಗುವ ಹಾಗೂ ಸುಗ್ಗಿಯ ಸಡಗರ ತರುವ ಚಳಿಗಾಲ ಹಲವಾರು ಬಾರಿ ಭಯಾನಕವೂ, ಮಾರಕವೂ ಆಗಬಹುದೆಂದು ಬಳಿಗಾರರು ತಿಳಿಸಿದ್ದಾರೆ. ಇಂತಹ ಚಳಿ ವಿಕೋಪ ಸ್ಥಿತಿ ತಪುಪಿದಾಗ ಸಾವು ಸಂಭವಿಸುತ್ತದೆ. ಹಾಗೂ ಇದರ ಮಟ್ಟವನ್ನು ಮೊದಲೇ ತಿಳಿಯುವುದು ಕಷ್ಟಕರವಾದುದಾಗಿದೆ. ಈ ರೀತಿಯಾಗಿ ಚಳಿಯ ವಿವಿಧ ಮುಖಗಳನ್ನು ಇಲ್ಲಿ ಕಾಣಬಹುದಾಗಿದೆ.

**ಬೆಂಗಳೂರು ಮತ್ತು ಮೆಟ್ರೋ :**

ಮಹಾನಗರಿ, ಉದ್ಯಾನ ನಗರಿ, ಮೆಟ್ರೋ ಸಿಟಿ, ಸಿಲಿಕಾನ್ ಸಿಟಿ ಎಂದೆಲ್ಲಾ ಹೆಸರು ಪಡೆದಿರುವ ಬೆಂಗಳೂರು ನೂರಾರು ಭಾಷೆ, ಜಾತಿ, ಧರ್ಮಗಳ ಒಕ್ಕೂಟವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದೆ.

"ಮೂರು ದಶಕಗಳ ನಂತರ ಈಗ ಬೆಂಗಳೂರು ನಗರದಿಂದ ಮಹಾನಗರವಾಗಿ, ಮಾಯಾನಗರಿಯಾಗಿ ಮತ್ತೊಂದು ಮುಂಬಯಿಯಾಗಿಬಿಟ್ಟಿದೆ. ಗಗನಚುಂಬಿ ಕಟ್ಟಡಗಳು, ನೋಡಿದಲ್ಲೆಲ್ಲ ತಲೆಯೆತ್ತಿ ನಿಂತಿವೆ. ಕಲ್ಲಿನ ವಿಧಾನಸೌಧದ ಪೈಪೋಟಿಗಾಗಿ ಫೈಬರ್, ಗ್ಲಾಸ್, ಮೆಟಲ್ ಇತ್ಯಾದಿಗಳ ಹೊರಹೊದಿಕೆ ಹೊತ್ತ ಖಾಸಗಿ ಕಟ್ಟಡಗಳು ಥಳಥಳಿಸುತ್ತಿವೆ. ಒಮ್ಮೆ ವಾಹನಗಳು ವಿಪರೀತವೆನಿಸಿದರೆ, ಮತ್ತೊಮ್ಮೆ ಜನಸಂದಣಿ ಅಸಹನೀಯವೆನ್ನಿಸುವಷ್ಟು ಗಜಿಬಿಜಿ" ಹೀಗೆ ಬೆಂಗಳೂರು ವಿದೇಶಗಳಿಗೆ ಸೆಡ್ಡು ಹೊಡೆದು ನಿಂತಿದೆ. ಪ್ರತಿಯೊಂದು ಮಾಹಿತಿಯನ್ನು ಕ್ಷಣಾರ್ಧದಲ್ಲಿ ಪಡೆಯಬಹುದಾಗಿದೆ.

HMT, BEL, HALಗಳಂತಹ ಸರಕಾರಿ ಉದ್ಯಮಗಳೊಂದಿಗೆ ಅಂತರರಾಷ್ಟ್ರೀಯ ಟೆಕ್ನಾಲಾಜಿಕಲ್ ಮಾರ್ಕ್ (ITP), ಟೆಕ್ಸಸ್ ಇನ್ಸ್‌ಟ್ರೂಮೆಂಟ್, ಇನ್‌ಫೋಸಿಸ್, ವಿಪ್ರೋ, ಹನಿವೆಟ್ ಐಬಿಎಂಸಿಸ್ಕೊ, ಇಂಟೆಲ್, ಬಯೋಕಾನ್ ಮುಂತಾದ ಖಾಸಗಿ ಕಂಪನಿಗಳು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದುವರೆದು ಜಾಗತಿಕ ಮುಕ್ತ ಮಾರುಕಟ್ಟೆಯಲ್ಲಿ ಬೆಂಗಳೂರು ತನ್ನನ್ನು ತಾನು ತೆರೆದುಕೊಳ್ಳುವಂತೆ ಮಾಡಿದೆ. ಓದು-ಬರಹ ಬಾರದವರು ಸಹ ಇಂದು ಬಹು ಭಾಷಿಕರಾಗಿದ್ದಾರೆ ಎಂದರೆ ಆಶ್ಚರ್ಯವಿಲ್ಲ. ವಿವಿಧ ಭಾಷಿಕರೊಡನೆ ಸಂವಹನ ನಡೆಸುತ್ತಾ ತಮ್ಮ ಭಾಷೆಯನ್ನು ಕಲಿಸುವ ಬದಲು ಅವರ ಭಾಷೆಯನ್ನೇ ಕಲಿತು, ಅವರಿಗೆ ಹೊಂದಿಕೊಂಡು ಬಾಳುವ ಬರದಲ್ಲಿ ಜನರು ತಮ್ಮ ತನವನ್ನು ಮರೆಯುತ್ತಿದ್ದಾರೆ.

ಇನ್ನು 'ಮೆಟ್ರೋ' ಕುರಿತು ನೋಡುವುದಾದರೆ, ಇದು ಬೆಂಗಳೂರಿನಲ್ಲಿ ನಡೆದ ಒಂದು ನೂತನ ಆವಿಷ್ಕಾರ. ಸಿಲಿಕಾನ್ ಸಿಟಿಯಲ್ಲಿ ಕೆಲಸಕ್ಕಾಗಿ ಅರಸಿ, ದುಡಿಯುವವರ ಸಂಖ್ಯೆ ಹೆಚ್ಚಾದಷ್ಟೂ ವಾಹನಗಳ

ಸಂಖ್ಯೆಯೂ ಹೆಚ್ಚಾಗುತ್ತದೆ. ಗಂಡ-ಹೆಂಡತಿ, ಮಕ್ಕಳು, ಕುಟುಂಬ ಹೀಗೆ ಪ್ರತ್ಯೇಕ ವಾಹನಗಳ ಸಂಖ್ಯೆ ಹೆಚ್ಚಿ ಟ್ರಾಫಿಕ್ ಜಾಮ್ ಅತಿರೇಕಕ್ಕೇರುತ್ತಿದೆ. ಇದರಿಂದ ಅಪಘಾತ, ವಾಯುಮಾಲಿನ್ಯ, ಶಬ್ದ ಮತ್ತು ನೀರಿನ ಮಾಲಿನ್ಯ ಹಾಗೂ ಆರೋಗ್ಯ ಮಾಲಿನ್ಯವಾಗುತ್ತಿದೆ. ಜಗತ್ತಿನಲ್ಲಿ ಜನರಿಗಿಂತ ಮನೆಗಳು, ವಾಹನಗಳ ಸಂಖ್ಯೆಯೇ ಹೆಚ್ಚಿದೆ. ಈ ಎಲ್ಲಾ ಸಮಸ್ಯೆಗಳ ಮಧ್ಯೆ ಪ್ರಯಾಣಿಕರನ್ನು ಅವರು ತಲುಪಬೇಕಾದ ಕಡೆ ಅತ್ಯಂತ ವೇಗವಾಗಿ ಹಾಗೂ ಆರಾಮದಾಯಕವಾಗಿ ತಲುಪಿಸಲು ಆರಂಭವಾದ ವಿದೇಶಿ ಮಾದರಿಯ ಸಾರಿಗೆಯೇ ಈ ಮೆಟ್ರೋ.

ಹೀಗೆ ಬೆಂಗಳೂರು ಹೊಸ-ಹೊಸ ಆವಿಷ್ಕಾರಗಳಿಗೆ ತನ್ನನ್ನು ತೆರೆದುಕೊಳ್ಳುತ್ತಾ ಹೋದಷ್ಟು, ಮನುಷ್ಯ ತನ್ನಿಂದ ತಾನು ಅಷ್ಟಷ್ಟು ಪರಕೀಯನಾಗುತ್ತಿದ್ದಾನೆ. ಇನ್ನಾದರೂ ಸಂಬಂಧದ ಸ್ವರೂಪ ಗಟ್ಟಿಗೊಳ್ಳುವತ್ತ ಚಿಂತಿಸೋಣ. ಮಾನವೀಯ, ಸಂಬಂಧಗಳ ನವಿರಾದ ಭಾವವನ್ನು ಬೆಳೆಸೋಣ.

ಒಟ್ಟಾರೆಯಾಗಿ ಮನು ಬಳಿಗಾರರು "ಏಕಾಂತ ಮತ್ತು ಏಕಾಗ್ರತೆ" ಕೃತಿಯಲ್ಲಿ ಭಾರತೀಯ ಸಂಸ್ಕೃತಿಯಿಂದ ಆರಂಭವಾಗಿ ಕನಕದಾಸರ ಜೀವನದ ಕುರಿತು ಮಾತನಾಡುತ್ತಾ ಗ್ರಾಹಕರ ಪ್ರಜ್ಞೆಯೊಂದಿಗೆ ಮಾತು ಮತ್ತು ಸಮಯಾವಕಾಶದ ಮಹತ್ವವನ್ನು ತಿಳಿಸಿದ್ದಾರೆ. ಹಾಗೆಯೇ ಬೆಂಗಳೂರಿನಲ್ಲಿರುವ ಮೆಟ್ರೋ ಬಸ್‌ನ ಆಳ ವಿಷಯವನ್ನು ಸಹ ಇಲ್ಲಿ ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲದೆ, ಪ್ರಕೃತಿ ಹಾಗೂ ವಾತಾವರಣದ ಬಗೆಗೆ ಮಾತನಾಡುತ್ತಾ "ಕಚಗುಳಿ ಇಡುತಿದೆ ಚಳಿಗಾಲ" ಎಂದು ಅನೇಕ ವಿಷಯಗಳ ಕುರಿತು ಪ್ರಸ್ತಾಪಿಸಿದ್ದಾನೆ.

❖

## ಭಾಗ-5

# ಅಂಕಣ ಬರಹಗಳು

## ಬೆಳಕ ಬೆಡಗು : ಸಂಸ್ಕೃತಿ ಚಿಂತನೆಯ ಬರಹಗಳು

ಡಾ. ನಿತ್ಯಾನಂದ ಬಿ. ಶೆಟ್ಟಿ

ಈ ಕೃತಿ ಪ್ರಜಾವಾಣಿ ಪತ್ರಿಕೆಗೆ ಡಾ. ಮನು ಬಳಿಗಾರ್ ಅವರು ಬರೆದ ಅಂಕಣ ಬರಹಗಳ ಸಂಕಲನ. 32 ಬರಹಗಳನ್ನು ಒಳಗೊಂಡ ಈ ಪುಸ್ತಕವನ್ನು ಅಂಕಿತ ಪುಸ್ತಕದವರು 2009ರಲ್ಲಿ ಪ್ರಕಟಿಸಿದ್ದಾರೆ.

ಓರ್ವ ಬರಹಗಾರನಾಗಿ ಮನು ಬಳಿಗಾರ್ ಅವರಿಗೆ ನೂರೆಂಟು ಕಣ್ಣುಗಳು. ಹಾಗಾಗಿ ಕಂಡದ್ದನ್ನೆಲ್ಲ ಅವರು ಬರಹ ರೂಪಕ್ಕಿಳಿಸಿದ್ದಾರೆ. ಓದುಗರಿಗೆ ಹಾಯಾದ ವಾಯುವಿಹಾರದಂತಿರುವ ಈ ಕೃತಿ ಈ ಕಾರಣದಿಂದ ಅತ್ಯಂತ ವೈವಿಧ್ಯಪೂರ್ಣವೂ ಆಗಿದೆ.

ದೀರ್ಘಾಯುಷ್ಯದ ಕುರಿತು, ಶ್ರವಣಬೆಳಗೊಳದ ಗೊಮ್ಮಟನ ಕುರಿತು ಮತ್ತು ಇಟಲಿಯ ಫ್ಲಾರೆನ್ಸ್ ನಗರದಲ್ಲಿರುವ ಡೇವಿಡ್‌ನ ಮೂರ್ತಿಯ ಕುರಿತು, ಕಸದ ಸಮಸ್ಯೆಯ ಕುರಿತು, ವಿಶ್ವ ಪಾರಂಪರಿಕ ತಾಣಗಳ ಕುರಿತು, ಶಿವರಾಮ ಕಾರಂತರ ಕುರಿತು, ಭಾರತದ ಯೌವನಾವಸ್ಥೆಯ ಕುರಿತು, ಅಮೆರಿಕದ ವೃದ್ಧಾಪ್ಯದ ಕುರಿತು, ದಸರಾದಂತಹ ಹಬ್ಬಗಳ ಕುರಿತು..ಹೀಗೆ ಅನೇಕಾನೇಕ ವಿಷಯಗಳ ಬಗ್ಗೆ ಮನು ಬಳಿಗಾರ್ ಬರೆದಿದ್ದಾರೆ.

ಒಂದು ಬಗೆಯ ಹರಟೆಯ, ಲಲಿತಪ್ರಬಂಧದ ಧಾಟಿಯ ಈ ಎಲ್ಲ ಬರಹಗಳು ಓದುಗರನ್ನು ಕೆಲಕಾಲ ತನ್ಮಯಗೊಳಿಸಬಲ್ಲವು.

ನಮಲ್ಲಿ ಬಹುತೇಕ ಜನ ಪತ್ರಿಕೆಯ ಓದುಗರಿಗಾಗಿ ಸರಳವಾಗಿ ಬರೆಯಬೇಕು ಎಂದು ಮತ್ತೆ ಮತ್ತೆ ಹೇಳುತ್ತಾರೆ. ಸರಳವಾಗಿ ಬರೆಯುವುದು ಬೇರೆ. ವಸ್ತು ವಿಷಯಗಳನ್ನು, ಪರಿಕಲ್ಪನೆ-ವಿದ್ಯಮಾನಗಳನ್ನು ಸರಳೀಕರಿಸಿ ಬರೆಯುವುದು ಬೇರೆ. ಮನು ಬಳಿಗಾರ್ ಅವರು ವಿಷಯಗಳನ್ನು ಸರಳೀಕರಿಸಿ ಬರೆಯುವುದಿಲ್ಲ. ಹಾಗಂತ ವಿಷಯದ ಆಳಕ್ಕಿಳಿದು ತಲಸ್ಪರ್ಶೀ ಚಿಂತನೆಯನ್ನೂ ನಡೆಸುವುದಿಲ್ಲ. ಇದನ್ನು ನಡೆಸುವ ಜವಾಬ್ದಾರಿಯನ್ನು ಅವರು ಓದುಗರಿಗೆ ಬಿಟ್ಟುಕೊಡುತ್ತಾರೆ.

ನಮ್ಮ ಸಮಾಜದಲ್ಲಿ ಏನೋ ಒಂದು ಘಟನೆ ನಡೆಯುತ್ತದೆ ಎಂದಾದರೆ ಉದಾಹರಣೆಗೆ ಲೇಖಕರ, ವಿಚಾರವಂತರ ಹತ್ಯೆ ಅಥವಾ ಸರಕಾರವೊಂದು ರೈತರ ಜಮೀನು ವಶಪಡೆಯಲು ರಾತ್ರೋರಾತ್ರಿ ಸುಗ್ರೀವಾಜ್ಞೆ ಹೊರಡಿಸುವುದು ಇತ್ಯಾದಿ ಸಂಗತಿಗಳನ್ನು ನಾವು ಕೇವಲ ಬಿಡಿ ಬಿಡಿಯಾದ ಘಟನೆಗಳು ಎಂದು ನೋಡಲು ಸಾಧ್ಯವಿಲ್ಲ. ಅದು ಒಂದು ಸಮಾಜದ ಸಂಕೀರ್ಣವಾದ ವಿದ್ಯಮಾನವಾಗಿರುತ್ತದೆ. ಈ ವಿದ್ಯಮಾನಗಳ ಹಿಂದೆ ಖಂಡಿತವಾಗಿಯೂ ಒಂದು ತಾತ್ತ್ವಿಕ ಪರಿಪ್ರೇಕ್ಷ್ಯ ಇರುತ್ತದೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದ್ದರೆ ನಮಗೂ ಒಂದು ತಾತ್ತ್ವಿಕ ಪರಿಪ್ರೇಕ್ಷ್ಯ ಇರಬೇಕಾಗುತ್ತದೆ. ಅದು ಬಿಟ್ಟು ಸುಖಾಸುಮ್ಮನೆ ಹಾಗಂತೆ-ಹೀಗಂತೆ ಎಂದು ಲೋಕಾಭಿರಾಮವಾಗಿ ಬರೆಯುವುದನ್ನು ಒಂದು ಸತ್ತ್ವಶೀಲ ಬರವಣಿಗೆ ಎಂದು ಪರಿಗಣಿಸಲು ಆಗುವುದಿಲ್ಲ. ಬರೆಹಗಾರರಾದ ನಾವು ವಿಷಯಗಳನ್ನು ವಿಷದೀಕರಿಸುತ್ತ ಅದರ ಪರಿಕಲ್ಪನಾತ್ಮಕ ಚೌಕಟ್ಟುಗಳನ್ನು ನಿರ್ದಿಷ್ಟಪಡಿಸಿ ಹೇಳುವುದರಿಂದ ಓದುಗ ಸಮಾಜದಲ್ಲಿ ಹೊಸ ಚಿಂತನೆಗಳು, ಹೊಸ ಪ್ರಶ್ನೆಗಳು ಉದಯಿಸುತ್ತವೆ. ಮನು ಬಳಿಗಾರ್ ಅವರು ವಿಷಯಗಳನ್ನು ವಿಷದೀಕರಿಸುತ್ತಾರೆ ಆದರೆ ಅದನ್ನು ಪರಿಕಲ್ಪನಾತ್ಮಕವಾಗಿ ಹೇಳುವುದಕ್ಕೆ ಅವರಿಗೆ ಅದಕ್ಕೆ ಬೇಕಾದ ವಿದ್ವತ್ ಶಿಸ್ತು ಇಲ್ಲ. ಯಾಕೆಂದರೆ ಅವರು

ಮೂಲತಃ ನಾಗರಿಕ ಸೇವೆಯಲ್ಲಿರುವ ಓರ್ವ ಅಧಿಕಾರಿ. ಒಬ್ಬ ಅಧಿಕಾರಿ ಇಷ್ಟು ಸೆನ್ಸಿಬಲ್ ಆಗಿರುವುದೇ ಈ ಕಾಲದಲ್ಲಿ ದೊಡ್ಡ ಸಂಗತಿ.

ಒಂದು ಚಿಂತನೆಯನ್ನು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಕೊಂಡೊಯ್ಯುವ ಘನವೂ ಗಂಭೀರವೂ ಆದ ಚಿಂತನಾಪೂರ್ಣ ಬರಹವನ್ನು ಮನುಬಳಿಗಾರ್ ಅವರಿಂದ ನಿರೀಕ್ಷಿಸುವುದು ಸಾಧುವಾದದ್ದಲ್ಲ. ಆದರೆ ಓದುಗರ ಚಿಂತನೆಯಲ್ಲಿ ಒಂದು ಸಣ್ಣ ಕಂಪನವನ್ನು ಅವರು ಹುಟ್ಟಿಸಬಲ್ಲರು ಎನ್ನುವುದಕ್ಕೆ ಈ ಪುಸ್ತಕದಲ್ಲಿರುವ ಅವರ 'ತ್ಯಜಿಸಿ ಭುಜಿಸುವ ಭಾವ ಬಲು ಮೇಲು' ಎಂಬ ಲೇಖನ ಸಾಕ್ಷಿ. ಯುದ್ಧದ ಕಾಲದಲ್ಲಿ ಪ್ರಧಾನಿಯಾಗಿದ್ದ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಎರಡು ಬಗೆಯ ಪಲ್ಯಗಳು ಮತ್ತು ಎರಡು ಚಪಾತಿ ತನ್ನ ಬುತ್ತಿಯಲ್ಲಿದ್ದರೆ ಅದರಲ್ಲಿ ಒಂದು ಚಪಾತಿ ಮತ್ತು ಪಲ್ಯವನ್ನು ಮಧ್ಯಾಹ್ನದ ಹೊತ್ತಿಗೆ ತಿಂದು ಇನ್ನೊಂದು ಚಪಾತಿ ಮತ್ತು ಪಲ್ಯವನ್ನು ರಾತ್ರಿಯ ತಮ್ಮ ಊಟವಾಗಿ ಬಳಸುತ್ತಿದ್ದರಂತೆ ಎಂಬಂಥ ಕಥನಗಳು ನಮ್ಮ ನಡುವೆ ಪ್ರಚಲಿತದಲ್ಲಿವೆ. ಇದು ನಿಜವೇ ಸುಳ್ಳೇ ಎಂಬುದಕ್ಕಿಂತ ಈ ನಿರೂಪಣೆ ಬಹಳ ಮುಖ್ಯ. ಈ ನಿರೂಪಣೆಯನ್ನು ಸಂಪತ್ತಿನ ಅಶ್ಲೀಲ ಪ್ರದರ್ಶನದ ಈ ಕಾಲದಲ್ಲಿ ನಾವು ಮತ್ತೆ ಮತ್ತೆ ಮಾಡುವುದೂ ಬಹಳ ಮುಖ್ಯ. ಅಂತಹ ನೂರಾರು ಕಥನಗಳ ಮರು ನಿರೂಪಣೆಗಳನ್ನು ಮನು ಬಳಿಗಾರ್ ಅವರು ತಮ್ಮ ಈ ಪುಸ್ತಕದಲ್ಲಿನ ಅನೇಕ ಬರೆಹಗಳಲ್ಲಿ ಮತ್ತೆ ಮತ್ತೆ ಮಾಡುತ್ತಾರೆ ಎನ್ನುವುದರಿಂದ ಈ ಪುಸ್ತಕಕ್ಕೆ ಒಂದು ಬಗೆಯ ನೈತಿಕ ಚೌಕಟ್ಟು ಒದಗಿದಂತಾಗಿದೆ.

ಒಂದು ಕಾಲದಲ್ಲಿ ಅದೂ ಪಶ್ಚಿಮದಲ್ಲಿ ಪತ್ರಿಕೆಗಳಲ್ಲಿ ಬರೆಯುವವರು ಪತ್ರಕರ್ತರಾಗಿರಲಿಲ್ಲ. ಬೇರೆ ಬೇರೆ ಜ್ಞಾನಶಿಸ್ತುಗಳಲ್ಲಿ ಪಳಗಿದ ವಿದ್ವಾಂಸರು ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಅಂದರೆ ಆ ವಿದ್ವಾಂಸರನ್ನು ಅವರ ತಜ್ಞತೆಯ ಕ್ಷೇತ್ರದಲ್ಲಿ ಬರೆಯುವಂತೆ ಪತ್ರಿಕೆಯವರು ಕೇಳಿಕೊಳ್ಳುತ್ತಿದ್ದರು. ಜಗತ್ತಿನ ಬಲುದೊಡ್ಡ ತತ್ತ್ವಜ್ಞಾನಿ ಇಮ್ಯಾನ್ಯುವೆಲ್ ಕಾಂಟ್ ಬಹಳ ಗಹನವಾದ ತಾತ್ತ್ವಿಕ ಸಂಗತಿಗಳ ಬಗ್ಗೆ ಪತ್ರಿಕೆಗಳಲ್ಲಿ ಬರೆಯುತ್ತಿದ್ದ. ಅವನು ಬರೆದಿರುವುದು ದೊಡ್ಡ ಸಂಗತಿಯಲ್ಲ. ದಿನಪತ್ರಿಕೆಗಳಲ್ಲಿ ಕಾಂಟ್‌ನಂಥವನ ಬರೆಹಗಳಿಗೆ ಸಾಕಷ್ಟು ಸ್ಥಳಾವಕಾಶ ದೊರೆಯುತ್ತಿತ್ತು ಮತ್ತು ಆತ ಬರೆದಿರುವುದನ್ನು ಓದುವ ಒಂದು ದೊಡ್ಡ ಓದುಗವರ್ಗ ಪಶ್ಚಿಮದ ಸಮಾಜದಲ್ಲಿತ್ತು. ಅವರು ಜನಸಾಮಾನ್ಯರೇ ಆಗಿದ್ದರು. ಆ ಕಾಲದಲ್ಲಿ ಪತ್ರಕರ್ತನೆಂದರೆ ಅಂದಂದಿನಿಂದ ಘಟನೆಗಳನ್ನು ವರದಿ ಮಾಡುವುದಷ್ಟಕ್ಕೇ ಸೀಮಿತರಾದವರು ಆಗಿದ್ದರು. ಆದರೆ ಇಂದು ವಿಶೇಷವಾಗಿ ನಮ್ಮಲ್ಲಿ ಕಾಲ ಬದಲಾಗಿದೆ. ನಮ್ಮ ಪತ್ರಕರ್ತರು ಸೂರ್ಯನ ಕೆಳಗಿನ ಯಾವ ಸಂಗತಿಗಳ ಬಗೆಗೂ ಲೀಲಾಜಾಲವಾಗಿ ಬರೆಯಬಲ್ಲವರಾಗಿದ್ದಾರೆ. ಅವರಿಗೆ ವಿವರಣಾತ್ಮಕ, ತೆಳು ತರ್ಕದ ಭಾಷೆ ಸಿದ್ಧಿಸಿಬಿಟ್ಟಿದೆ. ಇಂಥ ಹಗುರ ಬರಹಗಳನ್ನು ಓದಿ ಓದಿ ಜನರಿಗೂ ಪರಿಕಲ್ಪನಾತ್ಮಕ ಬರೆಹಗಳು ಭಾರ ಎಂದನ್ನಿಸುತ್ತಿವೆ.

ಇಂತಹ ಸಂದರ್ಭದಲ್ಲಿ ಅದೂ ಕನ್ನಡದಲ್ಲಿ; ವಿದ್ವಾಂಸರಿಗೂ, ವಿಷಯತಜ್ಞರಿಗೂ ಒಂದು ದೊಡ್ಡ ಸವಾಲು ಎದುರಾಗಿದೆ. ಜನರನ್ನು ಯೋಚಿಸುವಂತಹ ಬರಹಗಳನ್ನು ಆದಷ್ಟೂ ಸರಳವಾಗಿ ಬರೆಯುವುದು ಹೇಗೆ ಎಂಬುದೇ ಆ ದೊಡ್ಡ ಸವಾಲು. ಓರ್ವ ಅಧಿಕಾರಿಯಾಗಿ ಸುದೀರ್ಘ ಸಮಯ ಆಡಳಿತಾನುಭವ ಇದ್ದ ಮನು ಬಳಿಗಾರ್ ಅವರಂತವರು ಓರ್ವ ಬರಹಗಾರನಾಗಿ ಬದಲಾದಾಗ ಅವರು ಹೆಚ್ಚಾಗಿ ನಡೆಸಬೇಕಾಗಿರುವುದು ಸಾಹಿತ್ಯ-ಸಂಸ್ಕೃತಿ ಚಿಂತನೆಗಳಿಗಿಂತಲೂ ಆಡಳಿತಾಂಗ ಎಂಬ ಸಾಂಸ್ಥಿಕ ವ್ಯವಸ್ಥೆಯ ಬಗ್ಗೆ ಓರ್ವ ಒಳಗಿನವನಾಗಿ ಮತ್ತು ಒಳನೋಟಗಳನ್ನುಳ್ಳವನಾಗಿ ಆಳವಾದ ಅಧ್ಯಯನ ಮಾಡಿ ಈ ವ್ಯವಸ್ಥೆಯನ್ನು ಸರಳಗೊಳಿಸುವಂತಹ ಬರೆಹಗಳನ್ನು ಬರೆದಿರುತ್ತಿದ್ದರೆ ಅದು ನಿಜಕ್ಕೂ ಒಂದು ಬಹಳ ದೊಡ್ಡ ಕೆಲಸವಾಗುತ್ತಿತ್ತು.

ನನಗಂತೂ ನಿರ್ಣಯಾತ್ಮಕವಾಗಿ ಬರೆಯುವಂತಹ ಪತ್ರಕರ್ತರಿಗಿಂತ ವಿಶ್ಲೇಷಣಾತ್ಮಕವಾಗಿ ಬರೆಯುವಂತಹ ಬರಹಗಾರರು ಅವರು ಯಾವ ಕ್ಷೇತ್ರದವರೇ ಆಗಿದ್ದಿರಲಿ ಅಂಥವರು ಇಷ್ಟವಾಗುತ್ತಾರೆ. ಮನು ಬಳಿಗಾರ್ ಅವರು ಸ್ವಲ್ಪ ದೀರ್ಘವಾಗಿ ವಿವರಣಾತ್ಮಕವೂ ಮತ್ತು ಕೊಂಚ ವಿಶ್ಲೇಷಣಾತ್ಮಕವೂ ಆಗಿ ಬರೆಯುವಂಥ ಬರಹಗಾರರು. ಆದರೆ ಅವರು ಈ ಪುಸ್ತಕದ ಯಾವ ಲೇಖನದಲ್ಲೂ ನಿರ್ಣಯಾತ್ಮಕವಾಗಿ, ಇದಮಿತ್ಥಂ ಎಂದು ಬರೆದಿಲ್ಲ. ಇದು ಅವರ ಸೌಜನ್ಯವನ್ನೂ ಮತ್ತು ಅವರ ವಿವೇಕವನ್ನೂ ಹೇಳುತ್ತದೆ. ಮೆಲು ಮಾತಿನ ಶೈಲಿಯ ಮತ್ತು ವಸ್ತು-ವಿಷಯಗಳ ಸರಳ ಗ್ರಹಿಕೆಯ ಅವರ ಈ ಬೆಳಕ ಬೆಡಗು ಎಂಬ ಕೃತಿಯ ಸಂಸ್ಕೃತಿ ಚಿಂತನೆಯ ಬರಹಗಳು ಕನ್ನಡದ ಬಹುರೂಪೀ ಬರವಣಿಗೆಯ ಕ್ರಮಗಳಲ್ಲಿ ಪ್ರಧಾನವಾಗಿರುವ ಒಂದು ಮಾದರಿಯನ್ನು ಎತ್ತಿ ತೋರಿಸುತ್ತದೆ.

❖

# ಮನು ಬಳಿಗಾರ್ ಅವರ ಬೆಳಕ-ಬೆಡಗು ಕೃತಿ ಚಿಂತನೆ

ಡಾ. ಶಿವಾನಂದ ಕೆಳಗಿನಮನೆ

ಇವನಾರವ ಇವನಾರವ ಎಂದೆಣಿಸದೆ ಇವ ನಮ್ಮವ ಇವ ನಮ್ಮವ ಎಂದೆಣಿಸಿರಯ್ಯ ನಿಮ್ಮ ಮನೆಯ ಬಾಗಿಲಿಗೆ ಬಂದ ಮಗನೆಂದು ಕಾಣಿರೋ ಎಂಬ ವಚನವನ್ನು ಭಕ್ತಿ ಭಂಡಾರಿ ಬಸವಣ್ಣ ನುಡಿದಿದ್ದಾರೆ. ಈ ಮಾತಿನಲ್ಲಿ ಎಷ್ಟೊಂದು ಅರ್ಥಗರ್ಭಿತವಾಗಿದೆ. ವಚನ ಚಳುವಳಿಗೆ ವೈವಿಧ್ಯಮಯ ರೂಪಗಳಿವೆ. ಎಲ್ಲಾ ವರ್ಗದ ಎಲ್ಲಾ ಜಾತಿಯ ಎಲ್ಲಾ ಕಾಯಕದ ಎಲ್ಲಾ ಜನರ ಚಳುವಳಿ ಇದು. ಸಮಾನತೆಯ ಕಲ್ಪನೆಯು ವಿಶಿಷ್ಟವಾದುದು. ಕಲ್ಯಾಣದ ಅಸ್ತಿಭಾರ ಸಮಾನತೆಯೇ ಆಗಿರಬೇಕೆಂಬ ಸೂಚನೆಯಲ್ಲಿದೆ.

ಸಮಾನತೆ ಇಲ್ಲದೇ ಅರ್ಥಪೂರ್ಣ ಸಮಾಜವನ್ನು ಕಟ್ಟಲಾರದು ಹಾಗಾಗಿ ಬಸವಣ್ಣನವರ ವಚನದ ಅರ್ಥ ಯಾವ ಜಾತಿ ಮತ ಪಂಥ ಪರಿಗಣಿಸದೇ ಸತ್ಯವಂತರ ಮಾರ್ಗದಲ್ಲಿ ನಡೆದರೆ ಅವರೇ ಶಿವಶರಣರು. ಇಂಥ ಪಂಕ್ತಿಯಲ್ಲಿ ನಮ್ಮೆಲ್ಲರ ದೃಷ್ಟಿಯಲ್ಲಿ ನಿಲ್ಲುವರು ಮನು ಬಳಿಗಾರ್‌ರವರು ಜೊತೆಗೆ ಅಚ್ಚುಮೆಚ್ಚಿನವರಾಗಿ ಮಾನವೀಯತೆಯ ಮೌಲ್ಯಗಳನ್ನು ಬಾಳಿನುದ್ದಕ್ಕೂ ಆದರ್ಶಪ್ರಾಯವಾಗಿ ಉಳಿಸಿಕೊಂಡವರಾಗಿದ್ದಾರೆ.

ಮನು ಬಳಿಗಾರ್ ಅವರು ದೈನಂದಿನ ಬದುಕಿನ ಕ್ರಿಯಾಶೀಲತೆಯ ಚಿಂತನೆಯನ್ನು ತಮ್ಮ ಅಂಕಣ ಬರಹಗಳ ಮೂಲಕ ಬೆಳಕು ಬೆಡಗು ಲೇಖನಗಳಲ್ಲಿ ವಿಶ್ಲೇಷಣಾತ್ಮಕವಾಗಿ ಹೇಳುತ್ತಾರೆ. ಈ ಅಂಕಣಗಳ ವಿಶೇಷತೆಯೆಂದರೆ ಬದುಕಿಗೆ ಮುಖಾಮುಖಿಯಾಗಿದ್ದು ಸಂಸ್ಕೃತಿ ಅಸ್ಮಿತತೆಯ ಜಾಗೃತಿ ಹಾಗೂ ಪರಿಸರದ ಎಚ್ಚರಗಳನ್ನು ಹುಡುಕುವ ಇಲ್ಲಿನ ಬರಹಗಳು ಆಲೋಚನೆಯ ಸಿದ್ಧವಸ್ತುವಲ್ಲ. ಅನುಚಾನವಾಗಿ ಬಂದದ್ದೆಲ್ಲ ಮನುಷ್ಯರೆನಿಸಿಕೊಂಡವರು ರೂಪಿಸಿಕೊಳ್ಳಬೇಕಾದ ತತ್ವವಾಗಿದೆ. ಇದು ಪರ ವಿರೋಧಿಗಳ ಘರ್ಷಣೆಯ ಮೂಲಕವೇ ಒಂದು ವಾಗ್ವಾದವನ್ನು ಹುಟ್ಟುಹಾಕುತ್ತದೆ. ಇಂಥದೊಂದು ದೇಸಿ ಸಂಸ್ಕೃತಿಯನ್ನು ಕಟ್ಟಲು ಮನು ಬಳಿಗಾರ್‌ರವರು ಒಂದು ಪ್ರದೇಶದ ಸಾಂಸ್ಕೃತಿಕ ಚೈತನ್ಯದೊಡನೆ ಚರ್ಚೆಗಿಳಿಯುತ್ತಾರೆ. ಒಂದು ಸಣ್ಣನಿದರ್ಶನವನ್ನು ನೀಡುವುದರ ಮೂಲಕ ಮರೆಯಾಗಿಹೋದ ಜ್ಞಾನ ಶಿಸ್ತುಗಳನ್ನು ಪುನಃಮೂಡಿಸಿ ಪರಂಪರೆಯೊಂದಿಗೆ ಮುಖಾಮುಖಿಯಾಗಿಸುವುದು ಅಷ್ಟು ಸುಲಭವಲ್ಲ ಅಂತಹ ಮುಖಾಮುಖಿಯನ್ನು ಬಳಿಗಾರರವರು ತೆರೆದು ತೋರಿಸುತ್ತಾರೆ. ಉದಾ: ಭಾಷೆ ಎಂಬುದು ನೋಡಾ ಬಾಂಧವ್ಯದ ಬೇರು. ಕನ್ನಡಿಗರ ಎರಡು ಕಣ್ಣುಗಳು ಪಂಪನ ಕಾವ್ಯಗಳು ಬೆಳಕ-ಬೆಡಗ ಬೆನ್ನಹತ್ತಿ ಕನ್ನಡ ಸಾಹಿತ್ಯ ಚರಿತೆಯ ಚರಿತೆ, ಎದ್ದು ಬಂದ ಬುದ್ಧನಿಲ್ಲಿ ನೆಲೆಸಿನಿಂದನೊ ಬಸವ ಎಂದು ಕರೆದರೆ ಹುಲಿಯಂತೆ ಬರಬೇಕು, ಕೆಲವನ್ನಾದರೂ ಓದಬೇಕು, ಕಾಲವೆಂಬ ಕಾಲಾತೀತ ಮುಂತಾದ ಅಂಕಣ ಬರಹಗಳು ಬಗೆಬಗೆಯ ಶಿಸ್ತುಗಳ ಅರಿವು ಹಾಗೂ ಸಂಸ್ಕೃತಿಗಳ ಗ್ರಹಿಕೆಗೆ ಅಗತ್ಯವೆಂಬುದನ್ನು ಮನು ಅವರು ತಮ್ಮ ಅಂಕಣ ಬರಹಗಳ ಮೂಲಕ ಮಂಡಿಸಿದ್ದಾರೆ.

ತಮ್ಮ ಬದುಕಿನುದ್ದಕ್ಕೂ ಬಸವ ಮತ್ತು ಮಾರ್ಕ್ಸ್‌ವಾದಿ ಚಿಂತನೆಯನ್ನು ಅಳವಡಿಸಿಕೊಂಡಿರುವ ಮನು ಅವರು ಸಾಮಾಜಿಕ ಸಾಹಿತ್ಯಕ ಗ್ರಹಿಕೆಗಳಲ್ಲಿ ಕ್ರಿಯಾತ್ಮಕವಾಗಿ ತಂದವರು ಇನ್ನೊಂದೆಡೆ ಅಸಮಾನತೆಯ ವ್ಯವಸ್ಥೆಯ ವಿರೋಧಿ ದನಿಯಾಗಿ ಉಳಿದುಕೊಂಡವರು. ಜೊತೆಗೆ ಸಾಹಿತ್ಯ ಸಮಾಜ, ಸಂಸ್ಕೃತಿಗಳನ್ನು ಗ್ರಹಿಸುವ ವಿಶಾಲವಾದ ಸೈದ್ಧಾಂತಿಕ ತಿಳುವಳಿಕೆಯನ್ನು ಮೈಗೂಡಿಸಿಕೊಂಡವರು ಹಾಗೇ 70ರ ದಶಕದ ದಲಿತ ಬಂಡಾಯ ಚಳವಳಿಯ ಮೂಲಕ ಪ್ರಗತಿಪರ ದನಿಯಾಗಿಯೂ ಹೊರಹೊಮ್ಮಿದವು. ಮನು ಬಳಿಗಾರರು ಅಲ್ಲದೆ, ಅಧಿಕಾರಶಾಹಿ ವರ್ಗದಲ್ಲಿದ್ದು ಸಮಾನತೆ ಹಕ್ಕು ಬಾಧ್ಯತೆಗಳ ಬಗ್ಗೆ ಸಹಮತದ ಬಗ್ಗೆ ತಾತ್ವಿಕ ದನಿಯನ್ನು ಎತ್ತಿದವರು ಜಾತಿ ಹಾಗೂ ಜನಪ್ರಿಯತೆಗಳ ಅಬ್ಬರ ಸುರುವಾದಾಗಲೂ ಸಾಮಾಜಿಕ ಪ್ರತಿಷ್ಠಿತ ಶಕ್ತಿಗಳ ವಿರುದ್ಧ ಸದಾ ದನಿ ಎತ್ತುತ್ತಲೇ ಬಂದವರು, ಅಲಕ್ಷಿತ ವರ್ಗಗಳನ್ನು ನಿರ್ಲಕ್ಷ್ಯಕ್ಕೆ

ಗುರಿಯಾದವರನ್ನು ಮುಖ್ಯವಾಹಿನಿಗೆ ತರಬೇಕೆಂಬ ಆಶಯವನ್ನು ಹೊತ್ತವರಲ್ಲಿ ಇವರು ಒಬ್ಬರು. ಹಾಗೇ ವಿವಿಧ ಹುದ್ದೆಗಳಲ್ಲಿದ್ದಾಗಲೂ ಸಾಮಾಜಿಕ ನ್ಯಾಯ ಹಾಗೂ ಕಾನೂನು ಚೌಕಟ್ಟುಗಳ ಮೂಲಕವೇ ಅವಕಾಶ ಕಲ್ಪಿಸಿಕೊಟ್ಟವರು ಈ ಎಲ್ಲಾ ಚಿಂತನೆಗಳ ಹಿಂದೆ ಮಧ್ಯಕಾಲೀನ ಶರಣರ ತತ್ವ ಚಿಂತನೆ ಬಸವಣ್ಣನವರ ಸಾಮಾಜೀಕರಣದ ಸಮಾನತೆಯ ಆಶಯಗಳ ಮಿಳಿತವಾಗಿದೆ ಎನ್ನಬಹುದು.

ಈ ಎಲ್ಲಾ ಆಲೋಚನೆಗಳ ಹಿನ್ನೆಲೆಯಲ್ಲಿ ಮನು ಬಳಿಗಾರರವರ ಬರಹದ ಚೌಕಟ್ಟನ್ನು ಚಿಂತಿಸುವ ರೀತಿಯನ್ನು ರಚನಾತ್ಮಕ ತರ್ಕಗಳನ್ನು ಓರೆಗೆ ಹಚ್ಚಿ ನೋಡುವ ಗುಣಾತ್ಮಕ ಸಿದ್ಧಾಂತವನ್ನು, ಸಾದ್ಯಂತವಾಗಿ ಅಂಕಣಗಳ ಜೊತೆ ಚರ್ಚಿಸುತ್ತಾ ಹೋಗುವುದು ಈ ಲೇಖನದ ಉದ್ದೇಶವಾಗಿದೆ. ಮನು ಅವರು ಭಾಷೆಯೆಂಬುದು ನೋಡಾ ಬಾಂಧವ್ಯದ ಬೇರು ಎಂಬ ಲೇಖನದಲ್ಲಿ ಭಾಷೆ ಸಂಸ್ಕೃತಿ ಪ್ರದೇಶಗಳನ್ನು ಮೀರಿದ್ದು ಬೇರೆ ಬೇರೆ ಜನವರ್ಗ ಬೇರೆ ಬೇರೆ ರೀತಿ ಜೀವನ ಶೈಲಿ ಇದ್ದಾಗಲೂ ಒಂದು ಭಾಷಾ ಸಂಸ್ಕೃತಿಗೆ (ಅಥೆಂಟಿಸಿಟಿಗೆ ಒಗ್ಗೂಡಿಸುವ ಒಟ್ಟಿಗೆ ತರುವ ಅದರ ಕ್ರಿಯಾತ್ಮಕ ಶಕ್ತಿ ಬೆರಗುಗೊಳಿಸುವಂತಹದ್ದು ಒಂದು ರೀತಿಯಲ್ಲಿ ಕನ್ನಡ ಜನತೆಯನ್ನು ಒಂದು ಸರ್ವ ವ್ಯಾಪ್ತೀಕರಣಕ್ಕೆ ಗುರಿಪಡಿಸುತ್ತಲೇ ದೇಶಿ ಸಂಸ್ಕೃತಿಯನ್ನು ಹುಡುಕುವ ಪ್ರಯತ್ನವಿದೆ. ಅಂದರೆ ಪ್ರಧಾನವಾಗಿ ನಾವು ಕನ್ನಡಿಗರು ಪ್ರದೇಶ ಜಾತಿ ಭಿನ್ನವಾದರೂ ಕನ್ನಡಿಕರಣಕ್ಕೆ ಸಂಬಂಧಪಟ್ಟಂತಹ ಒಂದು ಸಂಸ್ಕೃತಿಯನ್ನಾಗಿ ಬೆಳೆಯಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡಂತೆ ಕಾಣುತ್ತದೆ.

ಮನು ಅವರ ಮತ್ತೊಂದು ಲೇಖನ "ಕನ್ನಡಿಗರ ಎರಡು ಕಣ್ಣುಗಳು" ಪಂಪನ ಕಾವ್ಯಗಳು ಪಂಪನ ಕಾವ್ಯಕ್ಕೆ ಸಂಬಂಧಿಸಿದಂತೆ ಕನ್ನಡ ವಿಮರ್ಶಾ ಕ್ಷೇತ್ರದಲ್ಲಿ ಅನೇಕ ಬರಹಗಳು ಪರಿಶೀಲನೆಯನ್ನು ನಡೆಸಿವೆ. ಇದರಲ್ಲಿ ಮನು ಬಳಿಗಾರರವರು ಪಂಪನ ಕಾವ್ಯಗಳು ಸೃಜನಶೀಲತೆಯ ವೈಶಿಷ್ಟ್ಯವನ್ನು ಹೇಳುತ್ತಲೇ ತುಂಬಾ ಮುಖ್ಯವಾದ ಕೆಲವು ವಿಚಾರಗಳನ್ನು ಕಾವ್ಯದಲ್ಲಿನ ಒಳ ವಿವರಗಳನ್ನು ಹಾಗೂ ಅನೇಕ ಹೊಳಹುಗಳನ್ನು ಸೂಚಿಸುತ್ತಾರೆ. "ಹಳಗನ್ನಡ ಕಾವ್ಯದ ಅಧ್ಯಯನದ ನೆಲೆಗಳ ಸಮಸ್ಯೆಗಳನ್ನು ಗ್ರಹಿಕೆಯ ವಿಧಾನವನ್ನು ಅರ್ಥೈಸಿಕೊಳ್ಳುವ ಸ್ವರೂಪವನ್ನು ಲೇಖನದುದ್ದಕ್ಕೂ ಚರ್ಚಿಸಿದ್ದಾರೆ. ಅಂದರೆ ಪಂಪ ನಮಗೆ ಪರಿಚಿತನಾದದ್ದೇ 21ನೇ ಶತಮಾನದಿಂದ ಆವರೆಗೆ ಕೇವಲ ಪೂಜಾಯೋಗ್ಯನಾಗಿ ಪಂಡಿತರ ಜಡ ಆಸ್ತಿಯಾಗಿ ಭದ್ರ ಕೊಠಡಿಗಳಲ್ಲಿ ಬೀಗ ಜಡಿಸಿಕೊಂಡ ಆದಿಪುರಾಣ ಎಲ್.ಬಸವರಾಜುರವರ ಶ್ರಮದಿಂದಾಗಿ ಸರಳೀಕರಣಗೊಂಡು ಆದರೆ ಇದೇನು ಸರಳ ಕೆಲಸವಲ್ಲ ಕಾವ್ಯಮಹಿಮೆ ಕನ್ನಡಿಗರ ಮನೆ ಮನ ತಲುಪಿದ್ದು ನಮ್ಮ ಸಂಸ್ಕೃತಿಯ ಚಲನಶೀಲತೆಯ ಕುರುಹು. ಅಲ್ಲೊಂದು ಇಲ್ಲೊಂದು ಅವರಿಂದ ಇವರಿಂದ ಲೇಖನಗಳ ಪಡೆದುಕೊಂಡು ಕೂಡಿ ಹಾಕಿದ ಗ್ರಂಥಕ್ಕೆ ಸಂಪಾದಕರೆಂದು ಹೆಸರು ಬರೆದುಕೊಳ್ಳುವ ತೀರಾ ಹಗುರ ಕೆಲಸ ಸಂಪಾದನೆ ಅಲ್ಲ ಅದೊಂದು ಗ್ರಂಥ ನಿರ್ಮಾಣ, ಪಠ್ಯದ ನಿರ್ಮಾಣ, ಶೋಧನೆ, ಪರಿಷ್ಕರಣೆ, ಅಂದಿನಿಂದ ಬಂಗಾರ, ಅದರಿಂದ ಅಪರಂಜಿ ಹೊರ ತೆಗೆದಂತೆ ಆ ಕೆಲಸವನ್ನು ಎಲ್. ಬಸವರಾಜು ಮಾದರಿಯಾಗುವಂತೆ

ಮಾಡಿದ್ದಾರೆ, ಅವರು ಶತಮಾನದ ಪ್ರತಿಭೆ” ಇತ್ಯಾದಿ ಹೇಳಿ ಮುಗಿಸಿ ಬಂದು ಕೂಡ್ರುವ ಮೊದಲು ಕಿ.ರಂ. ತನ್ನ ವಿದ್ಯಾಗುರು (ಬಸವರಾಜುರವರಿಗೆ) ನೆಲಮುಟ್ಟಿ ನಮಸ್ಕರಿಸಿದರು ! ತಕ್ಷಣ ನನಗೆ ಪಂಪನ ಕಾವ್ಯಧರ್ಮ, ಬಸವರಾಜುರವರ ಪ್ರತಿನಿರ್ಮಾಣ ಧರ್ಮ, ಕಿ.ರಂ ರವರ ವಿಮರ್ಶಾ ಮತ್ತು ಶಿಷ್ಯಧರ್ಮ ಈ ನಾಲ್ವರ ಕೂಡಲ ಸಂಗಮವಾಯಿತು ಎಂದೇ ಅನಿಸಿತು ಅದೊಂದು ಹೃದಯಸ್ಪರ್ಶಿ ದೃಶ್ಯವೇ! ದಿಟ.

ಹೀಗೆ ಹಳಗನ್ನಡದ ಪಠ್ಯಗಳ ಜೊತೆ ನಡೆಸಿದ ಸಂಪಾದನೆಯ ಪ್ರಯೋಗವು ಹೊಸ ಕಾಲದ ಬರಹರೂಪಗಳಿಗೆ ಮಾತಿನ ಲಯಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು ಎಂಬುದನ್ನು ಓದು ಎನ್ನುವುದರ ಅರ್ಥದ ನಿರಂತರತೆಯನ್ನು ಹಳಗನ್ನಡ ಕಾವ್ಯ ಕುರಿತು ಮನು ಬಳಿಗಾರ್‌ರವರು ಹೇಳುತ್ತಾರೆ ಮನು ಬಳಿಗಾರ್ ಅವರು ವಚನ ಸಾಹಿತ್ಯದಲ್ಲಿ ಅಭಿವ್ಯಕ್ತವಾಗಿರುವ ಬೆಳಕ-ಬೆಡಗ ಬೆನ್ನತ್ತಿ ಎಂಬ ಪ್ರತಿಮಾ ಸೃಷ್ಟಿಯನ್ನು ತಮ್ಮ ಲೇಖನಕ್ಕೆ ಶೀರ್ಷಿಕೆಯನ್ನಾಗಿ ಬಳಸಿಕೊಳ್ಳುವುದರ ಹೀಗೆ ಹಿಂದೆ ಸಮಕಾಲೀನ ಸಂದರ್ಭದ ಸನ್ನಿವೇಶಕ್ಕೆ ಅನ್ವಯಿಸಿಕೊಂಡು ನಮ್ಮೆದುರಿಗೆ ಚೆನ್ನಾಗಿ ಚರ್ಚೆ ಮಾಡಿದ್ದಾರೆ. ಬೆಳಕು-ಅರಿವು-ಧರ್ಮ ಮೂರರ ಸಮ್ಮಿಳಿತ “ದೀಪಾವಳಿ”ಯಲ್ಲಿದೆ ಇದೊಂದು ಧಾರ್ಮಿಕ ಆಚರಣೆಯಾಗಿದ್ದರಿಂದ, ಪಂಪನ ಈ ಉಕ್ತಿ ನೋಡಿ “ಅರಿವಂಪೊಸಯಿಸುವದು ಧರ್ಮಂ” (ಆದಿಪುರಾಣ) ಯಾವುದು ಅರಿವು (ಜ್ಞಾನ) ವನ್ನು ಹೊಸತುಗೊಳಿಸುತ್ತದೊ, ನವೀಕರಿಸುತ್ತದೊ ಅದು ಧರ್ಮ, ಜ್ಞಾನ ಜಿಡ್ಡಾದಾಗ ಧರ್ಮ ಗೊಡ್ಡಾಗುತ್ತದೆ. ಪಾತ್ರೆಗಳ ಕಿಲುಬು ತೊಳೆದಂತೆ, ಕಾಲಕಾಲಕ್ಕೆ ಕಲಾಯಿ ಮಾಡಿಸಿದಂತೆ ಸಮಾಜದೊಳಗಣ ಹೋಗಲಾಡಿಸುವುದೇ ನಿಜವಾದ ಧರ್ಮ, ಹೊಸ ಹೊಸ ಆವಿಷ್ಕಾರಗಳನ್ನು ಜೀವನ ಮೌಲ್ಯಗಳನ್ನು ಒರೆಗೆ ಹಚ್ಚಿ ಒಳಗೊಳ್ಳುವ/ನಿರಾಕರಿಸುವ ಚಲನಶೀಲತೆಯನ್ನು ಉಳಿಸಿಕೊಂಡು ತಿಳುವಳಿಕೆಯ ಪರಿಧಿಯನ್ನು ವಿಸ್ತರಿಸುವುದೇ ಧರ್ಮದ ಗುಣಧರ್ಮ.

ಹೀಗೆ ಮನು ಬಳಿಗಾರ್‌ರವರು ಬೆಳಕ-ಬೆಡಗು ಅಂಕಣದಲ್ಲಿ ಬಣ್ಣಗಳ ನಿಗೂಢ ವಲಯವನ್ನು ಭಿತ್ತಿಯನ್ನಾಗಿಸಿಕೊಂಡು ಬದುಕಿನ ಶೋಧನೆಯನ್ನು ಮಾಡುವ ಪ್ರಾದೇಶಿಕ ಸಂಸ್ಕೃತಿಯ ಅಭಿವ್ಯಕ್ತಿಯನ್ನು ಬೆಳಕಿನ ಮೂಲಕ ಪ್ರಕಟಗೊಳ್ಳುವ ವಿಭಿನ್ನ ಆಶಯಗಳನ್ನು ಕ್ರಿಯಾಶೀಲ ಆಯಾಮಗಳನ್ನು ಪ್ರಕಟಿಸುವಲ್ಲಿ ಈ ಲೇಖನದ ಅಂಕಣ ಸಮರ್ಥವಾಗಿದೆ. ಜೊತೆಗೆ ದೀಪಾವಳಿಯ ಪ್ರತಿ ಹಣತೆಯಲ್ಲೂ ಬೆಳಕಿರುವಂತೆ ಪ್ರತಿಮಾನವನಲ್ಲೂ ಈ ಪರಂಜ್ಯೋತಿ ಬೆಳಗಲು ಸಾಧ್ಯವೆಂಬ ಆತ್ಮವಿಶ್ವಾಸ ಮೂಡಿಸುತ್ತಾರೆ.

ಮನು ಬಳಿಗಾರ್‌ರವರ ಅಂಕಣದ ಇನ್ನೊಂದು ವಿಶಿಷ್ಟ ಲೇಖನ ಕನ್ನಡ ಸಾಹಿತ್ಯ ಚರಿತ್ರೆಯ ಚರಿತ್ರೆ ಈ ಲೇಖನವು ಕನ್ನಡ ಸಾಹಿತ್ಯದ ಚರಿತ್ರೆಯ ಲಕ್ಷಣ ಯಾವುದು ಎನ್ನುವ ಪ್ರಶ್ನೆಯನ್ನು ವಿಸ್ತರಿಸಿಕೊಳ್ಳುತ್ತಲೇ ಭಾರತದ ಚರಿತ್ರೆಯ ಸಾವಿರಾರು ವರ್ಷಗಳ ಕಾಲ ಅವಜ್ಞೆಗೆ ಒಳಗಾಗಿದ್ದರಿಂದ ಪ್ರಾದೇಶಿಕ ಭಾಷೆ ಹಾಗೂ ಸಾಹಿತ್ಯದ ಇತಿಹಾಸ ಕೂಡ ಅದರಿಂದ ಭಿನ್ನವಾಗಿರಲು ಸಾಧ್ಯವಾಗಲಿಲ್ಲ. ಭಾರತದ ತೀರಾ ಹಳೆಯ ಹಾಗೂ ಪ್ರಮುಖ ಭಾಷೆಗಳಲ್ಲಿ ಕನ್ನಡ ಮುಂಚೂಣೆಯ ಸ್ಥಾನದಲ್ಲಿದ್ದರೂ ಕನ್ನಡ ಸಾಹಿತ್ಯ ಚರಿತ್ರೆಯ ಓದು ಕನ್ನಡಿಗರ

ಕನಸಾಗಿಯೇ ಉಳಿದುಕೊಂಡು ಬಂತು. ಹೀಗಾಗಿ ಇಪತ್ತನೆಯ ಶತಮಾನದ ಪೂರ್ವಾರ್ಧ ಈ ದಿಶೆಯಲ್ಲಿ ಬಹಳ ಮಹತ್ವದ ಪರ್ವವೆಂದೇ ಹೇಳಬಹುದು. ಮೇಲೆ ಹೇಳಿದ ರೀತಿಯ ಚಾರಿತ್ರಿಕ ಪದ್ಧತಿಯೊಂದು ಬೆಳೆಯದೇ ಸಾಮಾಜಿಕ ವಿಚಾರಗಳನ್ನು ತಿಳಿಯಲು ಸಾಧ್ಯವಿಲ್ಲವೆಂಬುದು ದಿಟ. ಹೀಗಾಗಿ ಕನ್ನಡ ಸಾಹಿತ್ಯದ ಚರಿತ್ರೆಯ ಚರಿತ್ರೆ ತಿಳಿಯಲು ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಪ್ರತಿಪಾದನೆಯಾಗಿಟ್ಟುಕೊಂಡು ಕವಿ ಕಾಲ ಕಾವ್ಯ ಪ್ರದೇಶಕ್ಕೆ ಅನುಗುಣವಾಗಿ ಸಾಹಿತ್ಯ ಚರಿತ್ರೆಯ ಸಂಪಾದಕತ್ವದ ಬಗ್ಗೆ ಮತ್ತು ಮಹತ್ವದ ಕಾರ್ಯಗಳ ಬಗ್ಗೆ ಈ ಲೇಖನ ವಿವರಿಸುತ್ತದೆ.

ಮನು ಬಳಿಗಾರ್‌ರವರು 'ಎದ್ದು ಬಂದ ಬುದ್ದನಿಲ್ಲಿ ನೆಲೆಸಿನಿಂದನೊ' ಎಂಬ ಅಂಕಣದಲ್ಲಿ ಬುದ್ಧನ ಚಾರಿತ್ರಿಕ ವಿವರಗಳ ಕುರಿತು ಹಲವು ಮಾಹಿತಿಗಳನ್ನು ಈ ಅಂಕಣದಲ್ಲೂ ಹೇಳುತ್ತಾರೆ. ಬುದ್ಧ ಒಂದು ದಂತ ಕತೆಯೇ? ಇಪ್ಪತ್ತೈದು ಶತಮಾನಗಳ ಹಿಂದೆ ಸಿದ್ದಾರ್ಥ ಗೌತಮ ಎಂಬ ರಾಜಕುಮಾರ ಬುದ್ಧನಾದ ಎಂಬ ಕತೆಯನ್ನು ನಾವು ಕೇಳಬಲ್ಲೆವು ಅಂಥ ಒಬ್ಬ ವ್ಯಕ್ತಿ ಇದ್ದನೋ ಇಲ್ಲವೋ ಎಂಬುದು ಯಾರಿಗೆ ಗೊತ್ತು? ಅದೊಂದು ಕಟ್ಟುಕತೆ ಆಗಿದ್ದಿರಬಹುದು. ಯಾತನೆ ಅನುಭವಿಸುತ್ತಿದ್ದ ಜನಸಮೂಹದ ಪಾಲಿಗೆ ಅದೊಂದು ಅಫೀಮಿನಂತೆ ಕೆಲಸ ಮಾಡಿದ್ದಿರಬಹುದು. ಬುದ್ಧ ಒಬ್ಬ ಐತಿಹಾಸಿಕ ವ್ಯಕ್ತಿಯೇ ಅಥವಾ ಅಲ್ಲವೇ ಎಂದು ಯಾರು ಹೇಳಬಲ್ಲರು? ಬುದ್ಧನ ಹೆಸರಿನಲ್ಲಿ ಎಂತೆಂತಹ ಕತೆಗಳು ಚಾಲ್ತಿಯಲ್ಲಿದೆ ಎಂದರೆ ಅವನು ಚಾರಿತ್ರಿಕ ವ್ಯಕ್ತಿಯೋ ಅಥವಾ ಒಂದು ಐತಿಹ್ಯವೋ ಎಂದು ಕೆಲವು ಸಲ ಅನುಮಾನವಾಗುತ್ತದೆ. ಬುದ್ಧನಿಗೆ ಜ್ಞಾನೋದಯವಾದಾಗ ಸ್ವರ್ಗಲೋಕದ ದೇವತೆಗಳು ಧರೆಗಿಳಿದು ಬಂದರಂತೆ, ಅವನ ಸುತ್ತಲೂ ನೆರೆದು ನೃತ್ಯ ಗಾಯನಗಳಲ್ಲಿ ತಲ್ಲೀನರಾದರಂತೆ! ಇದನ್ನೆಲ್ಲಾ ಯಾರಾದರೂ ಐತಿಹಾಸಿಕ ಘಟನೆ ಎಂದು ಕರೆಯುವರೇ! ಎಂಬ ಪ್ರಶ್ನೆಗೆ ಮನು ಬಳಿಗಾರ್‌ರವರು 13 ಹಾಗೂ 14ನೆಯ ಬೃಹತ್ ಬಂಡೆ ಶಾಸನಗಳ ಸನ್ಮತಿ ಶಾಸನದಲ್ಲಿ ದೇವನಾಂಪ್ರಿಯ ಪ್ರಿಯದರ್ಶಿ ಅಶೋಕ ಎಂದು ಕರೆದುಕೊಂಡಿದ್ದನ್ನು ಬುದ್ಧನ ಇತಿಹಾಸ ಬೋಧನೆ ಸಂದೇಶಗಳು ಅನಾವರಣಗೊಂಡಿದ್ದನ್ನು ವಿವರಿಸುತ್ತಾರೆ. ಹಾಗೇ ಇವತ್ತಿನ ಸಮಕಾಲೀನ ಸಂದರ್ಭದ ಬೌದ್ಧ ವಿಹಾರವನ್ನು ಮೆಲುಕು ಹಾಕುತ್ತಾರೆ ಇದೊಂದು ಧರ್ಮ ಚರಿತ್ರೆಗಳ ವಿಶಿಷ್ಟ ಸಂಗಮದ ಲೇಖನವಾಗಿದೆ.

ಬಸವಾ ಎಂದು ಕರೆದರೆ ಹುಲಿಯಂತೆ ಬರಬೇಕು ಎಂಬ ಈ ಅಂಕಣ ಸುಮಾರು ಮೂರು ಮುಖ್ಯ ಅಂಶಗಳನ್ನು ಚರ್ಚಿಸಲು ದಾರಿ ಮಾಡಿಕೊಟ್ಟಿದೆ 1.ಜಾನಪದ ಪರಿಸರ 2.ಗ್ರಾಮೀಣ ಸಂಸ್ಕೃತಿ 3.ಆಹಾರ ಉತ್ಪನ್ನಗಳು ಆರೋಗ್ಯ ಪ್ರದಾಯಕ ಎಂಬ ಚಿಂತನ ನಿರ್ಮಿತಿಯನ್ನು ಹೇಳುತ್ತದೆ. ಜಾನಪದ ಪರಿಸರ ಎನ್ನುವುದು ನಮ್ಮ ಪ್ರಾಕೃತಿಕ ಸಾಂಸ್ಕೃತಿಕ ಪರಿಸರವೆಂಬ ಅರ್ಥದಲ್ಲಿ ತಿಳಿಯುವುದಾಗಿದೆ. ನಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ಸಂಬಂಧಗಳ ಅಂತರ್ ಪ್ರಕ್ರಿಯೆಗಳ ಒಟ್ಟು ಮೊತ್ತದಂತೆ ದೇಶೀ ಸಂಸ್ಕೃತಿ ಎಲ್ಲಾ ಸಂಬಂಧಗಳ ಅಭಿವ್ಯಕ್ತಿಯಾಗಿ ವ್ಯಕ್ತವಾಗಿದೆ. ಉದಾ: ಅಧ್ಯಯನ ದೃಷ್ಟಿಯಿಂದ ಈ ಊಟವನ್ನು

ಮೂರ್ನಾಲ್ಕು ಭಾಗಗಳನ್ನಾಗಿ ವಿಂಗಡಿಸುವುದು ಸೂಕ್ತ; ದಿನನಿತ್ಯದ ಸಾಮಾನ್ಯ ಊಟ, ಹಬ್ಬಹರಿದಿನಗಳ, ತುರ್ತು ಸಂದರ್ಭಗಳ ವಿಶೇಷ ಉಟ, ಫೈಲ್ವಾನವರ ಕಸುವುಳ್ಳ ಊಟ ಇತ್ಯಾದಿ ನಮ್ಮ ಹಳ್ಳಿಗಳಲ್ಲಿ ಆಗಿನ ಪ್ರಮುಖ ಬೆಳೆ ಜೋಳ, ಬಿಳಿಜೋಳದ ರೊಟ್ಟಿ ಬಡವ ಶ್ರೀಮಂತರೆನ್ನದೆ ಎಲ್ಲರ ಮನೆಯಲ್ಲಿಯೂ ಇರಲೇಬೇಕಾದ ಭಾಗ ರೊಟ್ಟಿಯಲ್ಲೂ ಬಿಸಿರೊಟ್ಟಿ ಬಡಕ/ ಕಟಕರೊಟ್ಟಿ, ಮೆತ್ತನ್ನ (ಮೃದು) ರೊಟ್ಟಿ, ಸೆಕ್ಕಿ (ಒಣ) ರೊಟ್ಟಿ ಹೀಗೆ ದೊಡ್ಡ ಪಟ್ಟಿಯೇ ಇದೆ. ರೊಟ್ಟಿ ಯಾವುದೇ ಇರಲಿ ಅದರೊಡನೆಯೆ ವ್ಯಂಜನವಾಗಿ ಕೆಲ ಚಟ್ನಿ, ಮಿಜ್ಜಿ (ಕೆಂಪು ಮೆಣಸಿನಕಾಯಿ) ಹಿಂಡಿ ಇತ್ಯಾದಿ ಅವರವರ ರುಚಿ ಹಾಗೂ ಬೇಡಿಕೆ ಪ್ರಕಾರ ಮೇಲಾಗಿ ತೊಗರಿ, ಹೆಸರು, ಅಲಸಂಡಿ ಹುರುಳಿ, ಕಡಲೆ ಮುಂತಾದ ಬೆಳೆಕಾಳುಗಳ ಪಲ್ಯ ಇವುಗಳಿಗೆ ಕಡ್ಡಿ ಕಾಳುಗಳು ಎನ್ನುತ್ತಾರೆ. ಹೀಗೆ ಮನು ಬಳಿಗಾರ್ ರವರು ಒಂದು ಪ್ರದೇಶದ ಆಹಾರ ವಿಧಾನವನ್ನು ಆರೋಗ್ಯದ ಹಿನ್ನೆಲೆಯಲ್ಲಿ ಚರ್ಚಿಸುತ್ತಾ ವಿವಿಧ ತಿನಿಸುಗಳ ಜೊತೆ ನಮ್ಮನ್ನು ಬೆರಗಾಗಿಸುವಷ್ಟು ಸರಳವಾಗಿ ಯೋಜಿತ ಕ್ರಮದಂತೆ ಜೋಡಿಸಿ ಸಹಜ ಸ್ಫೂರ್ತಿಯಲ್ಲಿ ಹಲಬಗೆಯ ಉತ್ಪನ್ನಗಳ ರುಚಿಕಟ್ಟುಗಳನ್ನು ಮಿಂಚುಗಳನ್ನು ಸೈದ್ಧಾಂತಿಕರಿಸಿ ಮಂಡಿಸಿದ ರೀತಿ ವಿಶಿಷ್ಟ ಬಗೆಯಾಗಿದೆ. ಹೀಗೆ ಪೌಷ್ಟಿಕ ಆಹಾರ ಉತ್ಪನ್ನಗಳನ್ನು ಜಾಗತೀಕರಣದ ಬ್ರಾಂಚ್ ಉತ್ಪನ್ನಗಳಿಗಾಗಿ ವಿವರಿಸುವ ಆಧುನಿಕ ಜಗತ್ತಿನ ವ್ಯವಹಾರದ ಉಡಾಫೆಗಳನ್ನು ಸೂಕ್ಷ್ಮವಾಗಿ ಟೀಕಿಸುತ್ತಾರೆ. ಒಟ್ಟಾರೆಯಾಗಿ ಮನು ಬಳಿಗಾರ್‌ರವರ ಬೆಳಕ-ಬೆಡಗು ಬರಹಗಳು ಕೇವಲ ಸಂಸ್ಕೃತಿ ಚಿಂತನೆಯ ಅರ್ಥವನ್ನು ನಿರ್ಧಿಷ್ಟಗೊಳಿಸುವುದಲ್ಲ ಬದಲಿಗೆ ಅರ್ಥದ ಅನಂತ ಸಾಧ್ಯತೆಗಳನ್ನು ವಿಸ್ತರಿಸುತ್ತವೆ. ಜೊತೆಗೆ ಸಾಹಿತ್ಯೇತರವಾದ ಸಾಮಾಜಿಕ ವಿಷಯಗಳು ಸಾಂಸ್ಕೃತಿಕ ವಿವರಗಳು ಆಡಳಿತಾತ್ಮಕ ಸಂಗತಿಗಳು ಕೂಡ ಇಲ್ಲಿನ ಅಂಕಣದ ಬರಹದ ವಸ್ತುಗಳಾಗಿವೆ. ಹೀಗೆ ಮನು ಬಳಿಗಾರರವರ ಬರಹಗಳು ಅಂಕಣ ಸಾಹಿತ್ಯದ ಹಲವು ದಾರಿಗಳನ್ನು ಕಾಣಿಸುತ್ತಲೇ ಅರ್ಥಪೂರ್ಣವಾದ ಚಿಂತನೆಗೆ ಗುರಿಪಡಿಸುತ್ತವೆ.

❖

# ಮನು ಬಳಿಗಾರರ 'ಸಂಸ್ಕೃತಿ ವಿಹಾರ' : ಸಂಸ್ಕೃತಿ ದರ್ಶನ

ಡಾ.ಹಾ.ಮ.ನಾಗಾರ್ಜುನ

ಮನು ಬಳಿಗಾರರು ಕನ್ನಡ ನಾಡು-ನುಡಿ ಸಂಸ್ಕೃತಿಯ ಕುರಿತು ಅತ್ಯಂತ ಕಾಳಜಿವಹಿಸುತ್ತಿರುವ ಈ ಕಾಲದ ಬಹುಮುಖ ಪ್ರತಿಭೆಯ ಬರಹಗಾರರು. ಹದಿನಾರಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಬಳಿಗಾರರ ಸಂಸ್ಕೃತಿ ವಿಹಾರ ವಿಮರ್ಶಾ-ಚಿಂತನಾ ಕೃತಿ ಅತ್ಯಂತ ಮಹತ್ವಪೂರ್ಣ ಕೃತಿ ಎನಿಸಿದೆ. ನಮ್ಮ ನಡುವಿನ ಅನೇಕ ಸವಾಲು ಸಮಸ್ಯೆ ಪರಿಹಾರಗಳನ್ನು ಕುರಿತ ಬರಹಗಳು ಇಲ್ಲಿವೆ; ಹಾಗೆಯೇ ಸಾಹಿತ್ಯಕ್ಕೆ ಸಂಬಂಧಿಸಿದ ವಿಮರ್ಶಾ ಲೇಖನಗಳೂ ಇವೆ. ಈ ಕೃತಿಯಲ್ಲಿನ ಬಳಿಗಾರರ "ಕುವೆಂಪು

ಸಾಹಿತ್ಯದಲ್ಲಿ ಶೂದ್ರರ ಸಂಸ್ಕೃತಿ ದರ್ಶನ" ಎಂಬ ಲೇಖನ ಕುವೆಂಪುರವರ ಒಟ್ಟು ಸಾಹಿತ್ಯ ಕೃಷಿಯನ್ನು ಇಟ್ಟುಕೊಂಡು ಕುವೆಂಪುರವರು ಶೂದ್ರ ಸಂಸ್ಕೃತಿಯ ಪ್ರತೀಕವಾಗಿ ತಳಮೂಲದ ಸಂಸ್ಕೃತಿಯನ್ನು ಕುರಿತು ತಾಳಿದ ನಿಲುವುಗಳು ಎಂತಹವು ಎಂಬುದನ್ನು ಕಾವ್ಯ, ನಾಟಕ, ಕಾದಂಬರಿ, ವೈಚಾರಿಕ ಬರಹಗಳನ್ನು ಮುಂದಿಟ್ಟುಕೊಂಡು ಚರ್ಚಿಸಿದ್ದಾರೆ.

20ನೆಯ ಶತಮಾನದಲ್ಲಿ ಕನ್ನಡ ಸಾಹಿತ್ಯದ ಮೇರು ಪರ್ವತವೆನಿಸಿದವರು ಕುವೆಂಪು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಕುವೆಂಪು ಪ್ರಕೃತಿ ಆರಾಧಕರು. ನಿಸರ್ಗದ ರುದ್ರರಮಣೀಯ ವರ್ಣನೆ ಅವರ ಸಾಹಿತ್ಯದ ಜೀವಾಳವೆನಿಸಿದರು; ವೈಚಾರಿಕ ಪ್ರಜ್ಞೆ ಆಧ್ಯಾತ್ಮಿಕ ಆವಿಷ್ಕಾರ, ಮಾನವೀಯ ದೃಷ್ಟಿಗಳನ್ನು ಸಾಹಿತ್ಯದಲ್ಲಿ ತರದೆ ಇರಲಿಲ್ಲ. ಹಾಗಾಗಿಯೇ ಬಳಿಗಾರರು "ಜಡ ಸಂಸ್ಕೃತಿಯೊಂದನ್ನು ಚೈತನ್ಯ ಸಂಸ್ಕೃತಿಯನ್ನಾಗಿ ಪರಿವರ್ತಿಸುವಲ್ಲಿ ಕುವೆಂಪು ಸಿದ್ಧಹಸ್ತರು" ಎಂದು ಅಭಿಪ್ರಾಯಪಟ್ಟಿದ್ದಾರೆ. ವೈದಿಕ ಧರ್ಮವನ್ನು ಸಾಹಿತ್ಯದ ಹೊಸ ಹೊಳಹಿನೊಂದಿಗೆ ನೋಡುತ್ತ ಹೊಸ ಸಂಸ್ಕೃತಿಗಾಗಿ ತಹತಹಿಸುವ ಕುವೆಂಪು ಜಡ ಸಂಸ್ಕೃತಿಯನ್ನು ವಿರೋಧಿಸಿ ಚೈತನ್ಯಪೂರ್ಣ ಸಂಸ್ಕೃತಿಯನ್ನಾಗಿ ಪರಿವರ್ತಿಸುವಲ್ಲಿ ಕುವೆಂಪು ಪ್ರಯತ್ನಿಸಿರುವುದು ಅವರ ಸಾಹಿತ್ಯ ಕೃತಿಗಳಲ್ಲಿ ಕಾಣುತ್ತೇವೆ. ಅಂತಹ ಅನೇಕ ವಿಚಾರಗಳು ಇಲ್ಲಿ ಚರ್ಚಿತಗೊಂಡಿರುವುದು ಗಮನಾರ್ಹವಾದುದು.

ಮೇಲು ಕೀಳು, ಶ್ರೇಷ್ಠ ಕನಿಷ್ಠ, ಉಚ್ಚ-ನೀಚ, ಸ್ಪೃಶ್ಯ- ಅಸ್ಪೃಶ್ಯ ಎಂಬ ತಾರತಮ್ಯ ಭಾವದ ಈ ನಾಡು ತನ್ನ ಜಡ್ಡುಗಟ್ಟಿದ ಮೌಢ್ಯ, ಕಂದಾಚಾರ, ಜಾತೀಯತೆಯನ್ನು ಬಿಟ್ಟು ಸ್ಥಾಯಿಭಾವವನ್ನಳಿಸಿ ಸಮಾನತೆ ಸಮಭಾವಗಳ ಸಮತತ್ವವೊಂದನ್ನು ಹುಟ್ಟು ಹಾಕುತ್ತಾರೆ ಎಂದು ಅರಹುತ್ತಾರೆ. ಅಲ್ಲದೆ ಕುವೆಂಪುರವರು ಸಾಹಿತ್ಯ ಕೃತಿಗಳ ಮೂಲಕ ಪಂಚತತ್ವಗಳನ್ನು ಪ್ರತಿಪಾದಿಸಿ ತೋರಿಸಿರುವುದನ್ನು ನಿಖರವಾಗಿ ಗುರುತಿಸಿ ಹೇಳುತ್ತಾರೆ.

"ತಾವು ಹುಟ್ಟಿದ್ದು ಧಾರ್ಮಿಕವಾಗಿ ಅಪ್ರತಿಷ್ಠಿತ ಪರಿಸರದಲ್ಲಿ ಎಂಬ ನೋವು ನಿರಂತರ ಜಾಗೃತಿಯಾಗಿ ಕುವೆಂಪು ಕೃತಿಗಳಲ್ಲಿ ಮೂಡಿ ಬರುತ್ತದೆ." (ಸಂಸ್ಕೃತಿ: ಮನುಬಳಿಗಾರ ಪುಟ7) ಎಂದು ಹೇಳಿರುವುದು ಸತ್ಯವೇ ಸರಿ. ಹಾಗಾಗಿಯೇ ಚಾತುರ್ವರ್ಣ ಪದ್ಧತಿಯನ್ನು ವಿರೋಧಿಸಿ ಮನುಧರ್ಮ ಶಾಸ್ತ್ರವನ್ನು ಅಲ್ಲಗಳೆಯುತ್ತಾರೆ. ಅದರ ಪರ್ಯಾಯವಾಗಿ 'ಎದೆಯಶಾಸ್ತ'ವೊಂದನ್ನು ಸ್ಥಾಪಿಸಿ 'ಮನು ನಿನಗೆ ನೀನು' ಎಂದು ಸಾರಿದರು ಎಂಬ ನಿಲುವನ್ನು ಕಂಡುಕೊಂಡಿದ್ದಾರೆ. ಚಾತುರ್ವರ್ಣದಲ್ಲಿ ಕೊನೆಯ ವರ್ಗವಾಗಿ ಕಾಣುವುದು ಶ್ರಮಿಕವರ್ಗ ಇವರು 'ದುಡಿಮೆಯೇ ದುಡ್ಡಿನ ತಾಯಿ', 'ಕಾಯಕವೇ ಕೈಲಾಸ', 'ದುಡಿಮೆಯೇ ತಮ್ಮ ಬದುಕಿನ ಅಂತಿಮ ಸತ್ಯದ ಮಾರ್ಗ'ವೆಂದು ನಂಬಿದವರು ಶ್ರಮ ಸಂಸ್ಕೃತಿಯ ವರ್ಗದ ಪ್ರತಿನಿಧಿಯಾಗಿ ಕುವೆಂಪು ಸಾಹಿತ್ಯದಲ್ಲಿ ಧ್ವನಿಯೆತ್ತಿರುವುದನ್ನು ಗುರುತಿಸಿದ್ದಾರೆ. 'ಕೊಳಲು' ಕವನ ಸಂಕಲನದಲ್ಲಿ 'ಗೊಲ್ಲನ ಬಿನ್ನಹ' ಕವಿತೆಯು ಕುವೆಂಪುರವರು ತಮ್ಮನ್ನು ಕಾಡಿನಗೊಲ್ಲ ಎಂದು

ಕರೆದುಕೊಂಡಿರುವುದನ್ನು ಗಮನಿಸುತ್ತಾರೆ. 'ಕವಿತೆಗೆ' ಎಂಬ ಕವನ ಕಾಡಿನ ಜನಾಂಗದೊಂದಿಗೆ ಕುವೆಂಪು ತಮ್ಮನ್ನು ಸಮೀಕರಿಸಿಕೊಂಡಿದ್ದು, 'ನೇಗಿಲಯೋಗಿ' ಕವಿತೆಯಲ್ಲಿ ಶ್ರಮ ಸಂಸ್ಕೃತಿಯ ರೈತನ ಹಿರಿಮೆ ಗರಿಮೆಗಳನ್ನು ಹಾಡಿರುವುದು ವಿಶ್ಲೇಷಣೆಗೊಳಪಡಿಸಿದ್ದಾರೆ.

ನೆಲಮೂಲ ಸಂಸ್ಕೃತಿಯಲ್ಲಿನ ತಾರತಮ್ಯ ಬೇದ-ಭಾವವನ್ನು ಪ್ರಶ್ನಿಸುತ್ತಾ ಉತ್ತರ ನೀಡುತ್ತಾ ತನ್ನ ಕಾಲಕ್ಕೆ ಯಾವ ತರಹದ ಧರ್ಮ, ದೇವರು ಬೇಕು ಎಂದು ಉತ್ತರಿಸುತ್ತಾ ವೈಚಾರಿಕ ದೃಷ್ಟಿಯಿಂದ ಪ್ರಜ್ಞೆಯನ್ನು ಮೂಡಿಸಿರುವುದರ ಕುರಿತು; "ಮನುಷ್ಯ ಮನುಷ್ಯನ ಮಧ್ಯೆ ತಾರತಮ್ಯಗಳನ್ನು ಸೃಷ್ಟಿಸುವ ವೇದಶಾಸ್ತ್ರಗಳನ್ನು ಅಲ್ಲಗಳೆಯುತ್ತಾ 'ವೇದ ಮಾಡಬಲ್ಲುದೇನು? ನನ್ನ ಎದೆಯನರಿವುದೇನು?... ವೇದವಲ್ಲ ಶಾಸ್ತ್ರವಲ್ಲ ಬುದ್ಧಿಯೊರೆದುದು' ಎಂಬ ನಿರ್ಧಾರ ಪ್ರಕಟಿಸುತ್ತಾರೆ. (ಶಿವನ ಕೃಪೆಯದರಿಲಿ ಬಿಡು-ಕಲಾ ಸುಂದರಿ) ಹಾಗೆಯೇ ಭೇದಭಾವ ಮೂಲದ ಕುಲವನ್ನು ಜರಿಯುತ್ತಾ 'ಕುಲಕುಲವೆಂದೊರಲುವೆ ಏತಕೆ ಕೋಗಿಲೆಗಾವುದು ಕುಲವಿದೆ ಹೇಳು?... ಬೇಸಗೆ ಸಮಯದಿ ಬೇಸರಗೊಂಡಿರೆ ಗೊಲ್ಲನ ಕೊಳಲನು ಕೇಳಿಹೆಯೇನು?" ಎಂದು ಖಾರವಾಗಿ ಪ್ರಶ್ನಿಸುತ್ತಾ (ಕುಲ-ನವಿಲು ಸಂಕಲನ) 'ಹಳೆಮತದ ಕೊಳೆಯಲ್ಲ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ : ಬರಲಿ ವಿಜ್ಞಾನ ಸ್ವಾತಂತ್ರ್ಯ ಸಿದ್ಧಿ' ಎಂದು ಹಾರೈಸುತ್ತಾರೆ. (ತರುಣರಿರ ಎದ್ದೇಳಿ-28-10-1935)" ಎನ್ನುವಂತಹ ವಿಚಾರವನ್ನು ಗಮನಿಸಿದರೆ ವಿಮರ್ಶಕರ ಸೂಕ್ಷ್ಮವಾದ ಆಲೋಚನೆಗಳು ವಾಸ್ತವತೆಗೆ ಹತ್ತಿರವಾಗಿ ಚಿಂತನಗೊಂಡಿರುವುದು ಅರಿಯಬಹುದಾಗಿದೆ.

ದೇವರ ಅಸ್ತಿತ್ವದಲ್ಲಿ ಅಪಾರ ನಿಷ್ಠೆ ಹಾಗೂ ಆಧ್ಯಾತ್ಮಿಕ ಒಲವು ಎರಡನ್ನೂ ಹೊಂದಿದ್ದರೂ ವೈಚಾರಿಕ ದೃಷ್ಟಿಕೋನವನ್ನು ಕುಗ್ಗಿಸಿಕೊಳ್ಳದ ಕುವೆಂಪು "ದೇವರು ಅಕಸ್ಮಾತ್ ಶೋಷಣೆಗೆ ನೆಪವಾದರೆ ಅವನನ್ನೂ ನೂಕಾಚೆ ದೂರ ಎಂದು ಬದಿಗೆ ತಳ್ಳುತ್ತಾರೆ" (ಅದೇ ಪುಟ ಸಂಖ್ಯೆ-8) ಎಂದು ಸರಳವಾಗಿಯೇ ತಿಳಿಸಿದ್ದಾರೆ. 'ಗೊಬ್ಬರ' ಕವಿತೆಯನ್ನು ಕುರಿತು ಹೇಳುತ್ತಾ ಇಂಗ್ಲೀಷ್‌ರ ಆಗಮನದಿಂದ ದೇಶದಲ್ಲಾದ ಬದಲಾವಣೆ ಎಂತಹದ್ದೆಂದು ಕವಿತೆಯ ಆಳದಲ್ಲಿ ತರ್ಕಿಸಿರುವುದು ನೋಡುತ್ತೇವೆ.

ಗದ್ಯ ಸಾಹಿತ್ಯದ ವಿಚಾರ ಸಂದರ್ಭದಲ್ಲಿ ಅನೇಕ ಉದಾಹರಣೆಗಳನ್ನು ಸಂಕೇತ, ಪ್ರತಿಮೆಗಳಾಗಿ ಗುರುತಿಸಿರುವುದು ಬಳಿಗಾರರು ತೋರಿಸಿಕೊಟ್ಟಿದ್ದಾರೆ. ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಬರುವ 'ಧೂಳು' ಬಟ್ಟೆಯನ್ನು ತೊಟ್ಟಿ ನಿಂತಿರುವ ವ್ಯಕ್ತಿಯನ್ನು 'ಧೂಳು' ಎಂಬರ್ಥದಲ್ಲಿ ಶೂದ್ರ ಸಮೂಹದ ಸಂಕೇತವಾಗಿ ಬಿಂಬಿಸಿಕೊಂಡಿದ್ದಾರೆ. ಈ ಉದಾಹರಣೆಯು ಶ್ರಮ ಸಂಸ್ಕೃತಿಯ ಒಟ್ಟಾರೆ ಚಹರೆಯನ್ನು ಇಲ್ಲಿ ತೆರೆದಿಡುತ್ತಿರುವುದನ್ನು ಕಾಣಬಹುದು. ಆದರೆ ಬಳಿಗಾರರು ನೀಡಿದ ಎಲ್ಲಾ ಉದಾಹರಣೆಗಳು ನಿಖರವಾಗಿ, ಸಮಂಜಸವಾಗಿ ನೀಡಿದ ಉದಾಹರಣೆಯಾಗಿವೆ ಎಂದು ಹೇಳಲು ಕಷ್ಟ ಸಾಧ್ಯ. ಕುವೆಂಪುರವರ ಮಲೆಗಳಲ್ಲಿ ಮದುಮಗಳು ಮತ್ತು ಕಾನೂರುಹೆಗ್ಗಡತಿ ಕಾದಂಬರಿಗಳಲ್ಲಿನ ಅನೇಕ ಸನ್ನಿವೇಶ ಸಂದರ್ಭಗಳನ್ನು

ಪ್ರಸ್ತಾಪಿಸುತ್ತಾ ಆ ಸನ್ನಿವೇಶಗಳ ಹಿಂದೆ ಕುವೆಂಪುರವರಿಗೆ ಶ್ರಮ ಸಂಸ್ಕೃತಿಯ / ನೆಲಮೂಲ ಸಂಸ್ಕೃತಿಯ ಕುರಿತಾದ ಕಾಳಜಿ ಎಂತಹದ್ದೆಂದು ತಿಳಿಸಲು ಬಳಿಗಾರರು ಪ್ರಯತ್ನಿಸಿದ್ದಾರೆಂದರೆ ತಪ್ಪಾಗಲಾರದು.

'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಬರಹವನ್ನು ಕುರಿತು ಬಳಿಗಾರರು "ಆದಿ ಅನಾದಿಕಾಲದ ವೇದಶಾಸ್ತ್ರ ಹಾಗೂ ನಂಬುಗೆಗಳನ್ನೆಲ್ಲಾ ಅಂಧಾನುಕರಣೆಯಿಂದ ಸ್ವೀಕರಿಸುವುದು ಬೇಡವೆಂದು ಸ್ಪಷ್ಟಪಡಿಸುತ್ತಲೇ ಹೊಸ ವಿಚಾರ ಆಚಾರಗಳಿಗೆ ಸದಾ ಸ್ವಾಗತವಿರಲಿ ಅಂದರೆ ಹೊಸ ವಿಮರ್ಶೆಗಳೂ, ವ್ಯಾಖ್ಯಾನಗಳೂ ಬಂದೇ ಬರುತ್ತವೆ ಎಂಬ ಹಂಬಲವನು ನಿಷ್ಠೆಯನ್ನು ವ್ಯಕ್ತಪಡಿಸುತ್ತಾರೆ." (ಅದೇ ಪುಟ 12-13) ಎಂದು ಅರ್ಥೈಸಿದ್ದಾರೆ.

ನಾಟಕ ಸಾಹಿತ್ಯ ಪ್ರಕಾರವನ್ನು ಕುರಿತು ವಿಮರ್ಶಿಸುವ ಸಂದರ್ಭದಲ್ಲಿ 'ಶೂದ್ರ ತಪಸ್ವಿ' ನಾಟಕವು ಶೂದ್ರ ಸಂಸ್ಕೃತಿ ದರ್ಶನದ ಒಟ್ಟಾರೆ ನಿಲುವಿನ ಪ್ರಾತಿನಿಧಿಕ ಕೃತಿಯಾಗಿದೆ ಎಂದು ಹೇಳುತ್ತಾ ಮೂಲ ರಾಮಾಯಣದ ಉತ್ತರಕಾಂಡದ ಒಂದು ಪ್ರಸಂಗ ಆಯ್ದುಕೊಂಡು ಅದನ್ನು ಸಮಕಾಲೀನತೆಗೆ ಬದಲಾವಣೆ ಮಾಡಿ ಶೂದ್ರನೊಬ್ಬ ತಪಸ್ವಿಯಾದ ಪ್ರಸಂಗವನ್ನು ಹೆಣೆದುಕಟ್ಟಿರುವುದರ ಹಿಂದೆ ಜಾತಿ ವಿನಾಶದ ಆಶಯದ ಹಂಬಲವು ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಇಲ್ಲಿನ ರಾಮನೆಂದರೆ "ಇಲ್ಲಿ ರಾಮ ಕೇವಲ ಅಂಧಾನುಕರಣೆಯ ಸದಾ ಸಾಂಪ್ರದಾಯಿಕ ರಾಜನಾಗುವುದಿಲ್ಲ, ನಿಜವಾದ ಧರ್ಮ ಆವುದು ಎಂದು ವಿವೇಚಿಸುವ ಬುದ್ಧಿಯವನಾಗುತ್ತಾನೆ. ಹೀಗೆ ದೇವರಿಗೂ ವಿವೇಕವನ್ನು ತುಂಬಿದ್ದು ಆತನೂ ವಿಚಾರಿಸುವಂತೆ ಮಾಡಿದ್ದು ಕುವೆಂಪು ಹಿರಿಮೆ ಎಂದು ಹೇಳಬಹುದು" (ಅದೇ ಪುಟ ಸಂಖ್ಯೆ-14) ಎಂದಿದ್ದಾರೆ.

ಒಟ್ಟಾರೆಯಾಗಿ ಸಾಹಿತ್ಯದಲ್ಲಿ ಕುವೆಂಪುರವರು ಸರ್ವೋದಯದ ಕನಸು ಕಂಡಿದ್ದಾರೆ. "ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ!" ಎಂಬ ಅವರ ಪ್ರಸಿದ್ಧ ಹೇಳಿಕೆ ಪೂರ್ಣದೃಷ್ಟಿಯನ್ನು ಹೊತ್ತು ಸಾಗಿದ ಚೈತನ್ಯಪೂರ್ಣ ಭವ್ಯಭಾರತ ಕನಸಾಗಿದೆ. ಅಲ್ಲದೆ ಕುವೆಂಪುರವರು ಹುಟ್ಟು ಹಾಕಿದ ಅನೇಕ ಹೊಸ ಪದಗಳಿಗೆ ವಿಶೇಷ ಜೀವಂತಿಕೆಯ ಅರ್ಥವಿರುವುದು ಕಾಣುತ್ತೇವೆ. ಅದನ್ನು ಸಹ ಬಳಿಗಾರರು ಇಲ್ಲಿ ಚರ್ಚೆಗೆ, ವಿಮರ್ಶೆಗೆ ಒಳಪಡಿಸುವುದು ಮಹತ್ವದ ವಿಚಾರವೆಂದೇ ಹೇಳಬೇಕು.

ಅವರ ಇನ್ನೊಂದು 'ಶಿಥಿಲಗೊಳ್ಳದಿರಲಿ ಸಂಬಂಧಗಳು' ಎಂಬ ಲೇಖನ ಅವಕಾಶಗಳನ್ನು ಬಯಸಿ ಬರುವ ಸಂಬಂಧಗಳು ಹೇಗೆ ಸಂಬಂಧವನ್ನು ಪೂರ್ವಗ್ರಹಪೀಡಿತವಾಗಿ ಹೆಣೆದುಕೊಳ್ಳಲು ಪ್ರಯತ್ನಿಸಿ ವಿಫಲವಾದ ಅಂತ್ಯ ಕಾಣುತ್ತವೆ ಎಂದು ತಿಳಿಸುತ್ತದೆ. ಸಂಬಂಧಗಳು ಗಟ್ಟಿಗೊಳ್ಳಲು ಯಾವ ಬಗೆಯ ಜಾತಿ, ಧರ್ಮ, ಭಾಷೆ, ದೇಶಗಳು ಅಡ್ಡಿಯಾಗಲಾರವು ರಕ್ತ ಸಂಬಂಧವನ್ನು ಮೀರುವ ಶಕ್ತಿ ಅತ್ಯಂತ ಗಾಢವಾದ ಮಾನವ ಮಾನವರ ನಡುವಿನ ಸಂಬಂಧಕ್ಕಿದೆ (ದೇಶ, ಭಾಷೆ, ಧರ್ಮ, ಜಾತಿ ಮೀರಿ) ಎಂದು ಅರುಹಿದ್ದಾರೆ. ಯಾವುದೇ ಸಂಬಂಧವಿರಲಿ ಅದು ಸಂತಸವನ್ನು ನೀಡುವ ಬಾಂಧವ್ಯ ದೈವ ಕೃಪೆಯಾಗಿರುತ್ತದೆ. ಹಾಗಾಗಿ ನಾವು ಯಾವ ಸಂದರ್ಭದಲ್ಲೂ ಆ ಸಂಬಂಧ ಬಾಡಿ, ಬತ್ತಿಹೋಗಲಿಕ್ಕೆ ಬಿಡಬಾರದು ಎಂದು ತಿಳಿಸುತ್ತಾರೆ.

ಲೇಖಕರು ನಾವು ಸಂಬಂಧವನ್ನು ಬೆಳೆಸಿಕೊಳ್ಳಬೇಕಾದ ಸಂದರ್ಭದಲ್ಲಿ ಬಹಳ ಜಾಗರೂಕರಾಗಿ ಆಲೋಚಿಸಿ, ಮುಂದಡಿಯಿಡಬೇಕು ಎನ್ನುತ್ತಾರೆ. ನಗರ ವಾಸಿಗಳಲ್ಲಿ ಜನರು ಬದುಕುವ ಯಾಂತ್ರಿಕ ಜೀವನ ಶಾಂತಿ, ನೆಮ್ಮದಿಯಿಂದ ಬಹುದೂರ ಚಲಿಸುತ್ತಿದೆ ಹಾಗಾಗಿ ಅವರು ಅರಿಯಬೇಕಾದುದು "ಸಿರಿಸಂಪತ್ತಿನಿಂದ ಶಾಂತಿ ದೊರಕದು" (ಅದೇ ಪುಟ ಸಂಖ್ಯೆ-48) ಎಂದು ಎಚ್ಚರಿಸುತ್ತಾರೆ.

"ಜಾಗತೀಕರಣ ದಾಳಿಗೆ ಸಿಕ್ಕು ನಲಗುತ್ತಿರುವ ನಮ್ಮ ಭಾರತೀಯ ಸಂಸ್ಕೃತಿಯ ಬಹುಮುಖ್ಯ ವಿಷಯಗಳಲ್ಲಿ ಈ ಮಾನವೀಯ ಸಂಬಂಧವೂ ಒಂದು. ತೀರಾ ಯಾಂತ್ರಿಕವಾಗುತ್ತಿರುವ ಜೀವನಚಕ್ರದ ಅಡಿಯಲ್ಲಿ ನಮ್ಮನ್ನು ಪರಸ್ಪರ ಬೆಸೆಯುವ ಕೊಂಡಿಯೇ ಕಳಚಿಕೊಂಡು ಹೋಗದಂತೆ ನಾವೆಲ್ಲಾ ಜಾಗೃತಿಯಿಂದ ಅದನ್ನು ಕಾಯ್ದುಕೊಳ್ಳಬೇಕಾಗಿದೆ. ವ್ಯಕ್ತಿಗತ ಸಂಬಂಧಗಳಿಗೆ ಅದು ಗಂಡ-ಹೆಂಡತಿ, ತಂದೆ-ತಾಯಿ-ಮಕ್ಕಳು, ಸಹೋದರ ಸಹೋದರಿಯರು, ಗೆಳೆಯ-ಗೆಳೆಯರು ಪ್ರಿಯೆ-ಪ್ರಿಯಕರ ಯಾವುದೇ ಆಗಿರಬಹುದು. ಅದಕ್ಕಷ್ಟು ಮಹತ್ವ ನೀಡದ ಪಾಶ್ಚಾತ್ಯರ ಜೀವನಧರ್ಮಕ್ಕೂ ನಮ್ಮ ಅಪ್ಪಟ ಅಪರಂಜಿಯಂತಹ ಭಾರತೀಯಕ್ಕೂ ಅಪಾರವಾದ ಅಂತರವಿದೆ. ನಮ್ಮದರಿಂದಲೇ ವಿಮುಖರಾಗಿ ನಮ್ಮ ಅಮೂಲ್ಯ ಸಂಬಂಧಗಳನ್ನು ಶಿಥಿಲಗೊಳಿಸಿಕೊಳ್ಳುತ್ತಿರುವುದೊಂದು ಶೋಚನೀಯ ಸಂಗತಿ (ಅದೇ ಪುಟ ಸಂಖ್ಯೆ-49) ಎಂದು ಹೇಳಿರುವಲ್ಲಿ ಜಾಗತೀಕರಣ ಉಂಟು ಮಾಡಿರುವ ದುರಂತದ ಅರಿವು ನಮಗಾಗುತ್ತದೆ. ಒಟ್ಟಿನಲ್ಲಿ ನಮ್ಮ ಆರೋಗ್ಯ, ಆಯಸ್ಸು, ಸೃಷ್ಟಿಶೀಲತೆ, ದಕ್ಷತೆ ಇತ್ಯಾದಿಗಳು ಉನ್ನತೀಕರಣವಾಗಬೇಕಾದರೆ ನಮ್ಮ ಸಂಬಂಧ ಇನ್ನೊಬ್ಬರೊಂದಿಗೆ ಆರೋಗ್ಯಕರವಾಗಿರಬೇಕು ಎಂದು ಲೇಖಕರು ಇಲ್ಲಿ ಚಿಂತಿಸಿದ್ದಾರೆ.

ಈ ಎರಡು ಲೇಖನಗಳನ್ನು ಇಡಿಯಾಗಿ ನೋಡಿದರೆ ಬಳಿಗಾರರು ಸಂಸ್ಕೃತಿಯ ಕುರಿತು ಕುವೆಂಪುರವರ ತಾಳಿದ ನಿಲುವು ಒಂದು ಬಗೆಯದೆನಿಸಿದರೆ ಇನ್ನೊಂದೆಡೆ ಜಾಗತೀಕರಣ, ನಗರೀಕರಣ, ಆಧುನೀಕರಣದ ಹೊಡೆತಕ್ಕೆ ಮನುಷ್ಯ-ಮನುಷ್ಯರ ನಡುವಿನ ಸಂಬಂಧಗಳು ನಮ್ಮ ನೆಲಮೂಲದ ಸಂಸ್ಕೃತಿಯಿಂದ ಶಿಥಿಲಗೊಳ್ಳುತ್ತಿವೆ ಎಂಬುದನ್ನು ಅರಿತುಕೊಳ್ಳಬಹುದಾಗಿದೆ.

ಮನುಬಳಿಗಾರರ ಸಾಹಿತ್ಯ ಕೃತಿಗಳು ಗಮನ ಸೆಳೆಯುವ ಮುಖ್ಯ ಅಂಶ ಅವರ ಪಾತ್ರಗಳು ಬದುಕಿಗೆ ಬಹಳ ಹತ್ತಿರವಾದ, ಎಲ್ಲಾ ಸ್ವಾಭಾವಿಕ ಗುಣಗಳನ್ನು ಅವಗುಣಗಳನ್ನು ಹೊಂದಿರುವ ನೈಜವಾದ ಪಾತ್ರಗಳು. ವಸ್ತು-ಪಾತ್ರ-ಶೈಲಿ-ಭಾಷೆ ಇವುಗಳಲ್ಲಿನ ಅಪರೂಪದ ಹೊಂದಾಣಿಕೆಯಲ್ಲಿ ಅವರ ಕಲೆಗಾರಿಕೆ ಕಂಡುಬರುತ್ತದೆ. ಪ್ರೊ.ಕೀರ್ತಿನಾಥ ಕುರ್ತಕೋಟಿ "ಮನುಬಳಿಗಾರವರ ಶೈಲಿ ಅವರು ಭಾಷೆಯನ್ನು ದುಡಿಸಿಕೊಳ್ಳುವ ರೀತಿಗೆ ನೂರಾರು ವರ್ಷಗಳ ಸಂಸ್ಕಾರವಿದೆ" ಎಂದು ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಡಾ.ವೀಣಾ ಶಾಂತೇಶ್ವರರವರು "ಆಧುನಿಕ ಜೀವನದ ಹತ್ತು ಹಲವು ರೂಪಗಳನ್ನು ದಿನನಿತ್ಯವೂ ನೋಡಲೇಬೇಕಾದ ಅನಿವಾರ್ಯತೆಯಿರುವ ಸರ್ಕಾರಿ ಇಲಾಖೆಯಲ್ಲಿ ಬಹುಕಾಲದಿಂದ ಕಾರ್ಯ ನಿರ್ವಹಿಸುತ್ತಲಿದ್ದು ಮೌಲ್ಯಗಳಲ್ಲಿ ನಂಬಿಕೆ ಇರುವ ಸತ್ಯಶಿವದ ಬಗ್ಗೆ ಗೌರವ ಇರುವ ಸೌಂದರ್ಯದ ಬಗ್ಗೆ

ಪ್ರೀತಿ ಇರುವ ಲೇಖಕ ಮನು ಬಳಿಗಾರ್. ಅವರು ಬದುಕನ್ನು ಗ್ರಹಿಸುವ ರೀತಿಯೇ ಅನನ್ಯ." ಎಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಾರೆಯಾಗಿ ಕನ್ನಡ ಸಾಹಿತ್ಯದ ಧ್ರುವತಾರೆಯಾಗಿ ಮನುಬಳಿಗಾರರು ಸಾಹಿತ್ಯ ಕೃಷಿಗೈಯುತ್ತಿರುವುದು ಹೆಮ್ಮೆಯ ವಿಚಾರವೆಂದೇ ಹೇಳಬೇಕು.

**ಪರಾಮರ್ಶನ ಗ್ರಂಥಗಳು :**


1. ಸಂಸ್ಕೃತಿ ವಿಹಾರ- ಮನು ಬಳಿಗಾರ್
2. ಕನ್ನಡ ಸಾಹಿತ್ಯ ಸಂಸ್ಕೃತಿಕೋಶ-ಡಾ.ಚಿ.ಸಿ.ನಿಂಗಣ್ಣ
3. ವಿಮರ್ಶಾ ವಿವೇಕ- (ಸಂ) ಡಾ.ಜಿ.ಎಂ. ಹೆಗಡೆ.
4. ಸಾಂಸ್ಕೃತಿಕ ಅಧ್ಯಯನ-ಡಾ.ರಹಮತ್ ತರೀಕೆರೆ


# ಕನ್ನಡ ನಾಡು-ನುಡಿ ಸಂಸ್ಕೃತಿಯ ಸಮರ್ಥ ರಾಯಭಾರಿ

ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ

ಜೀವನ ಕ್ರೀಯಾಶೀಲವಾದಾಗ ಅದಕ್ಕೊಂದು ಅರ್ಥ ಬರುತ್ತದೆ. ಅರ್ಥಪೂರ್ಣವಾಗಿ ಬದುಕುವ ವ್ಯಕ್ತಿ ಸಮಾಜದ ಆಸ್ತಿಯಾಗುತ್ತಾನೆ. ಮಾನವ ಜೀವನದ ಸಾರ್ಥಕ ಕ್ಷಣಗಳನ್ನು ಅಮರವಾಗಿಸುವ ವ್ಯಕ್ತಿ ಆದರ್ಶನು ಆಗುತ್ತಾನೆ. ಬದುಕನ್ನು ತೆರೆದ ಕಣ್ಣುಗಳಿಂದ ದರ್ಶಿಸುವ ವ್ಯಕ್ತಿ ದಾರ್ಶನಿಕನೂ ಆಗುತ್ತಾನೆ. ಹೀಗೆ ಬಹುಮುಖಿ ವ್ಯಕ್ತಿತ್ವಗಳಿಂದ ಅನುಕರಣೀಯ ವ್ಯಕ್ತಿಯಾಗಿ ಕನ್ನಡ ನಾಡು, ನುಡಿ ಹಾಗೂ ಸಾಂಸ್ಕೃತಿಕ ರಾಯಭಾರಿಯಾದವರು ಶ್ರೀ ಮನು ಬಳಿಗಾರ ಸರ್.

ರಾಜ್ಯದ ಆಡಳಿತ ಸೇವೆಗೆ ಸಂಕಲ್ಪಬದ್ಧ ನ್ಯಾಯ ಒದಗಿಸಿದ ಶ್ರೀ ಮನು ಬಳಿಗಾರ ಅವರು ವೃತ್ತಿಯೊಂದಿಗೆ ನಾಡು-ನುಡಿ ಸಾಂಸ್ಕೃತಿಕ ಪ್ರಜ್ಞೆಗೆ ಸ್ಪಂದಿಸಿದವರು. ಅನೇಕ ಒತ್ತಡದ ಕೆಲಸ ಕಾರ್ಯಗಳ ಮದ್ಯದಲ್ಲಿಯೂ ತಾವೊಬ್ಬ ಅಪ್ಪಟ ಕನ್ನಡಿಗ ಎಂಬ ಎಚ್ಚೆತ್ತ ಪ್ರಜ್ಞೆಯಿಂದ ನಾಡಿಗೆ ಸೇವೆ ಸಲ್ಲಿಸುತ್ತಿದ್ದಾರೆ. ತಂದೆಯ ಶಿಸ್ತುಬದ್ಧ ಕೌಟುಂಬಿಕ ಗರಡಿಯಲ್ಲಿ ಪಳಗಿದ ಬಳಿಗಾರ ಅವರು ಆದರ್ಶ ಬದುಕನ್ನು ರೂಢಿಸಿಕೊಳ್ಳುವಲ್ಲಿ ಜೀವನ ಪರಿಸರ ಹಾಗೂ ತಂದೆಯವರ ಮೇರು ವ್ಯಕ್ತಿತ್ವವು ಪೂರಕವಾಗಿರುವುದು ಸತ್ಯ. ಆಡಳಿತ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು ಕಲೆ, ಸಾಹಿತ್ಯ, ಸಂಗೀತಗಳಲ್ಲಿ ವಿಶೇಷ ಆಸಕ್ತಿ ಹೊಂದಿದವರು.

ಡಾ.ಜಿ.ಎಂ.ಹೆಗಡೆ ಅವರು ಮನು ಬಳಿಗಾರ ಅವರ ಜೀವನ ಸಾಧನೆಯನ್ನು ಅತ್ಯಂತ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ. ವ್ಯಕ್ತಿಯೊಬ್ಬರು ಅತ್ಯಂತ ಕ್ರಮಬದ್ಧ ಜೀವನ ರೂಪಿಸಿಕೊಂಡಲ್ಲಿ ಸಮಾಜ ಅವರನ್ನು

ಗೌರವಿಸುವ ಹಾಗೂ ಆಧರಿಸುವ ಹಿರಿಮೆಗೆ ಪಾತ್ರರಾಗುತ್ತಾರೆ. ಅಂತೆಯೇ ಮಾನವೀಯ ಹಾಗೂ ಜೀವನ ಮೌಲ್ಯಗಳಿಗೆ ಬದ್ಧರಾಗಿ. ಬದುಕುತ್ತಿರುವ ಮನು ಬಳಿಗಾರ ಅವರು ಅಭಿನಂದನೆಗೆ ಅರ್ಹರಾಗಿದ್ದಾರೆ.

ಆಡಳಿತ ಸೇವೆಯೊಂದಿಗೆ ಅವರು ರೂಪಿಸಿಕೊಂಡ ಇನ್ನೊಂದು ಕಾರ್ಯಕ್ಷೇತ್ರ ಸೃಜನಶೀಲ ಬರವಣಿಗೆ, ಸಾಹಿತ್ಯ ಬದುಕಿನ ಅಭಿವ್ಯಕ್ತಿಯೂ ಹೌದು ಈ ನಿಟ್ಟಿನಲ್ಲಿ ಮನು ಬಳಿಗಾರ ಸರ್ ಅವರು ಪ್ರಾಂಜಲ ಮನಸಿನ ಅಪ್ಪಟ ಕನ್ನಡಿಗನಾಗಿ ಗುರುತಿಸಿಕೊಳ್ಳುತ್ತಾರೆ. ಸತತ ಪರಿಶ್ರಮ, ಓದು, ಅಧ್ಯಯನ, ಶಿಸ್ತುಬದ್ಧ ಜೀವನಶೈಲಿಗಳು ಹಾಗೂ ಸಮಾಜಮುಖಿ ಚಿಂತನೆಗಳಿಂದ ಶ್ರೀಯುತರು ಅರ್ಹಗುಣಾಂಕಗಳಿಗೆ ಮಾದರಿಯಾಗಿದ್ದಾರೆ.

**ಸಹೃದಯ ದಿಗ್ದರ್ಶಕ :**

ಮನು ಬಳಿಗಾರ ಅವರು ಸ್ನೇಹಜೀವಿ. ಉತ್ತಮ ನಾಯಕತ್ವ ಗುಣವುಳ್ಳವರು, ಚಿಕ್ಕಂದಿನಿಂದಲೇ ತಮ್ಮ ಗೆಳೆಯರು, ಬಂಧು ಬಳಗ, ಸಹಪಾಠಿಗಳಿಗೆ ಹಾಗೂ ಅಸಹಾಯಕತೆಯಿಂದ ಬಳಲುವವರಿಗೆ ಸಹಾಯಹಸ್ತ ನೀಡಿದವರು. ತಮ್ಮ ಸ್ನೇಹದ ಪರಿಧಿಗೆ ಬಂದ ಎಲ್ಲಾ ಆತ್ಮೀಯರಿಗೆ ಒಂದಿಲ್ಲೊಂದು ಸಹಾಯ ಮತ್ತು ಮಾರ್ಗದರ್ಶನ ನೀಡಿದ ಸಹೃದಯಿಯಾಗಿದ್ದಾರೆ. ಇದರಿಂದ ಪ್ರೇರಣೆ, ಸ್ಫೂರ್ತಿ ಪಡೆದ ಬಂಧು-ಬಳಗದ ಅನೇಕರು ಸರಕಾರಿ ಸ್ಪರ್ಧಾ ಪರೀಕ್ಷೆಗಳಲ್ಲಿ ಸಫಲರಾಗಿದ್ದಾರೆ. ಸ್ವತಃ ಸಹೋದರರಿಗೆ ಪ್ರೇರಣೆ ಹಾಗೂ ಸಹಾಯ ಮಾಡುವುದರ ಮೂಲಕ ತಮ್ಮ ತಂದೆಯವರಾದ ಶ್ರೀ ಪರಮೇಶ್ವರಪ್ಪನವರ ಆದರ್ಶಗಳನ್ನು ಎತ್ತಿ ಹಿಡಿದಿದ್ದಾರೆ. ಮನೆಯ ಪರಿಸರದ ಎಲ್ಲರೂ ಉನ್ನತ ಹುದ್ದೆಗಳನ್ನು ಪಡೆಯುವಲ್ಲಿ ಮನು ಬಳಿಗಾರ ಅವರು ನೀಡಿದ ಸಹಕಾರಗಳು ಅನುಕರಣೀಯವಾಗಿವೆ.

**ಸೃಜನಶೀಲ ಪ್ರತಿಭೆ ಸಹೃದಯ ಸಾಹಿತಿ :**

ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ಕಲೆ, ಸಾಹಿತ್ಯ, ಸಂಗೀತ ಹಾಗೂ ಸಾಂಸ್ಕೃತಿಕವಾಗಿಯೂ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡವರು, ಸದಾ ಸಮಚಿತ್ತ ಮನಸ್ಸುಳ್ಳ ಇವರದು ಸೃಜನಶೀಲ ಪ್ರತಿಭೆಯಾಗಿದೆ. ಸತತ ಓದು-ಬರಹ ಹಾಗೂ ಉಪನ್ಯಾಸಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ.

ಶ್ರೀ ಮನುಬಳಿಗಾರ ಅವರು ಆಡಳಿತದಲ್ಲಿಯೂ ಜನಮನ ಗೆದ್ದವರು ರಾಜ್ಯದಾದ್ಯಂತವಾಗಿ ಮೆಚ್ಚುಗೆ ಗಳಿಸಿದವರು. 2011ರಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದ ಯಶಸ್ಸಿಗೆ ಕಾರಣರಾದವರು. ಸರಕಾರ ಸಾಹಿತಿಗಳು ಹಾಗೂ ಜನಸಾಮಾನ್ಯರೊಂದಿಗಿನ ಅವರ ಒಡನಾಟದಿಂದ ಎಲ್ಲರಿಗೂ ಆಪ್ತರಾಗಿದ್ದಾರೆ. ಇದರ ಫಲವಾಗಿಯೇ ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಾರಥ್ಯವನ್ನು ಸಮರ್ಥವಾಗಿ ನಿಭಾಯಿಸುವ ಹೊಣೆಗಾರಿಕೆಯನ್ನು ನಾಡಿನ ಸಮಸ್ತ ಕನ್ನಡಗರು ಶ್ರೀ ಮನು ಬಳಿಗಾರ ಅವರ ಹೆಗಲಿಗೆ ನೀಡಿರುವುದೇ ಸಾಕ್ಷಿ.

ಶ್ರೀ ಮನು ಬಳಿಗಾರ ಅವರು ಸಂವೇದನಾಶೀಲ ಭಾವಜೀವಿ. ವಿಶಾಲ ಹೃದಯ, ಉದಾರ ಮನಸು ಇಷ್ಟೆಲ್ಲಾ ಗುಣಾತ್ಮಕ ಮನಸ್ಥಿತಿಗೆ ಕಾರಣ ತಂದೆ ಶ್ರೀ ಪರಮೇಶ್ವರಪ್ಪ ಹಾಗೂ ತಾಯಿ ಶಂಕರಪ್ಪನವರ ಕಾಯಕ ಜೀವನವೇ ಸ್ಫೂರ್ತಿ. ಏನೇ ಆದರೂ ಮಕ್ಕಳು ಮೊದಲನೇ ಸ್ಥಾನದಲ್ಲಿಯೇ ಇರಬೇಕು ಹಾಗೂ ಪ್ರಥಮ ದರ್ಜೆಯಲ್ಲಿ ಆಯ್ಕೆಯಾಗಬೇಕೆಂಬ ಅವರ ಉತ್ತಮಿಕೆಯ ಹಂಬಲವೇ ಮಕ್ಕಳನ್ನು ಅತ್ಯುತ್ತಮ ನಾಗರಿಕರನ್ನಾಗಿಸಿವೆ. ಕುಟುಂಬದಿಂದ ಇಂತಹ ಸಂಸ್ಕಾರ ಪಡೆದ ಬಳಿಗಾರ ಅವರು ಅದನ್ನು ಸಮಾಜಕ್ಕೆ ವಿನಿಯೋಗಿಸಿಕೊಳ್ಳುತ್ತಿರುವುದು ಶ್ಲಾಘನೀಯವಾಗಿದೆ. ಅವರ ಆಪ್ತರನ್ನು ಕೇಳಿದಾಗ ಯಾರೇ ಆಗಲಿ, ಮನು ಅಣ್ಣ ತುಂಬಾ ಒಳ್ಳೆಯವರು, ಎಲ್ಲರಿಗೂ ಪ್ರೋತ್ಸಾಹ ಮತ್ತು ಸಹಾಯ ನೀಡುವ ಸದ್ಗುಣಿ ಎಂದು ಹೇಳುತ್ತಾರೆ. ಏಕೆಂದರೆ ಅನೇಕ ಜನ ಇವರಿಂದ ಪ್ರೋತ್ಸಾಹ ಪಡೆದವರೇ ಆಗಿದ್ದಾರೆ.

ಸಾಫಲ್ಯ ಜೀವನದ ತುಡಿತ-ಮಿಡಿತಗಳೇ ವ್ಯಕ್ತಿಯೊಬ್ಬ ಇಷ್ಟೆಲ್ಲಾ ಸಾಧಿಸಲು ಪೂರಕವಾಗುತ್ತದೆ. ಸಂತೃಪ್ತ ಮನೋಸ್ಥಿತಿಯ ಸೃಜನಶೀಲ ಪ್ರತಿಭೆ ಎಂದಿಗೂ ಸಮಚಿತ್ತದಿಂದ ಸಮಾಜಮುಖಿಯಾಗಿ ಜೀವನ್ಮುಖಿಯಾಗಿ ಸಮರ್ಪಿಸಿಕೊಳ್ಳಲು ಸಾಧ್ಯ. ಇಂತಹ ನಡೆನುಡಿ ಒಂದಾದ ಶರಣ ಜೀವಿಯಾದವರು ಶ್ರೀ ಮನು ಬಳಿಗಾರ ಎಂದರೆ ಅತಿಶಯೋಕ್ತಿಯಲ್ಲ.

**ಗಡಿನಾಡಲ್ಲಿ ಸಾಹಿತ್ಯ ಸಂಸ್ಕೃತಿ ರಿಂಗಣ:**

1993 ರಿಂದ 2000ರವರೆಗೆ ಏಳು ವರ್ಷಗಳ ಕಾಲ ಬೆಳಗಾವಿಯಲ್ಲಿ ಅಧಿಕ ಜಿಲ್ಲಾ ದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನ ಸಹಾಯಕರಾಗಿ, ಆಹಾರ ನಾಗರಿಕ ಪೂರೈಕೆ ಇಲಾಖೆಯ ಉಪನಿರ್ದೇಶಕರಾಗಿ ಕಾರ್ಯ ಮಾಡಿದರು. ಕರ್ನಾಟಕದ ಉತ್ತರದಲ್ಲಿರುವ ಬೆಳಗಾವಿ ಅತ್ಯಂತ ಸೂಕ್ಷ್ಮವಾದ ಸ್ಥಳವಾಗಿದೆ. ಕನ್ನಡ ಮರಾಠಿ ದ್ವಿಭಾಷಿಕ ಸ್ಥಳವಾದ ಬೆಳಗಾವಿ ಸದಾ ಸುದ್ದಿಯಲ್ಲಿರುವ ನಗರವಾಗಿದೆ. ಬೆಳಗಾವಿಯಲ್ಲಿರುವ ಅಧಿಕಾರಿಗಳ ಮೇಲೆ ಗುರುತರವಾದ ಹೊಣೆಗಾರಿಕೆಯಿದೆ. ಕನ್ನಡದ ಗಡಿಗಳು ಸಮಸ್ಯೆಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಬೆಳಗಾವಿಯಲ್ಲಿ ಕನ್ನಡದ ಸ್ಥಾನವನ್ನು ಭದ್ರಗೊಳಿಸುವ ಕಾರ್ಯ ಆಗಬೇಕಾಗಿದೆ. ಇದನ್ನು ಸರಿಯಾಗಿ ಅರ್ಥಮಾಡಿಕೊಂಡ ಮನು ಬಳಿಗಾರ ಅವರು ಬೆಳಗಾವಿಯಲ್ಲಿ ಕನ್ನಡದ ಕಾರ್ಯಕ್ರಮಗಳು ಹೆಚ್ಚಾಗಿ ಆಗುವಂತೆ ಮಾಡಿದರು. ಸ್ವತಃ ತಾವೇ ಎಲ್ಲ ಕನ್ನಡ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕನ್ನಡದ ಲೇಖಕರನ್ನು ಪ್ರೋತ್ಸಾಹಿಸಿದರು. ಬೆಳಗಾವಿ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನ ಪಾಕ್ಷಿಕ ಪತ್ರಿಕೆ 'ಜ್ಞಾನಪ್ರಭಾ' 'ಅಕ್ಷರಪ್ರಭಾ'ದ ಸಂಪಾದಕರಾಗಿ ಆರು ವರ್ಷ ಕೆಲಸ ನಿರ್ವಹಿಸಿ ಜಿಲ್ಲೆಗೆ ರಾಷ್ಟ್ರಮಟ್ಟದ ಪ್ರಥಮ ಸ್ಥಾನ ಪ್ರಶಸ್ತಿ 'ಸತ್ಯೇನ್ ಮೈತ್ರ' ಪುರಸ್ಕಾರ ಬರುವಲ್ಲಿ ಬಹುವಾಗಿ ಶ್ರಮಿಸಿದರು.

ಬೆಳಗಾವಿಯಲ್ಲಿ ಇವರ ವಿಶೇಷ ಆಸಕ್ತಿಯಿಂದಾಗಿ ಹಲವಾರು ವಿಶಿಷ್ಟವಾದ ಸಾಹಿತ್ಯಕ ಕಾರ್ಯಕ್ರಮಗಳು ಜರುಗಿದವು. ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ.ಯು.ಆರ್.ಅನಂತಮೂರ್ತಿ ಅವರ ವಿಶೇಷೋಪನ್ಯಾಸ

ಅದ್ವಿತೀಯವಾಗಿ ಜರುಗಿತು. ಡಾ.ಎಸ್.ಎಲ್.ಭೈರಪ್ಪನವರೊಡನೆ ಸಂವಾದ ಕಾರ್ಯಕ್ರಮ ಹಾಗೂ ಶಂಬಾ ಜೋಶಿ ಸಂಸ್ಕೃತಿ ಚಿಂತನದ ಮೂಲಕ ಕನ್ನಡ ಮರಾಠಿ ಸಂಸ್ಕೃತಿ ಸಂಬಂಧಗಳ ಚರ್ಚೆ ನಡೆಯಿತು. ಶ್ರೀ ಗಿರೀಶ್ ಕಾರ್ನಾಡರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ, ಆ ಸವಿ ನೆನಪಿಗಾಗಿ, ಒಂಬತ್ತು ದಿನಗಳ ಕಾಲ ಅವರ ಎಲ್ಲ ನಾಟಕಗಳನ್ನು 'ಗಿರೀಶೋತ್ಸವ' ಎಂಬ ಹೆಸರಿಟ್ಟು ಅದ್ದೂರಿಯಾಗಿ ಆಚರಿಸಿ ಜನಮೆಚ್ಚುಗೆ ಪಡೆದರು. ಸಂಘಟನಾ ಸಮಿತಿಯ ಕಾರ್ಯಾಧ್ಯಕ್ಷರಾಗಿ ಮನು ಅವರು ಮಾಡಿದ ಕೆಲಸ ಅನನ್ಯವಾದುದು.

ಕನ್ನಡದ ಬಗೆಗಿನ ಕಳಕಳಿ ಕಾಳಜಿಯುಳ್ಳ ಅಧಿಕಾರಿಗಳು ಗಡಿಭಾಗದಲ್ಲಿದ್ದರೆ ಕನ್ನಡ ಭದ್ರವಾಗುತ್ತದೆ. ಎಂಬುದಕ್ಕೆ ಸಾಕ್ಷಿಯಾಗಿ ಮನುಬಳಿಗಾರ ಕಾರ್ಯಮಾಡಿದ್ದಾರೆ. ಇಂತಹ ಅಧಿಕಾರಿಗಳು ಬೆಳಗಾವಿಯಲ್ಲಿದ್ದಾಗ ಹೇಳಿಕೊಳ್ಳುವಂಥ ಯಾವುದೇ ಭಾಷಿಕ ಚಳುವಳಿ ಗಲಭೆ, ಅಶಾಂತಿಯ ಘಟನೆಗಳು ಜರುಗಲಿಲ್ಲವೆಂಬುದೂ ಅಷ್ಟೇ ಗಮನಾರ್ಹ. ಬೆಳಗಾವಿಯ ಕನ್ನಡ ಭವನದಲ್ಲಿ ನಿರಂತರವಾಗಿ ಕನ್ನಡ ಕಾರ್ಯಕ್ರಮಗಳು ಸಂಭ್ರಮದಿಂದ ಜರುಗುತ್ತಿದ್ದವು. ಅದರಲ್ಲಿ ಮನು ಬಳಿಗಾರ ಅತಿಥಿಗಳಾಗಿ ಮಾತ್ರವಲ್ಲ ಒಬ್ಬ ಸಭಿಕರಾಗಿ ಭಾಗವಹಿಸುತ್ತಿದ್ದುದು ಅವರ ಕನ್ನಡ ಪ್ರೀತಿಯ ಧ್ಯೋತಕವಾಗಿತ್ತು. ಇದರಷ್ಟೇ ಮಹತ್ವದ ಸಂಗತಿ ಎಂದರೆ ಮನು ಅವರನ್ನು ಅವರ ಕಾರ್ಯದಕ್ಷತೆ, ವಿಶಾಲ ಮನೋಭಾವದಿಂದಾಗಿ ಮರಾಠಿ ಜನರೂ ಅಷ್ಟೇ ಪ್ರೀತಿಸುತ್ತಿದ್ದರು.

ಬೆಳಗಾವಿ ವಿಭಾಗದಲ್ಲಿ ಸರಕಾರದ ಯೋಜನೆಗಳು ಅಭಿವೃದ್ಧಿ ಕಾರ್ಯಕ್ರಮಗಳು ಯಶಸ್ವಿಯಾಗಲು ಮನು ಬಳಿಗಾರ ಶ್ರಮಿಸಿದರು. ಕನ್ನಡ ಕಾರ್ಯಕರ್ತರನ್ನು ಅವರು ಪ್ರೋತ್ಸಾಹಿಸಿದರು. ಅನೇಕ ಜನಹಿತ ಕಾರ್ಯಗಳನ್ನು ನಡೆಸಿದರು. ಆಡಳಿತದಲ್ಲಿ ಸಮಸ್ಯೆಗಳನ್ನು ಬಿಡಿಸುವುದು ಸಮಾಧಾನದಿಂದ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ಮಹತ್ವದ ವಿಚಾರವಾಗಿದೆ.

ಮನು ಸರ್ ಅವರು ಕರ್ನಾಟಕ ಸರಕಾರದ ಅತ್ಯುತ್ತಮ ಅಧಿಕಾರಿಗಳಲ್ಲೊಬ್ಬರು. ಆಡಳಿತದಲ್ಲಿ ದಕ್ಷತೆ, ಪ್ರಾಮಾಣಿಕ, ಜೊತೆಗೆ ಸರಕಾರದ ಯೋಜನೆಗಳು ಶ್ರೀಸಾಮಾನ್ಯರಿಗೆ ಮುಟ್ಟಬೇಕೆಂಬ ಕಳಕಳಿಯಿಂದ ಕೂಡಿರುವ ಇವರು ಯಾವ ಇಲಾಖೆಯೇ ಇರಲಿ ಅದರಲ್ಲಿ ಯಶಸ್ಸು ಗಳಿಸುತ್ತ ನಡೆದಿದ್ದಾರೆ.

ಮನು ಸರ್ ಅವರು ನಾಲ್ಕು ಬಾರಿ ಅಮೇರಿಕಾ, ಎರಡು ಬಾರಿ ಯುರೋಪ್, ಎರಡು ಬಾರಿ ಮಲೇಶಿಯಾ, ಥೈಲ್ಯಾಂಡ್, ಸಿಂಗಾಪುರ ಪ್ರವಾಸ ಮಾಡಿದ್ದಾರೆ. ಆ ದೇಶಗಳಲ್ಲೆಲ್ಲ ಕನ್ನಡ ಸಾಹಿತ್ಯ-ಸಂಸ್ಕೃತಿಯ ಉಪನ್ಯಾಸ ಮಾಡಿದ್ದಾರೆ. "ಅಕ್ಕ" ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಸಾಹಿತಿಯಾಗಿ, ಲೇಖಕರಾಗಿ ಅಮೇರಿಕೆಯ ಅನುಭವಗಳನ್ನು ಸ್ವಾರಸ್ಯಪೂರ್ಣವಾಗಿ ನಿರೂಪಿಸಿದ್ದಾರೆ. ಕನ್ನಡ ಕಡಲಾಚೆ ವಿಜೃಂಭಿಸಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ. ಮನು ಸಾಂಸ್ಕೃತಿಕ ರಾಯಭಾರಿಯಾಗಿ ಕನ್ನಡ ನಾಡು-ನುಡಿಯ ಹಿತ ಚಿಂತನೆ ಮಾಡುತ್ತಾರೆ. ಅಮೇರಿಕೆಯಲ್ಲಿ ಹಾಗೂ ಇತರ ದೇಶಗಳಲ್ಲಿ ಅವರು ಮಾಡಿದ

ಭಾರತೀಯ ಸಂಸ್ಕೃತಿ ಮೇಲಿನ ಹಾಗೂ ಕನ್ನಡ ಸಾಹಿತ್ಯ ಪರಂಪರೆಯ ಉಪನ್ಯಾಸಗಳು ಪ್ರಬಂಧ ರೂಪದಲ್ಲಿ ಪ್ರಕಟವಾಗಿವೆ.

ಇಂತಹ ಹೆಮ್ಮೆಯ ಕನ್ನಡಿಗರೊಬ್ಬರ ಕುರಿತು ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆಯ ಸಂಶೋಧನಾ ವಿದ್ಯಾರ್ಥಿಯಾದ ಶ್ರೀ ಅಶೋಕ ಮುದೋಳ ಅವರು ಪಿ.ಹೆಚ್.ಡಿ. ಸಂಶೋಧನಾ ಅಧ್ಯಯನ ಕೈಗೊಂಡಿರುವುದು ಮನು ಬಳಿಗಾರ ಅವರ ಜನಪ್ರಿಯತೆ ಮತ್ತು ಕ್ರಿಯಾಶೀಲತೆಗೆ ಹಿಡಿದ ಕನ್ನಡಿ. ಅಪರೂಪದ ಸೃಜನಶೀಲ ಪ್ರತಿಭೆಯಾದ ಬಳಿಗಾರ್ ಅವರು ನಾಡು-ನುಡಿ-ಸಾಂಸ್ಕೃತಿಕ ಸಮರ್ಥ ರಾಯಭಾರಿಗಳಾಗಿ ನಮ್ಮೆಲ್ಲರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದಾರೆ.

❖

# ಡಾ. ಮನು ಬಳಿಗಾರರ ಬೆಳಕು-ಬೆಡಗು

— ಮಾಸ್ಕೇರಿ ಎಂ. ಕೆ. ನಾಯಕ

ಶ್ರೀ ಮನು ಬಳಿಗಾರ್‌ರವರು ಸರ್ಕಾರಿ ಯಂತ್ರದ ಅತ್ಯುನ್ನತ ಅಧಿಕಾರಿ ಆಗಿದ್ದು ತಮ್ಮ ಬಿಡುವಿಲ್ಲದ ಕಾರ್ಯಭಾರದಲ್ಲೂ ಸಮಾಜಮುಖಿ ಚಿಂತನೆಯಲ್ಲಿ ತೊಡಗಿಸಿಕೊಂಡಿರುವುದು ಅವರ ಜೀವನ ಪ್ರೀತಿ ಮತ್ತು ಸಾಮಾಜಿಕ ಬದ್ಧತೆಯನ್ನು ಸೂಚಿಸುತ್ತದೆ. ಸಮಯವಿಲ್ಲ ಎನ್ನುವವರು ಇವರನ್ನು ನೋಡಿ ಕಲಿಯಬೇಕು. ಕನ್ನಡದ ಹೆಮ್ಮೆಯ ದಿನಪತ್ರಿಕೆ ಪ್ರಜಾವಾಣಿಯಲ್ಲಿ 'ಸಾಕ್ಷಿ ಪ್ರಜ್ಞೆ' ಎಂಬ ಶೀರ್ಷಿಕೆಯಡಿಯಲ್ಲಿ ಅಂಕಣ ಬರಹವಾಗಿ ಕನ್ನಡಿಗರ ಸಾಕ್ಷಿ ಪ್ರಜ್ಞೆಯ ಭಾಗವಾಗಿದ್ದ ಶ್ರೀಯುತರ ಬರಹಗಳು ಸಂಕಲನಗೊಂಡು ಈಗ 'ಬೆಳಕ ಬೆಡಗು' ಎಂಬ ಹೆಸರಿನಲ್ಲಿ ಒಂದು ಅಮೂಲ್ಯ ಕೃತಿಯಾಗಿ ಸಹೃದಯ ಓದುಗರ ಕೈ ಸೇರಿದೆ.

ಅಂಕಣ ಬರಹಗಳಿಗೆ ತನ್ನದೇ ಆದ ಮಿತಿಗಳಿವೆ. ಆರಿಸಿಕೊಳ್ಳುವ ವಿಷಯ ವಾಸ್ತವಿಕತೆಗೆ ತೀರ ಹತ್ತಿರವಿರಬೇಕು. ಚಿಂತನಶೀಲ ವಿಷಯಗಳಿಗೆ ಪ್ರಾಧಾನ್ಯತೆಯಿದ್ದರೆ, ವಿಶ್ಲೇಷಣಾತ್ಮಕ ನಿರೂಪಣೆಗೆ ತನ್ನದೇ ಆದ ಚೌಕಟ್ಟಿದೆ. ಒಂದು ಅಂಕಣದ ಬರಹಗಳ ಕುರಿತು ಅಭಿಪ್ರಾಯ ಮಂಡಿಸುವಾಗ ಮುಖ್ಯವಾಗಿ ಈ ಕೆಲವು ಅಂಶಗಳನ್ನು ಮಾನದಂಡವಾಗಿಟ್ಟುಕೊಳ್ಳಬೇಕು. ಅವುಗಳೆಂದರೆ ಆಯ್ದುಕೊಂಡಿರುವ ವಸ್ತು ವಿಷಯ, ತಂತ್ರಗಾರಿಕೆ, ಆಶಯ ಇತ್ಯಾದಿ. ಇಡೀ ಸಂಕಲನದಲ್ಲಿ ಕಂಡುಬರುವ ವಿಶೇಷತೆಯೆಂದರೇ ಲೇಖಕರ ಅಧ್ಯಯನಶೀಲತೆ. ಆಲೋಚನಾಪರತೆ, ತುಲನಾತ್ಮಕತೆ. ಎಲ್ಲಾ ಕ್ಷೇತ್ರದ ವಿಷಯಗಳನ್ನೂ ಆರಿಸಿಕೊಂಡು ಸಮೃದ್ಧ ಮಾಹಿತಿ ನೀಡಿರುವುದು ಗಮನಾರ್ಹ.

ಪರಿಸರ ಕಾಳಜಿ, ಆಧ್ಯಾತ್ಮ, ಕನ್ನಡ ಸಾಹಿತ್ಯ, ನಮ್ಮ ಸಂಸ್ಕೃತಿ - ಪರಂಪರೆ, ಕ್ರೀಡೆ, ವ್ಯಕ್ತಿ ವಿಶೇಷ, ಪ್ರಚಲಿತ ವಿದ್ಯಮಾನಗಳು, ಪ್ರಕೃತಿ, ಮಾನವೀಯ ಸಂಬಂಧ ಮತ್ತು ಹಿತೋಪದೇಶ ಹೀಗೆ ಹಲವು ಪ್ರಕಾರಗಳಲ್ಲಿ ಬರಹಗಳಿದ್ದರೂ ಈ ಅಂಕಣಗಳನ್ನು ವಿಷಯಾಧಾರಿತವಾಗಿ ವರ್ಗೀಕರಿಸುವುದು ಕಷ್ಟ ಏಕೆಂದರೆ

ಪ್ರತಿ ಅಂಕಣವೂ ವಿಭಿನ್ನ. ಎಲ್ಲಾ ಬರಹಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವ್ಯಕ್ತವಾಗಿರುವುದು ಲೇಖಕರ ಸಾಮಾಜಿಕ ಕಳಕಳಿ, ವ್ಯವಸ್ಥೆಯ ದುರಂತದೆಡೆಗಿನ ವಿಷಾದ, ಸುಧಾರಣೆಯ ಆಶಯ ಮತ್ತು ಶುಭವಾಗಲಿ ಎನ್ನುವ ಹಾರೈಕೆ. ಯಾವುದೇ ಸಂದರ್ಭದಲ್ಲೂ ಹತಾಶೆಯನ್ನು ವ್ಯಕ್ತಪಡಿಸದೆ ಸದಾ ಸಕಾರಾತ್ಮಕ ಚಿಂತನೆಯನ್ನು ಚಿಗುರಿಸುತ್ತಾರೆ.

ಇಲ್ಲಿ ನೀಡಿರುವ ಎಲ್ಲಾ ಉದಾಹರಣೆಗಳೂ ಜೀವಂತವಾಗಿದ್ದು ನಮ್ಮ ಪಕ್ಕದಲ್ಲಿ ಕುಳಿತು ಮಾತನಾಡುತ್ತವೆ. ಎಲ್ಲಾ ಅಂಕಣಗಳೂ ವಿಷಯ ಸಂಪತ್ತಿನಲ್ಲಿ ಶಕ್ತಿಶಾಲಿಯಾಗಿದ್ದು, ಓದಿಸಿಕೊಂಡು ಹೋಗುವ ಶೈಲಿಯಲ್ಲಿದೆ. ಆಳವಾದ ಚಿಂತನೆ, ಹತ್ತಿಯಂತೆ ಹಿಂಜಿದಷ್ಟೂ ಅರ್ಥ ನೀಡುವ ಶಬ್ದ ಸಂಪತ್ತುಗಳಿಂದ ಶ್ರೀಮಂತವಾಗಿದೆ. ಕೆಲವು ಲೇಖನಗಳಲ್ಲಿ ವಿಷಯದ ಮಹತ್ವವನ್ನು ಓದುಗರೇ ನಿರ್ಣಯಿಸಲಿ ಎಂದು ಪ್ರಶ್ನೆಗಳನ್ನು ಹಾಕುತ್ತಾರೆ. ಆದರೆ ಆ ಪ್ರಶ್ನೆಗಳಿಗೆ ಸ್ಪಷ್ಟ ಉತ್ತರ ಕೊನೆಯ ಸಾಲಿಗೆ ಬರುವುದರೊಳಗೆ ಓದುಗನ ತಲೆಯಲ್ಲಿ ಮೂಡುವಂತೆ ಮಾಡಿದ್ದು ಲೇಖಕರ ಹೆಚ್ಚುಗಾರಿಕೆಯೇ ಸರಿ.

ಗದ್ಯದಲ್ಲೂ ಕಾವ್ಯದ ಕಲೆಯಿದೆ ಅದರಲ್ಲೂ ಪ್ರಾಸಗಳ ಬಳಕೆಯಲ್ಲಿ ಉದಾ : ಜ್ಞಾನ ಜಿಡ್ಡಾದಾಗ ಧರ್ಮ ಗೊಡ್ಡಾಗುತ್ತದೆ, ಪ್ರಾದೇಶಿಕ ಸಂಪ್ರದಾಯಗಳನ್ನು ವಿವರಿಸುವಾಗ ಅಪ್ಪಟ ದೇಸೀ ಸೊಗಡಿನಲ್ಲಿ ದೇಸಿ ಪದಗಳನ್ನು ಬಳಸಿ ಮಡುಗಟ್ಟುವ ರೀತಿಯಲ್ಲಿ ಅನುಭವಗಳನ್ನು ಕಡೆದಿಟ್ಟಿರುವುದು ಸಹಜತೆಗೆ ಹಿಡಿದಿರುವ ಕನ್ನಡಿ, ಜಾನಪದ ನುಡಿಗಟ್ಟುಗಳನ್ನು ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳು ಮತ್ತು ಘಟನೆಗಳನ್ನು ಪ್ರತಿಮಾ ರೂಪದಲ್ಲಿ ಬಳಸಿಕೊಂಡು ಪ್ರತಿಯೊಂದೂ ಅಂಕಣವನ್ನು ಜೀವಂತವಾಗಿರಿಸಿದ್ದಾರೆ. ಬಹುತೇಕ ಅಂಕಣಗಳಲ್ಲಿ ಶರಣ ಸಂಸ್ಕೃತಿಯ ಗಾಢ ಪ್ರಭಾವವನ್ನು ಕಾಣಬಹುದಾಗಿದೆ. ಹಲವು ವಿವಾದಾತ್ಮಕ ವಿಷಯಗಳನ್ನು ಎತ್ತಿಕೊಂಡರೂ ಯಾವುದೇ ಮುಲಾಜಿಲ್ಲದೆ ತಮ್ಮ ಖಚಿತ ಅಭಿಪ್ರಾಯ ಮತ್ತು ನಿಲುವನ್ನು ಸ್ಥಿರೀಕರಿಸಿದ್ದಾರೆ.

ಪ್ರತೀ ಅಂಕಣವೂ ಹೊಸ ಮತ್ತು ಭಿನ್ನ ವಿಷಯವನ್ನು ಕುರಿತಾಗಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿಯೇ ನೋಡಿ ಓದುಗನಿಗೆ ಹೇಗೆ? ಮತ್ತು ಎಷ್ಟು? ಲಾಭವಾಗುತ್ತದೆ. ಎಂದು ಅವಲೋಕಿಸಿದೆ. ಕೆಲವು ಅಂಕಣಗಳಲ್ಲಿ ಕೆಲವು ಸಾಲುಗಳು, ಪದಗಳು, ಪುನರಾವರ್ತನೆಯಂತೆ ಕಂಡರೂ ದಿನಪತ್ರಿಕೆಯ ಅಂಕಣ ಬರಹವಾದ ಕಾರಣ ಕೆಲವೊಮ್ಮೆ ಅನಿವಾರ್ಯವೆನಿಸುತ್ತದೆ. ಪ್ರತಿ ಅಧ್ಯಾಯವೂ ಪಠ್ಯದ ಸ್ವರೂಪದಲ್ಲಿದೆ. ಆದ್ದರಿಂದ ಒಬ್ಬ ಆದರ್ಶ ವಿದ್ಯಾರ್ಥಿಯ ಮನಸ್ಸಿನಿಂದ ಓದಬೇಕು ಮತ್ತು ಅಧ್ಯಾಪಕನ ಮನಸ್ಥಿತಿಯಲ್ಲಿ ಆಲೋಚಿಸಬೇಕು.

**'ಉತ್ಕೃಷ್ಟತೆಯ ಬೆನ್ನತ್ತಿ ದೈವತ್ವದ ದಾರಿಯೆಡೆಗೆ'** ಎಂಬ ಲೇಖನ ಮಹತ್ತರವಾದ ಮಾನವ ಸಾಧನೆಗೆ ಸಾಧನವಾಗಿರುವುದು ಮಹತ್ವಾಕಾಂಕ್ಷೆ ಮತ್ತು ಮಾನವ ಜನ್ಮ, ತಾನು ಏನನ್ನು ಯೋಚಿಸುತ್ತೇವೆಯೋ ಹಾಗೆಯೇ ಆಗುತ್ತೇವೆ ಎನ್ನುವ ಸಂದೇಶದೊಂದಿಗೆ ಆರಂಭವಾಗುತ್ತದೆ. ಆಧ್ಯಾತ್ಮಿಕ ಅನುಭವವನ್ನು ನೀಡುವ

ಇಲ್ಲಿ ಮನುಷ್ಯತ್ವದಿಂದ ದೈವತ್ವಕ್ಕೆ ಏರುವ ಬಗೆಯನ್ನು ಚರ್ಚಿಸುತ್ತಾರೆ. ಹತಾಶೆಯಿಲ್ಲದ ಋಜುಮಾರ್ಗ ಅದಕ್ಕಿರುವ ದಾರಿ. ಆಸ್ತಿಕನದು ಭಕ್ತಿಮಾರ್ಗವಾದರೆ ನಾಸ್ತಿಕನದು ತನ್ನಲ್ಲಿರುವ ಚೈತನ್ಯದ ಮೇಲಿನ ಆತ್ಮವಿಶ್ವಾಸದ ಕಾಯಕ ಮಾರ್ಗ. ಎಲ್ಲಾ ನದಿಗಳೂ ಸಮುದ್ರವನ್ನು ಸೇರುವಂತೆ ನಮ್ಮಲ್ಲಿ ನಿಷ್ಠೆ, ಶ್ರದ್ಧೆ, ಶುದ್ಧತೆ ಮತ್ತು ಬದ್ಧತೆಗಳಿದ್ದರೆ ಎಲ್ಲಾ ಮಾರ್ಗಗಳೂ ದೈವತ್ವದೆಡೆಗೆ ನಮ್ಮನ್ನೊಯ್ಯುತ್ತದೆ ಎಂದು ಅಂತಃಕರಣಕ್ಕೆ ಬೆಳಕು ಹಾಯಿಸುವ ಲೇಖಕರು ಗುರಿ ಮತ್ತು ಮಾರ್ಗ ಪರಸ್ಪರ ಪೂರಕವಾದುದು ಎಂಬ ಖಚಿತ ನಿಲುವನ್ನು ತಳೆಯುತ್ತಾರೆ. ಋಜು ನಡೆ ಮತ್ತು ಋಜು ನುಡಿ ಇವು ನಮ್ಮನ್ನು ಉನ್ನತಿಯೆಡೆಗೆ ಕರೆದೊಯ್ಯಲಿ ಎನ್ನುವ ಸಮಷ್ಟಿ ಭಾವದ ಆಶಯವಿದೆ.

**'ದೀರ್ಘಾಯುಷ್ಯವೆಂಬುದು ಮಹದಾನಂದ ನೋಡಾ'** ಎಂಬ ಲೇಖನದಲ್ಲಿ ನಮ್ಮ ದೇಹದಲ್ಲಿನ ಹುರುಪು ಇಡೀ ಪರಿಸರವನ್ನು ಹರ್ಷಮಯವಾಗಿಸುತ್ತದೆ. ಆದ್ದರಿಂದ 'ಸೌಂದರ್ಯ ಅನುಭವಿಸುವವನ ದೇಹದಲ್ಲಿದೆ' ಎಂದು ಬದಲಾಯಿಸಬಹುದೇ? ಎನ್ನುವ ಪ್ರಶ್ನೆಯನ್ನು ಓದುಗನ ಮುಂದಿಡುತ್ತಾರೆ. ನಮ್ಮ ವ್ಯಕ್ತಿತ್ವದ ಬೆಳವಣಿಗೆ ನಿರಂತರವಾಗಿದ್ದರೆ ನಮಗೆ ವಯಸ್ಸಾಗುವುದಿಲ್ಲವೆನ್ನುವುದನ್ನು ಉದಾಹರಣೆಗಳ ಮೂಲಕ ಹೇಳುತ್ತಾರೆ. 'ನನಗೆ ವಯಸ್ಸಾಗಿದೆ ಏನೂ ಆಗೊಲ್ಲ' ಎಂಬ ನಿರಾಶೆಯುಕ್ತ ನಕಾರಾತ್ಮಕ ಚಿಂತನೆ ಬರಬಾರದು, ಸಕಾರಾತ್ಮಕ ಚಿಂತನೆಯ, ಶಿಸ್ತುಬದ್ಧ ಮತ್ತು ಕ್ರಿಯಾಶೀಲ ಜೀವನಶೈಲಿಯಿಂದ ಬದುಕಿದ್ದಷ್ಟೂ ಕಾಲ ಆರೋಗ್ಯಕರವಾಗಿ ಬದುಕಬಹುದು ಎನ್ನುವುದನ್ನು ಹಲವಾರು ಮಹನೀಯರುಗಳ ಬದುಕನ್ನು ಉಲ್ಲೇಖಿಸಿ ಭರವಸೆ ಮೂಡಿಸುತ್ತಾರೆ. ನಿಷ್ಕಲ್ಮಶ ಮನಸ್ಸು ಮತ್ತು ಆತ್ಮಸ್ಥೈರ್ಯ ಮುಪ್ಪನ್ನು ತಡೆಯುತ್ತದೆ, ಎಂದು ಹೇಳುವ ಮೂಲಕ ಸಾಯದೇ ಬದುಕು ಮುಗಿಸಿದವರ ಮುಂದೆ ಹೊಸ ಆಶಾಕಿರಣವನ್ನಿಡುತ್ತಾರೆ.

**'ಗೊಮ್ಮಟ ಡೇವಿಡ್‌ರ ನಡುವೆ ನಿಂತು'** ಎಂಬ ಲೇಖನದಲ್ಲಿ 'ಗೊಮ್ಮಟನ ಬೆಟ್ಟವನ್ನೇರಿ ತುತ್ತ ತುದಿ ತಲುಪಿದಾಗ ನಾನು ಬಂದದ್ದು ಗೊಮ್ಮಟನ ಪಾದದ ಕೆಳಗೆ' ಎನ್ನುವ ವಾಕ್ಯದಲ್ಲಿ ನಾವೆಷ್ಟೇ ಮೇಲೇರಿದರೂ ಅಂತಿಮವಾಗಿ ತಲುಪುವುದು ದೇವರ ಪಾದದಡಿಯಲ್ಲಿ ಎನ್ನುವ ನಿತ್ಯ ಸತ್ಯವನ್ನು ಸೂಚಿಸುತ್ತಾರೆ. ಗೊಮ್ಮಟ ಮತ್ತು ರೋಂನ ಡೇವಿಡ್ ಮೂರ್ತಿಗಳನ್ನು ಒಂದು ಕ್ಷಣ ಹೋಲಿಸಿ ನೋಡುತ್ತಾರೆ. ಗೊಮ್ಮಟನ ಪ್ರಮಾಣಬದ್ಧವಾದ ದೇಹ ರಚನೆಗೆ ಹೋಲಿಸಿದರೆ ಡೇವಿಡ್‌ನದು ಪ್ರಮಾಣ ಬದ್ಧವಾಗಿಲ್ಲ. ಆದರೂ ಇದರಂತೆ ಅದೂ ಸುಂದರ, ಗೊಮ್ಮಟ ಐತಿಹಾಸಿಕವಾದರೆ ಡೇವಿಡ್ ಕಾಲ್ಪನಿಕ ಗೊಮ್ಮಟ ಅಲೌಕಿಕವಾದರೆ ಡೇವಿಡ್ ಲೌಕಿಕದ ಪ್ರತೀಕ. ಆದರೂ ಲೇಖಕರ ಅಳಲು ಇರುವುದು ಡೇವಿಡ್‌ನ ಪ್ರತಿಮೆಗೆ ಸಿಕ್ಕ ಪ್ರಚಾರ ಗೊಮ್ಮಟನಿಗಿಲ್ಲ ಎನ್ನುವುದರಲ್ಲಿ ನಮ್ಮಲ್ಲಿ ವಿಶ್ವಶ್ರೇಷ್ಠವಾದ ಹಲವು ಬಾಹುಬಲಿ ವಿಗ್ರಹಗಳಿದ್ದರೂ ಜಗತ್ತಿನ ಗಮನಸೆಳೆಯುವಲ್ಲಿ ವಿಫಲವಾಗಿವೆ. ಲೇಖಕರು ಇದರ ಕಾರಣವನ್ನು ಹುಡುಕಲು ಪ್ರಯತ್ನಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ನಮ್ಮ ಪರಂಪರೆಯ ಬಗ್ಗೆ ನಮಗಿರುವ ತಿಳುವಳಿಕೆಯ ಕೊರತೆ ಮತ್ತು ಜಗತ್ತಿಗೆ ತಿಳಿಸುವಲ್ಲಿನ ಅನಾಸಕ್ತಿ ಬಹುಶಃ ಇದೂ ಗೊಮ್ಮಟನ ತತ್ವವೇ ಇರಬಹುದು. **'ಪ್ರವಾಸ ಕೇವಲ ಭೂ**

**ಪರ್ಯಟನೆ ಅಲ್ಲ, ಅದು ಅರಿವಿನ ಪರಿಧಿಯನ್ನು ವಿಸ್ತರಿಸುವ ಉಪಕ್ರಮ'** ಎಂದು ಪ್ರವಾಸೋದ್ಯಮಕ್ಕೆ ಒಂದು ಹೊಸ ವ್ಯಾಖ್ಯೆಯನ್ನು ನೀಡಿದ್ದಲ್ಲದೇ ಪ್ರವಾಸೋದ್ಯಮದ ಸಾಧ್ಯತೆಗಳನ್ನು ಚರ್ಚಿಸಿದ್ದಾರೆ. ಜಗತ್ತಿನಲ್ಲಿಯೇ ಶ್ರೇಷ್ಠವಾದುದು ನಮ್ಮಲ್ಲಿಯೇ ಇರಬೇಕಾದರೆ ಅವುಗಳಿಗೆ ನ್ಯಾಯ ಸಿಗಬೇಕು ಎಂಬುದು ನಮ್ಮ ಎದೆಯ ಕೂಗಾಗಬೇಕು ಎಂದು ನಮ್ಮನ್ನು ಎಚ್ಚರಿಸುತ್ತಾರೆ.

'ಈಶನಾ ವಾಸವೀ ಜಗವು ಕಸದ ತೊಟ್ಟಿಯಾಗಲುಂಟೆ' ಎಂಬ ಲೇಖನದಲ್ಲಿ ಪರಿಸರ ಸಂರಕ್ಷಣೆಯ ಕಾಳಜಿ ವ್ಯಕ್ತವಾಗಿದೆ. ನಗರ ಪ್ರದೇಶಗಳ ಮಾಲಿನ್ಯ ಮತ್ತು ಮಾಲಿನ್ಯ ನಿರ್ವಹಣೆಯ ಸಮಸ್ಯೆಗಳನ್ನು ಬಿಡಿಸುತ್ತಾ ಇದ್ದುದರಲ್ಲಿ ನಮ್ಮ ಬೆಂಗಳೂರೇ ಪರವಾಗಿಲ್ಲ ಎನ್ನುವ ಸಮಾಧಾನವನ್ನು ನೀಡಿದ್ದಾರೆ. ಜನರ ಮೂಲಭೂತ ಗುಣವಾದ ಸೋಮಾರಿತನ (ಅವರವರ ಅಂಗಳದಲ್ಲಿ ಕಸವಿರಬಾರದು)ದಿಂದಾಗಿ ಮಾಲಿನ್ಯ ಸಮಸ್ಯೆ ತೀವ್ರವಾಗಿದೆ ಎನ್ನುವ ಲೇಖಕರ ವಾದ ಸಕಾಲಿಕ. ಪರಿಸರ ಮಾಲಿನ್ಯದ ಕಾರಣ ಪರಿಣಾಮಗಳನ್ನು ಚರ್ಚಿಸಿದ ಲೇಖಕರು ಇದಕ್ಕೆಲ್ಲಾ ಕಾರಣ ಮಾನವನ ಅತಿಯಾಸೆ ಮತ್ತು ಜ್ಞಾನದ ದುರುಪಯೋಗ ಎನ್ನುವ ಅಭಿಪ್ರಾಯ ಸತ್ಯವಾದುದು. ಘನತ್ಯಾಜ್ಯ ವಿಲೇವಾರಿಯ ವಿಶ್ವರೂಪವನ್ನು ಬಿಚ್ಚಿಟ್ಟ ಲೇಖಕರು ಇದರ ವೈಜ್ಞಾನಿಕ ವಿಲೇವಾರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಸುಪ್ರೀಂಕೋರ್ಟ್‌ನಲ್ಲಿ ಹೋರಾಡಿದ ಎಪ್ಪತ್ತರ ಹರೆಯದ ಅಲ್ಮಿತ್ರಾ ಪಟೇಲ್‌ರವರ ಹೋರಾಟವನ್ನು ಹೆಮ್ಮೆಯಿಂದ ನೆನೆಯುತ್ತಾರೆ. ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂರವರ ಬಯಕೆಯಂತೆ ಘನತ್ಯಾಜ್ಯಗಳ ಮರುಬಳಕೆ ಮತ್ತು ಗೊಬ್ಬರ ತಯಾರಿಕೆ ಕೆಲಸವಾಗಬೇಕು. ಇತರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸ್ವಚ್ಛತೆಗೆ ನೀಡಿರುವ ಮಹತ್ವ ಅಲ್ಲಿನ ಕಾನೂನು ಜನರ ವಿವೇಕ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಭಾರತೀಯರೂ ಅನುಸರಿಸಬೇಕು, 'ಸ್ವಚ್ಛತೆಯು ದೈವತ್ವಕ್ಕೆ ಸಮಾನ' ಎನ್ನುವ ಸಂದೇಶವನ್ನು ನೀಡಿದ್ದಾರೆ. ಪರಿಸರ ಜಾಗೃತಿ ಮೂಡಿಸುವಲ್ಲಿ ಈ ಲೇಖನ ಉಪಯುಕ್ತವಾದುದು.

**'ಭಾಷೆಯೆಂಬುದು ನೋಡಾ ಬಾಂಧವ್ಯದ ಬೇರು'** ಎಂಬ ಲೇಖನ ಭಾಷೆ ಬಾಂಧವ್ಯವನ್ನು ಬೆಸೆಯುವ ಅಸ್ತ್ರವಾಗಬೇಕು ಎಂದು ಸಾರುತ್ತದೆ. ಮರಾಠಿಯೇತರ ಜನರ ಮೇಲೆ ನಡೆದ ಹಲ್ಲೆಯನ್ನು ಆತಂಕದಿಂದ ಕಾಣುತ್ತಾರೆ. ಇಷ್ಟೆಲ್ಲಾ ಆತಂಕದ ನಡುವೆ ಮುಂಬೈನಲ್ಲಿ ನಡೆದ ಕನ್ನಡ ಸಾಂಸ್ಕೃತಿಕ ಉತ್ಸವಕ್ಕೆ ಮರಾಠಿ ಭಾಷಿಕರು ನೀಡಿದ ಸಹಕಾರ ಕನ್ನಡ ಮರಾಠಿಯವರ ಕರುಳ ಬಾಂಧವ್ಯಕ್ಕೆ ಸಾಕ್ಷಿಯಾಗಿದೆ ಮತ್ತು ಇದನ್ನು ಆಧಾರ ಸಹಿತ ನಿರೂಪಿಸಿದ ಹಿರಿಯರನ್ನು ಅಭಿಮಾನಪೂರ್ವಕವಾಗಿ ಸ್ಮರಿಸುತ್ತಾರೆ. ಈ ಸಾಂಸ್ಕೃತಿಕ ಉತ್ಸವದಲ್ಲಿ ಮುಂಬೈ ಮೇಯರ್ ಮತ್ತು ಪುರಪಿತೃಗಳು ಭಾಗವಹಿಸಿ ಕನ್ನಡಿಗರನ್ನು ಗೌರವಿಸಿದ ರೀತಿ ಬೆಳಗಾವಿಯ ಸ್ಥಿತಿಯೊಂದಿಗೆ ಹೋಲಿಸಿ ನೋಡುತ್ತಾರೆ. ಬೆಳಗಾವಿ ಮರಾಠಿಯವರ ವರ್ತನೆಗೆ ವಿಷಾದಿಸುತ್ತಾರೆ. ಭಾಷೆಯ ಮೂಲ ಆಶಯವೇ ಪರಸ್ಪರ ತಿಳುವಳಿಕೆ, ಜ್ಞಾನವೆಲ್ಲವೂ ಭಾಷೆಯಲ್ಲಡಗಿದೆ ಮತ್ತು ಭಾಷಾ ದ್ವೇಷದಿಂದ ಜ್ಞಾನವನ್ನು ಕಳೆದುಕೊಳ್ಳುತ್ತೇವೆ ಎಂದು ಎಲ್ಲರನ್ನೂ ಎಚ್ಚರಿಸುತ್ತಾರೆ. ಉರ್ದು ಭಾಷೆಯ

ಮಹತ್ವವನ್ನು ಹೇಳುತ್ತಾ ಹಲವು ಭಾಷೆ ಕಲಿತು ಜ್ಞಾನ ಮತ್ತು ಪ್ರೀತಿಯನ್ನು ಹರಿಸಿ ಎಂದು ಕರೆಕೊಡುವ ಲೇಖಕರ ಕಳಕಳಿ ಅರ್ಥಪೂರ್ಣವಾದುದು.

**'ಕನ್ನಡಿಗರ ಎರಡು ಕಣ್ಣುಗಳು : ಪಂಪನ ಕಾವ್ಯಗಳು'** ಎನ್ನುವ ಲೇಖನದಲ್ಲಿ ಪಂಪನ ಎರಡು ಮಹಾಕಾವ್ಯಗಳ ಮಹಿಮೆಯನ್ನು ವಿವರಿಸಿದ್ದಾರೆ. ಅವು ಕನ್ನಡ ಕಾವ್ಯ ಸಂಸ್ಕೃತಿಯ ಅಡಿಗಲ್ಲುಗಳು ಇಂತಹ ಕಾವ್ಯಗಳನ್ನು ಬಿ.ಎಲ್.ರೈಸ್ ಮತ್ತು ಎಸ್.ಜಿ.ನರಸಿಂಹಾಚಾರ್ಯರು ಪ್ರಕಟಿಸುವವರೆಗೆ ಕನ್ನಡಿಗರಿಗೆ ತಲುಪಿರಲಿಲ್ಲ ಎನ್ನುವುದರ ಬಗ್ಗೆ ಲೇಖಕರು ಕಳವಳಗೊಳ್ಳುತ್ತಾರೆ. ಕನ್ನಡಿಗನ ಅಭಿಮಾನ ಗ್ರಂಥಕ್ಕೆ ಬೆಳಕು ತೋರಿಸಲು ಒಬ್ಬ ಆಂಗ್ಲ ಮಹಾಶಯನೇ ಬೇಕಾಯ್ತು ಎನ್ನುವುದು ಯೋಚಿಸುವ ವಿಷಯ. ಪಂಪನ ಕಾವ್ಯಗಳನ್ನು ಶೋಧಿಸಿ ಪ್ರಕಟಿಸಿದ ಡಾ.ಎಲ್.ಬಸವರಾಜುರವರ ಪ್ರಯತ್ನ ಮತ್ತು ಪ್ರಕಟಣೆಯ ದಿನದಂದು ಡಾ. ಕಿ.ರಂ.ನಾಗರಾಜ್‌ರವರ ಪಾಂಡಿತ್ಯಪೂರ್ಣ ಭಾಷಣವನ್ನು ಹೃದಯಪೂರ್ವಕವಾಗಿ ಕೊಂಡಾಡಿದ್ದಾರೆ. ಪಂಪನ ಇತಿಹಾಸ ಕೃತಿ ರಚನೆಯ ಕಾಲ ಎಲ್ಲವನ್ನೂ ಚರ್ಚಿಸಿದ ನಂತರ ಮಹಾಭಾರತ ಸಂಸ್ಕೃತ ಮತ್ತು ಪ್ರಾಕೃತ ಭಾಷೆಯನ್ನು ಹೊರತುಪಡಿಸಿದರೆ ಕನ್ನಡದಲ್ಲಿಯೇ ಬಂದಿರುವುದು ಕನ್ನಡಿಗರ ಹೆಗ್ಗಳಿಕೆ. ಇಂತಹ ಮಹಾನ್ ಕೃತಿಯನ್ನು ಕನ್ನಡಿಗರಿಗೆ ತಲುಪಿಸಿದ ಡಾ.ಎಲ್. ಬಸವರಾಜುರವರನ್ನು ಸಮಸ್ತ ಕನ್ನಡಿಗರ ಪರವಾಗಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

**'ಅಮೆರಿಕಾದ "ಅಕ್ಕ" ಕರ್ನಾಟಕದ 'ತಂಗಿಯೆ'** ಎಂಬ ಲೇಖನದಲ್ಲಿ ಸಾಗರದಾಚೆ ಅಮೆರಿಕಾ ಎಂಬ ಮಾಯಾಲೋಕದಲ್ಲಿ "ಅಕ್ಕ" ಎಂಬ ಕನ್ನಡ ಸಂಘಟನೆಯಡಿಯಲ್ಲಿ ನಡೆದ ಕನ್ನಡ ಸಮ್ಮೇಳನದ ಚಿತ್ರಣವನ್ನು ಕಣ್ಣಿಗೆ ಕಾಣುವಂತೆ ಚಿತ್ರಿಸಿದ್ದಾರೆ. "ಅಕ್ಕ" ಸಂಘಟನೆಯ ಸ್ಥಾಪನೆ, ಸಾಂಸ್ಕೃತಿಕ ಉತ್ಸವಕ್ಕೆ ಅಮೆರಿಕದವರು ನೀಡಿದ ಪ್ರೋತ್ಸಾಹ ಮತ್ತು ಕರ್ನಾಟಕ ಸರ್ಕಾರದ ಸಹಕಾರ ಎಲ್ಲವನ್ನೂ ಸಂತೋಷದಿಂದ ನೆನೆದಿದ್ದಾರೆ. ಕನ್ನಡ ಹಬ್ಬದಲ್ಲಿ ಪಾಲ್ಗೊಂಡ ಎಲ್ಲಾ ಸಾಹಿತಿ ಕಲಾವಿದರು, ಸಚಿವರು, ಅಧಿಕಾರಿಗಳು ಮತ್ತು ಎಲ್ಲಾ ಕನ್ನಡಾಭಿಮಾನಿಗಳನ್ನು ಲೇಖಕರು ಅಕ್ಷರಗಳಲ್ಲಿ ಅಭಿನಂದಿಸುತ್ತಾರೆ. ಇಂತಹ ಉತ್ಸವವನ್ನು ಆಯೋಜಿಸಿದ ಅಮೆರಿಕಾ ಕನ್ನಡಿಗರ ಪ್ರಯತ್ನ ಶ್ಲಾಘನೀಯ. ಭೋಜನ ವ್ಯವಸ್ಥೆಯ ವರ್ಣನೆ ಬಾಯಲ್ಲಿ ನೀರೂರಿಸುವಂತಿದೆ. ಹಿರಿಯ ಸಾಹಿತಿಗಳೊಂದಿಗಿನ ಸಂವಾದ ಮತ್ತು ಇತರ ಕಲಾಪ್ರಕಾರಗಳು ಸಮ್ಮೇಳನದ ಸತ್ವವನ್ನು ಎತ್ತಿ ಹಿಡಿದಿದೆ. ಆದ್ದರಿಂದ ಅಮೆರಿಕಾದ "ಅಕ್ಕ" ಕರ್ನಾಟಕದ ತಂಗಿ ಎನ್ನುವುದು ಲೇಖಕರ ಅನುಭವದ ಮಾತು.

**'ತ್ಯಜಿಸಿ ಭುಜಿಸುವ ಭಾವ ಬಲು ಮೇಲು'** ಲೇಖನದಲ್ಲಿ ದೊಡ್ಡತನ ಬರುವುದು ನಮ್ಮ ದೊಡ್ಡ ಗುಣದಿಂದಲೇ ಎನ್ನುವುದಕ್ಕೆ ಹಿರಿಯರಾದ ಶ್ರೀ ಸಿದ್ಧಲಿಂಗಯ್ಯನವರಿಗೆ ಸಂಬಂಧಿಸಿದ ಒಂದು ಘಟನೆಯನ್ನು ನೆನಪಿಸುತ್ತಾರೆ. ಲಾಭವೇ ಬದುಕಾಗಿರುವ ಈ ಜಾಗತೀಕರಣದಲ್ಲಿ ಪ್ರಾಮಾಣಿಕತೆಯೇ ಪ್ರಾಣವಾಯು, ತನ್ನದನ್ನು ತ್ಯಾಗಮಾಡಿ ಅದರಲ್ಲಿನ ಮಹದಾನಂದವನ್ನು ಜಗತ್ತಿಗೆ ತೋರಿಸಿಕೊಟ್ಟ ಪೌರಾಣಿಕ ಮತ್ತು ಐತಿಹಾಸಿಕ ವ್ಯಕ್ತಿಗಳ ಉದಾಹರಣೆಗಳನ್ನು ನಮ್ಮ ಮುಂದಿಡುತ್ತಾರೆ. ಅಲ್ಲದೇ ತೀರಾ ಇತ್ತೀಚೆಗೆ

ಪ್ರಾಮಾಣಿಕತೆ ಮತ್ತು ತ್ಯಾಗಮೂರ್ತಿಗಳಾಗಿ ಸ್ಥಿತಪ್ರಜ್ಞರಾಗಿದ್ದ ಕೆಲವು ರಾಜಕೀಯ ನಾಯಕರ ಉದಾಹರಣೆಗಳಿಂದ ನಮ್ಮಲ್ಲಿ ಬದುಕಿನ ಬಗ್ಗೆ ಭರವಸೆಯನ್ನು ಮೂಡಿಸುವ ಪ್ರಯತ್ನ ಮಾಡುತ್ತಾರೆ. ಪ್ರಾಣಿಗಳ ಅಗತ್ಯಕ್ಕೆ ಮಾತ್ರ ಬಳಸುವ ಗುಣ ಪ್ರಾಣಿಗಳದ್ದು ಮತ್ತು ಕೂಡಿಡುವ ಗುಣ ಮಾನವರದ್ದು ಎನ್ನುವಲ್ಲಿ ಪ್ರಾಣಿಗಳನ್ನು ನೋಡಿ ಕಲಿಯಬೇಕು ಎನ್ನುವ ಸೂಚನೆಯೊಂದಿಗೆ ತಾಯಿಯ ತ್ಯಾಗವನ್ನು ಪ್ರೀತಿಯಿಂದ ಸ್ಮರಿಸುವಂತೆ ಮಾಡುತ್ತಾರೆ. ಲೇಖಕರ ಊರಾದ ಶಿಗ್ಲಿಯ ಪ್ರೌಢಶಾಲೆಗೆ ತನ್ನ ಜೀವಮಾನದ ಸಂಪತ್ತೆಲ್ಲವನ್ನು ದಾನ ಮಾಡಿದ ಮಹಾತಾಯಿ ಎಲ್ಲರಿಗೂ ಆದರ್ಶಪ್ರಾಯಳಾಗಿರಲಿ ಎನ್ನುವ ಆಶಯವಿದೆ.

**'ಬೆಳಕ ಬೆಡಗ ಬೆನ್ನತ್ತಿ'** ಎನ್ನುವ ಲೇಖನ, ಬೆಳಕನ್ನು ಜ್ಞಾನಕ್ಕೆ ಸಮೀಕರಿಸುತ್ತಾ ಸ್ನೇಹದ ಸೆಲೆಯನ್ನು ವಿವರಿಸಲು ಮೊದಲು ದೀಪಾವಳಿ ಹಬ್ಬದ ವೈಭವದಿಂದ ಸೂರ್ಯನ ಪ್ರಭೆಗೆ ಬಂದ ನಂತರ ಪ್ರತಿಯೊಬ್ಬನ ಅಂತರಂಗದಲ್ಲಿ ಆತ್ಮಜ್ಯೋತಿಯನ್ನು ಹಚ್ಚಿ ಕೊನೆಯಲ್ಲಿ ಅಮವಾಸ್ಯೆಯ ಕಾರ್ಗತ್ತಲಲ್ಲಿ ಕೋಟ್ಯಾನುಕೋಟಿ ತಾರೆಗಳಿದ್ದರೂ ಕೈಯಲ್ಲಿರುವ ಟಾರ್ಚಿನ ಬೆಳಕೇ ಉಪಯೋಗಕ್ಕೆ ಬರುವುದು, ಹಾಗೆ ನಮಗೆ ಎಷ್ಟು ಗೆಳೆಯರಿದ್ದಾರೆ ಎನ್ನುವುದಕ್ಕಿಂತ ನಮ್ಮನ್ನರಿತ ಒಬ್ಬನಿದ್ದರೂ ಸಾಕು ನಮ್ಮ ಬಾಳು ಸಾರ್ಥಕ ಎನ್ನುತ್ತಾರೆ. ಇಲ್ಲಿ ಗಮನಿಸಬೇಕಾದುದು ವಿಷಯಗಳ ವಿಶ್ಲೇಷಣಾತ್ಮಕವಾದ ನಿರೂಪಣೆಯಲ್ಲಿ ಲೇಖಕನ ಕೌಶಲ್ಯ ಏಕೆಂದರೆ ಸ್ಥೂಲದಿಂದ ಸೂಕ್ಷ್ಮದ ಕಡೆಗಿನ ನಡೆ, ಇದು ಭೂತಗನ್ನಡಿಯಲ್ಲಿ ಸೂರ್ಯನ ಕಿರಣಗಳನ್ನು ಕೇಂದ್ರೀಕರಿಸಿ ಜ್ವಾಲೆಯನ್ನು ಸೃಷ್ಟಿಸಿದಂತೆ.

**'ಉತ್ಸವ, ಉತ್ಸಾಹ, ಉಮೇದಿನ ಅಲೆಗಳಲ್ಲಿ'** ಎನ್ನುವ ಲೇಖನ ನಮ್ಮ ಪರಂಪರೆಯ ಅವಿಭಾಜ್ಯ ಅಂಗವಾದ ಜಾನಪದ ಕಲೆಗಳ ಸೊಗಡನ್ನು ಸಾಂಸ್ಕೃತಿಕ ಉತ್ಸವಗಳ ಮೂಲಕ ಕಾಸ್ಮೋಪಾಲಿಟನ್ ಸಂಸ್ಕೃತಿಗೆ ಪರಿಚಯಿಸಬೇಕೆನ್ನುವ ತುಡಿತವನ್ನು ಹೊಂದಿದೆ. ಬರಿಯ ಉತ್ಸವಗಳ ಗುಂಗಿನಲ್ಲಿರದೆ ಉತ್ಸವದ ನಂತರವೂ ಅವುಗಳ ಮಹತ್ವ ಸಾರುವ ಕೆಲಸವಾಗಬೇಕು. ಜಾನಪದ ನಮ್ಮೆಲ್ಲ ಕಲೆಗಳ ತಾಯಿಬೇರು ಮತ್ತು ಗುರು. ನಮ್ಮ ವಿಶ್ವಮಾನ್ಯ ಐತಿಹಾಸಿಕ ತಾಣಗಳಿಗೆ ಮತ್ತು ಸಾಂಸ್ಕೃತಿಕ ಉತ್ಸವಗಳಿಗೆ ಪ್ರವಾಸಿಗಳನ್ನು ಆಕರ್ಷಿಸಲು ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರಕಾರದ ವಿವಿಧ ಇಲಾಖೆಗಳ ಮತ್ತು ಸಾರ್ವಜನಿಕರ ಸಮನ್ವಯತೆಯ ಕುರಿತು ತೀವ್ರ ಕಳಕಳಿ ವ್ಯಕ್ತವಾಗಿದೆ.

**''ವಿಶ್ವ ಪಾರಂಪರಿಕ ತಾಣ ಉಳಿಸಿ ಬೆಳೆಸುವ ಬಗೆ'** ಎಂಬಲ್ಲಿ ನಮ್ಮ ದೇಶದ ನಾಲ್ಕೈದು ಸಾವಿರ ವರ್ಷಗಳ ಸಾಂಸ್ಕೃತಿಕ ಪರಂಪರೆಯನ್ನು ಅಭಿಮಾನಪೂರ್ವಕವಾಗಿ ಸ್ಮರಿಸುತ್ತಾರೆ. ಇಡೀ ಮನುಕುಲವೇ ಇವುಗಳ ರಕ್ಷಣೆಯಲ್ಲಿ ಆಸಕ್ತಿ ತಾಳುವಂತಾಗಬೇಕು. ಪಾಶ್ಚಾತ್ಯ ಸ್ಮಾರಕಗಳು ಕಲಾತ್ಮಕತೆಯಲ್ಲಿ ಸಾಧಾರಣವಾಗಿದ್ದರೂ ಅವರ ನಿರಂತರ ಪರಿಶ್ರಮದ ಫಲವಾಗಿ ಜಗತ್ತಿನೆಲ್ಲರ ಗಮನ ಸೆಳೆಯುತ್ತಿದೆ. ಆದರೆ ನಮ್ಮ ಇಟಗಿ, ಲಕ್ಕುಂಡಿ, ಬನವಾಸಿ, ಇಕ್ಕೇರಿಗಳು ನಮ್ಮ ಸೋಮಾರಿತನದಿಂದಾಗಿ ಸೌಭಾಗ್ಯ ವಂಚಿತವಾಗಿವೆ. ಗುಣಾತ್ಮಕತೆಯಲ್ಲಿ ಪೈಪೋಟಿಯಿರಬೇಕೆಂದು ಒತ್ತಿ ಹೇಳುತ್ತಾರೆ.

**'ಕಾರಂತರ ಟಾರ್ಚೂ ಮಂತ್ರಿಗಳ ವಾಚೂ'** ಎನ್ನುವ ಲೇಖನ ವ್ಯಕ್ತಿತ್ವ-ನೈತಿಕತೆ-ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತದೆ. ಡಾ.ಶಿವರಾಮಕಾರಂತರ ಪ್ರಾಮಾಣಿಕತೆ, ಸೌಜನ್ಯಗಳನ್ನು ಉದಾಹರಣೆಯಾಗಿ ಹೇಳುತ್ತಾ ಲೇಖಕನಾದವ ಬರೆದಂತೆ ನಡೆಯುವ ಗುಣವಿರಬೇಕು ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಹೊರುವ ಛಾತಿಯಿರಬೇಕು. ಪ್ರಾಮಾಣಿಕತೆಯಿರುವುದು ಹೇಳೋದಕ್ಕೂ ಅಲ್ಲ ತೋರಿಸೋದಕ್ಕೂ ಅಲ್ಲ. ಆಚರಿಸುವುದಕ್ಕೆ ಎನ್ನುವ ನಿವೃತ್ತ ಐ.ಎ.ಎಸ್. ಅಧಿಕಾರಿ ಚಿರಂಜೀವಿ ಸಿಂಗ್ ಅವರ ಅಭಿಪ್ರಾಯವನ್ನು ಉಲ್ಲೇಖಿಸುತ್ತಾ ನಮ್ಮ ಅಪ್ರಾಮಾಣಿಕತೆಯನ್ನು ಬಾಲಿಶ ಕಾರಣಗಳನ್ನು ನೀಡಿ ಸಮರ್ಥಿಸುವ ಲಜ್ಜೆಗೇಡಿತನವನ್ನು ಖಂಡಿಸುತ್ತಾರೆ. ಬೇರೆಯವರ ಮನಸ್ಸನ್ನು ಅರ್ಥಮಾಡಿಕೊಳ್ಳುವ ಮಾನವೀಯ ತುಡಿತವನ್ನು ಮಾಜಿ ಸಚಿವ ಹೊರಟ್ಟಿಯವರಿಗೆ ಸಂಬಂಧಿಸಿದ ಘಟನೆಯಲ್ಲಿ ನೆನಪಿಸಿಕೊಳ್ಳುತ್ತಾರೆ. ಪ್ರಾಮಾಣಿಕ ಅಧಿಕಾರಿ ಮತ್ತು ರಾಜಕಾರಣಿಗಳನ್ನು ಕೃತಜ್ಞತೆಯಿಂದ ನೆನೆಸುತ್ತಾರೆ.

**'ಕನ್ನಡ ಸಾಹಿತ್ಯ ಚರಿತೆಯ ಚರಿತ್ರೆ'** ಮತ್ತು **'ಶಾಸ್ತ್ರೀಯ ಭಾಷಾ ಸ್ಥಾನಮಾನ, ಅಳಿದು ಹೋಗಲಿ ಎಲ್ಲಾ ಅನುಮಾನ'** ಎನ್ನುವ ಬರಹದಲ್ಲಿ ಕನ್ನಡ ಭಾಷೆಯ ಹಿರಿಮೆ, ಪ್ರಾಚೀನತೆ, ಕನ್ನಡ ಸಾಹಿತ್ಯದ ಇತಿಹಾಸವನ್ನು ರಚಿಸುವಲ್ಲಿ ಶ್ರಮಿಸಿದ ಮಹನೀಯರುಗಳು, ಕನ್ನಡ ಸಾಹಿತ್ಯದ ಮಜಲುಗಳು ಮತ್ತು ಅದರಲ್ಲೂ ಜಗತ್ತಿನ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಮಹತ್ತರ ಸ್ಥಾನವನ್ನು ಬಹು ಹೆಮ್ಮೆಯಿಂದ ನೆನೆಪಿಸಿಕೊಳ್ಳುತ್ತಾರೆ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಹೋರಾಟಕ್ಕೆ ಬೆಂಬಲವಾಗಿ ಸೇವೆ ಸಲ್ಲಿಸಿದ ಮತ್ತು ಕನ್ನಡ ಭಾಷೆಯ ಬೆಳವಣಿಗೆಗೆ ಶ್ರಮಿಸಿದ ಎಲ್ಲರನ್ನೂ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತಾರೆ. ಶಾಸ್ತ್ರೀಯ ಸ್ಥಾನಮಾನವನ್ನು ನೀಡುವಂತೆ ಮನವಿ ಸಲ್ಲಿಸಲು ರಾಷ್ಟ್ರಪತಿಯವರನ್ನು ಭೇಟಿಯಾದಾಗ ಶ್ರೀ ಎಂ.ಚಿದಾನಂದಮೂರ್ತಿಯವರು ಮತ್ತು ಶ್ರೀ ದೇ.ಜವರೇಗೌಡರು ಬಹು ಸಮರ್ಥವಾಗಿ ವಾದ ಮಂಡಿಸಿದ್ದನ್ನು ನೆನೆಯುತ್ತಾ ಕ್ರಿ.ಪೂ. 1000 ದಿಂದ ಇರುವ ಕನ್ನಡ ಭಾಷೆಯ ಇತಿಹಾಸವನ್ನು ಸಂಕ್ಷಿಪ್ತವಾಗಿಡುತ್ತಾ ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆಪಡುವಂತೆ ಮಾಡುತ್ತಾರೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ ಹಿನ್ನೆಲೆಯಲ್ಲಿ ಈ ಲೇಖನ ತನ್ನ ಸಾರ್ಥಕತೆಯನ್ನು ಕಂಡಿದೆ.

**'ಯುವ ಭಾರತ, ವೃದ್ಧ ಅಮೆರಿಕ'** ಎನ್ನುವ ಲೇಖನದಲ್ಲಿ ಆಧುನಿಕತೆಯ ಪರಮೋಚ್ಛ ಸ್ಥಾನದಲ್ಲಿರುವ, ಸದಾ ಚಟುವಟಿಕೆಯ ನಾಡಾಗಿರುವ, ಎಲ್ಲವನ್ನೂ ಹಣದಲ್ಲಿ ಅಳೆಯುತ್ತಾ ಆಕರ್ಷಿಸಬಲ್ಲ ಚುಂಬಕ ಶಕ್ತಿಯಾಗಿರುವ ಅಮೆರಿಕ ಹೇಗೆ ವೃದ್ಧರ ನೆಲೆಯಾಗಿ ಮತ್ತು ಭಾರತ ಎಲ್ಲಾ ಕೊರತೆಗಳ ನಡುವೆಯೂ ಯುವ ರಾಷ್ಟ್ರವಾಗಿ ಬೆಳೆಯುತ್ತಿದೆ ಎನ್ನುವುದರ ತುಲನಾತ್ಮಕ ವಿಶ್ಲೇಷಣೆಯಿದೆ. ಭೋಗ ಸಂಸ್ಕೃತಿಯ ನಾಡಾದ ಅಮೇರಿಕದಲ್ಲಿ ಕಠಿಣವಾದ ಕೆಲಸಗಳನ್ನು ವೃದ್ಧರೇ ಮಾಡುತ್ತಿರುವುದಕ್ಕೆ ವಿಷಾದವಿದೆ. ಇದಕ್ಕಿಂತ ಯುವ ಪೀಳಿಗೆಯನ್ನು ಸೃಷ್ಟಿಸುವಲ್ಲಿ ಇಂದಿನವರ ನಿರಾಸಕ್ತಿಯ ಬಗೆಗಿನ ಕಳವಳವನ್ನು ಡಾ.ಎಂ.ಬಿ.ಉದೋಷಿಯವರ ಮಾತನ್ನು ಉಲ್ಲೇಖಿಸಿ ವ್ಯಕ್ತಪಡಿಸುತ್ತಾರೆ. ಆದರೆ ಭಾರತಕ್ಕೆ ಈ ಹೆದರಿಕೆ ಇಲ್ಲ. ಏಕೆಂದರೆ ಒಟ್ಟು

ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚಿನವರು ಯುವಜನರಾಗಿದ್ದಾರೆ. ಆದರೆ ಭಾರತ ಮತ್ತು ಇತರ ಅಭಿವೃದ್ಧಿ ರಾಷ್ಟ್ರಗಳಲ್ಲಿ ಯುವಜನರು ತಮ್ಮ ಸಾಂಪ್ರದಾಯಿಕ ಜೀವನಪದ್ಧತಿಯಿಂದ ದೂರಾಗಿ ಆಧುನಿಕತೆಯೆಡೆಗೆ ಮುಖ ಮಾಡಿರುವುದು ಮೂಲ ಶ್ರಮ ಸಂಸ್ಕತಿಗಾಗುವ ಅಪಾಯದ ಸೂಚನೆಯಿದೆ. ಆಧುನಿಕತೆ ಅರಾಜಕತೆಯನ್ನು ಸೃಷ್ಟಿಸುತ್ತದೆ. ಯುವಕರ ವಲಸೆಯಿಂದ ಅಮೆರಿಕದ ಸ್ಥಿತಿ ನಮಗೂ ಬರಬಹುದು ಆದ್ದರಿಂದ ನಮ್ಮ ಮಾನವ ಸಂಪನ್ಮೂಲ ನಮ್ಮಲ್ಲಿಯೇ ಬಳಕೆಯಾಗಬೇಕು ಎನ್ನುವ ಸಂಕಲ್ಪವಿದೆ.

**'ಕ್ರಿಕೆಟ್ ಸಂಭ್ರಮದಲ್ಲಿ ಕುಸ್ತಿ ಕಣಕ್ಕೆ ಇಳಿಯುತ್ತಾ'** ಎನ್ನುವ ಲೇಖನ ವಲಸೆ ಕ್ರೀಡೆಯಿಂದ ಪರಂಪರಾಗತ ಕ್ರೀಡೆಗಳು ಮಣ್ಣಾಗುತ್ತಿರುವುದರ ಬಗೆಗಿನ ವಿಷಾದವಿದೆ. ಕ್ರಿಕೆಟ್ ಬಂಡವಾಳಶಾಹಿಗಳ ಕ್ರೀಡೆ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯ ಹೊರತುಪಡಿಸಿದರೆ ಕ್ರಿಕೆಟ್ ಆಡುವ ಬಹುತೇಕ ಎಲ್ಲಾ ರಾಷ್ಟ್ರಗಳು ಬಡ ರಾಷ್ಟ್ರಗಳು. ಮಾನವ ಶ್ರಮವನ್ನು ಅತಿಯಾಗಿ ನುಂಗಿ ಹಾಕುವ ಆಟ. ದಿನವಿಡೀ ಮತ್ತು ದಿನಗಟ್ಟಲೆ (ಟೆಸ್ಟ್) ಆಟ ಈ ಜಗತ್ತಿನಲ್ಲಿ ಬೇರೊಂದಿರಲಿಕ್ಕಿಲ್ಲ. ಇಡೀ ಜಗತ್ತಿನ ಸಂಪತ್ತನ್ನು ಕೊಳ್ಳೆ ಹೊಡೆದ ಇಂಗ್ಲೆಂಡಿಗೆ ದುಡಿಯದೆ ಸಮಯವನ್ನು ಕೊಲ್ಲುವ ಒಂದು ಆಟ ಬೇಕಿತ್ತು ಅದೇ ಕ್ರಿಕೆಟ್. ಮೈ ಕೈ ಕೊಳೆ ಮಾಡಿಕೊಳ್ಳದೆ ಆಡುವ ಆಟ. ಭಾರತದಂತಹ ದೇಶಕ್ಕೆ ಇದು ಬೇಡವಾಗಿತ್ತು. ನಮಗೆ ಮೈ ಕೈ ಕೊಳೆ ಮಾಡಿಕೊಳ್ಳದೆ ಆಡುವ ಆಟ. ಭಾರತದಂತಹ ದೇಶಕ್ಕೆ ಇದು ಬೇಡವಾಗಿತ್ತು. ನಮಗೆ ಮೈ ಕೈ ಬಗ್ಗಿಸಿ, ಮಣ್ಣಿನೊಂದಿಗೆ ಆಡುವ ದೇಹ ಮತ್ತು ಮನಸ್ಸನ್ನು ಅರಳಿಸುವ ಸಾಂಪ್ರದಾಯಿಕ ಕ್ರೀಡೆಗಳು ಸಾಕಿತ್ತು. ಗರಡಿಯಲ್ಲಿ ಪಳಗಿದವರಲ್ಲಿನ ವಿನಯ, ಸೌಜನ್ಯ, ನೈತಿಕತೆ ಮತ್ತು ಸಹಕಾರದ ಮನೋಭಾವವನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ನಮ್ಮ ಸಾಂಪ್ರದಾಯಿಕ ಕ್ರೀಡೆಗಳು ನಮ್ಮ ಸಂಸ್ಕೃತಿಯ ಈ ಮಣ್ಣಿನ ಮೂಲ ಸತ್ವದ ಪ್ರತೀಕ ಅದನ್ನು ಒಂದು ಪರಕೀಯ ಆಟ ನುಂಗಿ ಹಾಕುತ್ತಿದೆ ಎನ್ನುವ ತೀವ್ರ ವಿಷಾದ ಇದ್ದಾಗ್ಯೂ ಲೇಖಕರು ಕ್ರಿಕೆಟ್ಟನ್ನು ದ್ವೇಷಿಸದೇ ನಮ್ಮ ಸಂಸ್ಕೃತಿ ಮತ್ತು ಹೃದಯ ವೈಶಾಲ್ಯತೆಯನ್ನು ಎತ್ತಿ ಹಿಡಿಯುತ್ತಾರೆ.

**'ಎದ್ದು ಬಂದ ಬುದ್ಧನಿಲ್ಲಿ ನೆಲಸಿನಿಂದನೋ'** ಎಂಬ ಅಂಕಣದಲ್ಲಿ ಬುದ್ಧ ಬುದ್ಧ ಜಗವೆಲ್ಲ ಮಲಗಿರಲು ಅವನೊಬ್ಬನೇ ಎದ್ದ, ಎಂಬ ಕವಿವಾಣಿಯನ್ನು ಸ್ಥಿರೀಕರಿಸುತ್ತಾರೆ. ಬೌದ್ಧಧರ್ಮದ ಪ್ರಾಚೀನ ನೆಲೆವೀಡುಗಳಲ್ಲಿ ಕರ್ನಾಟಕವೂ ಒಂದಾಗಿತ್ತೆಂಬುದನ್ನು ಈವರೆಗಿನ ಸಂಶೋಧನೆಗಳನ್ನು ಉಲ್ಲೇಖಿಸಿ ಸೂಚಿಸುವುದರ ಮೂಲಕ ಕರ್ನಾಟಕ ಸರ್ವಧರ್ಮಗಳ ಆಶ್ರಯತಾಣ ಎನ್ನುವುದನ್ನು ದೃಢೀಕರಿಸುತ್ತಾರೆ. ಗೊಮ್ಮಟನಂತೆ ರಾಜ ವೈಭೋಗವನ್ನು ತೊರೆದು ಲೌಕಿಕದಿಂದ ಅಲೌಕಿಕದೆಡೆಗೆ ಜ್ಞಾನಾನ್ವೇಷಿಯಾಗಿ ತೆರಳಿದ. ಆತ್ಮ ಸಾಕ್ಷಾತ್ಕಾರದಿಂದ ಬುದ್ಧನಾದ ಹಾಗೆಯೇ ನಾವೆಲ್ಲರೂ ಬುದ್ಧನಾಗಲು ಸಾಧ್ಯ. ಇದಕ್ಕೆ ನಮ್ಮ ಅಂತರಂಗವನ್ನು ಸಾಧನಾ ಕೇಂದ್ರವಾಗಿ ಬಳಸಿಕೊಳ್ಳಬೇಕೇ ಹೊರತು ನಮ್ಮ ಬಾಹ್ಯ ಸಂಕೇತಗಳನ್ನಲ್ಲ ಮತ್ತು ಅವರಿಗೆ ಅವರೇ ದೀಪಗಳು ಎನ್ನುವುದನ್ನು ಅರಿಯಬೇಕು ಎಂಬ ಸಂದೇಶವನ್ನು ನೀಡಿದ್ದಾರೆ.

**'ಬಸವಾ ಎಂದು ಕರೆದರೆ ಹುಲಿಯಂತೆ ಬರಬೇಕು'** ಎಂಬ ಲೇಖನದಲ್ಲಿ ಉತ್ತರ ಕರ್ನಾಟಕದ ಗ್ರಾಮೀಣರ ಆಹಾರ ಸಂಸ್ಕೃತಿಯನ್ನು ಕಟ್ಟಿಕೊಡುತ್ತಾರೆ. ಶುದ್ಧ ದೇಸಿ ಪದಗಳನ್ನು ಬಳಸಿ ಆಹಾರ ಕ್ರಮವನ್ನು ವರ್ಗೀಕರಿಸಿ ಬಾಯಲ್ಲಿ ನೀರೂರುವಂತೆ ವರ್ಣಿಸುತ್ತಾರೆ. ಬದಲಾದ ಕಾಲಘಟ್ಟದಲ್ಲಿ ಆಹಾರ ಪದ್ಧತಿಯಲ್ಲಿನ ಬದಲಾವಣೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ಆಹಾರದೊಂದಿಗೆ ಬೆಸೆದಿದ್ದ ಜಾನಪದ ಸಂಸ್ಕೃತಿ ಕಣ್ಮರೆಯಾಗಿರುವುದನ್ನು ವೇದನೆಯಿಂದ ನೆನೆಸುತ್ತಾರೆ. 'ಸುಂಕಬುತ್ತಿ' 'ರಾಶಿ ಊಟ'ಗಳ ಜಾನಪದ ಹಿನ್ನಲೆ, ಪೈಲ್ವಾನರ ಆಹಾರದ ಸಮೃದ್ಧಿ ಉದಾ : 'ಚಪಾತಿಗೆ ಬೆಣ್ಣೆಯಲ್ಲಿ ಬೆಣ್ಣೆಗೆ ಚಪಾತಿ', 'ಅನ್ನಕ್ಕೆ ತುಪ್ಪವಲ್ಲ ತುಪ್ಪಕ್ಕೆ ಅನ್ನ' ಎನ್ನುವ ನುಡಿಗಟ್ಟುಗಳ ಮೂಲಕ ಗ್ರಾಮೀಣ ಆಹಾರ ವೈಭವವನ್ನು ಅನಾವರಣಗೊಳಿಸುತ್ತಾರೆ. ಆಹಾರ ನಾಲಗೆಗೆ ರುಚಿಯನ್ನು ಕೊಡುವುದಕ್ಕಿಂತ ದೇಹಕ್ಕೆ ಶಕ್ತಿಯನ್ನು ನೀಡುವುದಾಗಬೇಕು. ಊಟಕ್ಕೊಂದು ಹದವಿರಬೇಕು, ಅದಕ್ಕೆ ಬಡತನ ಸಿರಿತನ ಮುಖ್ಯವಲ್ಲ. ಅಂದು ಪೌಷ್ಟಿಕತೆಗಾಗಿ ಆಹಾರ ಇತ್ತು ಇಂದು ತಿನ್ನುವುದಕ್ಕಾಗಿ ಮಾತ್ರ ಆಹಾರ ಪೌಷ್ಟಿಕತೆಗೆ ಔಷಧಿ. ಗ್ರಾಮೀಣ ಆಹಾರ ಸಂಸ್ಕೃತಿ ಪುನರುಜ್ಜೀವನಗೊಳ್ಳಲಿ ಎನ್ನುವ ಆಶಯ ಶ್ಲಾಘನೀಯ.

**'ಸಮ್ಮೇಳನ, ಶತಮಾನೋತ್ಸವಗಳ ಅನ್ನ ಜ್ಞಾನ ಅಂಗಳದಲ್ಲಿ'** ಎಂಬ ಲೇಖನ 2009ರ ಫೆಬ್ರುವರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಸಿದ್ಧಗಂಗಾ ಮಠಾಧ್ಯಕ್ಷರ 101ನೇ ವರ್ಷಾಚರಣೆಯ ಸಮಾರಂಭದಂತಹ ಸಾಂಸ್ಕೃತಿಕ ಹಬ್ಬದಲ್ಲಿ ನಡೆದ ಅನ್ನ ಮತ್ತು ಜ್ಞಾನ ದಾಸೋಹದ ಮಹಿಮೆಯನ್ನು ತೌಲನಿಕವಾಗಿ ಚರ್ಚಿಸುತ್ತಾರೆ. ಒಂದು ಕಾಲದಲ್ಲಿ ಸಮಾನತೆಯ, ಅನ್ನದ ಮತ್ತು ಅಕ್ಷರದ ಹಸಿವು ಇದ್ದ ಕಾಲದಲ್ಲಿ ಅನ್ನ-ಜ್ಞಾನಸಮಾನತೆಗಳ ತ್ರಿವಿಧ ದಾಸೋಹದ ಮೂಲಕ ಸಾಮಾಜಿಕ ಕ್ರಾಂತಿಗೆ ಬುನಾದಿ ಹಾಕಿದ ಧರ್ಮಾಧಿಕಾರಿಗಳನ್ನು ಕೃತಜ್ಞತೆಯಿಂದ ಸ್ಮರಿಸಿದ ಲೇಖಕರು ಸಾಹಿತ್ಯ ಸಮ್ಮೇಳನದ ಭೋಜನಶಾಲೆಯಲ್ಲಿ ಭೋಜನಾಸಕ್ತರ ಅಶಿಸ್ತಿನ ವರ್ತನೆ ಮತ್ತು ಸಿದ್ಧಗಂಗಾಮಠದ ಭೋಜನಶಾಲೆಯಲ್ಲಿ ಭಕ್ತರು ತೋರಿದ ಶಿಸ್ತು ಮತ್ತು ಸಂಯಮವನ್ನು ವಿಶ್ಲೇಷಿಸುತ್ತಾ ಕಾರಣಗಳನ್ನು ಹುಡುಕುತ್ತಾರೆ. ಲೇಖಕರ ಪ್ರಕಾರ ಮಠದಲ್ಲಿ ಆಧ್ಯಾತ್ಮಿಕ ನಿಷ್ಠೆಯಿಂದ ಮತ್ತು ಅಂತಹ ನಿಷ್ಠೆಯನ್ನು ಸಾಹಿತ್ಯ ಸಮ್ಮೇಳನಗಳಿಗೆ ಬರುವ ಅಭಿಮಾನಿಗಳೂ ಬೆಳೆಸಿಕೊಳ್ಳಬೇಕು ಎಂಬ ಕಿವಿಮಾತನ್ನು ಹೇಳುತ್ತಾರೆ. ಅನ್ನ ಬ್ರಹ್ಮನ ವಿರಾಟ್ ಸ್ವರೂಪವನ್ನು ಬಿಡಿಸಿಟ್ಟ ಲೇಖಕರು ಸ್ವಾತಂತ್ರ್ಯೋತ್ಸವದ ಅರವತ್ತು ವರ್ಷಗಳ ನಂತರವೂ ಹಸಿವು ಅಳಿಯದಿರುವಲ್ಲಿನ ವಿಶಾದದಲ್ಲಿ ಸಮಾಜವಾದಿ ಚಿಂತನೆಯ ಮೆರುಗನ್ನು ನೀಡುತ್ತಾರೆ. ಕೊನೆಯಲ್ಲಿ ಕನ್ನಡಿಗರ ಉತ್ಸಾಹ ಸದಾ ಉಕ್ಕಿಹರಿಯಲಿ ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಾರೆ.

**'ಕರುಳ ಕತ್ತರಿಸುವ ಕ್ರೌರ್ಯ ಅದೆಷ್ಟು ಅಮಾನವೀಯ'** ಲೇಖನದಲ್ಲಿ ಹಿಂಸೆಯನ್ನು ಅತಿರಂಜಿತವಾಗಿ ತೋರಿಸುವ ದೃಶ್ಯ ಮಾಧ್ಯಮಗಳ ಬಗ್ಗೆ ಸಾತ್ವಿಕ ರೋಷವನ್ನು ವ್ಯಕ್ತಪಡಿಸಿದರೆ ಈ ನಾಗರೀಕ ಸಮಾಜ ಅನಾಗರಿಕವಾಗಿ ವರ್ತಿಸುತ್ತಿರುವುದರ ಬಗ್ಗೆ ಆತಂಕಗೊಳ್ಳುತ್ತಾರೆ. ಒಡಹುಟ್ಟಿದವರ ನಡುವಿನ ಕಲಹ ಮತ್ತು

ಕ್ರೌರ್ಯ ಅಕ್ಷಮ್ಯವಾದುದು. ದೊಡ್ಡವರ ಸಣ್ಣತನ ಹೇಸಿಗೆ ತರುವಂತಹುದು. ಇಲ್ಲಿ ವೈಯಕ್ತಿಕ ಕ್ರೌರ್ಯ, ಸಾಮಾಜಿಕ ಮತ್ತು ಸಾಮೂಹಿಕ ಕ್ರೌರ್ಯವನ್ನು ವಿಶ್ಲೇಷಿಸುವಾಗ ಜಿಹಾದ್ ಮತ್ತು ನಕ್ಸಲಿಸಂನ್ನು ಒಂದೇ ನೆಲೆಯಲ್ಲಿ ಖಂಡಿಸುತ್ತಾರೆ. ಇದು ತಾತ್ವಿಕವಾಗಿ ವಿವಾದಗ್ರಸ್ತವಾಗಬಲ್ಲದಾದರೂ ಜೀವಹಾನಿಯ ದೃಷ್ಟಿಯಿಂದ ಸಮರ್ಥನೀಯ. ಧರ್ಮಗ್ರಂಥಗಳ ಸಾರವನ್ನರಿಯದೆ ಧರ್ಮದ ದುರ್ವ್ಯಾಖ್ಯಾನವೇ ಈ ಅನಾಹುತದ ತಾಯಿ ಎನ್ನುವ ವಾದ ತುಂಬಾ ಪ್ರಸ್ತುತ. ಈ ಎಲ್ಲಕ್ಕಿಂತ ಕಳವಳಕಾರಿಯಾದುದು ಸುಶಿಕ್ಷಿತರಿಂದ ಮತ್ತು ಆಧುನಿಕ ತಂತ್ರಜ್ಞಾನದಿಂದ ಆಗುತ್ತಿರುವ ಭ್ರೂಣ ಹತ್ಯೆ ಎನ್ನುವ ನಿಲುವು, ಸಮಯೋಚಿತವಾದುದು ಮತ್ತು ಲಿಂಗ ಅಸಮಾನತೆಯಿಂದ ಆಗುವ ಆಪತ್ತಿನ ಎಚ್ಚರಿಕೆಯ ಘಂಟೆಯಾಗಿದೆ.

**'ಮಳೆ, ಮಳೆದೇವ, ಮಳೆರಾಜ ಇತ್ಯಾದಿಯಾಗಿ'** ಅಂಕಣದಲ್ಲಿ ಗ್ರಾಮೀಣ ಭಾಗದ ಆರ್ಥಿಕ ಪರಿವರ್ತನೆಯ ಕಾರಣದಿಂದ ಗ್ರಾಮ ಸಂಸ್ಕೃತಿ ನಗರ ಸಂಸ್ಕೃತಿಯಾಗಿ ಬದಲಾಗುವಾಗ ಜನಮನದಲ್ಲಿ ಮಳೆಯ ಬಗೆಗಿನ ಭಾವನೆಯನ್ನು ತುಲನಾತ್ಮಕವಾಗಿ ಬಿಂಬಿಸಿದ್ದಾರೆ. ಗ್ರಾಮೀಣರಿಗೆ ಮಳೆ ಬರಿಯ ನೀರಲ್ಲ, ಅದು ಜೀವಜಲ. ಅದು ಋತುಮಾನದ ಬದಲಾವಣೆಯಲ್ಲ, ಜೀವ ಚೈತನ್ಯದ ಪರ್ವಕಾಲ, ಅದು ನಿಸರ್ಗ ಸಹಜ ಕ್ರಿಯೆಯಲ್ಲ. ಅದು ವರುಣದೇವನ ಅನುಗ್ರಹ. ಬರದ ಕಾಡಿನಲ್ಲಿ ಮಳೆಗಾಗಿ ಹಂಬಲಿಸುವ ಮತ್ತು ಅದನ್ನು ಸ್ವಾಗತಿಸುವ ಪರಿಯನ್ನು ತುಂಬಾ ಆಪ್ಯಾಯಮಾನವಾಗಿ ಚಿತ್ರಿಸಿದ್ದಾರೆ. ಪ್ರಕೃತಿ ಮುನಿದಾಗ ಮಳೆಯನ್ನೇ ನಂಬಿ ಬದುಕುವ ನೇಗಿಲಯೋಗಿಯ ದುಃಸ್ಥಿತಿಯನ್ನು ಲೇಖಕರು ತಮ್ಮದೇ ಕವನದ ಸಾಲುಗಳಲ್ಲಿ "ಹುಟ್ಟಬಹುದಿಲ್ಲಿ ದುಂಬಿ ಕೋಗಿಲೆಯಾಗಿ ಕ್ರಿಮಿಕೀಟವಾಗಿ / ಹುಟ್ಟಬಾರದಿಲ್ಲಿ ರೈತನಾಗಿ ಮತ್ತಾತನ ಸಂತತಿಯಾಗಿ" ಹೇಳಿರುವುದು ನಮ್ಮ ವ್ಯವಸ್ಥೆಯ ವಿಡಂಬನೆಯಾಗಿದೆ. ಆದರೆ ನಗರದವರಿಗೆ ಮಳೆ ಎಂದರೆ ಅಸಡ್ಡೆ ಮತ್ತು ಕಿರಿಕ್. ಆದರೆ ನಗರದವರ ನಗುವಿರುವುದೇ ಹಳ್ಳಿಯ ಮಳೆಯಲ್ಲಿ. ಜಲಸಾಕ್ಷರತೆ ಮತ್ತು ಮಳೆ ಕೊಯ್ಲಿನ ಸಾಂಪ್ರದಾಯಿಕ ವಿಧಾನಗಳ ಪ್ರಸ್ತಾಪ ಸಕಾಲಿಕ. ಮಳೆಯ ಮಹಿಮೆಯನ್ನು ಶುದ್ಧ ದೇಸಿ ಪದಗುಚ್ಛಗಳಲ್ಲಿ ವರ್ಣಿಸಿರುವುದು ಮಳೆ ಮತ್ತು ಗ್ರಾಮೀಣ ಸಂಸ್ಕೃತಿಯ ನಡುವಿನ ಸಂಬಂಧವನ್ನು ಘನೀಕರಿಸಿದ್ದಾರೆ.

**"ಮೂಲ ಸಂವೇದನೆಯ ಅಪರೂಪದ ಸುಖಾನುಭವ"** ಎನ್ನುವ ಅಂಕಣ 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರಿಯೇಸಿ' ಎಂಬ ಸಂಸ್ಕೃತ ಉಕ್ತಿಯ ಕನ್ನಡ ವಿವರಣೆ. ಇಲ್ಲಿ ಪ್ರತಿಯೊಬ್ಬರೂ ತಾವು ಹುಟ್ಟಿ ಬೆಳೆದ ಊರ ಅಭಿಮಾನಿಯಾಗಿರಬೇಕು' ಎನ್ನುವ ಸಾರ್ವಕಾಲಿಕ ಸಂದೇಶವನ್ನು ನೀಡುತ್ತಾರೆ. ಒಂದು ಹಳ್ಳಿ ಬೆಳೆದು ಗ್ರಾಮೀಣ ಸೊಗಡು, ಮುಗ್ಧತೆ ಅಳಿದು ಪಟ್ಟಣವಾಗಿ ಪರಿವರ್ತನೆಯಾಗುವ ಪ್ರಕ್ರಿಯೆಯನ್ನು ತುಂಬಾ ಕಳವಳಕಾರಿಯಾಗಿ ವೀಕ್ಷಿಸುತ್ತಾರೆ. ಹಳ್ಳಿಯ ಮಣ್ಣಿನೊಳಗಿನ ಪರಿಮಳವನ್ನು ಆಪ್ಯಾಯಮಾನವಾಗಿ ಆಸ್ವಾದಿಸುವ ಗುಣ ಅನನ್ಯವಾದುದು. ನಗರ ಜೀವನದ ಬಡಿವಾರಕ್ಕೆ ಮನಸೋಲುತ್ತಿರುವ ಒಂದು ವರ್ಗದವರ ಅಂತಃಕರಣವನ್ನು ತೆರೆಯಿಸುವ ಪ್ರಯತ್ನವಿದೆ. ನಗರೀಕರಣ, ಅನುಭವ ಸಮೃದ್ಧವಾದ ಗ್ರಾಮೀಣ

ಸಂಸ್ಕೃತಿಯ ಅವಸಾನಕ್ಕೆ ಕಾರಣವಾಗುತ್ತಿದೆ ಎನ್ನುವ ಅಳಲಿದೆ. ನಗರ ಕೇಂದ್ರೀಕೃತ ಇಂಗ್ಲೀಷ್ ಮಾಧ್ಯಮದ ಆಧುನಿಕ ಶಿಕ್ಷಣ ಪದ್ಧತಿ ಮತ್ತು ಮಾತೃಭಾಷಾ ಮಾಧ್ಯಮದ ಸಾಂಪ್ರದಾಯಿಕ ಶಿಕ್ಷಣದ ನಡುವಿನ ಅನಾರೋಗ್ಯಕರ ಅಂತರವನ್ನು ಕಳವಳದಿಂದ ಕಾಣುತ್ತಾರೆ. ಇದು ಉಳ್ಳವರ ಮತ್ತು ಇಲ್ಲದವರ ನಡುವಿನ ಅಸಮಾನತೆಯ ಸೂಚಕವಾಗಿದೆ ಎಂಬ ನೋವಿನಲ್ಲೂ ಜಗತ್ತಿನ ಎಲ್ಲಾ ಮಹಾನ್ ಸಾಧಕರೂ ತಮ್ಮ ಆರಂಭಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿಯೇ ಪಡೆದವರು ಎಂಬ ಸಮಾಧಾನವನ್ನು ನೀಡುತ್ತಾರೆ. ಪುಸ್ತಕ ಪ್ರಕಟಣೆ ಮತ್ತು ಜನಸಂಖ್ಯಾ ಬೆಳವಣಿಗೆಯ ಅನುಪಾತಕ್ಕೂ ಹೋಲಿಸಿದಾಗ ಓದುಗರ ಪ್ರಮಾಣ ಕಡಿಮೆ ಎನ್ನುವುದರ ವಿಷಾದವಿದೆ. ಜನರಲ್ಲಿ ಸ್ವಲ್ಪ ಅತಿಯಾಗಿ ಬೆಳೆಯುತ್ತಿರುವ ರಾಜಕೀಯ ಪ್ರಜ್ಞೆ ಮತ್ತು ಜೀವನೋಪಾಯವಾಗಿರುವ ಸಮಾಜ ಸೇವೆಯ ಹೆಸರಿನ ರಾಜಕಾರಣ, ತಮ್ಮ ತಂದೆಯವರಲ್ಲಿ ಕಂಡ ಮತ್ತು ಇಂದಿನವರಲ್ಲಿ ಕಾಣದ ನೈತಿಕತೆ ಇತ್ಯಾದಿಗಳನ್ನು ತುಂಬಾ ಹತ್ತಿರದಿಂದ ವಿಶ್ಲೇಷಿಸುತ್ತಾರೆ. ಜನಸಂಖ್ಯಾ ಸ್ಫೋಟ, ಪಟ್ಟಣ ಪಂಚಾಯಿತಿಗೆ ಹರಿದು ಬರುವ ಆರ್ಥಿಕ ನೆರವು, ಅದರ ಮೇಲೆ ಸವಾರಿ ಮಾಡುವ ವಿವಿಧ ಶಕ್ತಿಗಳು, ಸ್ವಾಯತ್ತತೆಯ ನಷ್ಟ ಇತ್ಯಾದಿಗಳನ್ನು ಗುರುತಿಸುವ ಲೇಖಕರು ನಮ್ಮೆಲ್ಲರ ಬೆಳವಣಿಗೆಗೆ ಕಾರಣ ನಮ್ಮ ಬೇರುಗಳು ಅದು ಗಟ್ಟಿಯಾದಷ್ಟು ನಮ್ಮ ಬೆಳವಣಿಗೆ ಉತ್ಕೃಷ್ಟವಾಗಿರುತ್ತದೆ ಎನ್ನುವ ಖಚಿತ ಸಂದೇಶವನ್ನು ನೀಡುತ್ತಾರೆ.

**"ಇಂತಹ ಕೆಲವನ್ನಾದರೂ ಓದಬೇಕು'** ಎನ್ನುವ ಲೇಖನದಲ್ಲಿ ಪುಸ್ತಕಗಳ ಬಗ್ಗೆ ಶ್ರೀಮತಿ ವೀಣಾ ಶಾಂತೇಶ್ವರರು ಹೇಳಿದ ಅಭಿಪ್ರಾಯವನ್ನು ಉದಾಹರಣೆಗಳ ಮೂಲಕ ದೃಢೀಕರಿಸುತ್ತಾರೆ. ಅದೆಂದರೆ 'ಒಳ್ಳೆಯ ಪುಸ್ತಕವು ಕಷ್ಟ ಕಾಲದಲ್ಲಿ ಸ್ನೇಹಿತನಾಗುತ್ತದೆ, ಸಮಸ್ಯೆಗಳಿಗೆ ಪರಿಹಾರ ಹೇಳುತ್ತದೆ, ಏಕಾಕಿತನ ಕಡಿಮೆ ಮಾಡುತ್ತದೆ, ಎಲ್ಲಕ್ಕಿಂತ ಹೆಚ್ಚಾಗಿ ಆಳವಾದ ದುಃಖವನ್ನು ಮರೆಯಲು ಸಹಾಯ ಮಾಡುತ್ತದೆ. ಕನ್ನಡ ಪುಸ್ತಕಗಳ ಪ್ರಕಟಣೆ, ಅದಕ್ಕೆ ನಾಡಿನ ಹಿರಿಯ ಸಾಹಿತಿಗಳ ಪ್ರೋತ್ಸಾಹ, ಪುಸ್ತಕಗಳಿಗೆ ಹಿಂದಿನ ಬೇಡಿಕೆ ಈಗಿಲ್ಲ ಎನ್ನುವ ಅಳುಕು, ಕನ್ನಡಿಗನ ಕೈಗೆಟುಕುವ ಬೆಲೆಯಲ್ಲಿ ನೀಡಿದಾಗ ಉತ್ತಮ ಕೃತಿಗಳಿಗಾಗಿ ಸಹೃದಯನ ಉತ್ಸಾಹ ಎಲ್ಲವೂ ಇಲ್ಲಿ ವ್ಯಕ್ತವಾಗಿದೆ. ಕನ್ನಡದ ಅಪರೂಪದ ಪುಸ್ತಕಗಳನ್ನು ಓದುಗರಿಗೆ ನೀಡಿದ ಮಹತ್ಕಾರ್ಯವನ್ನು ಗುರುತಿಸಿದ ಲೇಖಕರು ಕನ್ನಡ ನಾಡಿನ ಬಗೆಗಿನ ಸಮಗ್ರ ಜ್ಞಾನವನ್ನು ನೀಡುವ ಮತ್ತು ಎಲ್ಲರೂ ಓದಲೇಬೇಕಾದ ಕೆಲವು ಪುಸ್ತಕಗಳ ರಚನೆಕಾರರ ವಿವರಗಳನ್ನು ನೀಡುತ್ತಾರೆ. ಇವುಗಳನ್ನು ಓದಿ ನಾಡಿನ ನಾಡಿ ಮಿಡಿತವನ್ನು ಅರಿಯುವ ಮೂಲಕ ಈ ಮಣ್ಣಿನ ಹೋರಾಟಕ್ಕೆ ಶಕ್ತಿಯನ್ನು ನೀಡಬಹುದು ಎನ್ನುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಈ ಕೃತಿಗಳ ನೋಟಮಾತ್ರದಿಂದಲೇ ಅವು ಓದಿಸಿಕೊಂಡುಹೋಗುವ ಮಾಂತ್ರಿಕ ಶಕ್ತಿಯನ್ನು ಹೊಂದಿದೆ ಎನ್ನುವ ನಿಲುವು ಅತಿಶಯೋಕ್ತಿಯಲ್ಲ. ಸ್ವಯಂ ಸ್ಫೂರ್ತಿಯಿಂದ ಪುಸ್ತಕ ಖರೀದಿಸುವ ಪ್ರವೃತ್ತಿ ಬೆಳೆಯಬೇಕು ಎನ್ನುವ ಲೇಖಕರು ಬದಲಾದ ಆರ್ಥಿಕ ಪರಿಸರ ಮತ್ತು ವಿದ್ಯುನ್ಮಾನ ಮಾಧ್ಯಮಗಳಿಂದ ಪುಸ್ತಕಜಗತ್ತು ಎದುರಿಸುತ್ತಿರುವ ಅಪಾಯವನ್ನು ನಿವಾರಿಸಬಲ್ಲ ಸಾಮರ್ಥ್ಯ 'ಸದಭಿರುಚಿಯ

ಪುಸ್ತಕಗಳಿಗಿವೆ' ಎನ್ನುವ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ. ಓದುವುದರಿಂದ ಆಗುವ ಪ್ರಯೋಜನಗಳು, ಇದು ನಮ್ಮ ಮೇಲೆ ಮಾಡಬಹುದಾದ ಸಕಾರಾತ್ಮಕ ಪ್ರಭಾವಗಳು, ಎಲ್ಲಾ ಬದಲಾವಣೆಗಳಿಗೆ ಇದು ಹೇಗೆ ಸ್ಫೂರ್ತಿಯಾಗಬಲ್ಲುದು? ಓದಿಗೆ ದೊರೆಯುವ ಸಮಯ ಮತ್ತು ನಮ್ಮ ಹಿರಿಯರು ಓದು ಹಾಗೂ ಪುಸ್ತಕಕ್ಕೆ ನೀಡಿದ ಮಹತ್ವ ಎಲ್ಲವನ್ನೂ ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಲೇಖಕರು ಸೂಚಿಸಿರುವ ಪುಸ್ತಕಗಳ ಅಧ್ಯಯನ ನಮ್ಮ ಹೃದಯ ಸಂಸ್ಕಾರಕ್ಕೆ ಅತ್ಯವಶ್ಯಕ.

**'ಮರೆಯಲೇ ಬಾರದವರನ್ನು ನಾವು ನೆನೆಯುತ್ತೇವಾದರೂ ಎಷ್ಟು?'** ಎನ್ನುವುದರಲ್ಲಿ ನಮ್ಮ ನೆನಪಿನ ಶಕ್ತಿಗೆ ಭಾರಿ ಶಸ್ತ್ರಕ್ರಿಯೆಯನ್ನೇ ಮಾಡುತ್ತಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಮೈಲಾರಮಹದೇವರನ್ನು ಮರೆತ ನಾವೆಷ್ಟು ಕೃತಘ್ನರು? ಎನ್ನುವ ಖಂಡನಾ ಧ್ವನಿಯಿದೆ. ಇವರ ಸಾಧನೆಯ ಬಗ್ಗೆ ಸಮ್ಮದ್ ಸಾಹೇಬರು ಬರೆದ ಕವನ ಅರ್ಥಪೂರ್ಣವಾದುದು. ಮಹಾತ್ಮಾ ಗಾಂಧೀಜಿಯವರ ಸಬರಮತಿ ಆಶ್ರಮದಲ್ಲಿದ್ದು ತಮ್ಮ ಬದುಕಿನ ಒಳ್ಳೆಯ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ ಕೆಲವು ದಂಪತಿಗಳನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಸ್ವಾತಂತ್ರ್ಯ ಹೋರಾಟಕ್ಕೆ ನಿರ್ಣಾಯಕ ಆರಂಭ ಒದಗಿಸಿದ ಕಿತ್ತೂರು ಚೆನ್ನಮ್ಮ ಮತ್ತು ಇತರರನ್ನು ಹೆಮ್ಮೆಯಿಂದ ನೆನೆಯುತ್ತಾ ಆಕೆಯ ಬಗ್ಗೆ ಸಂಶೋಧಕರೊಬ್ಬರು ಮಾಹಿತಿಯನ್ನು ತಿರುಚಿದ್ದನ್ನು ಸಾತ್ವಿಕವಾಗಿ ಪ್ರತಿಭಟಿಸುತ್ತಾರೆ. ಶಕ್ತಿಗಳಾಗಿದ್ದ ವ್ಯಕ್ತಿಗಳನ್ನು ಸ್ಮರಿಸಿದ ನಂತರ ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಹೆಸರಾದ ಕೆಲವು ಸ್ಥಳಗಳ ಪರಿಚಯ ಮಾಡಿಕೊಟ್ಟಿರುವ ಲೇಖಕರು ಅಭಿನಂದನಾರ್ಹರು. ಬರುವ ಪೀಳಿಗೆಗೆ ಇದು ಉತ್ತಮ ಮಾರ್ಗದರ್ಶಿಯಾಗಬಲ್ಲದು ಮತ್ತು ಸ್ಫೂರ್ತಿಯಾಗಬಲ್ಲದು. ಈ ಸ್ಥಳಗಳು ನಿಜವಾದ ಶಕ್ತಿಕೇಂದ್ರಗಳಾಗಿ ಆಕರ್ಷಣೀಯ ಪ್ರವಾಸಿ ತಾಣಗಳಾಗಬೇಕೆಂದು ಲೇಖಕರು ಆಶಿಸುತ್ತಾರೆ. ನಾಡಿಗಾಗಿ ದುಡಿದ ಕೆಲವು ಪ್ರಾತಃಸ್ಮರಣೀಯರನ್ನು ನೆನೆದು ನಮ್ಮೆಲ್ಲಾ ಕರ್ತೃತ್ವದ ಹಿಂದಿನ ಪ್ರೇರಕಶಕ್ತಿಯಾಗಿರುವ ತಂದೆ-ತಾಯಿಯರ ನೆನಪು ಸದಾ ಇರಬೇಕು ಮತ್ತು ಎಲ್ಲಾ ಸ್ಮಾರಕಗಳು ನೆನೆಯದವರ ಸಾಕ್ಷಿಗಳಾಗದೆ ಅದು ಸದಾ ಇತಿಹಾಸವನ್ನು ನೆನಪಿಸಲಿ, ಭವಿಷ್ಯದ ಸಾಧನೆಗೆ ಸ್ಫೂರ್ತಿಯ ಕೇಂದ್ರಗಳಾಗಲಿ ಎನ್ನುವ ಹಾರೈಕೆ ಸಮಯೋಚಿತ.

**'ಶಾಲಾ ಪ್ರಾರಂಭದಲ್ಲಿ ಪ್ರಿಯ ಪಾಲಕರೇ, ಮಕ್ಕಳೇ'** ಎನ್ನುವ ಲೇಖನದಲ್ಲಿ ಇಂದಿನ ಶಿಕ್ಷಣ ವ್ಯವಸ್ಥೆಯ ಒಂದು ವ್ಯಂಗ್ಯವನ್ನು ವಿಷಾದದಿಂದ ನಮ್ಮ ಮುಂದೆ ಇಡುತ್ತಾರೆ. "ಪುಸ್ತಕದ ಭಾರದಿಂದ ಮಕ್ಕಳ ಬೆನ್ನು ಬಾಗಿದರೆ ಶಿಕ್ಷಣ ವೆಚ್ಚದ ಭಾರದಿಂದ ಪಾಲಕರ ಬೆನ್ನು ಬಾಗಿದೆ" ಎನ್ನುವುದು. ಇಲ್ಲಿ ಪಾಲಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಅವರ ಕರ್ತವ್ಯವನ್ನು ನೆನಪಿಸಿಕೊಡುತ್ತಾರೆ. ಮಗುವಿನ ವಿಕಾಸಕ್ಕೆ ಬೇಕಾಗುವುದು ಮಕ್ಕಳೊಂದಿಗೆ ಪಾಲಕರ ಸಹಚರ್ಯದ ಅವಶ್ಯಕತೆ ಮತ್ತು ಮಕ್ಕಳ ಮೇಲೆ ಒತ್ತಡ ಹೇರುವುದು ಸಲ್ಲದು ಎನ್ನುವಲ್ಲಿ ಹಿರಿಯ ಕಿವಿಮಾತಿನ ಹಿತವಿದೆ. ಶಿಕ್ಷಣದ ಉದ್ದೇಶ ಮತ್ತು ಅರ್ಥವನ್ನು ಹಲವು

ಮಹಾತ್ಮರ ಅಭಿಪ್ರಾಯದ ಬೆಳಕಿನಲ್ಲಿ ವ್ಯಾಖ್ಯಾನಿಸುತ್ತಾ ಜ್ಞಾನ, ಕರುಣೆ ಮತ್ತು ಕೌಶಲ್ಯ ವೃದ್ಧಿಯೇ ಶಿಕ್ಷಣದ ಉದ್ದೇಶವಾಗಬೇಕು ಎಂಬ ಖಚಿತ ತೀರ್ಮಾನಕ್ಕೆ ಬರುತ್ತಾರೆ. ಗಾಂಧೀಜಿಯವರ ವಾದವನ್ನು ಒಪ್ಪಿಕೊಂಡು ನೈತಿಕ ಮತ್ತು ಜೀವನ ಶಿಕ್ಷಣಕ್ಕೆ ಒತ್ತು ನೀಡುತ್ತಾರೆ. ವಿದ್ಯಾರ್ಥಿಗಳು ಯಾವುದನ್ನು ಮಾದರಿಯಾಗಿಟ್ಟುಕೊಳ್ಳಬೇಕು, ಬದುಕಿನ ಯೋಜನೆ ಹೇಗಿರಬೇಕು, ಶ್ರಮ ಹಾಗೂ ಏಕಾಗ್ರತೆ ನಮ್ಮ ಯಶಸ್ಸಿಗೆ ಕಾರಣ ಎನ್ನುವ ಸಂದೇಶವನ್ನು ವಿದ್ಯಾರ್ಥಿ ಸಮೂಹಕ್ಕೆ ನೀಡುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಶಿಕ್ಷಕರ ಪಾತ್ರ ಗುರು-ದೇವರೊಂದಿಗೆ ಸಮೀಕರಿಸುತ್ತಾ ಉತ್ತಮ ಅಧ್ಯಾಪಕ ಉತ್ತಮ ವಿದ್ಯಾರ್ಥಿಯಾಗಿರಬೇಕು ಎಂಬ ಮಾತಿನಲ್ಲಿ ಪ್ರತಿ ಅಧ್ಯಾಪಕನ ಆತ್ಮಶೋಧನೆ ಅಡಗಿದೆ.

**'ಅಂತರಂಗದ ಮಾತು ಕುಂತು ಕೇಳೋ ಗೆಳೆಯ'** ಎಂಬ ಲೇಖನದಲ್ಲಿ ಅಂತರಂಗದಲ್ಲಿ ಹೆಪ್ಪುಗಟ್ಟಿದ ಭಾವನೆಗಳು ಕರಗಿ ಹನಿಯಾಗುವ ತುಡಿತವನ್ನು ಅಕ್ಷರಗಳಲ್ಲಿ ಹರಿಯಬಿಟ್ಟಿದ್ದಾರೆ. ಆಧುನಿಕ ಬದುಕಿನ ಭರಾಟೆಯಲ್ಲಿ ಒಂದಲ್ಲಾ ಒಂದು ಹಂತದಲ್ಲಿ ತನ್ನ ಅಂತರಂಗವನ್ನು ತೆರೆದಿಡಲು ಆಶಿಸುತ್ತಾನೆ. ಆದರೆ ಆ ದನಿಯನ್ನು ಆಸಕ್ತಿಯಿಂದ ಆಲಿಸುವ ಆತ್ಮೀಯನೊಬ್ಬ ಇಲ್ಲದಿದ್ದರೇ ಏನು ಸಿರಿಯಿದ್ದರೇನು? ಮಾನವನ ಸಂತೋಷ ನಮ್ಮ ಅಂತರಂಗವನ್ನು ಹೊರ ಹಾಕುವುದರಲ್ಲಿದೆ ಎಂದು ಹೇಳುವ ಲೇಖಕರು ಅಕ್ಕಮಹಾದೇವಿ, ಮೀರಾಬಾಯಿ, ಶ್ರೀರಾಮನ ಉದಾಹರಣೆ ನೀಡುತ್ತಾ ಅಂತರಂಗದಲ್ಲಿಯೇ ಒಬ್ಬ ಆತ್ಮೀಯನನ್ನು ಕಾಣುವ ಬಗೆಯನ್ನು ಸೂಚಿಸುತ್ತಾರೆ. ಕವಿ ಭಾವನೆ ಹೇಗೆ ಸಾರ್ಥಕತೆಯನ್ನು ಪಡೆಯುತ್ತದೆ ಎನ್ನುವುದನ್ನು ಅವರದೇ ಕವನದ ಸಾಲುಗಳಲ್ಲಿ ಕೇಳಿ,

**'ಕವನ ಬರೆಯುವುದೆಂದರೆ ತೋಟದಲ್ಲಿ ಹೂಗಳರಳಿದಂತೆ,**
**ಸಹೃದಯ ಆಲಿಸಿದರೆ ಅವು ದೇವರ ತಲೆಯೇರಿದಂತೆ'.**

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಚ್ಯುತಿಯಾದಾಗಲೂ ಬರಹಗಾರ ನೇರವಾಗಿ ಹೇಳಲಾಗದೇ ಇರುವುದನ್ನು ವಿವಾದಾತ್ಮಕ ವಿಷಯಗಳನ್ನು ದೃಷ್ಟಾಂತಗಳ ಮೂಲಕ ಪರಿಣಾಮಕಾರಿಯಾಗಿ ಹೇಳುವುದರ ಮೂಲಕ ಎಲ್ಲಾ ಮಿತಿಗಳನ್ನೂ ಮೀರಿ ಬೆಳೆಯಬಲ್ಲ ಎಂಬುದರ ಸೂಚನೆಯಿದೆ. ಆಧುನಿಕ ಎಲೆಕ್ಟ್ರಾನಿಕ್ ಉಪಕರಣಗಳಿಂದಾಗಿ ಬರೆಯುವ ಸಂಸ್ಕೃತಿ ಮರೆಯಾಗುತ್ತಿರುವ ಬಗ್ಗೆ ಮತ್ತು ಮನಸ್ಸು ಬಿಚ್ಚದೆ ಕಿವಿ ತೆರೆಯದೇ ಈ ಜನಸಮೂಹದ ಮಧ್ಯೆ ನಾವು ಕಳೆದುಹೋಗುವ ಅಪಾಯದ ಬಗ್ಗೆ ನಮ್ಮನ್ನು ಎಚ್ಚರಿಸುತ್ತಾರೆ.

**'ಗಣರಾಜ್ಯ ಗಾಂಧೀಜಿ ಮುಂದಿಟ್ಟುಕೊಂಡು'** ಎನ್ನುವ ಲೇಖನದಲ್ಲಿ ಮಹಾತ್ಮಾ ಗಾಂಧೀಜಿ ತಂದುಕೊಟ್ಟ ಸ್ವಾತಂತ್ರ್ಯ ನಂತರದಲ್ಲಿ ಸಿದ್ಧವಾದ ಸಂವಿಧಾನದ ಆಳ್ವಿಕೆಯಲ್ಲಿ ಭಾರತೀಯರಾದ ನಾವು ಅನುಸರಿಸಬೇಕಾದ ಗಾಂಧೀವಾದದ ಪ್ರಸ್ತುತತೆಯನ್ನು ನೆನಪಿಸುತ್ತಾರೆ. ನಾವು ಅನುಭವಿಸುವ ಸ್ವಾತಂತ್ರ್ಯದ ಪ್ರತಿ ಹೆಜ್ಜೆಯಲ್ಲೂ ಗಾಂಧೀಜಿಯವರ ತ್ಯಾಗ ಮತ್ತು ಅಹಿಂಸಾ ತತ್ತ್ವದ ಹೆಜ್ಜೆಗುರುತನ್ನು ಕಾಣಬೇಕು ಎಂದು ಮಾರ್ಮಿಕವಾಗಿ ಸೂಚಿಸುತ್ತಾರೆ. ಭಾರತದ ಸಂವಿಧಾನದ ರಚನೆಯಲ್ಲಿ ಎರಡು ಸಮಿತಿಯ ಸದಸ್ಯರಾಗಿದ್ದ ಕನ್ನಡಿಗರಾದ

ಎಸ್.ನಿಜಲಿಂಗಪ್ಪನವರು ಮತ್ತು ಕೆಂಗಲ್ ಹನುಮಂತಯ್ಯನವರ ಪಾಲೂ ಇದೆ ಎನ್ನುವುದನ್ನು ಹೆಮ್ಮೆಯಿಂದ ನೆನೆದು ಸಮಸ್ತ ಕನ್ನಡಿಗರೂ ಅಭಿಮಾನಧನರಾಗುವಂತೆ ಮಾಡುತ್ತಾರೆ. ಸತ್ಯ ಮತ್ತು ಅಹಿಂಸೆಯ ಬಗ್ಗೆ ಹೇಳುತ್ತಾ 'ಸತ್ಯದ ಶಕ್ತಿಯನ್ನು ಅಹಿಂಸೆಯ ಮೂಲಕ ಒತ್ತಾಯಿಸಿ ಜಯಶಾಲಿಯಾಗಿಸುವ ಸಾಧನ' ಸತ್ಯಾಗ್ರಹಕ್ಕೆ ಒಂದು ಹೊಸದಾದ ಮತ್ತು ಅರ್ಥಪೂರ್ಣವಾದ ಒಂದು ವ್ಯಾಖ್ಯಾನವನ್ನೇ ನೀಡುತ್ತಾರೆ. ಗಾಂಧೀವಾದವನ್ನು ಹೇಡಿತನದ್ದು ಎನ್ನುವವರಿಗೆ ಗಾಂಧೀಜಿಯವರ "ಹಿಂಸೆ ಹಾಗೂ ಹೇಡಿತನದಲ್ಲಿ ನನ್ನ ಆಯ್ಕೆ ಹಿಂಸೆಯೇ ಆಗಿದೆ" ಎನ್ನುವ ಮಾತನ್ನು ಪ್ರತ್ಯುತ್ತರವಾಗಿ ನೀಡುತ್ತಾ ಗಾಂಧೀವಾದವನ್ನು ಎತ್ತಿ ಹಿಡಿಯುತ್ತಾರೆ. ಇದೇ ದಾರಿಯಲ್ಲಿ ಸಾಗಿ ಯಶಸ್ವಿಯಾದ ಅನೇಕ ಲೋಕನಾಯಕರುಗಳ ಹಾದಿಯನ್ನು ನೆನೆಯುತ್ತಾರೆ. ಗಾಂಧಿಯನ್ನು ಕೊಂದವರೂ ನಾವೇ ಅವರ ತತ್ತ್ವಗಳನ್ನೂ ಕೊಲ್ಲುತ್ತಿರುವವರೂ ನಾವೇ ಎಂದು ವಿಷಾದಿಸುತ್ತಾರೆ. ಒಟ್ಟಾರೆಯಾಗಿ ಗಾಂಧೀವಾದದ ಪುನರುಜ್ಜೀವನ ಓದುಗನ ಕಣ್ಮುಂದೆ ನಿಲ್ಲುವಂತೆ ಮಾಡುತ್ತಾರೆ.

**'ಕಾಲವೆಂಬುದು ಕಾಲಾತೀತ'** ಎಂಬಲ್ಲಿ ಹಳೆಯ ವರ್ಷಕ್ಕೆ ವಿದಾಯ ಹೇಳಿ ಹೊಸ ವರ್ಷವನ್ನು ಸ್ವಾಗತಿಸುವ ಆಚರಣೆಯಲ್ಲಿ ಹಳತು-ಹೊಸತು ಮತ್ತು ಭಾರತೀಯ-ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಸ್ಥೂಲವಾಗಿ ವಿಶ್ಲೇಷಿಸುತ್ತಾರೆ. ಹಳತು-ಹೊಸತು ಬದುಕಿನ ವೈರುಧ್ಯಗಳಾದರೂ ಅವುಗಳ ನಡುವಿನ ಸಂಬಂಧವನ್ನು ಸೂಕ್ಷ್ಮವಾಗಿ ಪರೀಕ್ಷಿಸುತ್ತಾರೆ. ಇವೆರಡೂ ಸಹಜವಾದದು ಹೊಸದರ ಕಳಕಳಿಯಲ್ಲಿ ಹಳೆಯದನ್ನು ಹಳಿಯುವ ಅಮಾನವೀಯ ಸಂಸ್ಕೃತಿ ನಮ್ಮದಾಗಬಾರದು ಎನ್ನುವ ಕಿವಿಮಾತಿದೆ. ಭೂತ ಭವಿಷ್ಯಗಳ ಚಿಂತೆಯಲ್ಲಿ ನಮ್ಮ ಇಂದಿನ ಬದುಕು ಕಳೆದು ಹೋಗಬಾರದೆನ್ನುವ ಎಚ್ಚರಿಕೆಯಿದೆ. ಕಾಲದ ಗತಿ ಎಲ್ಲಾ ಮಿತಿಗಳನ್ನು ಮೀರಿದ್ದು ಎನ್ನುವುದಕ್ಕೆ ಲೇಖಕರು ಅವರದೇ ಕವನದ ಸಾಲುಗಳನ್ನು ಉಲ್ಲೇಖಿಸುತ್ತಾರೆ.

> **"ಹೊಸ ವರುಷ ಬಂತೆಂದರೆ ನಂಬಲಾಗುತ್ತಿಲ್ಲ**
> **ಎಲ್ಲ ಎಂದಿನಂತೆಯೇ ಇದೆ ಗರಬಡಿದಂತೆ**
> **ಹೊಸ ವರ್ಷ ತೆವಳುತಿದೆ ಯಾರಿಗೂ ತಿಳಿಯದಂತೆ**
> **ನಿಲ್ಲದದು ಬೇಡವೆಂದರೂ ತನ್ನ ಗತಿ ಅದಕೆ"**

ಹೊಸ ವರ್ಷದ ಆಚರಣೆಯನ್ನು ಶ್ರೀಮಂತರು ವೈಭವೋಪೇತವಾಗಿ ಆಚರಿಸುವಾಗ ಬಹುಸಂಖ್ಯಾತ ಬಡವರು ಜೀವನದ ಕನಿಷ್ಠ ಅವಶ್ಯಕತೆಗಳಿಗಾಗಿ ಹೋರಾಡುವ ಸ್ಥಿತಿ ನಮ್ಮ ವ್ಯವಸ್ಥೆಯ ದೋಷಗಳಲ್ಲೊಂದು ಎನ್ನುವುದು ಶೋಚನೀಯ. ಹೊಸತೆನ್ನುವುದು ಅವರವರ ಭಾವಕ್ಕೆ ಅಗತ್ಯಕ್ಕೆ ತಕ್ಕಂತೆ ಎನ್ನುವುದು ಸತ್ಯ. ಹೊಸತು ಹಳತರ ನಡುವಿನ ಅಂತರ ಎಷ್ಟು ತೆಳು ಎನ್ನುವುದನ್ನು ಪ್ರಕೃತಿಯ ವಿದ್ಯಮಾನಗಳನ್ನು ನೋಡಿ ಅರಿಯಬೇಕೆನ್ನುತ್ತಾರೆ. ನಾವು ಕಳೆದ ಬದುಕು ಸತ್ತ ಬದುಕು ಏಕೆಂದರೆ ಅದು ಮರಳಿ ಬಾರದು ಮತ್ತು ಬರುವುದೇ ಜೀವಂತ ಬದುಕು ಏಕೆಂದರೆ ಅದು ಮರಳಿ ಬಾರದು ಮತ್ತು ಬರುವುದೇ ಜೀವಂತ ಬದುಕು ಎನ್ನುವುದನ್ನು ತಾತ್ವಿಕವಾಗಿ ನಿರೂಪಿಸುತ್ತಾರೆ. ಎಲ್ಲಾ ವೈಭವವೂ ಕಾಲನ ಚಕ್ರದಡಿಯಲ್ಲಿನ ಧೂಳಿಗೆ ಸಮ.

ಸಮಯವೆನ್ನುವುದು ದೇವರ ಕೊಡುಗೆ ಅದನ್ನು ಇಲ್ಲದ ಮೂಢನಂಬಿಕೆಯ ಹೆಸರಲ್ಲಿ ಹಾಳು ಮಾಡುವುದು ಸರಿಯಲ್ಲ ಎಂದು ವಚನಕಾರರು ಮತ್ತು ದಾಸರನ್ನು ಉಲ್ಲೇಖಿಸಿ ಸಮರ್ಥಿಸುತ್ತಾರೆ. ಕಾಲವನ್ನು ಮೀರಿ ನಿಲ್ಲುವ ಮಾನವನ ಪ್ರಯತ್ನ ನಿರಂತರವಾದುದು. ಆದರೆ ಅದರ ಯಶಸ್ಸು ಕಾಲನ ಕೈಯಲ್ಲಿದೆ ಎನ್ನುವ ವಾಸ್ತವ ಸತ್ಯವನ್ನು ನಮ್ಮ ಮುಂದಿಡುತ್ತಾರೆ.

**'ಸೆಳೆತವಿಲ್ಲದ ಸಂಬಂಧ ಕೊಳೆತು ಹೋಗದಿರಲಿ'** ಎಂಬಲ್ಲಿ ಭಾವನಾತ್ಮಕ ಸಂಬಂಧವನ್ನು ವ್ಯಾವಹಾರಿಕವಾಗಿ ಮತ್ತು ವ್ಯವಹಾರಕ್ಕಾಗಿ ಭಾವನಾತ್ಮಕ ಸಂಬಂಧವನ್ನು ಬೆಳೆಸುವ ಮಾನವ ವರ್ತನೆಯ ಕುರಿತು ಹೇಳುತ್ತಾರೆ. ಪರಸ್ಪರ ಸಂಬಂಧ ಹೇಗಿರಬೇಕು? ಎಂದರೆ ಕರುಳಿಗೆ ತಗಲುವಂತಿರಬೇಕು ಮತ್ತು ಅಲ್ಲಿ ಲಾಭ ನಷ್ಟದ ಆಧಾರದಲ್ಲಿ ಇರಬಾರದೆನ್ನುತ್ತಾರೆ.

ಸಂಬಂಧಗಳನ್ನು ತೀರಾ ವೈಯುಕ್ತಿಕ ಮಟ್ಟದಲ್ಲಿ ಹಚ್ಚಿಕೊಳ್ಳುವ ತುಡಿತವಿರಬೇಕು ಮತ್ತು ಅದನ್ನು ವ್ಯಕ್ತಪಡಿಸಬೇಕು ಎಂಬ ಹಿತವಚನವನ್ನು ನೀಡಿದ್ದಾರೆ. ಎಸ್.ಎಲ್.ಭೈರಪ್ಪನವರು ಒಂದು ಕಡೆ ಹೀಗೆ ಹೇಳುತ್ತಾರೆ. “ಕಾಯಕದಲ್ಲಿ ವ್ಯಕ್ತವಾಗದ ಪ್ರೀತಿಗೆ ಅರ್ಥವಿಲ್ಲ” ನಮ್ಮ ಕಳಕಳಿಯನ್ನು ಅಭಿವ್ಯಕ್ತಿಗೊಳಿಸಬೇಕು ಇಲ್ಲದಿದ್ದರೆ ಲೇಖಕರೇ ತಮ್ಮ ಕವನದಲ್ಲಿ ಹೇಳಿಕೊಂಡಂತೆ ನಮ್ಮ ಒಣ ಮಾತು “ಬೋಕಿಯೊಳಗಣ ಹುಳು ಗುಂಯ್‌ಗುಟ್ಟಿದಂತೆ”. ನಮ್ಮ ಬದುಕಿನಲ್ಲಿ ಮಾನವೀಯ ಸಂಬಂಧಗಳನ್ನು ಬೆಳೆಸುವುದರಷ್ಟೇ ಮುಖ್ಯವಾದುದು ಅದನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದು ಮುಖ್ಯ ಎಂದು ತುಂಬಾ ಆತ್ಮೀಯವಾಗಿ ನುಡಿಯುತ್ತಾರೆ. ಮಾನವೀಯ ಸಂಬಂಧಗಳನ್ನು ಆಧರಿಸಿದ ದಿನಾಚರಣೆಗಳು ಸಾಂದರ್ಭಿಕ ಆಚರಣೆಗೆ ಮಾತ್ರ ಸೀಮಿತವಾಗದೆ ಅನುದಿನವೂ ಸ್ಮರಿಸಲ್ಪಡುವ ಅನುಭಾವವಾಗಬೇಕು ಪರಸ್ಪರ ಗೌರವ, ಪ್ರೀತಿ ಮತ್ತು ನಂಬಿಕೆಗಳಿಂದ ಸಂಬಂಧಗಳನ್ನು ಜೀವಂತವಾಗಿಡಬೇಕು. ಈ ಬಗೆಯ ಗಾಢ ಬಾಂಧವ್ಯ ಎಲ್ಲಾ ಕನ್ನಡಿಗರಲ್ಲಿ ಬೆಳೆಯಲಿ ಎನ್ನುವ ಆಶಯವನ್ನು ವ್ಯಕ್ತಪಡಿಸುತ್ತಾರೆ. ಮಾನವೀಯ ಹೃದಯವಿರುವ ಎಲ್ಲರ ಹೃದಯಕ್ಕೆ ದಾರಿದೀಪವಾಗುವ ಲೇಖನವಿದು.

**'ದಾಂಪತ್ಯದ ಬಾಗಿಲಲ್ಲಿ ನಿಂತವರೆ'** ಲೇಖನದಲ್ಲಿ ಮನೆತನ, ಸಂಪ್ರದಾಯ ಮತ್ತು ಜಾತಕದ ಹೊಂದಾಣಿಕೆಯನ್ನೇ ಪ್ರಧಾನವಾಗಿಸಿ ಮದುವೆಯಾದವರಲ್ಲಿ ಸಮಸ್ಯೆಗಳ ಉದ್ಭವಕ್ಕೆ ನಿಜವಾದ ಕಾರಣಗಳನ್ನು ಹುಡುಕುತ್ತಾ ಕೌಟುಂಬಿಕ ಸಂಬಂಧಗಳ ಆಯಾಮಗಳನ್ನು ಅವಲೋಕಿಸುತ್ತಾರೆ. ನಮ್ಮ ಬದುಕು ವೈಜ್ಞಾನಿಕವಾಗಿ ಎಷ್ಟೇ ಮುಂದುವರಿದಿದ್ದರೂ ನಮ್ಮ ಬುದ್ಧಿಯ ಮೇಲೆ ಇವುಗಳೆಲ್ಲದರ ಪ್ರಭಾವ ಇನ್ನೂ ಹಿಡಿತವನ್ನು ಹೊಂದಿದೆ. ಆದರೆ ಶತಮಾನಗಳ ಹಿಂದೆಯೇ ಅವುಗಳನ್ನು ತಮ್ಮ ವಿಚಾರತತ್ವದಿಂದ ನಿರಾಕರಿಸಿದ್ದ ವಚನಕಾರರಂತೆ ಇಂದೂ ಅವುಗಳನ್ನು ನಿರ್ಲಕ್ಷಿಸುವ ಮಾನಸಿಕ ಸಾಮರ್ಥ್ಯ ಪಡೆಯಬಲ್ಲುದಾದರೆ ಅದೇ ಬುದ್ಧಿ ಎನ್ನುವ ವೈಚಾರಿಕ ಚಿಂತನೆಯ ತಳಹದಿಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸುತ್ತಾರೆ. ಮದುವೆಯಾಗಿ ಬರುವ ಹೆಣ್ಣಿನ ಮನಸ್ಥಿತಿಯನ್ನು ಹೇಳುತ್ತಾ ಸೊಸೆಯಾಗಿ ಪಾತ್ರ

ಪರಿವರ್ತನೆ ಹೊಂದಿದ ಮೇಲೆ ಅತ್ತೆಯ ಮನೆಯಲ್ಲಿ ಅವಳು ಹೇಗೆ ಇರಬೇಕು? ಎನ್ನುವುದನ್ನು ವಿವರಿಸುತ್ತಾರೆ. ಇವರ ಬಾಂಧವ್ಯದ ಸ್ವಾಸ್ಥ್ಯದ ಮೇಲೆ ಇಡೀ ಸಂಸಾರದ ಸ್ವಾಸ್ಥ್ಯ ಅವಲಂಬಿಸಿದೆ ಎನ್ನುವ ವಾಸ್ತವ ಸತ್ಯವನ್ನು ಹೇಳುತ್ತಾರೆ. ಅತ್ತೆ ಸೊಸೆಯ ನಂತರ ಪತಿ ಪತ್ನಿಯ ಸಾಮರಸ್ಯದ ಬಗ್ಗೆ ಹೇಳುವಾಗ ವಚನ, ಜನಪದ ಸಾಹಿತ್ಯ ಇತ್ಯಾದಿಗಳ ಉಲ್ಲೇಖಗಳನ್ನು ಬಳಸಿಕೊಂಡು ಆ ಸಂಬಂಧಕ್ಕೆ ಒಂದು ದಿವ್ಯತ್ವವನ್ನು ಆರೋಪಿಸಿ ಆಧ್ಯಾತ್ಮಿಕ ನೆಲೆಯಲ್ಲಿ ಚರ್ಚಿಸುತ್ತಾರೆ. ಬದಲಾದ ಜಗತ್ತಿನಲ್ಲಿ ಪತಿ ತನ್ನ ಪತ್ನಿಯ ಬಗೆಗಿನ ಮನೋಭಾವವನ್ನು ಬದಲಾಯಿಸಿಕೊಳ್ಳುವ ಅನಿವಾರ್ಯತೆಯನ್ನು ಸೂಚ್ಯವಾಗಿ ಸೂಚಿಸುತ್ತಾರೆ. ಹಿರಿಯರೊಬ್ಬರು ಪಕ್ಕದಲ್ಲಿ ಕುಳಿತು ನುಡಿದ ಅನುಭವವನ್ನು ನೀಡುವ ಇದು ಉತ್ತಮ ಕೌಟುಂಬಿಕ ಮಾರ್ಗದರ್ಶಿ.

**'ರಾಷ್ಟ್ರೀಯ ಕಲಾಕೇಂದ್ರಗಳ ಉದ್ದೇಶ ಈಡೇರಲಿ"** ಎಂಬ ಲೇಖನ ಲಲಿತಕಲೆಗಳ ಬೆಳವಣಿಗೆಯಲ್ಲಿ ಸರಕಾರದ ಪಾತ್ರವನ್ನು ಪರೋಕ್ಷವಾಗಿ ಸೂಚಿಸುತ್ತಾ ಎಲ್ಲಾ ಕಲಾಕೇಂದ್ರಗಳೂ ಸಮರ್ಪಕವಾಗಿ ಮತ್ತು ಅರ್ಥಪೂರ್ಣವಾಗಿ ಕಾರ್ಯ ನಿರ್ವಹಿಸಿದಾಗ ಮಾತ್ರ ಅಳಿವಿನಂಚಿನಲ್ಲಿರುವ ಕಲಾಪ್ರಕಾರಗಳು ಭವಿಷ್ಯದ ಪೀಳಿಗೆಯನ್ನು ತಲುಪಬಲ್ಲದು ಎನ್ನುವ ಆಶಯ ಪ್ರಧಾನವಾದುದು. ಪಾಶ್ಚಾತೀಕರಣ ಮತ್ತು ಜಾಗತೀಕರಣ ಇವುಗಳ ಅಬ್ಬರಕ್ಕೆ ಎಲ್ಲವೂ ನಲುಗುತ್ತಿರುವಾಗ ನಮ್ಮ ಲಲಿತಕಲೆಗಳು ಸ್ಥಿರವಾಗಿ ನೆಲೆ ನಿಲ್ಲುತ್ತಿರುವ ರೀತಿಯನ್ನು ಅಭಿನಂದಿಸುವ ಲೇಖಕರು ಲಲಿತಕಲೆ ಎಲ್ಲವನ್ನೂ ಮೀರಿದ ಅಪೂರ್ವ ಅನುಭೂತಿ ಎನ್ನುವ ಖಚಿತ ಸಂದೇಶವನ್ನು ಓದುಗನಿಗೆ ನೀಡುತ್ತಾರೆ.

**'ದಸರಾ ಹೊತ್ತಿನಲ್ಲಿ ಹಳ್ಳಿ ಹಬ್ಬಗಳ ನೆನೆದು'** ಎಂಬುದು ಈ ಸಂಗ್ರಹದ ಕೊನೆಯದು ಮತ್ತು ಪ್ರಚಲಿತ ವಿದ್ಯಮಾನದ ಬೆಳಕಿನಲ್ಲಿ ಅತ್ಯಂತ ಮಹತ್ವದ್ದು. ದಸರಾ ಆಚರಣೆಯ ಪೌರಾಣಿಕ ಹಿನ್ನೆಲೆಯಲ್ಲಿ ಇಂದು ಸಮಾಜ ಎದುರಿಸುತ್ತಿರುವ ಕೋಮು ದಳ್ಳುರಿ ಮತ್ತು ಹಿಂದೆ ಎಲ್ಲಾ ಮತದವರ ಧಾರ್ಮಿಕ ಆಚರಣೆಯಲ್ಲಿದ್ದ ಕೋಮು ಸೌಹಾರ್ದತೆಯ ನಡುವಿನ ಸ್ಥಿತ್ಯಂತರದ ವಿಶ್ಲೇಷಣೆಯಿದೆ. ಎರಡು ಕೋಮುಗಳು ಮತಾಂಧರ ಕಪಿಮುಷ್ಟಿಯಲ್ಲಿ ಸಿಲುಕಿ ಪರಸ್ಪರ ಅಪನಂಬಿಕೆ, ಆತಂಕದಲ್ಲಿ ಬದುಕುತ್ತಿರುವ ಸಂದರ್ಭದಲ್ಲಿ ಹಳ್ಳಿಯ ಮುಗ್ಧನ ಮನದಲ್ಲಿನ ಜಾತಿ ಧರ್ಮಗಳನ್ನು ಮೀರಿದ ಭಾವನೆಯ ಒಳನೋಟವನ್ನು ನಮ್ಮ ಮುಂದಿಡುತ್ತಾರೆ. ಎರಡು ಕೋಮಿನವರು ಪರಸ್ಪರ ಹಚ್ಚಿಕೊಂಡ ಪರಸ್ಪರರ ಧರ್ಮಾಚರಣೆಗಳನ್ನು ಪ್ರೀತಿ ಗೌರವಾದರಗಳೊಂದಿಗೆ ಆಚರಿಸುವ ರೀತಿ, ಧರ್ಮವನ್ನು ರಾಜಕೀಯವಾಗಿ ನೋಡದೆ ಧರ್ಮದ ನೆಲೆಯಲ್ಲಿ ಮಾತ್ರ ನೋಡುವ ಮನೋಭಾವ ಮತ್ತು ಭೇದ ಭಾವವಿಲ್ಲದ ಒಡನಾಟದ ಪರಿ ಎಲ್ಲರ ಒಳಗಣ್ಣನ್ನು ತೆರೆಸುತ್ತದೆ. ನಿಜವಾದ ಮಾನವ ಧರ್ಮವನ್ನು ಸಾರುವಲ್ಲಿ ಉತ್ತರ ಕರ್ನಾಟಕದವರ ಆಚರಣೆ ಸಹಬಾಳ್ವೆಯ ಆಚರಣೆ ಎಲ್ಲರಿಗೂ ಮಾದರಿಯಾಗಲಿ ಎನ್ನುವ ಉದಾತ್ತ ಹಾರೈಕೆ ಇಲ್ಲಿ ವ್ಯಕ್ತವಾಗಿದೆ.

ಓದುಗನಲ್ಲಿ ಜ್ಞಾನದ ಕಿಡಿ ಹೊತ್ತಿಸುವ, ವೈಚಾರಿಕತೆಯನ್ನು ಅರಳಿಸುವ, ಅಕ್ಷರ ಸಂಸ್ಕೃತಿಯನ್ನು ಬೆಳೆಸುವ ಇದು ಪ್ರತಿಯೊಬ್ಬ ಅಕ್ಷರ ಪ್ರೇಮಿಯ ಸ್ನೇಹಿತ ಮತ್ತು ಮಾರ್ಗದರ್ಶಿ. ಅದನ್ನು ಋಜುಪಡಿಸುವುದಕ್ಕಾಗಿಯೇ 25-7-2010 ರಂದು ಮನು ಬಳಿಗಾರವರ ಸಾಹಿತ್ಯ ಕುರಿತು ರಾಜ್ಯಮಟ್ಟದ ವಿಚಾರಸಂಕಿರಣವನ್ನು ದಾಂಡೇಲಿಯಲ್ಲಿ ಮಾಸ್ಕೇರಿ ಸಾಹಿತ್ಯ ಸಂಸ್ಥೆ ಏರ್ಪಡಿಸಿ ಕೃತಾರ್ಥವಾಗಿದೆ ಎಂದು ದಿನೇಶ ಕೆ. ಹೇಳಿದರು.

❖

## ಬೆಳಕ - ಬೆಡಗು

ಡಾ. ಪಿ. ನಾಗರಾಜ

ಕನ್ನಡಿಗರ ಸ್ವಾಭಿಮಾನದ ಸಾಕ್ಷಿಪ್ರಜ್ಞೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಯಜಮಾನ. ತಾಯಿ ಭುವನೇಶ್ವರಿಯ ತೇರನ್ನು ನಡೆಸುವ ಸಾರಥಿಯಾಗಿರುವ ಮನು ಬಳಿಗಾರ್ ಅವರ ಸಂಸ್ಕೃತಿ ಚಿಂತನೆಯ ಬರಹಗಳನ್ನು ಗಮನಿಸಿದಾಗ ಒಬ್ಬ ಸಹೃದಯ ಓದುಗನಿಗೆ ತಟ್ಟನೆ ಹೊಳೆದದ್ದು ಹೀಗೆ. ಶ್ರೀಯುತ ಬಳಿಗಾರ್ ಅವರು ಸರ್ಕಾರಿ ಸೇವೆಯ ಉನ್ನತ ಹುದ್ದೆಯಲ್ಲಿದ್ದು ಸುಮಾರು 30 ವರ್ಷಗಳಿಗಿಂತ ಹೆಚ್ಚು ಕಾಲ ಸರ್ಕಾರಿ ಕಡತಗಳಲ್ಲೇ ಮುಳಗಿ ನಿವೃತ್ತಿಯ ನಂತರ ಕನ್ನಡಿಗರ ಜನಮಾನಸವನ್ನು ಸೂರೆಗೊಂಡು ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಇವರು ಕವಿ ನಾಟಕಕಾರ, ಸಂಸ್ಕೃತಿ ಚಿಂತಕ, ಅಂಕಣ ಬರಹಗಾರರು ಹಾಗೂ ಸಹೃದಯ ವಿಮರ್ಶಕರಾಗಿ ಸಾಹಿತ್ಯ ವಲಯದಲ್ಲಿ ಚಿರಪರಿಚಿತರಾಗಿದ್ದಾರೆ.

ಭೂತವನ್ನು ವರ್ತಮಾನದ ಬೆಳಕಿನಲ್ಲಿ ಕಟ್ಟಿಕೊಡುವ ಪ್ರಯತ್ನದ ಫಲವೇ ಈ ಬೆಳಕ ಬೆಡಗು. ಕೃತಿಯಲ್ಲಿನ ಬರಹಗಳು ಸೃಜನಶೀಲ ಮನಸ್ಸೊಂದು ಚಾರಿತ್ರಿಕ ಸಂದರ್ಭವೊಂದನ್ನು ಪುನರಚಿಸುವಾಗ ಆಯಾ ಕಾಲಘಟ್ಟಗಳ ಅನುಭವವನ್ನು ಮುಖಾಮುಖಿಯಾಗಿ ಮತ್ತೊಂದು ಸಂದರ್ಭವೊಂದಕ್ಕೆ ತನ್ನ ಸಂವೇದನೆಯ ದ್ರವ್ಯವನ್ನು ಕಟ್ಟಿಕೊಡುತ್ತದೆ. ಈ ಸಂದರ್ಭವು ಬೇರೆ ಯಾವುದೋ ಆಗಿರದೇ ಸ್ವಾನುಭವ ಸಂವೇದಿತ ಆಕೃತಿಯೇ ಆಗಿರುತ್ತದೆ. ಹೀಗಾಗಿ ಜೀವನದೃಷ್ಟಿಯನ್ನು ಕೃತಿಯ, ಆಕೃತಿಯ, ಜೀವನ ಮೌಲ್ಯವಾಗಿ ಧಾರಣ ಮಾಡಿಕೊಂಡಿರುತ್ತದೆ. ದೈನಂದಿನ ಬದುಕಿನಲ್ಲಿ ನಡೆದ ಘಟನೆಗಳನ್ನು ನೆನಪಿನ ಬುತ್ತಿಯ ಮೈಲುಗಲ್ಲುಗಳಾಗಿ ಸುಮಾರು 32 ಲೇಖನಗಳಲ್ಲಿ ವಾಸ್ತವತೆ ಎನ್ನುವುದು ಜೀವನ ಸಂಬಂಧಿ ಬಾಹ್ಯ ವಿವರಣೆಗಳಿಗಿಂತ ಸಂಸ್ಕೃತಿ ಸಂಬಂಧಿ ಅಂತರ್ ನಿರೀಕ್ಷೆಯ ವಿವಕ್ಷಗೆ ಒಳಪಟ್ಟ ವಿಚಾರವಾಗುತ್ತದೆ ಹಾಗೂ ಕಾಲಬದ್ಧವಾಗುತ್ತಲೇ ಕಾಲಾತೀತವಾಗುವ ಗತಿತಾರ್ಕಿಕ ಗುಣ ವಾಸ್ತವತೆಯ ಜೀವ ದ್ರವ್ಯವಾಗಿರುತ್ತದೆ ಎನ್ನುವುದನ್ನು ತೋರಿಸಿಕೊಡುತ್ತಾರೆ.

ಈ ಸಂಸ್ಕೃತಿ ಚಿಂತನೆಯ ಬರಹಗಳು ಸಮಕಾಲಿನ ತುರ್ತು, ತೀವ್ರವಾದ ಸಾಂಸ್ಕೃತಿಕ ನಿಲುವು, ಪರಂಪರೆಯ ಜೊತೆ ಅರ್ಥಪೂರ್ಣ ಸಂವಾದ ಸಾಧ್ಯವಾಗುವುದನ್ನು ಕಾಣುತ್ತೇವೆ.

ಇಲ್ಲಿನ ಕೆಲವು ಲೇಖನಗಳು ಮೂಲತಃ ವಿಮರ್ಶೆ, ಮಾನವಶಾಸ್ತ್ರ ಹಾಗೂ ಸಮಾಜಶಾಸ್ತ್ರಗಳ ನೆಲೆಗಟ್ಟನ್ನು ಒಳಗೊಳ್ಳುವಂತವು ಮತ್ತು ಸಂಸ್ಕೃತಿ ವಿಶ್ಲೇಷಣಾತ್ಮಕ ವಿಮರ್ಶೆಗಳ ಕಟ್ಟು ಎಂದು ಕರೆಯಬಹುದು. ಇವರ ಬರಹದ ಕೇಂದ್ರ ಕಾಳಜಿ ಸಂಸ್ಕೃತಿಯನ್ನು ಕುರಿತದ್ದು. ಇಲ್ಲಿ ರಾಷ್ಟ್ರೀಯ ಪ್ರಜ್ಞೆ ಕನ್ನಡ ಸಾಹಿತ್ಯ ಚರಿತೆಯ ಚರಿತ್ರೆ, ಬದುಕು ಪ್ರಕೃತಿ, ಮಾನವೀಯ ಮೌಲ್ಯಗಳು, ಜೀವನ ಮೌಲ್ಯಗಳು, ವಸ್ತುನಿಷ್ಠ ವಿಮರ್ಶೆ, ಪರಿಚಯಾತ್ಮಕ ಲೇಖನಗಳಲ್ಲಿನ ವಿಸ್ಮಯಗಳ ಗ್ರಹಿಕೆ, ವಿನಯ, ಅರ್ಥಪೂರ್ಣ ಬದುಕಿನ ಕ್ರಿಯಾಶೀಲ ವ್ಯಕ್ತಿತ್ವದ ಅನಾವರಣದ ಜೊತೆ ಮಾನವ ಪ್ರೀತಿಯ ಜೀವಸೆಲೆಯನ್ನು ಕಾಣಬಹುದಾಗಿದೆ. ಕನ್ನಡ ಭಾಷೆಯ ಬಗ್ಗೆ ಅಪಾರವಾದ ಪ್ರೀತಿ ಆದರಗಳಿರುವ ಕ್ರಿಯಾಶೀಲ ಹಾಗೂ ನೇರ ನುಡಿಯ ಬದ್ಧತೆಯ ವ್ಯಕ್ತಿತ್ವ ಇವರದು. ಈ ಹೊತ್ತಿಗೆಯಲ್ಲಿನ ಲೇಖನಗಳು ಬೇರೆ-ಬೇರೆ ಸಂದರ್ಭಗಳಲ್ಲಿ ಬರೆದವು ಹಾಗೂ ಬರೆಸಿಕೊಂಡವುಗಳಾಗಿವೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಈ ಎಲ್ಲಾ ಲೇಖನಗಳಿಗೆ ತನ್ನದೇ ಆದ 'ಬನಿ', ಅನನ್ಯತೆ ಇದೆ. ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿರುವ ಕನ್ನಡ ಭಾಷೆಯು ಸ್ಫುಟವಾಗಿ ಸರಳವಾಗಿ ಎರಕಗೊಂಡಿದೆ.

ಇದೊಂದು ಸಾಂಸ್ಕೃತಿಕ ಪಠ್ಯ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಏಕೆಂದರೆ ಒಂದು ಸಾಂಸ್ಕೃತಿಕ ಪಠ್ಯಕ್ಕೆ ಚರಿತ್ರೆ, ರಾಜಕೀಯ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಆಯಾಮಗಳಿದ್ದರೆ ಅದೊಂದು ಸಾಂಸ್ಕೃತಿಕ ಪಠ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಈ ಕೃತಿಯನ್ನು ಒಬ್ಬ ಸಾಹಿತ್ಯದ ವಿದ್ಯಾರ್ಥಿಯಾಗಿ ನಾನು ಸುಮಾರು ಐದು ಭಾಗಗಳಾಗಿ ವಿಂಗಡಿಸಿಕೊಳ್ಳುತ್ತೇನೆ. ಚಾರಿತ್ರಿಕ ಲೇಖನಗಳು, ಕನ್ನಡ ಸಾಂಸ್ಕೃತಿಕ ಚರಿತ್ರೆ, ಕನ್ನಡ ನಾಡುನುಡಿ, ಭವಿಷ್ಯದ ಕನ್ನಡದ ಅಸ್ತಿತ್ವ, ವ್ಯಕ್ತಿಚಿತ್ರಗಳು ಈ ನೆಲೆಯಲ್ಲಿ ಕೃತಿಯು ಮೈತಳೆದಿರುವ ರೀತಿ ಸೋಜಿಗ.

ಶಾಸ್ತ್ರೀಯ ಭಾಷಾಸ್ಥಾನಮಾನ ಅಳಿದು ಹೋಗಲಿ ಎಲ್ಲ ಅನುಮಾನ ಎನ್ನುವ ಲೇಖನದಲ್ಲಿ ಶ್ರೀಯುತರಿಗೆ ಅದಮ್ಯವಾದ ಭಾಷಾಭಿಮಾನ. ಹಿರಿಯ ವಿದ್ವಾಂಸರ ನಿಯೋಗದ ಉಸ್ತುವಾರಿ ವಹಿಸಿಕೊಂಡು ರಾಷ್ಟ್ರಪತಿಗಳೊಂದಿಗೆ ನಡೆದ ಸಂವಾದವನ್ನು ಚಾಚೂ ತಪ್ಪದೇ ಟಿಪ್ಪಣಿಯ ರೂಪದಲ್ಲಿ ನಿರೂಪಿಸುವ ಇವರ ಕ್ರಮ ಹೀಗಿದೆ. ರಾಷ್ಟ್ರಪತಿಯವರ ಸಮ್ಮುಖದಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನ ಯಾಕೆ ದೊರೆಯಲೇಬೇಕು ಎಂಬುದನ್ನು ಮಂಡಿಸುವ ಸರದಿ ಸಾಹಿತಿಗಳಲ್ಲಿ ಮೊದಲು ಬಂದದ್ದು ಡಾ. ಚಿದಾನಂದಮೂರ್ತಿ ಅವರಿಗೆ ಗಂಭೀರವಾಗಿ ಎದ್ದು ನಿಂತ ಆ ವಾಮನಮೂರ್ತಿ ಕನ್ನಡ ಭಾಷೆಯ ಹುಟ್ಟು ಬೆಳವಣಿಗೆ, ಸಾಹಿತ್ಯ ಪರಂಪರೆ, ಇತಿಹಾಸಗಳ ಮೇಲೆ ಬೆಳಕು ಚೆಲ್ಲುತ್ತ ತಾಯಿ ಭುವನೇಶ್ವರಿಯೇ ಮೈಮೇಲೆ ಬಂದಂತೆ ತ್ರಿವಿಕ್ರಮನ ಅವತಾರ ತಾಳಿಬಿಟ್ಟರು. ನಡುನಡುವೆ ತಮ್ಮ ಧ್ವನಿಗೆ ಪೂರಕವಾಗಿ ತೋರಬೆರಳನ್ನೇ

ನೆಟ್ಟಗಾಗಿಸಿ ಕೈ ಮೇಲೆತ್ತುತ್ತಾ ಕನ್ನಡದ ಗೋವರ್ಧನಗಿರಿಯ ವಿರಾಟ್‌ದರ್ಶನ ಮೂಡಿಸಿದ ಪರಿ ನಮ್ಮನ್ನೆಲ್ಲ ಮಂತ್ರಮುಗ್ಧರನ್ನಾಗಿಸಿತ್ತು. ಹೀಗೆ ಅಲ್ಲಿ ದೇ.ಜ.ಗೌ.ರವರು ಮಾತಿನ ಕೊನೆಯಲ್ಲಿ ರಾಷ್ಟ್ರಪತಿಯವರನ್ನು ಸಂಬೋಧಿಸಿ ದೇಶದ ಅತ್ಯುನ್ನತ ಸ್ಥಾನದಲ್ಲಿ ಇಂದು ತಮ್ಮ ಸ್ವರೂಪದಲ್ಲಿ ಮಾತೃ ಹೃದಯವೊಂದು ಕುಳಿತಿದೆ. ಮಕ್ಕಳಿಗೆ ಆದ/ಆಗುವ ಅನ್ಯಾಯದ ಅರಿವು ಆ ಕರುಣಾಮಯಿಗೆ ಖಂಡಿತ ಆಗುತ್ತದೆಂಬ ನಂಬುಗೆ ನಮಗಿದೆ ಎಂದರು. ಪ್ರಾಯಶಃ ಅದು ರಾಷ್ಟ್ರಪತಿಯವರನ್ನು ತೀವ್ರವಾಗಿ ತಟ್ಟಿತೆಂದೇ ತೋರುತ್ತದೆ. ಆ ಮಹಾತಾಯಿಯ ಮುಖದಲ್ಲಿ ಪ್ರಸನ್ನತೆ ರೂಹು ಮೂಡತೊಡಗಿತು ಎಂದು ಲೇಖಕರು ಸವಿವರವಾಗಿ ಸಾಮಾನ್ಯ ಓದುಗರಿಗೆ ನಡೆದ ಚಿತ್ರವನ್ನು ಕಣ್ಣಿಗೆ ಕಟ್ಟುವ ಹಾಗೆ ದಾಖಲಿಸಿದ್ದಾರೆ. ಏಕೆಂದರೆ ಶಾಸ್ತ್ರೀಯ ಭಾಷಾ ಸ್ಥಾನಮಾನ ಲಭಿಸಿದ್ದರ ಕುರಿತಾಗಿ ಚಾರಿತ್ರಿಕ ಘಟನೆಯನ್ನು ಪರಿಚಯಿಸಿದಂತಾಯಿತು.

ಮರೆಯಲೇಬಾರದವರನ್ನು ನಾವು ನೆನೆಯುತ್ತೇವಾದರೂ ಎಷ್ಟು? ಎನ್ನುವ ಲೇಖನದಲ್ಲಿ ದಂಡಿಯಾತ್ರೆಯ ಸಂದರ್ಭದಲ್ಲಿ ಗಾಂಧೀಜಿಯವರ ಜೊತೆ ಸು.430 ಕಿ.ಮೀ. ಕ್ರಮಿಸಿದ ಕೇವಲ ಎಪ್ಪತ್ತೆಂಟು ಸತ್ಯಾಗ್ರಹಿಗಳಲ್ಲಿ ಕರ್ನಾಟಕದ ಏಕಮೇವ ಪ್ರತಿನಿಧಿಯಾಗಿ ಹೆಜ್ಜೆ ಹಾಕಿದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹಾದೇವರು. 1945ರ ಏಪ್ರಿಲ್ ಮೊದಲನೇ ದಿನ ಬ್ರಿಟಿಷರ ಗುಂಡಿಗೆ ಆಹುತಿಯಾದದ್ದು ಯಾರಿಗೆ ತಾನೇ ನೆನಪಿದೆ ಎಂದು ಹೇಳುತ್ತಾ ಐತಿಹಾಸಿಕ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕರ್ನಾಟಕದ ವೀರರ ಬಗೆಗಿನ ಓದು ನಮ್ಮ ರಾಜ್ಯದವರ ಪಾಲಿಗೆ ಆ ಮಟ್ಟಿಗೆ ನೀರಸವಾಗಿ ಹೋಗುತ್ತಿತ್ತೇನೋ ಎನ್ನುವ ಆತಂಕ ಲೇಖಕರನ್ನು ಬಹುವಾಗಿ ಕಾಡಿಸಿದೆ. ಆ ವೀರನ ಮೇಲೆ ಜಾನಪದ ಸಾಹಿತ್ಯದಲ್ಲಿ ಹೊರಹೊಮ್ಮಿದ ನೂರಾರು ಲಾವಣಿ, ಗೀಗೀ ಪದಗಳಲ್ಲಿ ಸಮ್ಮದ್ ಸಾಹೇಬರು ಬರೆದ ಈ ನಾಲ್ಕು ಸಾಲುಗಳನ್ನು ನೋಡಬಹುದು. 'ಕಾಂತನ್ನ ಕಳಕೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ/ ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ ಮಹಾದೇವಪ್ಪ ಮೈಲಾರ/ ತುಂಟರ ತುಂಟನು, ಭಂಟರ ಭಂಟನು ಸಾತ್ವಿಕರೊಳಗೆ ಸರದಾರ/ ದಿಟ್ಟನ ಹೆಸರನು ಹುಟ್ಟಿದ ಕೂಸಿಗೆ ಇಟ್ಟರೂ ತೀರದು ಉಪಕಾರ/. ಹದಿಹರೆಯದ ಮಹಾದೇವಪ್ಪ ಅವರ ಪತ್ನಿ ಹದಿನಾರರ ಸಿದ್ದಮ್ಮ ಸಾಬರಮತಿ ಆಶ್ರಮದಲ್ಲಿ ಗಾಂಧೀಜಿ ಹಾಗೂ ಕಸ್ತೂರಬಾರವರ ಜೊತೆಯಲ್ಲಿದ್ದು, ಅಲ್ಲಿಯ ಚಳವಳಿಗಳಲ್ಲಿ ಭಾಗವಹಿಸಿದ್ದು ಜೈಲು ಸೇರಿದ್ದು ಗಾಂಧೀಜಿಯವರು "ಮಹಾದೇವ ನನ್ನ ಅಂತರಂಗದ ಶಿಷ್ಯ" ಎಂದು ಉಲ್ಲೇಖಿಸಿದ್ದರು. ಇಂತಹ ವಿರಳರಲ್ಲಿ ದಾಸಪ್ಪ ಮತ್ತು ಯಶೋಧರಮ್ಮ, ಎಂ.ಎನ್. ಜೋಯಿಸ್ ಮತ್ತು ಸುಬ್ಬಮ್ಮ, ಕೆ.ಆರ್.ಮಾಧವರಾವ್ ಮತ್ತು ರತ್ನಮ್ಮ ಇಂತಹವರ ಬಗ್ಗೆ ಇರುವ ದಾಖಲೆಗಳಿರುವ, ಹಾಗೆಯೇ ಮಹಾದೇವಪ್ಪ ಮೈಲಾರದ ಜೊತೆಯಲ್ಲೇ ಅಂದು ಆಂಗ್ಲರಿಗೆ ಆಹುತಿಯಾದ ಇನ್ನೂ ಇಬ್ಬರೆಂದರೆ ವೀರಯ್ಯ ಹಿರೇಮಠ ಮತ್ತು ತಿರಕಪ್ಪ ಮಡಿವಾಳರ ಇಂತಹ ಮಹಾನೀಯರ ಬಗ್ಗೆ ಸಂಶೋಧನೆ ತೊಡಗುವವರಿಗೆ ದಿಕ್ಸೂಚಿಯಂತಹ ಲೇಖನ ಇದಾಗಿದೆ. ಇದಕ್ಕೆ

ಭಾರತ ಸ್ವಾತಂತ್ರ್ಯ ಸಂಗ್ರಾಮ ಚರಿತ್ರೆಯ ಸಾಕಷ್ಟು ಅರಿವು ಬೇಕಾಗುತ್ತದೆ. ಲೇಖನದಲ್ಲಿ ಅಂತಹ ಅಧ್ಯಯನಶೀಲತೆಯನ್ನು ಗುರುತಿಸಬಹುದಾಗಿದೆ.

ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು ಎಂಬ ಅಂಬೇಡ್ಕರ್ ವಾಣಿಯಂತೆ ಭಾರತೀಯ ಸಂಸ್ಕೃತಿ ವಿಶಿಷ್ಟವಾದುದು. ಈ ವಿಶಿಷ್ಟತೆಯನ್ನು ಉಳಿಸಿಕೊಂಡುಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎನ್ನುವುದನ್ನು ವಿಶ್ವ ಪಾರಂಪರಿಕ ತಾಣ ಉಳಿಸಿ ಬೆಳೆಸುವ ಬಗೆ ಲೇಖನದಲ್ಲಿ ತುಂಬಾ ಸೂಕ್ಷ್ಮವಾಗಿ ಹೇಳಲಾಗಿದೆ. ಸಿಂಧೂ ನಾಗರೀಕತೆಯ ಉತ್ತುಂಗದಿಂದ ಹಿಡಿದು ನಮ್ಮ ರಾಜ್ಯದ ಎಷ್ಟೋ ಸ್ಮಾರಕಗಳು ಇತಿಹಾಸಾಕ್ತರಿಗೆ ಬಹು ಅಮೂಲ್ಯ ಕೊಡುಗೆ ನೀಡಿವೆ. ವಿಶ್ವ ಪಾರಂಪರಿಕ ತಾಣವೆಂದರೆ ಅವರ ದೃಷ್ಟಿಯಲ್ಲಿ ಐತಿಹಾಸಿಕ, ಕಲಾತ್ಮಕ ಅಥವಾ ವೈಜ್ಞಾನಿಕ ದೃಷ್ಟಿಯಿಂದ ಅಸಾಧಾರಣವಾದ ಸಾರ್ವತ್ರಿಕ ಮೌಲ್ಯಗಳು ಇರಬೇಕು. ಈ ಎಲ್ಲಾ ಮೌಲ್ಯಗಳು ನಮ್ಮ ರಾಜ್ಯದ ಎಷ್ಟೋ ತಾಣಗಳಿಗೆ ಇವೆ.

ವಿಶ್ವ ಪಾರಂಪರಿಕ ತಾಣಗಳನ್ನು ಅತ್ಯಂತ ಜಾಗರೂಕತೆಯಿಂದ ಸಂರಕ್ಷಿಸುವ ಕರ್ತವ್ಯ ಎಲ್ಲಾ ನಾಗರಿಕರದ್ದಾಗಿದೆ. ಆ ತಾಣಗಳು ಪ್ರವಾಸಿಗರನ್ನು ಕೈಬೀಸಿ ಕರೆಯುವಂತಿರಬೇಕು. ಇದರಿಂದ ಪ್ರವಾಸೋದ್ಯಮ ಚಿಲ್ಲರೆ ವ್ಯಾಪಾರಸ್ಥರಿಗೆ ಸಹಾಯಕವಾಗುತ್ತದೆ, ರೈಲ್ವೆ, ರಸ್ತೆ ಸಾರಿಗೆ ಅಭಿವೃದ್ಧಿ ಹೊಂದುತ್ತದೆ ಮತ್ತು ಆರ್ಥಿಕ ಮಟ್ಟ ಸುಧಾರಿಸುತ್ತದೆ. ಉದ್ಯಮಶೀಲತೆ, ಪ್ರಾಮಾಣಿಕ ನಿರ್ವಹಣೆ ಇಲ್ಲಿನ ಅಗತ್ಯವಾಗಿರುತ್ತದೆ ಎನ್ನುವ ಕಳಕಳಿ ಲೇಖನದಲ್ಲಿ ಎದ್ದು ಕಾಣುತ್ತದೆ.

ಮನುಷ್ಯ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಮಾಧ್ಯಮವೇ ಭಾಷೆ. ಇದು ಸಂಬಂಧಗಳನ್ನು ಬೆಸೆಯುವಂತಾಗಬೇಕೇ ಹೊರತು ಹೊಡೆಯುವಂತಿರಬಾರದು. ಭಾಷೆಯೆಂಬುದು ನೋಡಾ ಬಾಂಧವ್ಯದ ಬೇರು ಎಂಬ ಲೇಖನದಲ್ಲಿ ಲೇಖಕರು ಈ ಅಂಶವನ್ನು ಬಹಳ ಮನೋಜ್ಞವಾಗಿ ತಿಳಿಸಿದ್ದಾರೆ. ವಿವಿಧತೆಯಲ್ಲಿ ಏಕತೆಯಿರುವ ರಾಷ್ಟ್ರ ನಮ್ಮದು. ಪ್ರತಿಯೊಬ್ಬರಿಗೂ ಭಾಷಾಭಿಮಾನಬೇಕು ಆದರೆ ದುರಾಭಿಮಾನ ಇರಬಾರದು. ಗಾಂಧೀಜಿಯವರು ನಿನ್ನ ಸಂಸ್ಕೃತಿಯಲ್ಲಿ ಜೀವಿಸು ಪರ ಸಂಸ್ಕೃತಿಯನ್ನು ಪೂಜಿಸು ಎಂದಿದ್ದಾರೆ. ಭಾಷೆಯ ಮೂಲ ಆಶಯ ಪರಸ್ಪರ ತಿಳುವಳಿಕೆ ಅಂದರೆ ಆದಿಮಾನವನ ಚಿತ್ರ ಬಿಡಿಸುವ ಮೂಲಕ, ಸಂಜ್ಞೆ ಮೂಲಕ ಭಾವನೆ ವ್ಯಕ್ತಪಡಿಸುತ್ತಿದ್ದ ಆ ಸಂದರ್ಭದಲ್ಲಿ ಎಷ್ಟೋ ಭಾವನೆಗಳು ಸೂಕ್ತ ಮಾಧ್ಯಮ ಇಲ್ಲದೆ ಹಾಗೇ ಉಳಿಯುತ್ತಿದ್ದವು. ಈ ಹೊತ್ತು ಹಾಗಿಲ್ಲ. ಎಲ್ಲಾ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆ ಮಾಧ್ಯಮವಾಗಿ ಕೆಲಸ ಮಾಡುತ್ತಿದೆ. ಆದ್ದರಿಂದ ಭಾರತೀಯರಾದ ನಾವೆಲ್ಲರೂ ಒಂದೇ. ನಮ್ಮಲ್ಲಿರುವ ಸಮಸ್ಯೆಗಳನ್ನು ದೊಡ್ಡದು ಮಾಡದೆ ಚರ್ಚಿಸಿ ಬಗೆಹರಿಸಿಕೊಳ್ಳೋಣ. ಅತ್ಯಂತ ಕಿರಿಯ ಭಾಷೆಯಾಗಿರುವ "ಉರ್ದು" ಆಡಳಿತ ಭಾಷೆಯಾಗಿ ವಿಜಯಪುರ ಮತ್ತು ಗೋಲ್ಕಂಡದಲ್ಲಿ ಅಸ್ತಿತ್ವದಲ್ಲಿತ್ತು. ಅಂದರೆ ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ ನಮ್ಮದು. ಕನ್ನಡಿಗರು ಎಲ್ಲಿಗೇ ಹೋದರು ಬಹುಬೇಗ ಅನ್ಯಭಾಷಾ ಅನುಕರಣೆಯನ್ನು ಮಾಡಿ ಆ ಭಾಷೆ ಕಲಿಯಲು ಪ್ರಯತ್ನಿಸುತ್ತಾರೆ. ಹೀಗೆ ಅನ್ಯ ಭಾಷೆಯನ್ನು ಪ್ರೀತಿಸುತ್ತಾ,

ಭಾಷಾ ಜ್ಞಾನವನ್ನು ಹೊಂದಿ ಭಾಷಾಭಿಮಾನದ ಪರಿಧಿಯನ್ನು ವಿಸ್ತರಿಸೋಣ ಎಂದಿದ್ದಾರೆ. ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು ಆದರೆ ಕನಸಿಲ್ಲದ ದಾರಿಯಲ್ಲಿ ಹೋಗಲು ಸಾಧ್ಯವಿಲ್ಲ. ಹಾಗೆ ಭಾಷೆ ಸಂವಹನಕ್ಕೆ ಅನ್ಯದ ಭಾಷೆ ಯಾವಾಗ ಎಲ್ಲ ಕನಸುಗಾರಿಕೆಯ ದೂರದೃಷ್ಟಿಯ ಬದ್ಧತೆಯನ್ನು ನಾವು ಕಾಣಬಹುದು. ಮುತ್ತು ಕಳೆದರೆ ಸಿಕ್ಕೀತು ಹೊತ್ತು ಕಳೆದರೆ, ಸಿಕ್ಕೀತೇ? ಎಂಬ ಮಾತಿನಂತೆ ಲೇಖಕರು 'ಕಾಲವೆಂಬುದು ಕಾಲಾತೀತ' ಎಂಬ ಶೀರ್ಷಿಕೆಯಲ್ಲಿ ಸಮಯದ ಮಹತ್ವವನ್ನು ವಿವರಿಸಿದ್ದಾರೆ. ಭೂತದಿಂದ ನಾವು ಕಲಿಯಬೇಕಾದದ್ದು ಬಹಳಷ್ಟಿದೆ. ಮೇಲೇರಲು ಬಳಸಿದ ಏಣಿಯನ್ನು ಮರೆಯಬಾರದು ಹಾಗೆ ನಮ್ಮ ಭವಿಷ್ಯ, ಭೂತ ಮತ್ತು ವರ್ತಮಾನದ ಅನುಭವವೇ ಆಗಿರಬೇಕು. ಹಾಗಾಗಿ ಪೂರ್ವಜರನ್ನು ಹಿರಿಯರನ್ನು ಕೇವಲವಾಗಿ ಕಾಣವುದು ಸರಿಯಲ್ಲ. ಅವರಿಗಿರುವ ಅನುಭವ ನಮಗೆ ಸಹಾಯವಾಗಬೇಕು, ಹಳೇ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು ಎಂಬಂತೆ ಹಳೆಯದು ಹೊಸದು ಎರಡೂ ಬೇಕು. ಕಾಲ ನಿಂತ ನೀರಲ್ಲ ಅದು ಸದಾ ಹರಿಯುತ್ತಿರುವ ನೀರು, ಹಾಗೆಯೇ ನಾವು ಕಾಲವನ್ನು ಸರಿಯಾಗಿ ಬಳಸಿಕೊಂಡರೆ ಸದುಪಯೋಗವಾಗುತ್ತೆ ಹಾಗೆ ವೃಥಾ ವ್ಯರ್ಥ ಮಾಡಿದರೆ ಕಾಲ ನಿಲ್ಲುವುದಿಲ್ಲ ಅದು ಸರಿದು ಹೋಗುತ್ತೇ. ಆದ್ದರಿಂದಲೇ ವರಕವಿ ದ.ರಾ.ಬೇಂದ್ರೆಯವರು ಹಕ್ಕಿ ಹಾರುತಿದೆ ನೋಡಿದಿರಾ ಎಂದು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ. ನಮಗೆ ಸಿಕ್ಕಿರುವಷ್ಟು ಸಮಯ ಅಷ್ಟೇ ನಮ್ಮದು ಏಕೆಂದರೆ ಇಂದು ನಮ್ಮದು ನಾಳೆ ಇನ್ನಾರದ್ದೋ ಆಗಲಿದೆ ಇದು ಪ್ರಕೃತಿ ನಿಯಮ. ಸಿಕ್ಕಿರುವಷ್ಟು ಸಮಯವನ್ನು ಅರ್ಥಪೂರ್ಣವಾಗಿ ಕಳೆಯುವ ಮನಸ್ಥಿತಿ ನಮ್ಮದಾಗಲಿ. ಏಕೆಂದರೆ ಕಾಲವೆಂಬುದು ನಮ್ಮನ್ನು ಮೀರಿದ್ದು.

ಭಾರತೀಯ ಸಂಸ್ಕೃತಿ ಪುರಾತನ ಇತಿಹಾಸ ಹೊಂದಿರುವಂತಹುದು. ಅದರಲ್ಲೂ ಸಾಂಸ್ಕೃತಿಕ ಇತಿಹಾಸ ಕೆದಕಿದಷ್ಟು ಆಳ ಮತ್ತು ಅಗಲ, ವೈಶಾಲ್ಯಗಳನ್ನು ಹೊಂದಿದೆ. ಸಾಹಿತ್ಯ, ಶಿಕ್ಷಣ, ಕಲೆ ಮತ್ತು ವಾಸ್ತುಶಿಲ್ಪ, ನೃತ್ಯ ಇವೆಲ್ಲವನ್ನೂ ನಮ್ಮ ಸಂಸ್ಕೃತಿ ಗರ್ಭೀಕರಿಸಿಕೊಂಡಿದೆ. ಇಂತಹ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಳ್ಳುವ ಜವಾಬ್ದಾರಿ ಭಾರತೀಯರೆಲ್ಲರ ಮೇಲಿದೆ. ಅಪೂರ್ವವಾದ ಕಲಾಕೃತಿಗಳನ್ನು ಸಂರಕ್ಷಿಸಲು ರಾಷ್ಟ್ರೀಯ ಕಲಾಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅವು ಎಷ್ಟರ ಮಟ್ಟಿಗೆ ಕೆಲಸ ನಿರ್ವಹಿಸುತ್ತಿವೆ ಹಾಗೂ ಅವುಗಳ ಉದ್ದೇಶ ಈಡೇರಿದೆಯೇ ಎಂದು ಪ್ರಶ್ನಿಸಿಕೊಂಡರೆ ಸಾಧಿಸಿರುವುದು ಸಾಸಿವೆಯಷ್ಟು ಸಾಧಿಸಬೇಕಾಗಿರುವುದು ಸಾಗರದಷ್ಟಿದೆ ಎಂಬ ಉತ್ತರ ದೊರೆಯುತ್ತದೆ. ಲೇಖಕರು "ರಾಷ್ಟ್ರೀಯ ಕಲಾ ಕೇಂದ್ರಗಳ ಉದ್ದೇಶವೀಡೇರಲಿ' ಎಂಬ ಲೇಖನದಲ್ಲಿ ತುಂಬ ಸ್ಪಷ್ಟವಾಗಿ ಹೇಳಿದ್ದಾರೆ. ಭಾರತದ ಪ್ರಮುಖ ನಗರಗಳಲ್ಲಿ ರಾಷ್ಟ್ರೀಯ ಕಲಾ ಕೇಂದ್ರಗಳು ಸ್ಥಾಪನೆಯಾಗಿವೆ. ಈ ಕಲಾ ಕೇಂದ್ರಗಳು ಕಲಾವಿದರ, ವಿಮರ್ಶಕರ, ಕಲಾ ಪ್ರೇಮಿಗಳ, ಸಂಶೋಧಕರ, ಪೋಷಕರ, ಅಭ್ಯಾಸಿಗಳ ಆಶೋತ್ತರಗಳಿಗೆ ಸ್ಪಂದಿಸಿ ಕಲಾಕೃತಿಗಳ ವಿವಿಧ ಶೈಲಿಗಳನ್ನು ಸಂರಕ್ಷಿಸಿ ಉಳಿಸಿ, ಬೆಳೆಸುವ ಒಂದು ಮಹತ್ವದ ಚಿತ್ರಕಲಾನಿಧಿಯಾಗಿಸುವ ಹೊಣೆ ಹೊರಬೇಕಾಗಿದೆ. ಕಲೆ ಯಾರೊಬ್ಬರ ಸ್ವತ್ತಲ್ಲ. ಅದು ಮನುಷ್ಯನಲ್ಲಿ

ರಕ್ತಗತವಾಗಿರುವಂತದ್ದು ಮತ್ತು ಸತತ ಪರಿಶ್ರಮದಿಂದ ಒಲಿದು ಬರುವಂತದ್ದು. ಹಾಗಾಗಿ ಈ ಕಲೆ ಅರಳಲು ಪೂರಕ ವಾತಾವರಣ ನಿರ್ಮಾಣವಾಗಬೇಕಿದೆ. ಸಂಬಂಧಪಟ್ಟ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿದೆ. ಅಂದರೆ ಈಗಾಗಲೇ ಕಲಾರಂಗದಲ್ಲಿರುವ ಅನೇಕ ಗಣ್ಯರು ತಮ್ಮ ರಂಗಶಕ್ತಿಯನ್ನು ಕ್ರಿಯಾರೂಪಕ್ಕಿಳಿಸುವ ಸಂದರ್ಭ ಈಗ ಬಂದಿದೆ.

ಈ ಹೊತ್ತಿಗೆಯಲ್ಲಿ ಮೂಡಿಬಂದಿರುವ ಎಲ್ಲಾ ಲೇಖನಗಳು ಒಂದಲ್ಲ ಒಂದು ವಿಶೇಷತೆ, ಸೃಜನಶೀಲತೆ, ಸರ್ವಕಾಲಿಕ ಸತ್ಯ, ಸಾಹಿತ್ಯದ ಚೌಕಟ್ಟನ್ನು ಒಳಗೊಂಡಿರುವಂತವು. ರಾಜ್ಯ, ರಾಷ್ಟ್ರ, ಭಾಷೆ, ಸಾಹಿತ್ಯ, ಹಬ್ಬ, ಕಾಲ, ಕಲೆ, ಸಂಬಂಧ, ಪಾಲಕ, ಕವಿ ಹೀಗೆ ಹತ್ತು ಹಲವು ವಿಷಯಗಳನ್ನು ಓದುಗರಿಗೆ ಉಣಬಡಿಸುತ್ತ ಹೋಗುತ್ತದೆ. ವರ್ತಮಾನದ ಜರೂರನ್ನು ಭವಿಷ್ಯದ ಕನಸನ್ನು ಸಾಕಾರಗೊಳಿಸುವ ಲೇಖನಗಳು ಓದುಗರನ್ನು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಕೊಂಡೊಯ್ಯುವಂತೆ ಮಾಡಿ ಚಿಂತನೆಗೆ ಒಳಪಡಿಸುವ ರೀತಿ ಅನನ್ಯವಾದುದು. ಬಾಳುವುದೇ ಬದುಕಲ್ಲ ಬದುಕಿನ ಅರ್ಥವ ತಿಳಿವ ಚಿಂತನೆಯೇ ನಿಜ ಬದುಕು ನರಜೀವಿಗೆ ಎನ್ನುವ ನಿಸಾರ್ ಅಹಮ್ಮದರ ಮಾತು ಅರ್ಥಪೂರ್ಣ. ಈ ಹಿನ್ನೆಲೆಯಲ್ಲಿ ಲೇಖಕರು, ಜೀವನೋತ್ಸಾಹದ ಸಾರ್ಥಕ ಬದುಕಿನ ಕ್ಷಣಗಳನ್ನು ಬೆಳಕ-ಬೆಡಗು ಕೃತಿಯಲ್ಲಿ ಸಾಕಾರಗೊಳಿಸಿದ್ದಾರೆ.

❖

# ಬಳಿಗಾರರ ಸಂಸ್ಕೃತಿ ಚಿಂತನೆಯ ಬೆಳಕ ಬೆಡಗಿನ ಅಕ್ಕಡಿ ಸಾಲುಗಳು

ಡಾ|| ರಾಜೀವ ನಾಯ್ಕ್ ಎಸ್.

ಪ್ರಾಚೀನ ಮನುಷ್ಯನಿಗೆ ತೀರಾ ದಿಗ್ಭ್ರಾಂತಿಯನ್ನು ಹುಟ್ಟಿಸಿದ ಮೂರು ಸನ್ನಿವೇಶಗಳೆಂದರೆ ಹುಟ್ಟು, ಹೊಟ್ಟೆಪಾಡು ಹಾಗೂ ಸಾವು. ನಿಜವಾಗಿ ನೋಡಿದರೆ ಅಕ್ಷರಪೂರ್ವ ಸಮಾಜಗಳಿಗೆ ಇವು ಎಲ್ಲಾ ಕಾಲದಲ್ಲೂ ಮೂಲಭೂತವಾದ ಸಂಗತಿಗಳು ಹಾಗೂ ಅನುಭವಗಳಾಗಿವೆ. ಇವುಗಳಿಂದ ಮನಸ್ಸಿನಲ್ಲಿ ಹುಟ್ಟಿದ ತಳಮಳಗಳನ್ನು ಉಪಶಮನಗೊಳಿಸುವ ದಾರಿಗಳನ್ನು ಅಥವಾ ವಿಧಾನಗಳನ್ನು ಅವರು ಕಂಡುಕೊಳ್ಳಬೇಕಾಗಿತ್ತು. ಹಳೆ ಶಿಲಾಯುಗದ ಜೀವನವು ಬಹುತೇಕ ಬೇಟೆಯನ್ನವಲಂಬಿಸಿದ್ದು, ಕಾಡಿನ ಹಣ್ಣುಗಳು ಹಾಗೂ ಮೀನು ಮುಂತಾದವುಗಳ ಹುಡುಕಾಟದ ಸಾಹಸಮಯ ಜೀವನವಾಗಿತ್ತು. ಈ ಜೀವನ ಕ್ರಮವು ಋತುಮಾನದ ಹುಚ್ಚಾಟ ಮತ್ತು ಮಾನವ ಸಾಮರ್ಥ್ಯಕ್ಕೆ ಸವಾಲಾದ ಅನಿರೀಕ್ಷಿತ ಘಟನೆಗಳು ಹಾಗೂ ನಿಯಂತ್ರಣಕ್ಕೆ ಸಿಗದ ಅಸಂಖ್ಯ ಸಂದರ್ಭಗಳನ್ನು ಅವಲಂಬಿಸಿತ್ತು. ಆಗ ಆದಿಮ ಮನುಷ್ಯನಿಗೆ ಭಾವನಾತ್ಮಕ ದಣಿವು ಮತ್ತು ಒತ್ತಡವು ಒಂದು ಜಾಡ್ಯದಂತೆ ಕಾಡಿದ್ದು ಸ್ವಾಭಾವಿಕ ಅವನು ಇದನ್ನು ಹಗುರ ಮಾಡಿಕೊಳ್ಳಲು ಜೀವನದ ಅಗತ್ಯಕ್ಕೆ ತಕ್ಕಂತೇ ಒಂದು ವಿದಿಯಾಚರಣೆಯ ತಂತ್ರವನ್ನು ರೂಪಿಸಿದನು. ಮನುಷ್ಯನ ಜೀವನವು ಅಲ್ಪ ತಿಳುವಳಿಕೆಯಿಂದ ಕೂಡಿ ಅಸ್ಥಿರವಾಗಿದೆ. ಆತನು ಈ ಲೋಕದಲ್ಲಿ ವಿಪುಲತೆ

ಹಾಗೂ ಕೊರತೆ, ಸಮೃದ್ಧಿ ಹಾಗೂ ಬರ, ಜೀವನ ಮತ್ತು ಮರಣ ಮುಂತಾದ ಅನಿರೀಕ್ಷಿತವಾದ ಬದಲಾವಣೆಗಳಿಗೆ ಮುಖಾಮುಖಿಯಾಗುತ್ತಾನೆ. ಅವನು ಖಂಡಿತವಾಗಿಯೂ ಇದನ್ನು ಅನಿಶ್ಚಿತತೆ ಹಾಗೂ ಅವಿಶ್ವಾಸನೀಯತೆ ಎಂಬುದಾಗಿ ಅನುಭವಿಸಿ ಅವು ತನ್ನ ಅಸ್ಥಿತ್ವಕ್ಕೆ ಹಾಗೂ ಉಳಿವಿಗೆ ಅಗತ್ಯವಾದ ಅಂಶಗಳನ್ನು ಅಪಾಯಕ್ಕೆ ತಳ್ಳುತ್ತವೆ ಎಂಬುದಾಗಿ ಭಾವಿಸುತ್ತಾನೆ. ಇಂಥವೇ ವಿದ್ಯಮಾನಗಳಿಂದಾಗಿ ಆಧುನಿಕ ಮನುಷ್ಯನ ಅನುಭವಕ್ಕಿಂತಲೂ ಆದಿಮ ಮನುಷ್ಯನ ಅನುಭವವು ಹೆಚ್ಚು ತೀಕ್ಷ್ಣವಾಗಿಬಿಡುತ್ತದೆ.

ಸಾಂಸ್ಕೃತಿಕ ವಿಕಾಸದಿಂದ ಯಾವ ರೀತಿಯ ಬದಲಾವಣೆಯಾಗಿದೆ? ಎಂದು ಯೋಚಿಸಿದಾಗ ನಮ್ಮ ಆಲೋಚನಾ ಕ್ರಮಗಳಲ್ಲಿ ಮಾತ್ರ ಬದಲಾವಣೆಯಾಗಿದೆ ಎಂಬುದಾಗಿ ಕಲ್ಪಿಸಿಕೊಳ್ಳಬೇಕು. ಅಂದರೆ ಭಾವನೆಗಳು ಮೂಲತಃ ಜೈವಿಕ ಸ್ವರೂಪವನ್ನು ಹೊಂದಿವೆ ಮತ್ತು ಅವು ವಿಕಾಸವಾದೀ ಬೆಳವಣಿಗೆಯ ನಿಯಮಗಳಿಗೆ ಮಾತ್ರ ಬದ್ಧವಾಗಿವೆ.

ಸಾಂಸ್ಕೃತಿಕ ಬದಲಾವಣೆಗೆ ಬದ್ಧವಾದ ವೈಚಾರಿಕ ಅಂಶ ಮತ್ತು ಬದಲಾವಣೆಯನ್ನು ಹೊಂದದ ಭಾವನಾತ್ಮಕ ಅಂಶಗಳು ಪ್ರಮುಖವೆಂದೆನಿಸುತ್ತವೆ. ಮನುಷ್ಯರ ಒಂದು ಗುಣಲಕ್ಷಣವೆಂದರೆ ಅವರಿಗೆ ಸಂಸ್ಕೃತಿಯನ್ನು ಬೆಳೆಸುವ ಸಾಮರ್ಥ್ಯದ ಜೊತೆಗೆ ಅದು ಬದಲಾದಂತೆ ತಾವೂ ಬದಲಾಗುವ ಸಾಮರ್ಥ್ಯವಿದೆ. ಬದಲಾಗುವ ಸಂಗತಿಯೆಂದರೆ ಅದು ನಮ್ಮ 'ವೈಚಾರಿಕತೆ' ಆದ್ದರಿಂದ ನಮ್ಮಲ್ಲಿರುವ ಮಾನವ ವಿಶಿಷ್ಟವಾದುದೆಂದರೆ 'ವೈಚಾರಿಕತೆ' ಅದು ವಿಕಾಸಹೊಂದುತ್ತದೆಯೇ ವಿನಃ ಜೈವಿಕವಾಗಿ ನಿರ್ಧಾರಿತವಾದ 'ಭಾವನೆ'ಗಳಲ್ಲ. ಮುಖ್ಯವಾಗಿ ಮನುಷ್ಯನು ಈ ವಿಷಯವನ್ನು ಅಭಿವ್ಯಕ್ತಿಸಲು ಶಬ್ದಗಳನ್ನು ಬಳಸಿಕೊಂಡ ದಿನದಿಂದಲೂ ಈ ಚಿತ್ರವು ನಮಗೆ ಸುಪರಿಚಿತ, ಮಾನವರನ್ನು ವೈಚಾರಿಕ ಹಾಗೂ ಮೃಗೀಯ ಎಂದು ಎರಡು ಭಾಗಮಾಡಿ ವಿಭಾಗಿಸಿರುವುದಕ್ಕೆ ಶತಮಾನಗಳ ಪರಂಪರೆಯಿದೆ.

ಹುಟ್ಟು ಅಥವಾ ಸಾವಿನ ಕುರಿತು ರಹಸ್ಯವಾದುದು ಏನಿದೆ? ಅವು ಅತ್ಯಂತ ನೀರಸ ಘಟನೆಗಳು ಜನರು ಹುಟ್ಟಿದ್ದರು ಹಾಗೂ ಅವರು ಸತ್ತರು, ಪ್ರಾಣಿಗಳು ಹುಟ್ಟುತ್ತವೆ ಮತ್ತು ಸಾಯುತ್ತವೆ. ಆದಿಮ ಮನುಷ್ಯ ಈ ವಿಷಯಗಳನ್ನು ತೀರಾ ಸ್ವಾಭಾವಿಕವಾದ ಸಂಗತಿಯೆಂಬಂತೆ ಒಪ್ಪಿಕೊಂಡಿದ್ದಿರಬಹುದು. ಸಾವಿಗೆ ಅಪವಾದಗಳೇ ಇರಲಿಲ್ಲ. ಅವನಿಗೆ ತಿಳಿದ ಎಲ್ಲಾ ಜೈವಿಕ ವಸ್ತುಗಳೂ ಒಮ್ಮಿಲ್ಲೊಮ್ಮೆ ಸಾಯುತ್ತಿದ್ದವು. ನಿಜ ಹೇಳಬೇಕೆಂದರೆ ಹುಟ್ಟು ಸಾವು ಎರಡೂ ಅವನು ಬದುಕಿನ ಜಗತ್ತಿನ ಒಂದು ನಿಯಮವನ್ನು ರಚಿಸಿದ್ದವು ಎಂದು ಸೂಚಿಸಿದರೇ ಹೆಚ್ಚು ಸಮಂಜಸ, ಅವು ಬೆರಗನ್ನು ಹುಟ್ಟಿಸುವ 'ರಹಸ್ಯ'ಗಳಾಗಿರುವ ಬದಲಾಗಿ ಜಗತ್ತಿನ ಕುರಿತಾದ ಅವನ ಅನುಭವಕ್ಕೆ ದೃಢತೆಯನ್ನು ಒದಗಿಸಿದ್ದವು.

ನಾವು ನಿತ್ಯ ವೀಕ್ಷಿಸುವ ಸೂರ್ಯನು ಭೂಮಿಯ ಸುತ್ತ ತಿರುಗುವುದನ್ನು ನಾವು ಸೂರ್ಯೋದಯ ಸೂರ್ಯಾಸ್ತಗಳ ರೂಪದಲ್ಲಿ ನೋಡುತ್ತೇವೆ. ಆದರೆ ನಮ್ಮ ಸಿದ್ಧಾಂತಗಳು ತಿಳಿಸುವ ಪ್ರಕಾರ ನಾವಿರುವ ಸೌರವ್ಯೂಹವು ಸೂರ್ಯ ಕೇಂದ್ರಿತವಾಗಿದೆ. ನಾವು ನೀರಿನಲ್ಲಿ ಕೋಲನ್ನು ಮುಳುಗಿಸಿದ ಪ್ರತಿ ಬಾರಿಯೂ

ಅದು ಬಾಗುವುದಿಲ್ಲವೆಂಬುದು ನಮಗೆ ತಿಳಿದಿದೆ. ನಮ್ಮಲ್ಲಿ ಪ್ರತಿಯೊಬ್ಬರೂ ಇಂಥ ಅನೇಕ ಉದಾಹರಣೆಗಳನ್ನು ನೆನಪಿಸಿಕೊಳ್ಳಬಹುದು. ಆದರೆ ಇಲ್ಲಿ ಗಮನಿಸತಕ್ಕ ವಿಷಯವೆಂದರೆ ಯಾವ ಸಿದ್ಧಾಂತಗಳೂ ನಮ್ಮ ಅನುಭವಗಳನ್ನು ಒಂದು ಭ್ರಮೆಯೆನ್ನುವುದಿಲ್ಲ. ಬದಲಾಗಿ, ಅವು ನಾವೇಕೆ ಈ ವಿದ್ಯಮಾನಗಳನ್ನು ನಾವು ನೋಡಿದ ರೀತಿಯಲ್ಲೇ ನೋಡುತ್ತಿದ್ದೇವೆಂಬುದಕ್ಕೆ ವಿವರಣೆಯನ್ನು ನೀಡುತ್ತವೆ. ಅಂದರೆ ಅವು ವಿದ್ಯಮಾನವನ್ನು ಅಲ್ಲಗಳೆಯುವುದಿಲ್ಲ. ಸಿದ್ಧಾಂತಗಳು ನಮ್ಮ ಅನುಭವವನ್ನು ತಿದ್ದುತ್ತವೆಂಬುದು ಕೂಡ ಅಷ್ಟೇ ನಿಸ್ಸಂಶಯ ಆದರೆ ಅವು ಸಿದ್ಧಾಂತಗಳೆಂಬುದನ್ನು ನಾವು ನೆನಪಿಡಬೇಕು.

ಅರಿವಿನ ದೃಷ್ಟಿ ನೋಡಿದರೆ ನಮ್ಮ ಅನುಭವಗಳಿಗೆ ಸಂಬಂಧಿಸಿದಂತೆ ಅಂಥದೊಂದು ನಿಲುವು ಆರೋಗ್ಯಕರವೆಂಬಂತೆ ಕಾಣುತ್ತದೆ. ಅದು ಬೌದ್ಧಿಕವಾಗಿ ಕೂಡ ಒಂದು ಮಹತ್ವಪೂರ್ಣವಾದ ವಿಧಾನವಾಗಿದೆ.

ಈ ಹಿನ್ನೆಲೆಯಲ್ಲಿ ಮನು ಬಳಿಗಾರರ 'ಬೆಳಕ ಬೆಡಗು' ಕೃತಿ ಮಹತ್ವಪೂರ್ಣವಾಗಿದೆ. ಸುಮಾರು 32 ಲೇಖನಗಳಿಂದ ಕೂಡಿದ ಈ ಕೃತಿ ಪರಂಪರೆಯಿಂದ ಪ್ರಸ್ತುತತೆಯವರೆಗೆ ನಡೆದಿರಬಹುದಾದ ಹಲವಾರು ಸಾಂಸ್ಕೃತಿಕ ಬೆಳವಣಿಗೆಗಳನ್ನು ಪರಿಚಯಿಸಿಕೊಡುತ್ತದೆ. ಪ್ರಾರಂಭದಲ್ಲೇ 'ಉತ್ಕೃಷ್ಟತೆಯ ಬೆನ್ನತ್ತಿ ದೈವತ್ವದ ದಾರಿಯೆಡೆಗೆ' ಎಂಬ ಲೇಖನವು ಶ್ರೇಷ್ಠತೆಯ ಪರಿಕಲ್ಪನೆ ಪ್ರತಿಯೊಬ್ಬರಲ್ಲೂ ಹೇಗೆ ಭಿನ್ನವಾಗಿರುತ್ತದೆ ಎಂದು, 'ಅವರವರ ಭಾವಕ್ಕೆ ಅವರವರ ಭಕುತಿಗೆ ಅವರವರ ತೆರನಾಗಿ ಇರುತಿಹನು ಶಿವಯೋಗಿ' ಎಂದು ಹೇಳುವ ಮುಖಾಂತರ ದೈವತ್ವದ ಬಗೆಗಿನ ನಂಬಿಕೆ ಹಾಗೂ ಹುಟ್ಟು ಸಾವಿನ ನಡುವೆ ಅಂತರ ಧೀರ್ಘ ಕಾಲದ ಬದುಕಿನ ಸಾಧನೆಯ ಶ್ರೇಯಸ್ಸನ್ನು, ಸಾರ್ಥಕ ಜೀವನ ನಡೆಸಿದ ಹಲವಾರು ಮಹನೀಯರನ್ನು ಪರಿಚಯಿಸಿಕೊಡುತ್ತದೆ. ಯತಿಗಳು, ಮುನಿಗಳು, ದಾಸಶ್ರೇಷ್ಠರು, ಶರಣರು ತಲುಪಿದ ಉತ್ತುಂಗಕ್ಕೆ ನಾವೆಲ್ಲ ಹೆಜ್ಜೆ ಇಡುವುದಾದರೂ ಸಂಭವನೀಯವೇ? ಎಂಬ ಮಹತ್ವದ ಚಿಂತನೆಯ ಸವಾಲನ್ನು ಮುಂದಿಡುತ್ತಾರೆ.

ದೇವರನ್ನು ಪೂಜಿಸುತ್ತ, ಪೂಜಿಸುತ್ತ ನಾವು ದೇವರಾಗುತ್ತೇವೆ. ದೆವ್ವವನ್ನು ಪೂಜಿಸುತ್ತ ದೆವ್ವವಾಗುತ್ತೇವೆ ಎಂಬ ಕುವೆಂಪು ರವರ ಕವಿವಾಣಿಯು ನಿತ್ಯ ಸತ್ಯವಾದದ್ದು. ಅಂದರೆ ನಮ್ಮ ನಮ್ಮ ನಂಬಿಕೆ ಹಾಗೂ ನಮ್ಮೊಳಗಿನ ಅಂಧಕಾರವನ್ನು ಹೋಗಲಾಡಿಸಿ ಯಾವುದನ್ನು ಪ್ರೋತ್ಸಾಹಿಸಬೇಕು, ಯಾವುದನ್ನು ಸ್ವೀಕರಿಸಿ ಸಾಗಬೇಕೆಂಬ ಒಳಿತು ಕೆಡಕುಗಳ ಅರಿವಿನ ಭಾವ ದೃಢವಾಗಿರಬೇಕು ನಾವು ಯಾವುದನ್ನು ಆಯ್ಕೆ ಮಾಡಿಕೊಂಡು ಸಾಗುತ್ತೇವೊ ಅದರ ಮೇಲೆ ನಮ್ಮ ಬದುಕು ನಿರ್ಧರಿಸುತ್ತದೆ ಎಂಬ ಮಾತನ್ನು ಇಲ್ಲಿ ಸ್ಪಷ್ಟಪಡಿಸುತ್ತಾರೆ.

ನಮ್ಮಲ್ಲಿ ಶತಾಯುಷಿಗಳು ಇದ್ದಾರೆ ಶತಾಯುಷ್ಯದ ಸಮೀಪಿಸಿದಂತಹ ಹಲವಾರು ಮಹನೀಯರು ಇದ್ದಾರೆ. ಆದರೆ ಆಯಸ್ಸನ್ನು ಆಧರಿಸಿ ಬದುಕಿದವರು ಅವರ ಅಂತ್ಯಕಾಲಕ್ಕೆ ಅವರು ಕೊನೆಗೊಳ್ಳುತ್ತಾರೆ. ಆದರೆ ಸಮಾಜಮುಖಿ ಚಿಂತನೆಗಳ ಮೂಲಕ ತಮ್ಮನ್ನು ತೊಡಗಿಸಿಕೊಂಡವರು ಚಿರಂಜೀವಿಗಳಾಗಿ ತಮ್ಮ ಚಿಂತನೆಗಳ ಮುಖಾಂತರ ಸಮಾಜದಲ್ಲಿ ಚಿರಂತನವಾಗಿರುತ್ತಾರೆ. ನಾವು ಬುದ್ಧ, ಬಸವ, ಅಂಬೇಡ್ಕರರನ್ನು

ಸ್ಮರಿಸುತ್ತೇವೆ ಎಂದರೆ ಅವರ ಚಿಂತನೆಗಳೆ ಸಾಕ್ಷಿ, ಇಲ್ಲಿ ಶಿವಕುಮಾರ ಸ್ವಾಮಿ, ಗಂಗೂಬಾಯಿ ಹಾನಗಲ್, ಎಚ್.ಎಸ್.ದೊರೆಸ್ವಾಮಿ, ದೇಜಗೌ ಇತರೆ ಹಲವಾರು ಚಿಂತಕರನ್ನು ಇಲ್ಲಿ ಸ್ಮರಿಸಬಹುದು. ಆಯಸ್ಸು ಕ್ಷೀಣಿಸುತ್ತಿರುವ ಆಧುನಿಕ ಜಗದಲ್ಲಿ ದೀರ್ಘಕಾಲೀನ ಆಯಸ್ಸನ್ನು ಬಾಳಿದವರು ವಿರಳವಾಗಿ ಕಾಣುತ್ತಾರೆ. ಅದು ಅವರವರ ಆರೋಗ್ಯದ ಫಲವಾಗಿ ನಿರ್ಧರಿಸಲ್ಪಡುತ್ತದೆ ಎಂಬ ನಂಬಿಕೆ ಇದೆ. ಆದರೆ ಇರುವಷ್ಟು ಕಾಲ ಒಳ್ಳೆಯದನ್ನೇ ಅಳವಡಿಸಿಕೊಂಡು ವಿಶ್ವಮಾನವರಾಗಿ ರೂಪುಗೊಳ್ಳಬೇಕಾದ ಜರೂರು ಎಲ್ಲರಿಗೂ ಅನ್ವಯಿಸುತ್ತದೆ.

ಈಶನಾ ವಾಸದೀ ಜಗವು ಕಸದ ತೊಟ್ಟಿಲಾಗಲುಂಟೆ ಎಂಬ ಲೇಖನದಲ್ಲಿ ತಮ್ಮ ಗ್ರಾಮೀಣ ಬದುಕಿನೊಂದಿಗೆ ತೆರೆದುಕೊಳ್ಳುವ ಲೇಖನ ಸ್ವಚ್ಛತೆಯೆನ್ನುವುದು ಎಷ್ಟು ಮುಖ್ಯ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಪ್ರತಿಯೊಬ್ಬ ನಾಗರೀಕನು ಅರಿತಿರಲೇಬೇಕಾದ ಸತ್ಯಾಂಶವೆಂದರೆ, ಸ್ವಚ್ಚತೆಗೆ ಮೊದಲ ಪ್ರಾಧಾನ್ಯತೆ ನೀಡುವುದೇ ಆಗಿರುತ್ತದೆ. ಒಂದು ರೀತಿಯಲ್ಲಿ ಅಂತರಂಗ ಮತ್ತು ಬಹಿರಂಗ ಎರಡು ಸ್ವಚ್ಚವಾಗಿ ಸ್ವಸ್ತವಾಗಿ ಶುದ್ಧವಾಗಿರಬೇಕು ಎಂಬ ಅರಿವಿನ ಭಾವಶುದ್ಧತೆ ಇದರಿಂದ ತಿಳಿಯಬೇಕಾಗುತ್ತದೆ. ದೇಶದ ಹಳ್ಳಿಗಳಲ್ಲಿ, ನಗರಗಳಲ್ಲಿ, ರೈಲ್ವೆ ಬಸ್ ನಿಲ್ದಾಣಗಳಲ್ಲಿ, ಸಾರ್ವಜನಿಕ ಸ್ಥಳಗಳಲೆಲ್ಲ ಸ್ವಚ್ಛತೆಯನ್ನು ಕಾಪಾಡುವ ನಿಯಮವನ್ನು ಪಾಲಿಸಬೇಕಾದ ಜರೂರಿದೆ, ಈ ಕಾರಣಕ್ಕೆ 'ಸ್ವಚ್ಚಭಾರತ' ಆಂದೋಲನ ಹುಟ್ಟಿಕೊಂಡಿದ್ದನ್ನು ಮರೆಯಬಾರದು ಕೇವಲ ಒಂದು ದಿನದ ಕಾರ್ಯ ಮಾಡಿ ಸ್ವಚ್ಚತೆ ಕಾಪಾಡುವುದರಲ್ಲಿ ಅರ್ಥವಿಲ್ಲ. ನಿತ್ಯವು ಸ್ವಚ್ಚತೆಗೆ ಆದ್ಯತೆ ನೀಡಿದಲ್ಲಿ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತದೆ ಎಂಬ ಆಶಯ ಈ ಲೇಖನದ್ದಾಗಿದೆ. ನಾಗರೀಕ ಸಮಾಜದ ಬೆಳವಣಿಗೆ-ಸಂಪನ್ಮೂಲಗಳ ದುರ್ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಅರಿತು ಜೀವನ ಸಾಗಿಸಬೇಕಾಗಿದೆ ಎಂಬ ಸತ್ಯಾಂಶ ಅರಿವಿಗೆ ಬರುತ್ತದೆ.

ಇನ್ನೂ, ಸದಾ ಚಲನಶೀಲವಾದ ಭಾಷೆಯು ಹೆಚ್ಚು ಬಳಕೆಗೊಂಡಷ್ಟು ಜೀವಂತಗೊಳ್ಳುತ್ತದೆ. ಬಳಸದೇ, ಬರೆಯದೇ ಹೋದಾಗ ಅನ್ಯಭಾಷ ಪ್ರಭಾವದಿಂದ ಇಂತದೊಂದು ಭಾಷೆ ಇತ್ತು ಎಂದು ಸ್ಮರಿಸಿಕೊಳ್ಳಬೇಕಾದ ಅನಿವಾರ್ಯ ಹುಟ್ಟಿಕೊಳ್ಳುತ್ತದೆ. ಆದರೆ ಕನ್ನಡ ಭಾಷೆ, ಕನ್ನಡ ಜಲ, ನೆಲ ಎಂದೆಂದಿಗೂ ಚಿರಂತನವಾದದ್ದು. ಸುಲಲಿತವಾದ ಸುಂದರವಾದ ಈ ಭಾಷೆ ಬಗ್ಗೆ ಶ್ರೀಯುತರು 'ಭಾಷೆಯೆಂಬುದು ನೋಡಾ ಬಾಂಧವ್ಯದ ಬೇರು' ಎಂಬ ಮಾತಿನಲ್ಲಿ ನೆರೆಹೊರೆಯವರಲ್ಲಿ ರಾಜ್ಯ, ರಾಷ್ಟ್ರ, ಜಗತ್ತಿನೊಂದಿಗೆ ಇತರರೊಂದಿಗೆ ಬಾಂಧವ್ಯ ವೃದ್ಧಿಸಿಕೊಳ್ಳಲು ಸಹಕಾರಿಯಾದದ್ದು, ಭಾಷೆಯ ಅರಿವೆ ಇಲ್ಲದಿದ್ದರೆ ಯಾವುದನ್ನು ಗಳಿಸಲು, ಬೆಳೆಸಲು ಸಾಧ್ಯವಿಲ್ಲ ಎಂಬ ಮಾತು ಸ್ಪಷ್ಟವಾಗುತ್ತದೆ. ಪ್ರಸ್ತುತ ಕನ್ನಡ ಭಾಷೆ ಬಳಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಅನ್ಯಭಾಷೆಗಳ ಪ್ರಭಾವದಿಂದಾಗಿ ಇಂದು ಕನ್ನಡ ಭಾಷೆ ಆತಂಕದ ಸ್ಥಿತಿಯಲ್ಲಿದೆ. ಜಾಗೃತಗೊಂಡು ಭಾಷಾ ಬೆಳವಣಿಗೆಗೆ ಶ್ರಮಿಸಬೇಕಾದುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ, ಮಹಾರಾಷ್ಟ್ರ

ಮುಂಬಯಿಗಳಲ್ಲಿ ನಡೆದ ಕನ್ನಡಪರ ಕಾರ್ಯಕ್ರಮಗಳು ಕನ್ನಡ ಭಾಷಾ ಅಭಿಮಾನವನ್ನು, ಸಹೃದಯರನ್ನು, ಹೊರರಾಜ್ಯದಲ್ಲೂ ಇರುವುದನ್ನು ಪರಿಚಯಿಸಿಕೊಡುತ್ತದೆ.

ಅಮೇರಿಕಾದಂತ ದೊಡ್ಡ ರಾಷ್ಟ್ರದಲ್ಲಿ ಕನ್ನಡಿಗರ ಕನ್ನಡ ಅಭಿಮಾನ, ಚಿಕಾಗೊದಲ್ಲಿನ ವಿಶ್ವ ಕನ್ನಡ ಸಮ್ಮೇಳನದ ಮೂಲಕ ಕಲೆ, ಸಂಸ್ಕೃತಿ, ಸಾಹಿತ್ಯ ಪಸರಿಸಲು 'ಅಕ್ಕ'ದಂತ ಸಮ್ಮೇಳನದಿಂದ ಹೊರನಾಡ ಕನ್ನಡಿಗರಲ್ಲಿ ಭಾಷಾಭಿಮಾನದ ಮೆರುಗನ್ನು ಮೇಳೈಸಿರುವುದನ್ನು ದೃಢಪಡಿಸುತ್ತದೆ. ಈ ಸಾಂಸ್ಕೃತಿಕ ಹಬ್ಬ ಕನ್ನಡಿಗರ ವಿಶಿಷ್ಟ ಆಹಾರ ಪದ್ಧತಿಯನ್ನು ಪರಿಚಯಿಸಿಕೊಡುವ ಮೂಲಕ ಸಂಸ್ಕೃತಿ ಮೆರೆಯುವುದನ್ನು ಕಾಣಬಹುದು.

ಸಾಹಿತ್ಯ ಸತ್ಪುರುಷರನ್ನು ಸುಸಂಸ್ಕೃತರನ್ನಾಗಿ ರೂಪಿಸುತ್ತದೆ. ಶಿಸ್ತುಬದ್ಧ ಬದುಕನ್ನು ಕಲಿಸುತ್ತದೆ ಎಂಬ ಮಾತು "ತ್ಯಜಿಸಿ ಭುಜಿಸುವ ಭಾವ ಬಲು ಮೇಲು" ಎಂಬ ಲೇಖನದಿಂದ ಸಾರ್ಥಕ್ಯ ಪಡೆದುಕೊಳ್ಳುತ್ತದೆ, ಇಂದಿನ ಯುವ ಪೀಳಿಗೆ ಯಾವುದನ್ನು ಮಾದರಿಯಾಗಿ ಅನುಸರಿಸಬೇಕೆನ್ನುವ ಹೊತ್ತಿಗೆ ಈ ಲೇಖನದಲ್ಲಿ ಕೆಲವು ಮಾನಸ ಪುತ್ರರ ನಿಲುವುಗಳಿಂದ ಕಲಿಯಬೇಕಾದ ಮಾತು ಅರಿತು ನಡೆಯುಬೇಕಾದ ಸಂಗತಿಗಳು ಮಾದರಿಯಾಗಿ ನಿಲ್ಲುತ್ತವೆ, ಸಾಮಾಜಿಕ ಜವಾಬ್ದಾರಿಯನ್ನು ಅರಿತ ಪ್ರತಿಯೊಬ್ಬ ಸುಸಂಸ್ಕೃತನ ನಡಿಗೆ ಹೀಗೆ ಇರುತ್ತದೆ. ಯಾವುದೇ ಆಸೆ ಆಮಿಷ, ಅಧಿಕಾರ ಲಾಲಸೆಗಳಿಗೆ ಬಯಸಿ ನಡೆಯದೆ ಕೆಲವೊಂದು ಅವಕಾಶಗಳು ಹುಡುಕಿಕೊಂಡು ಬಂದರು ತ್ಯಜಿಸಿ ಮತ್ತೊಬ್ಬರಿಗೆ ಅನುಕೂಲವಾಗಲೆಂದು ಆಶಿಸುವ ಮನೋಭೂಮಿಕೆ ಇದರಿಂದ ಅರಿವಾಗುತ್ತದೆ.

ಮತ್ತೊಂದು ಲೇಖನದಲ್ಲಿ ಬಳಿಗಾರ್ ಅವರು ಜಗತ್ತಿನ ನೆಮ್ಮದಿಯನ್ನು ಬೇರೊಂದು ರೀತಿಯಿಂದ ಧ್ಯಾನಿಸುತ್ತಾರೆ ಅಂದರೆ, ಅಹಿಂಸೆಯಿಂದ ಸುಖ, ಮೈತ್ರಿಯಿಂದ ಪ್ರಗತಿ, ತ್ಯಾಗದಿಂದ ಶಾಂತಿ, ಧ್ಯಾನದಿಂದ ಸಿದ್ಧಿ, ಪ್ರತಿಯೊಬ್ಬರು ಅರಿತುಕೊಳ್ಳಬೇಕಾದ ಸಾರ್ವಕಾಲಿಕ ಸತ್ಯ. ಇದಕ್ಕೆ ಪ್ರತಿಮೆಯಾಗಿ ಚಾವುಂಡರಾಯ ಕ್ರಿ.ಶ.981ರಲ್ಲಿ ನಿರ್ಮಿಸಿದ ಬಾಹುಬಲಿ ಹಾಗೂ ಮೈಕೆಲ್ ಏಂಜಲೊ, ಪರಿಚಯಸಿ ರೂಪಿಸಿದ ಡೇವಿಡ್ರ ಪುತ್ಥಳಿಗಳನ್ನು ಇಲ್ಲಿ ಪರಿಚಯಿಸುತ್ತಾರೆ. ಇಲ್ಲಿ ಗೊಮ್ಮಟ ಇತಿಹಾಸವನ್ನು ಪ್ರತಿನಿಧಿಸಿದರೆ ಡೇವಿಡ್ ಕಾಲ್ಪನಿಕ ಶಕ್ತಿಯಾಗಿ ನಿಲ್ಲುವುದನ್ನು ಕಾಣಬಹುದು, ಅಷ್ಟೆ ಅಲ್ಲದೆ ನಮ್ಮ ದೇಶದಲ್ಲಿ ಕಂಡುಬರುವ ಹಲವಾರು ಅದ್ಭುತ ಶಿಲ್ಪಕಲಾಕೃತಿಗಳು ಇವೆ. ಅವು ನಮ್ಮ ಸಮಾಜಕ್ಕೆ ಚಾರಿತ್ರಿಕ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವಂತವು. ಹಾಗಾಗಿ ಪರಂಪರೆಯನ್ನು ಮೆಲುಕು ಹಾಕುತ್ತ ಪ್ರಸ್ತುತತೆಯನ್ನು ಸುಂದರಗೊಳಿಸಿಕೊಳ್ಳಬೇಕಾಗಿದೆ.

ಶಿಸ್ತು, ಸ್ವಚ್ಛತೆ ಯಾವ ವ್ಯಕ್ತಿಯಲ್ಲಿ ಇರುತ್ತದೇ ಅವರು ತಾವು ತಮ್ಮ ಕುಟುಂಬವನ್ನು ಶಿಸ್ತುಬದ್ಧವಾಗಿ ಸ್ವಚ್ಛತೆಯನ್ನು ಕಾಪಾಡಿಕೊಂಡಿರುತ್ತಾರೆ. ಹಾಗೇ ತಮ್ಮ ನೆರೆಹೊರೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದರೊಂದಿಗೆ ಮಾದರಿಯಾಗಿ ಸಮಾಜದೆಲ್ಲೆಡೆಯು ಸ್ವಚ್ಛತೆಯ ಅರಿವನ್ನು ಮೂಡಿಸಿ ಜಗತ್ತನ್ನು ಸುಂದರಗೊಳಿಸುವುದರೊಂದಿಗೆ ಬದಕನ್ನು ಸುಂದರಗೊಳಿಸಿಕೊಂಡು ಆರೋಗ್ಯಕರ ಸಮಾಜದ ನಿರ್ಮಾಣ

ಮಾಡುವಲ್ಲಿ ಪಾತ್ರರಾಗುವುದು ಪ್ರತಿಯೊಬ್ಬ ನಾಗರೀಕನ ಕರ್ತವ್ಯ ಪ್ರಜ್ಞೆಯಾಗಿರುತ್ತದೆ. ಈ ದಿಸೆಯಿಂದ ಪ್ರತಿನಿತ್ಯದ ಮಾಲಿನ್ಯಕರ ಬದುಕನ್ನು ನಿರ್ಮೂಲನೆ ಮಾಡಬಹುದಾಗಿದೆ ಎಂದು ಹೇಳುತ್ತಾರೆ.

ಒಟ್ಟಾರೆಯಾಗಿ ಮನು ಬಳಿಗಾರರ 'ಬೆಳಕ ಬೆಡಗು' ಕೃತಿಯ ಸಂಸ್ಕೃತಿ ಚಿಂತನೆಗಳು ಅಕ್ಕಡಿ ಸಾಲಿನಂತೆ ಪ್ರಧಾನವಾಗಿ ನೇರವಾಗಿ ಹಚ್ಚಹಸಿರಾಗಿ ಸಹೃದಯರ ಮನಮುಟ್ಟುತ್ತವೆ. ಸಾಲುಸಾಲಾಗಿ ಬೆಳೆದ ಬೆಳೆಯಲ್ಲಿ ದೇಸಿ ತಳಿಯೇ ಶ್ರೇಷ್ಠ ಅದರಂತೆ ದೇಸಿ ಸಂಸ್ಕೃತಿಯ ಪ್ರಾಮುಖ್ಯತೆಯೇ ಬಹುಮುಖ್ಯವೆನಿಸುತ್ತದೆ. ಈ ಮೂಲಕ ನಮ್ಮ ಸಂಸ್ಕೃತಿಯ ಪರಂಪರೆಯನ್ನು ಅದರ ಪ್ರಾಮುಖ್ಯತೆಯನ್ನು ಅದನ್ನು ಉಳಿಸಿ ಬೆಳಸಬೇಕಾದ ಅಗತ್ಯತೆಗಳನ್ನು ತಾಜಾತನಗೊಳಿಸುವುದನ್ನು ಇಲ್ಲಿ ಕಾಣಬಹುದು. ನಮ್ಮ ಸಂಸ್ಕೃತಿ ಎಂಬ ಅಕ್ಕಡಿ ಸಾಲುಗಳಲ್ಲಿ ಅನ್ಯ ಸಂಸ್ಕೃತಿಯ ಕಳೆ ಬೆರೆತು ಹೋಗಿದೆ. ಎಡೆಹೊಡೆದು ಎಂಬ ಸಂದೇಶ ಸಾರುವಲ್ಲಿ ಈ ಕೃತಿ ಆಶಯ ಮಹತ್ವದಾಗಿದೆ. ಮೌಢ್ಯದ ಕಳೆ ಕಳೆದು ನಮ್ಮ ಸಂಸ್ಕೃತಿಯ ಅಕ್ಕಡಿ ಸಾಲುಗಳನ್ನು ಸ್ವಚ್ಛಗೊಳಿಸಿ ಬೆಳೆಸಬೇಕಾಗಿದೆ. ಆಗ ಮಾತ್ರ ಎಲ್ಲೆಲ್ಲೂ ಹಚ್ಚ ಹಸಿರು, ಸಮೃದ್ಧಿಯ ಸಂಸ್ಕೃತಿ ಪೈರು ಬೆಳೆಯಲು ಸಾಧ್ಯವಾಗುತ್ತದೆ. ಈ ಕೃತಿಯ ಎಲ್ಲ ಬರಹಗಳು ಚಿಂತನಾ ಲೋಕದೊಂದಿಗೆ ಹೃದಯ ಪ್ರಫುಲ್ಲಗೊಂಡು ಮನಸ್ಸು ಅರಳಿ ಪರಂಪರೆಯನ್ನು ಮರುಕಳಿಸುವಂತೆ ಚಿಂತನ ಮಾಡುತ್ತವೆ ಎಂದರೆ ತಪ್ಪಾಗಲಾರದು.

❖

**ಭಾಗ-6**

# ಸಂಪಾದನಾ ಕೃತಿಗಳು

## ಜೀವನ ಚರಿತ್ರೆಗಳು

ಡಾ. ಜಿ.ಎಂ. ಹೆಗಡೆ

ಕರ್ನಾಟಕ ವಿಧಾನಸಭೆಯ ಸಚಿವಾಲಯವು ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆಯನ್ನು ಆರಂಭಿಸಿದ್ದು, ಈ ಮಾಲೆಯಲ್ಲಿ ಮನು ಬಳಿಗಾರ್ ಅವರು ಎರಡು ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. **ಎಸ್.ಆರ್. ಕಂಠಿ** (2001 & 2005) ಮತ್ತು **ಅಬ್ದುಲ್ ನಜೀರ್ ಸಾಬ್** (2005) ಇವೆರಡೂ ಜೀವನ ಚರಿತ್ರೆಗಳು ನಮ್ಮ ನಾಡಿನ ಹೆಸರಾಂತ ರಾಜಕೀಯ ಧುರೀಣರ ಬದುಕು ಸಾಧನೆಗಳನ್ನು ಅರ್ಥಪೂರ್ಣವಾಗಿ ಸಮೀಕ್ಷಿಸುತ್ತವೆ. ಎಸ್.ಆರ್.ಕಂಠಿ ಅವರು ಕರ್ನಾಟಕ ರಾಜ್ಯದ ಶಿಕ್ಷಣ ಮಂತ್ರಿಗಳಾಗಿ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದವರು. ಕರ್ನಾಟಕ ಏಕೀಕರಣ, ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ ಎಸ್.ಆರ್.ಕಂಠಿ ಅವರು ಗಾಂಧಿವಾದಿಗಳಾಗಿದ್ದರು. ಸತ್ಯ ಅಹಿಂಸೆ, ಸರಳ ಜೀವನಶೈಲಿ ಪ್ರಾಮಾಣಿಕತೆಗೆ ಹೆಸರಾಗಿದ್ದ

ಎಸ್.ಆರ್.ಕಂಠಿ ಅವರು ಉತ್ತರ ಕರ್ನಾಟಕದ ಪ್ರಭಾವಿ ನಾಯಕರಾಗಿದ್ದರು. ಅವರ ಜೀವನವನ್ನು ಮನು ಬಳಿಗಾರ್ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕಾನೂನು ಪದವಿಯ ನಂತರ ವಕೀಲಿ ವೃತ್ತಿ ಮಾಡುತ್ತಿರುವಾಗ ಕಂಠಿ ಅವರು ಗಾಂಧೀಜಿ ಪ್ರಭಾವಕ್ಕೆ ಒಳಗಾದರು. ದೇಶಭಕ್ತಿ ದುಮದುಮಿಸುತ್ತಿದ್ದ ಕಾಲವದು. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಧುಮುಕಿದರು. ಕಾಂಗ್ರೆಸ್ ಪಕ್ಷ ಸೇರಿ ರಾಜಕೀಯ ವ್ಯಕ್ತಿಗಳ ಸಾಲಿಗೆ ಸೇರಿದ ಎಸ್.ಆರ್.ಕಂಠಿ ಅವರು ಸತ್ಯಾಗ್ರಹ ನಡೆಸಿ ಕಾರಾಗೃಹವಾಸವನ್ನು ಅನುಭವಿಸಿದರು. ಸೆರೆಮನೆಯಿಂದ ಬಿಡುಗಡೆಗೊಂಡ ನಂತರ ಎಸ್.ಆರ್.ಕಂಠಿ ಅವರು ಮುಂಬಯಿ ವಿಧಾನಸಭೆಯ ಸದಸ್ಯರಾದರು. ಹುನಗುಂದ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ನಿರಂತರ ನಾಲ್ಕು ಬಾರಿ ಚುನಾಯಿತರಾದರು. ಮನು ಬಳಿಗಾರ್ ಅವರು ಕಂಠಿ ಅವರ ಧಾರ್ಮಿಕ ಪ್ರಜ್ಞೆಯನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಬಸವಣ್ಣನವರ ಅಷ್ಟ ಶತಮಾನೋತ್ಸವದ ಸಂದರ್ಭದಲ್ಲಿ ಕಂಠಿ ಅವರು ನಡೆಸಿದ ಕಾರ್ಯಕ್ರಮಗಳನ್ನು ಅವರ ಸರ್ವಧರ್ಮ ಸಮಭಾವವನ್ನು ನಿದರ್ಶನಗಳೊಂದಿಗೆ ಪ್ರಸ್ತುತಪಡಿಸಿದ್ದಾರೆ.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಂಠಿಯವರ ಪಾತ್ರದ ಬಗ್ಗೆ ಮನು ಬಳಿಗಾರ್ ವಿವರಿಸಿದ್ದಾರೆ. ಅವರು ನಾಡು ನುಡಿಯ ಹೋರಾಟದಲ್ಲಿ ಪಾಲ್ಗೊಂಡ ಬಗೆಯನ್ನು ವಿಪುಲ ಮಾಹಿತಿಯೊಂದಿಗೆ ಪ್ರಸ್ತುತಪಡಿಸಿದ್ದಾರೆ. ಈ ಜೀವನಚರಿತ್ರೆಯ ಎರಡನೆಯ ಭಾಗದಲ್ಲಿ ಎಸ್.ಆರ್.ಕಂಠಿಯವರ ಜೀವನದ ವಿವಿಧ ಮಜಲುಗಳನ್ನು ಮನು ಬಳಿಗಾರ್ ವರ್ಣಿಸಿದ್ದಾರೆ. ಕಂಠಿಯವರು ನವ ಮೈಸೂರು ರಾಜ್ಯದ ವಿಧಾನಸಭಾಧ್ಯಕ್ಷರಾದದ್ದು (1956-62). ಅವರ ವಿದೇಶ ಪ್ರವಾಸದ ವಿವರಗಳೂ ಇದರಲ್ಲಿವೆ. ಆಗಿನ ಮುಖ್ಯಮಂತ್ರಿ ನಿಜಲಿಂಗಪ್ಪನವರು 1962ನೆಯ ವರ್ಷದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಸೋತಾಗ ಎಸ್.ಆರ್.ಕಂಠಿ ಅವರು ಮುಖ್ಯಮಂತ್ರಿಗಳಾಗಿ ಮಾರ್ಚ್‌ನಿಂದ ಜೂನ್ ತಿಂಗಳವರೆಗೆ ಅಧಿಕಾರ ನಡೆಸಿದರು. ನಿಜಲಿಂಗಪ್ಪನವರಿಗೆ ಪುನಃ ತಮ್ಮ ಹುದ್ದೆ ಬಿಟ್ಟುಕೊಟ್ಟು ಕಂಠಿ ಅವರ ಸರಳತೆ, ಸಜ್ಜನಿಕೆ ಕಣ್ಣಿಗೆ ಕಟ್ಟುವಂತಿದೆ. ಎಸ್.ಆರ್.ಕಂಠಿ ಅವರು ಶಿಕ್ಷಣ ಮಂತ್ರಿಗಳಾಗಿ ಅಪ್ರತಿಮ ಕಾರ್ಯಗಳನ್ನು ಮಾಡಿದರು. ಎಸ್.ಆರ್.ಕಂಠಿಯವರು ಶಾಲಾ ಸುಧಾರಣೆ ಮಾಡಿದರು. ವಯಸ್ಕರ ಶಿಕ್ಷಣಕ್ಕೆ ಒತ್ತುಕೊಟ್ಟರು. ಅವರ ಕಾಲದಲ್ಲಿ ಕಿತ್ತೂರ ರಾಣಿ ಚನ್ನಮ್ಮ ವಸತಿಶಾಲೆ ಆರಂಭವಾಯಿತು. ಶಿಕ್ಷಕರ ತ್ರಿವಿಧ ಸೌಲಭ್ಯಯೋಜನೆ, ಸಾಂಸ್ಥಿಕ ಬೆಳವಣಿಗೆ ಹೀಗೆ ಬಹುಮುಖ ಯೋಜನೆಗಳನ್ನು ಹಮ್ಮಿಕೊಂಡು ಅಪೂರ್ವ ಕಾರ್ಯಗಳನ್ನು ಮಾಡಿದ ಶ್ರೇಯಸ್ಸು ಕಂಠಿಯವರದು. ಎಸ್.ಆರ್.ಕಂಠಿಯವರ ಅಧಿಕಾರ, ಜೀವನದ ಕೊನೆಯ ದಿನಗಳಲ್ಲಿ ಅವರಿಗಾದ ಅನ್ಯಾಯ, ಅದನ್ನು ಸಮಚಿತ್ತದಿಂದ ಅವರು ಸ್ವೀಕರಿಸಿದ ರೀತಿಯನ್ನು ಮನು ಬಳಿಗಾರ್ ವಿವರಿಸಿರುವುದು ಅತ್ಯಂತ ಹೃದಯಸ್ಪರ್ಶಿಯಾಗಿದೆ. ರಾಜಕಾರಣದ ಸಮುದ್ರಮಥನದಲ್ಲಿ ಉದಯಿಸಿ ಬಂದ ಹಾಲಾಹಲ ಕುಡಿದ ನೀಲಕಂಠನಂತಿದ್ದರು ಶಿವಲಿಂಗಪ್ಪ ಕಂಠಿ. ಅವರೊಬ್ಬ ಸ್ಥಿತಪ್ರಜ್ಞನಂತಿದ್ದರು (ಪು.46) ತಮ್ಮ ಸ್ವಕ್ಷೇತ್ರದ ಅಭಿವೃದ್ಧಿಗೆ ಕಾರಣರಾಗಿದ್ದರಿಂದಲೇ ಕಂಠಿ ಅವರು ಜನಪ್ರಿಯ ವ್ಯಕ್ತಿಗಳಾಗಿದ್ದರು. ಅವರೊಬ್ಬ

ಕನಸುಗಾರರಾಗಿದ್ದರು. ಅವರೇ ಆರಂಭಿಸಿದ ಕಿತ್ತೂರ ರಾಣಿ ವಸತಿ ಶಾಲೆಯ ಸಮಾರಂಭದಲ್ಲಿ ಭಾಷಣ ಮಾಡುತ್ತಿದ್ದಾಗ ಕುಸಿದುಬಿದ್ದು ಬದುಕಿಗೆ ವಿದಾಯ ಹೇಳಿದ ಕಂಠಿಯವರು ಮೌಲ್ಯಾಧಾರಿತ ರಾಜಕಾರಣಕ್ಕೆ ಮಾದರಿಯಾಗಿದ್ದರು. ಪ್ರಜಾಪ್ರಭುತ್ವವಾದಿಯಾಗಿದ್ದ ಕಂಠಿಯವರು ಜೀವನದುದ್ದಕ್ಕೂ ಮೌಲ್ಯಗಳನ್ನು ಅಳವಡಿಸಿಕೊಂಡದ್ದನ್ನು ಮನು ಬಳಿಗಾರ್ ಮಾರ್ಮಿಕವಾಗಿ ನಿರೂಪಿಸಿದ್ದಾರೆ. ಎಸ್.ಆರ್.ಕಂಠಿಯವರ ವ್ಯಕ್ತಿತ್ವ ಅರಳುತ್ತಾ ಹೋಗುವದು ಈ ಜೀವನಚರಿತ್ರೆಯ ವಿಶಿಷ್ಟತೆಯಾಗಿದೆ.

ಕರ್ನಾಟಕ ರಾಜ್ಯ ವಿಧಾನಮಂಡಲ ಸಚಿವಾಲಯವು ಪ್ರಕಟಿಸಿದ ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ ಮಾಲಿಕೆಯಲ್ಲಿ ಎರಡನೆಯ ಜೀವನಚರಿತ್ರೆ ಅಬ್ದುಲ್ ನಜೀರ್‌ಸಾಬ್ ಪ್ರಮುಖವಾಗಿ ಮೂರು ಭಾಗಗಳಲ್ಲಿ ನಿರೂಪಿತವಾಗಿದೆ. ನಜೀರ ನಡೆದು ಬಂದ ದಾರಿಯಲ್ಲಿ ಅವರ ಬಾಳಿನ ಪಯಣದ ಚರಿತ್ರೆಯಿದೆ. ಈಗಿನ ತಮಿಳುನಾಡು ರಾಜ್ಯದ ಸತ್ಯಮಂಗಲ ತಾಲೂಕು ತಾಳವಾಡಿಯ ಬೈಯಣಪುರದಲ್ಲಿ ಜನಿಸಿದ (1934) ನಜೀರ್‌ಸಾಬ್ ಮುಂದೆ ಗುಂಡ್ಲುಪೇಟೆಯಲ್ಲಿ ವಿದ್ಯಾಭ್ಯಾಸ ಮಾಡಿ ಶಾಸಕಿ ಕೆ.ಎಸ್.ನಾಗರತ್ನಮ್ಮ ಪ್ರಭಾವದಲ್ಲಿ ರಾಜಕೀಯರಂಗಕ್ಕೆ ಧುಮುಕಿದವರು. ತಮ್ಮ ಹಸನ್ಮುಖಿ ವ್ಯಕ್ತಿತ್ವದಿಂದ ಬೇಗನೆ ಜನಪ್ರಿಯರಾದರು. ಪುರಸಭೆಯ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ನಜೀರ್‌ಸಾಬ್ ಬಹುಬೇಗನೆ ಕರ್ನಾಟಕ ರಾಜ್ಯ ವಿಧಾನಪರಿಷತ್ತಿಗೆ ಆಯ್ಕೆಯಾದರು. ಕಾಂಗ್ರೆಸ್ ರಾಜಕಾರಣದಿಂದ ಬೇಸತ್ತಿದ್ದ ನಜೀರ್‌ಸಾಬ್ ಜನತಾರಂಗದಿಂದ ಸ್ಪರ್ಧಿಸಿ ಆರಿಸಿ ಬಂದು ಗ್ರಾಮೀಣ ಅಭಿವೃದ್ಧಿ ಪಂಚಾಯತ್‌ರಾಜ್ ಸಚಿವರಾದರು. ನಜೀರ್‌ಸಾಬ್ ಅವರು ಗ್ರಾಮ ಭಾರತದ ಅಭಿವೃದ್ಧಿಯ ಕನಸುಗಾರರಾಗಿದ್ದರು. ಅವರು ಮಾಡಿದ ಮೊದಲ ಕೆಲಸ ರಾಜ್ಯಾದ್ಯಂತ ಕೊಳವೆ ಬಾವಿಗಳನ್ನು ತೋಡಿಸಿ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದ್ದು, ಜನ ಕಲ್ಯಾಣದ ಅವರ ಕನಸು ಸಾಕಾರಗೊಂಡು ನಜೀರ್‌ಸಾಬ ನೀರ್‌ಸಾಬ್ ಆಗಿ ರಾಜಾದ್ಯಂತ ಜನಪ್ರಿಯರಾದರು. ಬರಗಾಲಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಕರ್ಯಕ್ಕೆ ಕಾರಣರಾದ ನಜೀರಸಾಬ ಐದು ವರ್ಷಗಳ ಕಾಲ ಮಂತ್ರಿಯಾಗಿ ಮಾಡಿದ ಕೆಲಸ ಅವಿಸ್ಮರಣೀಯವಾದದ್ದು. 1988ರಲ್ಲಿ ಕ್ಯಾನ್ಸರ್ ರೋಗದಿಂದ ಸಾವನ್ನಪ್ಪಿದ ನಜೀರ್‌ಸಾಬ್ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮಿಂಚಿ ಮರೆಯಾದದ್ದನ್ನು ಅವರ ವ್ಯಕ್ತಿತ್ವದ ವಿಭಿನ್ನ ಮುಖಗಳನ್ನು ಹೃದಯಂಗಮಯವಾಗಿ ಮನು ಬಳಿಗಾರ್ ಈ ಜೀವನ ಚರಿತ್ರೆಯಲ್ಲಿ ವಿವರಿಸಿದ್ದಾರೆ. ನಜೀರ್‌ಸಾಬ ಪುಸ್ತಕ ಪ್ರೀತಿ, ಜನಕಲ್ಯಾಣದ ಭಾವನೆಗಳನ್ನು ಬಹಳ ಚೆನ್ನಾಗಿ ವರ್ಣಿಸಿದ್ದಾರೆ.

ಗ್ರಂಥದ ಎರಡನೆಯ ಭಾಗದಲ್ಲಿ 'ಸದನಗಳಲ್ಲಿ ಸಾಹೇಬರು' ಅನೇಕ ಘಟನೆಗಳ ಅಪೂರ್ವ ದಾಖಲೆಯಾಗಿದೆ. ವಿಧಾನಪರಿಷತ್ತಿನಲ್ಲಿದ್ದಾಗ ನಜೀರ್‌ಸಾಬ ಪಂಚಾಯತ ಚುನಾವಣೆ ಮುಂದೂಡಿಕೆ ವಿರೋಧಿಸಿದರು. ಭೂಸುಧಾರಣೆ ಕಾನೂನು ಕುರಿತು ಮರುಚಿಂತನೆ ನಡೆಸಿದರು. ಬರಗಾಲ ಪರಿಹಾರ ಕಾಮಗಾರಿಗಳ ಬಗ್ಗೆ ಗುಡುಗಿದರು. ಆಡಳಿತದಲ್ಲಿ ಕನ್ನಡದ ಬಗ್ಗೆ ಮಾತನಾಡಿದರು. ವಿಧಾನಸಭೆಯಲ್ಲಿ

ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾತಿ, ಅಂತ್ಯೋದಯ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಕೊಳವೆ ಬಾವಿ ತೋಡಿಸುವುದು, ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು, ಗ್ರಾಮೀಣ ಅಭಿವೃದ್ಧಿ, ಜೀತಮುಕ್ತರಿಗೆ ಪುನರ್ವಸತಿ, ಮಂಡಲ ಪಂಚಾಯತಿಗಳಿಗೆ ಸಹಾಯಧನ, ಕರ್ನಾಟಕ ಜಿಲ್ಲಾ ಪರಿಷತ್ ಮಸೂದೆ ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರವನ್ನು ಮಂಡಿಸಿದರು. ಅವರ ಮುತ್ಸದ್ದಿತನ, ಜನಸೇವಾಕಾರ್ಯಗಳನ್ನು ಅಪೂರ್ವ ದಾಖಲೆಗಳ ಆಧಾರದಿಂದ ಮನುಬಳಿಗಾರ್ ವಿವರಿಸಿದ್ದಾರೆ.

ಒಟ್ಟಿನಲ್ಲಿ ಮನು ಬಳಿಗಾರ್ ರಚಿಸಿದ ಎಸ್.ಆರ್.ಕಂಠಿ ಮತ್ತು ಅಬ್ದುಲ್ ನಜೀರ್‌ಸಾಬ್ ಅವರ ಜೀವನ ಚರಿತ್ರೆಗಳು ಕರ್ನಾಟಕದ ರಾಜಕೀಯ ಚರಿತ್ರೆ ಬರೆಯುವವರಿಗೆ ಅಪೂರ್ವ ಸಾಮಗ್ರಿಯನ್ನೊದಗಿಸುತ್ತವೆ. ಈ ಎರಡೂ ಜೀವನಚರಿತ್ರೆಗಳ ವೈಶಿಷ್ಟ್ಯವೆಂದರೆ ಶಾಸನಸಭೆಯ ಕಲಾಪಗಳನ್ನು ಬಳಸಿಕೊಂಡು ನಿಜ ಇತಿಹಾಸವನ್ನು ಕಟ್ಟಿಕೊಡುವುದಾಗಿದೆ. ನಮ್ಮ ನೆನಪಿನ ಬುತ್ತಿಯಲ್ಲಿ ಸದಾ ಉಳಿಯುವಂತೆ ಮಾಡಿದ ವ್ಯಕ್ತಿತ್ವವನ್ನು ಮನುಬಳಿಗಾರ್ ಈ ಜೀವನ ಚರಿತ್ರೆಯಲ್ಲಿ ಕಂಡಿರಿಸಿದ್ದಾರೆ.

❖

# ಮನು ಬಳಿಗಾರ್ ಸಂಪಾದಿತ ಕೃತಿಗಳು

ಡಾ. ಜಿ.ಎಂ. ಹೆಗಡೆ

ಮನು ಬಳಿಗಾರ್ ಅವರು ಸಾಹಿತ್ಯ ಪ್ರಪಂಚದ ಧೀಮಂತರನ್ನು ಸದಾ ಗೌರವಭಾವದಿಂದ ಕಾಣುತ್ತ ಬಂದಿದ್ದಾರೆ. ಅವರು ಸಂಪಾದಿಸಿದ ಕೃತಿಗಳು, ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಕ, ಸಾಮಾಜಿಕ, ಶೈಕ್ಷಣಿಕ ಬದುಕಿಗೆ ಮಹತ್ವದ ಕೊಡುಗೆ ನೀಡಿದ ವ್ಯಕ್ತಿಗಳೇ ಆಗಿರುವುದೊಂದು ವಿಶೇಷ. ಮನು ಬಳಿಗಾರ್ ಅವರು ಸಾರ್ವಜನಿಕ ಜೀವನದಲ್ಲಿ ಜನಪ್ರಿಯ ಸರಕಾರಿ ಅಧಿಕಾರಿಗಳಾಗಿ ನಾಗರಿಕ ಸೇವೆಯಲ್ಲಿ ನಿರತರಾಗಿರುವಂತೆಯೇ ಸಾಹಿತಿ, ಸಾಹಿತ್ಯ ಸೇವೆಯೂ ತಮ್ಮ ಕರ್ತವ್ಯದ ಭಾಗ ಎಂದು ತಿಳಿದ ಅಪರೂಪದ ಅಧಿಕಾರಿಯಾಗಿದ್ದಾರೆ. ಅವರು ಸಂಪಾದಿಸಿದ ಕೃತಿಗಳ ಸಮಾಲೋಕನವನ್ನು ಈಗ ಮಾಡಬಹುದಾಗಿದೆ.

**ಬಹುಮುಖಿ**

ಕನ್ನಡದ ಮಹಾಲೇಖಕರಾಗಿದ್ದ ಶಿವರಾಮ ಕಾರಂತರ ಪ್ರಥಮ ಪುಣ್ಯಸ್ಮರಣೆಯ ಸಂದರ್ಭದಲ್ಲಿ ಪ್ರಕಟವಾದ ಮನು ಬಳಿಗಾರ್ ಸಂಪಾದಿಸಿದ 'ಬಹುಮುಖಿ' ಇಪ್ಪತ್ತೈದು ಲೇಖನಗಳ ಕಾರಂತರ ಸ್ಮರಣ ಸಂಪುಟವಾಗಿದೆ. ಮನು ಬಳಿಗಾರ್‌ರವರು ಶಿವರಾಮ ಕಾರಂತರ ಮೇಲಿನ ಭಾವನಾತ್ಮಕ ಸಂಬಂಧದಿಂದ ಕಾರಂತ ಬದುಕು ಬರಹಗಳ ಸಂಪುಟವನ್ನು ನಾಡಿನ ಹಿರಿಯ ವಿಮರ್ಶಕ ಲೇಖಕರಿಂದ ಬರೆಯಿಸಿ ಪ್ರಕಟಿಸಿದ್ದಾರೆ. ಅವರು ಪ್ರಾಸ್ತಾವಿಕ ನುಡಿಯಲ್ಲಿ ಮನು ಬಳಿಗಾರ್ ಹೀಗೆ ಹೇಳುತ್ತಾರೆ.

"ಎರಡು ದಿನಗಳ ಕಾರಂತರೊಡನೆಯ ಒಡನಾಟ ನನ್ನ ಸುತ್ತ ಯಾವುದೊ ಒಂದು ಥರದ ಪ್ರಭಾವಳಿಯನ್ನೇ ನಿರ್ಮಿಸಿತ್ತು. ಇದು ಸುಮಾರು ಒಂದೆರಡು ತಿಂಗಳೂ ಹಾಗೆಯೇ ಉಳಿದುಕೊಂಡಿತ್ತು. ಅವರಾಡಿದ ನಿಷ್ಠುರ ಮಾತುಗಳು, ಹಾವಭಾವ, ಸ್ಪಷ್ಟ ಅಭಿಪ್ರಾಯಗಳು, ಅದಮ್ಯ ಸಾಮಾಜಿಕ ಕಳಕಳಿ, ಅನನ್ಯ ಮಾನವೀಯತೆಯ ನಡೆ ನನ್ನನ್ನು ಹುಚ್ಚನನ್ನಾಗಿಸಿದ್ದವು. ಅವರು ಹೋದ ನಾಲ್ಕು ದಿನಗಳಲ್ಲಿ ನನ್ನ ಹೆಸರಿಗೆ ಒಂದು ಪಾರ್ಸಲ್ ಬಂದಿತು. ಒಡೆದು ನೋಡಿದರೆ, ಒಂದು ಟಾರ್ಚ್ ಹಾಗೂ ಹಣ ಪಡೆದ ಬಗ್ಗೆ ಒಂದು ರಸೀದಿ ಜೊತೆಗೆ ಪುಟ್ಟದೊಂದು ವಿವರಣಾ ಪತ್ರ, ಮತ್ತೆ ಕಿರುಕಾಣಿಕೆಯಾಗಿ ಅವರ ಎರಡು ಕಾದಂಬರಿಗಳು. ತಮ್ಮದೆಂಬಂತೆಯೇ ಕಾಣುವ ನಮ್ಮದೊಂದು ಟಾರ್ಚ್ ಅನ್ನು, ನಮ್ಮ ಮನೆಯಲ್ಲಿ ಪ್ಯಾಕ್ ಮಾಡುವಾಗ ಕಣ್ತಪ್ಪಿ ತಾವು ತಮ್ಮ ಬ್ಯಾಗಿನಲ್ಲಿ ಹಾಕಿಕೊಂಡದ್ದನ್ನು ಮರಳಿ ಕಳಿಸಿದ್ದರು! ನಾನು ಕೇಳದೇ ಇದ್ದರು ಅವರು ಸ್ವೀಕರಿಸಿದ ಗೌರವಧನಕ್ಕೆ ರೆವೆನ್ಯೂ ಸ್ಟಾಂಪ್ ಹಚ್ಚಿ ಸ್ವೀಕೃತಿ ರಸೀದಿ ಕಳಿಸಿದ್ದರು !! ಇದು ಅವರು ಮೈಗೂಡಿಸಿಕೊಂಡ ಪ್ರಾಮಾಣಿಕತೆಯ ಒಂದು ಸಣ್ಣ ಉದಾಹರಣೆ ಮಾತ್ರ. ವಿಚಿತ್ರವೆಂದರೆ ಅವರು ತಿರುಗಿ ಕಳಿಸಿದ ಟಾರ್ಚ್ ನಮ್ಮದರಂತೆಯೇ ಇದ್ದರೂ ನಮ್ಮದಾಗಿರಲಿಲ್ಲ. "ಅದು ನಮ್ಮದಕ್ಕಿಂತಲೂ ತುಸು ಹೊಸದಾಗಿತ್ತು ಹಾಗೂ ಅದು ಅವರದಾಗಿತ್ತು. ಎರಡು ತದ್ರೂಪಿಗಳಲ್ಲಿ ಒಂದನ್ನು ನಮಗೆ ಕಳಿಸಿದ್ದಾರೆ". ಈಗಲೂ ಅದನ್ನು ನಮ್ಮಲ್ಲಿ ಕಾಯ್ದಿಟ್ಟುಕೊಂಡಿದ್ದೇವೆ.

ಇದೂ ಅಲ್ಲದೆ, 1990-91ರಲ್ಲಿ ನನ್ನ ತಮ್ಮ ವಿ.ಪಿ.ಬಳಿಗಾರ್ ಮಂಗಳೂರಿನಲ್ಲಿ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯಾಗಿದ್ದಾಗ, ಸಾಕ್ಷರತಾ ಆಂದೋಲನ ಇಡೀ ದೇಶದಲ್ಲೇ ಅತ್ಯುತ್ತಮವೆಂದು ನಿರ್ಣಯಿಸಲ್ಪಟ್ಟಿತು. ಆ ಆಂದೋಲನದ ಹೊತ್ತಿನಲ್ಲಿ ಡಾ.ಶಿವರಾಮ ಕಾರಂತರು 1954ರಷ್ಟು ಹಿಂದೆಯೇ ಬರೆದ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಮೂರು ಗ್ರಂಥಗಳನ್ನು ಪುನರ್ಮುದ್ರಿಸಿ, ಗೌರವ ಧನವೆಂದು ಲಕ್ಷಾಂತರ ರೂಪಾಯಿಗಳನ್ನು ಕೊಡಲು ತಯಾರಾದಾಗ, ಡಾ.ಕಾರಂತರು, "ನಾನು ಅವುಗಳನ್ನು ಬರೆದದ್ದೇ ಜನರಿಗೆ ಉಪಕಾರಿ ಆಗಲಿ ಎಂದು. ಹಣಕ್ಕಾಗಿ ಅಲ್ಲ. ಈಗ ನೀವು ಅದನ್ನು ಜನರಿಗೆ ತಲುಪಿಸಿ ಉದ್ದೇಶ ಸಫಲಗೊಳಿಸಿದ್ದೀರಿ ಅಷ್ಟೆ ಸಾಕು" ಎಂದು ಹೇಳಿ ಹಣವನ್ನು ತೆಗೆದುಕೊಳ್ಳಲು ನಿರಾಕರಿಸಿದರಂತೆ. ಇದು ಅವರ ಜೀವನದ ಸಂದೇಶದ ಇನ್ನೊಂದು ತುಣುಕು ಮಾತ್ರ. ಹೀಗೆ "ನಮ್ಮ ಕುಟುಂಬದ ಹಲವಾರು ಸದಸ್ಯರು ಡಾ.ಕಾರಂತರೊಡನೆ ಆತ್ಮೀಯ ಸಂಬಂಧ ಹೊಂದುವ ಭಾಗ್ಯ ದೊರೆತದ್ದು ನಮ್ಮ ಪುಣ್ಯ ವಿಶೇಷವೆಂದೇ ಹೇಳಬೇಕು".

ನನಗೆ ಕಾರಂತರು "ನೀವಿರಿಸಿಕೊಂಡ ಅಪಾರ ಪ್ರೀತಿ ಹಾಗೂ ವಿಶ್ವಾಸಗಳಿಗೆ" ಎಂದು ಬರೆದು ಸಹಿಮಾಡಿ ಆಗ ಕಳಿಸಿಕೊಟ್ಟ ಎರಡು ಕಾದಂಬರಿಗಳಲ್ಲಿ ಒಂದಾದ "ಜಗದೋದ್ಧಾರ – ನಾ" ವನ್ನು ಓದಿ ತಯಾರಿಸಿದ ಒಂದು ಲೇಖನವನ್ನು ಈ 'ಬಹುಮುಖಿ'ಯಲ್ಲಿ ಸೇರಿಸಿದ್ದೇನೆ ಎಂದು ಬಳಿಗಾರ್ ಹೇಳಿಕೊಂಡಿದ್ದಾರೆ.

‘ಬಹುಮುಖಿ'ಯ ಉಗಮವೂ ವಿಚಿತ್ರವಾಗಿಯೇ ಇದೆ. ಹೋದ ವರ್ಷ (1997ರ) ಡಿಸೆಂಬರ್‌ದಲ್ಲಿ ಕಾರಂತರು ಕಾಲವಶರಾದಾಗ ಮಿತ್ರ ಪತ್ರಕರ್ತ ಸರಜೂ ಕಾಟ್ಕರ್ ನನ್ನನ್ನು ಸಂಪರ್ಕಿಸಿದಾಗ ಭಾವಪರವಶನಾಗಿದ್ದ ನಾನು, ಕಾರಂತರೊಡನೆಯ ನನ್ನ ಹತ್ತು ವರ್ಷಗಳ ಸಂಪರ್ಕವನ್ನು ನೆನೆದು, ಬಹುದಿನಗಳಿಂದ ನನ್ನ ಮನಸ್ಸಿನಲ್ಲಿದ್ದ - ಅವರ ಬಗೆಗಿನ ಒಂದು ಮೌಲಿಕ ಗ್ರಂಥ ಹೊರತರುವ ವಿಚಾರವನ್ನೂ ತಿಳಿಸಿದೆ. ಆಗ ಆಡಿದ ಮಾತನ್ನು ನಡೆಸಿಕೊಡಲು ಈಗ ಈ ಗ್ರಂಥ “ಬಹುಮುಖಿ” ಹೊರಬರುತ್ತಿದೆ ಅವರ ಪುಣ್ಯತಿಥಿಯ ಪ್ರಥಮ ವಾರ್ಷಿಕೋತ್ಸವದಲ್ಲಿ” ಎಂದು ಪ್ರಸ್ತಾಪಿಸಿದ್ದಾರೆ.

ಶಿವರಾಮ ಕಾರಂತರು ನಾಲ್ಕುನೂರಾಹದಿನೇಳಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿ ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿ ಮಹೋನ್ನತ ಸಾಧನೆ ಮಾಡಿದ್ದಾರೆ. ಕಾರಂತ ಸಾಹಿತ್ಯದಲ್ಲಿ ಅವರ ಕಾದಂಬರಿಗಳು ಮುಖ್ಯವಾದ ಸ್ಥಾನ ಪಡೆಯುತ್ತವೆ. ಕಾರಂತರ ಕಾದಂಬರಿಗಳು ಕನ್ನಡ ಕಾದಂಬರಿಗಳ ಮೇಲೆ ಅನನ್ಯವಾದ ಪ್ರಭಾವ ಬೀರಿವೆ. ಗ್ರಂಥದ ಮೊದಲ ಲೇಖನದಲ್ಲಿ ಡಾ.ಯು.ಆರ್.ಅನಂತಮೂರ್ತಿ ಅವರು ಕಾರಂತರ ‘ಮರಳಿ ಮಣ್ಣಿಗೆ'ಯ ಲಕ್ಷ್ಮೀನಾರಾಯಣಪ್ಪನೇ ಸಂಸ್ಕಾರದ ನಾರಾಣಪ್ಪನಾಗಿದ್ದರೆ ಆಶ್ಚರ್ಯವಿಲ್ಲ (ಪು.14) ಎಂದು ಸೃಜನಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಆಸಕ್ತಿಯನ್ನು ಕಳೆದುಕೊಳ್ಳದ ಮೌಲ್ಯಮಾಪನ ಮತ್ತು ಆಳವಾದ ತಿಳಿವಳಿಕೆ ಸಂವೇದನೆಯ ಬೆಳವಣಿಗೆಯ ಗುರುತುಗಳಾಗಿದ್ದು, ಕಾರಂತರ ‘ಇದ್ದರೂ ಚಿಂತೆ'ಯಿಂದ ‘ಮೂಕಜ್ಜಿಯ ಕನಸುಗಳು' ಕಾದಂಬರಿವರೆಗೆ ಸಂವೇದನೆಯ ಬೆಳವಣಿಗೆಯನ್ನು ಕುರ್ತುಕೋಟಿ ಅವರು ತಮ್ಮ ಲೇಖನದಲ್ಲಿ ಗುರುತಿಸಿ ವಿಮರ್ಶಿಸಿದ್ದಾರೆ. ಆದರೆ ಕನ್ನಡದ ಇನ್ನೊಬ್ಬ ವಿಮರ್ಶಕರಾದ ಡಾ.ಗಿರಡ್ಡಿ ಗೋವಿಂದರಾಜರ ಚಿಂತನಧಾರೆಯೆ ಭಿನ್ನವಾದದ್ದು. ‘ಕಾರಂತರಿಗೆ ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿರುವ ಆಸಕ್ತಿಯೊಂದೇ ಮುಖ್ಯವಾಗಿದ್ದು ಅದರಲ್ಲಿ ಕಾರಂತರ ವೈವಿಧ್ಯಮಯ ಆಸಕ್ತಿಗಳ ಕೇಂದ್ರೀಕರಣವಿಲ್ಲ' (ಪು.50) ಎಂದು ಮೂಕಜ್ಜಿಯ ಕನಸುಗಳ ಬಗ್ಗೆ ಬರೆದ ಲೇಖನದಲ್ಲಿ ಗಿರಡ್ಡಿಯವರು ಹೇಳಿದ್ದಾರೆ. ಕಾರಂತರ ‘ಜಗದೋದ್ಧಾರನಾ' ಕಾದಂಬರಿಯ ಬಗ್ಗೆ ಮನು ಬಳಿಗಾರ್ ಬರೆದ ಲೇಖನದಲ್ಲಿ ಸಮಾಜದ ಆರೋಗ್ಯಪೂರ್ಣ ವಾತಾವರಣ ಕಲುಷಿತಗೊಳ್ಳದಂತೆ ತಡೆಯುವ ಪ್ರಯತ್ನವಿರುವುದನ್ನು ವ್ಯಕ್ತಪಡಿಸಿದ್ದಾರೆ. ಕಾರಂತರ ಕಾದಂಬರಿಗಳಲ್ಲಿ ಕನಸುಗಾರಿಕೆ' (ಎಂ.ಎಸ್. ಪಾಟೀಲ) ‘ಸಮಾಜಶಾಸ್ತ್ರೀಯ ಸಾಮಗ್ರಿ' (ಎಚ್.ವಿ.ನಾಗೇಶ) ಅನುಭವ ಸಾಮಗ್ರಿ (ಮರಾಠ) ಕಾರಂತರ ಕಾದಂಬರಿಗಳ ವಸ್ತು ಸಾಮಗ್ರಿಯ ಚರ್ಚೆಯಿದೆ. ಕಾರಂತರ ನಾಟಕಗಳಾದ ‘ಬಿತ್ತಿದ ಬೆಳೆ' (ಶಂಕರ ಮೊಕಾಶಿಪುಣೇಕರ) ‘ಗರ್ಭಗುಡಿ' (ಬಿ.ವಿ.ಗುಂಜೆಟ್ಟಿ) ಬರೆದ ಲೇಖನಗಳೂ ಇಲ್ಲಿವೆ. ಡಾ. ಹಾ.ಮಾ.ನಾಯಕರು ಕಾರಂತರ ‘ಗೃಹವಿಜ್ಞಾನ' ಕೃತಿಯನ್ನು ಸಮೀಕ್ಷಿಸಿದ್ದಾರೆ. ಕಾರಂತರ ಕೊನೆಯ ಸಂದರ್ಶನ (ಡಾ.ಜಿ.ಎಂ.ಹೆಗಡೆ) ಲೇಖನವೂ ಇಲ್ಲಿದೆ. ಕಾರಂತರ ಬಹುಮುಖ ವ್ಯಕ್ತಿತ್ವ ರಂಗಪ್ರಯೋಗ, ಸಂಶೋಧನೆ, ಸಾಧನೆಗಳನ್ನು ಸಮೀಕ್ಷಿಸುವ ಲೇಖನಗಳು ‘ಬಹುಮುಖಿ'ಯಲ್ಲಿವೆ. ಸಾಹಿತ್ಯ ವಿಮರ್ಶೆಯ ವಿಭಿನ್ನ ಮಾದರಿಗಳೂ ಕಾರಂತರ ವ್ಯಕ್ತಿತ್ವದ ಬಹುಮುಖೀ

ನೆಲೆಯನ್ನು ಪರಿಚಯಿಸುವ ಲೇಖನಗಳನ್ನೂ ಸಂಪಾದಿಸಿ ಮನು ಬಳಿಗಾರ್ ಅರ್ಥಪೂರ್ಣ ಕಾರ್ಯ ಮಾಡಿದ್ದಾರೆ.

## ಕಲ್ಪವೃಕ್ಷ

ಪ್ರಾತಃಸ್ಮರಣೀಯರಾದ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆಗಳ ಶತಮಾನೋತ್ಸವದ ಸ್ಮರಣ ಸಂಪುಟ. ಈ ಮಹಾದಾನಿಯ ತ್ಯಾಗ, ಸೇವಾ ಕೈಂಕರ್ಯಗಳನ್ನು ಹಾಗೆಯೇ ಉತ್ತಮ ಸಕಾಲಿಕ ಲೇಖನಗಳನ್ನೊಳಗೊಂಡ ಕೃತಿ ಇದು.

## ತುಳಸಿ

ತನ್ನ ಮಕ್ಕಳನ್ನು ಸಮಾಜಕ್ಕೆ ಕೊಡುಗೆ ಎಂಬಂತೆ ಬೆಳೆಸಿದ ಮಹಾತಾಯಿ ತುಳಸಾಬಾಯಿ ಪಾಟೀಲರ ಜೀವನ ನಿರೂಪಿಸಿ, ತಾಯ್ತನದ ಹಿರಿತನ ಸಾರುವ ಹಲವಾರು ಉಪಯುಕ್ತ ಲೇಖನಗಳನ್ನೊಳಗೊಂಡಿದೆ. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಂದ 2006ರಲ್ಲಿ ಬಿಡುಗಡೆಗೊಂಡ ಕೃತಿ ಇದು.

## ಶಾಂತಸಾಗರ

ಗುಲಬರ್ಗಾದ ಎಸ್.ಎಸ್.ಪಾಟೀಲ ಅವರು ಕರ್ನಾಟಕದ ವಾಣಿಜ್ಯ ಉದ್ಯಮಕ್ಷೇತ್ರದಲ್ಲಿ ಪ್ರಮುಖವಾದ ಹೆಸರು. ಶಾಂತಲಿಂಗಪ್ಪ ಶಿವಶರಣಪ್ಪ ಪಾಟೀಲ ಅವರು ಹೈದರಾಬಾದ್ ಕರ್ನಾಟಕದಲ್ಲಿ ಕೈಗಾರಿಕೋದ್ಯಮದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಹಲವು ವಾಣಿಜ್ಯ ಸಂಸ್ಥೆಗಳ ರೂವಾರಿಗಳಾದ ಎಸ್.ಎಸ್. ಪಾಟೀಲ ಅವರಿಗೆ ಅರವತ್ತು ತುಂಬಿದಾಗ ಮನು ಬಳಿಗಾರ್ ಸಂಪಾದಿಸಿದ ಅಭಿನಂದನ ಗ್ರಂಥವೇ 'ಶಾಂತಸಾಗರ' (2000). ಇದರಲ್ಲಿ ಅನೇಕ ಮಹನೀಯರ ಮಹತ್ವದ ಲೇಖನಗಳಿವೆ.

## ಗಾನಗಂಧರ್ವ

ಈ ಸಂಪಾದಿತ ಕೃತಿಯಲ್ಲಿ ಸುಪ್ರಸಿದ್ಧ ಹಿಂದೂಸ್ತಾನಿ ಗಾಯಕ ಪದ್ಮವಿಭೂಷಣ ಪಂಡಿತ್ ಕುಮಾರ ಗಂಧರ್ವ ಅವರ ಜೀವನ ಹಾಗೂ ಸಾಧನೆ ಬಗ್ಗೆ ನಾಡಿನ ಹಲವಾರು ಪ್ರಮುಖ ಲೇಖಕರ ಲೇಖನಗಳನ್ನು ಕಲೆ ಹಾಕಿ ಉತ್ತಮ ಆಕರಗ್ರಂಥವಾಗಿ ಇದನ್ನು ಹೊರತರಲಾಗಿದೆ. ಕುಮಾರ ಗಂಧರ್ವರ ಮೇಲೆ ಅಭ್ಯಸಿಸುವವರಿಗೆ ಇದೊಂದು ಮಾಹಿತಿಪೂರ್ಣ ಪುಸ್ತಕ.

## ತಲಸ್ಪರ್ಶಿ

ಡಾ.ಗಿರಡ್ಡಿ ಗೋವಿಂದರಾಜ ಅವರು ಕನ್ನಡದ ಹೆಸರಾಂತ ವಿಮರ್ಶಕರು, ಕಥೆಗಾರರು, ಡಾ.ಗಿರಡ್ಡಿ ಅವರಿಗೆ ಅರವತ್ತು ತುಂಬಿದಾಗ ಅವರಿಗೆ ಅರ್ಪಿತವಾದ ಗೌರವ ಗ್ರಂಥವೇ 'ತಲಸ್ಪರ್ಶಿ (2000) ಡಾ.ಜಿ.ಎಂ.ಹೆಗಡೆಯವರೊಂದಿಗೆ ಮನು ಬಳಿಗಾರ್ ಅವರು ಈ ಅಪರೂಪದ ಗ್ರಂಥದ ಯೋಜನೆಯನ್ನು

ರೂಪಿಸಿ ಗಿರಡ್ಡಿಯವರ ಸಮಗ್ರ ಸಾಹಿತ್ಯದ ವಿಮರ್ಶೆಯ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಅತ್ಯಂತ ಮಹತ್ವದ ಕಾರ್ಯವಾಗಿದೆ.

❖

# 'ಬಹುಮುಖಿ'- ಉಪಯುಕ್ತ ಸಂಪಾದನಾ ಕೃತಿ

ಡಾ. ರಾಘವೇಂದ್ರ ಪಿ ಕೆ

ಮನು ಬಳಿಗಾರ್ ಅವರು ವಿಶಿಷ್ಟ ವ್ಯಕ್ತಿತ್ವದ ಸಾಹಿತಿ. ದಕ್ಷ ಕೆ.ಎ.ಎಸ್.ಅಧಿಕಾರಿಯಾಗಿದ್ದ ಇವರು ಹುಟ್ಟಿದ್ದು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಶಿಗ್ಲಿ ಗ್ರಾಮದಲ್ಲಿ. ಇವರದು ಕೃಷಿ ಪ್ರಧಾನ ಕುಟುಂಬ. ತಂದೆ ಪರಮೇಶ್ವರಪ್ಪನವರ ಪ್ರಭಾವ ಇವರ ಜೀವನವನ್ನು ಶಿಸ್ತುಬದ್ಧವಾಗಿ ರೂಪಿಸಿದೆ. ಬಿಡುವಿಲ್ಲದ ಸರ್ಕಾರಿ ಸೇವೆಯ ನಡುವೆ ಇವರು ಸಾಹಿತ್ಯ ರಚಿಸಿದ್ದು ಎಂಥವರಿಗಾದರೂ ಸ್ಫೂರ್ತಿ ತುಂಬುತ್ತದೆ.

ಮನು ಬಳಿಗಾರ್ ಅವರ ಅಧಿಕಾರಾವಧಿಯ ಒಂದು ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಲೇಬೇಕು. ಬೆಳಗಾವಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಯ ಮರಾಠಿಗರ ಜೊತೆ ಬೆರೆತು ಅವರು ಕನ್ನಡ ಕಲಿಯುವಂತೆ ಉತ್ತೇಜಿಸಿದ್ದು ಗಮನಾರ್ಹವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಆಯುಕ್ತರಾಗಿದ್ದಾಗ ಇವರು ಕೈಗೊಂಡ ಕನ್ನಡದ ಕೆಲಸಗಳು ಇಂದಿಗೂ ಮನನೀಯವಾಗಿವೆ. ಇಂಥವರು ಶತಮಾನ ಪೂರೈಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಇಪ್ಪತ್ತೈದನೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ನಾಡಿನ ಸುಯೋಗವೇ ಸರಿ. ಇವರಿಂದ ಇನ್ನು ಕನ್ನಡದ ಕೆಲಸಗಳು ಆಗಬೇಕಿವೆ.

ತಮ್ಮ ಕೆಲಸದ ಒತ್ತಡದ ನಡುವೆಯೂ ಬಿಡುವು ಮಾಡಿಕೊಂಡು ಸಾಹಿತ್ಯ ರಚಿಸಿದ್ದು ಇವರ ಆಸಕ್ತಿಯನ್ನು ಸಾಬೀತುಪಡಿಸುತ್ತದೆ. ಸರ್ಕಾರಿ ಉದ್ಯೋಗದಲ್ಲಿರುವವರು ತಾವಾಯಿತು ತಮ್ಮ ಕೆಲಸವಾಯಿತು ಎಂದು ಅಷ್ಟಕ್ಕೆ ಸೀಮಿತವಾಗಿಬಿಡುತ್ತಾರೆ. ಆದರೆ ಬಳಿಗಾರರು ಮಾತ್ರ ಆ ವರ್ಗಕ್ಕೆ ಸೇರದೆ ಕನ್ನಡ ಸಾಹಿತ್ಯ ಸೇವೆಗೆ ಮುಂದಾದದ್ದು ಅವರ ಬಹುಮುಖ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದೆ. ಇವರು ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವುದನ್ನು ಗಮನಿಸಬಹುದು. 'ನನ್ನ ನಿನ್ನೊಳಗೆ', 'ಎದ್ದವರು ಬಿದ್ದವರು', 'ಸಾಕ್ಷರ ಗೀತೆಗಳು', 'ನಯಾಗರ ಮತ್ತು ಜಲಪಾತಗಳು', 'ಕವಿ ರವೀಂದ್ರರ ಮಿಂಚಿನ ಹನಿಗಳು' ಮೊದಲಾದವು ಇವರ ಕವನ ಸಂಕಲನಗಳು. 'ಅವ್ಯಕ್ತ', 'ಋಣ', 'ಬದುಕು ಮಾಯೆಯ ಮಾಟ', 'ದ ಡೆತ್ ಅಂಡ್ ಅದರ್ ಸ್ಟೋರೀಸ್' ಮೊದಲಾದವು ಕಥಾಸಂಕಲನಗಳು. 'ಏಕಾಂತ ಮತ್ತು ಏಕಾಗ್ರತೆ', 'ಬೆಳಕ ಬೆಡಗು', 'ಸಂಸ್ಕೃತಿ ವಿಹಾರ'- ಲಲಿತ ಪ್ರಬಂಧ ಸಂಕಲನಗಳು. 'ಮೈಲಾರ ಮಹಾದೇವಪ್ಪ' ಇವರ ಏಕೈಕ ನಾಟಕ, 'ಅತಿ ವಿರಳ ರಾಜಕಾರಣಿ ಎಸ್.ಆರ್.ಕಂಠಿ', 'ಪ್ರತಿಭಾವಂತ ಸಂಸದೀಯ ಪಟುಗಳು', 'ಅಬ್ದುಲ್ ನಜೀರ್ ಸಾಬ್',

‘ಅಪ್ಪ'- ಜೀವನ ಚರಿತ್ರೆಗಳು, ‘ಬಹುಮುಖಿ', ‘ಗಾನಗಂಧರ್ವ', ‘ಜ್ಞಾನಪ್ರಭಾ', ‘ಕಲ್ಪವೃಕ್ಷ', ‘ತಲಸ್ಪರ್ಶಿ', ‘ತುಳಸಿ' ಮೊದಲಾದವು ಇವರ ಸಂಪಾದನೆಗಳು. ಇವರು ರವೀಂದ್ರನಾಥ ಠಾಕೂರರ 207 ಕವನಗಳನ್ನು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ಹಲವಾರು ಕತೆಗಳು ಇಂಗ್ಲಿಷ್, ಒರಿಯಾ, ತೆಲುಗು ಮತ್ತು ಹಿಂದಿಗೆ ಭಾಷಾಂತರಗೊಂಡಿವೆ. ಇಷ್ಟೆಲ್ಲಾ ಸಾಧನೆಗಳನ್ನು ಮಾಡಿರುವ ಇವರು ಹಲವಾರು ಪ್ರಶಸ್ತಿ-ಪುರಸ್ಕಾರ, ಗೌರವಗಳಿಗೆ ಭಾಜನರಾಗಿದ್ದಾರೆ. ಇವರ ಸಂಘಟನಾ ಚಾತುರ್ಯಕ್ಕೆ 2001ರಲ್ಲಿ ನಡೆದ ಬೆಳಗಾವಿಯ ‘ವಿಶ್ವಕನ್ನಡ ಸಮ್ಮೇಳನ'ವೇ ಸಾಕ್ಷಿ.

1999ರಲ್ಲಿ ಪ್ರಕಟವಾದ ಇವರ ‘ಬಹುಮುಖಿ' ಸಂಪಾದನಾ ಕೃತಿ ಶಿವರಾಮ ಕಾರಂತರಿಗೆ ಸಲ್ಲಿರುವ ನುಡಿನಮನವಾಗಿದೆ. ಈ ಕೃತಿ ಬೆಳಗಾವಿ ಜಿಲ್ಲೆಯ ಶಿಗ್ಗಿಯಲ್ಲಿರುವ ಪರಮಶಂಕರ ಪ್ರಕಾಶನದಿಂದ ಅಚ್ಚಾಗಿದೆ. ಈ ಪ್ರಕಾಶನದ ಮೂಲಕ ಬಳಿಗಾರ್ ಕುಟುಂಬ ಸಾಹಿತ್ಯ ಸೇವೆಯನ್ನು ಮಾಡುತ್ತಾ ಬರುತ್ತಿದೆ. ಈ ಕೃತಿಯನ್ನು “ಬಳಿಗಾರ್ ಮನೆತನದ ಮೂಲ ಚೇತನ ಮಲ್ಲೇಶಪ್ಪ ಅಜ್ಜನ ದಿವ್ಯ ಸ್ಮೃತಿಗೆ” ಅರ್ಪಿಸಲಾಗಿದೆ. ಈ ಕೃತಿ ಮನು ಬಳಿಗಾರರಿಗೆ ಸಾಹಿತ್ಯದ ಬಗೆಗೆ ಇರುವ ವಿಶೇಷ ಆಸಕ್ತಿ ಮತ್ತು ಶ್ರದ್ಧೆಯ ಪ್ರತಿಬಿಂಬವಾಗಿದೆ.

ಈ ಹಿಂದೆ ಬಿಜಾಪುರದ (ಇಂದು ವಿಜಯಪುರ) ಮುದ್ದೇಬಿಹಾಳದಲ್ಲಿ ತಹಸೀಲ್ದಾರರಾಗಿದ್ದ ಮನು ಬಳಿಗಾರರು ಅಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರಾಗಿರುತ್ತಾರೆ. ಇವರ ಬಹುದಿನದ ಆಸೆಯಾದ ಡಾ.ಶಿವರಾಮ ಕಾರಂತರನ್ನು ಉದ್ಘಾಟನೆಗೆ ಕರೆಯಲು ಬಯಸಿ, ಅವರಿಗೆ ಕಾಗದವೊಂದನ್ನು ಬರೆಯುತ್ತಾರೆ. ಎಂಟು ದಿನದಲ್ಲಿ ಅದಕ್ಕೆ ಉತ್ತರ ಬರೆಯುವ ಕಾರಂತರು ಹೊರದೇಶದ ಪ್ರಯಾಣದ ಕಾರಣ ನೀಡಿ ತಮ್ಮ ಅಲಭ್ಯತೆಯನ್ನು ಸ್ಪಷ್ಟವಾಗಿ ತಿಳಿಸುತ್ತಾರೆ. ಆಗ ಬಳಿಗಾರರು ಕಾರಂತರ ಬರವಿಗಾಗಿ ಸಮ್ಮೇಳನವನ್ನೇ ಮುಂದೂಡುತ್ತಾರೆ. ಬಳಿಗಾರರ ಪ್ರೀತಿಯ ಒತ್ತಡಕ್ಕೆ ಮಣಿಯುವ ಕಾರಂತರು 1990 ಜನವರಿ 5 ಮತ್ತು 6ರಂದು ಸಮ್ಮೇಳನಕ್ಕೆ ಬರುವುದಾಗಿ ಒಪ್ಪಿಕೊಳ್ಳುತ್ತಾರೆ.

ಸಮ್ಮೇಳನಕ್ಕಾಗಿ ಶಿವರಾಮ ಕಾರಂತರು ಮುದ್ದೇಬಿಹಾಳಕ್ಕೆ ಬಂದಾಗ ಅವರ ಪ್ರಭಾವವಲಯ ತನ್ನ ಸುತ್ತ ಹೇಗೆ ಸೃಷ್ಟಿಯಾಯಿತು ಎಂಬುದರ ಬಗೆಗೆ ಮನು ಬಳಿಗಾರರು ನಮ್ಮ ಗಮನ ಸೆಳೆಯುತ್ತಾರೆ. “ನಿಜವಾಗಿಯೂ ನಮ್ಮ ತಂದೆ ಅಥವಾ ಅಜ್ಜ ಬಂದರೆ ಹೇಗಿರುತ್ತದೆಯೊ ಅಂಥದೇ ಆತ್ಮೀಯ ವಾತಾವರಣ ಸ್ಥಾಪಿತವಾಗಿ ಬಿಟ್ಟಿತು” ಎಂದೂ “ಇದು ಸುಮಾರು ಒಂದೆರಡು ತಿಂಗಳೂ ಹಾಗೆಯೇ ಉಳಿದುಕೊಂಡಿತ್ತು. ಅವರಾಡಿದ ನಿಷ್ಠುರ ಮಾತುಗಳು, ಹಾವಭಾವ, ಸ್ಪಷ್ಟ ಅಭಿಪ್ರಾಯಗಳು, ಅದಮ್ಯ ಸಾಮಾಜಿಕ ಕಳಕಳಿ, ಅನನ್ಯ ಮಾನವೀಯತೆಯ ನಡೆ ನನ್ನನ್ನು ಹುಚ್ಚನನ್ನಾಗಿಸಿದ್ದವು” ಎಂದು ಪ್ರಸ್ತಾವನೆಯಲ್ಲಿ ಬರೆಯಲಾಗಿದೆ. ಕಾರಂತರ ಹಾಸ್ಯಪ್ರಜ್ಞೆ, ನೆನಪಿನ ಶಕ್ತಿ, ಸಮಯಪ್ರಜ್ಞೆಯನ್ನು ಕೊಂಡಾಡುವ ಗುಣಗ್ರಾಹಿ ವ್ಯಕ್ತಿತ್ವ ಬಳಿಗಾರರದು. ಈ ಮೂಲಕ ಬಳಿಗಾರರ ಮೇಲೆ ಇರುವ ಕಾರಂತರ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದು.

ಕಾರಂತರು ಕಾಲವಶರಾದ (1997 ಡಿಸೆಂಬರ್) ಸಂದರ್ಭದಲ್ಲಿ ಬಳಿಗಾರರು ತಮ್ಮನ್ನು ಭೇಟಿ ಮಾಡಿದ ಸರಜೂ ಕಾಟ್ಕರ್ ಅವರಿಗೆ ಕಾರಂತರ ಬಗೆಗೆ ಒಂದು ಮೌಲಿಕ ಗ್ರಂಥ ಹೊರತರುವ ವಿಚಾರವನ್ನು ತಿಳಿಸುತ್ತಾರೆ. ಆಗ ಆಡಿದ ಮಾತನ್ನು ನಡೆಸಿಕೊಡಲು ಕಾರಂತರ ಪ್ರಥಮ ವರ್ಷದ ಪುಣ್ಯತಿಥಿಯ ಸಂದರ್ಭದಲ್ಲಿ 'ಬಹುಮುಖಿ' ಕೃತಿಯನ್ನು ಹೊರತರಲಾಗುತ್ತದೆ. "ಈ ಗ್ರಂಥ ಕಣ್ಮರೆಯಾದ ಕಾರಂತರ ಬಹುಮುಖಿ ವ್ಯಕ್ತಿತ್ವಕ್ಕೆ ಒಂದು ಶ್ರದ್ಧಾಂಜಲಿಯಂತಿದ್ದರೂ ಅವರ ಸಾಹಿತ್ಯಾಭ್ಯಾಸಿಗಳಿಗೆ ಒಂದು ಅಪೂರ್ವ ಆಕರ ಗ್ರಂಥವಾಗುವುದೆಂಬುದರಲ್ಲಿ ಸಂಶಯವೇ ಇಲ್ಲ" (ಪ್ರಸ್ತಾವನೆ) ಎಂದು ಬಳಿಗಾರರು ಭಾವಿಸುತ್ತಾರೆ.

'ಬಹುಮುಖಿ' ಶೀರ್ಷಿಕೆಯಂತೆ ಶಿವರಾಮ ಕಾರಂತರ ಬಹುಮುಖೀಯ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. 'ಕರಿಯನ್ನು ಕನ್ನಡಿಯಲ್ಲಿ ತೋರಿಸಿದಂತೆ' ಎಂಬ ಗಾದೆ ಈ ಪುಸ್ತಕಕ್ಕೆ ಸೂಕ್ತವಾಗಿ ಅನ್ವಯಿಸುತ್ತದೆ. ಕಾರಂತರ ವೈವಿಧ್ಯಮಯ ಆಸಕ್ತಿಯನ್ನು ಕುರಿತು ಬರೆದ ನಾಡಿನ 25 ಪ್ರಸಿದ್ಧ ಲೇಖಕರ ಲೇಖನವನ್ನು ಈ ಹೊತ್ತಗೆಯಲ್ಲಿ ಸಂಗ್ರಹಿಸಲಾಗಿದೆ. ಒಂದೊಂದು ಲೇಖನವು ಕಾರಂತರು ಮತ್ತು ಅವರ ಸಾಹಿತ್ಯದ ಬಗೆಗೆ ಒಳನೋಟಗಳನ್ನು ನೀಡುತ್ತದೆ. ಡಾ.ಯು.ಆರ್.ಅನಂತಮೂರ್ತಿ ಅವರ 'ಕಾರಂತ: ಒಂದು ಸೃಜನಾತ್ಮಕ ಪ್ರತಿಕ್ರಿಯೆ' ಎಂಬುದು ಈ ಕೃತಿಯ ಮೊದಲ ಲೇಖನ. ಇದು ಈ ಪುಸ್ತಕಕ್ಕೆ ಕಳಶಪ್ರಾಯವಾದದ್ದು. ಈ ಲೇಖನದಲ್ಲಿ ಅನಂತಮೂರ್ತಿ ಅವರು ಕಾರಂತರು ತಮ್ಮ ಮೇಲೆ ಬೀರಿದ ಪ್ರಭಾವವನ್ನು ತಮ್ಮ ಕೃತಿಗಳ ಮೂಲಕ ತಿಳಿಸುತ್ತಾರೆ. "ನಾನು ಬರೆಯಲು ಪ್ರಾರಂಭಿಸಿದ ದಿನಗಳಲ್ಲಿ ಕಾರಂತರ ಕೃತಿಗಳು ನನಗೆ ದೀಪವೂ ಆಗಿದ್ದವು. ಕನ್ನಡಿಯೂ ಆಗಿದ್ದುವು. ಅದರೆ ಬೆಳಕಿನಲ್ಲಿ ನನಗೆ ಬೇಕಾದ್ದನ್ನು ನಾನು ಹುಡುಕಿಕೊಂಡೆ; ಅದರ ಕನ್ನಡಿಯಲ್ಲಿ ಕಾಣಬೇಕೆನ್ನಿಸಿದಂತೆ ಕಾಣಲು ಪ್ರಯತ್ನಿಸಿದೆ" (ಪು. 4) ಎಂದು ವಿವರಿಸುತ್ತಾರೆ. 'ಸಂಸ್ಕಾರ'ದ ಹಿಂದೆ ಕಾರಂತರ ಪ್ರಭಾವ ಅಜ್ಞಾತವಾಗಿ, ಬೇರೆ ದಿಕ್ಕಿನಲ್ಲಿ ತಾನು ನಡೆಯುವುದಕ್ಕೆ ಪ್ರೇರಕವಾಗಿಯಾದರೂ ಕೆಲಸ ಮಾಡಿರುವುದನ್ನು ಕಂಡುಕೊಳ್ಳಲಾಗಿದೆ.

'ಕಾರಂತರ ಕಾದಂಬರಿಗಳಲ್ಲಿ ಸಂವೇದನೆಯ ಬೆಳವಣಿಗೆ' ಎನ್ನುವ ಕೀರ್ತಿನಾಥ ಕುರ್ತಕೋಟಿ ಅವರ ಲೇಖನ ಕಾರಂತರ 'ಇದ್ದರೂ ಚಿಂತೆ', 'ಸ್ವಪ್ನದ ಹೊಳೆ", 'ಒಂಟಿದನಿ', 'ಇನ್ನೊಂದೇ ದಾರಿ' ಮತ್ತು 'ಮೂಕಜ್ಜಿಯ ಕನಸುಗಳು' ಈ ಐದು ಕಾದಂಬರಿಗಳನ್ನು ಚರ್ಚಿಸಿ ಅವರ ಸಾಹಿತ್ಯದಲ್ಲಿ ಸಂವೇದನೆಯ ಬೆಳವಣಿಗೆ ಯಾವ ರೀತಿ ನಡೆದಿದೆ ಎಂಬುದನ್ನು ತೋರಿಸಿಕೊಡುತ್ತದೆ. "ಈ ಸಂವೇದನೆಯಲ್ಲಿ ಹೊಸ ಅಂಶವಾವುದೂ ಬಂದು ಸೇರಿಕೊಂಡಿಲ್ಲ.

ಕಾಲಮಾನಕ್ಕೆ ತಕ್ಕಂತೆ ಈ ಸಂವೇದನೆ ಪರಿಪಾಕಗೊಂಡಿದೆ. ಈ ಪರಿಪಾಕಕ್ಕೆ ಅರ್ಥ ಬರುವುದು ಅವರು ಸೃಷ್ಟಿಸಿದ ಹಳೆಯ ಸಾಹಿತ್ಯದ ಹಿನ್ನೆಲೆಯಲ್ಲಿ ಮಾತ್ರ ಎಂಬುದನ್ನು ಮರೆಯುವಂತಿಲ್ಲ. ಜೀವನದ ಬಗ್ಗೆ ಅವರು ತಳೆದ ನಿಲುವಿನಲ್ಲಿ ವಿಶೇಷವಾದ ಮಾರ್ಪಾಟು ಕಂಡುಬರದಿದ್ದರೂ ಅದರ ಅಭಿವ್ಯಕ್ತಿಯ ನೀತಿಯಲ್ಲಿ ಸಾಕಷ್ಟು ಬೆಳವಣಿಗೆ ಕಂಡುಬರುತ್ತದೆ" (ಪು. 38) ಎಂದು ಕುರ್ತಕೋಟಿ ಅವರು ಭಾವಿಸುತ್ತಾರೆ.

ಡಾ.ಹಾ.ಮಾ.ನಾಯಕರ 'ಕಾರಂತರ ಗೃಹವಿಜ್ಞಾನ' ಲೇಖನ ಬಹುಬೆಲೆಯುಳ್ಳದ್ದಾಗಿದೆ. ಅದು ಕಾರಂತರು ಆರು, ಏಳು ಮತ್ತು ಎಂಟನೆಯ ತರಗತಿಯ ವಿದ್ಯಾರ್ಥಿನಿಯರಿಗಾಗಿ ರಚಿಸಿದ 'ಗೃಹವಿಜ್ಞಾನ'ದ ಮೂರು ಭಾಗಗಳನ್ನು ಕುರಿತಿದೆ. ಶಿಕ್ಷಣ ಪರಿಸರಕ್ಕೆ ಅನುಗುಣವಾಗಿರಬೇಕು, ಕ್ರಿಯಾತ್ಮಕವಾಗಿರಬೇಕು ಎಂದು ಪ್ರತಿಪಾದಿಸಿದ ಕಾರಂತರು ಈ ಪುಸ್ತಕ ರಚಿಸಿದ್ದು ಸ್ತುತ್ಯಾರ್ಹ ಎಂದು ಭಾವಿಸಲಾಗಿದೆ. ಗಿರಡ್ಡಿ ಗೋವಿಂದರಾಜರು ತಮ್ಮ ಒಂದು ಲೇಖನದಲ್ಲಿ ಕಾರಂತರ 'ಮೂಕಜ್ಜಿಯ ಕನಸುಗಳು' ಕಾದಂಬರಿಯನ್ನು ಒರೆಗೆ ಹಚ್ಚುತ್ತಾರೆ. ಸಾಂಸ್ಕೃತಿಕ ಮಾನವಶಾಸ್ತ್ರದ ದೃಷ್ಟಿಯಿಂದ ಭೂತವನ್ನು ಪುನರ್‌ನಿರ್ಮಿಸುವ ಕಾದಂಬರಿಯ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ. ಮೂಕಜ್ಜಿಯ ವ್ಯಕ್ತಿತ್ವದ ಧೀರೋದಾತ್ತ ಮುಖವನ್ನು ಈ ಲೇಖನ ಕಂಡುಕೊಳ್ಳುತ್ತದೆ.

ಮನು ಬಳಿಗಾರರು ಶಿವರಾಮ ಕಾರಂತರೇ "ನೀವಿರಿಸಿಕೊಂಡ ಅಪಾರ ಪ್ರೀತಿ ಹಾಗೂ ವಿಶ್ವಾಸಗಳಿಗೆ" ಎಂದು ಬರೆದು ಸಹಿಮಾಡಿ ಕಳುಹಿಸಿದ 'ಜಗದೋದ್ಧಾರ-ನಾ' ಕಾದಂಬರಿಯನ್ನು ವಿಶ್ಲೇಷಣೆಗೆ ಒಳಗುಮಾಡಿ ಈ ಸಂಪಾದನಾ ಕೃತಿಯಲ್ಲಿ ಸೇರಿಸಿದ್ದಾರೆ. ಈ ಲೇಖನ ಕಾರಂತರನ್ನು ಪರಿಚಯಿಸಿ ಆ ಕಾದಂಬರಿಯ ಬಹುಮುಖೀಯ ಅರಿವನ್ನು ಉಂಟುಮಾಡುತ್ತದೆ. 'ದೇವದೂತರು' ಎಂಬ ವ್ಯಂಗ್ಯ ಕಾದಂಬರಿಯ ನಂತರ ಅದೇ ರೀತಿ ವ್ಯಂಗ್ಯ ತಂತ್ರವನ್ನೇ ಆಧಾರವಾಗಿಟ್ಟುಕೊಂಡು ಬಂದ ಕಾದಂಬರಿ 'ಜಗದೋದ್ಧಾರ-ನಾ' ಎಂದು ಗುರುತಿಸಲಾಗಿದೆ. ನವ ದೇವತಾ ಪುರುಷನೊಬ್ಬನ ಬಂಡವಾಳವನ್ನು ಬಯಲು ಮಾಡುವ ಆಶಯವನ್ನು ಇರಿಸಿಕೊಂಡಿರುವ ಈ ಕಾದಂಬರಿ ಒಟ್ಟು 24 ಅಧ್ಯಾಯಗಳನ್ನು ಒಳಗೊಂಡಿದೆ. "ಎಲ್ಲರ ವ್ಯಂಗ್ಯದಂತೆ ಕಾರಂತರ ವ್ಯಂಗ್ಯವಲ್ಲ. ಅದು ನಮ್ಮನ್ನು ತಿವಿಯುತ್ತ, ಎಚ್ಚರಿಸುತ್ತ ನಮ್ಮಲ್ಲಿಯ ವೈಚಾರಿಕತೆ ಕೆರಳಿಸುತ್ತ ನಮ್ಮನ್ನು ಚಿಂತನೆ ಮಾಡಲು ಪ್ರೇರೇಪಿಸುತ್ತದೆ" (ಪು.67) ಎಂದು ಬಳಿಗಾರರು ತಮ್ಮ ಲೇಖನದಲ್ಲಿ ಭಾವಿಸುತ್ತಾರೆ. ಜೀವನೋತ್ಸಾಹ ಮತ್ತು ಲವಲವಿಕೆಗಳನ್ನು ಕಾರಂತರ ಜೀವನ ಮತ್ತು ಲೇಖನ ಎರಡರಲ್ಲೂ ಇರುವುದನ್ನು ಇಲ್ಲಿ ಕಂಡುಕೊಳ್ಳಲಾಗಿದೆ.

ಡಾ.ಎಂ.ಎಸ್.ಪಾಟೀಲರ 'ಕಾರಂತರ ಕನಸುಗಳು' ಲೇಖನ ಕಾರಂತರ ಲೋಕವ್ಯಕ್ತಿತ್ವ ಮತ್ತು ಕಲಾವ್ಯಕ್ತಿತ್ವಗಳನ್ನು ಶೋಧಿಸುತ್ತದೆ. ಕಾರಂತರ ಕಾದಂಬರಿಗಳಲ್ಲಿ ಬಹುಪಾತ್ರಗಳು ಮರಳಿ ತನ್ನ ಸ್ಥಾನಕ್ಕೆ ಬಂದು ಸೇರಿಕೊಳ್ಳುವುದನ್ನು ಕಲಾಮಾಧ್ಯಮದ ವೈಶಿಷ್ಟ್ಯವೆಂದು ಪರಿಗಣಿಸಿದೆ. ಡಾ. ಶಂಕರ ಮೊಕಾಶಿ ಪುಣೇಕರ ಅವರು ಕಾರಂತರ ಶೌರ್ಯ ಪ್ರಧಾನ ನಾಟಕ 'ಬಿತ್ತಿದ ಬೆಳೆ' ಹಿನ್ನೆಲೆಯಲ್ಲಿ ಕಾರಂತರ ಬಹುಮುಖ ಪ್ರತಿಭೆಯನ್ನು ಕಾಣಿಸುತ್ತಾರೆ. ಈ ನಾಟಕದ ಅಲಭ್ಯತೆಯನ್ನು ತಿಳಿಸಿ, ಇದರ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಪ್ರೊ. ಬಿ.ವಿ.ಗುಂಜೆಟ್ಟಿ ಅವರು ಕಾರಂತರ 'ಗರ್ಭಗುಡಿ' ನಾಟಕವನ್ನು ಪರಿಚಯಿಸಿ "ಈ ರೀತಿಯಾಗಿ ಗರ್ಭಗುಡಿಯನ್ನು ಭೇದಿಸುವಂತೆ ಜೀವನದಲ್ಲಿಯ ಧರ್ಮದ ರಹಸ್ಯಭೇದವನ್ನು ಮಾಡುವ ವಿಸ್ಫೋಟಕಕಾರಿ ವಿಚಾರಿಗಳಾಗಿದ್ದಾರೆ ಕಾರಂತರು" (ಪು. 67) ಎನ್ನುವ ನಿರ್ಣಯಕ್ಕೆ ಬರುತ್ತಾರೆ.

ಡಾ.ಮೃತ್ಯುಂಜಯ ಹೊರಕೇರಿ ಅವರು ತಮ್ಮ 'ಕಾರಂತರ ಜಾನಪದ ಗೀತಗಳು' ಲೇಖನದಲ್ಲಿ ಜನಪದ ಗೀತೆಗಳನ್ನು ಕುರಿತು ಡಾ.ಕೆ.ಶಿವರಾಮ ಕಾರಂತರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಜೊತೆಗೆ "ಯಕ್ಷಗಾನದೊಂದಿಗೆ ಜನಪದ ಗೀತೆಗಳನ್ನು ಅಧ್ಯಯನಗೈದು ಜಾನಪದ ಕ್ಷೇತ್ರಕ್ಕೆ ಹೊಸ ಆಯಾಮವನ್ನು ನೀಡಿದ ಕಾರಂತರು ಜಾನಪದ ದಿಗ್ಗಜರಲ್ಲಿ ಒಬ್ಬರಾಗಿದ್ದಾರೆ" (ಪು. 99) ಎಂದು ಅಭಿಪ್ರಾಯಪಡುತ್ತಾರೆ.

ಸ.ರಾ.ಸುಳಕೂಡೆ ತಮ್ಮ ಒಂದು ಲೇಖನದಲ್ಲಿ ಕಾರಂತರು ವಯಸ್ಕರ ಶಿಕ್ಷಣಕ್ಕಾಗಿ ಬರೆದ ನಾಲ್ಕು ಕೃತಿಗಳನ್ನು ಪರಿಚಯಿಸುತ್ತಾರೆ. ಈ ನಾಲ್ಕು ಕೃತಿಗಳು ಇಂದಿನ ರಾಷ್ಟ್ರೀಯ ಸಾಕ್ಷರತಾ ಆಯೋಗದವರು ನಿಗದಿಗೊಳಿಸಿದ ಸಾಹಿತ್ಯ ರಚನೆಯ ಸೂತ್ರಗಳನ್ನು ಪೂರ್ಣ ಒಳಗೊಂಡಿರುವುದು ಕಾರಂತರ ದೂರದೃಷ್ಟಿಯ ಪ್ರತಿಬಿಂಬ ಎಂದು ಭಾವಿಸಲಾಗಿದೆ. ಪಡುಕೋಡೆ ರಮಾನಂದರ ಪುತ್ರ ಪ್ರಭಾಶಂಕರರು ಕಾರಂತರ ರಂಗಪ್ರಯೋಗಗಳನ್ನು ಕುರಿತು ಚರ್ಚಿಸುತ್ತಾರೆ. ಕಾರಂತರ ಒಡನಾಟವನ್ನು ಸ್ಮರಿಸುತ್ತಾ ಅವರ 'ಗೀತನಾಟಕ' ಮತ್ತು 'ನೆರಳು ನಾಟಕ'ಗಳ ನೂತನ ಪ್ರಯೋಗಗಳು, ಕವಿಸಮಯವೊಂದನ್ನು ಆಧರಿಸಿ ನಿರ್ಮಿತವಾದ 'ಮೇಘ ಮಯೂರ' ನೃತ್ಯ, ಸಂಗೀತಮಯ ನಾಟಕಗಳು ಜನಪ್ರಿಯವಾಗಿದ್ದ ಕಾಲದಲ್ಲಿ ಸಂಪೂರ್ಣ ಸಂಗೀತ ರಹಿತ ನಾಟಕವೊಂದರ ಪ್ರಯೋಗ ಮೊದಲಾದವು ಕಾರಂತರ ಸಾಧನೆಗಳು ಎಂದು ಇಲ್ಲಿ ಗುರುತಿಸಲಾಗಿದೆ. ಡಾ.ಸಂಗಮೇಶ ಸವದತ್ತಿಮಠ ಕಾರಂತರ ಸಂಶೋಧನಾಸಕ್ತಿಯನ್ನು ಅವರ ಕೃತಿಗಳ ಮೂಲಕ ಎತ್ತಿ ಹಿಡಿಯುತ್ತಾರೆ. "ಅವರ ವೈಚಾರಿಕ ಎಲ್ಲ ಬರಹಗಳನ್ನು ಸಂಶೋಧನ ದೃಷ್ಟಿಯಲ್ಲಿ ಮರುಹೊಂದಿಸಿ ಸಂಪಾದಿಸಿ ಬರೆದರೆ ನಿಜಕ್ಕೂ ಕಾರಂತರ ಸಂಶೋಧನೆಯ ವಿರಾಟ್ ಸ್ವರೂಪದ ಕಲ್ಪನೆ ಉಂಟಾದೀತು" (ಪು. 118) ಎಂಬುದು ಅವರ ಸ್ಪಷ್ಟ ಅಭಿಪ್ರಾಯ.

ಎಚ್.ವಿ.ನಾಗೇಶ್ ಅವರು ಕಾರಂತರ ಕಾದಂಬರಿಗಳಲ್ಲಿ ಸಮಾಜಶಾಸ್ತ್ರೀಯ ಸಾಮಗ್ರಿಯನ್ನು ಶೋಧಿಸುವ ಪ್ರಯತ್ನವನ್ನು ತಮ್ಮ ಲೇಖನವೊಂದರಲ್ಲಿ ಮಾಡಿದ್ದಾರೆ. ಕಾರಂತ ಸತ್ಯಶೋಧನೆ ವಿಪುಲವಾದ ಸಮಾಜಶಾಸ್ತ್ರೀಯ ಒಳನೋಟಗಳನ್ನು ಹೊಂದಿವೆ ಎಂದು ಗಮನಿಸುತ್ತಾ ಅವರ ಕಾದಂಬರಿಗಳಿಂದ ಒಂದೆರಡು ಆಯ್ದ ಭಾಗಗಳನ್ನು ಸಂಗ್ರಹಿಸಿ 'ವಾಚಿಕೆ'ಯೊಂದನ್ನು ಸಿದ್ಧಪಡಿಬಹುದು ಎಂದು ಅಭಿಪ್ರಾಯಪಡುತ್ತಾರೆ. ಸಾಹಿತ್ಯ ಮತ್ತು ಸಮಾಜ ವಿಜ್ಞಾನದ ವಿದ್ಯಾರ್ಥಿಗಳಿಬ್ಬರಿಗೂ ಇದರಿಂದ ಲಾಭಗಳಿವೆ. "ಕಾರಂತರ ಬೆಟ್ಟದ ಜೀವ, ಚೋಮನದುಡಿ, ಕುಡಿಯರ ಕೂಸು, ಮರಳಿ ಮಣ್ಣಿಗೆ, ಮೈಮನಗಳ ಸುಳಿಯಲ್ಲಿ, ಮೂಕಜ್ಜಿಯ ಕನಸುಗಳು ಇತ್ಯಾದಿ ಕೃತಿಗಳು ಸಮಾಜಶಾಸ್ತ್ರೀಯ ತಲೆಹೊರೆಯನ್ನು ಹೊತ್ತಿದ್ದರೂ ಕಲಾಕೃತಿಗಳಾಗಿ ಚೇತೋಹಾರಿಯಾಗಿವೆ" (ಪು. 122) ಎಂದು ಗಮನಿಸಲಾಗಿದೆ. ಕಾರಂತರ ಕೃತಿಗಳಲ್ಲಿ ಅನುಭವ ಸಾಮಗ್ರಿ ಪರಿಪಾಕಗೊಂಡ ಬಗೆಯನ್ನು ಡಾ.ರಾಮಕೃಷ್ಣ ಮರಾಠೆ ಅವರು ಸಾಧರಪೂರ್ವಕವಾಗಿ ಸಾಬೀತುಪಡಿಸುತ್ತಾರೆ. "ತಮ್ಮ ಬದುಕನ್ನೇ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡು, ನಿರಂತರ ಪ್ರಯೋಗನಿರತರಾಗಿದ್ದರು. ಅಲ್ಲಿಯ ಫಲಿತಗಳನ್ನೆಲ್ಲ ಕೃತಿಗಳ ಮೂಲಕ ಲೋಕಕ್ಕೆ ನೀಡಿದರು; ಹಾಗೆಂದೇ

ಅವರ ಅಭಿವ್ಯಕ್ತಿಗೆಲ್ಲ ಅನುಭವವೇ ಪ್ರಮಾಣವಾಯಿತು. ಅನುಭವವೇ ಉಗ್ರಾಣವಾಯಿತು" (ಪು. 125–126) ಎಂಬ ಸೂತ್ರಪಾಯ ಮಾತುಗಳನ್ನು ಕಾರಂತರ ಕೃತಿಯೊಟ್ಟಿಗೆ ತಾಳೆ ನೋಡುವ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಈ ಲೇಖನ ಕಾರಂತರ ಪರಿಸರ ಪ್ರಜ್ಞೆ, ರಾಜಕೀಯ ಪ್ರಜ್ಞೆ, ಕಾಯಕ ಪ್ರಜ್ಞೆ ಮೊದಲಾದವನ್ನು ಮನದಟ್ಟು ಮಾಡಿಕೊಡುತ್ತದೆ.

ಬಿ.ಮಾಲಿನಿ ಮಲ್ಯ ಅವರ 'ಕಾರಂತರ ಕೊನೆಯ ದಿನಗಳು' ಲೇಖನ ಹೃದಯಸ್ಪರ್ಶಿಯಾಗಿದೆ. ಈ ಲೇಖನ ಕಾರಂತರ ಕೊನೆಯ ದಿನಗಳ ಬಗೆಗೆ ಪ್ರತ್ಯಕ್ಷ ದರ್ಶನವನ್ನು ಒದಗಿಸುತ್ತದೆ. ಕಾರಂತರನ್ನು ಅವರ ಇಳಿ ವಯಸ್ಸಿನಲ್ಲಿ ನೋಡಿಕೊಂಡ ಬಿ.ಮಾಲಿನಿ ಮಲ್ಯ ಅವರು ಕಾರಂತರ ಸಾವಿನ ಕ್ಷಣಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ. ಈ ಲೇಖನ ಕಾರಂತರು ಸಾವನ್ನು ಹೇಗೆ ವ್ಯಾಖ್ಯಾನಿಸಿಕೊಂಡರು ಎಂದು ತಿಳಿಸುತ್ತಾ ಅವರ ಕೊನೆಯ ದಿನಗಳಲ್ಲಿ ಅವರಲ್ಲಿದ್ದ ಜೀವನ ಪ್ರೀತಿ, ಕ್ರಿಯಾಶೀಲತೆ, ಅದಮ್ಯ ಇಚ್ಛಾಶಕ್ತಿ ಮೊದಲಾದವುಗಳನ್ನು ಮನವರಿಕೆ ಮಾಡಿಕೊಡುತ್ತದೆ. ಕಾರಂತರು ಅಳಿದ ಮೇಲೆಯೂ ಉಳಿಯುವ ವ್ಯಕ್ತಿತ್ವ ಎಂಬ ಚಿಂತನೆ ಅದ್ಭುತವಾಗಿದೆ. ಡಾ.ಜಿ.ಎಂ.ಹೆಗಡೆ ತಮ್ಮ ಲೇಖನದಲ್ಲಿ ಕಾರಂತರು ಕೊನೆಯದಾಗಿ ಧಾರವಾಡಕ್ಕೆ ಬಂದಾಗ ಅವರೊಡನೆ ನಡೆಸಿದ ಸಂವಾದಕ್ಕೆ ಅಕ್ಷರ ರೂಪ ನೀಡಿದ್ದಾರೆ. ಈ ಸಂವಾದ ಕಾರಂತರ ಪರಿಸರ ಪ್ರಜ್ಞೆಯ ಮಹಾಮಾನವತಾವಾದಿ ವ್ಯಕ್ತಿತ್ವವನ್ನು ತೆರೆದಿಡುತ್ತದೆ.

'ಬಹುಮುಖ ಪ್ರತಿಭಾವಂತ ಡಾ.ಶಿವರಾಮ ಕಾರಂತ' ಎಂಬ ಡಾ.ತಾಳ್ತಜೆ ವಸಂತಕುಮಾರ ಅವರ ಲೇಖನ ಹೆಸರಿಗೆ ತಕ್ಕಂತೆ ಕಾರಂತರ ಬಹುಮುಖಗಳನ್ನು ದರ್ಶಿಸುತ್ತದೆ. ಅವರ ಬದುಕು ಏಕಕಾಲಕ್ಕೆ 'ಅನುಕರಣೀಯವಾದ ಆದರ್ಶ'ವೂ 'ಅನುಕರಿಸಲಾರದ ಸವಾಲು' ಆಗಿ ನಮ್ಮ ಮುಂದಿದೆ ಎಂದು ಭಾವಿಸಲಾಗಿದೆ. ಕಾರಂತರನ್ನು ಕುರಿತು 'ಇಚ್ಛಾ ಶಕ್ತಿಯೊಂದಿದ್ದರೆ ಮನುಷ್ಯನೊಬ್ಬ ತನ್ನ ಬದುಕಿನಲ್ಲಿ ಏನನ್ನೆಲ್ಲ ಸಾಧಿಸಬಲ್ಲನೆಂಬುದರ ನಿದರ್ಶನವನ್ನು ಉಳಿಸಿ ಹೋಗಿದ್ದಾರೆ" (ಪು.169) ಎಂಬ ಮಾತು ಯಥೋಚಿತವಾಗಿದೆ. ಎನ್ಕೆಯವರು 'ಅರವತ್ತು ವರ್ಷ, ನಾ ಕಂಡ ಕಾರಂತರು' ಎಂಬ ಲೇಖನದಲ್ಲಿ ಕಾರಂತರನ್ನು ಸನ್ನಿವೇಶದ ಜೊತೆಯಿಟ್ಟು ನೋಡಿದ್ದಾರೆ. "ಕೈಗಾವಿದ್ಯುತ್ ನೆಲೆ ಸ್ಥಾಪನೆ ಸರ್ಕಾರದ ಪ್ರತಿಷ್ಠೆಯಾದಾಗ ಕಾರಂತರು ಅವಿಸ್ಮರಣೀಯ ಹೋರಾಟವನ್ನೆ ನಡೆಸಿದರು" (ಪು.172-173) ಎಂಬುದನ್ನು ಸ್ಮೃತಿಗೆ ತಂದುಕೊಳ್ಳಲಾಗಿದೆ. ಸಂತೋಷಕುಮಾರ ಗುಲ್ವಾಡಿ ಅವರು ಸಾಪ್ತಾಹಿಕ ಪತ್ರಿಕೆಯಾದ 'ತರಂಗ'ದೊಟ್ಟಿಗಿನ ಶಿವರಾಮ ಕಾರಂತರ ಸಂಬಂಧವನ್ನು ಎಳೆ-ಎಳೆಯಾಗಿ ಬಿಡಿಸಿಡುತ್ತಾರೆ. ಸಾಹಿತ್ಯ, ಪರಿಸರ, ವಿಜ್ಞಾನ, ಇತಿಹಾಸ, ಫೋಟೋಗ್ರಫಿ, ಸಂಸ್ಕೃತಿ, ಬಾಲಲೀಲೆ ಹೀಗೆ ಯಾವ ವಿಷಯದ ಕುರಿತು ಕೇಳಿದರೂ ಅವರ ಅಕ್ಷಯ ಬತ್ತಳಿಕೆಯಿಂದ ಬರೆಹಗಳು ಬರುತ್ತಿದ್ದವು ಎಂದು ನೆನಪಿಸಿಕೊಳ್ಳಲಾಗಿದೆ. ಕಾರಂತರು 'ತರಂಗ'ದ 'ಬಾಲವನ' ಅಂಕಣದ ಮೂಲಕ ಮಕ್ಕಳ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತಿದ್ದರು.

ಡಾ. ಸ.ಜ.ನಾಗಲೋಟಿಮಠ ಅವರು ಕಾರಂತರ ನಿಷ್ಠುರ ನಿಲುವನ್ನು ಕೆಲವು ಘಟನೆಗಳ ಮೂಲಕ ದಾಖಲಿಸುತ್ತಾರೆ. "ಬೇರೆಯವರು ಕಾರಂತರಂತೆ ಬರೆಯಬಹುದು, ಚಿತ್ರ ಬಿಡಿಸಿಬಹುದು, ಫೋಟೊ ತೆಗೆಯಬಹುದು, ತಾಳಹಾಕಿ ಕುಣಿಯಬಹುದು, ಆದರೆ ಅವರಂತೆ ಬದುಕುವದು ಬಲು ಕಠಿಣ" (ಪು. 186) ಎಂಬ ಚಿಂತನೆ ಮನಮುಟ್ಟುವಂತೆ ಇದೆ. ಸದನಂದ ಕನವಳ್ಳಿ ಶಿವರಾಮ ಕಾರಂತರ ಮೇಲೆ ಒಂದು ನೋಟವನ್ನು ಬೀರುತ್ತಾರೆ. "ಕಾರಂತರು ನಮ್ಮಲ್ಲಿಗೆ ಬಂದದ್ದು ಕರಾಳ ತುರ್ತು ಪರಿಸ್ಥಿತಿಯ ದಿನಗಳಲ್ಲಿ. ತುರ್ತು ಪರಿಸ್ಥಿತಿಯನ್ನು ನಖಶಿಖಾಂತವಾಗಿ ವಿರೋಧಿಸಿದ್ದರು ಕಾರಂತರು. ಪ್ರತಿಭಟಿಸಿ 'ಪದ್ಮಭೂಷಣ' ಪ್ರಶಸ್ತಿಯನ್ನು ಭಾರತ ಸರಕಾರಕ್ಕೆ ಹಿಂತಿರುಗಿಸಿದವರು" (ಪು. 189-190) ಎಂಬ ನೆನಪು ಕಾರಂತರ ಬದುಕಿನ ಬದ್ಧತೆಯನ್ನು ತೋರಿಸುತ್ತದೆ. ಪರಿಸರ ಹೋರಾಟದಲ್ಲಿ ನೇರವಾಗಿ ತೊಡಗಿಸಿಕೊಂಡ ಕನ್ನಡ ಸಾಹಿತಿ ಅವರೊಬ್ಬರೇ ಎಂಬುದು ಲೇಖಕರ ಭಾವನೆ.

ಡಾ. ಮಣಿಮಾಲಿನ ವಿ.ಕೆ. ಅವರು ಕಾರಂತರನ್ನು ಜ್ಞಾನಸಾಗರವಾಗಿ ಕಂಡರಿಸಿದ್ದಾರೆ. ಕಾರಂತರ ಹುಚ್ಚು ಮನಸ್ಸಿಗೆ ಹತ್ತೇ ಮುಖಗಳಾದರೆ ಸ್ವಸ್ಥ ಮನಸ್ಸಿಗೆ ನೂರಾರು ಮುಖಗಳಿವೆ ಎಂದು ಕಂಡುಕೊಳ್ಳಲಾಗಿದೆ. ಅವರ ದೃಷ್ಟಿಯಲ್ಲಿ ಪರಿಸರಕ್ಕೆ-ಭೌಗೋಳಿಕ ವ್ಯಾಪ್ತಿಗಳಷ್ಟೇ ಇರಲಿಲ್ಲ. ಬದಲಿಗೆ ಭಾವನಾತ್ಮಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ರಂಗಗಳನ್ನೂ ಪರಿಸರದ ಭಾಗಗಳಾಗಿಯೇ ಅವರು ಕಂಡಿದ್ದರು" (ಪು. 196) ಎಂಬ ಮಾತುಗಳು ಇಲ್ಲಿ ಗಮನಾರ್ಹ. ಶಿವರಾಮ ಕಾರಂತರ ಮೊಮ್ಮಗಳಾದ 'ರಂಜನಾ ನಾಯಕ' ಅವರು ತಮ್ಮ ಲೇಖನದಲ್ಲಿ "ಜೀವನದ ಪ್ರತಿ ಕ್ಷಣವನ್ನು ಜೀವಂತವಾಗಿ ಬದುಕಿದ ಕಾರಂತರಿಂದ ಹೇಗೆ ಬದುಕಬೇಕು? ಎನ್ನುವ ಪಾಠವನ್ನು ಕಲಿತಿದ್ದೇನೆ. ನನ್ನ ಮಟ್ಟಿಗೆ ಅವರು ಈಗಲೂ ಜೀವಂತವಾಗಿದ್ದಾರೆ" (ಪು. 201) ಎಂದು ತಿಳಿಸುತ್ತಾರೆ. ಅಲ್ಲದೇ ಕಾರಂತರು ತನ್ನ ಮೊಮ್ಮಗಳಿಗೆ "ಅರಿವೇ ಗುರು, ನಿಸರ್ಗವೇ ಪಾಠಶಾಲೆ" ಎಂದು ಬರೆದು ಸಹಿ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಲಾಗಿದೆ.

ಡಾ. ಸರಜೂ ಕಾಟ್ಕರ್ ಅವರು ತಮ್ಮ 'ಕಾರಂತ: ಕೆಲವು ನೆನಪುಗಳು' ಎಂಬ ಲೇಖನದಲ್ಲಿ ಭಾರತದ ಪ್ರಧಾನಿಯ ನೇರ ಸಂಪರ್ಕ ಇದ್ದ ಕಾರಂತ ಒಬ್ಬ ಕಾನ್‌ಸ್ಟೇಬಲ್ ಜೊತೆಗೆ ಸ್ನೇಹವನ್ನು ಇಟ್ಟುಕೊಂಡಿದ್ದು ಅವರ ವ್ಯಕ್ತಿತ್ವದ ಹಿರಿಮೆ ಎಂದು ತೋರಿಸಿಕೊಡುತ್ತಾರೆ. ಕೊನೆಯಲ್ಲಿ ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಶಿವರಾಮ ಕಾರಂತರ 'ಅಳಿದ ಮೇಲೆ' ಕೃತಿಯನ್ನು ವಿಶ್ಲೇಷಿಸುತ್ತಾರೆ. "ಬದುಕಿನ ಯಾವ ಗಳಿಗೆಯಲ್ಲಿಯೂ ಯಾವ ವಯಸ್ಸಿನಲ್ಲಿಯೂ ಮನುಷ್ಯನ ಚಿತ್ತಮಂದಿರವನ್ನು ಪರಿಶುದ್ಧವಾಗಿ ಕಟ್ಟುವಲ್ಲಿ ನಿರ್ಮಿಸುವಲ್ಲಿ, ನಿರ್ವಹಿಸುವಲ್ಲಿ ಯಶಸ್ವಿಯಾಗುವ ಇಂಥ ಸಂಯಮಿತ ಕೃತಿ ಕನ್ನಡದಲ್ಲಿ ಅಷ್ಟೇ ಅಲ್ಲ, ಬಹುಶಃ ಭಾರತದ ಯಾವುದೇ ಅನ್ಯ ಭಾಷೆಯಲ್ಲಿಯೂ ಬಂದ ಹಾಗೆ ಕಾಣೆ, ಅಳಿದ ಮೇಲೆಯೂ ಉಳಿಯುವ ಅನನ್ಯ ಕೃತಿ ಇದು" (ಪು. 208) ಎಂದು ಅವರು ಅಭಿಪ್ರಾಯಪಡುತ್ತಾರೆ.

ಒಟ್ಟಾರೆ 'ಬಹುಮುಖಿ' ಶಿವರಾಮ ಕಾರಂತರ ವ್ಯಕ್ತಿತ್ವವನ್ನು ಮತ್ತು ಅವರ ಕೃತಿಗಳನ್ನು ಶೋಧನೆಗೆ ಒಳಗು ಮಾಡುವ ಉಪಯುಕ್ತ ಸಂಪಾದನಾ ಕೃತಿಯಾಗಿದೆ. ಶಿವರಾಮ ಕಾರಂತರ ಪ್ರಯೋಗಶೀಲ ವ್ಯಕ್ತಿತ್ವ ಇಂದಿನ ತಲೆಮಾರಿಗೆ ಅಗತ್ಯವಾಗಿ ಮಾದರಿಯಾಗಬೇಕು ಎಂಬ ಆಶಯ ಕೃತಿಯಲ್ಲಿ ಅಡಗಿದೆ. ಶಿವರಾಮ ಕಾರಂತರ ಬದುಕೇ ತೆರೆದ ಪ್ರಯೋಗ ಶಾಲೆ ಎಂಬುದನ್ನು ಇಲ್ಲಿಯ ಪ್ರತಿ ಪುಟ ಪುಟಗಳು ಸಾರುತ್ತವೆ. ಕೃತಿಯ ಬೆನ್ನುಡಿಯಲ್ಲಿ "ಕನ್ನಡದ ಇಪ್ಪತ್ತೈದು ಹಿರಿಯ ಸಾಹಿತಿಗಳ ವಿಚಾರಪೂರ್ಣ ಲೇಖನಗಳನ್ನೊಳಗೊಂಡಿರುವ ಪ್ರಸ್ತುತ ಗ್ರಂಥವು ಡಾ. ಕಾರಂತರ ಜೀವನ ಮತ್ತು ಸಾಹಿತ್ಯವನ್ನು ಅಭ್ಯಸಿಸುವವರಿಗೆ ಒಂದು ಉಪಯುಕ್ತ ಆಕರ ಗ್ರಂಥವಾಗುತ್ತದೆಂಬುದು ನಮ್ಮ ಸದಾಶಯವಾಗಿದೆ" ಎಂದು ಬರೆಯಲಾಗಿರುವ ಸಾಲುಗಳು ಕೃತಿಯ ಓದಿನ ಸಂದರ್ಭದಲ್ಲಿ ನಮ್ಮ ಅರಿವಿಗೆ ಬರುತ್ತವೆ.

ಡಾ. ಸರಜೂ ಕಾಟ್ಕರ್ ಹೇಳುವಂತೆ "ಪ್ರಸ್ತುತ 'ಬಹುಮುಖಿ' ಸಂಪಾದನೆ ಮನು ಬಳಿಗಾರ್ ಅವರ ಬಹುಮುಖಿ ವ್ಯಕ್ತಿತ್ವದ ಇನ್ನೊಂದು ಉದಾಹರಣೆ ಅಷ್ಟೇ!" ಎಂಬ ಮಾತು ಅಕ್ಷರಶಃ ಸತ್ಯ. ಹೀಗೆ ಮನು ಬಳಿಗಾರ್ ಅವರು ತಮ್ಮ ಸಾಹಿತ್ಯಾಭಿರುಚಿಯನ್ನು ಈ ಪುಸ್ತಕದ ಮೂಲಕ ಓದುಗರಿಗೂ ಕಾಣಿಸುತ್ತಾರೆ. ಈ ಸಂಪಾದನಾ ಕೃತಿಯ ಮೂಲಕ ಧೀಮಂತ ವ್ಯಕ್ತಿತ್ವದ ಕಾರಂತರನ್ನು ಕಡೆಯುವ ಕೆಲಸ ಅಭಿನಂದನಾರ್ಹ. ಈ ನಿಟ್ಟಿನಲ್ಲಿ ಮನು ಬಳಿಗಾರ್ ನಿಜಕ್ಕೂ ಧನ್ಯರು!

### ಆಕರ ಗ್ರಂಥ :

ಮನು ಬಳಿಗಾರ್ (ಸಂ.), ಬಹುಮುಖಿ, ಪರಮಶಂಕರ ಪ್ರಕಾಶನ, ಶಿಗ್ಗಿ, ಬೆಳಗಾವಿ, 1999

❖

## ಮನು ಬಳಿಗಾರರ ಸಾಕ್ಷರ ಗೀತೆಗಳು

ಯುವರಾಜ ಮಾದನಶೆಟ್ಟಿ

ಮನುಷ್ಯನ ಬದುಕಿನ ಕ್ರಮ ಚಿಂತನೆಯ ರೀತಿ ಸಂವೇದನೆಯ ತೀವ್ರತೆ ಭಾಷೆಯ ಅರ್ಥ-ಲಯ-ಧ್ವನಿಗಳು. ಅಭಿವ್ಯಕ್ತಿ ತಂತ್ರಗಳು. ಓದುಗರ ಅಭಿರುಚಿ ಇಲ್ಲವೇ ಕಾಲಕ್ಕೆ ನಿಧಾನವಾಗಿ ಆದರೆ ನಿರಂತರವಾಗಿ ಬದಲಾಗುತ್ತಲೇ ಹೋಗುವದರಿಂದ ಒಂದು ಕೃತಿಗೆ ಒಂದು ಕಾಲಘಟ್ಟದಲ್ಲಿ ಇರುವ ವಿಶಿಷ್ಟವಾದ ಪ್ರಸ್ತುತತೆ ಸದಾಕಾಲ ಇರುತ್ತದೆ ಎಂಬ ಗ್ರಹಿಕೆಯಾಗಲಿ ಇರಬೇಕು ಎಂಬ ಆಶಯವಾಗಲಿ ಎರಡು ಸಹಜ ಎಂಬುದು ಯಾವ ಸಾಹಿತ್ಯ ಚರಿತ್ರೆಯನ್ನೋದಿದರೂ ತಿಳಿಯುತ್ತದೆ.

ಈ ಪ್ರಪಂಚದೊಂದಿಗೆ ಯಾವ ರೀತಿಯಾಗಿ ವ್ಯವಹಾರ ಮಾಡುತ್ತಾನೆ ಎಂಬುದರ ಕುರಿತು ವಿಚಾರಿಸಿದಾಗ ತಾನು ಬೆಳೆದಾಗ ಮಾತ್ರ ಈ ಜಗತ್ತನ್ನು ಬೆಳೆಸಲು ಸಾಧ್ಯವಾಗುವಂತದ್ದು. ಸರಿ ಸುಮಾರು ಅಕ್ಷರ ಸಂಸ್ಕೃತಿಗೆ ಬಾರದೆ ಇರುವರನ್ನು ರಾತ್ರಿ ಶಾಲೆಯ ಮೂಲಕ ಉಚಿತ ಶಿಕ್ಷಣಕೊಡಬೇಕು ಎಂಬುದರ

ಮಹದಾಶೆಯಿಂದ ತಮ್ಮ ವಿಚಾರವನ್ನು ಯಾವ ಹಿನ್ನೆಲೆಯಲ್ಲಿ ಆ ಜನರಿಗೆ ಅಕ್ಷರ ಪ್ರಜ್ಞೆಯನ್ನು ಬೆಳಸಬೇಕು ಎಂಬುದನ್ನು ಅರಿತಾಗ ಅವರಲ್ಲಿ ಹೊಳೆದದ್ದು ರಾತ್ರಿಯ ಶಾಲೆಯ ಮೂಲಕ ಅಂದರೆ ದಿನ ನಿತ್ಯದ ಕೆಲಸ ಕಾರ್ಯವನ್ನು ಹಗಲಿನ ಸಮಯದಲ್ಲಿ ಮುಗಿಸಿ ಸಾಯಂಕಾಲದ ಸಮಯದಲ್ಲಿ ಅಕ್ಷರವನ್ನು ಕಲಿಸಬೇಕು ಎಂಬುದಾದರೆ ಅದಕ್ಕೆ ಪೂರ್ವ ಸಿದ್ಧತೆಗಾಗಿ ಮಾಡುವಂತಹ ಕಾರ್ಯವಾಗಿದೆ.

ಈ ರೀತಿಯಾಗಿ ಕಾರ್ಯಕ್ರಮದ ರೂಪದಲ್ಲಿ ಜಾರಿಗೆ ತರಬೇಕು ಎಂಬುದಾದರೆ ಅದಕ್ಕೆ ಸಂಬಂಧಪಟ್ಟಂತಹ ವಿಚಾರಲಹರಿಯ ಮೂಲಕ ಬದಲಾವಣೆ ತರಬಹುದು ಎಂಬುದು ಕವಿಯ ಕನಸು. ಆ ಹಿನ್ನೆಲೆಯಲ್ಲಿ ವಿಚಾರ ಸರಣಿಯು ಮುಖ್ಯವಾದ ಮುಂದುವರೆಯಬೇಕು. ಅನಕ್ಷರಸ್ಥ ಸಮುದಾಯವನ್ನು ಅಕ್ಷರಸ್ಥ ಸಮುದಾಯ ಮಾಡಬೇಕಾದ ಶ್ರಮ ಸಾಕಷ್ಟು ವ್ಯಯವಾಗುತ್ತದೆ.

ಮಹಿಳಾ ಸಂವೇದನೆಯ ಮೊದಲ ದಾಖಲೆಯಾದ ಜಾನಪದ ಸಾಹಿತ್ಯ ಹೆಣ್ಣಿನ ನೋಡುವ ದೃಷ್ಟಿಕೋನವೇ ಬೇರೆಯಾದಾಗ ತಪ್ತತೆಯನ್ನು ಹೇಳುತ್ತದೆ. ಹೆಣ್ಣಾಗಿರೋದಕ್ಕಿಂತ ಮಣ್ಣಾಗಿರೋದು ಲೇಸು ಎಂಬ ಮಾತು ತನ್ನ ಸ್ಥಿತಿಯ ನಿವೇದನೆಯಷ್ಟೇ ಅಲ್ಲ ಹೆಣ್ಣನ್ನು ಮಣ್ಣಿನಂತೆ ತುಳಿದ ಸ್ಥಿತಿಗತಿಗಳ ಕುರಿತು ಎಚ್ಚರಿಕೆಯನ್ನು ಧ್ವನಿಸುತ್ತದೆ.

**"ಹೆಣ್ಣೊಂದು ಕಲಿತರೆ ಸಂಸಾರ ಸಸಾರ**
**ವಿದ್ಯೆಯಿಲ್ಲದಿರೆ ಅವೆಲ್ಲ ನಿಸಾರ**
**ಕಲಿತ ಹೆಣ್ಣು ಕುಟುಂಬದ ಕಣ್ಣು**
**ಬಾಳೆಲ್ಲ ಆಗುವುದು ಹಾಲು ಜೇನು."**

ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರೆಯುವುದರಿಂದ ಕೌಟುಂಬಿಕ, ಸಾಮಾಜಿಕ ಚೌಕಟ್ಟಿನ ಪರಿವೆಯಿದ್ದು, ತನ್ನ ಭವಲೋಕವನ್ನು ಸ್ಪಷ್ಟಪಡಿಸಿಕೊಂಡ ಪ್ರಧಾನವಾಗಿ ಅವಳ ಚಿಂತನ ಮಂಥನ ಕ್ರಮವು ಬೇರೆಯಾಗಿರುವುದರಿಂದ ಅವಳು ಪ್ರತ್ಯೇಕವಾಗಿರುವುದು ಮತ್ತು ಅವಳು ಹೊಸ ಜಗತ್ತಿನೊಂದಿಗೆ ಯಾವ ರೀತಿಯಾಗಿ ವ್ಯವಹಾರಕ್ಕೆ ಸಿದ್ಧಳಾಗುತ್ತಾಳೆ ಎಂಬುದನ್ನು ತಿಳಿಯುವುದಾಗಿದೆ. ಗಾದೆ ಮಾತಿನಂತೆ ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು ಎನ್ನುವುದು ಪರಂಪರಾಗತವಾಗಿ ವಿಭಜಿಸುತ್ತಲೇ ಬಂದಿರುವದನ್ನು ಕಾಣುತ್ತೇವೆ. ಆದರೆ ಇಲ್ಲಿ ನೋಡಿರುವ ದೃಷ್ಟಿಕೋನವೇ ಬೇರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ದೊರೆತ ಬಹು ಬೇಗನೆ ಸಮಾಜ ಸುಧಾರಣೆಯಾಗಬಹುದು ಎಂಬುದರ ಹಿನ್ನೆಲೆಯಲ್ಲಿದೆ. ಅವಳು ಕಲಿತರೆ ಕುಟುಂಬದ ಕಣ್ಣಾಗಿರುತ್ತಾರೆ. ಅವಳ ಬಾಳಿನ ತುಂಬೆಲ್ಲ ಹಾಲು ಜೇನು. ಈ ಮಾತನ್ನು ಹೇಳುವ ರೀತಿ ಇದೆಯಲ್ಲ. ಅದು ಎಲ್ಲರಿಂದ ಬರುವ ಮಾತಲ್ಲ ಹಾಲು-ಜೇನು ಒಂದರಲ್ಲೆ ಕರಗತವಾಗಿರುವುದರಿಂದ ಅದರ ಸವಿಯನ್ನು ಬಲ್ಲವನೆ ಬಲ್ಲ ಬೆಲ್ಲದ ರುಚಿಯನ್ನು ಎನ್ನುವುದರ ಮುಖಾಂತರ ಸಮಕಾಲೀನ ಸಂದರ್ಭಕ್ಕೆ ಮಾರ್ಗದರ್ಶಿಯಾಗಿ ನಿಲ್ಲುವಂತದ್ದು.

**ಅಡಗಿದ ಅಕ್ಷರ ದೀಜಗ ಜ್ಞಾನ**
**ಅದರಿಂದಲೇ ತಿಳಿವದು ಎಲ್ಲ ವಿಜ್ಞಾನ**
**ಜ್ಞಾನ ವಿಜ್ಞಾನ ಸೇರಲು ನೋಡು**
**ಸುಖದ ಸುಪ್ಪತ್ತಿಗೆ ಆಯಿತು ಬಿಡು**

ಅಜ್ಞಾನದಿಂದ ಜ್ಞಾನದಕಡೆಗೆ ಸಾಗುವಾಗ ಒಂದಿಷ್ಟು ತೊಂದರೆಗಳು ಬರುವುದು ಸಹಜ ಯಾರು ಅದನ್ನು ಮೊದಲಿಗೆ ಒಪ್ಪುವದಿಲ್ಲ. ಸಮಯ ಕಳೆದ ನಂತರ ಅದರ ಬೇಡಿಕೆ ಏನು ಎಂಬುದು ತಿಳಿಯುತ್ತದೆ. ಆ ಜ್ಞಾನವನ್ನು ಪಡೆಯಬೇಕಾದರೆ ಸಾಕಷ್ಟು ಕಷ್ಟವಾಗುತ್ತದೆ. ಇಂತಹ ಸಮಯದಲ್ಲಿ ಅದರಿಂದಾಗುವ ಲಾಭ ನಷ್ಟವನ್ನು ಬಿಟ್ಟು ಅದರಿಂದ ಅವನಿಗೆ ಅರಿವು ಬಂದರೆ ಸಾಕು ಎಂಬುದಾದರೆ ಮುಂದಿನ ಹೊಸ ಹೊಸ ಆಯಾಮಗಳು ಒಂದೇ ಮಾರ್ಗದಿಂದ ಅವು ಮುಂದುವರೆಯುತ್ತಾ ಸಾಗುತ್ತದೆ. ಆದರೆ ಈ ಜಗತ್ತಿನ ನಿಯಮವೇ ಬೇರೆಯಾದಾಗ ಅದು ತಿಳುವಳಿಕೆ ಸಾಕಷ್ಟು ಪ್ರಯೋಗಗಳ ಮೂಲಕ ಕಂಡುಹಿಡಿಯಬೇಕಾದರೆ ಸಮಯ ಕಳೆಯುತ್ತದೆ. ಅದು ಎಂತಹದರಿಂದ ಎಂದಾಗ ಸಮಕಾಲೀನ ಒಂದು ಹೊಸ ಕ್ಷೇತ್ರದ ಪರಿಚಯವಾದಾಗ ಅವನಿಗೆ ಇರುವ ನೈತಿಕ ಬೆಂಬಲ ಮಾತ್ರ ಸಹಾಯಕ್ಕೆ ಬಂದರೆ ಹೊಸ ಸಂಶೋಧನೆಯಿಂದ ಅವನ ಜ್ಞಾನದ ಅರಿಯುವ ಮತ್ತಷ್ಟು ಹೆಚ್ಚಾಗುತ್ತಾ ಸಾಗಿದಾಗ, ತನ್ನ ಜೀವನ ನಿರ್ವಹಣೆಯ ಜೊತೆಗೆ ಆಗುವ ಹಲವಾರು ಮಾಧ್ಯಮದ ಮುಖಾಂತರ ನಿರ್ವಹಣೆ ಮಾತ್ರ ಸಾಧ್ಯವಾಗುವಂತಹದ್ದು. ಆದರೆ ಯಾವ ಮಾಧ್ಯಮ ನಮಗೆ ದೊರೆಯಬೇಕು ನೈತಿಕ ಶಿಕ್ಷಣ ದೊರೆತಾಗ ಮಾತ್ರ ಹೊಸ ಬಲವನ್ನು ಪಡೆಯಲು ಸಾಧ್ಯವಾಗುತ್ತದೆ.

**“ಇದು ನಮ್ಮ ಅಭಿಯಾನ**
**ದೀನ ದಲಿತರಿಗೆ ವರದಾನ**
**ಜ್ಞಾನದೆಡೆಗೆ ಪ್ರಯಾಣ**
**ಸರ್ವ ಸುಖಕೆ ಸೋಪಾನ”**

ಕವಿಯಾದವನು ತನ್ನ ಅನುಭವಕ್ಕೆ ತಕ್ಕಂತೆ ಬರೆಯುವಾಗ ಅವನಿಗೆ ನೀನು ಹೀಗೆ ಬರೆಯಬೇಕು ಎಂದು ಹೇಳುವ ಕಾಲ ಒಂದಿತ್ತು. ಆದರೆ ಅದನ್ನು ಮೀರಿ ನಾವು ವಿಚಾರ ಸರಣಿಯವಾಗಿ ನೋಡಿದಾಗ ನಮ್ಮ ಹಿಂದಿರುವ ಮನೋಧರ್ಮ ಯಾವ ರೀತಿಯಾಗಿ ಕೆಲಸವನ್ನು ಮಾಡುತ್ತಿದೆ ಎಂದು ಅಂದುಕೊಂಡಾಗ ಸಾಂಸ್ಕತಿಕ ಬಂದ ವಲಯವನ್ನು ನಾವೇ ಸೃಷ್ಟಿಸಿಕೊಂಡು ಬಂದಿರುವುದಾಗಿದೆ. ಹಾಗಾದರೆ ಅದನ್ನು ನಿರ್ದೇಶಿಸುವುದು ಮತ್ತು ನಿಯಂತ್ರಿಸುವದು ಒಂದು ಸಮುದಾಯಕ್ಕೆ ಅದು ರೂಢಿಸಿಕೊಂಡು ಬಂದಿರುವಂತವುಗಳೆ. ಆದರೆ ಕಾವ್ಯಗಳು ಹುಟ್ಟುವ ರೀತಿಯಿಂದ ನೋಡಿದರೆ ಯಾವ ಸಮುದಾಯದಲ್ಲಿದ್ದರೂ ಕೊಡತಾನೊ ಇಂತಹ ಜನರಿಗೆ ಅನ್ಯಾಯವಾಗಿದೆ ಅಂತಹ ಜನಗಳು ಮುಂದೆ ಬರಲಿ ಎನ್ನುವ ಸದಾಶಯವು ಪ್ರಮುಖವಾಗಿರುವಂತದ್ದು.

ಕೇವಲ ಒಂದು ವ್ಯವಸ್ಥೆಯನ್ನು ಬದಲಿಸಲು ನಾವು ಮುಂದಾದರೆ ಆ ಸಮಯಕ್ಕೆ ಅದು ನಿರಸನ ಪ್ರತಿಕ್ರಿಯೆ ಬರುತ್ತವೆ. ಆದರೆ ಪ್ರಯತ್ನ ಮುಂದುವರೆದಾಗ ಕೆಲವು ಸಮಯದ ನಂತರ ಅದೇ ಪ್ರಮುಖ

ಅಂಶವಾಗಿ ಮುಂದುವರೆಯುತ್ತದೆ. ಈ ನಮ್ಮ ಅಭಿಮಾನ ಇದೆಯಲ್ಲ ಕೇವಲ ಶ್ರೀಮಂತರಿಗೆ ಉಳ್ಳವರಿಗೆ ಅಲ್ಲ ಅದು ದೀನ ದಲಿತರಿಗೆ ಸಮಾಜದ ಕಟ್ಟ ಕಡೆಯ ಜನರಿಗೂ ಶಿಕ್ಷಣ ದೊರೆಯಬೇಕು ಎಂಬುದು ಅವರ ಆಶಯವಾಗಿದೆ.

**"ಹೆಣ್ಣಾದರೆ ತಿಳಿ ಕಿತ್ತೂರ ಚನ್ನಮ್ಮ**
**ಬೆಳಸಿದರಾಗುವಳು ಬೆಳವಡಿ ಮಲ್ಲಮ್ಮ**
**ಅಂದಕೊ ಅವಳೇ ರಾಣಿ ಅಬ್ಬಕ್ಕ**
**ಯಾಕಾಗಬಾರದು ಮಹಾದೇವಿ ಅಕ್ಕ?"**

ಸ್ತ್ರೀಯಾದವಳು ಕೇವಲ ಗಂಡು ಮಕ್ಕಳನ್ನು ಮಾತ್ರ (ಹೆರಿಗೆ) ಕೊಡುವುದು. ಹೆಣ್ಣು ಮಕ್ಕಳನ್ನು ಪಡೆಯಲು ಅವಳು ಯೋಗ್ಯಳಲ್ಲವೆ. ಯಾವುದೇ ಒಮ್ಮೆಗೆ ಪ್ರೌಢರನ್ನು ಮತ್ತು ಮಕ್ಕಳನ್ನು ಕುರಿತು ಬರೆದಿರುವಂತದ್ದು. ಅದನ್ನು ಸಂತೋಷಿಸುತ್ತದೆ. ಮಗುತನದ ಶುದ್ಧ ರೂಪದಲ್ಲಿರಲು ಸಾಧ್ಯವಿಲ್ಲ. ಆರೋಗ್ಯವಂತ ಮಕ್ಕಳಿಗೆ ನಮ್ಮ ವಿಚಾರ ಮಾತ್ರ ಅಂದಾಗ ಅವರಿಗೆ ಅದು ತಲುಪುವುದೇ, ಯಾವ ರೀತಿಯಾಗಿ ಎಂಬುದನ್ನು ನಾವು ಅರಿಯಬೇಕಾಗುತ್ತದೆ. ಅಂದರೆ ಸಮಕಾಲೀನ ಸಮಾಜದಲ್ಲಿ ಲಿಂಗ ತಾರತಮ್ಯ ನಡಿಯುತ್ತಿದೆ. ಇದನ್ನು ತಡೆಯುವ ನಿಟ್ಟಿನಿಂದ ಹೆಣ್ಣು ಮಗಳು ಹುಟ್ಟಿದರೆ ಅವಳೇನು ಮನೆ ಹಾಳುಮಾಡಲು ಹುಟ್ಟಿಲ್ಲ ಎಂಬ ಅರಿವು ಸಾಮಾನ್ಯ ಜನರಿಗೆ ತಿಳಿಯಬೇಕಾಗಿದೆ. ಈ ಸ್ಥಿತಿಯಲ್ಲಿ ಒಬ್ಬ ಹೆಣ್ಣು ಮಗಳು ಹುಟ್ಟಿದರೆ ಅವಳು ಕಿತ್ತೂರು ಚನ್ನಮ್ಮ ಇಂತಹ ಮಹಿಳೆಯ ಯಶೋಗಾಥೆಯನ್ನು ಜನರಿಗೆ ತಿಳಿಸಬೇಕಾಗಿದೆ. ಒಬ್ಬ ಮಹಿಳೆಗೆ ಇರಬೇಕಾದ ಸಿಟ್ಟು-ರೋಷ ಇಂತಹುವುಗಳಿಂದ ಅವಳ ಸಾಹಸದ ಬಗ್ಗೆ ತಿಳಿಸುವುದರಿಂದ ಜನ ಸಾಮಾನ್ಯರಿಗೆ ವೈರಿಗಳನ್ನು ಹೇಗೆ ಹಿಮ್ಮೆಟ್ಟಿಸಿದಳು ಎಂಬುದನ್ನು ಅರಿಯಬೇಕಾಗಿದೆ. ಅದೇ ರೀತಿಯಾಗಿ ಬೆಳವಡಿ ಮಲ್ಲಮ್ಮ ಅವಳ ಸಾಹಸವನ್ನು ತಿಳಿಸುವುದು ವೈರಿಯನ್ನು ಕ್ಷಮಿಸಿ ರಕ್ಷಣೆ ಕೊಟ್ಟಿದ್ದು. ರಾಣಿ ಅಬ್ಬಕ್ಕ ಗೇರು ಸೊಪ್ಪದ ಕರಾವಳಿ ಪ್ರದೇಶ ರಾಣಿ ಇವಳು ಕೂಡಾ ಮತ್ತು ಅಕ್ಕ ಮಹಾದೇವಿ ಆಡಂಬರದ ಶ್ರೀಮಂತಿಕೆಯನ್ನು ತ್ಯಜಿಸಿ ಹೃದಯ ಶ್ರೀಮಂತಿಕೆಯನ್ನು ಮೆಚ್ಚಿದ ಅಕ್ಕ ಮಹಾದೇವಿ ಇಂಥಹ ಸಾಲಿನಲ್ಲಿ ನಮ್ಮ ಹೆಣ್ಣು ಮಕ್ಕಳನ್ನು ಕಂಡರೆ ಭೇದಭಾವ ದೂರ ಮಾಡಿದಂತಾಗುತ್ತದೆ.

ಈ ಯುಗಕ್ಕೆ ಅಕ್ಷರ ಕಲಿತವರ ಮಹತ್ವವನ್ನು ತಿಳಿಸಿರುವುದು ಮತ್ತು ಸಮಾಜದಲ್ಲಿರುವ ಅನಾಗರೀಕತೆಯನ್ನು ತೊಡೆದುಹಾಕುವ ನಿಟ್ಟಿನಲ್ಲಿ ಬಂದಿರುವ ಅಕ್ಷರ ಮಿಲನ ಈ ಕವನ ಸಂಕಲನ ವಿಶಿಷ್ಟವಾದ ರೂಪವನ್ನು ಸಾಮಾನ್ಯ ಜನರ ಕೈಪಿಡಿಯಾಗಿದೆ ಎಂದರೆ ತಪ್ಪಾಗಲಾರದು. ಇಂತಹ ಒಂದು ನೆಲೆಯಲ್ಲಿ ವಿಚಾರಿಸುವ ಮನೋಧೋರಣೆಯು ಮುಖ್ಯವಾಗಿ ಕಂಡುಬರುತ್ತದೆ.

❖

# ಕಡಲ ತೀರದ ಭಾರ್ಗವ : ಬಹುಮುಖ

ಡಾ. ಎಸ್. ಮೋಹನ್

'ಕಡಲ ತೀರದ ಭಾರ್ಗವ' ಎಂದು ಪ್ರಖ್ಯಾತಿ ಪಡೆದ ನಡೆದಾಡುವ ವಿಶ್ವಕೋಶ ಕೋಟ ಶಿವರಾಮ ಕಾರಂತರ ಬದುಕು - ಬರಹಗಳನ್ನು ನೋಡಿದ, ಅರ್ಥೈಸಿದ ಲೇಖನಗಳ ಗುಚ್ಛವೇ ಬಹುಮುಖಿ. ಕನ್ನಡ ನಾಡಿನ ಹೆಸರಾಂತ ವಿದ್ವಾಂಸರುಗಳ ಮತ್ತು ಶಿವರಾಮ ಕಾರಂತರ ನಿಕಟವರ್ತಿಗಳ ಅತ್ಯುಪಯುಕ್ತ ಲೇಖನಗಳನ್ನು ಬಹುಮುಖಿ ಒಳಗೊಂಡು ಒಂದು ಆಕರ ಗ್ರಂಥವಾಗಿದೆ. ಬಹುಮುಖಿಯ ಪ್ರಸ್ತಾವನೆಯಲ್ಲಿ ಸಂಪಾದಕರಾದ ಮನು ಬಳಿಗಾರ್ ಅವರು ಕಾರಂತರೊಂದಿಗಿನ ಒಡನಾಟವನ್ನು, ಅವರ ಅಗಾಧ ವ್ಯಕ್ತಿತ್ವವನ್ನು ಮತ್ತು ಕೃತಿಯ ಬಗ್ಗೆ ವಿವರಿಸಿದ್ದಾರೆ. "ಎರಡು ದಿನಗಳ ಕಾರಂತರೊಡನೆಯ ಒಡನಾಟ ನನ್ನ ಸುತ್ತ ಯಾವುದೋ ಒಂದು ಥರದ ಪ್ರಭಾವಳಿಯನ್ನೇ ನಿರ್ಮಿಸಿತ್ತು. ಇದು ಸುಮಾರು ಒಂದೆರಡು ತಿಂಗಳೂ ಹಾಗೆಯೇ ಉಳಿದುಕೊಂಡಿತ್ತು. ಅವರಾಡಿದ ನಿಷ್ಠುರ ಮಾತುಗಳು, ಹಾವಭಾವ, ಸ್ಪಷ್ಟ ಅಭಿಪ್ರಾಯಗಳು, ಅದಮ್ಯ ಸಾಮಾಜಿಕ ಕಳಕಳಿ, ಅನನ್ಯ ಮಾನವೀಯತೆಯ ನಡೆ ನನ್ನನ್ನು ಹುಚ್ಚನನ್ನಾಗಿಸಿದವು" ಎಂಬ ಸಂಪಾದಕರ ಮಾತುಗಳೇ ಶಿವರಾಮ ಕಾರಂತರನ್ನು ಅಲ್ಪಪ್ರಮಾಣದಲ್ಲಿ ಪರಿಚಯಿಸುತ್ತದೆ.

ಯು.ಆರ್.ಅನಂತಮೂರ್ತಿ ಅವರು ತಮ್ಮ 'ಕಾರಂತರು: ಒಂದು ಸೃಜನಾತ್ಮಕ ಪ್ರತಿಕ್ರಿಯೆ' ಲೇಖನದಲ್ಲಿ ಕಾರಂತರ ಸಾಹಿತ್ಯ ತನ್ನ ಮೇಲಾದ ಪ್ರಭಾವಗಳನ್ನು ವಿವರಿಸುತ್ತ, ಕಾರಂತರ ಸಾಹಿತ್ಯವನ್ನು ವಿಶ್ಲೇಷಿಸಿದ್ದಾರೆ. "ಆಯ್ದು ತಂದ ರಂಜದ ಹೂವನ್ನು ಬಾಳೆನಾರಿನಲ್ಲಿ ಪೋಣಿಸುತ್ತ ಕೂರುವುದೆಂದರೆ ಅತ್ಯಂತ ಖುಷಿ ಕೊಡುತ್ತಿದ್ದ ಹೊತ್ತಿನಲ್ಲೆ ಸೌದೆ ತರಲು ನನ್ನನ್ನು ಹೆಗಲ ಮೇಲೆ ಕೂರಿಸಿಕೊಂಡು ಕಥೆ ಹೇಳುತ್ತ ಹೋಗುತ್ತಿದ್ದ ಅಜ್ಜನೇ ನನ್ನನ್ನು ನಿಷ್ಠುರವಾಗಿ ಹೊಡೆದು ಎಳೆದು ತಂದು ಮೇಷ್ಟ್ರ ಎದುರು ಕೂರಿಸುತ್ತಿದ್ದರು" (ಪು.3) ಎಂಬುದಾಗಿ ಕಾರಂತರ ಸಾಹಿತ್ಯದ ನೆಪದಲ್ಲಿ ಅನಂತಮೂರ್ತಿಯವರು ತಮ್ಮ ಬಾಲ್ಯದ ನೆನಪುಗಳನ್ನು ಬಿಚ್ಚಿಟ್ಟಿದ್ದಾರೆ. ಮುಂದುವರೆದು "ನಾನು ಬರೆಯಲು ಪ್ರಾರಂಭಿಸಿದ ದಿನಗಳಲ್ಲಿ ಕಾರಂತರ ಕೃತಿಗಳು ನನಗೆ ದೀಪವೂ ಆಗಿದ್ದವು. ಕನ್ನಡಿಯೂ ಆಗಿದ್ದುವು. ಅದರ ಬೆಳಕಲ್ಲಿ ನನಗೆ ಬೇಕಾದ್ದನ್ನು ನಾನು ಹುಡುಕಿಕೊಂಡೆ. ಅದರ ಕನ್ನಡಿಯಲ್ಲಿ ಕಾಣಬೇಕೆನ್ನಿಸಿದಂತೆ ಕಾಣಲು ಪ್ರಯತ್ನಿಸಿದ" (ಪು.4) ಎಂದು ಕಾರಂತರ ಸಾಹಿತ್ಯದ ಪ್ರಭಾವ, ಪ್ರೇರಣೆಯನ್ನು ವಿವರಿಸಿದ್ದಾರೆ.

ಮಡಿವಂತ ಪರಿಸರದಲ್ಲಿ ಬೆಳೆದ ಯು.ಆರ್.ಅನಂತಮೂರ್ತಿ ಅವರಿಗೆ ಶಿವರಾಮ ಕಾರಂತರ ಕೃತಿಗಳು ಕ್ರಾಂತಿಕಾರಕವಾದ ಹೆಜ್ಜೆಗಳನ್ನಿಡಲು ಸಹಾಯಕವಾದುದನ್ನು ವಿವರಿಸಲಾಗಿದೆ. ಕಥೆ - ಕಾದಂಬರಿಗಳು ವಾಸ್ತವ ನೆಲೆಯಲ್ಲಿದ್ದಾಗ, ವಾಸ್ತವ ಸ್ಥಿತಿಗತಿಗಳ ವಸ್ತುವನ್ನು ಹೊಂದಿರುತ್ತವೆ. ಶಿವರಾಮ ಕಾರಂತರ

ಕಾದಂಬರಿಗಳು ಸಮಾಜದ ಸ್ಥಿತಿಗತಿಗಳನ್ನು ಅವಲೋಕಿಸುತ್ತಲೇ, ನೈತಿಕತೆಯಿಲ್ಲದೆ ಜರುಗುವ ಘಟನೆಗಳನ್ನು ಖಂಡಿಸುವ ಅಥವಾ ವಿಮರ್ಶಿಸುವ ಕಾರ್ಯವನ್ನು ಮಾಡುತ್ತವೆ. ಈ ಹಿನ್ನೆಲೆಯಿಂದಲೇ ಮರಳಿ ಮಣ್ಣಿಗೆ, ಚೋಮನ ದುಡಿ, ಬೆಟ್ಟದ ಜೀವ, ಮೈಮನಗಳ ಸುಳಿಯಲ್ಲಿ' ಇನ್ನಿತರ ಕಾದಂಬರಿಗಳು ಕಾಂತಿಯುಕ್ತವಾಗಿ ಕಾಣುತ್ತವೆ. ಯು.ಆರ್.ಅನಂತಮೂರ್ತಿಯವರು ಶಿವರಾಮ ಕಾರಂತರ "ಚೋಮನ ದುಡಿ ಅಸ್ಪೃಶ್ಯತೆಯ ಬಗ್ಗೆ ಮಡಿವಂತ ಪರಿಸರದಲ್ಲಿ ಬೆಳೆದ ನನ್ನ ದೃಷ್ಟಿಯನ್ನೇ ಬದಲು ಮಾಡಿಬಿಟ್ಟಿತು" (ಪು. 5) ಎಂದು ಹೇಳಿಕೊಂಡಿದ್ದಾರೆ.

ಕೀರ್ತಿನಾಥ ಕುರ್ತಕೋಟಿ ಅವರು ಕಾರಂತರ ಕಾದಂಬರಿಗಳಲ್ಲಿ ಸಂವೇದನೆಯ ಬೆಳವಣಿಗೆಯನ್ನು ಗುರುತಿಸಿದ್ದಾರೆ. "ಕಾರಂತರ ಇತ್ತೀಚಿನ ಕಾದಂಬರಿಗಳಲ್ಲಿ ಹೆಚ್ಚು ನಿಚ್ಚಳವಾದ ಮೌಲ್ಯದರ್ಶನ ಕಾಣುತ್ತದೆ. ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಬತ್ತದ ತೊರೆ, ಚಿಗುರಿದ ಕನಸು, ಮುಗಿದ ಯುದ್ಧಗಳ ಜೀವನ ಲಂಪಟತೆಯಾಗಲಿ, ಸಮೀಕ್ಷೆ, ಮೊಗಪಡೆದ ಮನ ಮೊದಲಾದ ಕಾದಂಬರಿಗಳ ನಿರುತ್ಸಾಹವಾಗಲಿ ಕಾರಂತರ ಇತ್ತೀಚಿನ ಬರವಣಿಗೆಯಲ್ಲಿ ಕಾಣುವುದಿಲ್ಲ. ಅದರ ಬದಲಾಗಿ ಜೀವನಾಸಕ್ತಿಯನ್ನು ಕಳೆದುಕೊಳ್ಳದೆ, ತಟಸ್ಥ ಚಿತ್ತದಿಂದ ಜೀವನಾನುಭವವನ್ನು ಅಳೆದು, ತೂಗಿ, ಬೆಲೆಗಟ್ಟುವ ಒಂದು ವಿಧಾನವು ಕಾರಂತರ ಈಗಿನ ಕಾದಂಬರಿಗಳಲ್ಲಿ ಕಂಡುಬರುತ್ತದೆ" (ಪು.19) ಎಂದು ಕುರ್ತಕೋಟಿಯವರು ಕಾರಂತರ ಕಾದಂಬರಿಗಳಲ್ಲಿ ಆದ ಬದಲಾವಣೆಗಳನ್ನು ಗುರುತಿಸುತ್ತಾರೆ. 'ಶನೀಶ್ವರನ ನೆರಳಿನಲ್ಲಿ' ಕಾದಂಬರಿಯಲ್ಲಿ ಕಂಡು ಬರುವ ಸಾಮಾಜಿಕ ಘಟನೆಗಳು ಪುನರಾವರ್ತನೆಯಾದರೂ ವ್ಯಕ್ತಿಗತವಾದ ಕೆಲವು ಬೆಲೆಯುಳ್ಳ ಜೀವನಾಂಶಗಳಿವೆ ಎಂದು ವಿಮರ್ಶಕರು ವಿಶ್ಲೇಷಿಸಿದ್ದಾರೆ.

"ಕಾವೇರಮ್ಮನ ಮನಸ್ಸಿನ ಔದಾರ್ಯ, ಪಾಟಾಳಿ ಶಿವಣ್ಣನ ಮನುಷ್ಯ ಸಹನೆಯನ್ನು ಮೀರಿದ ಕಾರುಣ್ಯ, ಪರಮೇಶ್ವರ ಅಡಿಗರ ಕಲೆಯ ನೈಪುಣ್ಯ, ಒಕ್ಕಲು - ಮಕ್ಕಳ ಅಕೃತ್ರಿಮವಾದ ಪ್ರೀತಿ - ಇಂಥ ಮೌಲ್ಯಗಳೂ ಅದೇ ಜೀರ್ಣವಾದ ಜಗತ್ತಿಗೆ ಸೇರಿದವುಗಳಾಗಿವೆ" (ಪು.20) ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಶಿವರಾಮ ಕಾರಂತರ ಇದ್ದರೂ ಚಿಂತೆ, ಸ್ವಪ್ನದ ಹೊಳೆ, ಒಂಟಿದನಿ, ಇನ್ನೊಂದೇ ದಾರಿ ಮತ್ತು ಮೂಕಜ್ಜಿಯ ಕನಸುಗಳು - ಹೀಗೆ ಐದು ಕಾದಂಬರಿಗಳಲ್ಲಿ ಕಂಡುಬರುವ ಸಂವೇದನೆಯ ಬೆಳವಣಿಗೆಯನ್ನು ವಿಮರ್ಶಿಸಿದ್ದಾರೆ. ಇದ್ದರೂ ಚಿಂತೆ ಕಾದಂಬರಿಯನ್ನು ಕುರಿತು "ಇಡೀ ಕಾದಂಬರಿಯ ದೊಡ್ಡ ಗುಣವೆಂದರೆ ಗಣಪತಿ ಹೆಗಡೆಯವರ ಸ್ಥಿತಿಪ್ರಜ್ಞೆ ಇದು ಕಾದಂಬರಿ ಸೃಷ್ಟಿಸಿರುವ ಮಹತ್ವದ ಅನುಭವವಾಗಿದೆಯಲ್ಲದೆ ಅದರ ಮೂಲಕವಾಗಿ ಕಾದಂಬರಿ ಜೀವನದ ಮೂಲವನ್ನು ನಿರ್ವಿಕಾರವಾಗಿ ತೂಗಿ ನೋಡಲು ಸಮರ್ಥವಾಗುತ್ತದೆ" (ಪು.24) ಎಂದು ಕುರ್ತಕೋಟಿಯವರು ವಿಶ್ಲೇಷಿಸಿದ್ದಾರೆ.

'ಒಂಟಿದನಿ' ಕಾದಂಬರಿಯನ್ನು ವಿಶ್ಲೇಷಿಸುತ್ತ ಲೇಖಕರು "ಇಂದಿನ ಬೌದ್ಧಿಕ ಜೀವನದ ಮುಖ್ಯ ಲಕ್ಷಣವಾಗಿರುವ ಮೌಲ್ಯ ಸಂಕರವನ್ನು ಮತ್ತು ಹೃದಯಹೀನತೆಯನ್ನು ಈ ಕಾದಂಬರಿ ಎಳ್ಳಷ್ಟೂ

ಸಿನಿಕತನವಿಲ್ಲದೆ ಪ್ರತಿಪಾದಿಸುತ್ತದೆ" ಎಂದು ಹೇಳಿದ್ದಾರೆ. ಯಶವಂತರಾಯರು, ಗಣಪತಿ ಹೆಗಡೆ ಮತ್ತು ಜಗನ್ನಾಥರಾಯರಂಥ ಪಾತ್ರಗಳ ಬೆಳವಣಿಗೆಯಲ್ಲಿ ಕಾರಂತರ ಸಂವೇದನೆಯ ಬೆಳವಣಿಗೆಯನ್ನು ಕುರ್ತಕೋಟಿ ಅವರು ಗುರುತಿಸಿದ್ದಾರೆ.

ಶಿವರಾಮ ಕಾರಂತರು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ವಿಜ್ಞಾನ, ಬಾಲವಿಜ್ಞಾನ, ಶಿಲ್ಪ, ಕಲೆ, ಚಿತ್ರಕಲೆ, ಕಾದಂಬರಿ, ಕಥೆ ಹೀಗೆ ಕಾರಂತರು ಸ್ಪರ್ಶಿಸದ ಪ್ರಕಾರಗಳಿಲ್ಲ. ಆರು, ಏಳು ಮತ್ತು ಎಂಟನೇ ತರಗತಿಯ ಹೆಣ್ಣು ಮಕ್ಕಳಿಗೇ ಮೀಸಲಾದ ಗೃಹವಿಜ್ಞಾನವನ್ನು ಕಾರಂತರು ಬರೆದಿದ್ದು, ಅದರ ವಿಮರ್ಶಾ ಲೇಖನವೊಂದನ್ನು ಡಾ. ಹಾ.ಮಾ.ನಾಯಕ ಅವರು ಇಲ್ಲಿ ಬರೆದಿದ್ದಾರೆ.

ಕಾರಂತರು ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳನ್ನು ಅತ್ಯಂತ ಆಸ್ಥೆಯಿಂದ ತಿಳಿದವರಾಗಿದ್ದರು. ವಿಷಯಗಳಿಗೆ ಸಂಬಂಧಿಸಿದಂತೆ ನಿಖರತೆ ಮೊದಲ ಆದ್ಯತೆ ಕಾರಂತರದ್ದು. "ಕಾರಂತರು ಆಧುನಿಕ ಶಿಕ್ಷಣ ಕ್ರಮದ ಕಟ್ಟಾ ವಿರೋಧಿಗಳಲ್ಲಿ ಒಬ್ಬರು. ಅವರು ಬಹಳ ಕಾಲ ಇಂಥ ಕ್ರಮದಲ್ಲಿ ಸಿಕ್ಕಿಕೊಂಡವರಲ್ಲಿ ನಿಜವಾದ ವಜ್ರಗಳನ್ನು ಹಾಳು ಮಾಡಿ ಕೃತಕ ವಜ್ರಗಳನ್ನು ಸೃಷ್ಟಿಮಾಡುವ ನಮ್ಮ ಶಾಲೆಗಳ ವಿಷಯದಲ್ಲಿ ಅವರಿಗೆ ಸಹಾನುಭೂತಿ ಇಲ್ಲ. ಶಿಕ್ಷಣ ಪರಿಸರಕ್ಕೆ ಅನುಗುಣವಾಗಿರಬೇಕು. ಕ್ರಿಯಾತ್ಮಕವಾಗಿರಬೇಕು ಎನ್ನುವವರು ಅವರು" (ಪು.42) ಎಂದು ಹಾ.ಮಾ.ನಾಯಕ ಕಾರಂತರ ಮನಸ್ಥಿತಿ-ಅಪೇಕ್ಷೆಯನ್ನು ನೆನಪಿಸಿಕೊಂಡಿದ್ದಾರೆ. ಕಾರಂತರು ಈ ನೆಲೆಯಲ್ಲಿ ಪುತ್ತೂರಿನ 'ಬಾಲವನ'ದಲ್ಲಿ ಪ್ರಯೋಗ ಮಾಡಿ ತೋರಿಸಿದ್ದಾರೆ. ಆದರೆ ಇಂದಿನ ಶಿಕ್ಷಣ ಕ್ಷೇತ್ರ ಸಂಸ್ಥೆಗಳು ಭೌತಿಕವಾಗಿ ಮುಂದುವರಿಯುತ್ತಿವೆಯೇ ವಿನಃ ಬೌದ್ಧಿಕತೆಗೆ ಒತ್ತು ನೀಡುತ್ತಿಲ್ಲ ಎನ್ನುವುದು ವಿಷಾದದ ಸಂಗತಿ.

"ಎಲ್ಲ ವ್ಯವಸ್ಥೆಗಳಂತೆ ಶಿಕ್ಷಣ ವ್ಯವಸ್ಥೆಯೂ ಸರಕಾರದ ಕೃಪಾಶ್ರಯದಲ್ಲಿ ಕೆಂಪು ಪಟ್ಟಿಗಳೊಳಗಿನ ನೀತಿ ನಿಯಮಾವಳಿಗಳಲ್ಲಿ, ಅಧಿಕಾರ - ಸಂಭಾವನೆ ಮೊದಲಾದುವನ್ನು ಅನುಸರಿಸುವುದರಿಂದ ಪಠ್ಯಪುಸ್ತಕಗಳು ಅರ್ಥಹೀನವಾಗಿವೆ; ಸಹಜತೆಯ ಸ್ಥಾನವನ್ನು ಕೃತಕತೆ ಆಕ್ರಮಿಸಿದೆ. ಪಠ್ಯಪುಸ್ತಕಗಳ ನಿರ್ಮಾಣ ಇಂದು ಕೈಗಾರಿಕೆಯಾಗಿದೆಯೇ ವಿನಃ ಕಲೆಯಾಗಿಲ್ಲ. ಮುದ್ರಣ ವಿನ್ಯಾಸಗಳಲ್ಲಿ ಚೆಲುವಿನ ಕಲ್ಪನೆಗೆ ಆಸ್ಪದವಿಲ್ಲ. ಅತ್ಯಂತ ಕಡಿಮೆ ದರದಲ್ಲಿ ಯಾರು ಚಿತ್ರ ಬರೆಯುತ್ತಾರೆ ಎಂಬುದರ ಮೇಲೆ ಪಠ್ಯಪುಸ್ತಕದ ಕಲೆಗಾರಿಕೆ ನಿಂತಿರುತ್ತದೆ. ನಿಜವಾದ ಕಲಾವಿದರ ಸೇವೆ ಬೇಡ" (ಪು.43) ಎಂದು ಹಾ.ಮಾ. ನಾಯಕ ಅವರು ವಿಶ್ಲೇಷಿಸಿದ್ದಾರೆ. ಇದಕ್ಕೆ ತಾಜಾ ಉದಾಹರಣೆಯೆಂದರೆ ಕರ್ನಾಟಕ ರಾಜ್ಯ ಸರ್ಕಾರ ಇತ್ತೀಚೆಗೆ ಬರಗೂರು ರಾಮಚಂದ್ರಪ್ಪ ಅವರ ಮುಂದಾಳತ್ವದಲ್ಲಿ ಪ್ರಕಟಿಸಿದ ಪಠ್ಯಪುಸ್ತಕಗಳು. ಅತ್ಯಂತ ಕಳಪೆ ಮಟ್ಟದ ಮುದ್ರಣ, ಅಕ್ಷರ ದೋಷ, ವಿಷಯ ದೋಷಗಳಿಂದ ಕೂಡಿದ ಪಠ್ಯಪುಸ್ತಕಗಳನ್ನು ಸರ್ಕಾರವೇ ವಿತರಿಸಿದರೆ ಶಿಕ್ಷಣ ಗುಣಮಟ್ಟ, ಬೌದ್ಧಿಕ ಗುಣಮಟ್ಟ ಸುಧಾರಿಸಲು ಸಾಧ್ಯವಿಲ್ಲ. 1939ರಲ್ಲಿ ಪ್ರಕಟಿಸಿದ ಗೃಹವಿಜ್ಞಾನದಲ್ಲಿ ವಿಜ್ಞಾನವನ್ನು ದೈನಂದಿನ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂದು ಮಹತ್ವದ ವಿಷಯಗಳಿದ್ದವು.

ಆಹಾರ, ಆಹಾರದ ಗುಣಮಟ್ಟ ಅಡುಗೆಯ ವಿಧಾನ, ಶುಚಿತ್ವ ಹೀಗೆ ಮನೆಯ ಎಲ್ಲಾ ಆಗುಹೋಗುಗಳ ಬಗೆಗಿನ ಸಂಪೂರ್ಣ ಮಾಹಿತಿಗಳನ್ನು ಮನದಟ್ಟಾಗುವ ರೀತಿಯಲ್ಲಿ ಕೊಟ್ಟಿರುವುದೇ ಗೃಹವಿಜ್ಞಾನದ ಹಿರಿಮೆ.

ಕಾರಂತರ ಯೋಗ್ಯತೆ, ವೈಶಿಷ್ಟ್ಯ, ಆಸಕ್ತಿಗಳ ವಿಸ್ತಾರ, ಜೀವನಾನುಭವ, ಜೀವನದೃಷ್ಟಿ, ಕಲೆಗಾರಿಕೆ ಇತ್ಯಾದಿಗಳನ್ನು ಗುರುತಿಸಬೇಕಾದರೆ ಅವರ ಎಲ್ಲ ಕಾದಂಬರಿಗಳನ್ನೂ ಒಟ್ಟಿಗೆ ನೋಡಬೇಕಾಗುತ್ತದೆ. ಒಂದೊಂದೇ ಕೃತಿಗಳನ್ನು ಪ್ರತ್ಯೇಕವಾಗಿ ನೋಡಿದಾಗ ಅವು ಒಳ್ಳೆಯ ಕೃತಿಗಳೆಂದು ಅನಿಸಿದರೂ, ಮೇರುಕೃತಿಗಳೆಂದು ಅನಿಸುವುದಿಲ್ಲ (ಪು.49) ಎಂಬುದಾಗಿ ಕಾರಂತರ ಕಾದಂಬರಿಗಳ ಬಗೆಗೆ ಡಾ.ಗಿರಡ್ಡಿ ಗೋವಿಂದರಾಜ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹಾಗೆಯೇ ಅನೇಕ ಲೇಖಕರಲ್ಲಿ ಸಾಹಿತ್ಯ ಕೃಷಿ ಹೆಚ್ಚಾಗುತ್ತಲೇ ವಿಷಯ, ಆಲೋಚನೆ ಪುನರಾವರ್ತನೆಯಾಗುತ್ತಿರುತ್ತದೆ. ಆದರೆ ಕಾರಂತರಲ್ಲಿ ಆಸಕ್ತಿ, ಜ್ಞಾನ ವಿಪುಲವಾಗಿರುವುದರಿಂದ ಮತ್ತು ಜೀವನಾನುಭವ ಸಮೃದ್ಧವಾಗಿರುವುದರಿಂದ ಪುನರಾವರ್ತನೆಗೆ ಅವಕಾಶವಿಲ್ಲ ಎಂಬುದಾಗಿ ದೃಢೀಕರಿಸುತ್ತಾರೆ. ಕಾರಂತರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ದೊರಕಿಸಿಕೊಟ್ಟು ಮೂಕಜ್ಜಿಯ ಕನಸು ಕಾದಂಬರಿಯ ಆಳ – ಒಳಹೊರಗನ್ನು ಗಿರಡ್ಡಿಯವರು ಇಲ್ಲಿ ವಿಮರ್ಶಿಸಿದ್ದಾರೆ. “ಮೂಕಜ್ಜಿಗೆ ವಿಶಿಷ್ಟವಾದೊಂದು ಅತೀಂದ್ರಿಯ ಶಕ್ತಿ ಇದೆ. ಅವಳ ಒಳಗಣ್ಣಿಗೆ ಮಾನವ ಕುಲದ ಭೂತ - ಭವಿಷ್ಯಗಳ ಕಥೆ ಕಾಣುತ್ತದೆ. ಅವಳ ಒಳಗಿವಿಗೆ ಸಾವಿರ ವರ್ಷಗಳ ಹಿಂದಿನ ದನಿ ಕೇಳಿಸುತ್ತವೆ. ಪ್ರಾಚೀನ ಕಾಲದ ಎಲುವನ್ನೋ, ಮೂರ್ತಿಯನ್ನೋ, ಬೂದಿಯನ್ನೋ ಮುಟ್ಟಿದಾಗ ಅವುಗಳಿಗೆ ಸಂಬಂಧಿಸಿದ ಇತಿಹಾಸವೆಲ್ಲ ಅವಳೆದುರು ನಿಲ್ಲುತ್ತದೆ. ಹಿಂದಿನ ಪರಿಸರದಲ್ಲಿ ನಡೆದಾಡುತ್ತಿದ್ದಂತೆ ಕಾಲ - ದೇಶಗಳನ್ನು ದಾಟಿ ಅವಳ ಪ್ರಜ್ಞೆ ಹಿಂದಕ್ಕೆ ಹೋಗುತ್ತದೆ” (ಪು.56) ಎಂಬುದಾಗಿ ಗಿರಡ್ಡಿಯವರು ಮೂಕಜ್ಜಿಯ ಕನಸುಗಳು ಕಾದಂಬರಿಯನ್ನು ವಿಶ್ಲೇಷಿಸಿದ್ದಾರೆ. ಬಾಲವಿಧವೆಯಾದ ಮೂಕಜ್ಜಿಯ ಜೀವನದಲ್ಲಿ ಆಗುವ ಸ್ಥಿತ್ಯಂತರಗಳನ್ನು, ಮಾನವೀಯತೆಯ ಗುಣಗಳನ್ನು ತುಂಬಿಕೊಂಡಿರುವ ಕಾದಂಬರಿ ಅವಳ ಎಲ್ಲ ಅವಸ್ಥಾಂತರಗಳನ್ನು ಹೊರಗೆಡಹುವಲ್ಲಿ ಯಶಸ್ವಿಯಾಗುತ್ತದೆ. ಸಮಾಜದ ಆಗುಹೋಗುಗಳಿಗೆ ಪ್ರತಿಕ್ರಿಯಿಸುವ, ತನ್ನಿಂದಾದಷ್ಟು ಸಹಾಯ ಮಾಡುವ ಮನೋಧರ್ಮದಿಂದಾಗಿಯೇ ಮೂಕಜ್ಜಿಯ ಪಾತ್ರಕ್ಕೆ ಗಟ್ಟಿತನ ಬಂದಿದೆ ಎಂದರೆ ತಪ್ಪಾಗಲಾರದು. ಈ ಹಿನ್ನೆಲೆಯಲ್ಲಿಯೇ ವಿಮರ್ಶಿಸಿರುವ ಗಿರಡ್ಡಿ ಗೋವಿಂದರಾಜ ಅವರು “ಕಾದಂಬರಿಯ ತೆಕ್ಕೆಗೊಗ್ಗದ ಅಗಾಧ ಪ್ರಮಾಣದ ಹೊಸ ವಸ್ತುವೊಂದನ್ನು ತನ್ನ ಸ್ವರೂಪದಲ್ಲಿ ಅಳವಡಿಸಿಕೊಳ್ಳುವ ಯತ್ನದಲ್ಲಿ ಅದರ ಸ್ವರೂಪವನ್ನು ಕೂಡ ವಿಸ್ತರಿಸಲು ಯತ್ನಿಸಿರುವ ಸ್ವೋಪಜ್ಞ ಕೃತಿ” (ಪು.64) ಎಂದು ಹೇಳಿದ್ದಾರೆ.

ಢೋಂಗಿ ಬಾಬಾಗಳ, ಕುರುಡು ಭಕ್ತಿಯ ಬಗೆಗಿನ ವೈಚಾರಿಕ ‘ಜಗದೋದ್ಧಾರ ನಾ' ಎಂಬ ಕಾರಂತರ ಕಾದಂಬರಿಯನ್ನು ಬಹುಮುಖಿ ಸಂಪಾದಕರಾದ ಮನು ಬಳಿಗಾರ್ ಅವರು ವಿಮರ್ಶಿಸಿದ್ದಾರೆ. ಬಾಲ್ಯದಿಂದಲೇ ವೈಚಾರಿಕತೆಗೆ, ವಿಜ್ಞಾನಕ್ಕೆ ಹೆಚ್ಚು ಒತ್ತು ಕೊಡುವ, ಮೂಢನಂಬಿಕೆಗಳನ್ನು, ಮೌಢ್ಯತೆಯನ್ನು ತಿರಸ್ಕರಿಸುವ ಮನೋಭಾವವನ್ನು ಕಾರಂತರು ಹೊಂದಿದ್ದರು ಎಂಬುದಕ್ಕೆ ಅವರ ಈ ಕಾದಂಬರಿ ಸಾಕ್ಷಿಯಾಗಿದೆ. 1960ರಲ್ಲಿ

ಪ್ರಕಟವಾದ ಕಾದಂಬರಿಯ ಮೂಲಕ ಕಾರಂತರು ವೈಚಾರಿಕವಲ್ಲದ ವಿಷಯಗಳನ್ನು ಸಾರಾಸಗಟಾಗಿ ತಿರಸ್ಕರಿಸುವಂತೆ ಜಾಗೃತಿ ಮೂಡಿಸುತ್ತಿದ್ದರು. ಕಾರಂತರ ನಿಷ್ಠುರತನದ ಬಗ್ಗೆ ಲೇಖಕರು ಲೇಖನದಲ್ಲಿ ಉದಾಹರಿಸಿದ್ದಾರೆ. "ಹೀಗೆ (ದೇವರು) ಹುಟ್ಟಿ ಬೆಳೆದು, ಬಲಿತು ದುಷ್ಟ ಸಂಹಾರ ಮಾಡುವ ತನಕ ಆರ್ತರ ಗತಿಯೇನು? ರಾಕ್ಷಸರ ಉಪಟಳದಿಂದ ಅವರು ಬದುಕಿದ್ದು ಹೇಗೆ? ವಿಷ್ಣು ಅವತರಿಸುವ ತನಕವೂ ಕಾದಿರಬಹುದಾದ ತಾಳ್ಮೆಯುಳ್ಳ ಅವರು ಇನ್ನೂ ಹತ್ತು ವರ್ಷಗಳ ಕಾಲ ಜಾಸ್ತಿ ಕಾದಿದ್ದರೆ, ವಯೋಧರ್ಮಕ್ಕೆ ಸರಿಯಾಗಿ ತಾವೂ ಸಾಯುತ್ತಿದ್ದರು, ಆ ದುಷ್ಟರೂ ಸಾಯುತ್ತಿದ್ದರು. ಆಗ ವಿಷ್ಣುವಿಗೂ ತಾಪತ್ರಯವಿರುತ್ತಿರಲಿಲ್ಲ" (ಪು.67) ಎಂದು ವ್ಯಾಖ್ಯಾನಿಸಿರುವುದನ್ನು, ವಾಸ್ತವ ಸಂಗತಿಯನ್ನು ಲೇಖಕರು ಉಲ್ಲೇಖಿಸಿದ್ದಾರೆ. ಎಲ್ಲವೂ ದೈವದಿಂದಲೇ - ದೇವರಿಂದಲೇ ನಡೆಯುತ್ತಿದ್ದರೆ ಜಗತ್ತು ಅನೇಕ ರೀತಿಯ ಕಹಿ ಘಟನೆಗಳಿಗೆ, ಅತ್ಯಾಚಾರ, ಅನಾಚಾರಗಳಿಗೆ ಯಾಕೆ ಸಾಕ್ಷಿಯಾಗುತ್ತದೆ ಎಂಬುದೇ ಕಾರಂತರ ಸಹಜ ಪ್ರಶ್ನೆ. ಅರುವತ್ತರ ದಶಕದಲ್ಲಿ ಕಾರಂತರು ಎತ್ತಿರುವ ಪ್ರಶ್ನೆಗಳು ಇಂದಿಗೂ ಮುಂದುವರೆದಿರುವುದನ್ನು ನಾವು ಗಮನಿಸಬಹುದು. ನೂರಾರು ಕಪಟ, ಡೋಂಗಿ ದೇವಮಾನವರೆಂದು ಕರೆಯಲ್ಪಡುವ ಧೂರ್ತರು ಕೋಟ್ಯಾಂತರ ಹಣ ಗಳಿಸಿ ನೂರಾರು ಎಕರೆ ಭೂಮಿಯಲ್ಲಿ ಬಂಗಲೆಗಳನ್ನು ಕಟ್ಟಿ ವೈಭವೋಪೇತ ಜೀವನ ನಡೆಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಅತ್ಯಾಚಾರ-ಅನಾಚಾರಗಳನ್ನು ಮಾಡಿ ರಾಜಕಾರಣಿಗಳ ಸಖ್ಯ ಬೆಳೆಸಿಕೊಂಡು ದೇವಮಾನವರಂತೆ ಅಭಯ ನೀಡುತ್ತಿರುವುದು ಅತ್ಯಂತ ಖಂಡನೀಯ. ಈ ಹಿನ್ನೆಲೆಯಲ್ಲಿ ಶಿವರಾಮ ಕಾರಂತರ ಕಾದಂಬರಿ ಜಗದೋದ್ಧಾರ ನಾ ಮಹತ್ವವೆನಿಸುತ್ತದೆ.

ಡಾ. ಎಂ.ಎಸ್. ಪಾಟೀಲ ಅವರು ಕಾರಂತರ ಪ್ರತಿಭೆ, ಜ್ಞಾನ, ಮನೋಭಾವ ಮತ್ತು ಆಶಯಗಳ ಬಗೆಗೆ 'ಕಾರಂತರ ಕನಸುಗಳು' ಲೇಖನದಲ್ಲಿ ಚರ್ಚಿಸಿದ್ದಾರೆ. ಕಾರಂತರು ಹುಟ್ಟಾ ಚಿಂತನಶೀಲರು. ಅವರು ಬದುಕಿನುದ್ದಕ್ಕೂ ಚಿಂತಿಸುತ್ತಾರೆಂಬುದನ್ನು ಅವರ ಸಾಹಿತ್ಯ ನಮಗೆ ಕಲಿಸಿದ ಪಾಠ ಎಂಬುದಾಗಿ ಪಾಟೀಲರು ಹೇಳುತ್ತಾರೆ. ಪಾಟೀಲರ ಪ್ರಕಾರ ಕಾರಂತರು ಲೋಕವ್ಯವಹಾರದ ಕುರಿತು ಮಾತನಾಡಿದರೆ ಅದು ಕಲಾಕೃತಿ; ಅವರ ಕೃತಿಗಳು ಲೋಕ ವ್ಯವಹಾರಕ್ಕಿಂತ ಬೇರೆಯಾಗಿಲ್ಲ. "ಕಾರಂತರ ಕಾದಂಬರಿಗಳಲ್ಲಿ ಬಹುಪಾತ್ರಗಳು ಮರಳಿ ತನ್ನ ಸ್ಥಾನಕ್ಕೆ ಬಂದು ಸೇರಿಕೊಳ್ಳುತ್ತವೆ. ಅದರ ಕಲಾಮಾಧ್ಯಮದ ವೈಶಿಷ್ಟ್ಯವೇ ಇದು. ಒಟ್ಟಿನಲ್ಲಿ ಕಲಾವಂತರು ವಿರಳ. ಮಹಾನ್ ಜೀವಿಗಳು ವಿರಳ. ಮಹಾನ್ ಜೀವಿಗಳು ಕಲಾವಂತರಾಗಿರುವುದು ತೀರ ವಿರಳ. ಶಿವರಾಮ ಕಾರಂತರು ಈ ತೀರ ವಿರಳದ ಪಂಕ್ತಿಗೆ ಸೇರಿದ್ದಾರೆ" (ಪು. 85).

ಕನ್ನಡ ನಾಡು ಕಂಡ ಅತ್ಯಂತ ವಿರಳ ಬಹುಮುಖ ಪ್ರತಿಭೆ ಎಂದರೆ ಶಿವರಾಮ ಕಾರಂತ, ಶಿವರಾಮ ಕಾರಂತರು ಕಾದಂಬರಿ, ನಾಟಕ, ವಿಜ್ಞಾನ ಸಾಹಿತ್ಯ, ಕಲೆ, ರಾಜಕೀಯ, ಶಿಕ್ಷಣ ಹೀಗೆ ಎಲ್ಲ ಪ್ರಕಾರಗಳಲ್ಲೂ ಕೃಷಿ ಮಾಡಿ ಸೈ ಎನಿಸಿಕೊಂಡವರು. ಡಾ.ಶಂಕರ ಮೊಕಾಶಿ ಪುಣೇಕರ ಅವರು ಕಾರಂತರ ಪ್ರತಿಭೆಯ ಬಗ್ಗೆ

ವಿವರಿಸುತ್ತಾ "ಮಕ್ಕಳ ಮನಸ್ಸು ಉಲ್ಲಾಸಗೊಳ್ಳುವಂತೆ ಮಾಡುವ ಕಲೆ ಕಾರಂತರಲ್ಲಿ ಇದ್ದಂತೆ ಯಾರಲ್ಲಿದ್ದುದು ನನಗಂತೂ ಕಂಡುಬರಲಿಲ್ಲ. ಸಮಾಜದಲ್ಲಿ ವಾಗ್ಮಿಗಳು ಕಡಿಮೆ ಇಲ್ಲ. ಆದರೆ ತಮ್ಮ ಶ್ರೋತೃವೃಂದದ ಜಾಯಮಾನ ನೋಡಿ ಮೋಡಿ ಮಾಡುವ ಕಲೆ ಕಾರಂತರಿಗೆ ಸಾಧಿಸಿತ್ತು" (ಪು.88) ಎಂದು ಹೇಳುತ್ತಾರೆ. ಮಕ್ಕಳ ಮನೋಸ್ಥಿತಿಯನ್ನು ಕಾರಂತರ ಹಾಗೆ ಅರಿತವರು ವಿರಳವೆಂದು ಪುಣೇಕರ ಅವರು ಅಭಿಪ್ರಾಯಪಡುತ್ತಾರೆ. ಕಾರಂತರ 'ಬಿತ್ತಿದ ಬೆಳೆ' ನಾಟಕವನ್ನು ವಿಶ್ಲೇಷಿಸಿರುವ ಪುಣೇಕರ ಅವರು "ಬಿತ್ತಿದ ಬೆಳೆ ನಾಟಕವಾದರೂ ಹೆಸರಿಗೆ ಮಾತ್ರ ನಾಟಕ ಸಂವಾದದ ಚಾತುರ್ಯ ಬೆಳೆಸಿಕೊಳ್ಳುವುದಷ್ಟೇ ನಿಜವಾಗಿಯೂ ಅದು ನಾಟಕ ರೂಪದಲ್ಲಿ ಬರೆದ ಕಾದಂಬರಿ" (ಪು.89) ಎಂದು ಹೇಳಿದ್ದಾರೆ. ಯುದ್ಧದ ಹಿನ್ನೆಲೆಯನ್ನು ಹೊಂದಿರುವ ಬಿತ್ತಿದ ಬೆಳೆ ನಾಟಕ ರಂಗಭೂಮಿಯಲ್ಲಿ ಪ್ರದರ್ಶನ ಕಾಣಲಿಲ್ಲ. ಗಂಭೀರ ನಾಟಕವಾದ ಬಿತ್ತಿದ ಬೆಳೆ ರಂಗಭೂಮಿಯಲ್ಲಿ ಪ್ರದರ್ಶಿತವಾಗಬೇಕಿತ್ತು ಎಂದು ಆಶಯ ವ್ಯಕ್ತಪಡಿಸಿದ್ದಾರೆ ಲೇಖಕರು.

ಶಿವರಾಮ ಕಾರಂತರ 'ಗರ್ಭಗುಡಿ' ನಾಟಕವನ್ನು ಕುರಿತು ಬಿ.ವಿ.ಗುಂಜೆಟ್ಟಿ ಅವರು ವಿಮರ್ಶಾ ಲೇಖನವನ್ನು ಬರೆದಿದ್ದಾರೆ. "ಗರ್ಭಗುಡಿ ನಾಟಕ ದೇವಾಲಯದ ಗರ್ಭವನ್ನು ಭೇದಿಸಿ ತೋರುವಂತೆ ಧರ್ಮದ ಆಂತರ್ಯವನ್ನು ಭೇದಿಸಿ ತೋರುತ್ತದೆ. ಈ ನಾಟಕವನ್ನು ಅಸ್ಪೃಶ್ಯತೆಯ ಸಮಸ್ಯೆ, ತೀರ್ಥಕ್ಷೇತ್ರದ ವ್ಯಾಪಾರಿಗಳ ಮನೋವೃತ್ತಿ, ಪುಂಡರ ಸಂಕುಚಿತ ಬುದ್ಧಿ, ಕ್ಷೇತ್ರದ ಪಾರು ಪತ್ಯೆಗಾರರ ದರ್ಪಯುಕ್ತ ಭೋಗಜೀವನ, ಶ್ರೀ ಸ್ವಾಮಿಗಳ ಸ್ವಾರ್ಥ ಹಾಗೆಯೇ ಕ್ಷೇತ್ರಕ್ಕೆ ಬರುವ ಭಕ್ತರ ಅಂಧಶ್ರದ್ಧೆ, ಅಜ್ಞಾನ, ಶೋಚನೀಯ ಸ್ಥಿತಿಗತಿ, ಮೂಲ ವಿಗ್ರಹಕ್ಕೆ ಆಭರಣವನ್ನಿಟ್ಟು ಮೆರೆಯುವ ಅಸಂಸ್ಕೃತ ದೃಷ್ಟಿ – ಇವೇ ಮುಂತಾದ ವಿಷಯಗಳ

ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಕಾರಂತರ ಗರುಡು ದೃಷ್ಟಿ ಲಯ ಅನುಭವ ನಮಗಾಗುತ್ತದೆ" (ಪು.94) ಎಂದು ಗುಂಜೆಟ್ಟಿಯವರು ನಾಟಕದ ಆಶಯ, ವಸ್ತುವನ್ನು ಕುರಿತು ವಿಮರ್ಶಿಸಿದ್ದಾರೆ. ಈ ರೀತಿಯ ವಸ್ತುಗಳನ್ನು ಒಳಗೊಂಡ ಕಾರಂತರ ಕಾದಂಬರಿ, ನಾಟಕಗಳು ಜನಸಾಮಾನ್ಯರಲ್ಲಿರುವ ಮೂಢನಂಬಿಕೆ, ಅಂಧಶ್ರದ್ಧೆಯನ್ನು ಹೋಗಲಾಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಜನಸಾಮಾನ್ಯರಲ್ಲಿ, ಶಿಕ್ಷಣ ಪಡೆದವರಲ್ಲಿ ಇಂದಿಗೂ ಈ ರೀತಿಯ ಮನೋಸ್ಥಿತಿ ಇರುವುದನ್ನು ಪ್ರಸ್ತುತ ಸಮಾಜದಲ್ಲೂ ಕಾಣಬಹುದಾಗಿದೆ.

ಈ ಮೊದಲು ಪ್ರಸ್ತಾಪಿಸಿದಂತೆ ಶಿವರಾಮ ಕಾರಂತ ಅವರು ಸಾಹಿತ್ಯ ಕೃಷಿ ಮಾಡದ ಕ್ಷೇತ್ರಗಳಿಲ್ಲ. ಅಷ್ಟರಮಟ್ಟಿಗೆ ಕಾರಂತರು ಸಕಲಕಲಾವಲ್ಲಭರು. ಮೃತ್ಯುಂಜಯ ಹೊರಕೇರಿ ಅವರು ಕಾರಂತರ ಸಾಹಿತ್ಯ ಕೃಷಿ ಕುರಿತು "ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ.ಶಿವರಾಮ ಕಾರಂತರು ಕನ್ನಡದಲ್ಲಿ ಕೃಷಿ ಮಾಡದೇ ಬಿಡದ ವಿಷಯಗಳಿಲ್ಲ. ಆಡು ಮುಟ್ಟದ ಸೊಪ್ಪಿಲ್ಲ; ಕಾರಂತರು ಬರೆಯದ ವಿಷಯವಿಲ್ಲವೆಂದಾದರೂ ಆದೀತು. ನಮ್ಮ ಜಾನಪದ ಕಲೆಗಳಲ್ಲಿ ಕರಾವಳಿ ಭಾಗದ ಯಕ್ಷಗಾನವೂ ಪ್ರಮುಖವಾದುದು. ಯಕ್ಷಗಾನಕ್ಕೆ ಹೊಸ

ಸ್ವರೂಪ ನೀಡಿ ಅದನ್ನು ಅಂತರರಾಷ್ಟ್ರೀಯ ಮಟ್ಟಕ್ಕೊಯ್ದು ವಿಶ್ವಕ್ಕೆ ಪರಿಚಯಿಸಿ, ಪ್ರಸಾರಾಂಗ್ಯೆದ ಕೀರ್ತಿ ಕಾರಂತರಿಗಿದೆ" (ಪು.98) ಎಂದು ಕೊಂಡಾಡಿದ್ದಾರೆ. ಮಕ್ಕಳ ಶಿಕ್ಷಣದಲ್ಲಿ ಪ್ರಯೋಗ ಮಾಡಿದಂತೆಯೇ ಯಕ್ಷಗಾನ ಕಲೆಗೆ ಸಂಬಂಧಿಸಿದಂತೆ ಕಾರಂತರು ಪ್ರಯೋಗ-ಸಂಶೋಧನೆ ಮಾಡಿ ಸೈ ಎನಿಸಿಕೊಂಡವರು. ಶಿವರಾಮ ಕಾರಂತ ಒಬ್ಬ ಸೃಜನಶೀಲ ಸಾಹಿತಿ, ವಿಮರ್ಶಕ, ಕಲಾರಾಧಕರೆಂಬುದಕ್ಕಿಂತ ಹೆಚ್ಚಾಗಿ ಅವರೊಬ್ಬ ಸಂಶೋಧಕರೆಂದೇ ಅರ್ಥವಾಗುವುದನ್ನು ಗಮನಿಸಬೇಕೆಂದು ಸಂಗಮೇಶ ಸವದತ್ತಿಮಠ ಅವರು ಅಭಿಪ್ರಾಯ ಪಡುತ್ತಾರೆ (ಪು.113).

"ಕೂಸಿನ ಮುಗ್ಧತೆ, ಸಂಶೋಧಕನ ಬೌದ್ಧಿಕತೆ, ವಿಮರ್ಶಕನ ವೈಚಾರಿಕತೆ, ಸಾಹಿತಿಯ ಸಹೃದಯತೆ, ಕಲಾವಿದನ ಸೂಕ್ಷ್ಮತೆ, ವಿಜ್ಞಾನಿಯ ಚಿಕಿತ್ಸಕ ಬುದ್ಧಿ, ಸಹೃದಯನ ಸೌಂದರ್ಯ ಪ್ರಜ್ಞೆ ಎಲ್ಲವೂ ಕೇವಲ ಮೇಳೈಸಿದಂತೆ ಆಗಿವೆ" (ಪು. 113-114) ಎಂದು ಲೇಖಕರು ಕಾರಂತರ ಬಹುಮುಖರನ್ನು ಕುರಿತು ವಿಶ್ಲೇಷಿಸಿದ್ದಾರೆ. ಸಂಶೋಧನಾಮುಖಿ ಚಿಂತನೆಯ ಕಾರಂತರು ಮೂಲ ಜಾನಪದ ಕತೆಗಳನ್ನು ರೂಪಾಂತರಿಸುವುದನ್ನು ಖಂಡಿಸುತ್ತಾರೆ. ಉದಾ: ಚಂದ್ರಶೇಖರ ಕಂಬಾರರ 'ಜೋಕುಮಾರ ಸ್ವಾಮಿ' ನಾಟಕ ಇಡೀ ಮೂಲವನ್ನೇ ತಿರುಚಿ 'ಜಮೀನುದಾರ ಮತ್ತು ರೈತ'ನ ಸಮಸ್ಯೆಯ ಕಡೆಗೆ ಎಳೆದುದನ್ನು ಕಾರಂತರು ಖಂಡಿಸಿರುವುದನ್ನು ಲೇಖಕರು ಉಲ್ಲೇಖಿಸಿದ್ದಾರೆ.

ಬಹುಮುಖಿ ಕಾರಂತರ ಜೀವನವನ್ನು, ಸಾಹಿತ್ಯವನ್ನು, ಸಂಶೋಧನೆಯನ್ನು ಅನಾವರಣ ಮಾಡಿದೆ ಎಂದರೆ ತಪ್ಪಾಗಲಾರದು. ಕಾರಂತರ ಬಹುತೇಕ ಕೃತಿಗಳನ್ನು ವಿಮರ್ಶಿಸಿರುವ ಸಂಪುಟ ಇದು. ಮಾಲಿನಿ ಮಲ್ಯ ಅವರ 'ಕಾರಂತರ ಕೊನೆಯ ದಿನಗಳು ಲೇಖನ ಕಣ್ಣಿಗೆ ಕಟ್ಟಿದ ಹಾಗಿದೆ. ಶಿವರಾಮ ಕಾರಂತರ ಕ್ರಿಯಾಶೀಲತೆ, ಉತ್ಸುಕತೆ ಮತ್ತು ಸಮೀಪಿಸುತ್ತಿರುವ ಸಾವನ್ನು ಬರಮಾಡಿಕೊಳ್ಳುತ್ತಿರುವ(ಅಪ್ರತ್ಯಕ್ಷ) ಬಗೆಗಿನ ಮಲ್ಯ ಅವರ ಲೇಖನ ಕಾರಂತರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಉದಾಹರಣೆಯಂತಿದೆ. ಡಾ.ರಾಮಕೃಷ್ಣ ಮರಾಠಿಯವರು ಹೇಳಿದಂತೆ ಶಿವರಾಮ ಕಾರಂತರಂತೆ ದೇಶ ಸುತ್ತಿದವರು, ಕೋಶ ಓದಿದವರು ಇನ್ನೊಬ್ಬರಿಲ್ಲವೆಂದೇ ಹೇಳಬೇಕು. ನಿತ್ಯ ಪ್ರಯಾಣಿಸುತ್ತ ಎಲ್ಲ ವಿಷಯಗಳ ಆಳ - ಅನುಭವ - ಜ್ಞಾನವನ್ನು ಕರಗತ ಮಾಡಿಕೊಂಡು ನಿಷ್ಠುರವಾಗಿ ಬಾಳಿ ಬದುಕಿದವರು. ಕಾರಂತರ ನಿಷ್ಠುರ ನಿಲುವುಗಳ ಕೆಲವು ತುಣುಕುಗಳನ್ನು ಬಹುಮುಖಿ ಸಂಪುಟದಲ್ಲಿ ಡಾ.ಎಸ್.ಜೆ.ನಾಗಲೋಟಿಮಠ ಅವರು ನೀಡಿದ್ದಾರೆ. ಹೆಸರಾಂತ ವಿದ್ವಾಂಸರ ಲೇಖನಗಳಿರುವ ಬಹುಮುಖ ಶಿವರಾಮ ಕಾರಂತರ ಬದುಕನ್ನು ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಈ ಹಿನ್ನೆಲೆಯಲ್ಲಿ ಸಂಪಾದಕರಾದ ಮನು ಬಳಿಗಾರ್ ಅವರು ಅಭಿನಂದನಾರ್ಹರು. ಕಾರಂತರ ಜೀವನವೇ ಇಂದಿನ ಯುವ ಪೀಳಿಗೆಗೆ ಒಂದು ದಾರಿದೀಪವಿದ್ದಂತೆ; ಸದ್ಗ್ರಂಥವಿದ್ದಂತೆ.

❖

# ಭಾಗ-7

# ಜೀವನ ಚಲತ್ರೈಗಳು

## ಅತಿ ವಿರಳ ರಾಜಕಾರಣಿ ಎಸ್.ಆರ್. ಕಂಠಿ ಕುರಿತು

ಡಾ. ಅಂಕನಹಳ್ಳಿ ಪಾರ್ಥ

ಪ್ರಸ್ತುತ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಮನು ಬಳಿಗಾರ್ ಅವರು ಬಹುಮುಖ ಪ್ರತಿಭೆಯುಳ್ಳವರು ಸರಳ ಸಜ್ಜನಿಕೆಗೆ ಹೆಸರಾದವರು ದಕ್ಷ ನಿಷ್ಠಾವಂತ ಪ್ರಾಮಾಣಿಕ, ಅಧಿಕಾರಿಯಾಗಿದ್ದು, ಸರ್ಕಾರದ ಹಲವು ಇಲಾಖೆಗಳಲ್ಲಿ ಉನ್ನತ ಹುದ್ದೆಯಲ್ಲಿದ್ದು ನಿವೃತ್ತಿಯಾಗಿದ್ದಾರೆ. ರೈತಾಪಿ ಕುಟುಂಬದ ಹಿನ್ನೆಲೆಯಲ್ಲಿ ಬಂದಿರುವ ಅಪ್ಪಟ ಗ್ರಾಮೀಣ ಪ್ರತಿಭೆ ಇವರದು. ತಂದೆ ಪರಮೇಶ್ವರಪ್ಪ ಪ್ರಗತಿಪರ ರೈತರಾಗಿದ್ದು ಸಮಾಜ ಸೇವೆಯಲ್ಲಿ ತೊಡಗಿಕೊಂಡಿದ್ದವರು ವಂಶವಾಹಿನಿಯಂತೆ ಅವರ ರಕ್ತಗತ ಗುಣಗಳು ಮನು ಬಳಿಗಾರ್ ಅವರಿಗೆ ವರದಾನವಾಗಿದೆ. ಸಾಹಿತ್ಯ ಲೋಕ ಪ್ರವೇಶಿಸಿ ಸಾಮಾಜಿಕ ಕಳಕಳಿ ಮಾನವೀಯ ಗುಣಗಳನ್ನು ವೃದ್ಧಿಸಿಕೊಂಡು ಅತ್ಯತ್ತಮ ಅಧಿಕಾರಿಯೆಂದು ಹೆಸರು ಪಡೆದು ಎರಡು ಸುವರ್ಣ ಪದಕ, ಕೆಂಪೇಗೌಡ ಸಾಹಿತ್ಯ ಪ್ರಶಸ್ತಿ, ರತ್ನ ಪ್ರಶಸ್ತಿ ಒಳಗೊಂಡಂತೆ ಐದು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅಮೇರಿಕಾದ ಕ್ಯಾಲಿಫೋರ್ನಿಯ ಮತ್ತು ಸಿಂಗಪುರಗಳಲ್ಲಿ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆವಹಿಸಿ ಕನ್ನಡ ಸಂಸ್ಕೃತಿ ಸಾಹಿತ್ಯ, ವಚನ ಸಾಹಿತ್ಯ ಮತ್ತು ಭಾರತೀಯ ಸಂಸ್ಕೃತಿ ಪರಂಪರೆ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಉತ್ತಮ ಕ್ರೀಡಾಪಟುವಾಗಿರುವ ಇವರು ಅಖಿಲ ಭಾರತ ಸಿವಿಲ್ ಸೇವಾ ಕೂಟಗಳಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದಾರೆ.

ಕಥೆ, ಕವನ, ಜೀವನ ಚರಿತ್ರೆ ಹೀಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕ್ರೀಯಾಶೀಲರಾಗಿ ತೊಡಗಿಸಿಕೊಂಡಿರುವ ಮನು ಬಳಿಗಾರ್ ರಚಿಸಿರುವ ಹನ್ನೆರಡನೆಯ ಕೃತಿ ಅತಿ ವಿರಳ ರಾಜಕಾರಣಿ ಎಸ್.ಆರ್.ಕಂಠಿ ಈ ಪುಸ್ತಕವು 2001ರಲ್ಲಿ ಪ್ರಕಟನೆಗೊಂಡು 2009ರಲ್ಲಿ ಮರು ಮುದ್ರಣಗೊಂಡಿದೆ.

ಎಸ್.ಆರ್.ಕಂಠಿಯವರ ಪೂರ್ಣ ಹೆಸರು ಶಿವಲಿಂಗಪ್ಪ ರುದ್ರಪ್ಪ ಕಂಠಿ. ಇಪ್ಪತ್ತನೆ ಶತಮಾನ ಕಂಡ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರಾಗಿರುವವರು. ಇವರ ಬಗ್ಗೆ ಬಹಳಷ್ಟು ಜನರಿಗೆ ತಿಳಿದಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತಂದು ಉನ್ನತ ಶಿಕ್ಷಣಕ್ಕೆ ಒತ್ತು ಕೊಟ್ಟವರು. ಈಗ ಉನ್ನತ ಶಿಕ್ಷಣ ಪಡೆಯುತ್ತಿರುವವರೂ ಇವರ ಬಗ್ಗೆ ಬಹಳಷ್ಟು ತಿಳಿದುಕೊಂಡಿಲ್ಲ. ಮನು ಬಳಿಗಾರ್ ಅವರು ಕೆಲವೊಂದು ದಾಖಲೆ ಹಾಗೂ ಅವರ ಆಪ್ತರು, ಇನ್ನಿತರ ಮೂಲಗಳಿಂದ ವಿಷಯ ಸಂಗ್ರಹಿಸಿ ಎಸ್.ಆರ್. ಕಂಠಿಯವರ ಬಾಲ್ಯ ಜೀವನದಿಂದ ಹಿಡಿದು ರಾಜಕಾರಣಿಯಾಗಿ ಮಂತ್ರಿಯಾಗಿ ಮುಖ್ಯಮಂತ್ರಿಯಾಗಿ, ವಿಧಾನ ಸಭೆಯ

ಸಭಾಧ್ಯಕ್ಷರಾಗಿ ಅವರು ನಿರ್ವಹಿಸಿದ ಕರ್ತವ್ಯ ಹೋರಾಟಗಳ ಸವಿಸ್ತಾರವಾದ ಚಿತ್ರಣಗಳನ್ನು ಈ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ.

ಭಾರತದ ಸ್ವಾತಂತ್ರ್ಯ ಚಳುವಳಿ ಕರ್ನಾಟಕ ಏಕೀಕರಣ ಚಳುವಳಿ ಎರಡರಲ್ಲೂ ಮಹತ್ವದ ಪಾತ್ರ ವಹಿಸಿದವರು. ಕಾಂಗ್ರೆಸ್ ಪಕ್ಷ ಸೇರುವ ಮೊದಲೇ ಹೋರಾಟದಲ್ಲಿ ಧುಮುಕಿ ಸೈಮನ್ ಆಯೋಗದ ನೇಮಕಾತಿಯನ್ನು ಪ್ರತಿಭಟಿಸಿದವರು ಎರಡನೇ ಮಹಾಯುದ್ಧದಲ್ಲಿ ಭಾರತ ಭಾಗವಹಿಸುವುದನ್ನು ವಿರೋಧಿಸಿ ಸೆರೆಮನೆವಾಸ ಅನುಭವಿಸಿದವರು. ಮಹಾತ್ಮ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸತ್ಯ, ಅಹಿಂಸೆ ಸರಳ ಜೀವನಶೈಲಿಯನ್ನು ಪ್ರಾಮಾಣಿಕತೆಯಿಂದ ಪಾಲಿಸಿಕೊಂಡು ಬಂದವರು.

ಶತ-ಶತಮಾನಗಳಿಂದಲೂ ಸಮಾಜದಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆ ಅಂಧಾನುಕರಣೆ, ಜಾತಿ ಪದ್ಧತಿ, ಸತಿ ಸಹಗಮನ, ಬಾಲ್ಯವಿವಾಹ ಇನ್ನು ಮುಂತಾದ ಅನಿಷ್ಟ ಆಚರಣೆಗಳನ್ನು ತೊಡೆದುಹಾಕುವ ಏಕೈಕ ಬೀಜ ಮಂತ್ರವೆಂದರೆ ಶಿಕ್ಷಣ ಎಂಬುದು ಎಸ್.ಆರ್.ಕಂಠಿಯವರು ಅರಿತಿದ್ದರು. ಶೈಕ್ಷಣಿಕವಾಗಿ ತೀರ ಹಿಂದುಳಿದ ಪ್ರದೇಶದಲ್ಲಿ ಅಕ್ಷರ ಸೂರ್ಯ ಉದಯಿಸಿದಂತೆ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದರು. ಅಸಂಖ್ಯ ಶಾಲೆ, ಕಾಲೇಜುಗಳನ್ನು ಸ್ಥಾಪಿಸಿ ಶಿಕ್ಷಣ ಕಲ್ಯಾಣಕ್ಕಾಗಿ, ಬಡ ವಿದ್ಯಾರ್ಥಿಗಳಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದರು. ಬೆಂಗಳೂರು ವಿಶ್ವವಿದ್ಯಾಲಯ ಸ್ಥಾಪಿಸಿ ಮೈಸೂರು ಗ್ರಂಥಾಲಯ ಅಧಿನಿಯಮ ಜಾರಿಗೆ ತಂದವರು.

ಅಸಂಖ್ಯ ಕನ್ನಡಿಗರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ತಮ್ಮ ಆಸ್ತಿ-ಪಾಸ್ತಿ ಹಾನಿ ಮಾಡಿಕೊಂಡು ಮನೆ-ಮಠ ಕುಟುಂಬವನ್ನು ತೊರೆದು ಪ್ರಾಣತ್ಯಾಗ ಮಾಡುತ್ತಿದ್ದಾಗ ಕರ್ನಾಟಕದ ಮಹನೀಯರು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡು ಹೋರಾಟದಲ್ಲಿ ಧುಮುಕಿದರು. ಆ ಸಂದರ್ಭದಲ್ಲಿ ಎಸ್.ಆರ್.ಕಂಠಿಯವರು ಮಹಾತ್ಮ ಗಾಂಧೀಜಿಯವರ ಕರೆಗೆ ಓಗೊಟ್ಟು ದೇಶ ಸೇವೆಗೆ ಧುಮುಕಿದರು, ಗಾಂಧೀಜಿಯವರ ಖಾದಿ ಹಾಗೂ ಗ್ರಾಮೋದ್ಯೋಗಗಳಿಗೆ ಪ್ರಾಮುಖ್ಯತೆ, ಪಾನ ನಿರೋಧ, ಹಿಂದೂ-ಮುಸ್ಲಿಂ ಏಕತೆ, ಅಸ್ಪೃಶ್ಯತಾ ನಿವಾರಣೆ, ದಲಿತೋದ್ಧಾರ ಹರಿಜನ ಬಾಲಿಕಾಶ್ರಮ ಇನ್ನು ಮುಂತಾದ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡವರು. ಬ್ರಿಟೀಷರ ವಿರುದ್ಧ ವ್ಯಕ್ತಿಗತವಾದ ಪ್ರತಿಭಟನೆ ಮಾಡಿದರು. 2ನೇ ಜಾಗತಿಕ ಯುದ್ಧದಲ್ಲಿ ಭಾಗವಹಿಸುವುದು ಮಹಾಪಾಪ ಎಂಬ ಘೋಷಣೆ ಕೂಗಬೇಕು ಎಂದು ಸಾರಿ ಹೇಳಿ ಹಿಂಡಲಗಿ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಜೈಲಿನ ಒಳಗಡೆ ನಡೆಯುತ್ತಿದ್ದ ಅನ್ಯಾಯಗಳ ವಿರುದ್ಧ ಧನಿ ಎತ್ತಿದ್ದರು. ಹರಿಜನ ಸತ್ಯಾಗ್ರಹಿಗಳಿಗೆ ನೀಡುತ್ತಿದ್ದ ಪ್ರತ್ಯೇಕ ಹಾಗೂ ಕೀಳುದರ್ಜೆಯ ಪರಿಕರ ಹಾಗೂ ಸೌಲಭ್ಯಗಳ ಬಗ್ಗೆ. ಪ್ರತಿಭಟಿಸಿ ಸಮಾನವಾಗಿ ನೋಡಿಕೊಳ್ಳಬೇಕೆಂದು ಕಿಡಿಕಾರಿದರು.

1947ರಲ್ಲಿ ಭೀಕರ ಬರಗಾಲ ಸಂಭವಿಸಿದಾಗ ಬಿಜಾಪುರದಲ್ಲಿ ಸಜ್ಜೆಬರ ಪ್ರಸಿದ್ಧಿ ಪಡೆದಿತು. ಸರ್ಕಾರದಿಂದ ವಿವಿಧ ಕಡೆಗಳಿಂದ ಸಜ್ಜೆ ತರಿಸಿ ಗಂಜಿ ಕೇಂದ್ರಗಳನ್ನು ತೆರೆದು ಪೂರೈಸಿದರು. ಬಾಂಬೆ ಪ್ರಾವೆನ್ಸಿಯಲ್ ಫುಡ್ ಕಮಿಟಿ ಸದಸ್ಯರಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸಿ ಬಡವರ ಬಂಧು ಎಂದು ಹೆಸರಾದವರು.

ಪ್ರಪಂಚದಲ್ಲಿ ಧರ್ಮವೇ ಇಲ್ಲದ ಸಮಾಜ ಕಾಣಲಾಗದು. ಪ್ರತಿಯೊಬ್ಬರ ಮನಸ್ಸು ಧರ್ಮದಲ್ಲಿ ಬೆರೆತು ಹೋಗಿರುತ್ತದೆ. ಎಸ್.ಆರ್.ಕಂಠಿಯವರು ಧಾರ್ಮಿಕ ಕ್ಷೇತ್ರಗಳಿಗೆ ಮಠ-ಮಾನ್ಯಗಳಿಗೆ ಸಾಧು-ಸಂತರೆಡೆಗೆ ಹೋಗುತ್ತಿದ್ದು, ಆಗಾಗ ಆಧ್ಯಾತ್ಮಿಕ ಕೇಂದ್ರಗಳಿಗೂ ಭೇಟಿ ಕೊಡುತ್ತಿದ್ದರು. ರೋಮ್ ನಗರಕ್ಕೆ ಹೋದಾಗ ಅಲ್ಲಿನ ಧರ್ಮಗುರು ಪೂಜ್ಯ ಪೋಪ್ ದರ್ಶನ ಮಾಡಿ ಬಂದರು. ಬಸವಣ್ಣನವರ ಧರ್ಮಭೂಮಿ ಕೂಡಲಸಂಗಮ ಅಭಿವೃದ್ಧಿಪಡಿಸಲು ಶ್ರಮಿಸಿದರು. ವಚನ ಸಾಹಿತ್ಯದ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸಿದರು. ಹರ್ಡೇಕರ್ ಮಂಜಪ್ಪನವರನ್ನು ಕುರಿತಾದ ಬೃಹತ್ ಗ್ರಂಥ ಪ್ರಕಟಿಸಲು ಕೂಡಲ ಸಂಗಮ ಅಭಿವೃದ್ಧಿ ಯೋಜನೆ ರೂಪಿಸಿ ರಸ್ತೆ ಸೌಲಭ್ಯ ಕಲ್ಪಿಸಿದರು. ಪೂಜೆ ಪುರಸ್ಕಾರ ನಿಷ್ಠೆಯುಳ್ಳವರಾಗಿದ್ದ ಇವರು ಘನ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿಯೂ ನೇಮಿಸಲ್ಪಟ್ಟಾಗಲೂ ಸುತ್ತೂರು ಮಠದ ಜಗದ್ಗುರುಗಳಾಗಿದ್ದ ಶ್ರೀ ರಾಜೇಂದ್ರ ಮಹಾಸ್ವಾಮಿ ಆಶೀರ್ವಾದ ಪಡೆದು ಚಾಮುಂಡಿ ಬೆಟ್ಟಕ್ಕೆ ಹೋಗಿ ಪೂಜೆ ಸಲ್ಲಿಸಿ ಅಂದಿನ ರಾಜ್ಯಪಾಲರಾದ ಜಯಚಾಮರಾಜ ಒಡೆಯಾರ್ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು ಇಂಥ ಧಾರ್ಮಿಕ ನಂಬಿಕೆಯುಳ್ಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

ಎಸ್.ಆರ್.ಕಂಠಿಯವರು ಮುಖ್ಯಮಂತ್ರಿಯಾಗಿ ಆಡಳಿತ ಚುಕ್ಕಾಣಿ ಹಿಡಿದ ಒಂದೂವರೆ ತಿಂಗಳಲ್ಲಿಯೇ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯಾಗಿ ಆದೇಶ ಹೊರಡಿಸಿದರು. ಬಿಜಾಪುರ ಜಿಲ್ಲೆಯಲ್ಲಿ ಹದಿನೆಂಟು ದೊಡ್ಡ ಪ್ರಮಾಣದ ಕೆರೆ ನಿರ್ಮಿಸಲು ಆದೇಶಿಸಿದರು. ಬಡತನದ ರೇಖೆಗಿಂತ ಕೆಳಗಿರುವವರಿಗೆ ವೃದ್ಧಾಪ್ಯವೇತನ ಅಂಗವಿಕಲರಿಗೆ ಮಾಶಾಸನ ನೀಡುವುದಾಗಿ ಘೋಷಣೆ ಮಾಡಿದರು. ಹೆಬ್ಬಾಳದಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸಲು ಘೋಷಿಸಿದರು. ಇಂದಿನ ಕೆಲವು ರಾಜಕಾರಣಿಗಳು ಮುಂದಿನ ಚುನಾವಣೆಯಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳುವುದಕ್ಕೆ ಪ್ರಚಾರ ಪಡೆಯುತ್ತಿದ್ದಾರೆ. ಆದರೆ ಎಸ್.ಆರ್.ಕಂಠಿಯವರು ಮುಂದಿನ ಪೀಳಿಗೆಗಾಗಿ ಅಹರ್ನಿಶಿ ದುಡಿದ ಮಹಾನ್ ರಾಜ ನೀತಿಜ್ಞ.

ಇಂದಿನ ಕೆಲವು ರಾಜಕಾರಣಿಗಳು ತಮ್ಮ ಸಂಪತ್ತನ್ನು ಹೊರದೇಶದಲ್ಲಿ ಬಚ್ಚಿಡಲು ವಿದೇಶ ಪ್ರವಾಸ ಮಾಡಿ ಬರುತ್ತಾರೆ. ಆದರೆ ಎಸ್.ಆರ್.ಕಂಠಿಯವರು ಪ್ರವಾಸ ಮಾಡಿ ಬಂದ ಮೇಲೆ ಅಲ್ಲಿನ ಅನುಭವಗಳನ್ನು ಕೇಳಿ ಕಲಿತು ಸದನದ ಒಳಗಡೆ ಮಾತ್ರವಲ್ಲದೆ ಸಾರ್ವಜನಿಕವಾಗಿ ಏರ್ಪಡಿಸುವ ವಿಚಾರಗೋಷ್ಠಿಯಲ್ಲಿ ಮಂಡಿಸಿ ಅಳವಡಿಸಿಕೊಳ್ಳಲು ಸೂಚಿಸುತ್ತಿದ್ದರು.

ಎರಡು ಬಾರಿ ವಿಧಾನ ಸಭಾಧ್ಯಕ್ಷರಾಗಿ ಆಯ್ಕೆಗೊಂಡ ಎಸ್.ಆರ್.ಕಂಠಿಯವರು ಸದನ ನಡೆಸುವಾಗಲೆಲ್ಲ ಸಂದರ್ಭೋಚಿತವಾಗಿ ಸರ್ಕಾರಕ್ಕೆ ಉಪಯುಕ್ತ ಸಲಹೆ ಸೂಚನೆ ಕೊಟ್ಟು ಸದನದಲ್ಲಿ ಚರ್ಚೆಗಳು ಸರಿಯಾಗಿ ನಡೆಯುವಂತೆ ಆಡಳಿತ ಮತ್ತು ವಿರೋಧ ಪಕ್ಷಗಳೆರಡಕ್ಕೂ ನ್ಯಾಯ ದೊರಕಿಸಿಕೊಡುತ್ತಿದ್ದರು.

ನವ ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ವಿಧಾನ ಸಭಾಧ್ಯಕ್ಷರಾಗಿ ಶಿಕ್ಷಣ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ಹಳೆಯ ಮುಂಬೈ ರಾಜ್ಯದ ವಿಧಾನಸಭೆಯ ಉಪಸಭಾಧ್ಯಕ್ಷರಾಗಿ ಸಂಸದೀಯ ಕಾರ್ಯದರ್ಶಿಯಾಗಿ ಹಲವು ಉನ್ನತ ಸ್ಥಾನಮಾನಕ್ಕೇರಿದಾಗಲೂ ಅಧಿಕಾರದ ಮದ, ಅಹಂಕಾರ ಅವರ ಬಳಿ ಸುಳಿಯಲಿಲ್ಲ. ಐಷಾರಾಮಿ ಜೀವನಶೈಲಿಗೆ ಮನ ಸೋತವರಲ್ಲ. ಸರಳಜೀವನ, ಸಜ್ಜನಿಕೆಗೆ ಹೆಸರಾದವರು. ಇಂತಹ ಹಲವಾರು ವಿಚಾರಗಳು ಅತಿ ವಿರಳ ರಾಜಕಾರಣಿ ಎಸ್.ಆರ್.ಕಂಠಿ ಎಂಬ ಪುಸ್ತಕದಲ್ಲಿ ಅನಾವರಣಗೊಂಡಿದೆ.

'ಸೋಲಿಲ್ಲದ ಸರದಾರ' ಭಾಗದಲ್ಲಿ ಎಸ್.ಆರ್.ಕಂಠಿಯವರು ಐದು ಬಾರಿ ಚುನಾವಣೆಯಲ್ಲಿ ಭಾರಿ ಬಹುಮತಗಳಿಂದ ಚುನಾಯಿತರಾಗುತ್ತಿದ್ದರು. ಅವರು ಬಡವರ ಸೇವೆಯಲ್ಲಿ ತೊಡಗಿಕೊಂಡಿದ್ದು, ಅವರು ಎದುರಾಳಿಗಳಿಂದಲೇ ಸೋಲಿಲ್ಲದ ಸರದಾರ ಎಂದು ಹೊಗಳಿಸಿಕೊಂಡವರು. ಇಂಥ ಅನೇಕ ವಿಚಾರಗಳನ್ನು ಮನು ಬಳಿಗಾರ್‌ರವರು ಕಲೆ ಹಾಕಲು ಬಹಳಷ್ಟು ಶ್ರಮಿಸಿದ್ದಾರೆ. ಈ ಕೃತಿ ಎಸ್.ಆರ್.ಕಂಠಿಯವರ ಸಮಗ್ರ ಚಿತ್ರಣವನ್ನು ಕಟ್ಟಿಕೊಡದಿದ್ದರೂ ಅವರ ಬದುಕಿನ ಬಹುಮುಖ್ಯವಾದ ಘಟನಾವಳಿ ಮತ್ತು ವಿಚಾರವನ್ನು ಕಟ್ಟಿಕೊಟ್ಟಿದ್ದಾರೆ. ಒಟ್ಟಾರೆ ಈ ಕೃತಿ ಇಂದಿನ ರಾಜಕಾರಿಣಿಗಳಿಗೆ ಮಾರ್ಗ ಸೂಚಿಯಂತಿದೆ.

❖

# ಡಾ. ಮನು ಬಳಿಗಾರ್ ಅವರು ಚಿತ್ರಿಸಿದ

## ಬಡವರ ಬಂಧು, ಅತಿವಿರಳ ರಾಜಕಾರಣಿ ಎಸ್.ಆರ್. ಕಂಠಿಯವರ ಬಹುಮುಖತೆ

ಡಾ.ಕೆ.ವಿ.ಮುದ್ದವೀರಪ್ಪ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಜೀವನ ಚರಿತ್ರೆಗಳು ತುಂಬಾ ವಿರಳ ರೀತಿಯಲ್ಲಿ ರಚನೆಗೊಂಡಿವೆ. ಆದರೂ ಒಂದು ರೀತಿಯಲ್ಲಿ ಹರಿಹರನೇ ಶೈವ ಪುರಾತನರ ಮತ್ತು ವಚನಕಾರರ ಜೀವನ ಚರಿತ್ರೆ ಬರೆಯುವುದರ ಮೂಲಕ ಈತನೇ ಮೊದಲ ಜೀವನ ಚರಿತ್ರೆಕಾರನೆನ್ನಬಹುದು. ಆಧುನಿಕ ಚರಿತ್ರಾಕಾರರು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿದ ಮಹಾನ್ ಚೇತನಗಳ ಆದರ್ಶಬದುಕನ್ನು ಚಿತ್ರಿಸಿರುವುದು ಕಾಣಬಹುದು. ಅಸಾಮಾನ್ಯ ವ್ಯಕ್ತಿತ್ವವೆನಿಸುವ ಆದರ್ಶಪುರುಷರ, ಕೀರ್ತಿವಂತರಾಗಿ ಬಾಳಿದ ಚಾರಿತ್ರಿಕ ಮಹಾಪುರುಷರ, ಮತಸ್ಥಾಪಕರ, ಸಾಧುಸಂತರ, ಕವಿವರ್ಯರ, ರಾಜಕಾರಣಿಗಳ, ಯುದ್ಧವೀರರ, ದೇಶಭಕ್ತರ,

ಸಮಾಜ ಸುಧಾರಕರ, ವಿದ್ವಾಂಸರ, ಸಂಗೀತಕಾರರ, ಚಿತ್ರಕಾರರ, ನಟರ, ವಿಜ್ಞಾನಿಗಳ, ತತ್ವಜ್ಞಾನಿಗಳ, ದಾರ್ಶನಿಕರ ಮಹೋನ್ನತ ಕಾರ್ಯಗಳನ್ನು ನೆಲೆನಿಲ್ಲುವಂತೆ ಮಾಡಲು, ಅವರ ಬದುಕು ಈಗಿರುವವರಿಗೆ ಪ್ರಭಾವ ಬೀರಲು ಚಿತ್ರಿಸಿರುವ ಕೃತಿಗಳೆಲ್ಲವೂ ಜೀವನ ಚರಿತ್ರೆಗಾಗಿವೆ.

ಜೀವನಚರಿತ್ರೆಗಳನ್ನು ಬರೆಯುವುದು ಅಷ್ಟು ಸುಲಭದ ಮಾತಲ್ಲ. ಯಾರ ಜೀವನಚರಿತ್ರೆಯನ್ನು ಕುರಿತು ಬರೆಯುತ್ತಿದ್ದೇವೆಯೋ ಅವರ ಬದುಕನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು, ಅವರನ್ನ ನಮ್ಮೊಳಗೆ ಆವಾಹಿಸಿಕೊಂಡರೇ ಮಾತ್ರ ಅವರ ಬದುಕನ್ನು ಅವರಿಲ್ಲದ ಸಂದರ್ಭದಲ್ಲಿ ಕಟ್ಟಲು ಸಾಧ್ಯವಾಗುತ್ತದೆ. ಹಾಗೆಯೇ ಡಾ.ಮನುಬಳಿಗಾರ್ ಅವರು ಕಂಠಿಯವರು ಬದುಕಿ ಬಾಳಿದ ದೀರ್ಘದ ಸಂಪನ್ನ ಬದುಕನ್ನು, ಅವರ ಬಹುಮುಖವಾದ ವ್ಯಕ್ತಿತ್ವವನ್ನು ಸೂಕ್ಷ್ಮಮನಸ್ಸಿನಿಂದ ಕಪ್ಪೆಯನ್ನು 'ಡಿಸೆಕ್ಸ್ ಮಾಡುವ' ರೀತಿಯಲ್ಲಿ ಎಳೆಎಳೆಯಾಗಿ 'ಅತಿವಿರಳ ರಾಜಕಾರಣಿ ಎಸ್.ಆರ್.ಕಂಠಿ' ಕೃತಿಯಲ್ಲಿ ಚಿತ್ರಿಸಿಕೊಟ್ಟಿದ್ದಾರೆ.

ಡಾ.ಮನು ಬಳಿಗಾರ್ ಅವರು ಎಸ್.ಆರ್.ಕಂಠಿಯವರ ರಾಜಕಾರಣದ ಸಮೃದ್ಧ ಜೀವನವನ್ನು ದೀರ್ಘಕಾಲದವರೆಗೆ ಕ್ಷೇತ್ರಕಾರ್ಯ ಮಾಡಿರುವರು. ಅವರ ಹುಟ್ಟೂರನ್ನು, ಪ್ರತಿನಿಧಿಸಿದ ಕ್ಷೇತ್ರವನ್ನು, ಮುಂಬಯಿ ಸರ್ಕಾರದಲ್ಲಿ ಕಾರ್ಯನಿರ್ವಹಿಸಿದ ವಿವಿಧ ಹುದ್ದೆಗಳ ವಿವರಗಳನ್ನು, ಮೈಸೂರು ರಾಜ್ಯದ ಸರ್ಕಾರದಲ್ಲಿನ ಮಾಹಿತಿಗಳನ್ನು, ಸಭಾಧ್ಯಕ್ಷರಾಗಿ, ಮುಖ್ಯಮಂತ್ರಿಯಾಗಿ, ಶಿಕ್ಷಣ ಮಂತ್ರಿಯಾಗಿ, ಕಾನೂನು ಮಂತ್ರಿಯಾಗಿದ್ದಾಗಿನ ವಿಷಯಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿದ್ದಾರೆ. ಹಾಗೆ ಅಭ್ಯಸಿಸಿ ಅರ್ಥಪೂರ್ಣವಾಗಿ ಅರ್ಥೈಸಿಕೊಂಡು, ಚದುರಿದ ವಿಷಯಗಳನ್ನು ತಾಳ್ಮೆಯಿಂದ ಸಂಶೋಧಿಸಿ, ಸಂಪಾದಿಸಿ, ತಮ್ಮದೇ ಕುಲುಮೆಯಲ್ಲಿ ಕಾಯಿಸಿ, ಹದಕ್ಕೆ ತಂದು, ಬಡಿದು ಬಡಿದು ಒಂದು ಸುಂದರ ಆಕಾರವನ್ನು ಕೊಟ್ಟು ಅತ್ಯುತ್ತಮ ಜೀವನಚರಿತ್ರೆ ಕೃತಿಯಾಗಿ 104 ಪುಟಗಳಲ್ಲಿ ಚಿತ್ರಿಸಿರುವುದು ನಿಜಕ್ಕೂ ಅವರ ಕಾರ್ಯ ಶ್ಲಾಘನೀಯವಾದುದು.

ನಮ್ಮ ರಾಜ್ಯವನ್ನು ಆಳಿದ ಒಬ್ಬ ನಿರ್ಮಲ, ಸ್ವಚ್ಛ ಮನಸ್ಸಿನ, ಪ್ರಾಮಾಣಿಕ, ಸರಳ ಸಜ್ಜನಿಕೆಯ ನಿಷ್ಠೂರ ವ್ಯಕ್ತಿತ್ವದ ಸದಾ ಉತ್ತುಂಗ ಸ್ಥಾನದಲ್ಲಿ ನಿಲ್ಲುವ, ಇವತ್ತಿನ ರಾಜಕಾರಣಿಗಳಿಗೆ ಮೇರು ಆದರ್ಶವಾಗುವ ಎಸ್.ಆರ್.ಕಂಠಿಯವರು ಎಲ್ಲಾ ಕಾಲಕ್ಕೂ ಪ್ರಸ್ತುತರಾಗುತ್ತಾರೆ. ಇಂತವರ ಬಗೆಗೆ ಡಾ.ಮನು ಬಳಿಗಾರ್ ಅವರು ಎಲ್ಲರಿಗೂ ಅರ್ಥವಾಗುವಂತೆ ತಮ್ಮ ಸ್ಥಳೀಯ ಭಾಷೆಯನ್ನು ಆಯ್ದುಕೊಂಡು, ಹಲವು ವಿಷಯಗಳೊಂದಿಗೆ ಅಚ್ಚುಕಟ್ಟಾಗಿ ವಿಶ್ಲೇಷಣೆ ಮಾಡಿರುವುದು ಕೃತಿಯ ಒಟ್ಟಂದದಲ್ಲಿ ನಮಗೆ ತುಂಬಾ ಇಷ್ಟವಾಗುತ್ತದೆ.

ಎಸ್.ಆರ್.ಕಂಠಿಯವರು ಉತ್ತರಕರ್ನಾಟಕದ ಹುನಗುಂದ ತಾಲ್ಲೂಕಿನ ಇಳಕಲ್ಲು ಗ್ರಾಮದವರು. ಇಂತಹ ಭವ್ಯ ಪರಂಪರೆಯ ಸಾಂಸ್ಕೃತಿಕ ಜೇಷ್ಠತೆಯನ್ನು ಸಾರುವ ಗ್ರಾಮದ ಕುಡಿ ಕನ್ನಡನಾಡಿನಲ್ಲಿ ತಮ್ಮ ತತ್ವಬದ್ಧ ಬದುಕಿನ ಮೂಲಕ ಅವರು ಚಿರಸ್ಥಾಯಿಯಾಗುವಂತಹ ಮೆರುಗನ್ನು ಸಂಸ್ಕೃತಿಯಲ್ಲಿ, ರಾಜಕಾರಣದಲ್ಲಿ,

ಧರ್ಮತತ್ವರತೆಯಲ್ಲಿ ಐತಿಹಾಸಿಕ ಮಹತ್ವವೆನಿಸುವ ರೀತಿಯಲ್ಲಿ ವಿಶೇಷ ಸಂಚಲನ ಉಂಟುಮಾಡಿ ಮರೆಯಾದ ಅತಿ ವಿರಳ ರಾಜಕಾರಣಿ ಎಸ್.ಆರ್.ಕಂಠಿಯವರು ಸದಾ ನಮ್ಮ ನೆನಪಿನಲ್ಲಿಯುಳಿಯುತ್ತಾ ಜೊತೆಯಲ್ಲಿರುತ್ತಾರೆ. ಬಸವಣ್ಣನವರ ನಾಡಿನವರಾದ ಕಂಠಿಯವರು ಇಡೀ ಬದುಕಿನುದ್ದಕ್ಕೂ ಶರಣರ ತತ್ವಗಳನ್ನು ತಾವು ಅಳವಡಿಸಿಕೊಂಡು ತಾವಿರುವ ಸಮಾಜವೂ ಅದೇ ಹಾದಿಯಲ್ಲಿ ನಡೆಯಲಿ ಎಂದು ಆಸೆಗಣ್ಣಿನಿಂದ ಕಾಣುತ್ತಾ ರಾಜಕಾರಣದಲ್ಲಿ ಶ್ರೇಷ್ಠ ಸಮಾಜಕ್ಕಾಗಿ ದುಡಿದವರು. ಸಂಘರ್ಷವಿಲ್ಲದ ಬದುಕು, ಯಾರನ್ನು ಏಕಾಕಿ ಬೈದು ನೋಯಿಸುವ ಮನಸ್ಸಿನವರಲ್ಲ. ಇಂತವರ ಬದುಕಿನ ಸುಂದರ ಬಂಡಿಯ ಚಿತ್ರಣ ಡಾ.ಮನು ಬಳಿಗಾರ್ ಅವರ ಸೊಗಸಾದ ಭಾಷೆ-ಭಾವದಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆ ಈ ಕೃತಿ ಹೊರಬಂದಿರುವುದು ಮೆಚ್ಚತಕ್ಕದ್ದು.

ಐದು ನದಿಗಳು ಬಿಜಾಪುರ ಜಿಲ್ಲೆಯಲ್ಲಿ ಹರಿದರೂ ಸದಾ ಬರಗಾಲವು ಇಲ್ಲಿನ ರೈತರನ್ನು ಕಡು ಕಷ್ಟಕ್ಕೆ ಈಡು ಮಾಡುತ್ತಾ ಅವರ ಬದುಕುಗಳನ್ನು ಮೂರಾಬಟ್ಟೆಯಾಗಿಸಿದೆ. ಇಂತಹ ಬರಪ್ರದೇಶದಿಂದ ನಾಡ ಸೇವೆ ಮಾಡಲು ಬಂದವರು ಶಿವಲಿಂಗಪ್ಪ ಕಂಠಿಯವರು. ದಕ್ಷಿಣ ಬಿಜಾಪುರದ ಭಾಗದಲ್ಲಿ ಮೊಟ್ಟ ಮೊದಲಿಗೆ ಲಿಂಗಾಯತ ಕಾನೂನು ಪದವಿ ಪಡೆದ ಶಿವಲಿಂಗಪ್ಪ ಕಂಠಿಯವರು ವಕೀಲಿ ವೃತ್ತಿ ಮಾಡುತ್ತಲೇ ಅಲ್ಲಿಯೇ ತಾವು ಕಳೆದುಹೋಗದೆ ದೇಶದ ಸ್ವಾತಂತ್ರ್ಯಕ್ಕಾಗಿ, ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟದ ಮೂಲಕವೇ ರಾಜಕೀಯದಲ್ಲಿ ಪಾದಾರ್ಪಣೆ ಮಾಡಿ ಗಾಂಧೀಜಿಯವರ ಸತ್ಯಾಧಾರಿತ, ಧರ್ಮಾಧಾರಿತ, ಸರಳಾಧಾರಿತ, ಧಾರ್ಮಿಕ ಸ್ವಭಾವದೊಂದಿಗೆ ಸಮಾಜ ಸೇವೆ ಮಾಡುತ್ತಲೇ ಜನಮಾನಸದಲ್ಲಿ ಬೆಳೆದರು.

ರಾಜಕಾರಣದಲ್ಲಿ ಕಂಠಿಯವರು ಹಿಂದಿರುಗಿ ನೋಡದೆ ಸೋಲಿಲ್ಲದ ಸರದಾರನಾಗಿ ಬೊಂಬಾಯಿ ರಾಜ್ಯದ ಸರ್ಕಾರದಲ್ಲಿ ಸಂಸದೀಯ ಕಾರ್ಯದರ್ಶಿಯಾಗಿ, ಉಪಸಭಾಪತಿಯಾಗಿ ಹೀಗೆ ಹಲವು ಹುದ್ದೆಗಳ ಮೂಲಕ ನಿಸ್ಪೃಹತೆಯಿಂದ ಸೇವೆ ಸಲ್ಲಿಸುತ್ತಲೇ ಎಲ್ಲರ ವಿಶ್ವಾಸಕ್ಕೆ ಪಾತ್ರರಾದರು. ಇಪ್ಪತ್ತೆರಡಕ್ಕಿಂತ ಹೆಚ್ಚು ಕಡೆ ಹರಿದು ಹಂಚಿ ಹೋದ ಕರ್ನಾಟಕವನ್ನು ಹೊಲಿದು ಒಂದು ಮಾಡಲು ಕನ್ನಡದ ಕಟ್ಟಾಳು ಆಗಿ ನಾಡಿನಾದ್ಯಂತ ಹಗಲಿರುಳು ಓಡಾಡಿದರು, ಹೋರಾಟ ಮಾಡಿದರು. 1956ರಲ್ಲಿ ಕರ್ನಾಟಕ ಏಕೀಕರಣಗೊಂಡ ತರುವಾಯ ಮೊದಲ ವಿಧಾನಸಭೆ ರೂಪುಗೊಂಡಾಗ ಅದರ ಪ್ರಪ್ರಥಮ ವಿಧಾನಸಭಾಧ್ಯಕ್ಷರಾದರು. ತಮ್ಮಲ್ಲಿದ್ದ ಅದ್ವಿತೀಯ ಬೌದ್ಧಿಕತೆಯಿಂದ ಬಹಳ ಅಚ್ಚುಕಟ್ಟಾಗಿ ಹುದ್ದೆಯ ಕಾರ್ಯಭಾರವನ್ನು ನಿರ್ವಹಿಸಿ ಪ್ರತಿಯೊಬ್ಬರಿಂದಲೂ ಪ್ರಶಂಸೆಗೆ ಪಾತ್ರರಾದರು. ಮೌಲ್ಯಾಧಾರಿತ ರಾಜಕಾರಣಿ ಕಂಠಿಯವರು ವಿಧಾನಸಭಾಧ್ಯಕ್ಷರಾದ ಸಂದರ್ಭದಲ್ಲಿ ವಿದೇಶ ಪ್ರವಾಸದ ನಿಯೋಗದಲ್ಲಿ ನೇತೃತ್ವ ಹೊಂದಿ ಯಶಸ್ವಿಯಾದ, ಅರ್ಥಪೂರ್ಣವಾದ ರೀತಿಯಲ್ಲಿ ಅಧ್ಯಯನ ಮಾಡುವುದರೊಂದಿಗೆ ವಿಶೇಷ ಅನುಭವಗಳೊಂದಿಗೆ ದೇಶಕ್ಕೆ ಹಿಂದಿರುಗಿ ಅಲ್ಲಿನ ಸಂಸದೀಯ ಅಂಶಗಳನ್ನು ಅನುಸಂಧಾನದ ಮೂಲಕ ಇಲ್ಲಿ

ಅನುಷ್ಠಾನಗೊಳಿಸಿದರು. ಇಷ್ಟೊತ್ತಿಗಾಗಲೇ ಯಾರೂ ಕಂಡರಿಯಲಾರದ ಉತ್ತಮ ರಾಜಕಾರಣಿಯಾಗಿ ಅತ್ಯುತ್ತಮ ಸಂಸದೀಯ ಪಟುವಾಗಿ ನಾಡಿಗೆ ಚಿರಪರಿಚಿತರಾಗಿದ್ದರು.

ಈ ಕೃತಿಯಲ್ಲಿ 'ಅಪ್ರತಿಮ ಶಿಕ್ಷಣ ಮಂತ್ರಿ' ಅಧ್ಯಾಯವು ದೀರ್ಘವಾದುದಾಗಿದ್ದು, ಕಂಠಿಯವರ ರಾಜಕೀಯ ಜೀವನದಲ್ಲಿ ಶಿಕ್ಷಣಮಂತ್ರಿಯಾಗಿ ವಿಶಿಷ್ಟ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಎಸ್.ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಶಿಕ್ಷಣ ಖಾತೆ ಇತರೆ ಖಾತೆಗಳಿಗಿಂತ ಕಡಿಮೆ ಅಧಿಕಾರದ್ದು ಎನಿಸಿದರೂ ಗಾಂಧೀಜಿಯವರ ಕನಸಿನ ಸಾಮುದಾಯಿಕ ಶಿಕ್ಷಣವನ್ನು ಕ್ರಾಂತಿರೂಪದಲ್ಲಿ ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನವನ್ನು ಕಂಠಿಯವರು ಜಾರಿಗೆ ತರಲು ತೀರ್ಮಾನಿಸಿದರು. ವಿದ್ಯಾಕೇಂದ್ರಗಳನ್ನು 'ಅಧುನಿಕ ದೇವಸ್ಥಾನ'ಗಳೆಂದು ಭಾವಿಸಿ, ಬಡ ವಿದ್ಯಾರ್ಥಿಗಳಿಗಾಗಿ ಶಾಲಾ ಶುಲ್ಕವನ್ನು ರಿಯಾಯಿತಿಗೊಳಿಸಿದ್ದು, ವಿದ್ಯಾರ್ಥಿ ವೇತನವನ್ನು ಎಲ್ಲಾ ಜಾತಿಯವರಿಗೆ ಸಿಗುವಂತೆ ಮಾಡಿದ್ದು, ಹರಿಜನ ಗಿರಿಜನ ತಾರತಮ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುದಾನವನ್ನು ಮೀಸಲಾಗಿಸಿದ್ದು, ಒಂದು ಕ್ರಾಂತಿಕಾರಿಕ ಬೆಳೆವಣಿಗೆಯಾಯಿತು. ಅದೇ ಸಂದರ್ಭದಲ್ಲಿ ಸರ್ಕಾರ ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ನೀಡಲು ಕಡ್ಡಾಯಗೊಳಿಸಿತು. ರಾಜ್ಯದ ಮೂಲೆ ಮೂಲೆಗಳಲ್ಲಿ ಶಾಲಾ ಕಾಲೇಜುಗಳು, ವಿದ್ಯಾರ್ಥಿ ವಸತಿ ನಿಲಯಗಳು, ಶಿಕ್ಷಣ ತರಬೇತಿ ಕೇಂದ್ರಗಳು, ಕಲಾ ಶಾಲೆಗಳು, ವೈದ್ಯಕೀಯ ಕಾಲೇಜುಗಳು, ಕೃಷಿ ತರಬೇತಿ ಕೇಂದ್ರಗಳು, ಸೈನಿಕ ಶಾಲೆಗಳು ಹೆಬ್ಬಾಳದಲ್ಲಿ ಗ್ರಾಮೀಣ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಯುವ ಪೀಳಿಗೆಯ ಸರ್ವತೋಮುಖ ಅಭಿವೃದ್ಧಿಗೆ ಕಂಠಿಯವರು ಹಗಲು-ಇರುಳು ಶ್ರಮಿಸಿದರು. ಶಾಲಾ ಶಿಕ್ಷಕರಿಗೆ ಸಿಗುತ್ತಿದ್ದ ಕಡಿಮೆ ಸಂಬಳವನ್ನು ಮಾನವೀಯತೆಯಿಂದ ಅದನ್ನು ಹೆಚ್ಚುಮಾಡಿ ತ್ರಿವಿಧ ಸೌಲಭ್ಯಗಳಾದ ಭವಿಷ್ಯ ನಿಧಿ, ಜೀವ ವಿಮೆ, ನಿವೃತ್ತಿ ವೇತನ ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ಗಮನಿಸಿದರೆ, ಶಿಕ್ಷಣ-ಶಿಕ್ಷಕರ ಬಗೆಗೆ ಅವರಿಗಿದ್ದ ಕಾಳಜಿಯನ್ನು ತೋರಿಸುತ್ತದೆ.

ಇದೇ ಅವಧಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿಧೇಯಕವನ್ನು ಜಾರಿಗೊಳಿಸಿದರು. 'ಮೈಸೂರು ಪಬ್ಲಿಕ್ ಲೈಬ್ರರಿಸ್ ಆ್ಯಕ್ಸ್- 1965' ಜಾರಿಗೆ ತಂದಿದ್ದು ಬಹಳ ದೊಡ್ಡ ಸಾಧನೆ. ಓದುಗ ವರ್ಗಕ್ಕೆ ಅನುಕೂಲವಾಗುವಂತಹ ರೀತಿಯಲ್ಲಿ ನಗರ, ಜಿಲ್ಲಾ ಹಾಗೂ ರಾಜ್ಯಮಟ್ಟದ ಗ್ರಂಥಾಲಯ ಪ್ರಾಧಿಕಾರ ಹಾಗೂ ಕರ್ನಾಟಕದಲ್ಲಿ 'ರಾಷ್ಟ್ರೀಯ ಅಂದೋಲನ ಚರಿತ್ರೆ'ಯೆಂಬ ಉತ್ಕೃಷ್ಟ ಕೃತಿಯನ್ನು ಬರೆಯಿಸಿ ಪ್ರಕಟಿಸುವ ವ್ಯವಸ್ಥೆ ಮಾಡಿದ್ದು ವಿಶೇಷವಾದ ಕೆಲಸವಾಗಿದೆ. ಈ ಎಲ್ಲಾ ವಿಶೇಷ ಯೋಜನೆಗಳ ಮೂಲಕ ಕಂಠಿಯವರು ತಮ್ಮನ್ನ ತಾವು ಶಿಕ್ಷಣ ಸೇವೆ ಮಾಡಲು ಅರ್ಪಿಸಿಕೊಂಡರು.

ಕಂಠಿಯವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕಡಿಮೆ ಅವಧಿಯಲ್ಲಿ (102 ದಿನಗಳು) ಸಾಂಸ್ಕೃತಿಕ ಕರ್ನಾಟಕವನ್ನು ಕಟ್ಟುವುದರೊಂದಿಗೆ ನಾಡನ್ನು ಶ್ರೀಮಂತಗೊಳಿಸಿದರು. ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದು ಜನಕಲ್ಯಾಣ ಮುಖ್ಯಮಂತ್ರಿಯಾಗಿ ಎಲ್ಲರ ಮನಸ್ಸಿನಲ್ಲಿ ಉಳಿದರು. ಎಲ್ಲರ ಮೆಚ್ಚಿಗೆಗೆ

ಪಾತ್ರವಾಗುವ ರೀತಿಯಲ್ಲಿ ಚೊಚ್ಚಲ ಬಜೆಟ್ ಅನ್ನು ಮಂಡಿಸಿ, ಹಲವು ಯೋಜನೆಗಳನ್ನು ರೂಪಿಸಿ ಹಣಕಾಸಿನ ನೆರವನ್ನು ನೀಡಿದರು. ತಮ್ಮ ಪ್ರೀತಿಯ ಶಿಕ್ಷಣ ಕ್ಷೇತ್ರಕ್ಕೆ ಹಾಗೂ ಶಿಕ್ಷಣ ಕಲ್ಯಾಣಕ್ಕೆ ವಿಶೇಷ ಒತ್ತು ನೀಡಿರುವುದು ಆಶಾದಾಯಕ ಬೆಳವಣಿಗೆಯಾಯಿತು. ಮೈಸೂರು ವಿ.ವಿ.ಯಲ್ಲಿ ಸರ್ ಎಂ. ವಿಶ್ವೇಶ್ವರಯ್ಯರವರ 'ಅಧ್ಯಯನ ಪೀಠ ಸ್ಥಾಪನೆ, 'ಶಿಕ್ಷಕರ ತರಬೇತಿಗಾಗಿ ಪ್ರಾದೇಶಿಕ ಕಾಲೇಜು ಸ್ಥಾಪನೆ', ಬೆಂಗಳೂರಿನಲ್ಲಿ ಗುಪ್ತಚರದಳ ಸ್ಥಾಪನೆ, ರಾಜ್ಯದ ಎಲ್ಲಾ ಕಡೆ ಚೆಕ್‌ಪೋಸ್ಟ್‌ಗಳ ಸ್ಥಾಪನೆ ಹೀಗೆ ಆಡಳಿತಾತ್ಮಕ ರೀತಿಯಲ್ಲೂ ಶಾಶ್ವತವಾಗಿ ಮಾಡಬೇಕಾದ ಕಾರ್ಯಗಳನ್ನು ಜಾರಿಗೆ ತಂದರು. ಎಸ್.ನಿಜಲಿಂಗಪ್ಪನವರು ಉಪಚುನಾವಣೆಯಲ್ಲಿ ಬಾಗಲಕೋಟೆಯಲ್ಲಿ ಜಯಿಸಿ ಬಂದಾಗ ಮುಖ್ಯಮಂತ್ರಿ ಹುದ್ದೆಯನ್ನು ಕಂಠಿಯವರು ಬಿಟ್ಟುಕೊಡುವುದರ ಮೂಲಕ ತಮ್ಮ ಧಾರಾಳತನವನ್ನು ಮರೆದು ರಾಜ್ಯದ ಜನರಲ್ಲಿ ಉತ್ಕೃಷ್ಟ ವ್ಯಕ್ತಿಯಾಗಿ ಕಂಡುಬಂದರು. ಇಂತಹ ಸೌಮ್ಯವಾದಿ, ಬದ್ಧತೆಯುಳ್ಳ ರಾಜಕಾರಣಿ ಇಡೀ ರಾಜಕಾರಣ ಚರಿತ್ರೆಯಲ್ಲಿ ಮತ್ಯಾರನ್ನು ನೋಡಲು ಸಾಧ್ಯವಿಲ್ಲ. ಅಧಿಕಾರ ಸಿಕ್ಕಿದೊಡನೆ ಯಾರನ್ನು ಬೇಕಾದರೂ ತುಳಿದು ಮೇಲೆ ಬರುವ ರಾಜಕಾರಣದಲ್ಲಿ ಕಂಠಿಯವರು ಮೇಲ್ಪಂಕ್ತಿ ಹಾಕಿಕೊಟ್ಟರು ಎಂಬುದು ಯಾರೂ ಮರೆಯಲಾಗದು.

ಕಂಠಿಯವರು ಶಿಕ್ಷಣ ಸಚಿವರಾಗಿದ್ದಾಗ ಅವರಲ್ಲಿದ್ದ ದೂರದರ್ಶಿತ್ವದ ಆಲೋಚನೆಯಿಂದ ರಾಣಿ ಚೆನ್ನಮ್ಮ ಆಳಿದ ಊರಾದ ಕಿತ್ತೂರಿನಲ್ಲಿ ಬಾಲಕಿಯರಿಗೆ ಬಿಜಾಪುರದಲ್ಲಿ ಸ್ಥಾಪಿಸಿದ ಸೈನಿಕ ಶಾಲೆಯ ಸ್ವರೂಪದಲ್ಲೇ ವಸತಿ ಶಾಲೆಯನ್ನು ಸ್ಥಾಪಿಸಲು, ರಾಣಿ ಚೆನ್ನಮ್ಮನ ಹೆಸರನ್ನು ಇಟ್ಟು ಈ ದೇಶ ಆಳಿದ ಮೊದಲ ಮಹಿಳಾ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ್ದು ಚಾರಿತ್ರಿಕವಾದ ಮಹತ್ವವನ್ನು ತಂದುಕೊಟ್ಟಿತು. ದೀನದಲಿತರ ಹೆಣ್ಣು ಮಕ್ಕಳಿಗಾಗಿ ತೆರೆದ ಈ ವಸತಿಯುತ ಶಾಲೆ ಕುಗ್ರಾಮಗಳಿಂದ ಬಂದ ಹೆಣ್ಣು ಮಕ್ಕಳಿಗೆ ಭವಿಷ್ಯದ ದಾರಿಗೆ ಕಣ್ಣುಕೊಟ್ಟಂತಾಯಿತು. ಇದರಿಂದ ಸಾವಿರಾರು ಹೆಣ್ಣು ಮಕ್ಕಳು ತಮ್ಮ ತಮ್ಮ ಬದುಕನ್ನು ರೂಪಿಸಿಕೊಳ್ಳುವಂತೆ ಶಿಕ್ಷಣದಿಂದ ಉಂಟುಮಾಡಿದ್ದು ಕಂಠಿಯವರ ಜೀವನದಲ್ಲೇ ಬಹುದೊಡ್ಡ ಸಾಧನೆಯಾಗಿತು. ಈ ವಸತಿ ಶಾಲೆಯ ಮೇಲೆ ಎಷ್ಟು ಕಾಳಜಿಯಿತ್ತೆಂದರೆ ಈ ಭಾಗಕ್ಕೆ ಬಂದಾಗ ಶಾಲೆಯನ್ನು ಭೇಟಿ ಮಾಡದೆ ಹೋಗುತ್ತಿರಲಿಲ್ಲ. ಕೊನೆಗೆ ಇದೇ ಶಾಲೆಯಲ್ಲಿ ಮಾತನಾಡುತ್ತಲೇ ಕುಸಿದು ಬಿದ್ದು ನಂತರ ಆಸ್ಪತ್ರೆಗೆ ಹೋಗುವ ಹಾದಿಯಲ್ಲೆ ಇಹಲೋಕ ತ್ಯಜಿಸಿದ್ದು ಶಾಲೆಯೊಟ್ಟಿಗೆ ಇದ್ದ ಅವಿನಾಭಾವ ಬಾಂಧವ್ಯ ಎಂತಹದ್ದು ಎನ್ನುವುದನ್ನು ಕಾಣಬಹುದು.

ಕಂಠಿಯವರು 1967ರಲ್ಲಿ ಐದನೆಯ ಬಾರಿಗೆ ವಿಧಾನಸಭೆಗೆ ಆರಿಸಿಬಂದಾಗ ಆ ಸಂದರ್ಭದಲ್ಲಿ ದೊರೆತ ಸಚಿವ ಪದವಿ ಕ್ಲಿಷ್ಟಕರವಾದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸ್ಥಾನ, ಕಾನೂನು ಸಚಿವರು ಕಾರ್ಯನಿರ್ವಹಿಸಬೇಕಾಗಿದ್ದ ಬಹಳ ಮುಖ್ಯ ಕೆಲಸವೆಂದರೆ ಮೈಸೂರು, ಮಹಾರಾಷ್ಟ್ರ ಹಾಗೂ ಕೇರಳ ರಾಜ್ಯಗಳೊಂದಿಗಿನ ಗಡಿ ವಿವಾದ. ಇದಕ್ಕಾಗಿ ಕೇಂದ್ರ ಸರ್ಕಾರ ರೂಪಿಸಿದ್ದ 'ಮಹಾಜನ್ ಆಯೋಗದ ವರದಿಯನ್ನು ನೀಡಿದ್ದರೂ ಅದರ ಅಮೂಲ್ಯ ವಿಚಾರಗಳು ಕರ್ನಾಟಕದ ಪರವಾಗಿದ್ದರೂ ಆಗಿನ ಕೇಂದ್ರ ಗೃಹ

ಮಂತ್ರಿಗಳಾಗಿದ್ದ ವೈ.ಬಿ ಚವಾಣ್‌ರವರು ವರದಿ ಒಪ್ಪಲು ಸಿದ್ಧವಿರಲಿಲ್ಲ. ಇದು ಕರ್ನಾಟಕಕ್ಕೆ ಹಿನ್ನಡೆಯಾದಂತೆ ಆಯಿತು. ಆದರೂ ಕಂಠಿಯವರು ಸಮರ್ಥವಾದ ರೀತಿಯಲ್ಲಿ ವಾದ ಮಂಡಿಸುತ್ತಲೇ ಮಹಾಜನ್ ವರದಿ ಜಾರಿಗೆ ಶತಪ್ರಯತ್ನ ಜರುಗಿಸಿದರೂ ಅದು ಸಾಧ್ಯವಾಗಲಿಲ್ಲ ಎಂಬುದು ನೋವಿನ ಸಂಗತಿಯಾಯಿತು.

ಡಾ. ಮನು ಬಳಿಗಾರ್ ಅವರ ಈ ಕೃತಿಯಲ್ಲಿ ಬಳಸಿದ ಭಾಷೆ, ಭಾಷೆಯ ಶೈಲಿ ಸುಂದರವಾಗಿದೆ. ಓದುಗನನ್ನು ಎಲ್ಲಿಯೂ ಬೇಸರಿಸದೆ ಒಂದೇ ಉಸುರಿಗೆ ಓದಿಸಿಕೊಂಡು ಹೋಗುವ ರಹದಾರಿಯನ್ನು ಭಾಷೆಯ ಮೂಲಕ ಸಹೃಯರಿಗೆ ತೋರಿಸಿಕೊಟ್ಟಿದ್ದಾರೆ.

ಆಡಳಿತಾತ್ಮಕ ಹುದ್ದೆಯಲ್ಲಿದ್ದರೂ ವೃತ್ತಿಬರಹಗಾರರಂತೆ ನೈಜದ ರೀತಿಯಲ್ಲಿ ವಿಷಯ ನಿರೂಪಣೆಯನ್ನು ಮಾಡಿದ್ದಾರೆ. ಕಂಠೀಯವರ ಜೀವನದಲ್ಲಿ ಹಾಸುಹೊಕ್ಕಾಗಿ ಜರುಗಿದ ಘಟನೆಗಳನ್ನು ಒಟ್ಟಿಗೆ ಕ್ರೋಢೀಕರಿಸಿ, ಅವುಗಳಿಗೆ ಸೂಕ್ತವಾದ ತಲೆಬರಹವನ್ನು ನೀಡಿ, ಅವಕ್ಕೆ ಒಪ್ಪಿಗೆಯಾಗುವ ರೀತಿಯಲ್ಲಿ ನ್ಯಾಯವನ್ನು ಒದಗಿಸಿರುವುದು ಕೃತಿಯ ಮೆರುಗನ್ನು ಹೆಚ್ಚಿಸಿದೆ.

ಡಾ. ಮನು ಬಳಿಗಾರ್ ಕಣ್ಣಲ್ಲಿ ಅರಳಿದ ಈ ಕೃತಿ ಉತ್ಕೃಷ್ಟವಾಗಿದೆ. ಒಬ್ಬ ಸಂತ, ಆದರ್ಶಯುತ ಗಾಂಧೀ ಚಿಂತನೆಗಳನ್ನು ರೂಢಿಸಿಕೊಂಡ ಅಪ್ಪಟ ಗಾಂಧೀವಾದಿ, ಒಂದೇ ರೀತಿಯ ಮನಸ್ಥಿತಿಯಿರುವ ರಾಜಕಾರಣಿ, ಸಜ್ಜನಿಕೆಯ ಶ್ರೇಷ್ಠ ವ್ಯಕ್ತಿತ್ವದ ಎಸ್.ಆರ್.ಕಂಠಿಯವರು ನಾಡು ಕಂಡ ಅತಿವಿರಳ ರಾಜಕಾರಣಿಗಳಲ್ಲಿ ಒಬ್ಬರೆಂದರೆ ಅತಿಶಯೋಕ್ತಿಯಾಗಲಾರದು. ಈ ಮಾತನ್ನು ಡಾ.ಮನುಬಳಿಗಾರ್ ಕೂಡಾ ಹಲವು ವಿಷಯಗಳನ್ನಿಟ್ಟುಕೊಂಡು 'ಅತಿವಿರಳ ರಾಜಕಾರಣಿ ರಾಜಕಾರಣಿ' ಎಂದೇ ಎಸ್.ಆರ್.ಕಂಠಿಯವರನ್ನು ಕರೆದಿರುವುದು ಅರ್ಥಪೂರ್ಣವಾಗಿದೆ.

ಒಟ್ಟಾರೆ ಎಸ್.ಆರ್.ಕಂಠಿಯವರು ರಾಜಕಾರಣಕ್ಕೆ ಬಂದ ತರುವಾಯ ಮತ್ತೊಂದು ವೃತ್ತಿಯನ್ನು ಆಯ್ದುಕೊಳ್ಳದೆ ಇಲ್ಲಿ ಜನಸೇವೆ ಮಾಡುವುದೇ ನನ್ನ ಅಂತಿಮ ಧ್ಯೇಯವೆಂದು ನಂಬಿ, ಅದನ್ನು ಎಂದು ಹುಸಿಗೊಳಿಸದೆ ಬದ್ಧತೆಯ ಮೂಲಕ ಪ್ರಾಮಾಣಿಕವಾಗಿ ಬದುಕಿ, ಜೀವನಮೌಲ್ಯಗಳನ್ನು ಗಾಳಿಗೆ ತೂರದೆ, ವಿಶಾಲ ಹೃದಯವಂತಿಕೆಯನ್ನು ಇಟ್ಟುಕೊಂಡು, ಗಾಂಧೀಜಿಯವರ ತತ್ವಾದರ್ಶಗಳನ್ನು ನಂಬಿ, ಶರಣರ ಸಮಾಜೋ-ಧಾರ್ಮಿಕ ವಿಚಾರಗಳೊಂದಿಗೆ, ತಮ್ಮ ಸಮಕಾಲೀನ ಎಲ್ಲಾ ರಾಜಕಾರಣಿಗಳ ಉತ್ತಮ ಬಾಂಧವ್ಯ ಹೊಂದಿ, ಅವರಿಂದಲೂ ಹೊಗಳಿಕೆಗೆ ಪಾತ್ರರಾದವರು. ಇಂತಹ ಸಜ್ಜನ ರಾಜಕಾರಣಿ ಕಂಠಿಯವರ ಬಗೆಗೆ ಡಾ.ಮನು ಬಳಿಗಾರ್ ಅವರು ಅಮೂಲಾಗ್ರವಾದ ವಿಷಯಗಳೊಂದಿಗೆ ಈ ಕೃತಿಯನ್ನು ಕಟ್ಟಿಕೊಟ್ಟಿರುವುದು ನಿಜಕ್ಕೂ ಒಳ್ಳೆಯ ಪ್ರಯತ್ನ. ಇಂತಹ ಕೃತಿಗಳು ಇನ್ನಷ್ಟು ರೂಪಿತವಾಗಲಿ ಎಂದು ಆಶಿಸುತ್ತೇನೆ.

❖

# ಮನು ಬಳಿಗಾರ್ ಅವರ 'ಅಪ್ಪ'ನ ಅಂತಃಕರಣದ ಅನಾವರಣ

ಪ್ರೊ.ಎಂ.ಎಲ್. ನರಸಿಂಹಮೂರ್ತಿ

ನಿರ್ದಿಷ್ಟ ವ್ಯಕ್ತಿಗಳ ಬದುಕಿನ ಚರಿತ್ರೆಯೆ ಜೀವನ ಚರಿತ್ರೆ ಇತರರು ಎಷ್ಟೇ ಬಂದರೂ ಈ ವ್ಯಕ್ತಿಗೆ ಪೋಷಕವಾಗಿರುತ್ತಾರೆ. ಆ ವ್ಯಕ್ತಿಯ ವ್ಯಕ್ತಿತ್ವದ ಸಮಗ್ರ ನಿರೂಪಣೆ ಸಾಧನೆಯೊಂದಿಗೆ ಬರಬೇಕಾಗುತ್ತದೆ. ಅದೇ ಮನುಷ್ಯನ ಅಂತರಂಗ ಬಹಿರಂಗದ ಅಭಿವ್ಯಕ್ತಿಯೂ ಆಗಿರುತ್ತದೆ. ಹಾಗೆಂದ ಮಾತ್ರಕ್ಕೆ ಆ ವ್ಯಕ್ತಿಯ ಜನನದಿಂದ ಮೊದಲುಗೊಂಡು ಜೀವಿತಾಂತ್ಯದವರೆಗೆ ನಡೆದ ಘಟನೆಗಳನ್ನು ಕ್ರಮವಾಗಿ ಜೋಡಿಸಿಕೊಡುವುದಷ್ಟೇ ಲೇಖಕರ ಕೆಲಸವಲ್ಲ. ಆ ಕಾಲಘಟ್ಟದ ವೈವಿಧ್ಯಮಯ ವಿದ್ಯಮಾನಗಳನ್ನು ಬಹುಮುಖಿ ನೆಲೆಯಲ್ಲಿ ಕಟ್ಟಿಕೊಡುವಂಥದ್ದೂ ಆಗಿರುತ್ತದೆ. ಅದರಲ್ಲೂ ನಾವು ಹೆಚ್ಚು ಪ್ರೀತಿಸುವ, ಗೌರವಿಸುವ ಹಿರಿಯರು, ಸ್ನೇಹಿತರ ಬಗೆಗೆ ಬರೆಯುವಾಗ ಹೆಚ್ಚು ಭಾವುಕರಾಗಿಬಿಡುತ್ತೇವೆ. ಅದರಲ್ಲೂ ತಂತಮ್ಮ ತಂದೆಯವರನ್ನು ಕುರಿತು ಬರೆಯುವ ಸಂದರ್ಭದಲ್ಲಿ ಮಾನಸಿಕ ದೂರವನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತದೆ. ಇಂಥ ಸವಾಲುಗಳ ನಡುವೆಯೂ ಮನು ಬಳಿಗಾರ್ ಅವರು ತಮ್ಮ 'ಅಪ್ಪ'ನ ಜೀವನ ಚರಿತ್ರೆಯನ್ನು ಯಾವ ಪೂರ್ವಾಗ್ರಹಗಳಿಗೂ ಪಕ್ಕಾಗದೆ ಸಮಸ್ಥಿತಿಯನ್ನು ಕಾಪಾಡಿಕೊಂಡು ಸಮರ್ಥವಾಗಿ ಬರೆದಿದ್ದಾರೆ.

ಪುಸ್ತಕ ಮೊದಲಲ್ಲಿ 'ಮಗನ ಮಾತು'ಗಳಿದ್ದು, ಅಲ್ಲಿ ಮನು ಬಳಿಗಾರ್ ಅವರು ಹೀಗೆ ಬರೆದಿದ್ದಾರೆ: 'ನಮ್ಮ ತಂದೆಯವರ ಈ ಜೀವನ ಚರಿತ್ರೆ ಒಂದು ರೀತಿಯಲ್ಲಿ ಇಪ್ಪತ್ತನೇ ಶತಮಾನದ ಪ್ರಾರಂಭ ಹಾಗೂ ಅಂತಿಮ ಕಾಲದ ಕುಟುಂಬದ, ಗ್ರಾಮದ, ಸಮಾಜ ವ್ಯವಸ್ಥೆಯ ಚಿತ್ರಣವೂ ಆಗುತ್ತದೆ. ಒಮ್ಮೊಮ್ಮೆ ಅನಿಸುತ್ತದೆ. ಅರ್ಧ ಶತಮಾನದ ಅಂತರದಲ್ಲಿ ಎಷ್ಟೊಂದು ಬದಲಾವಣೆಗಳು ಕಾಲಿಟ್ಟಿವೆಯಲ್ಲ ಎಂದು! ಒಳ್ಳೆಯದೊ ಕೆಟ್ಟದೊ ಅಂತೂ ಇಂತೂ ಹೊಸತಿಗೆ ಮೈಯೊಡ್ಡಿಕೊಂಡಿದ್ದಾಗಿದೆ. ಒಟ್ಟಿನಲ್ಲಿ ಹಿಂದಿನ ಉತ್ತಮ ಜೀವನ ಮೌಲ್ಯಗಳನ್ನು ಉಳಿಸಿಕೊಳ್ಳುತ್ತ ನವವಿಕಾಸವನ್ನು ಅಪ್ಪಿಕೊಳ್ಳಬೇಕಿದೆ. ಇದು ಹಿಂದಿನ, ಇಂದಿನ ಹಾಗೂ ಮುಂದಿನ ತಲೆಮಾರುಗಳು ತಿಳಿದುಕೊಳ್ಳಬೇಕಾಗಿದೆ' ಲೇಖಕರು ತಮ್ಮ ತಂದೆಯ ಬಗೆಗೆ ಆಪ್ತತೆಯನ್ನು ವ್ಯಕ್ತಪಡಿಸುತ್ತಲೇ ಸಮಾಜ ಹಿತವನ್ನು ಬಯಸುತ್ತಾರೆ. ಜೀವನ ಮೌಲ್ಯಗಳ ಬಗ್ಗೆ ಗೌರವ ತೋರಿಸುತ್ತಾರೆ. ಇದು ಲೇಖಕರಿಗೆ ಜನತೆಯ ಬಗ್ಗೆ ಅಪಾರ ಕಾಳಜಿಯಿರುವುದನ್ನು ವ್ಯಕ್ತಪಡಿಸುತ್ತದೆ.

'ಅಪ್ಪ'ದಿಂದ 'ಅಂತಿಮ ನಮನ'ದವರೆಗೆ ಇಪ್ಪತ್ತೆರಡು ಉಪಶೀರ್ಷಿಕೆಗಳಲ್ಲಿ ಹರಡಿಕೊಂಡಿರುವ ಈ ಜೀವನ ಚರಿತ್ರೆಯ ಕಡೆಯ ಪುಟಗಳಲ್ಲಿ ಕೆಲವು ಗಣ್ಯರ ಅಭಿಪ್ರಾಯಗಳು ದಾಖಲಾಗಿವೆ.

ಮೊದಲನೇ ಉಪಶೀರ್ಷಿಕೆ 'ಅಪ್ಪ' ಭಾಗದಲ್ಲಿ, ಬಾಲ್ಯದಲ್ಲಿ ಮೂರು ವರ್ಷಗಳವರಾಗಿದ್ದಾಗಲೇ ತನ್ನ ತಾಯಿಯನ್ನು ಕಳೆದುಕೊಂಡ ತನ್ನ ತಂದೆ ಪರಮೇಶ್ವರಪ್ಪ ತನ್ನ ಅಜ್ಜನ ಆರೈಕೆಯಲ್ಲೇ ಬೆಳೆದವರು. ಅವರಿಗೆ ನಮ್ಮ ಗ್ರಾಮೀಣ ಭಾಗದಲ್ಲಿ ವಿಶೇಷ ಕರುಣೆ, ಕಕ್ಕುಲಾತಿ ದೊರೆಯಿತು. ನಮ್ಮ ಭಾರತೀಯ ಮಣ್ಣಿನ ಗುಣ ವೈಶಿಷ್ಟ್ಯವೆನ್ನಬಹುದು. ಸಾವಂತ್ರಮ್ಮ ಅಜ್ಜನ ಹಿರಿಯ ಹೆಂಡತಿಯ ಕೂಸು ನಮ್ಮ ತಂದೆ. ಅವರಿಗೆ ತಾಯಿ

ಮಮತೆಯನ್ನು ನೀಡಿದವರಲ್ಲಿ ಯಾರೂ ನಮ್ಮ ರಕ್ತಸಂಬಂಧಿಗಳಲ್ಲ. ಇದು ಮಾನವೀಯ ಸಂಬಂಧದ ಗುಟ್ಟು ಹಾಗೂ ಮಹತ್ವ. ಬಾಲ್ಯದಲ್ಲಿ ನನ್ನ ತಂದೆಯವರ ಯೋಗಕ್ಷೇಮ ನೋಡಿಕೊಂಡವರಲ್ಲಿ ಪ್ರಮುಖರಾದವರೆಂದರೆ ಅಪ್ಪನ ಸೋದರ ಸಂಬಂಧಿಗಳಾದ ವೀರಭದ್ರ ಬಳಿಗಾರ್, ಅವರ ಧರ್ಮಪತ್ನಿ ಗಂಗವ್ವ, ನೆರವಾದವರನ್ನು ನೆನಪುಮಾಡಿಕೊಳ್ಳುವುದು ಸಜ್ಜನರ ಗುಣವಲ್ಲದೆ ಮತ್ತೇನು?

ಯೌವ್ವನದಲ್ಲಿ ಗರಡಿ ಮನೆಯಲ್ಲಿ ಸಾಮು ಸಾಧನೆ ಮಾಡಿದ ಅಪ್ಪ 'ಪುರುಷ ಸಿಂಹ'ರಾಗಿದ್ದರು. ರೂಪ, ಮೈಕಟ್ಟು, ಮಾತನಾಡುವ ಶೈಲಿ, ನಿಲ್ಲುವ ಠೀವಿ, ನಡೆಯುವ ರೀತಿ, ಕುಳಿತುಕೊಳ್ಳುವ ಪರಿ ಎಲ್ಲವೂ ವೈಶಿಷ್ಟ್ಯಪೂರ್ಣವಾಗಿದ್ದಿತು. 17ನೇ ವಯಸ್ಸಿನಿಂದ 21ನೇ ವರ್ಷದವರೆಗೆ ಪರವೂರಿಗೆ ಹೋಗಿ ಕುಸ್ತಿಯಲ್ಲಿ ಭಾಗವಹಿಸುತ್ತಿದ್ದರು. ಮದುವೆಯಾದ ನಂತರ ಅದನ್ನು ಬಿಟ್ಟರು. ತಮ್ಮ ವೃದ್ಧಾಪ್ಯದವರೆಗೂ ಗರಡಿ ಮನೆಗೆ ಹೋಗುವುದು, ಕುಸ್ತಿ ಕಲಿಸುವುದು, ಮನೆಯಲ್ಲಿ ವ್ಯಾಯಾಮ ಮಾಡುವುದು ನಡೆದೇ ಇತ್ತು.

ಸದೃಢವಾದ ದೇಹದಲ್ಲಿ ದೃಢವಾದ ಮನಸ್ಸು ಇರಲು ಸಾಧ್ಯ. 'ಸರ್ವಶ್ರೇಷ್ಠ ಸಸ್ಯಾಹಾರ'ವನ್ನು ಸರಿಯಾದ ಸಮಯದಲ್ಲಿ ಸೇವಿಸುವುದರಿಂದ ದೇಹಬಲ ಹೆಚ್ಚುತ್ತದೆ ಎಂಬ ಕಾರಣದಿಂದ ಸುಕ್ಕಾ ಮೇವು(ಡ್ರೈಫ್ರೂಟ್ಸ್) ತಿನ್ನುತ್ತಿದ್ದರು. ಕೆಲವು ಸಾರಿ ಮಕ್ಕಳಿಗೆ ವ್ಯಾಯಾಮಕ್ಕೂ ಮುನ್ನ ಜೇನುತುಪ್ಪ, ಲಿಂಬೆಹಣ್ಣಿನ ಶರಬತ್ತು ನೀಡುತ್ತಿದ್ದರು. 'ತಾಲೀಮು, ವ್ಯಾಯಾಮ ಇತ್ಯಾದಿ ಬಗ್ಗೆ ಹೇಳುವಾಗ ಕುಸ್ತಿಪಂದ್ಯಗಳ ಬಗ್ಗೆ ಮಾಹಿತಿ ನೀಡುತ್ತಿದ್ದರು. ಅದಕ್ಕಾಗಿಯೇ ಊರಲ್ಲಿ ನಾಲ್ಕು ಗರಡಿ ಮನೆಗಳಿದ್ದು ಅಲ್ಲಿ ತಾಲೀಮು ಮಾಡುತ್ತಿದ್ದವರಲ್ಲಿ ಗರಿಗೆಪ್ಪ ಕುಳ್ಳ, ಅಕ್ಕೂರ ಹಾಲಪ್ಪ, ಕಳ್ಳಳ್ಳಿ ನಿಂಗಪ್ಪ ಪ್ರಮುಖರು. ಎಲ್ಲಕ್ಕೂ ಮುಖ್ಯವಾಗಿ ಹಿಂದೆ ನಮ್ಮ ತಂದೆಗೆ ಕುಸ್ತಿ ಕಲಿಸಿದ ರಾಣೆಬೆನ್ನೂರಿನ ಮರಡೆಪ್ಪನನ್ನು ನೆನಪಿಸಿಕೊಳ್ಳುತ್ತಾರೆ. ದೂರದ ಊರಿನಿಂದ ನುರಿತವವರನ್ನು ಕರೆಸಿ 'ವೈವಿಧ್ಯಮಯ ವ್ಯಾಯಾಮ, ಯೋಗಾಸನ ಪ್ರದರ್ಶನ ಮತ್ತು ತಮ್ಮ ಮಕ್ಕಳಿಗೆ ಹಾಗೂ ಊರಿನ ಯುವಕರಿಗೆ ತರಬೇತಿ ಕೊಡಿಸುತ್ತಿದ್ದರು. ಅಂಥವರಲ್ಲಿ ರಾಣೆಬೆನ್ನೂರಿನ ಲಕ್ಷ್ಮಣ ಕುಮಾರ ಸಣ್ಣೆಲ್ಲಪ್ಪನೆಂಬ ಯುವಕನ ಸ್ಮರಿಸುತ್ತಾರೆ. ಮನುಷ್ಯನ ನೈತಿಕಜೀವನ ಹೇಗಿರಬೇಕು. ಬ್ರಹ್ಮಚರ್ಯದ ಮಹತ್ವವೇನು? ಬೇರೆ ಹೆಣ್ಣು ಮಕ್ಕಳನ್ನು ಹೇಗೆ ನಡೆಸಿಕೊಳ್ಳಬೇಕು. ಅವರೊಡನೆ ನಮ್ಮ ನಡತೆ ಎಂತಹದ್ದಿರಬೇಕು? ಇತ್ಯಾದಿಗಳನ್ನೆಲ್ಲ ಸೋದಾಹರಣವಾಗಿ ಮಕ್ಕಳಿಗೆ ನಮ್ಮ ತಂದೆ ಹೇಳಿಕೊಡುತ್ತಿದ್ದರು. ಎಲ್ಲವನ್ನೂ ಸಕಾರಾತ್ಮಕವಾಗಿ ಕಾಣುವುದು. ಬಡವರ ಮೇಲೆ ಕರುಣೆ ದಯೆ ತೋರಿಸಬೇಕು. ಅಪ್ಪ ಒಂದು ರೀತಿಯಲ್ಲಿ ನಮ್ಮೂರಿನಲ್ಲಿ ಇಂತಹದ್ದೊಂದು ನೈತಿಕ ಕ್ರಾಂತಿಯನ್ನೇ ಮಾಡಿ ಹೋದದ್ದು ಇಂದು ಇತಿಹಾಸ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಬರಲು ಇಂಥ ವ್ಯಕ್ತಿಗಳ ಸಲಹೆ, ಮಾರ್ಗದರ್ಶನ ಅತ್ಯವಶ್ಯ. ಇದನ್ನು 'ಪುರುಷ ಸೂಕ್ತ' ಎಂದು ಬಳಿಗಾರರು ಸರಿಯಾಗಿಯೇ ಗುರುತಿಸಿದ್ದಾರೆ.

'ಸ್ವತಂತ್ರ ನಿಲುವಿನ ಸರದಾರ'ರಾದ ತಂದೆಯವರು ತಮ್ಮ ಮಕ್ಕಳಿಗೆ ಅಣ್ಣ-ತಮ್ಮಂದಿರ ಸಂಬಂಧ ಹೇಗಿರಬೇಕು, ಅಕ್ಕ-ತಂಗಿಯರೆಂದರೆ ಅವರನ್ನು ಹೇಗೆ ನಡೆಸಿಕೊಳ್ಳಬೇಕು ಇತ್ಯಾದಿಗಳ ಬಗ್ಗೆ ಬಹಳ

ಅದ್ಭುತವಾಗಿ ವಿವರಿಸುತ್ತಿದ್ದರು. ಅವರಿಗಿದ್ದ ಸಮಾಜಮುಖಿ ಚಿಂತನೆಯಿಂದಾಗಿಯೇ 'ಗ್ರಾಮಭಾರತಿ ಶಿಕ್ಷಣ ಸಂಸ್ಥೆ ಮತ್ತು ಹೈಸ್ಕೂಲ್ ಸ್ಥಾಪನೆಯಾಗಿದ್ದು, ತಂದೆ ಏಳನೇ ಈಯತ್ತೆ ಕೂಡ ಪಾಸಾಗಿರಲಿಲ್ಲ. ಶಿಕ್ಷಣ ಮಹತ್ವ ಅವರಿಗೆ ಚೆನ್ನಾಗಿ ತಿಳಿದಿತ್ತು. ಆಗ ಲಕ್ಷ್ಮೇಶ್ವರಕ್ಕೆ ಬಸ್ ಸೌಕರ್ಯವಿಲ್ಲದ್ದರಿಂದ ಐದಾರು ಕಿಲೋಮೀಟರ್ ನಡೆದು ಹೋಗಬೇಕಾಗಿತ್ತು. ನಮ್ಮೂರಲ್ಲಿ 1950ಕ್ಕೆ ಹುಟ್ಟಿದ ಯಾವ ಹೆಣ್ಣು ಮಗಳೂ 10ನೇ ಕ್ಲಾಸ್ ಪಾಸು ಮಾಡಿರಲಿಲ್ಲ. 1964ರಲ್ಲಿ ಶಿಗ್ಲಿ ಹೈಸ್ಕೂಲ್ ಪ್ರಾರಂಭವಾಯಿತು. ಒಂದು ರೀತಿಯಲ್ಲಿ ನಮ್ಮೂರ ಹೈಸ್ಕೂಲ್ ಸ್ಥಾಪಿಸಿದ್ದೇ ಹೆಣ್ಣುಮಕ್ಕಳಿಗಾಗಿ ಎಂದರೆ ಉತ್ಪ್ರೇಕ್ಷೆಯಾಗದು. ಊರಿಗೆ 'ಅರುಣೋದಯ'ವಾಯಿತು, ಹೈಸ್ಕೂಲ್ ಬಂದದ್ದು, ಬೋರ್ಡಿಂಗ್ ಕೂಡ ಸೇರಿತು.

'ಮಹಾಜನನಿ ಜಾನಕಿಬಾಯಿ' ವೇಶ್ಯೆಯಾಗಿದ್ದರೂ ಅವರನ್ನು ಪ್ರೇರೇಪಿಸಿದ ತಂದೆಯವರು ಶಿಗ್ಲಿ ಮತ್ತು ಲಕ್ಷ್ಮೇಶ್ವರದ ಹೈಸ್ಕೂಲ್‌ಗೆ ಆಕೆಯ ಆಸ್ತಿಯನ್ನು ಸಮನಾಗಿ ರಿಜಿಸ್ಟ್ರರ್ಡ್ ದಾನಪತ್ರ ಮಾಡಿಸಿದ್ದರು. 'ಪರಮಾತ್ಮನ ಟ್ರಕ್ಕು  ಪರಮಾತ್ಮನ ಟ್ರಕ್ಕು' ಭಂಗಿ ರಾಮಯ್ಯ ನಮ್ಮ ಹೊಲಗಳಿಗೆ ಭಂಗೀ ಗೊಬ್ಬರ ಪೂರೈಸುತ್ತಿದ್ದನು. ಅಪ್ಪ ಸುತ್ತಮುತ್ತಲ ಪ್ರದೇಶದವರಿಗೆ ಪರಿಚಿತರಾದದ್ದು 'ಕಬ್ಬಿನಂತಹ ಜೋಳದ ಬೆಳೆ - ಕೆ.ಜಿ.ತೂಕದ ಉಳ್ಳಾಗಡ್ಡಿ'ಯನ್ನು ತನ್ನ ಹೊಲದಲ್ಲಿ ಬೆಳೆದು ನಮ್ಮ 'ಶ್ರೇಷ್ಠ ತಳಿಯ ಮನೆಯ ಬೀಜ, ಸಸಿ'ಗಳನ್ನು ದೂರದ ಧಾರವಾಡ, ಕುಂದಗೋಳ, ನವಲಗುಂದ, ಶಿಗ್ಗಾಂವ, ಬ್ಯಾಡಗಿ ಮುಂತಾದ ತಾಲೂಕುಗಳಿಂದ ರೈತರು ಬಂದು ಖರೀದಿಸಿ ಕೊಂಡೊಯ್ಯುತ್ತಿದ್ದರು. 'ಅವರ ಧೈರ್ಯದ ಒಂದೆರಡು ಉದಾಹರಣೆಗಳು' ಮೂಢನಂಬಿಕೆ, ಮೌಢ್ಯಗಳ ವಿರುದ್ಧ ಒಂದು ತಣ್ಣನೆ ಕ್ರಾಂತಿಯನ್ನು ಅಪ್ಪ ಹುಟ್ಟುಹಾಕಿದ್ದರು.

'ತಾಬಲ ಜಗಬಲ' ಖಾದಿಗೆ ಮಾರುಹೋದ ನನ್ನ ತಂದೆ ನಮ್ಮ ತಾಯಿಯವರಿಗೆ ಖಾದಿ ಸೀರೆ ಉಡಿಸಿ ಮದುವೆ ಮಾಡಿಕೊಂಡಿದ್ದರಂತೆ. ಬಡವರ ಕೈಮಗ್ಗಕ್ಕೆ ಹೋಗಬೇಕಾದ ನೂಲು ಬೇರೆಲ್ಲೋ ಕೈಸೇರತೊಡಗಿತು. ಅದನ್ನು ಪತ್ತೆ ಮಾಡಿ ಹಾಗೆ ಮಾಲನ್ನು ಸಾಗಿಸುತ್ತಿದ್ದವರನ್ನು ಹಿಡಿದು ಚೆನ್ನಾಗಿ ಥಳಿಸಿ, ಓಡಿಸಿದರು. ನೊಂದ ನೇಕಾರರು, ಕೂಲಿಕಾರರು ಖುಷಿಗೊಂಡರು. 'ಪರಮೇಶಪ್ಪಾ ಬಹಾದ್ದೂರ್ ಆಯಾರೇ' ಎಂದು ಸುತ್ತಮುತ್ತಲ ಊರಿನವರು ಹೇಳುವುದು. ನಮ್ಮ ತಂದೆಯವರಿಂದ ಸಹಾಯ ಪಡೆದು ಉನ್ನತ ಸಾಧನೆ ಮಾಡಿದ ಕುಟುಂಬದವರು. ಅವರಲ್ಲಿ ಮೈಸೂರು ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿದ್ದ ಡಾ.ನೀಲಗಿರಿ ತಳವಾರ್, ಬೆಳಗಾವಿಯ ಕೆ.ಎಲ್.ಇ.ಇಂಜಿನೀಯರಿಂಗ್ ಕಾಲೇಜಿನ ಪ್ರಾಚಾರ್ಯರಾಗಿದ್ದ ಪ್ರೊ, ಪುನಗಿನ ಆದರೂ ಸೇರುತ್ತಾರೆ.

ಅಪ್ಪನಿಂದ ಸಹಾಯ ಪಡೆದುಕೊಂಡವರು ಅವರ ಗುಣಗಾನ ಮಾಡಿರುವುದುಂಟು. ಅವರಲ್ಲಿ ಕೆ.ಎಂ. ಸುಂಕದ ಒಬ್ಬರು. ಅವರು ಅಪ್ಪನನ್ನು 'ಕಾಮಧೇನುವಾದ ಕಾಯಕ ಯೋಗಿ'ಯಾಗಿ ಕಂಡು ಬರೆದಿರುವ ಕೆಲವು ಮಾತುಗಳು ಹೀಗಿವೆ:

ಗ್ರಾಮೀಣ ಪರಿಸರದ ಸಾಮುದಾಯಿಕ ಜೀವನದಲ್ಲಿ ಹಾಲು-ಜೇನಾಗಿ ಬೆರೆತರು. ದುರ್ಬಲರಿಗೆ ಊರುಗೋಲಾಗಿ, ನಿರ್ಗತಿಕರಿಗೆ ನೆರಳಾಗಿ, ನೊಂದವರಿಗೆ ಬಂಧುವಾಗಿ ಜನಮಾನಸದಲ್ಲಿ 'ಇವನಮ್ಮವ'ನೆಂಬ ನಂಬುಗೆಯನ್ನು ನೆಲೆಗೊಳಿಸಿದರು.

ಮಕ್ಕಳಿಗೆ ಮೊದಲ ಗುರುವಾಗಿ ಹೃದಯ ಹಸನುಗೊಳಿಸಿ, ನೈತಿಕತೆಯ ಬೀಜ ಬಿತ್ತಿದವರು. ತತ್ವಜ್ಞಾನಿಯಾಗಿ ಸನಾತನ ಸಂಸ್ಕೃತಿಯ ತಿಳಿಬೆಳಕು ಹರಿಸಿದರು. ಎಳೆಯರ ಎದೆಯಾಳದಿಂದ ಸಾಹಸದ ಸುರಗಂಗೆ ಧುಮ್ಮಿಕ್ಕಿಸುವ ಧೀಮಂತಿಕೆಯನ್ನು ನೀಡಿದರು.

ಊರೆಲ್ಲಾ ಬಂಧುಗಳು, ಕೇರಿಯಲ್ಲಾ ಬಳಗ ಎಂಬ ಭಾವ ಅವರದಾಗಿತ್ತು. ತಾಲೂಕು ಬೋರ್ಡಿನ ಸದಸ್ಯತ್ವ, ಸೇವಾ ಮಂದಿರದ ಟ್ರಸ್ಟಿ, ಶಿಗ್ಲಿ ಗ್ರಾಮ ಭಾರತಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಪ್ರಸಾದ ನಿಲಯದ ರೂವಾರಿ.

ಅದೆಷ್ಟು ಕಾಲ ನಾವು ಈ ಭೂಮಿಯ ಮೇಲೆ ಬದುಕಿದ್ದೇವೆ ಎಂಬುದು ಮುಖ್ಯವಲ್ಲ. ಅದೆಷ್ಟು ಉದಾತ್ತವಾಗಿ ಬದುಕಿದ್ದೇವೆ ಎಂಬುದು ಮುಖ್ಯವಾಗುತ್ತದೆ.

'ದುಡಿಮೆಯೇ ದೇವರು' ಜಂಗಮಕ್ಕೆ ಧನವ ನೀಡಿ ಧರ್ಮನಿಷ್ಠನೆನಿಸಿದರು. ಅವರ ಧರ್ಮಪತ್ನಿ ಶ್ರೀಮತಿ ಶಂಕರಮ್ಮನವರು "ಸತಿ-ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬಂತೆ ಈ ಸಾತ್ವಿಕ ದಂಪತಿಗಳ ಪರಿಶುದ್ಧ ಬದುಕು ಗಂಧದ ಕೊರಡಿನಂತೆ, ಕಬ್ಬಿನ ಜಲ್ಲೆಯಂತೆ, ಪುಟವಿಟ್ಟ ಸುವರ್ಣದಂತೆ ಜಗಕೆ ಆಪ್ಯಾಯಮಾನವಾಗಿದೆ. ಅವರ ಧೀಮಂತ ಬಾಳು ದಾರಿದೀಪವಾಗಿದೆ. ಇದನ್ನು ಬಳಿಗಾರರು ತಮ್ಮ ಅಪ್ಪ ಪುಸ್ತಕದಲ್ಲಿ ದಾಖಲಿಸಿದ್ದಾರೆ.

'ಹಲವು ದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ - ಅಪ್ಪ' ಭಾಗದಲ್ಲಿ ಕೆಲವು ಪದ್ಯಗಳಿವೆ-

"ಅಪ್ಪ ಜೀವನ ಪರ್ಯಂತ
ಕೇವಲ ಎರಡನ್ನೇ ಹದ ಮಾಡುತ್ತಿದ್ದವ
ಒಂದು : ಭೂಮಿ
ಎರಡು : ಮಕ್ಕಳು"

"ಅಪ್ಪ ಹಿಡಿದಿದ್ದರೂ ನೆಲ
ಕಿಂಚಿತ್ತೂ ಕಡಿಮೆಯಾಗಿಲ್ಲ ಛಲ
ಹೇಗಿದ್ದರೇನು ಅವನೇ ನಮ್ಮೆಲ್ಲ ಬಲ"

"ಹಾಲು ತುಪ್ಪದ ಸವಿಯ ಎಲ್ಲರಿಗೂ ಕೊಟ್ಟವರು
ಮಕ್ಕಳು ಮೊಮ್ಮಕ್ಕಳು ಹಾಗೂ ದೇಶಪ್ರೇಮ ತನ್ನ ಉಸಿರೆಂದು ಬಗೆದವರು"

ಈ ಕವಿತೆಗಳನ್ನು ಬಳಿಗಾರ್ ಕುಟುಂಬದ ತಂದೆಗೆ ತಕ್ಕ ಮಕ್ಕಳು ಬರೆದು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

'ಅಪ್ಪ-ಅವ್ವ ಎಂಬ ಅನನ್ಯ ಅದ್ಭುತಗಳು' ಅಡಿಯಲ್ಲಿ 'ಉತ್ತಮವಾದದ್ದು ಅನ್ನಿಸಿದರೆ ಮಾತ್ರ ಅದರಿಂದ ಆಯ್ದುಕೊ, ನಿನ್ನನ್ನು ನೋಡಿ ಮಂದಿ ಕಲಿಯಬೇಕು ಹಾಗೆ ನೀನಿರಬೇಕು - ಇದು ಅಪ್ಪನ ಮಾತುಗಳ ನೇರ ಪಾಠ. ಜೀವನ ಮೌಲ್ಯಗಳ ಬಗ್ಗೆ, ಕೌಟುಂಬಿಕ ಸಂಬಂಧಗಳ ಬಗ್ಗೆ, ಎಲ್ಲಕ್ಕೂ ಮಿಗಿಲಾಗಿ ರಾಷ್ಟ್ರಭಕ್ತಿಯ ಬಗ್ಗೆ ನಮಗೆ ನಮ್ಮ ತಂದೆಯೇ ಗುರುಗಳು. ಹಣ ಬರುವುದೇ ಸದ್ವಿನಿಯೋಗಕ್ಕಾಗಿ, ತಿಜೋರಿಯಲ್ಲಿ ಬಚ್ಚಿಡಲಿಕ್ಕಲ್ಲ ಎಂದು ಲೋಭಿಗಳನ್ನು ಛೇಡಿಸುತ್ತಿದ್ದರು. "ತಂದೆ ತಾಯಿ ಮಕ್ಕಳ ಸಂಬಂಧ ನಮ್ಮ ದೇಶದಲ್ಲಿರುವಂತೆ ಈ ಪೃಥ್ವಿಯ ಮೇಲೆ ಬೇರೆಲ್ಲೂ ಇರಲಿಕ್ಕಿಲ್ಲವೆಂದೆ ನನ್ನ ಅನುಭವವಾಗಿದೆ." ಬಳಿಗಾರರು ಮನ ಬಿಚ್ಚಿ ಹೇಳಿಕೊಂಡಿದ್ದಾರೆ.

'ನನ್ನ ಅವ್ವ' ಅಪ್ಪನಿಗೆ 'ಅಂತಿಮ ನಮನ' ಸಲ್ಲಿಸಿದ್ದಾರೆ. ಕಡೆಯಲ್ಲಿ ಕೆಲವು ಗಣ್ಯರ ಅಭಿಪ್ರಾಯಗಳಿವೆ. "ಪಿತೃತ್ವವೆಂಬ ಪದಕ್ಕೆ ಹೊಸ ವ್ಯಾಖ್ಯಾನ ನೀಡಿದ್ದಾರೆ".

ಕುಂ.ವೀ. (ಸಾಹಿತಿಗಳು)

'He belived in spreading education and tried his best to give quality Education to all children'

- Sri V.S. Malimath Former Chief Justice of Karnataka & Kerala

ಈ ಲೇಖನದಲ್ಲಿ 'ಅಪ್ಪ' ಪುಸ್ತಕದ ಸಾರಸರ್ವಸ್ವವನ್ನು ಸಂಗ್ರಹಿಸಿಕೊಡುವ ಪ್ರಯತ್ನವಿದ್ದು, ಪುಸ್ತಕವನ್ನು ಓದಲು ಸಾಧ್ಯವಾಗದಿದ್ದವರು ಈ ಲೇಖನದಲ್ಲಿ ಅಡಕಗೊಂಡಿರುವ ವಿಚಾರಗಳನ್ನು ಓದಿ ಅರಿಯಲಿ ಎಂಬುದೇ ಇದರ ಉದ್ದೇಶ. ಮನು ಬಳಿಗಾರರು ಬಳಸುವ ಭಾಷೆ ಹಿತಮಿತವಾಗಿ, ಹೃದಯಕ್ಕೆ ಮುಟ್ಟುವಂಥದ್ದಾಗಿದೆ. ಎಲ್ಲಿಯೂ ಉತ್ಪ್ರೇಕ್ಷೆ ಎಂಬುದು ಸೇರದೆ ವಾಸ್ತವಿಕ ಸಂಗತಿಗಳನ್ನು ಮಾತ್ರ ಬರೆದಿದ್ದಾರೆ. ಈ ಪುಸ್ತಕದ ಪ್ರತಿಯೊಂದು ಘಟನೆಯೂ ಒಂದು ಸಂದೇಶವನ್ನು ಕೊಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಒಬ್ಬ ಮಗ ತಂದೆಯ ಬಗ್ಗೆ ಬರೆಯುವಾಗ ಎಂಥ ಎಚ್ಚರವನ್ನು ವಹಿಸಬೇಕೆಂಬುದನ್ನು ಪುಸ್ತಕದ ಉದ್ದಕ್ಕೂ ಕಾಣಬಹುದು. ಅವರ ಶ್ರಮ ಸಾರ್ಥಕವಾಗಿದೆ. ಬರೆದರೆ ಹೀಗೆ ಬರೆಯಬೇಕು ಎಂದು ಹೇಳಲೇಬೇಕಾಗುತ್ತದೆ. ಈ ಪುಸ್ತಕ ತಮ್ಮ ತಂದೆಯ ಬಗ್ಗೆ ಬರೆಯುವರಿಗೆ ಅಚ್ಚುಕಟ್ಟಾದ ಮಾದರಿಯಾಗಿದೆ. ಪ್ರಾದೇಶಿಕವಾಗಿ ಉತ್ತರ ಕರ್ನಾಟಕದವರ ಜೀವನ ವಿಧಾನ, ಕಷ್ಟ-ಸುಖಗಳ ಮಿಶ್ರಣವಾಗಿ ಈ ಪುಸ್ತಕ ಹೊರಹೊಮ್ಮಿದೆ. ಲೇಖಕರಿಗೆ ತಲೆಬಾಗಿ ನಮಸ್ಕರಿಸುವೆ, ನನ್ನ ಅಪ್ಪನನ್ನೂ ಸ್ಮರಣೆ ಮಾಡಿಕೊಳ್ಳುತ್ತ...

❖

# ಅನುರೂಪ ಮನಸ್ಸುಗಳ ಅಭಿವ್ಯಕ್ತಿ

ಡಾ. ವಿಜಯ ಕುಮಾರ ಹೆಚ್.

ಭರತ ಖಂಡದಂತೆ ಕರ್ನಾಟಕ ರಾಜ್ಯವೂ ಒಂದು ವಿಶಿಷ್ಟ, ವಿಭಿನ್ನ ಹಾಗೂ ಅರ್ಥಪೂರ್ಣವಾದ ವೈವಿಧ್ಯತೆಯಿಂದ ಕೂಡಿದೆ. ಅಷ್ಟೇ ಅಲ್ಲದೆ ಈ ನಾಡಿನಲ್ಲಿ ಅನೇಕ ಬರಹಗಾರರು, ಸಾಹಿತಿಗಳು, ಸಾಂಸ್ಕೃತಿಕ ರಾಯಭಾರಿಗಳು, ಸಾಮಾಜಿಕ ಸುಧಾರಕರು, ರಾಜಕೀಯ ಮುತ್ಸದ್ಧಿಗಳನ್ನು ಹಾಗೂ ಬೌದ್ಧಿಕ ವಲಯದ ಮೇಧಾವಿಗಳನ್ನು ಕೊಡಮಾಡಲ್ಪಟ್ಟು ತನ್ನದೆ ಆದ ಚರಿತ್ರೆಯನ್ನು ಸೃಷ್ಟಿಸಿಕೊಂಡಿದೆ. ಈ ನೆಲದಲ್ಲಿ ಕಥೆಗಳ ಹಂದರವನ್ನು ಓದುಗರ ಮನಸ್ಸಿನಲ್ಲಿ ಶಾಶ್ವತವಾದ ಶಬ್ದಚಿತ್ರವನ್ನು ಕಟ್ಟುವ ಕ್ರಮದಲ್ಲಿ ಹೆಚ್ಚು ಕ್ರಿಯಾಶೀಲ ಬರಹಗಾರರಾಗಿ ಗುರುತಿಸಿಕೊಂಡವರು ನಮ್ಮ ನಾಡಿನ ಹೆಮ್ಮೆಯ ಸಾಹಿತ್ಯ ಸಂವರ್ಧಕರಾದ ಶ್ರೀಯುತ ಮನು ಬಳಿಗಾರ್ ಎಂದು ಬರೆಯಲು ನನಗೆ ಹರ್ಷವಾಗುತ್ತದೆ.

ಸಾಹಿತ್ಯ ಮತ್ತು ಓದುಗರು ನಿತ್ಯ ನಿರಂತರವಾಗಿ ಹರಿಯುವ ಝರಿ ಇದ್ದಂತೆ. ಈ ಮಾತಿಗೆ ಅಬ್ದುಲ್ ನಜೀರ್‌ಸಾಬ್ ಮತ್ತು ಮನು ಬಳಿಗಾರ್ ಸಾಕ್ಷಿಯಾಗಿ ನಿಲ್ಲುವುದಕ್ಕೆ ನಮ್ಮ ಕೈಯಲ್ಲಿರುವ ಪ್ರತಿಭಾವಂತ ಸಂಸದೀಯ ಪಟುಗಳು ಬದುಕು ಬರಹ ಮಾಲಿಕೆ ಒಂದು ಸಂಕೇತವಾಗಿ ಪ್ರತಿಮಿಸುತ್ತದೆ. ಕರ್ನಾಟಕ ರಾಜ್ಯ ಕಂಡ ಅಪರೂಪದ ಆತ್ಮೀಯ ಅಂತಃಕರಣ ರಾಜಕಾರಣಿ, ಅಬ್ದುಲ್ ನಜೀರ್‌ಸಾಬ್. ಇವರ ಕಾರ್ಯವೈಖರಿಯ ಮಾದರಿಗಳನ್ನು ಜೀವಂತಗೊಳಿಸುವಲ್ಲಿ ನಿಸ್ಪಕ್ಷಪಾತ ಕೊಡುಗೆ ನೀಡಿದವರು ಮನು ಬಳಿಗಾರ್.

ಗುಂಡ್ಲುಪೇಟೆಯ ಸಾಮ್ರಾಜ್ಞಿಯಂತಿದ್ದ ಶ್ರೀಮತಿ ನಾಗರತ್ನಮ್ಮನವರ ಆಶ್ರಯದಲ್ಲಿ ಬೆಳೆದು ಬಂದ ನಜೀರ್‌ಸಾಬ್ ಮುಂದೆ ಆ ಕ್ಷೇತ್ರ ಹೆಮ್ಮೆಪಟ್ಟುಕೊಳ್ಳುವಷ್ಟು ಬೆಳೆದರು. ತಾವು ನಂಬಿದ ತತ್ವ ಸಿದ್ಧಾಂತಗಳಿಗೆ ಅಂಟಿಕೊಡಿದ್ದ ಅವರು ಶುದ್ಧಹಸ್ತರು. ದೇಶದಲ್ಲೇ ಪ್ರಪ್ರಥಮ ಬಾರಿಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದು ಇಡೀ ವಿಶ್ವದ ಗಮನ ಕರ್ನಾಟಕದ ಕಡೆ ಹರಿಯುವಂತೆ ಮಾಡಿದವರು. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಮನೆಗೂ ನೀರು ಹರಿಸಿ ನೀರ್ ಸಾಬ್ ಎಂದು ಗುರುತಿಸಿಕೊಂಡವರು. ಅವರ ಹಿಂದೆ ಇದ್ದ ಮಂತ್ರಿಗಳು ಬೋರ್‌ವೆಲ್ ಮಂತ್ರಿಗಳೆಂದು ಜನರ ಅಪಹಾಸ್ಯಕ್ಕೆ ಗುರಿಯಾಗಿದ್ದರು. ಆದರೆ ಗ್ರಾಮೀಣ ನೀರು ಸರಬರಾಜು ಯೋಜನೆಯನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿ ಖ್ಯಾತಿಗಳಿಸಿದವರು ಇವರನ್ನು ಅಕ್ಷರ ರೂಪದದಲ್ಲಿ ಶಾಶ್ವತಗೊಳಿಸಿದ್ದು ಮನು ಬಳಿಗಾರ್ ಅವರ ಸಾಹಿತ್ಯ ಸಂವೇದನೆಯಲ್ಲಿ.

ಗಾಂಧೀ, ಲೋಹಿಯಾರನ್ನು ಓದಿಕೊಂಡು, ಸಮಾಜವಾದವನ್ನು ಮೆಚ್ಚಿಕೊಂಡು, ಜೆ.ಪಿ.ವಿಚಾರಧಾರೆಯನ್ನು ಅಳವಡಿಸಿಕೊಂಡಿದ್ದ ಅಬ್ದುಲ್ ನಜೀರ್‌ಸಾಬ್ ಗ್ರಾಮ ಸ್ವರಾಜ್ಯವನ್ನು ಜಾರಿಗೆ ತರಬೇಕೆಂದು ಅತ್ಯಂತ ಪ್ರಬಲವಾದ ಆಸೆ ಇಟ್ಟುಕೊಂಡಿದ್ದರು. ಅವರ ಜೀವನದ ಅಥವಾ ಮಂತ್ರಿಪದವಿಯ ಮಹಾತ್ವಾಕಾಂಕ್ಷೆಯ ಮತ್ತೊಂದು ಮಜಲು ಪ್ರಾರಂಭವಾಗುವುದೇ ಇಲ್ಲಿ. 1983ರ ಜನವರಿಯಲ್ಲಿ ಅಧಿಕಾರಕ್ಕೆ ಬಂದ ತಕ್ಷಣವೇ

ಕುಡಿಯುವ ನೀರು ಪೂರೈಕೆ ಕಾರ್ಯಕ್ರಮವನ್ನು ಭರ್ಜರಿಯಾಗಿ ಅನುಷ್ಠಾನಗೊಳಿಸಿದ ಅವರು 1984ರಲ್ಲಿ ತಮ್ಮ ಬಹುದಿನಗಳ ಕನಸಾದ ವಿಕೇಂದ್ರೀಕರಣಕ್ಕೆ ಸ್ಪಷ್ಟ ರೂಪುರೇಷೆಗಳನ್ನು ಹಾಕಿಕೊಂಡರು. ಇದಕ್ಕಾಗಿ ಕರ್ನಾಟಕ ಮಂಡಲ ಪಂಚಾಯತ್, ಜಿಲ್ಲಾ ಪಂಚಾಯತ್, ನ್ಯಾಯ ಪಂಚಾಯತ್, ಕಾಯ್ದೆಯ ರಚನೆ ಆರಂಭವಾಯಿತು.

ನಮ್ಮ ಹಳ್ಳಿಗೆ ಚರಂಡಿ ಹೇಗಿರಬೇಕು? ರಸ್ತೆ ಎಷ್ಟಿರಬೇಕು ನಾವೇ (ಹಳ್ಳಿಯವರೆ) ನಿರ್ಧರಿಸಬೇಕೆ ಹೊರತು ಬೆಂಗಳೂರು ದಿಲ್ಲಿಗಳಲ್ಲಿ ಕುಳಿತ ಮಂತ್ರಿ ಮಹೋದಯರುಗಳಲ್ಲ ಎಂಬುದು ನಜೀರ್‌ಸಾಬ್‌ರ ನಿಲುವಾಗಿತ್ತು. ಗ್ರಾಮಪಂಚಾಯಿತಿಗಳು ಇನ್ನಷ್ಟು ಪ್ರಬಲವಾಗಬೇಕು, ತಮ್ಮ ಯೋಜನೆಗಳನ್ನೆಲ್ಲ ತಾವೇ ರೂಪಿಸಿಕೊಳ್ಳಬೇಕು, ಅನುಷ್ಠಾನಗೊಳಿಸಿಕೊಳ್ಳಬೇಕು ಅದೇನೆಂದರೆ ನಿಜವಾದ ಅರ್ಥದಲ್ಲಿ ಗ್ರಾಮರಾಜ್ಯ ಹಾಗೂ ರಾಮರಾಜ್ಯ ಸಾಧ್ಯ. ಇದಕ್ಕಾಗಿ ಆ ಹೊತ್ತಿಗಾಗಲೇ ಬೇರೆ ಬೇರೆ ರಾಜ್ಯಗಳಲ್ಲಿ ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರ, ಆಂಧ್ರಪ್ರದೇಶ, ಪಶ್ಚಿಮಬಂಗಾಳ, ರಾಜಸ್ಥಾನ, ಕೇರಳ ರಾಜ್ಯಗಳಲ್ಲಿ ಜಾರಿಗೊಂಡಿದ್ದ ಪ್ರಗತಿಪರವಾದ ಜಿಲ್ಲಾಪರಿಷತ್ತು ಮಂಡಲ ಪಂಚಾಯಿತಿ ಕಾನೂನುಗಳನ್ನು ಅಭ್ಯಸಿಸಿದ್ದಾಯಿತು. ಶಾಸಕರ ನಿಯೋಗಗಳು ಅಲ್ಲಿಗೆ ಹೋಗಿ ಬಂದದ್ದಾಯಿತು. ಸ್ವತಃ ತಾವೂಬ್ಬ ಕಾನೂನು ತಜ್ಞರಲ್ಲದಿದ್ದರೂ ನಜೀರ್ ಸಾಬ್‌ರು ಕರ್ನಾಟಕಕ್ಕೆ ಬರಲಿರುವ ಹೊಸ ಜಿಲ್ಲಾ ಪರಿಷತ್ತು ಮಂಡಲ ಪಂಚಾಯಿತಿಗಳ ಕಾನೂನನ್ನು ಹಗಲು ರಾತ್ರಿ ಎನ್ನದೆ ಕುಳಿತು ತಜ್ಞರೊಂದಿಗೆ ಚರ್ಚಿಸಿ ಸಿದ್ಧಪಡಿಸಿದ್ದರು ಎಂಬ ಕಟು ಸತ್ಯಗಳನ್ನು ಮನು ಬಳಿಗಾರ್ ಬಿಚ್ಚಿಡುತ್ತಾರೆ.

ಅಬ್ದುಲ್ ನಜೀರ್‌ಸಾಬ್ ಒಬ್ಬ ಕನಸುಗಾರ. ಅವರ ಕನಸುಗಳು ಆಕಾಶದಲ್ಲಿ ರೂಪಗೊಂಡ ಕಲ್ಪನೆಯ ಮೋಡಗಳಲ್ಲ. ಅವು ಓದಿನಿಂದ, ವಿಚಾರದಿಂದ, ಮಂಥನದಿಂದ, ಚರ್ಚೆಯಿಂದ ಕೊರೆದ ಗಟ್ಟಿ ಶಿಲ್ಪಗಳು. ಆದ್ದರಿಂದಲೇ ಅವರ ಕಲ್ಪನೆಯ ಕೂಸಾದ ಪಂಚಾಯತ್ ರಾಜ್ಯ ವ್ಯವಸ್ಥೆ ದೇಶದಲ್ಲೇ ಮಾದರಿಯಾಗಿ ಕೇಂದ್ರ ಸರ್ಕಾರ ಅದನ್ನು ದೇಶದಾದ್ಯಂತ ಜಾರಿಗೆ ತರಲು ಸಹಾಯವಾಯಿತು. ಅವರು ಜಾರಿಗೆ ತಂದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆ ಈಗಿನ ಜಿಲ್ಲಾ ಪಂಚಾಯತ್, ತಾಲ್ಲೂಕ್ ಪಂಚಾಯತ್, ಗ್ರಾಮ ಪಂಚಾಯತ್ ವ್ಯವಸ್ಥೆಗಿಂತ ಸದೃಢವಾಗಿತ್ತೆಂದು ನಮ್ಮ ಈಗಿನ ಅನುಭವದಿಂದ ಗೊತ್ತಾಗುತ್ತದೆ. ನಜೀರ್ ಸಾಬ್ ಕಲ್ಪನೆಯ ಪಂಚಾಯತ್ ರಾಜ್ಯ ವ್ಯವಸ್ಥೆಗೂ ಈಗಿನ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿರುವುದನ್ನು ನಾವು ಈಗ ಕಾಣುತ್ತೇವೆ. ಏನೇ ಇರಲಿ ಗ್ರಾಮ ಸ್ವರಾಜ್ಯ ಜಾರಿಯಲ್ಲಿದೆ ಅದೇ ಸಂತೋಷ. ಇದನ್ನು ಜೀವಂತಗೊಳಿಸಿ ನಮ್ಮ ಅಧ್ಯಯನಕ್ಕೆ ಸಾಮಗ್ರಿ ಮಾಡಿಕೊಟ್ಟ ಮನು ಬಳಿಗಾರ್ ಅವರನ್ನು ನೆನೆಯಲೇಬೇಕು.

ನಜೀರ್ ಸಾಬ್‌ನಂತಹ ರಾಜಕಾರಣಿಗಳು ನಮ್ಮೊಡನೆ ಇದ್ದದ್ದು ಒಂದು ಮಹತ್ವದ ಸಂಗತಿ. ಅವರು ಇಷ್ಟು ಬೇಗ ನಮ್ಮನ್ನು ಅಗಲದೇ ಹೋಗಿದ್ದರೆ ಮುಂದೊಂದು ದಿನ ಈ ರಾಜ್ಯದ ಚುಕ್ಕಾಣಿ ಹಿಡಿಯುವ ಭಾಗ್ಯ

ಅವರಿಗೆ ಲಭಿಸುತ್ತಿತ್ತು. ಅವರ ಅಕಾಲ ಮರಣದಿಂದಾಗಿ ಈ ರಾಜ್ಯಕ್ಕೆ ಒಬ್ಬ ಒಳ್ಳೆಯ ಮುಖ್ಯಮಂತ್ರಿ ಸಿಗುವ ಭಾಗ್ಯ ತಪ್ಪಿಹೋಯಿತು. ಆದರೂ ಅವರ ಆದರ್ಶ, ಕಾರ್ಯತತ್ಪರತೆ, ತತ್ವನಿಷ್ಠೆ, ಸ್ನೇಹಪರತೆ ಇಂದೂ ಜನಮನ ತಟ್ಟುತ್ತವೆ. ನೀರ್ ಸಾಬ್‌ರನ್ನು ನೆನೆದಾಗ ಕಣ್ಣುಗಳಲ್ಲಿ ನೀರು ತುಂಬುತ್ತವೆ. ನಮ್ಮಂತಹ ಅನೇಕರಿಗೆ ದ್ರೋಣಾಚಾರ್ಯರಾಗಿ ಇಂದು ಕ್ರಿಯಾಶೀಲರಾಗುವುದನ್ನು ಕಲಿಸಿಕೊಟ್ಟು ಜನರ ಮನದಲ್ಲಿ ಸದಾ ವಿರಾಜಿಸುವ ಚಿರಂಜೀವಿಗಳೆಂದು ಬಸವರಾಜ ಹೊರಟ್ಟಿ ಅವರ ಅಭಿಪ್ರಾಯವನ್ನು ಮನು ಬಳಿಗಾರ್ ದಾಖಲಿಸುತ್ತಾರೆ.

ಅಬ್ದುಲ್ ನಜೀರ್ ಸಾಬ್‌ರಿಗೆ 1988ರ ಹೊತ್ತಿಗೆ ಕ್ಯಾನ್ಸರ್ ಕಾಯಿಲೆ ಖಚಿತವಾಗಿ ಆರೋಗ್ಯ ಹದಗೆಟ್ಟಿತ್ತು. ಬಂಧುಬಳಗದವರಿಗೆ ದುಃಖ ಹೇಳತೀರದಾಗಿತ್ತು. ಎಸ್.ಆರ್.ಬೊಮ್ಮಾಯಿ, ರಾಮಕೃಷ್ಣ ಹೆಗಡೆ ಹಾಗೂ ಜಾರ್ಜ್‌ಫರ್ನಾಂಡಿಸ್ ಅವರುಗಳ ಅಮೇರಿಕಾದ ಶುಷ್ರೂಷೆಯ ಶ್ರಮ ವಿಫಲವಾಯಿತು. ದಿನಾಂಕ:24.10.1988ರಂದು ನಜೀರ್ ಸಾಬ್‌ರ ಇಹಲೋಕದ ಯಾತ್ರೆ ಸಮಾಪ್ತಿಯಾಯಿತು. ಕರ್ನಾಟಕದ ಗ್ರಾಮೀಣಾಭಿವೃದ್ಧಿಯ ಮಿನುಗುತಾರೆ ಇನ್ನಿಲ್ಲವಾಯಿತು. ಶರಣರ ಮಹಿಮೆಯನ್ನು ಮರಣದಲ್ಲಿ ನೋಡು ಎಂಬ ಮಾತೊಂದಿದೆ. ಈ ಮಾತಿನ ಯತಾರ್ಥವಾಗಿ ನಜೀರ್ ಸಾಬ್‌ರ ಅಂತಿಮಯಾತ್ರೆ ಅಪಾರ ಜನಸ್ತೋಮ, ರಾಜ್ಯ, ರಾಷ್ಟ್ರದ ಗಣ್ಯನಾಯಕರು, ಜನಸಾಮಾನ್ಯರಾದಿಯಾಗಿ ನಾಡಿನ ಮೂಲೆಮೂಲೆಯಿಂದ ಬಂದು ಹಿರಿಯ ಕಿರಿಯ ಧುರೀಣರು; ಈ ಹಿಂದೆಂದೂ ಯಾವ ಯಾವ ರಾಜಕೀಯ ನಾಯಕರ ಅಂತಿಮಯಾತ್ರೆಗೆ ಸೇರಿರಲಾರದಷ್ಟು ಜನಸಾಗರ! ಜನರ ಪ್ರೀತಿ, ಕೃತಜ್ಞತೆಯ ಸಹಜ ಓಗರ. ನಾಡಿಗೆ ಆದ ಆಘಾತದ ನೋವಿನ ನಿಜ ಅಭಿವ್ಯಕ್ತಿ. ವಸ್ತುಶಃ ತುಂಬಲಾರದ ಹಾನಿ, ಬಾಳಿನ ಅರ್ಧದಾರಿಯಲ್ಲೆ (54 ವರ್ಷ) ಇಹಲೋಕ ತ್ಯಾಗ, ಎಲ್ಲರೂ ಗೋಳೋ ಎಂದು ಅಳುವವರೆ ! ಇನ್ನೂ ಬಹುಕಾಲ ಬಾಳಿ ಬದುಕಬೇಕಾದ ಜೀವಕ್ಕೆ ಅಕಾಲ ಮರಣ. ಆ ನೋವಿನಲ್ಲೂ ನೆರೆದ ಜನಸ್ತೋಮ. ನೋಡಿದವರಿಗೆ 'ಧನ್ಯವಾಯಿತು ಹುಟ್ಟು ಸಾವಿನಲ್ಲಿ' ಎಂಬ ನೋವುಭರಿತ ಹೆಮ್ಮೆ! ಹೌದು ಅಬ್ದುಲ್ ನಜೀರ್ ಸಾಬ್‌ರು ನಾಡವರೆಲ್ಲ ಎದೆತಟ್ಟಿ ಹೇಳಿಕೊಳ್ಳಬಹುದಾದ ಹೆಮ್ಮೆಯ ಪುತ್ರ ಎಂಬ ನಿಜ ಘೋಷವಾಕ್ಯಗಳನ್ನು ಮನು ಬಳಿಗಾರ ಅವರ 'ಸಂಸದೀಯ ಪಟುಗಳ ಬದುಕು ಬರಹ' ಮಾಲಿಕೆಯಲ್ಲಿ ಸಾರ್ಥಕತೆಯನ್ನು ಪಡೆದುಕೊಂಡಿದೆ ಎಂದು ಬರೆಯಲು ನನಗೆ ಹರ್ಷವಾಗುತ್ತದೆ.

ಕರ್ನಾಟಕದ ರಾಜಕೀಯ ಇತಿಹಾಸ ಅಭ್ಯಾಸ ಮಾಡುವವರಿಗೆ, ಒಬ್ಬ ಉತ್ತಮ ಆದರ್ಶ ವ್ಯಕ್ತಿ ಎಂದರೆ ಅಬ್ದುಲ್ ನಜೀರ್ ಸಾಹೆಬರು ಹಾಗೂ ಅಷ್ಟೆ ಅತ್ಯುತ್ತಮ ಮಾರ್ಗದರ್ಶಿ ಪುಸ್ತಕ ಮನು ಬಳಿಗಾರ್ ಅವರ ಈ ಹೊತ್ತಿಗೆ. ಇದರಲ್ಲಿ ನಜೀರ್ ಸಾಹೇಬರು ವಿಧಾನ ಪರಿಷತ್ತಿನಲ್ಲಿ, ವಿಧಾನಸಭೆಯಲ್ಲಿ ತಮ್ಮ ಅಂತರಂಗದ ಆಲೋಚನ ವರದಿಗಳನ್ನು ಯಥಾವತ್ತಾಗಿ ಕಾರ್ಯರೂಪಕ್ಕೆ ತರುವಲ್ಲಿ ಪ್ರಯತ್ನಿಸಿದ ಪ್ರತಿಯೊಂದು ಮಾಹಿತಿಗಳು ಇವೆ ಅವುಗಳನ್ನು ನಮ್ಮ ಕುತೂಹಲಕ್ಕಾದರೂ ಇಲ್ಲಿ ದಾಖಲಿಸಲೆಬೇಕಾಗಿದೆ.

ಭೂ ಸುಧಾರಣೆ ಕಾನೂನು, ಬರಗಾಲ ಪರಿಹಾರ ಕಾಮಗಾರಿಗಳು, ಶೈಕ್ಷಣಿಕ ವಿಚಾರಗಳು, ಆಡಳಿತದಲ್ಲಿ ಕನ್ನಡ ಭಾಷೆಯ ವಿಚಾರ, ಲೋಕಾಯುಕ್ತ ಬಿಲ್ ಬಗ್ಗೆ, ಪರಿಶಿಷ್ಟ ಜಾತಿ ಪಂಗಡಗಳಿಗೆ ಮೀಸಲಾತಿ, ಅಂತ್ಯೋದಯ ಕಾರ್ಯಕ್ರಮದ ಕಾರ್ಯಗತ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮಾಹಿತಿ, ಕೊಳವೆ ಬಾವಿಗಳನ್ನು ತೋಡುವುದು, ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು, ಕೈ ಪಂಪುಗಳ ದುರಸ್ಥಿ, ಸಮಗ್ರ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ರಮ, ಐ.ಆರ್.ಡಿ.ಪಿ ಯೋಜನೆ, ರಾಜ್ಯದಲ್ಲಿ ಜೀತಮುಕ್ತರಿಗೆ ಪುನರ್ವಸತಿ, ಮಂಡಲ್ ಪಂಚಾಯಿತಿಗಳಿಗೆ ಸಹಾಯಧನ, ಕರ್ನಾಟಕ ಜಿಲ್ಲಾ ಪರಿಷತ್ ಮಸೂದೆ ಹೀಗೆ ಇನ್ನು ಹತ್ತು ಹಲವು ಜನೋಪಕಾರಿ ಕೆಲಸಗಳನ್ನು ಕರ್ನಾಟಕದ ಜನತೆಗೆ ಸೌಲಭ್ಯ ಒದಗಿಸಿ ಅವರು ನಮ್ಮೊಂದಿಗೆ ಅಂದರೆ ಗ್ರಾಮೀಣ ಜನಮಾನಸದಲ್ಲಿ ಅಜಾರಾಮರರಾಗಿದ್ದಾರೆ ಎಂಬ ಸತ್ಯದ ದೀಪವೊಂದನ್ನು ಜ್ಞಾನದ ಪರಿಕಲ್ಪನೆಯಲ್ಲಿ ಕೊಡಮಾಡಲ್ಪಟ್ಟವರು ಮನು ಬಳಿಗಾರ್ ಅವರು. ಇಂಥಹ ಅನೇಕ ಕೆಲಸಗಳನ್ನು ಮಾಡಲಿಕ್ಕೆ ನಮ್ಮಂಥ ನೂರಾರು ಯುವ ಬರಹಗಾರರಿಗೆ ಸ್ಫೂರ್ತಿಯ ಸೆಲೆಯನ್ನು ನೀಡಿದ ಇವರಿಗೆ ಯಾವ ಅಕ್ಷರಗಳಿಂದ ಅಭಿನಂದಿಸಿದರೂ ಅಪವಾದವಾಗಲಾರದು.

❖

# ಡಾ. ಮನು ಬಳಿಗಾರರ “ಅಪ್ಪ

ಡಾ. ಸಂತೋಷ ಹಾನಗಲ್ಲ

ಜಾತಿರ್ಯಾತು ರಸಾತಲಂ ಗುಣಗಣಸ್ತಸ್ಯಾಪ್ಯಧೋ ಗಚ್ಛತಾತ್
ಶೀಲಂ ಶೈಲ ತಟಾತ್ಪತತ್ವಭಜನಃ ಸಂದಹ್ಯತಾಂ ವಹ್ನಿನಾ |
ಕಾರ್ಯೇ ವೈರಿಣಿ ವಜ್ರಮಾಶು ನಿಪತತ್ವರ್ಥೋಸ್ತುನಃ ಕೇವಲಃ
ಯಸ್ಯೈಕೇನ ವಿನಾ ಗುಣಾಸ್ತೃಣಲವಪ್ರಾಯಃ ಸಮಸ್ತಾ ಇಮೇ ||

“ಜಾತಿಯು ಪಾತಾಳಕ್ಕೆ ಹೋಗಲಿ, ಗುಣಗಳು ಅದಕ್ಕಿಂತ ಕೆಳಕ್ಕೆ ಹೋಗಲಿ, ನಡತೆಯು ಬೆಟ್ಟದಂಚಿನಿಂದ ಬೀಳಲಿ, ವಂಶಕ್ಕೆ ಬೆಂಕಿ ಬೀಳದಿದ್ದರೆ ಎಲ್ಲ ಗುಣಗಳು ಹುಲ್ಲುಕಡ್ಡಿಗೆ ಸಮ, ಹಣ ಮಾತ್ರ ನಮಗಿರಲಿ” ಎನ್ನುವ ಹಾಗೆ ನಡೆದುಕೊಳ್ಳುವ ಇಂದಿನ ಸಮಾಜದಲ್ಲಿ ನಿಷ್ಕಲ್ಮಶ ಮನಸ್ಸಿನಿಂದ ಡಾ.ಮನುಬಳಿಗಾರ್ ಅವರು ತಮ್ಮ ತಂದೆಯವರನ್ನು ಹಾಗೂ ಅವರ ನಿರ್ಮಲ ಆತ್ಮ, ದೇಶಭಕ್ತಿ, ಮಕ್ಕಳನ್ನು ದೇಶದ ಒಬ್ಬ ಒಳ್ಳೆಯ ಮತ್ತು ಸಮರ್ಥ ಪ್ರಜೆಯನ್ನಾಗಿಸುವ, ಬಡವರ ಬಗ್ಗೆ ಇದ್ದ ಅವರ ಕಾಳಜಿ, ಸಹಾಯಹಸ್ತ ಮುಂತಾದವುಗಳ ಸ್ಮರಣೆ ಇಂದು ಬಹಳ ಪ್ರಸ್ತುತ ಹಾಗೂ ಮಹತ್ವದ್ದಾಗಿದೆ.

ನಾನು ಕಂಡ ನನ್ನ ತಂದೆ ಸ್ನೇಹಜೀವಿ, ವಾತ್ಸಲ್ಯಮಯಿ ಕಷ್ಟಜೀವಿ, ಲಿಂಗತಾರತಮ್ಯವಿಲ್ಲದೇ ಎಲ್ಲರನ್ನೂ ಸಮಾನವಾಗಿ ಕಾಣುವ ಸಮತಾವಾದಿ, ಅವೆಲ್ಲಕ್ಕಿಂತ ಮಿಗಿಲಾಗಿ ಮಾನವತಾವಾದಿ ಎಂದು ಡಾ.ಮನು

ಬಳಿಗಾರ್ ಹೇಳಿದ್ದಾರೆ. ನಮ್ಮ ತಂದೆ ಅಂಕಾಧಾರಿತ ವಿದ್ಯಾಭ್ಯಾಸದ ಜೊತೆಗೆ ಸರ್ವಾಂಗೀಣ ಬೌದ್ಧಿಕ ವಿಕಾಸಕ್ಕೆ ಒತ್ತು ನೀಡುತ್ತಿದ್ದರು. ನನ್ನ ಮಟ್ಟಿಗೆ ತನ್ನ ತಂದೆ ನನ್ನ ಸರ್ವಾಂಗೀಣ ಶಿಲ್ಪಿ. ಬಾಲ್ಯದಿಂದಲೇ ನನ್ನ ತಂದೆಯು ಸ್ವಾಭಿಮಾನಿ, ಅವರ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ವ್ಯಕ್ತಿತ್ವಕ್ಕೆ ಮಾರುಹೋದವನು ನಾನು. ಜೀವನದಲ್ಲಿ ನಡೆ-ನುಡಿಗಳೆರಡರಲ್ಲೂ ಸರಳತೆಯನ್ನು ಪಾಲಿಸಬೇಕೆಂಬುದು ಅವರಿಚ್ಚೇ.

“ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ
ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ
ಮಾಡುತ್ತೇವೆ. ಮತ್ತೆ ಅದನ್ನು ‘ವಿಶ್ವಮಾನವ'ನನ್ನಾಗಿ
ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು”

ವೆಂಬ ಜಗದಕವಿ ಕುವೆಂಪು ಅವರ ಮಾತಿನಂತೆ ನನ್ನ ತಂದೆಯು ವಿದ್ಯೆಗೆ ಪ್ರಥಮಸ್ಥಾನವನ್ನು ನೀಡಿ, ನಮ್ಮನ್ನು ಸರಸ್ವತಿಯ ಪುತ್ರರನ್ನಾಗಿ ಮಾಡಿದರು. ತಂದೆಯೇ ನನ್ನ ಸ್ನೇಹಿತ, ಗುರು ಮತ್ತು ಒಳ್ಳೆಯ ಮಾರ್ಗದರ್ಶಕ ಎಂದು ತಿಳಿಸುತ್ತಾರೆ.

ಡಾ.ಮನು ಬಳಿಗಾರ್ ಅವರು ಡಾ.ಯು.ಆರ್.ಅನಂತಮೂರ್ತಿ ಅವರ ಮಾತನ್ನು ನೆನೆಯುತ್ತಾ, ನಾನು ನನ್ನ ತಂದೆಯನ್ನು ಕಳೆದುಕೊಂಡ ನೋವು, ನೆನಪು ಇಂದಿಗೂ ಇನ್ನೂ ಹಚ್ಚಹಸಿರಾಗಿದೆ ಎಂದು ಸ್ಮರಿಸಿಕೊಂಡಿದ್ದಾರೆ. ನನ್ನ ತಂದೆ ಅಪ್ಪಟ ದೇಶಭಕ್ತ, ಪ್ರಗತಿಪರ ರೈತ, ಅಪಾರ ವಿದ್ಯಾಪ್ರೇಮಿ, ದಾರ್ಶನಿಕರಾಗಿದ್ದರು. ನನ್ನ ಅಪ್ಪ ಎಂದು ಎದೆ ಉಬ್ಬಿಸಿ ಹೇಳಿದ್ದಾರೆ. ಆಟ, ಪಾಠ, ಊಟ ಮೂರಲ್ಲೂ ಶ್ರೇಷ್ಠತೆಯೊಂದಿಗೆ ಸಮತೋಲನವಿರಬೇಕೆಂಬ ಅವರ ನಿಲುವುವನ್ನು ಪ್ರಚುರಪಡಿಸಿದ್ದಾರೆ. ನಾನು ಬಲಶಾಲಿಯಾಗಿದ್ದರೆ ತಾನೇ ಜಗತ್ತು ಬಲಶಾಲಿ ಎನಿಸುವುದು ಎಂದು ಹೇಳುತ್ತಾ, ಡಾ. ಎಂ.ಎಂ.ಕಲಬುರ್ಗಿಯವರು “ನಮ್ಮ ಜಾತಿ, ಧರ್ಮ ಎಲ್ಲವೂ ನಮ್ಮ ನಮ್ಮ ಮನೆಯ ಹೊಸ್ತಿಲ ಒಳಗೆ ಮಾತ್ರ ಹೊಸ್ತಿಲು ದಾಟಿದ ನಂತರ ಎಲ್ಲವೂ ದೇಶ, ರಾಷ್ಟ” ವೆಂಬ ಮಾತಿಗೆ ತಕ್ಕಂತೆ ರಾಷ್ಟ್ರ ಉಳಿದರೇ, ಮಾತ್ರ ನಾವೆಲ್ಲ ಉಳಿಯುವುದು ಎಂದು ನನ್ನ ತಂದೆಯ ಅಭಿಮತವಾಗಿತ್ತು ಎಂದು ಡಾ.ಮನುಬಳಿಗಾರ್ ಬೀಗಿದ್ದಾರೆ. “ರಾಷ್ಟ್ರಪತಿಗಿಂತ ರಾಷ್ಟ್ರಪ್ರೇಮವಿರುವ ಪ್ರಜೆ ಮಿಗಿಲು, ಪ್ರಧಾನಿಗಿಂತ ವಿಚಾರ ಪ್ರಾಧಾನ್ಯವುಳ್ಳ ಪ್ರಜೆ ಮಿಗಿಲು” ಯೆಂಬ ನನ್ನ ತಂದೆಯ ಧ್ಯೇಯವಾಕ್ಯ ಯಾವ ವಿಚಾರವಾದಿಗಿಂತ ಕಡಿಮೆ? ಹೀಗೆ ಅವರ ಸುವಿಚಾರವನ್ನು ತಿಳಿಸುತ್ತಾ ಅಪರೂಪದ ಚಿಂತಕರಾಗಿದ್ದು, ಬಡವರ ಕಷ್ಟಕ್ಕೆ ಸದಾ ಸ್ಪಂದನೆ, ತೊಂದರೆಯಲ್ಲಿದ್ದ ಜನರ ಸಹಾಯಕ್ಕೆ ಎದೆಕೊಟ್ಟು ನಿಂತ ನನ್ನ ಅಪ್ಪ ನಿಜವಾದ ‘ಎದೆಗಾರ' ಎಂದು ಸಮರ್ಥಿಸಿಕೊಂಡಿದ್ದಾರೆ.

ನನ್ನ ತಂದೆಯ ಹೆಸರು “ಪರಮೇಶ್ವರಪ್ಪ” ಹೆಸರಿನ ಹಾಗೆ ಇಡೀ ಜಗತ್ತಿಗೆ ಈಶ. ಹಾಗೆಯೇ ನಡೆದುಕೊಂಡು ಸೋಲನ್ನೇ ಕಾಣದ ನಾಯಕ, ರೈತನಾಗಿ, ಕಾಯಕದಲ್ಲಿ ನಿಷ್ಠೆಯನ್ನು ತೋರಿ, ಬದುಕಿನ

ಸುಪ್ಪತ್ತನ್ನೇರಿ, ಪಸರಿಸಿ ಯಾವುದೇ ಕೆಲಸವನ್ನು 'Ican do'ವೆಂಬ ನಾಣ್ನುಡಿಯ ಹಾಗೆ ‘ಆಗದು' ಎಂದು ಹೇಳದೇ ಅಪರಿಮಿತ ಜೀವನೋತ್ಸಾಹವನ್ನು ತೋರಿ, ಸಾಧಿಸಿದ ಛಲ ನನ್ನ ಅಪ್ಪನದು ಎಂದು ಅಭಿಮಾನದಿಂದ ಬಿಗಿದ್ದಾರೆ. ಭೀಮನಂತೆ ಶಕ್ತಿಯ ಚಿಲುಮೆಯ ಸೆಲೆಯಾಗಿದ್ದರು. “ಶರೀರ ಮಾದ್ಯ” ಖಲು ಧರ್ಮಸಾಧನಂ” ಎಂಬ ಸಂಸ್ಕೃತ ನಾಣ್ನುಡಿಗೆ ಸಾಕ್ಷಾತ್ಕಾರರಾಗಿದ್ದು, ಅವರು ಭೀಮಬಲವನ್ನು ಗಳಿಸಿಕೊಂಡಿದ್ದರು ನನ್ನ ತಂದೆ ಎಂದು ಮನು ಬಳಿಗಾರ್ ಅವರು ಬಹಳ ಅಭಿಮಾನದ ಮಾತುಗಳನ್ನಾಡಿದ್ದಾರೆ. “ಸತ್ಯಂವದ ಧರ್ಮಂಚರ'ವೆಂಬ ಧ್ಯೇಯವನ್ನು ಚಾಚುತಪ್ಪದೇ ಶಿರಸಾವಹಿಸಿ, ನಿಭಾಯಿಸಿ ಆದರ್ಶ ವ್ಯಕ್ತಿಯಾಗಿದ್ದರು. ‘ಹರಮುನಿದರೂ ಗುರುಕಾಯುವ'ನೆಂದೂ ನಂಬಿಕೆಯ ಮೇಲೆ ಬಂದಿದ್ದು ಬರಲಿ ಗುರುವಿನ ದಯೇ ಇರಲಿ' ಎಂದು ಮುನ್ನಡೆದು ಯಾವುದೇ ಕಾರ್ಯವನ್ನು ‘ನಭೂತೋ ನಭವಿಷ್ಯತಿ' ಎಂಬ ಹಾಗೇ ದಾಖಲೆಯನ್ನು ನಿರ್ಮಿಸಿ ಸಮೃದ್ಧ ಜೀವನವನ್ನು ಮಾಡಿದ್ದಾರೆ ಎಂದು ಮನು ಬಳಿಗಾರ್ ಉದ್ಗರಿಸಿದ್ದಾರೆ.

ನನ್ನ ತಂದೆ ಅಪ್ಪಟ ಕೃಷಿಕರಾಗಿದ್ದು, 1964ರಲ್ಲಿ ಬೆಳೆದ ಜೋಳದ ತೆನೆ ಇಂದಿಗೂ ನಾನು ಅಂತಹ ತೆನೆ ನೋಡಿಲ್ಲ. ಕಬ್ಬಿನಂತಹ ಜೋಳದ ತೆನೆ, ಕೆ.ಜಿ. ತೂಕದ ಈರುಳ್ಳಿ (ಉಳಾಗಡ್ಡಿ) ಉತ್ತಮ ತಳಿಯ ಮನೆಯ ಬೀಜ, ಸಸಿ ಎಲ್ಲವನ್ನೂ ಸುತ್ತ ಜಿಲ್ಲಾ ಜನರು ನೋಡಲು ಬರುತ್ತಿದ್ದರು. ಎಲ್ಲಿಲ್ಲದ ಬೇಡಿಕೆ, ಎರಡು ಕಣ್ಣುಗಳು ಎರಡು ನೋಟವಿದ್ದರೂ ಕಾಣುವ ಶಕ್ತಿ ಒಂದೇ ಕಾಣುವಂತೆ ನನ್ನ ಅಕ್ಕ ಹಾಗೂ ತಮ್ಮಂದಿರು ಒಟ್ಟು ಹತ್ತು ಜನರಿದ್ದರೂ ನಮ್ಮ ಅಪ್ಪ ಬೇಧ ಮಾಡಿದವರಲ್ಲ. ಆದರೆ ಎಡಬಿಡದೇ ತಮ್ಮತನವನ್ನು ಯಾವುದೇ ಕಾರಣಕ್ಕೂ ಸಡಿಲಸದೇ, ಸಾಧನೆಯ ಉತ್ತುಂಗ ಶಿಖರವನ್ನೇರಿ ಸಮಾಜಕ್ಕೆ ಇಂದಿಗೂ ಮಾದರಿಯಾಗಿದ್ದಾರೆ ಎಂದು ಬಳಿಗಾರ್ ಅವರು ಸ್ವಚ್ಛಂದವಾಗಿ ತಿಳಿಪಡಿಸಿದ್ದಾರೆ. ನಮ್ಮ ತಂದೆಯ ಬದುಕನ್ನು ಸಾರ್ಥಕಗೊಳಿಸುವಲ್ಲಿ ನನ್ನ ತಾಯಿ ಪಾತ್ರ ಮುಖ್ಯವಾಗಿದೆ ಎನ್ನುತ್ತಾ “A cheerful wifejoy for life” ಎಂಬ ನಾಣ್ನುಡಿಯನ್ನು ಹೇಳುತ್ತಾ, ತಮ್ಮ ‘ಐವತ್ತು ವರ್ಷದ ತರುವಾಯ ‘ದೀಕ್ಷೆ ಪಡೆದು, ಅಪ್ಪಟ ಮಹಾಶಿವಭಕ್ತ, ಗುರುಭಕ್ತರಾಗಿ ಸನ್ಯಾಸಿಗಳ ಪರಮಾಪ್ತ ಶಿಷ್ಯರಲೊಬ್ಬರಾಗಿದ್ದರು.

ಮತ ‘ಮನುಜಮತವಾಗಬೇಕು. ಪಥ ವಿಶ್ವಪಥವಾಗಬೇಕು; ಮನುಷ್ಯ ‘ವಿಶ್ವ ಮಾನವ'ನಾಗಬೇಕು ಎಂಬ ರಾಷ್ಟ್ರಕವಿ ಕುವೆಂಪು ಅವರ ನುಡಿ ಹಾಗೆ ಶ್ರೀ ಪರಮೇಶ್ವರಪ್ಪನವರು ನಡೆದು ಎಲ್ಲರಿಗೂ ಇಂದಿಗೂ ಮಾದರಿಯ ಮುಂಚೂಣಿಯಲ್ಲಿದ್ದಾರೆ. ‘ತಾ ಬಲ ಜಗ ಬಲ' ಹಾಗೇ ತಾವು ದಷ್ಟ ಪುಷ್ಟ ‘ದುಷ್ಟ ಮರ್ದನ ಶಿಷ್ಟ ಪರಿಪಾಲನೆ' ಎಂದು ಯಾವಾಗಲೂ ಹೇಳುತ್ತಿದ್ದರು. ಯಾವುದೇ ಸತ್ಕಾಯಕದಲ್ಲಿ ಹಿಂಜರಿಯದೇ ಸಂಪೂರ್ಣ ತಿಳಿದು ಧುಮುಕಿ, ಯಶಸ್ಸನ್ನು ತಮ್ಮದಾಗಿಸಿಕೊಳ್ಳುತ್ತಿದ್ದರು. ಅದಕ್ಕೆ 'ಧೈರ್ಯಂ ಸರ್ವತ್ರ ಸಾಧನಮ್” ಎಂಬಂತೆ ಧೈರ್ಯದಿಂದ ಮುನ್ನುಗ್ಗುತ್ತಿದ್ದರು. ಅದನ್ನೇ ತಮ್ಮ ಮಕ್ಕಳಿಗೆ ಧಾರೆಯೆರೆದು, ಇಂದು ಸಮಾಜದ ಆಸ್ತಿಯನ್ನಾಸಿದ್ದಾರೆ. ತಂದೆಗೆ ತಕ್ಕ ಮಕ್ಕಳಾಗಿ ಡಾ.ಮನು ಬಳಿಗಾರ್, ಶ್ರೀ ವೀರಣ್ಣ ಬಳಿಗಾರ್,

ಡಾ. ಶಿವಯೋಗಿ ಬಳಿಗಾರ್ ಇನ್ನುಳಿದವರು ತಂದೆಯ ಅಕ್ಕರೆ ಹಾಗೂ ಶಿಸ್ತುಬದ್ಧ ಗರಡಿಯಲ್ಲಿ ಬೆಳೆದು ತಂದೆಯನ್ನೇ ಸಾಧನೆಯಲ್ಲಿ ಮೀರಿಸುವ ಹಾಗೆ ಬೆಳೆದು ನಿಂತಿದ್ದಾರೆ. ಯುವಜನತೆಗೆ ಹಾಗು ಎಲ್ಲ ಭಾರತೀಯರಿಗೆ ಕೆಟ್ಟದ್ದನ್ನು ಆಡಬೇಡ, ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ ಎಂಬ ಮಹಾತ್ಮ ಗಾಂಧೀಜಿಯವರ ಸಂದೇಶದೊಡನೆ ಇವರು (ಪರಮೇಶ್ವರಪ್ಪನವರು) ಕೆಟ್ಟ ಆಲೋಚನೆ ಬೇಡ, ಕೆಟ್ಟದ್ದನ್ನು ಮಾಡಬೇಡ, ಕೆಟ್ಟದ್ದನ್ನು ತಿನ್ನಬೇಡ, ಕುಡಿಯಬೇಡವೆಂಬ ಸಂದೇಶವನ್ನು ಸಾರಿ ತಮ್ಮ ಮಕ್ಕಳನ್ನು ಹಾಗೂ ತಮ್ಮ ಸಂಪರ್ಕ ಬಂದ ಜನಸಾಮಾನ್ಯರನ್ನು ಈ ಸಂದೇಶದ ಬದ್ಧತೆಗೆ ಇವರುಗಳನ್ನು ಸಾಕ್ಷಿಯಾಗಿಸಿದ್ದಾರೆ. ಹೀಗೆ ತಂದೆ-ತಾಯಿಯವರ ಕಠಿಣಶ್ರಮ, ದೂರದೃಷ್ಟಿ ಮಾಡಿದ ತ್ಯಾಗ, ಪ್ರೀತಿ-ವಾತ್ಸಲ್ಯಗಳ ಪರಿಣಾಮವಾಗಿ ನಮ್ಮ ಈಗಿನ ಬದುಕು ಹಸನಾಗಿದೆ ಎಂದು ಡಾ.ಮನು ಬಳಿಗಾರ್ ಮುಕ್ತ ಮನಸ್ಸಿನಿಂದ ಸ್ಮರಿಸಿದ್ದಾರೆ.

'ಮಾತೃ ದೇವೋಭವ ಪಿತೃ ದೇವೋಭವ' ಎಂಬ ಸಂಸ್ಕೃತ ಶ್ಲೋಕವು ತಂದೆ-ತಾಯಿಯರನ್ನು ಪೂಜಿಸಬೇಕೆಂದು ತಿಳಿಸುತ್ತದೆ. 'ಧರ್ಮರಾಜ'ನ ಪ್ರಕಾರ ಭೂಮಿಗಿಂತ ದೊಡ್ಡ ವಸ್ತು 'ತಾಯಿ' ಅಂತರಿಕ್ಷಕ್ಕಿಂತ ಎತ್ತರವಾದ ವಸ್ತು ತಂದೆ, ತಾಯಿ ನಮಗೆ ನೆಲೆ ಒದಗಿಸುವುದರ ಜೊತೆಗೆ ನೀರು, ಆಹಾರ, ಗಿಡಮರಗಳು, ಖನಿಜ ಸಂಪತ್ತು ಅನೇಕಾನೇಕ ಅತ್ಯವಶ್ಯಕ ವಸ್ತುಗಳನ್ನು ಒದಗಿಸಿ ನಮ್ಮ ಕಾಪಾಡಿದರೇ, ತಂದೆ ನಮಗೆ ಗಾಳಿ, ಬೆಳಕು, ಮುಂತಾದವುಗಳನ್ನು ಒದಗಿಸುವ ಮೂಲಕ ನಮ್ಮನ್ನು ಪೂಜಿಸುತ್ತಾರೆ.

ನಮ್ಮ ಈಗಿನ ಈ ಸ್ಥಿತಿಗೆ ನಮ್ಮ ತಂದೆ-ತಾಯಿ ಕಾರಣರಾಗಿದ್ದಾರೆ. ಅವರು ನಮಗಾಗಿ ಅಷ್ಟೊಂದು ಕಷ್ಟಪಟ್ಟು ತಮ್ಮ ತ್ಯಾಗದ ಆಧಾರದ ಮೇಲೆ ನಮ್ಮ ಜೀವನವನ್ನು ರೂಪಿಸಿದ್ದಾರೆ. ಅವರು ಸ್ವಲ್ಪ ನಿರ್ಲಕ್ಷ್ಯ ಮಾಡಿದ್ದರೂ ನಮ್ಮ ಜೀವನ ಅಸ್ತವ್ಯಸ್ತವಾಗುತ್ತಿತ್ತು. ಎಲ್ಲವನ್ನೂ ತ್ಯಾಗ ಮಾಡಿ ನಮ್ಮ ಜೀವನವನ್ನು ರೂಪಿಸಿದ ಅವರಿಗೆ ನಮ್ಮ ಕೃತಜ್ಞತೆಗಳನ್ನು ತೋರುವುದು ನಮ್ಮ ಮೂಲಭೂತ ಕರ್ತವ್ಯವೆಂದು ತಮ್ಮ 'ಅಪ್ಪ' ಎನ್ನುವ ಹೃದಯಸ್ಪರ್ಶಿ ಪುಸ್ತಕವನ್ನು ಬರೆದಿದ್ದಾರೆ. ಮಾನವ ಹಲವು ಶಕ್ತಿಗಳಿಗೆ ಋಣಿಯಾಗಿದ್ದಾನೆ. ಅವುಗಳಲ್ಲಿ ಪ್ರಮುಖ ಭೂಮಿ ಋಣ, ತಂದೆ-ತಾಯಿ ಋಣ ಮತ್ತು ಸಮಾಜದ ಋಣ, ತಂದೆ-ತಾಯಿ ನಾವು ಭೂಮಿ ಮೇಲೆ ಕಾಣಿಸಿಕೊಳ್ಳಲು ಕಾರಣೀಭೂತರಾಗಿರುತ್ತಾರೆ. ನಮ್ಮ ಹುಟ್ಟಿಗೆ ಕಾರಣರಾಗಿ, ನಮ್ಮ ದೈಹಿಕ ಬೆಳವಣಿಗೆಯಲ್ಲಿ, ಬೌದ್ಧಿಕ ಬೆಳವಣಿಗೆಯಲ್ಲಿ ಸಹಾಯ ಸಹಕಾರ ಮಹತ್ವದ್ದಾಗಿರುತ್ತದೆ. ಅಲ್ಲದೇ ನಮಗೆ ಬದುಕಲು ಶಕ್ತಿ ತುಂಬುತ್ತಾರೆ. ಇದು ದೊಡ್ಡ ಋಣವೇ. ಈ ಋಣಗಳನ್ನು ಎಂದಿಗೂ ಪೂರ್ತಿಯಾಗಿ ತೀರಿಸಲು ಸಾಧ್ಯವಾಗದಿದ್ದರೂ, ಡಾ.ಮನು ಬಳಿಗಾರ್ ಅವರು ತಂದೆಯ ಬಗೆಗೆ ಬರೆದ ಪುಸ್ತಕದಲ್ಲಿ ಅಲ್ಪಪ್ರಮಾಣದ ಋಣವನ್ನು ತೀರಿಸುವುದರ ಜೊತೆಗೆ, ಇಂದಿನ ಪೀಳಿಗೆಯವರಿಗೆ 'ಮಗು' ಸ್ಥಾನಕ್ಕೆ ಮಾದರಿಯಾಗಿ ವಿರಾಜಮಾನರಾಗಿದ್ದಾರೆ.

❖

# ಮನು ಬಳಿಗಾರ್ ಅವರ ‘ಅಪ್ಪ’ ಕೃತಿಯಲ್ಲಿ ಜೀವನ ಮೌಲ್ಯಗಳು

ಶಿಲ್ಪ ಬಿ.

ಜೀವನಚರಿತ್ರೆ ವ್ಯಕ್ತಿಯೊಬ್ಬನ ಬದುಕಿನ ಚರಿತ್ರೆ, ಬದುಕಿನ ಸತ್ಯ ಸಂಗತಿಗಳು, ಘಟನೆಗಳು, ವ್ಯಕ್ತಿಯ ಗುಣಗಳು, ಬದುಕಿದ್ದ ಪರಿಸರದ ದಾಖಲೆ. ಇದು ನಿರ್ದಿಷ್ಟ ವ್ಯಕ್ತಿಯ ಬದುಕಿನ ಭೂತಕಾಲದ ಘಟನೆಗಳ ವ್ಯವಸ್ಥಿತ ನಿರೂಪಣೆಯ ಜೊತೆಗೆ ಇತಿಹಾಸದ ಭಾಗವು ಆಗಿರುತ್ತದೆ. ‘ಅಪ್ಪ’ ಕೃತಿಯು ಸಹ ಈ ಪ್ರಕಾರಕ್ಕೆ ಸೇರುವಂತಹದ್ದಾದರೂ ವ್ಯವಸ್ಥಿತ ಜೋಡಣೆ ಇಲ್ಲದಿರುವುದು ಇದಕ್ಕೆ ಅಪವಾದ. ವೃತ್ತಿಯಲ್ಲಿ ನಾಗರೀಕ ಸೇವೆಯಲ್ಲಿದ್ದು ಪ್ರವೃತ್ತಿಯಲ್ಲಿ ಪ್ರಗತಿಪರ ಚಿಂತಕರು, ಸೃಜನಶೀಲ ಲೇಖಕರು ಆಗಿರುವ ಡಾ.ಮನುಬಳಿಗಾರ್ ಅವರ ಸಾಹಿತ್ಯ ಕೃಷಿಯ ಉತ್ಕೃಷ್ಟ ಫಸಲಿನಲ್ಲಿ ‘ಅಪ್ಪ’ ಕೃತಿಯೂ ಒಂದು. ಇದು ವ್ಯಕ್ತಿಯ ಬದುಕಿನ ಚಿತ್ರಣದೊಂದಿಗೆ 20 ನೇ ಶತಮಾನದ ಆರಂಭ ಹಾಗೂ ಅಂತಿಮ ಕಾಲಘಟ್ಟದ ಕುಟುಂಬದ, ಗ್ರಾಮದ, ಸಾಮಾಜಿಕ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತದೆ. ಪ್ರತಿಯೊಂದು ಸಾಹಿತ್ಯ ಕೃತಿಯೂ ತನ್ನ ಪರಿಸರದ ಜೊತೆಗೆ ಸಾಗಿರುತ್ತದೆ. ಅದರಲ್ಲೂ ಆತ್ಮಚರಿತ್ರೆ, ಜೀವನ ಚರಿತ್ರೆಗಳಂತಹ ಸಾಹಿತ್ಯ ಪ್ರಕಾರಗಳಂತೂ ತನ್ನಿಡಿ ಸಮಾಜವನ್ನೇ ತಮ್ಮೊಳಗೆ ಅಡಕ ಮಾಡಿಕೊಡಿರುತ್ತವೆ. ‘ಅಪ್ಪ' ಈ ಸಾಲಿನ ಒಂದು ವಿಶಿಷ್ಟ ಕೃತಿ. ಇದು ತಾನು ರಚಿಸಿದ ಕಾಲದ ಸಾಮಾಜಿಕ ವ್ಯವಸ್ಥೆಯ ಒಂದು ಸ್ಥೂಲ ಚಿತ್ರಣವನ್ನು ನೀಡುತ್ತದೆ.

ಈ ಕೃತಿ ರಚನೆಯ ಹಿಂದಿನ ಉದ್ದೇಶ ತನ್ನ ತಂದೆಯ ಬಗೆಗಿನ ಸ್ವಾರಸ್ಯಕರ ಸಂಗತಿಗಳ ದಾಖಲೆಯಂತೆ ಮೇಲ್ನೋಟಕ್ಕೆ ಕಂಡುಬಂದರೂ (ನಿಜವೂ ಇರಬಹುದು) ಅಪ್ರಜ್ಞಾಪೂರ್ವಕವಾಗಿ ಅಂದಿನ ಸಮಾಜ ಜೀವನ, ರಾಜಕೀಯ ವ್ಯವಸೆ, ಶಿಕ್ಷಣ ವ್ಯವಸ್ಥೆ, ಜೀವನ ಮೌಲ್ಯಗಳಂತಹ ಎಳೆಗಳು ಕೃತಿಯೊಳಗೆ ಹಾಸುಹೊಕ್ಕಾಗಿವೆ. ಕೃತಿಯುದ್ದಕ್ಕೂ ತಂದೆಯ ಬಗೆಗಿನ ಅವಿಸ್ಮರಣೀಯ ಸಂಗತಿಗಳು, ಅವುಗಳ ಹಿಂದಿರುವ ಜೀವನ ಮೌಲ್ಯಗಳ ಬಗ್ಗೆ ಹೇಳುವ ಲೇಖಕರ ಒಳದನಿಯಲ್ಲಿ ಆಧುನಿಕತೆಯ ಹುಚ್ಚುಹೊಳೆಯಲ್ಲಿ ಕೊಚ್ಚಿಹೋಗುತ್ತಿರುವ ಜನರಬಗ್ಗೆ ಆತಂಕವಿದೆ. ಆದರಿಂದಲೆ ‘ಮಕ್ಕಳನ್ನು ಚೆನ್ನಾಗಿ ಬೆಳೆಸಬೇಕೆಂಬ' ಪ್ರತಿಯೊಬ್ಬ ತಂದೆಯು ಈ ಕೃತಿಯನ್ನು ಓದಲೇಬೇಕು ಎನ್ನುತ್ತಾರೆ. ಮನುಷ್ಯ ಬದುಕಿನ ಒಡನಾಟದಲ್ಲಿ ಆಪ್ಯಾಯಮಾನವಾಗಿರುವ ರಕ್ತ ಸಂಬಂಧಗಳು, ಬಂಧು-ಬಾಂಧವರು, ನೆರೆ-ಹೊರೆಯವರ ಪ್ರಸ್ತಾಪದೊಂದಿಗೆ ಆರಂಭವಾಗುವ ಈ ಕೃತಿ

ಸಮಾಜಮುಖಿ ಚಿಂತಕನೊಬ್ಬನ ಜೀವನಚರಿತ್ರೆಯೊಂದಿಗೆ ಒಂದು ಭೌಗೋಳಿಕ ಪ್ರದೇಶದ ಪ್ರಾದೇಶಿಕ ಲಕ್ಷಣ ಹಾಗು ಗ್ರಾಮೀಣ ಭಾರತದ ಜನಜೀವನವನ್ನು ಪರಿಚಯಿಸುತ್ತದೆ.

“ಒಳ್ಳೆಯದೋ ಕೆಟ್ಟದ್ದೊ ಅಂತು ಹೊಸತಿಗೆ ಮೈಯೊಡ್ಡಿಕೊಂಡದ್ದಾಗಿದೆ. ಒಟ್ಟಿನಲ್ಲಿ ಹಿಂದಿನ ಉತ್ತಮ ಮೌಲ್ಯಗಳನ್ನು ಉಳಿಸಿಕೊಳ್ಳುತ್ತ ನವ ವಿಕಾಸವನ್ನು ಅಪ್ಪಿಕೊಳ್ಳಬೇಕಾಗಿದೆ” ಎನ್ನುವ ಆರಂಭದ ಮಾತಿನಲ್ಲಿ

ಎರಡು ತಲೆಮಾರುಗಳ ನಡುವೆ ನಿಂತಿರುವ ಸೃಜನಶೀಲ ಚಿಂತಕನೊಬ್ಬನ ದೃಷ್ಟಿಕೋನ, ಆಧುನಿಕತೆಗೆ ತೆರೆದುಕೊಳ್ಳುತ್ತ ಹೋದಂತೆ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯಲ್ಲಾಗುತ್ತಿರುವ ಪಲ್ಲಟಗಳ ಚಿತ್ರಣ, ಆಧುನಿಕತೆಯ ಅಂಧಾನುಕರಣೆಯ ಬಗೆಗಿರುವ ವಿಶಾದದ ಎಳೆ ಕಾಣುತ್ತದೆ. ಇವರ ಸಾಹಿತ್ಯದ ವಸ್ತುಗಳಲ್ಲೆಲ್ಲ ತಲೆಮಾರುಗಳ ಅಂತರದಲ್ಲಿ ಮನುಷ್ಯ ವರ್ತನೆಗಳಲ್ಲಿ ಉಂಟಾಗಿರುವ ಬದಲಾವಣೆಗಳು, ಕಣ್ಮರೆಯಾಗುತ್ತಿರುವ ಮೌಲ್ಯಗಳ ಬಗೆಗೆ ಆತಂಕವಿರುವುದನ್ನು ಕಾಣಬಹುದು. 'ಅಪ್ಪ' ಕೃತಿಯು ಸಹ ಇದಕ್ಕೆ ಹೊರತಾಗಿಲ್ಲ.

ಈ ಕೃತಿಯು ಲೇಖಕರ ತಂದೆ ಪರಮೇಶ್ವರಪ್ಪ ಅವರ ಜೀವನಗಾಥೆ. ಇವರೊಬ್ಬ ಅಪ್ಪಟ ದೇಶಭಕ್ತ, ಆದರ್ಶ ತಂದೆ ಮತ್ತು ಸಮಾಜಮುಖಿ ಚಿಂತಕ. ಸಾಮುದಾಯಿಕ ಬದುಕಿನ ಪ್ರತಿನಿಧಿ. ಈ ಕೃತಿಯನ್ನು ಎರಡು ಆಯಾಮಗಳಲ್ಲಿ ನೋಡಬಹುದೆಂದು ನನಗನ್ನಿಸುತ್ತದೆ, ಒಂದು ವೈಯಕ್ತಿಕ ಆಯಾಮ ಇನ್ನೊಂದು ಸಾಮಾಜಿಕ ಆಯಾಮ. ಒಂದರೊಳಗೊಂದು ಮಿಳಿತವಾಗಿರುವ ಈ ಎರಡು ನೆಲೆಗಳಲ್ಲಿ ಮುಖ್ಯವೆನಿಸುವುದು ಜೀವನ ಮೌಲ್ಯಗಳು ಮತ್ತು ಜೀವಪರತೆ. ಅಸಾಧ್ಯವಾದರು (ಸಾಧ್ಯವಾದ ಮಟ್ಟಿಗೆ) ಪ್ರತ್ಯೇಕವಾಗಿ ಗುರ್ತಿಸುವುದು ಸೂಕ್ತವೆನಿಸುತ್ತದೆ.

**ವೈಯಕ್ತಿಕ ಆಯಾಮ :**

ಪರಮೇಶ್ವರಪ್ಪನವರು ಓದಿದ್ದು ಏಳನೆ ಇಯತ್ತೆ (ಅಪೂರ್ಣ). ಆದರು ತಮ್ಮ ಬೌದ್ಧಿಕತೆ, ವೈಚಾರಿಕತೆ ಮತ್ತು ಕ್ರಿಯಾಶೀಲತೆಗಳಿಂದಾಗಿ ಅವಕಾಶವಂಚಿತ ಗ್ರಾಮವೊಂದರ ಅಭಿವೃದ್ಧಿಗೆ ನಾಂದಿ ಹಾಡಿದವರು. 'ಶಿಸ್ತುಬದ್ಧ ಜೀವನವೆ ಯಶಸ್ವಿ ಬದುಕಿನ ಮೂಲ ಸೂತ್ರ'ವೆಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದ ಇವರು ಇದರಿಂದಲೆ ವೈಯಕ್ತಿಕ ಮತ್ತು ಸಾಮುದಾಯಿಕ ಜೀವನಗಳೆರಡರಲ್ಲು ಸಮತೋಲನ ಕಾಯ್ದುಕೊಂಡವರು. ಮಕ್ಕಳಿಗೆ ನೈತಿಕತೆ, ಶಿಸ್ತು, ದೇಶಪ್ರೇಮ, ಆತ್ಮವಿಶ್ವಾಸದ ಪಾಠವನ್ನು ಹೇಳಿಕೊಟ್ಟವರು. ಹೇಗೆ ಬದುಕಬೇಕೆಂಬುದನ್ನು ಬದುಕಿ ತೋರಿಸಿಕೊಟ್ಟವರು. ಮಕ್ಕಳು ಮೊಮ್ಮಕ್ಕಳ ಪದ್ಯಗಳಲ್ಲಿ ಮೆರೆವಂತ ಮೇರು ವ್ಯಕ್ತಿತ್ವದವರು. ಎಷ್ಟೋ ಬಡ ಅವಕಾಶವಂಚಿತ ವಿದ್ಯಾರ್ಥಿಗಳಿಗೆ ನೆರವು ನೀಡಿ ಮಾರ್ಗದರ್ಶಕರಾದವರು. ಶಿಕ್ಷಣ ಪ್ರೇಮಿಯಾಗಿದ್ದ ಇವರು ರವೀಂದ್ರರ 'ವಿಶ್ವ ಭಾರತಿ' ಮಾದರಿಯ 'ಗ್ರಾಮ ಭಾರತಿ' ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿ ಪರವೂರಿನ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಿಕೊಟ್ಟರು ಮತ್ತು ಹೆಣ್ಣುಮಕ್ಕಳಿಗೂ ಹೆಚ್ಚಿನ ಶಿಕ್ಷಣ ದಕ್ಕುವಂತೆ ಮಾಡಿದರು.

ಗ್ರಾಮೀಣ ಬದುಕಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದ ಇವರು ಒಡೆಯ-ಆಳು ಎಂಬ ಅಂತರವನ್ನು ಮೀರಿ ಮಾನವೀಯವಾಗಿ ಅಲೋಚಿಸುತ್ತಿದ್ದವರು. ಆಳುಮಕ್ಕಳೊಂದಿಗಿನ ಸಹಭೋಜನ, ಅವರ ಕಷ್ಟಗಳಿಗೆ ನೆರವಾಗುವುದು, ಅಸಹಾಯಕರ ಸಮಸ್ಯೆಗೆ ದನಿಯಾಗುವುದು, ಅವರ ಮಕ್ಕಳ ಬಗೆಗಿನ ಪ್ರೀತಿ, ಕಾಳಜಿ ಅತೀವವಾದದ್ದಾಗಿತ್ತು. ಹಿನ್ನಲೆ ಏನೆ ಇರಲಿ ಯೋಗ್ಯತೆ ಇರುವ ಪ್ರತಿಯೊಬ್ಬ ವ್ಯಕ್ತಿಗೂ ಬಯಸಿದ್ದು ಸಿಗಬೇಕು. ಅದಕ್ಕಾಗಿ ತನ್ನಿಂದಾದ ನೆರವು ನೀಡಬೇಕೆಂಬ ನಿಯಮಕ್ಕೆ ಬದ್ಧರಾಗಿದ್ದವರು.

ವಿಚಾರವಾದಿಯಾಗಿದ್ದ ಇವರು ಶಿಸ್ತು, ವೈಚಾರಿಕತೆ, ದೇಶಪ್ರೇಮಗಳಂತಹ ಮೌಲ್ಯಗಳಿಗೆ ಕೌಟುಂಬಿಕ ಮತ್ತು ಸಾಮಾಜಿಕ ಬದುಕುಗಳೆರಡರಲ್ಲೂ ಹೆಚ್ಚಿನ ಒತ್ತು ನೀಡಿದವರು. ಸಮಾಜದ ಸಮಸ್ಯೆಯನ್ನು ವೈಯಕ್ತಿಕ ಸಮಸ್ಯೆಯಂತೆ ಭಾವಿಸಿ ಸ್ವಂತದ ಬದುಕನ್ನು ಸಮಾಜದ ಕೆಲಸಕ್ಕೆ ಮುಡಿಪಾಗಿಟ್ಟವರು. ಗ್ರಾಮೀಣ ಕೈಗಾರಿಕೆ ಸ್ಥಾಪನೆ, ಗ್ರಾಮ ನೈರ್ಮಲ್ಯ, ನಿರುದ್ಯೋಗ ನಿವಾರಣೆ, ನೇಕಾರರ ಸಮಸ್ಯೆಗಳಿಗೆ ಪರಿಹಾರದಂತಹ ಚಟುವಟಿಕೆಗಳ ಮುಂಚೂಣಿಯಲ್ಲಿ ನಿಂತವರು.

ಪ್ರಗತಿಪರ ರೈತರಾಗಿದ್ದ ಇವರು ಕಾಯಕತತ್ವವನ್ನು ಬದುಕಿನುದ್ದಕ್ಕೂ ಬಿಡದೆ ಬದುಕಿದವರು. ಜನಸ್ನೇಹಿ ಮನೋಭಾವದವರಾಗಿದ್ದು 'ಸರ್ವೇಜನ ಸುಖಿನಃ' ಎಂಬ ತತ್ವದಲ್ಲಿ ನಂಬಿಕೆ ಇಟ್ಟಿದ್ದರು. ಗ್ರಾಮೀಣ ಪರಿಸರದ ಸಾಮುದಾಯಿಕ ಬದುಕಿನಲ್ಲಿ ತನ್ಮಯರಾಗಿ ದುರ್ಬಲರಿಗೆ, ನಿರ್ಗತಿಕರಿಗೆ ಊರುಗೋಲಾಗಿ 'ಊರೆಲ್ಲ ಬಂಧುಕೇರಿಯಲ್ಲ ಬಳಗ' ಎಂಬಂತೆ (ಕಾಮಧೇನುವಾದ ಕಾಯಕಯೋಗಿ: ಶ್ರೀ ಕೆ.ಎಂ. ಸುಂಕದ) ಬದುಕಿದವರು. ಒಟ್ಟಾರೆ ಉದಾತ್ತ ಅಲೋಚನೆಗಳುಳ್ಳ ವ್ಯಕ್ತಿಗೆ ಅವಕಾಶ ಮತ್ತು ಬೆಂಬಲ ದೊರೆತರೆ ಆಗಬಹುದಾದ ಎಲ್ಲಾ ಸಮಾಜಮುಖಿ ಕಾರ್ಯಗಳು ಇವರಿಂದಾದವು. ಇದಕ್ಕೆಲ್ಲ ಇವರಿಗೆ ಬೆಂಬಲವಾಗಿ ನಿಂತವರು ಇವರ ಮಡದಿ ಮತ್ತು ಸ್ನೇಹಿತರು.

ಆತ್ಮವಿಶ್ವಾಸ ಮತ್ತು ಧನಾತ್ಮಕ ಚಿಂತನೆ ಇವರ ವ್ಯಕ್ತಿತ್ವದ ಮತ್ತೊಂದು ಶ್ರೇಷ್ಠ ಅಂಶ. ತಮ್ಮ ಮಕ್ಕಳಿಗೆ ಹೇಳಿಕೊಟ್ಟ ಜೀವನ ಪಾಠದ ಮೊದಲ ಅಧ್ಯಾಯ ಶಿಸ್ತು ಮತ್ತು ಶ್ರೇಷ್ಠತೆಯಾದರೆ ಎರಡನೇ ಅಧ್ಯಾಯ ಆತ್ಮವಿಶ್ವಾಸ ಮತ್ತು ಧನಾತ್ಮಕ ಚಿಂತನೆ. ಇವರ ಈ ತರಬೇತಿಯಿಲ್ಲದಿದ್ದರೆ 'ತಂದೆಯ ಕಳೆಬರವನ್ನು ಕುಣಿಯಲ್ಲಿರಿಸಿ ಅವರ ಬಗೆಗೆ ತಾನು ಬರೆದ ಪದ್ಯಗಳನ್ನು ಓದುವ ದಿಟ್ಟತನ' ಲೇಖಕರಿಗೆ ಬರಲು ಸಾಧ್ಯವಿರಲಿಲ್ಲ ಎನಿಸುತ್ತದೆ. ಮೂಢನಂಬಿಕೆಗಳನ್ನು ಕಟುವಾಗಿ ಟೀಕಿಸುತ್ತಿದ್ದ ಪರಮೇಶ್ವರಪ್ಪ "ಭೀತಿಯೇ ಭೂತವಾಗುತ್ತದೆಯೇ ಹೊರತು ಯಾವ ಭೂತ ಪಿಶಾಚಿಗಳು ಇಲ್ಲ", 'ಧೈರ್ಯಂ ಸರ್ವತ್ರ ಸಾಧನಂ' ಎನ್ನುತಿದ್ದರು. ತಮ್ಮ ಮಕ್ಕಳು ಸ್ನೇಹಿತರಿಗೂ ಇದರ ಅರಿವು ಮೂಡಿಸುವ ಮೂಲಕ ಮೌಢ್ಯತೆಯ ವಿರುದ್ಧ ತಣ್ಣನೆಯ ಕ್ರಾಂತಿ ಪ್ರಾರಂಭಿಸಿದರು. ಅವರ ಮಗ ವೀರಣ್ಣ ಹೇಳುವ ನಾಲ್ಕು ಸಾಲುಗಳು ಇದಕ್ಕೆ ಸಾಕ್ಷಿಯಾಗಿವೆ.

**ಕತ್ತಲ ರಾತ್ರಿಲಿ ಅಪರಿಚಿತದಾರಿಯಲಿ**
**ಅಪ್ಪನ ನೆನೆದರೆ ಸಾಕು**
**ನಡುಗುವ ಕಾಲು ದೃಢವಾಗಿ**
**ನಡೆಯಲು ಸಜ್ಜಾಗುತ್ತವೆ.............( ನನ್ನ ಅಪ್ಪ )**

ದೇಶಪ್ರೇಮವನ್ನು ಜನ್ಮಜಾತವಾಗಿ ಪಡೆದಿದ್ದ ಪರಮೇಶ್ವರಪ್ಪ ನುಡಿದಂತೆ ನಡೆದ ವ್ಯಕ್ತಿ. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಇವರು ತಮ್ಮ 16ನೆ ವಯಸ್ಸಿನಲ್ಲಿ ಖಾದಿಗೆ ಮಾರುಹೋದವರು ಬದುಕಿನುದ್ದಕ್ಕೂ ಅದನ್ನೇ ಅನುಸರಿಸಿದರು. ತಮ್ಮ ಮದುವೆಯಲ್ಲು ರೇಷ್ಮೆ ವಸ್ತ್ರಕ್ಕೆ ಮರುಳಾಗದೆ ದಂಪತಿಗಳಿಬ್ಬರು ಖಾದಿಯನ್ನೆ ತೊಟ್ಟವರು. ರಾಷ್ಟ್ರದ ಉಳಿವು ನಮ್ಮ ಉಳಿವು ಎಂಬ ಅಭಿಮತ ಹೊಂದಿದ್ದ ಇವರು 'ದೇಶಕ್ಕಾಗಿ ನೀನು' ಎಂಬ ಉದಾತ್ತ ಅಲೋಚನೆ ಹೊದಿದ್ದರು. "ರಾಷ್ಟ್ರಪತಿಗಿಂತ ರಾಷ್ಟ್ರಪ್ರೇಮವಿರುವ ಪ್ರಜೆ ಮಿಗಿಲು,

ಪ್ರಧಾನಿಗಿಂತ ವಿಚಾರಪ್ರಾಧಾನ್ಯವುಳ್ಳ ಪ್ರಜೆ ಮಿಗಿಲು" ಎಂಬ ಇವರ ನಿಲುವು ಇವರ ಬದುಕಿಗೆ ಸಾಕ್ಷಿಯಾಗಿದೆ.

**ಸಾಮಾಜಿಕ ಆಯಾಮ:**

ಈ ಕೃತಿ ಪರಮೇಶ್ವರಪ್ಪನವರ ವೈಯಕ್ತಿಕ ಜೀವನದ ಜೊತೆಗೆ ಅಂದಿನ ಸಾಮಾಜಿಕ ಸಂಗತಿಗಳ ಮೇಲು ಬೆಳಕು ಚೆಲ್ಲುತ್ತದೆ. ಹಾಗೆ ನೋಡಿದರೆ ಇವರು ಎಲ್ಲರಂತೆ ಸಮಾಜದ ಒಂದು ಭಾಗವಾಗಿರದೆ ಸಮಾಜವನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡವರು. ಆ ಕಾರಣದಿಂದಲೆ ಸದಾ ಸಾಮುದಾಯಿಕ ಬದುಕಿನಲ್ಲಿ ತಲ್ಲೀನರಾಗಿರುತ್ತಿದ್ದರು. ಇಂತಹ ವ್ಯಕ್ತಿ ಚರಿತ್ರೆಯೊಳಗೆ ಅಂದಿನ ಸಾಮಾಜಿಕತೆಯ ಕುರುಹು ಮಿಳಿತವಾಗಿರುವುದು ಸರ್ವೇಸಾಮಾನ್ಯವಾದುದು. ಈ ಕೃತಿಯಲ್ಲಿ ಬರುವ ಶಿಗ್ಗಿ ಪ್ರೌಢಶಾಲೆ ಸ್ಥಾಪನೆ, ಮಹಾ ಜನನಿ ಜಾನಕಿಬಾಯಿ, ಭಂಗಿ ರಾಮಯ್ಯನ ಪ್ರಸಂಗ ಮೊದಲಾದವು ಅಂದಿನ ವ್ಯವಸ್ಥೆಯಲ್ಲಿದ್ದ ಸಾಮಾಜಿಕ ಮತ್ತು ರಾಜಕೀಯ ಚಿತ್ರಣವನ್ನು ನೀಡುತ್ತವೆ.

ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಡೆದ ಹೋರಾಟಗಳು ಅವಿಸ್ಮರಣೀಯವಾದವು. ಇಂದು ಶಿಕ್ಷಣ ಇಷ್ಟು ವ್ಯಾಪಕವಾಗಿ ಹರಡಿರುವುದರ ಹಿಂದೆ ಅಂದಿನ ಶ್ರಮವಿರುವುದನ್ನು ಕಡೆಗಣಿಸುವಂತಿಲ್ಲ. ಅಂದಿನ ಜನ ಸಮಾಜದ ಕೆಲಸಕ್ಕಾಗಿ ತಮ್ಮ ಸ್ವಂತದ ಬದುಕನ್ನು ತ್ಯಜಿಸಿ, ಜಾತಿ, ಧರ್ಮದ ಎಲ್ಲೆಯನ್ನು ಮೀರಿ ಹೋರಾಡಿರುವುದು ಇಂದಿಗೆ ಇತಿಹಾಸವಾದರು ಸ್ಮರಣೀಯವಾದುದು. ಕೇವಲ ಹಣದಾಸೆಯಿಂದ ತಲೆ ಎತ್ತುತ್ತಿರುವ ಇಂದಿನ ಎಷ್ಟೋ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರುಗಳಿಗೆ ಇದರ ಅರಿವಿಲ್ಲದಿರುವುದು ದುರಂತ. ಈ ಕೃತಿಯಲ್ಲಿ ಬರುವ ಶಿಗ್ಗಿಯ ಗ್ರಾಮ ಭಾರತಿ ಶಿಕ್ಷಣ ಸಂಸ್ಥೆಯ ಸ್ಥಾಪನೆಗೆ ಕಾರಣವಾದ ಎರಡು ಅಂಶಗಳಲ್ಲಿ ಒಂದು ಹೆಚ್ಚು ಓದಿಲ್ಲ ಎಂಬ ಕಾರಣಕ್ಕೆ ಉದ್ಯೋಗಸ್ಥ ಯುವಕರು ಊರಿನ ಹೆಣ್ಣುಮಕ್ಕಳನ್ನು ವಿವಾಹವಾಗಲು ಹಿಂದೇಟು ಹಾಕಿದ್ದು, ಇನ್ನೊಂದು ಮುಲ್ಕಿ ಪರೀಕ್ಷೆ ಪಾಸಾದವರಿಲ್ಲ ಎಂಬ ಕಾರಣಕ್ಕೆ ಪರವೂರಿನ ವ್ಯಕ್ತಿಯನ್ನು ಗ್ರಾಮ ಪಂಚಾಯ್ತಿಯ ಚುನಾವಣೆಗೆ ನಿಲ್ಲಿಸಿದ್ದು, ಇಲ್ಲಿ ವಿದ್ಯಾವಂತ ಯುವಕರ ಮನಸ್ಥಿತಿ ಅಂದಿನ ಸಮಾಜದ ಮನೋಭಾವ ತಿಳಿಸಿದರೆ ಚುನಾವಣಾ ಪದ್ಧತಿ ರಾಜಕೀಯ ವ್ಯವಸ್ಥೆಯ ಚಿತ್ರಣ ನೀಡುತ್ತದೆ. ಇಲ್ಲಿ ಗಮನಿಸಬೇಕಾದದ್ದು ಅಂದಿನ ಚುನಾವಣಾ ವ್ಯವಸ್ಥೆ, ಮೀಸಲಾತಿಯ ಕಾರಣಕ್ಕಾಗಿ ಅಮಾಯಕ ವ್ಯಕ್ತಿಯೊಬ್ಬರನ್ನು ಚುನಾವಣೆಗೆ ನಿಲ್ಲಿಸಿ ಅವರನ್ನು ರಬ್ಬರ್ ಸ್ಟಾಂಪಾಗಿಸಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ರಾಜಕೀಯ ಪುಡಾರಿಗಳು, ಅವರಿಗೆ ಅನುಕೂಲಕರವಾಗಿರುವ ಇಂದಿನ ಅವಕಾಶವಾದಿ ರಾಜಕೀಯ ವ್ಯವಸ್ಥೆಗೂ ಅಂದಿನ ನಿಸ್ವಾರ್ಥ ಸಾಮಾಜಿಕ ವ್ಯವಸ್ಥೆಗೂ ಇರುವ ಅಗಾಧ ಅಂತರ ಕಾಣುತ್ತದೆ. ಏನೇ ಇರಲಿ ಸಮಸ್ಯೆಯೊಂದರ ಪರಿಹಾರಕ್ಕೆ ಸಮುದಾಯವೊಂದು ಒಗ್ಗಟ್ಟಾಗಿ ಶ್ರಮಿಸಿದ್ದು ಮುಖ್ಯವಾದುದು.

‘ವೇಶ್ಯೆ’ ಎಂಬುದು ನಮ್ಮ ಸಮಾಜದಲ್ಲಿ ಇಂದಿಗೂ ಕೀಳುಮಟ್ಟದಲ್ಲಿ ಬಳಕೆಯಾಗುತ್ತಿರುವ ಪದ. ರಾಜ ಮಹಾರಾಜರ ಕಾಲದಲ್ಲಿ ವೇಶ್ಯೆಯರಿಗೆ ಸಾಮಾಜಿಕ ಸ್ಥಾನಮಾನಗಳಿದ್ದವು ಎಂಬುದು ಚರಿತ್ರೆ. ಆದರೆ ಈ ಕೃತಿಯಲ್ಲಿ ಬರುವ ಮಹಾ ಜನನಿ ಜಾನಕಿಬಾಯಿ ವೃತ್ತಿಯಲ್ಲಿ ವೇಶ್ಯೆಯಾದರು ಸಾಮಾಜಿಕವಾಗಿ ಗೌರವ ಸ್ಥಾನಮಾನಗಳನ್ನು ಹೊಂದಿದ್ದವಳು. (ಎಲ್ಲರಿಗೂ ಈ ಸ್ಥಾನಮಾನಗಳಿದ್ದವೋ ಅಥವಾ ಶೀಮಂತ ವೇಶ್ಯೆಯರಿಗೆ ಮಾತ್ರವೊ?) ಈಕೆ ವ್ಯವಹಾರ ನೀತಿವಂತಳು, ಮಾತಿಗೆ ತಪ್ಪದವಳು, ಬಹಳ ಸ್ವಾಭಿಮಾನಿಯು ಆಗಿದ್ದಳು. ಇವಳ ಹಿನ್ನೆಲೆ ಏನೆ ಇದ್ದರು ಇಲ್ಲಿ ಮುಖ್ಯವಾಗುವುದು ಅವಳೊಳಗಿದ್ದ ಸಾಮಾಜಿಕ ಕಳಕಳಿ (ಪರಮೇಶ್ವರಪ್ಪನವರ ಪ್ರೇರಣೆ). ಮಕ್ಕಳಿಲ್ಲದ ಈಕೆ ತನ್ನಿಡೀ ಆಸ್ತಿ ಅಂತಸ್ತು, ನಗ ನಾಣ್ಯಗಳನ್ನೆಲ್ಲ ಎರಡು ಶಾಲೆಗಳಿಗೆ ದಾನ ಮಾಡಿದ ಮಹಾಮಾತೆ.

ಈ ಕೃತಿಯಲ್ಲಿ ಬರುವ ಮತ್ತೊಂದು ಪ್ರಸಂಗ ಭಂಗಿರಾಮಯ್ಯನದು, ಭಂಗಿ ಎಂದರೆ ಮಲ ಪಾಯಖಾನೆ ಗುಂಡಿಗಳಿಂದ ಮಲವನ್ನು ಹೊರತೆಗೆದು ಒಣಗಿಸಿ ಗೊಬ್ಬರ ಮಾಡಿ ಮಾರುವ ಕಾಯಕ. (ಇವತ್ತಿಗೆ ಇದು ಸಂಕೀರ್ಣ ವಿಷಯ) ತನ್ನ ಯಾವುದೊ ತಪ್ಪಿನ ಪ್ರಾಯಶ್ಚಿತ್ತಕ್ಕಾಗಿ ಸ್ವತಃ ಅವನೆ ಆಯ್ದುಕೊಂಡ ವೃತ್ತಿ. ಇಲ್ಲಿ ಗಮನಿಸಬೇಕಾದುದು ಒಂದು ಕಾಲಕ್ಕೆ ಸಾಮಾನ್ಯ ಸಂಗತಿಗಳು ಮತ್ತೊಂದು ಕಾಲಕ್ಕೆ ಮತ್ತಾವುದೊ ಸ್ವರೂಪ ತಾಳುವುದನ್ನು ಏನೇ ಇರಲಿ ಈ ಭಂಗಿರಾಮಯ್ಯನ ಪಶ್ಚಾತ್ತಾಪ ಮನೋಭಾವ ಮತ್ತು ಕಾಯಕ ನಿಷ್ಠೆ ಅಸಾಧಾರಣವಾದುದು.

ಸಾಹಿತ್ಯ ಕೃತಿಯೊಂದು ಯಾವುದೇ ಪ್ರಕಾರಕ್ಕೆ ಸೇರಿದ್ದಾದರೂ ಕೆಲ ಮೂಲಭೂತ ಸಂಗತಿಗಳನ್ನು ಬಿಟ್ಟುಕೊಡುವುದಿಲ್ಲ. ಈ ಕೃತಿಯುದ್ದಕ್ಕೂ ಲೇಖಕರು ತಮ್ಮ ತಂದೆಯವರ ಜೀವನಚರಿತ್ರೆಯನ್ನೇ ಮುಖ್ಯವಾಗಿಸಿಕೊಂಡರು ಅಲ್ಲಲ್ಲಿ ಅಂದಿನ ಸಮಾಜದಲ್ಲಿದ್ದ ಬಡತನ, ಹಸಿವು, ಅಸಮಾನತೆಗಳ ಚಿತ್ರವನ್ನು ಬಿಟ್ಟುಕೊಡುತ್ತಾರೆ. ಒಂದು ಕಡೆ ತಮ್ಮ ಮನೆಯ ಭೂರಿ ಭೋಜನದ ಚಿತ್ರಣ ನೀಡುತ್ತಾ ಇನ್ನೊಂದೆಡೆ ತಮ್ಮ ಮನೆಯ ಆಳು ಮಕ್ಕಳ ರೊಟ್ಟಿಯ ಚಿತ್ರವನ್ನು ನೀಡುತ್ತಾರೆ.

ಈ ಕೃತಿ ಮನು ಬಳಿಗಾರರು ಬರೆದಿರುವ ಜೀವನ ಚರಿತ್ರೆಯಾದರೂ ಅವರು ಪ್ರಸ್ತಾಪಿಸಿರುವ ಡಾ.ಸುಂಕದ ಅವರ ಲೇಖನ ಸಹ ಪ್ರಮುಖವೆಂದೆನಿಸುತ್ತದೆ. ಲೇಖಕರ ಮಾತುಗಳು ತಂದೆ ಮಗನ ಭಾವನಾತ್ಮಕತೆಯ ಹೆಚ್ಚುಗಾರಿಕೆಯ ಮಾತುಗಳಿರಬಹುದೆಂದು ಓದುಗ ತೀರ್ಮಾನಿಸುವ ಹೊತ್ತಿಗೆ ಸುಂಕದ ಅವರ ಮಾತುಗಳು ಅದನ್ನು ಅಲ್ಲಗಳೆಯುತ್ತವೆ. ಸುಂಕದ ಅವರ ಇಡೀ ಲೇಖನದಲ್ಲಿ ಬರುವ ಪರಮೇಶ್ವರಪ್ಪನವರ ಸಾಮಾಜಿಕ ಬದುಕು ಮತ್ತು ಸಮಷ್ಠಿ ಚಿಂತನೆಗಳ ಪ್ರಸ್ತಾಪ ಇಡೀ ಕೃತಿಗೆ ಮತ್ತಷ್ಟು ಪುಷ್ಠಿ ನೀಡುತ್ತವೆ.

ಒಟ್ಟಾರೆ ಈ ಕೃತಿ ಬದುಕಿದರೆ ಹೀಗೆ ಬದುಕಬೇಕು ಎಂಬಂತೆ ಬದುಕಿ, ಸಾಮಾಜಿಕ ಬದುಕಿನಲ್ಲಿ ಆಧ್ಯಾತ್ಮಿಕ ನೆಮ್ಮದಿ ಕಂಡ, ಶರಣ ಸದೃಶ ಬದುಕಿಗೆ ಸಾಕ್ಷಿಭೂತರಾಗಿದ್ದ ವ್ಯಕ್ತಿಯ ಬದುಕಿನ ಜೀವನ

ಮೌಲ್ಯಗಳೊದಿಗೆ ಅಂದಿನ ಕಾಲದ ಸಾಮಾಜಿಕ ಮೌಲ್ಯಗಳ ಮೇಲೆ ಬೆಳಕು ಚೆಲ್ಲುವ ಅಂಶಗಳನ್ನು ಒಳಗೊಂಡಿದೆ. ಲೇಖಕರೇ ಹೇಳುವಂತೆ ಇದು ಅವರ ತಂದೆಯ ಬಗೆಗೆ ಹೇಳಿರುವ ಪರಿಮಿತ ಸಂಗತಿಗಳು ಮಾತ್ರ ಹೇಳದೆ ಉಳಿದದ್ದು ಅಪರಿಮಿತವಾದುದು. ಆರಂಭದಲ್ಲಿ ಅತಿ ಎನಿಸುವ ಈ ಕೃತಿ ಉತ್ತಮ ಮೌಲ್ಯಗಳು ಮತ್ತು ಆಳ ಆಲೋಚನೆಗಳನ್ನು ತನ್ನ ಒಡಲೊಳಗಿಟ್ಟುಕೊಂಡಿದೆ. ಓದಿದಷ್ಟು ಹೊಸತನವನ್ನು ನೀಡುತ್ತದೆ.

**ಆಕರಗ್ರಂಥ**

ಅಪ್ಪ-ಮನು ಬಳಿಗಾರ್, ಪ್ರಥಮ ಮುದ್ರಣ - 2012, ಐಬಿಎಚ್ ಪ್ರಕಾಶನ, ಬೆಂಗಳೂರು - 560085

❖

# ಮನು ಬಳಿಗಾರರ ಬರವಣಿಗೆಯಲ್ಲಿ ಕ್ರಿಯಾಶೀಲತೆ ಮತ್ತು ಸಾತ್ವಿಕ ಎಚ್ಚರ

ಡಾ. ಸಿಪಿಲೆ ಸತೀಶ್

ಮನು ಬಳಿಗಾರ್ ನಮ್ಮ ನಡುವಿನ ಹೆಸರಾಂತ ಬರಹಗಾರರು. ಅವರ ಬದುಕಿನ ಪ್ರೀತಿ ಮತ್ತು ಸಾಹಿತ್ಯ ಪ್ರೀತಿ ನಮ್ಮ ಕಣ್ಣರಳಿಸುವಂತೆ ಮಾಡಿವೆ. ಏನೇ ಬರೆದರೂ ಬಹುಶ್ರದ್ಧೆಯಿಂದ ಬರೆಯುವ ಬಳಿಗಾರ್, ಬರವಣಿಗೆಯ ಮೇಲಿಟ್ಟಿರುವ ಅಪರಿಮಿತ ಆಸಕ್ತಿ ಅಚ್ಚರಿ ಹುಟ್ಟಿಸುತ್ತದೆ. ಭೋರ್ಗರೆಯುವ ಉತ್ಸಾಹದ ಖನಿಯಾಗಿರುವ ಅವರು, ಏನೇ ಬರೆದರೂ ಕರಾರುವಕ್ಕಾದ ಮನಸ್ಸಿನ ದುಡಿತವೊಂದು ಅಲ್ಲಿರುತ್ತದೆ. ಎಸ್.ಆರ್.ಕಂಠಿಯವರನ್ನು ಕುರಿತಾದ ಜೀವನ ಚರಿತ್ರೆ ಇದಕ್ಕೊಂದು ನಿದರ್ಶನ.

ಜೀವನ ಚರಿತ್ರೆಯನ್ನು ಬರೆಯುವಾಗ, ವ್ಯಕ್ತಿಯ ಬದುಕಿನ ಆಗುಹೋಗುಗಳನ್ನು ಕೆಲವೇ ಮಾತುಗಳಲ್ಲಿ ಚಿತ್ರಿಸುವುದು ಕಷ್ಟಕರ. ಏಕೆಂದರೆ ಜೀವನವೇ ಹಾಗೆ, ಭೋರ್ಗರೆಯುವ ನದಿಯನ್ನು ಕೆಲವೇ ಮಾತುಗಳ ಅಣೆಕಟ್ಟಿನಲ್ಲಿ ಹಿಡಿದಿಡುವುದು ಸುಲಭ ಸಾಧ್ಯವಲ್ಲ. ಅದರಲ್ಲೂ ಸಜ್ಜನ ರಾಜಕಾರಣಿಯೊಬ್ಬರ ಚರಿತ್ರೆ ಬರೆಯುವಾಗ ಸಾಕಷ್ಟು ತಿಣುಕಾಡಬೇಕಾಗುತ್ತದೆ. ಈ ಗುಟ್ಟು ಅರಿತ ಬಳಿಗಾರ್, ತಮ್ಮದೇ ವಿಭಾಗ ಕ್ರಮವೊಂದನ್ನು ಕಂಡುಕೊಂಡು ಲೀಲಾಜಾಲವಾಗಿ ಬರೆಯಲೆತ್ನಿಸುತ್ತಾರೆ.

ಜನನ ಬಾಲ್ಯ; ವಕೀಲಿ ವೃತ್ತಿ ಹಾಗೂ ವಿವಾಹ; ಸ್ವಾತಂತ್ರ್ಯ ಹೋರಾಟ ಹಾಗೂ ರಾಜಕೀಯ; ಸತ್ಯಾಗ್ರಹ ಹಾಗೂ ಸೆರೆಮನೆ ವಾಸ - ಹೀಗೆ ಸಾಗುತ್ತದೆ ಕಂಠಿಯವರ ಜೀವನ ಚರಿತ್ರೆ. ಅರುಣೋದಯ ಎನ್ನುವ ಅಧ್ಯಾಯದಲ್ಲಿ ಕಂಠಿಯವರ ಜನನ ಕುರಿತ ಮಾತೊಂದು ಬರುತ್ತದೆ:" 1964ನೇ ಇಸ್ವಿಯ ಮೇ ತಿಂಗಳ ಒಂದು ಮುಂಜಾವು. ಆದರೆ ಅದು ಎಂದಿನ ಸಾಧಾರಣದ ಮುಂಜಾವಾಗಿರಲಿಲ್ಲ. ಆ ಊರಿಗೆ ಊರೇ ಅಭೂತಪೂರ್ವವಾಗಿ ಸಿಂಗರಿಸಿಕೊಳ್ಳುತ್ತ ಯಾವುದೋ ಮಹತ್ಕಾರ್ಯಕ್ಕೆ ಸಜ್ಜಾಗತೊಡಗಿತ್ತು.

ರಸ್ತೆಗಳು ಮೈಕೊಡವಿ ತಮ್ಮ ಧೂಳನ್ನೆಲ್ಲ ದೂರ ಮಾಡಿಕೊಂಡಂತೆ ತಂಪಾದ ನೀರಿನಿಂದ ತೊಳೆಯಲ್ಪಟ್ಟಿದ್ದವು." ಬಳಿಗಾರರ ಈ ಬರವಣಿಗೆಯ ಶೈಲಿಗೊಂದು ಆಕರ್ಷಣೆಯಿದೆ. ಮುಂದೆ ಏನನ್ನೋ ಹೇಳುವುದಕ್ಕೊರಟ ಆಸಕ್ತಿದಾಯಕ ನಿಪುಣತೆಯಿದೆ. ಓದಿಸಿಕೊಂಡು ಹೋಗುವ ಗುಣವಿದೆ. ಓದುಗ ತಾಳಿಕೊಂಡಾದರೂ ಓದಿಬಿಡುವ ಸೆಳೆತವಿದೆ. ಬರವಣಿಗೆಯನ್ನು ಪ್ರೀತಿಯಿಂದ ಒಲಿಸಿಕೊಂಡ ಲೇಖನಿಗಷ್ಟೇ ಈ ಸಲೀಸು ಸಾಧ್ಯ.

ಕಂಠಿಯವರಿಗೆ ಸಿದ್ಧಲಿಂಗಪ್ಪ ಎಂಬ ಅಣ್ಣನೊಬ್ಬನಿದ್ದ. ಈತ ಕಂಠಿಯವರಿಗೆ ಬಹು ಆತ್ಮೀಯ. ಈತ ಸಾಹಿತಿಯೂ, ಸಮಾಜ ಸೇವಕನಾಗಿಯೂ ಗುರುತಿಸಿಕೊಂಡಿದ್ದ. ಕವಿ ಸಾಹಿತಿಗಳ ಸಹವಾಸದಲ್ಲಿ ಇರುತ್ತಿದ್ದ. ಖ್ಯಾತ ಸಾಹಿತಿ ಶಿವರಾಮ ಕಾರಂತರರಿಗೆ ಆತ್ಮೀಯ ಗೆಳೆಯನಾಗಿದ್ದನೆಂದು ಹೇಳುವ ಮಾತುಗಳು ಜನನ ಬಾಲ್ಯ ಅಧ್ಯಾಯದಲ್ಲಿ ಬರುತ್ತದೆ. ಕಂಠಿಯವರ ಮೂಲಚೂಲ ವಿವರಗಳನ್ನು ಸಂಗ್ರಹಿಸಿಕೊಂಡು ಬರೆಯುವಾಗ ಸತ್ಯಕ್ಕೆ ಹತ್ತಿರವಿರುವಂತೆ ಬರೆಯುವುದು ಒಂದು ಸಾಹಸವೇ!

ಕಂಠಿಯವರು ಮುಖ್ಯಮಂತ್ರಿಯಾಗಿ ಆಯ್ಕೆಯಾದಾಗ ಮೈಸೂರು ಅರಮನೆಯಲ್ಲಿ ಅಂದಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಬೇಕಿರುತ್ತದೆ. ಆಗ ಮೊದಲು ಚಾಮುಂಡೇಶ್ವರಿ ಬೆಟ್ಟಕ್ಕೆ ಭೇಟಿಯಿತ್ತು ದೇವರ ದರ್ಶನದ ನಂತರವೇ ಅರಮನೆಯೆಡೆಗೆ ಪ್ರಯಾಣ ಬೆಳೆಸಿದ್ದರು.

ಬಾಲ್ಯದ ಧಾರ್ಮಿಕ ಹಾಗೂ ನೈತಿಕ ನೆಲೆಗಟ್ಟು ಎಷ್ಟೊಂದು ಭದ್ರವಾಗಿತ್ತೆಂದರೆ ಜೀವನಪರ್ಯಂತವೂ ಶ್ರೀ ಕಂಠಿಯವರು ಪ್ರಾಮಾಣಿಕತೆ ಹಾಗೂ ಸಚ್ಚಾರಿತ್ರ್ಯವನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚು ಕಾಪಾಡಿಕೊಂಡು ಬಂದಿದ್ದರೆಂದು ಬಳಿಗಾರ್ ಬರೆಯುತ್ತಾರೆ.

ಕಂಠಿಯವರ ಶ್ರೀಮತಿ ಮರಿಬಸಮ್ಮನವರ ಬಗ್ಗೆ ಬರೆಯುತ್ತ ಅವರ ಸಾಧ್ವಿತನವನ್ನು ಹೊಗಳುತ್ತಾರೆ. ಕಂಠಿಯವರ ಸಾಧನೆಯ ಹಿಂದೆ ಇವರ ಪ್ರಾಮಾಣಿಕ ಶ್ರಮ ಮತ್ತು ಶ್ರದ್ದೆಯ ಜೀವನ ಬೆನ್ನೆಲುಬಾಗಿತ್ತು. ಗೃಹಕೃತ್ಯಗಳ ಜೊತೆಗೆ ಗ್ರಂಥಗಳ ಪಠಣ, ಸಂತ ಶರಣರ ವಿಚಾರ ತಿಳಿದುಕೊಳ್ಳುವುದು ಇವರ ಆಸಕ್ತಿ. ಕೆಲವೊಂದು ಸ್ವರಚಿತ ವಚನಗಳನ್ನು ರಚಿಸಿ, ಪ್ರಕಟಿಸಿರುವುದೂ ಉಂಟು. ಹಿಂದಿನ ಕಾಲದ ರಾಜಕೀಯ ವೈಭವ, ಸಾಮಾಜಿಕ ಜೀವನ ಕುರಿತಂತೆ ಅಧಿಕಾರಯುತವಾಗಿ ಮಾತನಾಡುವ ಇವರು, 85ರ ವಯೋಮಾನದವರಾಗಿದ್ದರೂ ವಾಕ್ಚಾತುರ್ಯ ಹಾಗೂ ಜ್ಞಾನ ಭಂಡಾರವನ್ನು ಕಂಡು ದಿಗ್ಮೂಢನಾಗಿದ್ದೇನೆ ಎಂದು ಬಳಿಗಾರ್ ಹೇಳುವಾಗ ಎದುರಿಗಿನ ವ್ಯಕ್ತಿಯ ವ್ಯಕ್ತಿತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಸಂಯಮ ಲೇಖಕರಿಗಿರುವುದು ಗೊತ್ತಾಗುತ್ತದೆ.

ಬಾಲ್ಯ ಕಾಲದಿಂದ ಬಂದ ಧಾರ್ಮಿಕ ಹಾಗೂ ನೈತಿಕ ನೆಲೆಗಟ್ಟು, ಕಂಠಿಯವರ ಇಡೀ ಬದುಕನ್ನು ನಿಯಂತ್ರಿಸಿದೆ. ಕಚ್ಚೆ, ಕೈ, ಬಾಯಿಗಳನ್ನು ಕಿಂಚಿತ್ತೂ ಹೊಲಸು ಮಾಡಿಕೊಳ್ಳದ ಕಂಠಿಯವರು, ಪರಧನ,

ಪರಸ್ತ್ರೀಯರೆಡೆಗೆ ಕಣ್ಣು ಹೊರಳಿಸಿಯೂ ನೋಡದವರು. ಹೀಗಾಗಿಯೇ ಅವರು ಸಂತ ಆಥವಾ ಶರಣ ರಾಜಕಾರಣಿ ಎಂದು ಹೆಸರಾಗಿದ್ದರು. ವಚನ ಸಾಹಿತ್ಯದ ಮೂಲ ತತ್ವಗಳಾದ ಜಾತ್ಯತೀತತೆ, ಸಮಾನತೆ, ಸತ್ಯ ಶುದ್ಧ ಕಾಯಕ ಶದ್ಧೆಗಳನ್ನು ಚಾಚೂ ತಪ್ಪದೆ ಪಾಲಿಸಿದವರಾಗಿದ್ದರು. ಇಂದಿನ ರಾಜಕಾರಣಿಗಳು ಕಂಠಿಯವರ ರಾಜಕಾರಣವನ್ನು ನೋಡಿ ಕಲಿಯುವುದು ಬಹಳಷ್ಟಿದೆ. ಗುಡಿ ಚರ್ಚು ಮಸೀದಿಗಳಿಗೆ ಭೇಟಿಕೊಟ್ಟು ಎಲ್ಲ ಜಾತಿಯವರನ್ನೂ ಸಮಾನವಾಗಿ ಕಾಣುವ ಗುಣ ಕಂಠಿಯವರಲ್ಲಿತ್ತು ಎಂದು ಬಳಿಗಾರ್ ಬರೆಯುವಾಗ ಕಂಠಿಯವರ ಗುಣಾತಿಶಯ ಕಂಡು ಕಣ್ಣರಳಿಸುವಂತಾಗುತ್ತದೆ.

ಕಂಠಿಯವರ ಭಾಷಾ ಪ್ರೇಮವೂ ಅನುಕರಣೀಯ. ಅದು ಕೇವಲ ತೋರಿಕೆಯಲ್ಲ. ಅವರ ಅವಧಿಯಲ್ಲೇ ಕನ್ನಡ ಆಡಳಿತಭಾಷೆಯಾಗಿ ಘೋಷಿಸಲ್ಪಟ್ಟಿತ್ತು.

ಕನ್ನಡ ಬೆರಳಚ್ಚುಗಾರರಿಗೆ 10 ರಿಂದ 20 ಹೆಚ್ಚುವರಿ ಭತ್ಯೆ ನೀಡುವಂತೆ ಆದೇಶಿಸಿದ್ದರು. ಅಂದಿನ ಕಾಲದಲ್ಲಿ ಮಹಾರಾಷ್ಟ್ರವು ಗೋವಾವನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳುವ ಪ್ರಯತ್ನ ನಡೆದಾಗ ಕಂಠಿಯವರು ಕೇಂದ್ರದ ಗಮನಕ್ಕೆ ತಂದಿದ್ದರು ಎನ್ನುವ ಬಳಿಗಾರರ ಬರಹ, ಕನ್ನಡ ನಾಡಿನ ಇತಿಹಾಸದ ದೃಷ್ಟಿಯಿಂದ ಮುಖ್ಯವಾದದ್ದು.

“ಸಾತ್ವಿಕ ಕಂಠಿಯವರ ಮನದಲ್ಲಿ ತಪ್ಪಿ ಕೂಡ ವಾಮಮಾರ್ಗದ ವಿಚಾರ ಸುಳಿಯಲಿಲ್ಲ. ಅವರಿಗೆ ಅಧಿಕಾರ ಗ್ರಹಣಕ್ಕಿಂತ ತಮ್ಮ ವ್ಯಕ್ತಿತ್ವದ ಚಿಂತೆ. ಗಳಿಸುವುದಕ್ಕಿಂತ ತ್ಯಾಗದ ಚಿಂತೆ, ಪೀಠಕ್ಕಿಂತ ಜೀವನ ಮೌಲ್ಯಗಳ ಚಿಂತೆ, ಬಹಿರಂಗ ಸಾರ್ವಜನಿಕ ಟೀಕೆಗಳು ಬಂದರೂ ಲೆಕ್ಕಿಸದೇ ತಮ್ಮ ಮಾತಿಗೆ ನೀಡಿದ ವಚನಕ್ಕೆ ಕಟ್ಟುಬಿದ್ದರು. ವಿಶ್ವಾಸಘಾತಕ ಸ್ವಾರ್ಥ ರಾಜಕಾರಣಕ್ಕೆ ಮಣೆ ಹಾಕದಾದರು. ನುಡಿದಂತೆ ನಡೆದ ಅಪ್ಪಟ ಶರಣರಾದರು”.-ಬಳಿಗಾರರು ಕಂಠಿಯವರ ಬಗ್ಗೆ ಬರೆಯುವಾಗ ಕೆಲವೊಮ್ಮೆ ಭಾವನೆಗಳಿಗೆ ಕಟ್ಟುಬೀಳುತ್ತಾರೆ. ಸಾಧಕರ ಸಾಧನೆಯ ಬಗ್ಗೆ ಅಪಾರ ಗೌರವಯುತ ಮನೋಭೂಮಿಕೆಯಿಂದ ನೋಡುವಾಗ ಈ ರೀತಿಯ ಭಾವನಾತ್ಮಕತೆ ಸಹಜ.

ಮನು ಬಳಿಗಾರ್ ಬರೆದಿರುವ ಕಂಠಿಯವರ ಕುರಿತಾದ ಜೀವನ ಚರಿತ್ರೆ, ನಿಜಕ್ಕೂ ಚೈತನ್ಯಶೀಲ ಬರವಣಿಗೆ, ಮಾಜಿ ಮುಖ್ಯಮಂತ್ರಿಯೊಬ್ಬರ ಬಗ್ಗೆ ಬರೆಯುವಾಗ ಯಾವ ರೀತಿಯ ಮೈಂಡ್‌ಸೆಟ್ ಲೇಖಕನಿಗಿರಬೇಕೆನ್ನುವುದು ಬಳಿಗಾರರಿಗೆ ಗೊತ್ತು. ಅಂದಿನ ಚರಿತ್ರೆ, ಸಾಮಾಜಿಕ ಸ್ಥಿತಿಗತಿ, ಜನರ ಆಲೋಚನೆಗಳು ಜೀವನ ಚರಿತ್ರಕಾರನಿಗೆ ತುಂಬಾ ಮುಖ್ಯವಾಗುತ್ತದೆ. ಇವತ್ತಿನ ಲೇಖಕ ಅಂದಿನ ಸ್ಥಿತಿಗತಿಗೆ ತೆರೆದುಕೊಂಡು, ತಾನೂ ಕಲಿಯುವುದರ ಜೊತೆ ಜೊತೆಗೆ, ಕಲಿತದ್ದನ್ನು ನಿರುಮ್ಮಳವಾಗಿ ಹೇಳಿಬಿಡುವ ಚಾಕಚಕ್ಯತೆ ಹೊಂದಿದ್ದಾಗ ಮಾತ್ರ ಇಂಥ ಕೃತಿಗಳು ಹೊರಬರಲು ಸಾಧ್ಯ. ಬಳಿಗಾರರ ಬರವಣಿಗೆಯ ಶೈಲಿ ನಿಜಕ್ಕೂ ಹೃದ್ಯ, ಓದುತ್ತ ಓದುತ್ತ ಹೋದಂತೆ ಆ ಹೊತ್ತಿನ ಕಾಲಮಾನಕ್ಕೆ ಹೂತುಹೋಗಿ ವರ್ತಮಾನಕ್ಕೆ ಗುಡ್ ಬೈ ಹೇಳಿಬಿಡಬೇಕೆನಿಸುತ್ತೆ. ಒಟ್ಟಿನಲ್ಲಿ ಕನ್ನಡದ ಯುವ ಬರಹಗಾರರು, ಓದುಗರು ಬಳಿಗಾರರ ಈ ಬರವಣಿಗೆಯನ್ನು ಮರೆತು ಕೂರುವ ಹಾಗಿಲ್ಲ ಎಂದರೆ ಅತಿಶಯೋಕ್ತಿಯಲ್ಲ!

❖

# ಡಾ. ಮನು ಬಳಿಗಾರ್ ಅವರ ಅಬ್ದುಲ್ ನಜೀರ್ ಸಾಬ್ : ಗ್ರಾಮೀಣಾಭಿವೃದ್ಧಿಯ ಭೀಷ್ಮ ಪ್ರಜ್ಞೆ

ಚೆನ್ನರಾಜು ಎಂ. ಬಸಪ್ಪನದೊಡ್ಡಿ

ಮಹಾತ್ಮ ಗಾಂಧೀಜಿಯವರು ಕಂಡುಕೊಂಡಿದ್ದ ಹಲವು ಸತ್ಯಗಳಲ್ಲಿ 'ಗ್ರಾಮ ಭಾರತ'ದ ಕಲ್ಪನೆಯೂ ಒಂದು. ಭಾರತವು ಗ್ರಾಮಗಳ ಅಭಿವೃದ್ಧಿಯಾಗದ ಹೊರತು ಒಟ್ಟು ದೇಶದ ಅಭಿವೃದ್ಧಿಯನ್ನು ಕಾಣಲು ಸಾಧ್ಯವಾಗುವುದಿಲ್ಲ ಎಂಬುದನ್ನು ಹಲವು ಕಾರ್ಯಗಳ ಮೂಲಕ ಕಂಡುಕೊಂಡಿದ್ದರು. ಭಾರತದ ಮುಖ್ಯ ಬೆನ್ನೆಲುಬು ಕೃಷಿ ಕಾರ್ಯವಾದ್ದರಿಂದ ಇವುಗಳನ್ನು ಆಧರಿಸಿದ ಗುಡಿ ಕೈಗಾರಿಕೆಗಳಿಗೆ ಹೆಚ್ಚು ಮಹತ್ವ ನೀಡಬೇಕು, ಜನರು ಇರುವಲ್ಲಿಗೆ ಸರ್ಕಾರದ ಕಾರ್ಯಗಳು ಸಾಗಬೇಕು ಎಂಬುದಾಗಿ ಹೇಳುವ ಗಾಂಧೀಜಿಯವರು ಗ್ರಾಮ ಭಾರತದ ಕನಸನ್ನು ಕಂಡಿದ್ದರು. ಈ ರೀತಿಯ ಗ್ರಾಮಗಳೆಡೆಗೆ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು, ಅವಕಾಶಗಳನ್ನು ಕೊಂಡೊಯ್ದು ಕೀರ್ತಿ 1983-1988ರ ಅವಧಿಯ ಕಾಂಗ್ರೆಸ್ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದ ಅಬ್ದುಲ್ ನಜೀರ್‌ಸಾಬ್ ಅವರಿಗೆ ಸಲ್ಲಬೇಕು. ಇವರ ಜೀವನ ಸಾಧನೆ, ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡ ಬಗೆ, ಸರ್ಕಾರದಲ್ಲಿ ಸಚಿವರಾಗಿ ಮೂಡಿಬಂದ ಬಗೆ, ಗ್ರಾಮೀಣಾಭಿವೃದ್ಧಿಗಾಗಿ ರೂಪಿಸಿದ ಯೋಜನೆಗಳು, ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಜನರ ಪರವಾಗಿ ವಾದಿಸಿದ ಅಂಶಗಳನ್ನು ಸಮಗ್ರವಾಗಿ ಮನು ಬಳಿಗಾರ್ ಅವರು ಸಂಪಾದಿಸಿರುವುದಲ್ಲದೇ ಪ್ರತಿಭಾವಂತ ಸಂಸದೀಯ ಪಟು ಒಬ್ಬನ ಜೀವನ ಸಾಧನೆಯ ಬರಹಕ್ಕೆ ಸಾಹಿತ್ಯಕ ರೂಪ ನೀಡಿ ಪ್ರಸ್ತುತದ ಸಾಹಿತ್ಯಕ, ರಾಜಕೀಯ ಆಸಕ್ತರು ಅಭ್ಯಾಸ ಮಾಡುವುದಕ್ಕೆ ತಕ್ಕುದಾದ ಕೃತಿಯಾಗಿ ರೂಪಿಸಿದ್ದಾರೆ.

ಅಬ್ದುಲ್ ನಜೀರ್‌ಸಾಬ್ ಅವರು 1934ರ ಡಿಸೆಂಬರ್ 25ರಂದು ತಮಿಳುನಾಡಿನ ಸತ್ಯಮಂಗಲ ತಾಲ್ಲೂಕಿನ ತಾಳವಾಡಿ ಗ್ರಾಮದಲ್ಲಿ ಜನಿಸಿದರು. ಕೃಷಿಕರಾಗಿದ್ದ ಪೀರ್ ಸಾಬ್ ಹಾಗೂ ಆಯೇಷಾಬಿ ದಂಪತಿಗೆ ಮೊದಲ ಮಗನಾಗಿ ಹುಟ್ಟಿದರು. ಪೀರ್ ಸಾಬ್ ಅವರು ಅನಕ್ಷರಸ್ತರಾಗಿದ್ದರೂ ತಮ್ಮ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡಬೇಕು ಎನ್ನುವ ಮಹದಾಸೆಯನ್ನು ಹೊಂದಿದ್ದರು. ಅದರಂತೆ ತಮ್ಮ ಹುಟ್ಟೂರಿನಲ್ಲಿಯೇ ಇದ್ದಂತಹ ಕನ್ನಡ ಮಾಧ್ಯಮ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದಿದರು. ನಂತರದಲ್ಲಿ ಪ್ರೌಢಶಾಲೆ ಮತ್ತು ಇಂಟರ್ ಮೀಡಿಯಟ್‌ನಲ್ಲಿ ಪಾಸಾದರು. ಇವಿಷ್ಟು ವಿದ್ಯಾಭ್ಯಾಸವನ್ನು ಪಡೆದು ಜನಸೇವೆಯಲ್ಲಿ ತೊಡಗಿಕೊಂಡಂತೆ, ಸಮಾಜಮುಖಿ ಚಿಂತನೆಗಳನ್ನು ಬೆಳೆಸಿಕೊಂಡು ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾ ಚಿಂತನೆಗಳಿಂದ ರಾಜಕೀಯ ಪಕ್ಷವೊಂದರಲ್ಲಿ

ಗುರುತಿಸಿಕೊಳ್ಳುವ ಮೂಲಕ ಅಧಿಕಾರದಲ್ಲಿರುವ ಸರ್ಕಾರಗಳ ಗಮನವನ್ನು ಈ ಕೆಳಮಟ್ಟಕ್ಕೆ ತರಬೇಕೆಂಬುದು ಅವರಿಗೆ ಹೊಳೆಯಿತು. ಆದ್ದರಿಂದ ಕಾಂಗ್ರೇಸಿನಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಗುರುತಿಸಿಕೊಳ್ಳುವ ಮೂಲಕ ರಾಜಕೀಯ ಅನುಭವಕ್ಕೆ ಕಾಲಿಟ್ಟರು.

ರಾಜಕೀಯವಾಗಿ ಗುರುತಿಸಿಕೊಂಡ ಕೆಲದಿನಗಳಲ್ಲೇ ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್ ಸಂಘಟನೆಯ ಹೊಣೆಯನ್ನು ಹೊತ್ತರು. ಹತ್ತಾರು ಊರು ಕೇರಿಗಳಲ್ಲಿ ಸಂಚರಿಸಿ ಪಕ್ಷದ ಸಂಘಟನೆಯನ್ನು ಬಲಗೊಳಿಸಿದರು. ಅಂದಿನ ಕರ್ನಾಟಕ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕೆ.ಎಚ್.ಪಾಟೀಲ್ ಅವರು ಪಕ್ಷ ಸಂಘಟನೆಯ ಚಾತುರ್ಯವನ್ನು ಗುರುತಿಸಿ ಮೊದಲ ಬಾರಿಗೆ 1976ರಲ್ಲಿ ಟಿಕೆಟ್ ನೀಡಿದರು. ಇಲ್ಲಿಂದ ಸರ್ಕಾರ ಮಟ್ಟದಲ್ಲಿ ಅಬ್ದುಲ್ ನಜೀರ್‌ಸಾಬ್ ಅವರ ರಾಜಕೀಯ ಪ್ರವೇಶ ಅಧಿಕೃತವಾಯಿತು.

ಈ ಮೇಲಿನ ಗುರುತರವಾದ ವಿವರಣೆಯನ್ನು ಇಲ್ಲಿ ಚರ್ಚಿಸಲು ಮುಖ್ಯ ಕಾರಣವೆಂದರೆ ಅಬ್ದುಲ್ ನಜೀರ್‌ಸಾಬ್ ಅವರು ಹುಟ್ಟಿನಿಂದಾಗಲಿ, ಶ್ರೀಮಂತಿಕೆಯಿಂದಾಗಲಿ, ರಾಜಕೀಯ ಬೆಂಬಲದಿಂದಾಗಲಿ ಸರ್ಕಾರದ ಮಟ್ಟದ ರಾಜಕೀಯಕ್ಕೆ ಪ್ರವೇಶ ಪಡೆದವರಲ್ಲ. ಸಮಾಜದ ನಡುವೆಯೆ ಇದ್ದು ಸಮಾಜವನ್ನು ಸಂಘಟಿಸುವ ಕಾರ್ಯಗಳಿಂದಾಗಿ ಒಬ್ಬ ಸಾಮಾನ್ಯ ಕಾರ್ಯಕರ್ತ ಸಚಿವನಾಗಿ ಬೆಳೆಯಲು ಕಾರಣವಾಯಿತು ಎಂಬುದನ್ನು ಸ್ಪಷ್ಟಪಡಿಸಲು. ಎಂದರೆ ತಮ್ಮ ಬಾಲ್ಯದಿಂದ ಕೃಷಿ, ವ್ಯವಸಾಯ ಸಂಬಂಧಿತ ಸಮಸ್ಯೆಗಳನ್ನು ಗಾಢವಾಗಿ ಅರಿತಿದ್ದ ಅಬ್ದುಲ್ ನಜೀರ್‌ಸಾಬ್ ಅವರು ಮುಂದೆ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಸಮರ್ಥವಾದ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ರೂಪಿಸಲು ಸಹಾಯಕವಾಯಿತು ಎನ್ನಬಹುದು. ಹೀಗೆ ಸಾಮಾನ್ಯದಿಂದ ಅಸಮಾನ್ಯ ಸಂಗತಿಗಳು ರೂಪುಗೊಂಡ ಬಗೆ ಅಬ್ದುಲ್ ನಜೀರ್‌ಸಾಬ್ ಅವರ ಜೀವನ ಸಾಧನೆಯಲ್ಲಿ ಮೂಡಿಬಂದದ್ದನ್ನು ಮನು ಬಳಿಗಾರ್ ಅವರು ಚಿತ್ರಿಸುತ್ತಾರೆ.

ಭಾರತೀಯ ಸಮಾಜದಲ್ಲಿ ಮೊದಲಿನಿಂದಲೂ ಬೇರುಬಿಟ್ಟಿರುವ ಜಾತಿ ಸಮಸ್ಯೆ, ವರ್ಗ ಸಮಸ್ಯೆ, ಬಡತನ, ಅನಕ್ಷರತೆ, ನಿರುದ್ಯೋಗದಂತಹ ಸಮಸ್ಯೆಗಳನ್ನು ತೀವ್ರವಾಗಿ ಖಂಡಿಸಿದ್ದರು. ಅವರು ಮುಸ್ಲಿಂ ಕುಟುಂಬದಲ್ಲಿ ಜನಿಸಿದರೂ ಸಹ ತಾವು ಕನ್ನಡಿಗರು ಎಂದು ಹೇಳಿಕೊಳ್ಳುವ ಕೆಚ್ಚೆದೆಯ ವ್ಯಕ್ತಿಗಳಾಗಿದ್ದರು. ಹಾಗೆಯೆ ಧಾರ್ಮಿಕ ಕಟ್ಟುಪಾಡುಗಳು, ಜಾತಿ ಸಮಸ್ಯೆಯ ಬಗ್ಗೆ ಹೆಚ್ಚು ವ್ಯವಹರಿಸದೇ ವರ್ಗ ತಾರತಮ್ಯದ ಬಗ್ಗೆ ಹೆಚ್ಚು ವಾದಿಸಿದರು. ಇದಕ್ಕೆ ಅವರು ಕೊಡುವ ಕಾರಣವೂ ಬಹುಮುಖ್ಯವಾದ ಅಂಶವನ್ನು ಹೊರಗೆಡವುತ್ತದೆ. ಧರ್ಮದ ಮತೀಯವಾದದ ಬಗ್ಗೆಯಾಗಲಿ ಅಥವಾ ಜಾತಿಯ ಸಮಸ್ಯೆಗಳು, ಪರಿಣಾಮಗಳ ಬಗ್ಗೆಯಾಗಲಿ ಮಾತನಾಡುವುದು ಒಂದು ರೀತಿಯ ಅಪಚಾರವಾಗುತ್ತದೆ. ಎಂದರೆ ಕೇವಲ ಮಾತಿನಲ್ಲಿಯೇ, ವಾದ ಸಿದ್ಧಾಂತಗಳಲ್ಲಿಯೇ ಉಳಿದುಹೋಗುವ ಎಲ್ಲಾ ವಾದ ಸಿದ್ಧಾಂತಗಳು ಭಾರತದಂತಹ ದೇಶದಲ್ಲಿ ಯಾವುದೇ ಪರಿಣಾಮ ಬೀರದು. ಎಲ್ಲವೂ ಹೊಸ ಭಿನ್ನ ಮಾದರಿಗಳನ್ನು ರೂಪಿಸಿಕೊಳ್ಳುತ್ತಾ ಸಾಗುತ್ತದೆ. ಜನರು

ಅದರಿಂದ ಎಚ್ಚೆತ್ತುಕೊಳ್ಳುತ್ತಾರೆ ಎಂಬುದಕ್ಕಿಂತ ಅದರ ಬಗ್ಗೆಯೇ ಹೆಚ್ಚು ಆಸ್ಥೆ ವಹಿಸುತ್ತಾರೆ. ಆದ್ದರಿಂದ ಒಂದು ತುಳಿತಕ್ಕೊಳಗಾದ ಸಮುದಾಯ, ಜಾತಿ, ವರ್ಗದವರು, ಅಲ್ಪಸಂಖ್ಯಾತರು ಧರ್ಮಗಳು ವಿಧಿಸಿದ ಕಟ್ಟುಪಾಡುಗಳನ್ನು ಆರ್ಥಿಕ ಸುಸ್ಥಿಯ ಮೂಲಕ ದಾಟಬಹುದು. ಇಲ್ಲಿಯ ಜನರ ಪ್ರಜ್ಞೆ ಆರ್ಥಿಕವಾಗಿ ಉನ್ನತರಾಗಿರುವ, ಸಮರ್ಥರಾಗಿರುವ ವ್ಯಕ್ತಿಗಳ ಜಾತಿಯಾಗಲಿ, ಧರ್ಮದ ಬಗ್ಗೆಯಾಗಲಿ ಹೆಚ್ಚು ಪ್ರಶ್ನೆ ಮಾಡುವುದಿಲ್ಲ. ಇದೊಂದು ರೀತಿಯ ಬಿಡುಗಡೆಯ ಹಾದಿಯೂ ಆಗಿ ಕಾಣಬಹುದು ಎಂಬುದು ಅವರ ತಾತ್ವಿಕತೆಯಾಗಿತ್ತು.

ವರ್ಗ ತಾರತಮ್ಯದ ನೆಲೆಗಳು ಇಲ್ಲವಾದರೆ ಮಾತ್ರ ಮತ್ತೊಂದು ಬಗೆಯ ಸಮಾನತೆಯನ್ನು ಭಾರತದಲ್ಲಿ ಕಾಣಬಹುದು ಎಂಬುದಾಗಿ ವಾದಿಸಿದರು ಮತ್ತು ತಳ ಸಮುದಾಯಗಳೆಡೆಗೆ ಅಧಿಕಾರ, ಸರ್ಕಾರ, ಯೋಜನೆ, ಕಾರ್ಯಕ್ರಮಗಳನ್ನು ಕೊಂಡೊಯ್ಯುವ ಮೂಲಕ ಈ ಮಾದರಿಯ ಯಶಸ್ಸು ದೊರೆಯಬಹುದು ಎಂಬುದಾಗಿ ನಂಬಿದ್ದರು.

ತಾವು ನಂಬಿದ ತತ್ವ, ಆದರ್ಶ, ಸಿದ್ಧಾಂತಗಳಿಂದ 'ಗ್ರಾಮದ ಏಳಿಗೆ ದೇಶದ ಏಳಿಗೆ' ಎಂದು ಹೇಳಿದರು. ಅದರಂತೆ ಇವರ ಪ್ರಮುಖ ಯೋಜನೆಗಳ ಅನ್ವರ್ಥನಾಮವಾಗಿದ್ದ 'ನೀರು-ಸೂರು' ಯೋಜನೆಯು ಬಹುಮುಖ್ಯವಾದುದ್ದು. ಗ್ರಾಮೀಣ ಜನರಿಗೆ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ಮಹತ್ವದ ಯೋಜನೆಗೆ ಚಾಲನೆ ನೀಡಿ ಕರ್ನಾಟಕದಾದ್ಯಂತ ವಸತಿ ಮತ್ತು ನೀರಿನ ಸೌಲಭ್ಯಗಳು ದೊರೆಯುವಂತೆ ಕ್ರಮ ಕೈಗೊಂಡರು. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಮೂಲಭೂತ ಸೌಕರ್ಯಗಳ ಪಟ್ಟಿಯನ್ನು ಸಿದ್ಧಪಡಿಸಿದರಲ್ಲದೇ ಇದರ ಪರವಾಗಿ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ತಮ್ಮ ಯೋಜನೆಗಳ ನಿಲುವುಗಳನ್ನು ನಿರ್ಭೀತವಾಗಿ ಪ್ರಕಟಿಸಿದರು. ಕೇವಲ ಪ್ರಮುಖ ನಗರಗಳಿಗೆ ಪ್ರಾಯೋಗಿಕ ಯೋಜನೆಗಳು, ಸೌಲಭ್ಯಗಳನ್ನು ಕಲ್ಪಿಸುತ್ತಿದ್ದ ಬಗೆಯನ್ನು ಸರ್ಕಾರಕ್ಕೆ ತಿಳಿಸುವ ಮೂಲಕ ಇದರಂತೆ ಗ್ರಾಮಗಳಲ್ಲೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಎಚ್ಚರಿಸಿದರು.

ಪುಸ್ತಕ ಪ್ರೀತಿ ಹೊಂದಿದ್ದ ಅಬ್ದುಲ್ ನಜೀರ್‌ಸಾಬ್ ಅವರು ತಾವು ಪಡೆದ ಅನುಭವಗಳ ಜೊತೆಗೆ ಯೋಜನೆಗಳನ್ನು ರೂಪಿಸುತ್ತಿದ್ದರು. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು, ಕೃಷಿ ಭೂಮಿಗೆ ಅಣೆಕಟ್ಟುಗಳಲ್ಲಿನ ನೀರನ್ನು ನಾಲೆಗಳಲ್ಲಿ ಹರಿಸಲು ಕೈಗೊಂಡ ಕ್ರಮಗಳು, ಬಂಜರು ಭೂಮಿಯನ್ನು ಕೃಷಿ ಭೂಮಿನ್ನಾಗಿ ಪರಿವರ್ತಿಸಲು ಕೈಗೊಂಡ ಬೋರ್‌ವೆಲ್ ಯೋಜನೆಗಳಿಂದ ಅವರು 'ನೀರ್ ಸಾಬ್' ಎಂದು ಮನೆಮಾತಾಗಿ ಬೆಳೆಯುವಷ್ಟು ಎತ್ತರಕ್ಕೇರಿದರು. ಸಚಿವರಾಗಿದ್ದ ಬಸವರಾಜ್ ಹೊರಟ್ಟಿ ಅವರ ಮಾತುಗಳು ಇಲ್ಲಿ ಗಮನಿಸಿದರೆ ಅಬ್ದುಲ್ ನಜೀರ್‌ಸಾಬ್ ಅವರ ಮಹತ್ವ ತಿಳಿದು ಬರುತ್ತದೆ. "ಅಬ್ದುಲ್ ನಜೀರ್‌ಸಾಬ್ ಅವರ ಕನಸಿನ ಕೂಸಾದ ಪಂಚಾಯತ್‌ರಾಜ್ ವ್ಯವಸ್ಥೆ ದೇಶದಲ್ಲೇ ಮಾದರಿಯಾಗಿ ಕೇಂದ್ರಸರ್ಕಾರ ಅದನ್ನು ದೇಶದಾದ್ಯಂತ ಜಾರಿಗೆ ತರಲು ಸಹಾಯಕವಾಯಿತು. ಅವರು ಜಾರಿಗೆ ತಂದ ಜಿಲ್ಲಾ ಪರಿಷತ್ ಮತ್ತು

ಮಂಡಲ ಪಂಚಾಯಿತಿ ವ್ಯವಸ್ಥೆ ಈಗಿನ ಜಿಲ್ಲಾ ಪಂಚಾಯಿತ್ ಮತ್ತು ತಾಲ್ಲೂಕ್ ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗಿಂತ ಸದೃಢವಾಗಿತ್ತೆಂದು ಈಗಿನ ಅನುಭವದಿಂದ ಗೊತ್ತಾಗಿದೆ."

ಸರ್ಕಾರದ ಅಧಿಕಾರ ವಿಕೇಂದ್ರೀಕರಣ ಹಾಗೂ ಸ್ಥಳೀಯ ಸರ್ಕಾರ ಎಂಬ ಗ್ರಾಮ ಪಂಚಾಯಿತಿಯನ್ನು ನಿರ್ಮಿಸಿದ ಭಾರತ ಸಂವಿಧಾನವು ಅದಕ್ಕೆ ಬೇಕಾದ ಹಕ್ಕುಗಳನ್ನು ಸ್ಪಷ್ಟಪಡಿಸಿತ್ತು. ಇದರ ಸಮಗ್ರ ಅಭಿವೃದ್ಧಿಯ ವರದಿಯನ್ನು ಅಬ್ದುಲ್ ನಜೀರ್‌ಸಾಬ್ ಅವರು ಪೂರ್ಣವಾಗಿ ಪರಿಶೀಲಿಸಿ ಹಲವು ಬದಲಾವಣೆಗಳನ್ನು ತರಲು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಇದರಿಂದ ಮೂಡಿಬಂದ ಪರಿಕಲ್ಪನೆಯೇ 'ಗ್ರಾಮಸಭೆ'. ಈ ಗ್ರಾಮ ಸಭೆಯಲ್ಲಿ ಹಳ್ಳಿಯ 18 ವರ್ಷ ಮೇಲ್ಪಟ್ಟ ಪ್ರತಿಯೋರ್ವರು ಇದರ ಸದಸ್ಯನಾಗಿರುತ್ತಾರೆ. ಹಾಗೆಯೇ ಪಂಚಾಯಿತಿ ಕೈಗೊಳ್ಳುವ ಯಾವುದೇ ಕಾರ್ಯದ ಬಗ್ಗೆ, ಸೌಲಭ್ಯದ ಬಗ್ಗೆ, ಯೋಜನೆಯ ಬಗ್ಗೆ ಪ್ರಶ್ನಿಸುವ, ಸಲಹೆ ನೀಡುವ ಹಾಗೂ ಸಮಗ್ರ ಮಾಹಿತಿ ಪಡೆದುಕೊಳ್ಳುವುದು ಗ್ರಾಮ ಸಭೆಯ ಎಲ್ಲಾ ಸದಸ್ಯರಿಗೂ ನೀಡಲಾಯಿತು. ಇದರಿಂದ ಕೆಳಮಟ್ಟದಲ್ಲಿಯೇ ಅಧಿಕಾರದ ದುರುಪಯೋಗ ಮತ್ತು ಸ್ವಹಿತಾಶಕ್ತಿಯ ಮಾರ್ಗಗಳನ್ನು ಕಡಿಯಲು ಸಹಾಯಕವಾಯಿತು.

ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಅಬ್ದುಲ್ ನಜೀರ್‌ಸಾಬ್ ಅವರು ಮಾತನಾಡಿದ ಬಗೆಯೇ ಅವರು ಹೊಂದಿದ್ದ ಕಾಳಜಿಗಳನ್ನು ತಿಳಿಸುತ್ತವೆ. ತಮ್ಮ ಸರ್ಕಾರವೇ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಬೇರೆ ಕಾರಣಗಳಿಂದ ಮುಂದೂಡಲು ಪ್ರಯತ್ನಿಸಿದ್ದನ್ನು ಸಮರ್ಥವಾಗಿ ವಿರೋಧಿಸಿದರು. ತಮ್ಮ ಸರ್ಕಾರ ಜನಪರ ಕಾಳಜಿ ಹೊಂದ್ದಿದ್ದೇ ಆದರೆ ಜನರು ಯಾವ ಕ್ಷಣದಲ್ಲೂ ಬೇಕಾದರೂ ತಮ್ಮ ಮತಗಳನ್ನು ನಮಗೆ ನೀಡುತ್ತಾರೆ. ಇದನ್ನು ಬಿಟ್ಟು ರಾಜಕೀಯವಾಗಿ ಬೇರೆ ರೀತಿ ಕಾರ್ಯತಂತ್ರ ಹೆಣೆಯುವುದು ಜನರನ್ನು ಕೆಣಕದೇ ಬಿಡದು ಎಂಬುದು ಅಬ್ದುಲ್ ನಜೀರ್‌ಸಾಬ್ ಅವರಿಗೆ ತಿಳಿದಿತ್ತು. ಆದ್ದರಿಂದ ಮುಂದೂಡಬೇಕಾಗಿದ್ದ ಚುನಾವಣೆ ನಿಗದಿತ ದಿನಗಳಲ್ಲಿ ನಡೆಯುವಂತೆ ನೋಡಿಕೊಂಡರು. ಇದರ ಜೊತೆಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆಯಲ್ಲಿ ಅಡಕವಾಗಿದ್ದ ಕಂದಾಯ ಹೇರಿಕೆಯ ಕ್ರಮಗಳನ್ನು ಸಹ ತಿಳಿಸಿದರು. ಶ್ರೀಮಂತರ ದೊಡ್ಡಮನೆಗಳಿಗೂ ಬಡವರ ಚಿಕ್ಕ ಗುಡಿಸಲಿಗೂ ಒಂದೇ ರೀತಿ ಕಂದಾಯ ಪಾವತಿಯನ್ನು ವಿರೋಧಿಸಿದರು. ಭೂಮಿಯನ್ನು ಹೊಂದಿರುವ ಸಾಗುವಳಿದಾರರು ಮತ್ತು ಭೂ ಮಾಲಿಕರು, ಅರಣ್ಯ ಭೂ ಒತ್ತುವರಿ, ಗೋಮಾಳಗಳು, ಚೌಗು ಪ್ರದೇಶಗಳು, ನೀರಾವರಿ ಪ್ರದೇಶಗಳು ಹೀಗೆ ಸ್ಪಷ್ಟವಾದ ಮಾಹಿತಿಯನ್ನು ಕಲೆಹಾಕುವ ಮೂಲಕ ಭೂ ಸುಧಾರಣೆಯ ಬಗೆಗಳನ್ನು ತೋರಿದರು.

ಅಬ್ದುಲ್ ನಜೀರ್‌ಸಾಬ್ ಅವರು ವಿಧಾನಸಭೆಯಲ್ಲಿ ಮಾತನಾಡಿದ ಬಗೆ, ಬರಗಾಲದ ಕಾಲದಲ್ಲಿ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳು, ಕರ್ನಾಟಕ ರಾಜ್ಯದಲ್ಲಿ ಆಡಳಿತ ಭಾಷೆಯಾಗಿ ಕನ್ನಡವನ್ನು ನಿಗದಿಗೊಳಿಸುವಿಕೆಯ ವಿಚಾರಗಳು, ಭ್ರಷ್ಟಾಚಾರವನ್ನು ವಿರೋಧಿಸಿ ಲೋಕಾಯುಕ್ತ ಬಿಲ್ ಮಂಡನೆಯ ವಿಚಾರ ಹಾಗೂ ವಿಧಾನಪರಿಷತ್ತಿನಲ್ಲಿ ಮಂಡಿಸಿದ ಕುಟುಂಬ ಯೋಜನೆಯ ಸೌಲಭ್ಯಗಳು, ಬಡವರಿಗೆ ಮತ್ತು

ಕಾರ್ಮಿಕ ವರ್ಗದವರಿಗೆ ನಿವೇಶನ ಹಂಚಿಕೆಯ ವಿಚಾರಗಳು, ಬರಪರಿಹಾರಕ್ಕೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳು ಹಾಗೂ ಕಾಲೇಜುಗಳಿಗೆ ನೀಡಬೇಕಾದ ಧನಸಹಾಯದ ಮಂಜೂರಾತಿಯ ವಿಷಯಗಳು ಅಬ್ದುಲ್ ನಜೀರ್‌ಸಾಬ್ ಅವರು ಸಮಾಜವಾದಿಯಾಗಿ, ಸಮಾಜಮುಖಿ ಕಾರ್ಯಗಳನ್ನು ಮಾಡಿದ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಧ್ಯಾನಿಸುತ್ತಿದ್ದ ಬಹುಮುಖಿ ರಾಜಕಾರಣಿಯಾಗಿದ್ದರು ಎಂಬುದನ್ನು ತೋರಿಸುತ್ತದೆ. ಈ ಬಗೆಯ ಅಬ್ದುಲ್ ನಜೀರ್‌ಸಾಬ್ ಅವರ ಜೀವನ ಸಾಧನೆಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಸಾಹಿತ್ಯಕ ಸಂವೇದನೆಗಳಿಂದ ತುಂಬಿ ಸಹೃದಯರು, ಆಸಕ್ತರು ಸವಿವರವಾಗಿ ಓದುವಂತೆ ಕೃತಿಗೆ ಒಂದು ಸಂಪೂರ್ಣತೆಯ ಚೌಕಟ್ಟನ್ನು ಹಾಕಿರುವ ಮನು ಬಳಿಗಾರ್ ಅವರ ಶ್ರಮವೂ ಇಲ್ಲಿ ಸಾರ್ಥಕವಾಗಿದೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥ**


- ಬಸವರಾಜ ಹೊರಟ್ಟಿ, (ಅಭಿಪ್ರಾಯ ಪುಟಗಳಿಂದ). ಅಬ್ದುಲ್ ನಜೀರ್‌ಸಾಬ್ - ಮನು ಬಳಿಗಾರ್, ಕರ್ನಾಟಕ ವಿಧಾನಮಂಡಲ ಗ್ರಂಥಾಲಯ ಸಮಿತಿ, ವಿಧಾನಸೌಧ, ಬೆಂಗಳೂರು.
- ಅಬ್ದುಲ್ ನಜೀರ್‌ಸಾಬ್ - ಮನು ಬಳಿಗಾರ್, ಕರ್ನಾಟಕ ವಿಧಾನ ಮಂಡಲ ಗ್ರಂಥಾಲಯ ಸಮಿತಿ, ವಿಧಾನ ಸೌಧ, ಬೆಂಗಳೂರು.


## ಭಾಗ-8

# ವಿದ್ವಾಂಸರ ಅಭಿಪ್ರಾಯಗಳು

ಡಾ. ದೇಜಗೌ

ನ್ಯಾಯನಿಷ್ಠ ದಕ್ಷ ಐ.ಎ.ಎಸ್. ಅಧಿಕಾರಿ ಶ್ರೀ ವಿ.ಪಿ.ಬಳಿಗಾರ್ ಕವಿತಾ ಸಾಮರ್ಥ್ಯವುಳ್ಳ ಪ್ರತಿಭಾವಂತರು. ಅವರಣ್ಣ, ಕೆ.ಎ.ಎಸ್. ಅಧಿಕಾರಿ ಶ್ರೀ ಮನು ಬಳಿಗಾರ್ ಕವಿ, ಕತೆಗಾರ, ಜೀವನಚರಿತ್ರಕಾರ, ಭಾಷಾಂತರಕಾರ, ಸಂಪಾದಕರೆಂದು ಹಲವು ಪ್ರಶಸ್ತಿಗಳನ್ನು ಪಡೆದವರೆಂದು ಡಾ.ಟಿ.ಸಿ.ಪೂರ್ಣಿಮಾ ಅವರನ್ನು ಪರಿಚಯಿಸಿಕೊಟ್ಟಾಗ ನನಗೆ ಸಂತೋಷವಾಯಿತು. ಅವರ ತಮ್ಮ ಶ್ರೀ ಶಿವಲಿಂಗು ಬಳಿಗಾರ್ ಸಹ ಕಥೆಗಾರರೆಂಬುದನ್ನು ತಿಳಿದಾಗ, ಈ ಮೂವರು ಅಣ್ಣತಮ್ಮಂದಿರು ನಾಡು ನುಡಿಗಳ ಅಭ್ಯುದಯಕ್ಕಾಗಿ ಸಲ್ಲಿಸುತ್ತಿರುವ ಅಮೂಲ್ಯ ಸೇವೆಯಿಂದ ಕರ್ನಾಟಕ ಮಾತೆಯ ಆಶೀರ್ವಾದಕ್ಕೆ ಪಾತ್ರರಾದವರೆಂಬ ಕಾರಣಕ್ಕಾಗಿ ನನಗವರಲ್ಲಿ ಅಭಿಮಾನ ಮೂಡಿತು. ಅದರಿಂದಾಗಿ ಮನು ಬಳಿಗಾರರ ಈ ಗ್ರಂಥಕ್ಕೆ ನನಗೆ ತಿಳಿದ ಎರಡು ಮಾತು ಬರೆಯಲೊಪ್ಪಿಕೊಂಡೆ.

ಇಲ್ಲಿಯ ಲೇಖನಗಳ ಪೈಕಿ ಆರು ವ್ಯಕ್ತಿಚಿತ್ರಗಳು, ಸಾಹಿತ್ಯ ವಿಮರ್ಶೆ, ಒಂದು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ್ದು, ಉಳಿದುವು ವಿವಿಧ ವಸ್ತುಗಳನ್ನೊಳಗೊಂಡ ಲಘು ಗಂಭೀರ ಪ್ರಬಂಧಗಳು.

ಸಂಸ್ಕೃತಿ ಕೃಷಿ ಮೂಲವಾದದ್ದು, ಅದೊಂದು ಸುಗುಣ ಸಾಮರಸ್ಯವೆಂಬ ಗ್ರಂಥಕರ್ತರ ವ್ಯಾಖ್ಯೆ ಗ್ರಾಹ್ಯವಾದುದು. ಸಂಸ್ಕೃತಿ ರೂಪುಗೊಳ್ಳುವಲ್ಲಿ ಭೌಗೋಳಿಕ ಅಂಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆನ್ನುವುದು ಸರಿಯೇ ಅರಿ. ಲಲಿತ ಕಲೆಗಳು, ವ್ಯಕ್ತಿ ಸ್ವಾತಂತ್ರ್ಯ, ಅಧ್ಯಾತ್ಮಿಕತೆ ಸತ್ಯಾನ್ವೇಷಣೆ, ಮೋಕ್ಷಸಾಧನೆ, ಪರಮತ ಸಹಿಷ್ಣುತೆ, ಸಮಾನತೆ, ಸಮನ್ವಯಗಳು 'ಭಾರತೀಯ ಸಂಸ್ಕೃತಿ'ಯ ವಿಶಿಷ್ಟ ಲಕ್ಷಣಗಳೆಂದವರು ಸಮರ್ಥಿಸಿಕೊಳ್ಳುತ್ತಾರೆ. ಭಾರತವು ಎಲ್ಲ ಜನಾಂಗಗಳ, ತತ್ವಜ್ಞಾನಗಳ, ಯುರೋಪಿನ ಭಾಷೆಗಳ, ಗಣಿತಶಾಸ್ತ್ರದ ತಾಯಿಯೆಂದು ಹೇಳುವ ಅಮೆರಿಕೆಯ ಚಿಂತಕ ವಿಲ್ ಡುರಾಂಟ್‌ನ ಮಾತುಗಳನ್ನು ಅಭಿಮಾನದಿಂದ ಉಲ್ಲೇಖಿಸುತ್ತಾರೆ. ಅಸಮಾನತೆ, ಜಾತೀಯತೆ, ಅಸ್ಪೃಶ್ಯತೆಗಳು ಭಾರತೀಯ ಸಂಸ್ಕೃತಿಗಂಟಿಕೊಂಡಿರುವ ಕಳಂಕವೆಂಬುದನ್ನು ಅವುಗಳ ವಿನಾಶಕ್ಕಾಗಿ ಬಸವೇಶ್ವರರು ಮಾಡಿದ ಪ್ರಯತ್ನವನ್ನು ವಿವರಿಸಬಹುದಿತ್ತೇನೋ!

ಬಳಿಗಾರ್‌ರು ಕುಂಚಿಸಿರುವ ಕಿತ್ತೂರು ಚೆನ್ನಮ್ಮ, ವಿಶ್ವೇಶ್ವರಯ್ಯ, ಕನಕದಾಸ, ಚಂಬಾ ಮುತ್ನಾಳ, ಮಹಾದೇವ ಮೈಲಾರ ಮತ್ತು ಶ್ರೀಲ ಪ್ರಭುಪಾದರ ವ್ಯಕ್ತಿ ಚಿತ್ರಗಳು ಭಾರತೀಯ ಸಂಸ್ಕೃತಿಯ ಪ್ರತಿರೂಪಗಳೆಂದೇ ಹೇಳಬಹುದು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿಯೆಂದು ಕಿತ್ತೂರು ಚೆನ್ನಮ್ಮನನ್ನು ಕರೆದು, ಅವರ ಸಾಹಸ ಪ್ರತಾಪಗಳ ಹಾಗೂ ದುರಂತದ ವರ್ಣನೆಯನ್ನು ಕೇಳುವಾಗ ಕನ್ನಡಿಗರು ಅತ್ತು ನಿವೇದನೆ ಸಲ್ಲಿಸುತ್ತಾರಲ್ಲದೆ, ಅಭಿಮಾನದಿಂದ ಹಿಗ್ಗುತ್ತಾರೆ. 'ಭಾರತ ರತ್ನ ವಿಶ್ವೇಶ್ವರಯ್ಯನವರು ತಮ್ಮ ಕನಸುಗಾರಿಕೆಯಿಂದ, ಮೇಧಾವಿತನದಿಂದ, ಕಾರ್ಯಕುಶಲತೆಯಿಂದ, ಸೃಜನಶೀಲ ಪ್ರತಿಭೆಯಿಂದ, ಭವಿಷ್ಯ ಪ್ರಜ್ಞೆಯಿಂದ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಭೂಷಣಪ್ರಾಯರಾದವರೆಂದು ಮನು ಅವರು ಚಿತ್ರಿಸಿದ್ದಾರೆ. ಕುಸ್ತಿಕಲೆಯಲ್ಲಿ ಸಾಧಿಸಿದ 'ಹಿಂದ್ ಕೇಸರಿ' ಸಿದ್ಧಿಯಿಂದಾಗಿ ಚಂಬಾ ಮುತ್ನಾಳರು ಕರ್ನಾಟಕಕ್ಕೆ ಗೌರವ ತಂದುಕೊಟ್ಟರೆಂಬುದು ಹೆಮ್ಮೆಯ ಸಂಗತಿ. ದೇಶೀಯ ಪದ್ಧತಿಯ ಆಟಗಳಾದ ಕುಸ್ತಿ, ಖೋಖೋ, ಕಬಡ್ಡಿ, ಅಟ್ಯಾಪಟ್ಯಾ ಮುಂತಾದವು ವಿದೇಶೀಯ ಕ್ರಿಕೆಟ್ ಟೆನ್ನಿಸ್ ಆಟಗಳ ದಾಳಿಯಿಂದಾಗಿ ದುಸ್ಥಿತಿಗೊಳಗಾಗುತ್ತಿರುವ ಸಂಕಟವನ್ನು ಅಭಿವ್ಯಕ್ತಗೊಳಿಸುವ ಮನು ಅವರ ದೇಶಭಿಮಾನವನ್ನು ಈ ದೇಶದ ಕ್ರೀಡಾಪ್ರೇಮಿಗಳು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಲಾವಣಿಗಳಿಗೂ ಸುಗ್ರಾಸವಾದ ಮೈಲಾರ ಮಹಾದೇವನ ಬಲಿದಾನದ ವೀರಗಾಥೆ ಅಂಜುಕುಳಿಗಳ ಹೃದಯಕ್ಕೆ ಶೌರ್ಯದಾನ ಮಾಡುವ ರೀತಿಯಲ್ಲಿ ಭಾವಾತ್ಮಕವಾಗಿ ರಚನೆಗೊಂಡಿದೆ.

'ಕನಕದಾಸ' ಮತ್ತು 'ಪ್ರಭುಪಾದರ' ಅಭೂತಪೂರ್ವ ಜೀವನ ವಿಕಾಸ, ಸಾಧನೆ ಸಿದ್ಧಿಗಳನ್ನು ಬಳಿಗಾರರು ಅನನ್ಯ ಆತ್ಮೀಯತೆಯಿಂದ ಸುಂದರವಾಗಿ ಕುಂಚಿಸಿದ್ದಾರೆ. ತಿಮ್ಮಪ್ಪ ತಿಮ್ಮಪ್ಪನಾಯಕನಾಗಿ, ತದನಂತರ

ಕನಕಪ್ಪ, ಕನಕದಾಸರಾಗಿ ಪರಿಣಾಮ ಹೊಂದಿದ ಲೌಕಿಕಾಲೌಕಿಕದ ಭವ್ಯಕಥನವನ್ನು ಪುಳಕ ಹುಟ್ಟಿಸುವಂತೆ ವರ್ಣಿಸಿದ್ದಾರೆ. ಅಪರೂಪದ ಕ್ರಾಂತಿಕಾರಿ ವಿಚಾರಪರ ಕವಿಪುಂಗವರವರು, ಜಾತಿ ಕುಲ ವಿನಾಶಕ್ಕಾಗಿ ಹೋರಾಡಿದ, ವೈಷ್ಣವ ಮಾಧ್ವ ಶೈವ ವೀರಶೈವ ಮತಗಳ ನಡುವಣ ಸಮನ್ವಯಕಾರರು, ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದೆಂದು ಘೋಷಿಸಿ, ಮೂರ್ತಿಪೂಜೆಯನ್ನು ಖಂಡಿಸಿ, ಏಕದೇವತೋಪಾಸನೆಯನ್ನು ಎತ್ತಿ ಹಿಡಿದ ಮಹಾಪುರುಷರವರು, ಈ ಲೋಕದಲ್ಲಿ ಜ್ಞಾನವೇ ಸರ್ವಶ್ರೇಷ್ಠವೆಂದು, ಅದಕ್ಕೆ ಸಮನಾದದ್ದು ಬೇರೊಂದಿಲ್ಲವೆಂದು ಡಂಗುರಿಸಿ, ಸಂಪ್ರದಾಯದ ನಡುವೆಯೂ ಸ್ವತಂತ್ರ ಮನೋಭಾವನೆಯನ್ನೂ ವ್ಯಕ್ತಿ ವೈಶಿಷ್ಟ್ಯವನ್ನೂ ಮೆರೆದ ಮಹಾಮಹಿಮರು - ಇದು ಗ್ರಂಥಕರ್ತರು ಕನಕದಾಸರಿಗೆ ಸಲ್ಲಿಸಿರುವ ಗೌರವ.

ಅಂತರಾಷ್ಟ್ರೀಯ ಮಟ್ಟದಲ್ಲಿ ಕೃಷ್ಣಪ್ರಜ್ಞೆಯ ಪ್ರಸಾರಕ್ಕೆ ಅಡಿಪಾಯ ಹಾಕಿದ ಶ್ರೀಲ ಪ್ರಭುಪಾದರ ಅದ್ಭುತ ಜೀವನ ಸಾಧನೆ ಸಿದ್ಧಿಗಳನ್ನು ಬಳಿಗಾರರು ಓದುಗರ ಮನಮುಟ್ಟುವಂತೆ ದೀರ್ಘವಾಗಿಯೇ ಚಿತ್ರಿಸಿದ್ದಾರೆ. ೧೮೯೬ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ ಅಭಯಚರಣರು ಸದ್ಗುರುಗಳ ಸಂಪರ್ಕದಿಂದ ವೇದ ವೇದಾಂತ ಭಾಗವತ ಭಗವದ್ಗೀತೆಗಳನ್ನು ಜೀರ್ಣಿಸಿಕೊಂಡು, ಇಂಗ್ಲೀಷ್ ಭಾಷೆಯಲ್ಲಿಯೂ ವ್ಯಾಖ್ಯಾನಗಳನ್ನು ರಚಿಸಿ, ಮಹಾದಾರ್ಶನಿಕರಾಗಿ, ಕೃಷ್ಣಪ್ರಜ್ಞೆಯಲ್ಲಿ ಮುಳುಗಿ, ಅದರ ಪ್ರಸಾರಕ್ಕಾಗಿ, ಸಂಸಾರವನ್ನು ತೊರೆದು, ಸನ್ಯಾಸ ಸ್ವೀಕರಿಸಿ, ಶ್ರೀ ಭಕ್ತಿವೇದಾಂತಸ್ವಾಮಿ ಪ್ರಭುಪಾದರಾದ, ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಕೃಷ್ಣನ ಆಜ್ಞೆಯಿಂದ ಅಮೇರಿಕಾಕ್ಕೆ ಹೋಗಿ, ಕಠಿಣ ಸಮಸ್ಯೆಗಳ ಮಧ್ಯೆಯೂ ವಿಶ್ವವಿಖ್ಯಾತರಾಗಿ, ಗುರಿ ಮುಟ್ಟಿದ ಸಂತೃಪ್ತಿಯಿಂದ ೧೯೭೭ರಲ್ಲಿ ವಿಶ್ವಚೇತನದಲ್ಲಿ ವಿಲೀನಗೊಂಡ ಜಗದ್ವಂದ್ಯರ ಸಾಹಸವಿಜಯಗಾಥೆಯಿದು. ಶ್ರೀರಾಮಾನುಜ ಮಧ್ವರ ತತ್ವಗಳಿಗೆ ಮಾರುಹೋದ, ಚೈತನ್ಯ ಮಹಾಪ್ರಭುಗಳ ಆರಾಧಕರಾದ ಅವರು ಸ್ಥಾಪಿಸಿದ ಅಂತರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ (ಇಸ್ಕಾನ್) ವಿಶ್ವದಲ್ಲೆಲ್ಲ ವ್ಯಾಪಿಸಿದೆ. ಮಾಯೆಯ ಸೇನೆಯ ಅಜ್ಞಾನವನ್ನು ಸೋಲಿಸಲು ನಮ್ಮ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಅತ್ಯಂತ ಪ್ರಮುಖ ಪ್ರಚಾರ ಆಯುಧಗಳು. ಅಂತಹ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಉತ್ಪಾದಿಸಿ, ಪ್ರಪಂಚದಾದ್ಯಂತ ಹೇರಳವಾಗಿ ವಿತರಣೆ ಮಾಡಿದಷ್ಟು ಪ್ರಪಂಚವನ್ನು ನಾವು ಆತ್ಮಹತ್ಯಪಥದಿಂದ ಪಾರು ಮಾಡಿದಂತಾಗುತ್ತದೆ ಎಂಬ ಪ್ರಭುಪಾದರ ಸಂದೇಶ ಪುಸ್ತಕ ಶತ್ರುಗಳಿಗೆ ಅರ್ಥವಾಗುತ್ತದೆಯೆ? ಅನೇಕ ಸಮಸ್ಯೆಗಳ ನಡುವೆಯೂ ಕೃಷ್ಣ ಆಂದೋಲನ ಜಗತ್ತಿನಲ್ಲಿ ಹರಡುತ್ತದೆ ಎಂಬ ಅವರ ಭವಿಷ್ಯ ನಿಜವಾಗಿದೆ. ಶಿಷ್ಯರಿಗೂ ಗುರುಗಳಿಗೂ ವಿಯೋಗವೆಂಬುದೇ ಇಲ್ಲ. ಏಕೆಂದರೆ ಶಿಷ್ಯರು ತಮ್ಮ ಗುರುಗಳ ಉದ್ದೇಶಗಳನ್ನು ಅನುಸರಿಸುತ್ತಿರುವವರೆಗೂ, ಗುರುಗಳು ಶಿಷ್ಯರ ಸಮೀಪದಲ್ಲೇ ಇರುತ್ತಾರೆ. ಇದನ್ನು ವಾಣಿ ಸಾನ್ನಿಧ್ಯವೆನ್ನುತ್ತಾರೆ. ದೇಹದ ಅಸ್ತಿತ್ವವಿದ್ದಾಗ ಅದು ವಪು ಸಾನ್ನಿಧ್ಯವೆಂದು ಸಾಯುವ ಮುನ್ನ ಆ ಹಿರಿಯ ಚೇತನ ನುಡಿದ ಮಾತು ಸಾರ್ವಕಾಲಿಕ ಸತ್ಯ.

ಕಾದಂಬರೀ ಸಾಮ್ರಾಟ ಶ್ರೀ ಶಿವರಾಮಕಾರಂತರ 'ಜಗದೋದ್ಧಾರನಾ' ಕೃತಿಯ ವಿಶ್ಲೇಷಣೆಯಲ್ಲಿ ನಿರ್ಮೋಹಕ ವಸ್ತುದೃಷ್ಟಿಯಿದೆ, ಪ್ರಭುದ್ಧತೆಯಿದೆ, ಸಮತೋಲನವಿದೆ. ಅನ್ಯಾಯ ಅನಿಷ್ಟಗಳನ್ನು ಕಾರಂತರು ನಿರ್ದಾಕ್ಷಿಣ್ಯವಾಗಿ ಎದುರಿಸುತ್ತಾರೆಂದು, ವ್ಯಂಗ್ಯ ತಂತ್ರದ ಮೂಲಕ ವಿಡಂಬಸುತ್ತಾರೆಂದು, ಮಾನವತೆ ಮತ್ತು ವೈಚಾರಿಕತೆ ಅವರ ಬದುಕಿನ ಮಹಾಮಂತ್ರಗಳೆಂದು ಬಳಿಗಾರ್ ಸರಿಯಾಗಿಯೇ ಅವರ ನಿಲುವೊಲವುಗಳನ್ನು ಎತ್ತರ ಬಿತ್ತರಗಳನ್ನು ಅಳೆಯುತ್ತಾರೆ. ಶೋಷಣೆ ಯಾವ ರೂಪದಲ್ಲಿದ್ದರೂ ಕಾರಂತರಿಗಾಗದೆಂಬುದನ್ನು ಸೋದಾಹರಣವಾಗಿ ತೋರಿಸುತ್ತಾರೆ. ಉಪನಿಷತ್ತು ಭಗವದ್ಗೀತೆಗಳಲ್ಲಿಲ್ಲದ ವಿಚಾರಗಳನ್ನು ಸೃಷ್ಟಿಸಿ, ಜನಮನದಲ್ಲಿ ಬಿತ್ತುವ ಸಾಧು ಸನ್ಯಾಸಿಗಳ ಮೋಸಗಾರಿಕೆಯನ್ನು ಬಯಲಿಸಿ, ಸಮಾಜವನ್ನು ಸತ್ಯದ ಮಾರ್ಗದಲ್ಲಿ ಕೊಂಡೊಯ್ಯುವುದೆ ಕಾದಂಬರಿಯ ಉದ್ದೇಶವೆಂದು ವಿಮರ್ಶಕರು ಸ್ಪಷ್ಟಪಡಿಸುತ್ತಾರೆ. ತಮ್ಮ ಕಾದಂಬರಿಗಳಿಗೆ ಬೇಕಾದ ವಸ್ತು ವಿಷಯ ನಾಯಕ ಪಾತ್ರಗಳ ಅನ್ವೇಷಣೆ ಕಾರಂತರ ನಿರಂತರ ವ್ಯವಸಾಯವಾಗಿದೆಯೆಂಬುದು ಮನು ಅವರ ಅಭಿಪ್ರಾಯ. ಓದುಗರೊಡನೆ ಲೇಖಕರೇ ನೇರ ಸಂಭಾಷಣೆ ನಡೆಸಿದಂತೆ ತೋರುವುದರಿಂದ, ಕಾದಂಬರಿಯ ಓಟದಲ್ಲಿ ಲೇಖಕರೆ ಭಾಗಿಯಾಗುವುದರಿಂದ, ಅಲ್ಲಿ ಜರಗುವ ಸಣ್ಣಪುಟ್ಟ ಘಟನೆಗಳ ಬಗ್ಗೆ ಅನುಮಾನಗಳು ಓದುಗನ ಮನಸ್ಸಿನಲ್ಲಿ ಏಳಬಹುದೆಂಬ ತಮ್ಮ ಅನಿಸಿಕೆಯನ್ನು ದಾಖಲಿಸಲು ವಿಮರ್ಶಕರು ಮರೆತಿಲ್ಲ.

ಉಳಿದ ಲೇಖನಗಳಲ್ಲಿ ಒಂದೆರಡು ಹೊರತಾಗಿ ಮಿಕ್ಕವು ಕಿರು ಪ್ರಬಂಧಗಳ ರೂಪದಲ್ಲಿವೆ. ಕಾಲಹರಣವೇ ಪತನಕ್ಕೆ ದಾರಿಯೆಂದು ಸಮಯಾವಕಾಶದಲ್ಲಿ ನಿರವಿಸುತ್ತ, ಟಿ.ವಿ.ಯನ್ನು ಸೋಮಾರಿ ಪೆಟ್ಟಿಗೆಯೆಂದು ಕರೆದಿದ್ದಾರೆ. 'ಏಕಾಂತ ಮತ್ತು ಏಕಾಗ್ರತೆ'ಯಲ್ಲಿ ಬರುವ ಲೇಖಕನ ಜೀವನ ಏಕಾಂಗಿಯಾದದ್ದು, ಆತ ಏಕಾಂಗಿತನ ಬಿಟ್ಟಿದ್ದಾದರೆ ಆತನ ಕೃತಿಗಳು ಸೊರಗಿಹೋಗುತ್ತವೆ. ಏಕಾಗ್ರತೆಯು ಆಧ್ಯಾತ್ಮಿಕ ಸ್ಥಿತಿ. ಇಚ್ಛಾಶಕ್ತಿಯ ಮೂಲನೆಲೆ ಏಕಾಗ್ರತೆ ಎಂಬ ಸೂತ್ರಪ್ರಾಯದ ಸೂಕ್ತಿಗಳು ಮನು ಅವರ ಅಡಕ ಶೈಲಿಗೆ ನಿದರ್ಶನವಾಗಿವೆ. ಸಾರ್ವತ್ರಿಕ ವಸ್ತು ಸೌಲಭ್ಯಗಳ ಬಗೆಗಿರಬೇಕಾದ ಎಲ್ಲ ಜನರ ಜವಾಬ್ದಾರಿಯನ್ನು 'ಸಾಮಾಜಿಕ ಹೊಣೆ'ಯಲ್ಲಿ ವಿವರಿಸಿದ್ದಾರೆ. ಸರ್ವರೂ ನೆನಪಿಡಬೇಕಾದ ಸಂಗತಿಗಳು ಇಲ್ಲಿವೆ. ಅನುಕರಣೆ ಎರವಲು ಮೂಲಕ 'ಕೃತಕತೆ' ತಾಂಡವವಾಡುತ್ತಿರುವ ಈ ಯುಗದಲ್ಲಿ ಸಹಜತೆ ಸರಳತೆಗಳ ಛಾಪು ಸಾಧ್ಯವೇ ಎಂದು ಪ್ರಬಂಧಕಾರರು ಹಳವಳಿಸುತ್ತಾರೆ. ನಮ್ಮ ನಾಡಿನಲ್ಲಿ ೧೩೦ಳರಲ್ಲಿ ದೊರೆತ ಕೊಹಿನೂರ್ ವಜ್ರದ ಇತಿಹಾಸವನ್ನು ಅಭಿಮಾನದಿಂದ 'ಭಾರಿ ಬೆಳಕಿನ ಬೆಟ್ಟ - ಕೊಹಿನೂರ್ ವಜ್ರ' ಎಂಬ ಪ್ರಬಂಧದಲ್ಲಿ ವಿವರಿಸುತ್ತಾರೆ.

'ಕಬಿನಿ ನದಿ ಅರಣ್ಯಧಾಮ' ಪ್ರವಾಸಿಗಳಿಗೆ ಪ್ರಿಯವಾದ ಪರಿಚಯ ಲೇಖನ, ಆಹಾರ ಪದಾರ್ಥಗಳನ್ನು ಪೋಲುಮಾಡಬಾರದೆಂಬ ಎಚ್ಚರಿಕೆ ನೀಡುವ 'ಅನ್ನಬ್ರಹ್ಮ', ಮಾತಿನ ಸ್ವರೂಪ ಹಾಗೂ ಜಾದೂಗಾರಿಕೆಯನ್ನು

ವಿವರಿಸುವ 'ಮಾತು', ಅಮೆರಿಕೆಯ ವಾಣಿಜ್ಯ ಕಟ್ಟಡಕ್ಕೊದಗಿದ ದುರಂತವನ್ನು ದಾಖಲಿಸುವ 'ಸೆಪ್ಟೆಂಬರ್-೧೧' ಇವು ಇಲ್ಲಿಯ ಕಿರುಲೇಖನಗಳು.

ನಮ್ಮಲ್ಲಿ ಲೇಖನವೊಂದನ್ನೇ ವೃತ್ತಿಯಾಗುಳ್ಳ, ಅದಕ್ಕಾಗಿಯೇ ತಮ್ಮೆಲ್ಲ ಶಕ್ತಿಸಾಮರ್ಥ್ಯಗಳನ್ನು ಸವೆಸುವ ಲೇಖಕರು ವಿರಳ. ಶಿಕ್ಷಕ ವೃತ್ತಿಯೊಡನೆ ಲೇಖನ ವೃತ್ತಿಯನ್ನೂ ಹೊಂದಿಸಿಕೊಂಡು ಹೋಗುವವರೇ ಹೆಚ್ಚು. ಆಡಳಿತ ಚಕ್ರದಲ್ಲಿ ಕೈ ಸಿಕ್ಕಿಸಿಕೊಂಡಿರುತ್ತ, ಲೇಖನ ವೃತ್ತಿಯನ್ನೂ ನಿಭಾಯಿಸಿಕೊಂಡು ಹೋಗುವವರು ವಿರಳಾತಿ ವಿರಳ. ಇಂಥ ವಿರಳರಲ್ಲಿ ಶ್ರೀ ಮನುಬಳಿಗಾರ್ ಒಬ್ಬರು. ವಿವಿಧ ಅಧಿಕಾರ ವಲಯಗಳ ಅನುಭವ ಸಂಪತ್ತು 'ಭಾವಕೋಶದ ಮೂಲಕ ಕನ್ನಡ ಸಾಹಿತ್ಯಕ್ಕಿಳಿದಾಗ, ಭಾಷಾ ಸಾಹಿತ್ಯಗಳ ಬನಿ, ಕೆಚ್ಚು ಕಸುವು ಚೆಲುವುಗಳು ಬಹುಗುಣವಾಗುವುದರಲ್ಲಿ ಅನುಮಾನವಿಲ್ಲ. ವೈವಿಧ್ಯಮಯ ಪಕ್ವಾನುಭವವುಳ್ಳ ಶ್ರೀ ಮನು ಬಳಿಗಾರ್ ಅವರ ಲೇಖನಿಯಿಂದ ಕನ್ನಡದಲ್ಲಿ ಹುಲುಸು ಬೆಳೆಯೊದಗಿ, ನಾಡಿಗೆ ಸಿರಿಸುಗ್ಗಿಯ ಆನಂದ ದೊರೆಕೊಳ್ಳಲೆಂದು ಹಾರೈಸುತ್ತೇನೆ.

**- ಡಾ. ದೇ. ಜವರೇಗೌಡ**

ಮನು ಬಳಿಗಾರ್ ನಮ್ಮ ನಡುವಿನ ಒಬ್ಬ ಸಮರ್ಥ ಲೇಖಕ. ಹದವಾದ ದೃಷ್ಟಿಯ ಲೇಖಕ. ಇವರ ಬರವಣಿಗೆಯ ಹದ, ಭಾವನೆಯ ಆರ್ದ್ರತೆಯನ್ನು ಕಳೆದುಕೊಳ್ಳದ ಹದ ನನಗೆ ತುಂಬ ಇಷ್ಟವಾಗಿದೆ.... ಇವರಿಗೆ ಶೈಲಿಯ ಹದ ದಕ್ಕಿದೆ ಎಂದು ಅನ್ನಿಸುತ್ತದೆ. ಈ ಸಂಕಲನದ ಕಥೆಗಳನ್ನು ನಾನು ಓದುವಂತೆ ಮಾಡಿ ನನ್ನ ಒಳಮನಸ್ಸನ್ನು ಹಿಗ್ಗಿಸಿದ ಬಳಿಗಾರ್‌ರನ್ನು ನಾನು ಅಭಿನಂದಿಸುತ್ತೇನೆ.

**- ಡಾ. ಯು. ಆರ್. ಅನಂತಮೂರ್ತಿ ('ಋಣ' ಸಂಕಲನದ ಮುನ್ನುಡಿಯಲ್ಲಿ)**

ಮಿರುಮಿರುಗುವ ಇಬ್ಬನಿಯ ಹನಿಯೊಂದು ಆಕಾಶದ ಸೂರ್ಯನನ್ನೇ ಬಿಂಬಿಸುವಂತೆ, ಈ ಕಿರುಗಾತ್ರದ ಮಡುಗೊಂಡ ಉಕ್ತಿಗಳಲ್ಲಿ ಅನೇಕ ಅರ್ಥ ಪ್ರಪಂಚಗಳು ತೆರೆದುಕೊಳ್ಳುತ್ತವೆ. ಅಂಥ ಪರಿಣಾಮ ರಮಣೀಯತೆಯನ್ನು ಕನ್ನಡದ ಖ್ಯಾತ ಬರಹಗಾರರಾದ ಶ್ರೀ ಮನು ಬಳಿಗಾರ್ ಅವರ ಈ ಕನ್ನಡ ಅನುವಾದಗಳು ಪಡೆದುಕೊಂಡಿವೆ.

**- ಡಾ. ಜಿ. ಎಸ್. ಶಿವರುದ್ರಪ್ಪ (ರವೀಂದ್ರರ 'ಮಿಂಚಿನ ಹನಿಗಳು'- ಬೆನ್ನುಡಿ)**

ಹಾಗೆ ಕತೆಗಳಲ್ಲಿ ಮನು ಬಳಿಗಾರ್, ಇವರಿಂದಾಗಿ ಕನ್ನಡದಲ್ಲಿ ಫ್ರೆಶ್ ಆದ ವಾತಾವರಣ ನನಗೆ ಕಾಣುತ್ತದೆ... ಹೀಗಾಗಿ ನಿರಾಶೆಗೆ ಕಾರಣವಿಲ್ಲ.

**- ಡಾ. ಚಂದ್ರಶೇಖರ ಕಂಬಾರ**

ಮನು ಬಳಿಗಾರ್‌ರವರ ಶೈಲಿ, ಅವರು ಭಾಷೆಯನ್ನು ದುಡಿಸಿಕೊಳ್ಳುವ ರೀತಿಗೆ ನೂರಾರು ವರ್ಷಗಳ ಸಂಸ್ಕಾರವಿದೆ.

**- ಪ್ರೊ ಕೀರ್ತಿನಾಥ ಕುರ್ತಕೋಟಿ**

## ಏಕಾಂತ ಮತ್ತು ಏಕಾಗ್ರತೆ

ಕವಿ ಹೃದಯಿ, ಚಿಂತನಶೀಲ ಕತೆಗಾರ ಮನು ಬಳಿಗಾರ್ ಅವರ ಈ ನಿಬಂಧ ಸಂಕಲನ, ಅವರ ಸಹಜ ಬಹುಮುಖೀ ಆಸಕ್ತಿಯನ್ನು ಮತ್ತು ಆ ಆಸಕ್ತಿಯನ್ನು ಸಹಪ್ರವಾಸಿಗಳೊಂದಿಗೆ ಹಂಚಿಕೊಳ್ಳುವ ವ್ಯವಧಾನವನ್ನು - ಸೋಗಿಲ್ಲದೆ ಬಿಂಬಿಸುತ್ತದೆ. ಈ ಹೊತ್ತಗೆಯ ಹರಹು ನೋಡಿ: ಇಲ್ಲಿ ಮೈಲಾರ ಮಹಾದೇವ, ಚಂಬಾ ಮುತ್ನಾಳರಂಥ ಯಾರೂ ಅರಿಯದ ವೀರರಿದ್ದಾರೆ. 'ಅಂತರಂಗಶುದ್ಧಿ', 'ಏಕಾಂತ' 'ಸಮಯಾವಕಾಶ', 'ಮತು'ಗಳಂಥ ಧ್ಯಾನಸ್ಥ ಜಿಜ್ಞಾಸೆಗಳಿವೆ. 'ಗ್ರಾಹಕಪ್ರಜ್ಞೆ'ಯಿಂದ ಹಿಡಿದು 'ಮೆಟ್ರೋ ಬಸ್'ತನಕದ ವಿವಿಧ ಸಕಾಲಿಕ ಹೊಳಹುಗಳಿವೆ. ಕನಕ, ಕಾರಂತ, ಗಿರಡ್ಡಿ ಕುರಿತ ವಿಮರ್ಶಾ ಟಿಪ್ಪಣಿಗಳಿವೆ ಮತ್ತು ಇವೆಲ್ಲವೂ ಯಾವ ತಿಳಿದವನ ಗತ್ತೂ ಇಲ್ಲದೆ, ತಿಳಿಯುತ್ತಲೇ ಹಂಚಿಕೊಳ್ಳುವ ಸರಳ ನಡಿಗೆಯಲ್ಲಿ ಆಪ್ತವಾಗಿದೆ.

ಬಳಿಗಾರರ ವ್ಯಾಪಕ ಓದು, ತಾರತಮ್ಯವಿಲ್ಲದ ಜೀವನಾಸಕ್ತಿ ಮತ್ತು ಮುಕ್ತ ನಾಗರಿಕ ನೋಟ-ಇವು ಈ ನಿಬಂಧಗಳನ್ನು ಒಟ್ಟಿಗೆ ಹಿಡಿಯುವ ಸೂತ್ರಗಳಾಗಿವೆ. ಕವಿಯೊಬ್ಬನ ಗದ್ಯದಲ್ಲಿ ವಾಡಿಕೆಯಿಂದೆಂಬಂತೆ ಇಣುಕುವ ಪದರಮ್ಯತೆ ಅಥವಾ ಕತೆಗಾರನೊಬ್ಬನ ಲೇಖನಗಳಲ್ಲಿ ಬರಬಹುದಾದ ದೃಷ್ಟಾಂತಗುಣ -ಇವೆರಡೂ ಹುಸಿ ಆಕರ್ಷಣೆಗಳನ್ನು ತೊರೆದಿರುವುದರಿಂದಲೇ ಈ ಲೇಖನಗಳಿಗೊಂದು ಸರಳ ಸ್ವಷ್ಟ ಘನತೆ ಬಂದಿದೆ. ಅಲ್ಲಲ್ಲಿ ನೆಲಸಮಗೊಂಡ ಡಬ್ಲ್ಯೂ.ಟಿ.ಸಿ. ಅವಳಿ ಕಟ್ಟಡಗಳು ರಾಮಾಯಣದ ರಾಮಲಕ್ಷ್ಮಣರಂತೆ ನಿಂತಿದ್ದವು - ಎಂಬ ಸಲ್ ಮಿಂಚುಗಳೂ ಇವೆ.

ಒಟ್ಟು ಲೇಖನ ತನ್ನ ಸಮಯದ ಮತ್ತು ಪ್ರದೇಶದ ಒಬ್ಬ ಅಪ್ಪಟ ಪ್ರಾಮಾಣಿಕ ನಾಗರಿಕನೂ ಆಗಿರಬೇಕಾದ ಅಗತ್ಯವನ್ನು ಮತ್ತೆ ನಮಗೆಲ್ಲ ಜ್ಞಾಪಿಸುವಂತಿರುವ ಈ ಸಂಕಲನಕ್ಕಾಗಿ ಸ್ನೇಹಿತ ಮನುಬಳಿಗಾರ್ ಅವರನ್ನು ಆತ್ಮೀಯವಾಗಿ ಅಭಿನಂದಿಸುತ್ತೇನೆ.

**-ಜಯಂತ ಕಾಯ್ಕಿಣಿ (ಬೆನ್ನುಡಿಯಲ್ಲಿ)**

## ಋಣ ಕಥಾಸಂಕಲನಕ್ಕೆ

ಮನು ಬಳಿಗಾರ್ ಒಂದು ರೀತಿಯಲ್ಲಿ ಸವ್ಯಸಾಚಿಯೇ ಸರಿ. ಆಡಳಿತ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ತದೇಕಚಿತ್ತದಿಂದ ಸೃಜನಶೀಲರಾಗಿದ್ದಾರೆ.

ಒಳ್ಳೆಯ ಆಡಳಿತಗಾರನ ಹಾಗೂ ಒಳ್ಳೆಯ ಸಾಹಿತಿಯ ಎರಡೂ ಲಕ್ಷಣಗಳನ್ನು ಒಳಗೊಂಡಿರುವ ಮನು ಬಳಿಗಾರ್ ಕಥೆ, ಕವನ ಮತ್ತು ಲೇಖನಗಳೊಂದಿಗೆ ಕನ್ನಡಿಗರಿಗೆ ಈಗಾಗಲೇ ಪರಿಚಿತರಾಗಿದ್ದಾರೆ. ಇವರ ಕಥೆಗಳು ಇಂದಿನ ಅಭಾವದ ವಾತಾವರಣದಲ್ಲಿ ಭಾವಪೂರ್ಣವಾಗಿ ಮನಸ್ಸಿಗೆ ನಾಟುತ್ತವೆ.

ಮನು ಬರೆದ ಕಥೆಗಳಲ್ಲಿ 'ಭಾರತ' ಮತ್ತು 'ಇಂಡಿಯಾ'ದ ವಾಸ್ತವಗಳ ನಡುವಿನ ತುಮುಲಗಳಿವೆ. ವೈಚಾರಿಕ ಸಂಘರ್ಷವಿದೆ. ಸಹೃದಯರನ್ನು ಸ್ವವಿಮರ್ಶೆಗೆ ಹಚ್ಚುವ ಗುಣವಿದೆ; ಸ್ವಾಭಿಮಾನವನ್ನು ಸೃಷ್ಟಿಸುವ

ಛಲವಿದೆ. ಯಜಮಾನ ಸಂಸ್ಕೃತಿಗೆ ಜನ ಸಂಸ್ಕೃತಿಯನ್ನು ಪರಿಚಯಿಸುವ ದೃಢ ನಿರ್ಧಾರವಿದೆ. ಇಂಥ ಗುಣಗಳಿಂದಾಗಿ ಮನು ಬಳಿಗಾರ್ ಅವರು ಓದುಗರಲ್ಲಿ ಹೊಸ ಭರವಸೆ ಮೂಡಿಸುವುದರಲ್ಲಿ ಸಂಶಯವಿಲ್ಲ.

**- ರಂಜಾನ್ ದರ್ಗಾ**

## ಬೆಳಕ ಬೆಡಗು

ಸರಕಾರಿ ಸೇವೆಯಲ್ಲಿದ್ದು ನಿತ್ಯ ಕಡತಗಳಲ್ಲಿ ಮುಳುಗಿರುವವರಿಂದ ಸೃಜನಶೀಲ ಕೃತಿ ನಿರೀಕ್ಷಿಸುವುದು ತಪ್ಪು ಎಂದು ಭಾವಿಸುವವರು ಮನುಬಳಿಗಾರ್ ಅವರ ಕೃತಿಗಳನ್ನು ಗಮನಿಸಬೇಕು. ಮನು ಸರಕಾರಿ ಸಂದಿಗ್ಧಗಳಲ್ಲಿ ಕಳೆದುಹೋಗದೇ ನೈಜ ಸಂವೇದನೆಗಳನ್ನು ಕಾಳಜಿಯಿಂದ ಕಾಪಾಡಿಕೊಂಡಿರುವ ಒಬ್ಬ ಅಪರೂಪದ ಬರಹಗಾರ ಅದರ ಕತೆಯಿರಬಹುದು, ಪ್ರಬಂಧಗಳಿರಬಹುದು ಅಥವಾ ಅಂಕಣ ಬರಹಗಳಿರಬಹುದು, ಮನು ವರ್ತಮಾನದ ಜರೂರು ಬಯಸುವ ಎಲ್ಲ ಅಪೇಕ್ಷೆಗಳನ್ನು ಸಾಹಿತ್ಯಕ ಚೌಕಟ್ಟಿನೊಳಗೆ ಎಳೆತಂದು, ಸಾರ್ವಕಾಲಿಕವಾಗಿ ಪ್ರಸ್ತುತವೆನಿಸುವ ಗಾಂಭೀರ್ಯ ಹಾಗೂ ಕಳಕಳಿಯನ್ನು ತಮ್ಮ ವಿಚಾರಗಳಿಗೆ ತುಂಬುತ್ತಾರೆ. ಹೀಗಾಗಿ ಅವರ ಬರಹಗಳು ವರ್ತಮಾನದ ಬದುಕನ್ನು ದಾಟಿ, ಸಂಕೀರ್ಣತೆಯ ಸೋಂಕನ್ನು ಮೀರಿ ಮುನ್ನಡೆಯುತ್ತವೆ.

'ಬೆಳಕ ಬೆಡಗು' ಕೃತಿಯಲ್ಲಿ ಮನು ಈ ಸಂಗತಿಗಳಿಗೆ ತಾವೇ ಮತ್ತೊಮ್ಮೆ ಸಾಕ್ಷಿಯಾಗುತ್ತಾರೆ. ಕಾಲದ ಜತೆ ಹೆಜ್ಜೆ ಹಾಕುವ ಅನುಭವ ಮತ್ತು ಪಕ್ವತೆ ಸಹ ಈ ಬರಹಗಳಲ್ಲಿ ಸಾಂದ್ರವಾಗಿರುವುದನ್ನು ಗುರುತಿಸಬಹುದು. ಮನುವನ್ನು ಇಷ್ಟಪಡುವವರು ಅವರ ಬರಹಗಳನ್ನು ಇಷ್ಟಪಡುತ್ತಾರೆ. ಅವರ ವ್ಯಕ್ತಿತ್ವದಂತೆ ಇವೂ ಸಹ ಆಪ್ತ, ಲವಲವಿಕೆಯುಳ್ಳವು ಹಾಗೂ ನೀಡುವಂಥವು. ಮನುವನ್ನು ಮೆಚ್ಚಲು ಈ ಕೃತಿ ಮತ್ತೊಂದು ನೆಪ !

**- ವಿಶ್ವೇಶ್ವರ ಭಟ್**

## "ತಲಸ್ಪರ್ಶಿ" - ಬೆನ್ನುಡಿ

ಡಾ. ಗಿರಡ್ಡಿ ಗೋವಿಂದರಾಜರ ಪ್ರತಿಭೆ ಕವಿತೆಯಲ್ಲಿ, ಮಿನುಗಿ, ಕಥೆಗಳಲ್ಲಿ ಮೆರುಗು ಪಡೆದು ವಿಮರ್ಶೆಯಲ್ಲಿ ಪಕ್ವತೆಯನ್ನೂ ಪ್ರಖರತೆಯನ್ನೂ ಪ್ರಕಟಿಸಿ, ಅಂದು ಸಾಹಿತ್ಯದ ಅಭ್ಯಾಸಿಗಳು ಗಂಭೀರವಾಗಿ ಗಮನಿಸಬೇಕಾದ ಒಬ್ಬ ಪ್ರಮುಖ ವಿಮರ್ಶಕರನ್ನಾಗಿ ಅವರನ್ನು ರೂಪಿಸಿದೆ. ಇಂಗ್ಲಿಷ್ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಎರಡರಲ್ಲೂ, ಪರಂಪರೆಯ ಅರಿವಿನಿಂದ ಪರಿಣಿತವಾದ ಅವರ ವಿಮರ್ಶಾ ಬರವಣಿಗೆ ಸಂಯಮದಿಂದ ಸೂಕ್ಷ್ಮತೆಯನ್ನು ಪಡೆಯುತ್ತ ನನ್ನ ಮನೋಧರ್ಮದ ಮಿತಿಗಳಿಂದಲೂ ಪಾರಾಗಿ ಸಂಸ್ಕೃತಿಯ ಕಾಳಜಿಗಳತ್ತ ಒಲಿದಿರುವದು. ಸ್ವಾಗತಾರ್ಹವಾದ ಬೆಳವಣಿಗೆಯೆಂದೇ ಹೇಳಬಹುದು. ಸಾಹಿತ್ಯದ ಬಗೆಗಿನ ಗಾಢವಾದ ಅವರ ಪ್ರೀತಿಯೇ ಮೌಲಿಕವಾದ ಒಳನೋಟಗಳನ್ನು ಚರ್ಚೆಗೆ ಯೋಗ್ಯವಾದ ಅಂಶಗಳನ್ನೂ

ಸೂಚಿಸಬಲ್ಲ ನೈತಿಕ ಧೈರ್ಯದಿಂದ ತನ್ನಷ್ಟಕ್ಕೆ ಒಂದು ಮಾದರಿಯಾಗಿ ನಿಲ್ಲುವ ಸಾಮರ್ಥ್ಯವನ್ನು ಪಡೆದುಕೊಂಡಿದೆ.

ಕನ್ನಡದಲ್ಲಿ ಇಂದು ಕ್ರಿಯಾಶೀಲರಾಗಿರುವ ಐವತ್ತಕ್ಕೂ ಹೆಚ್ಚು ಜನ ಲೇಖಕ - ವಿಮರ್ಶಕರನ್ನು **'ತಲಸ್ಪರ್ಶಿ'** ಆತ್ಮೀಯವಾಗಿ ಒಳಗೊಂಡಿದೆಯೆಂದರೆ ಇದಕ್ಕಿಂತಲೂ ಹೆಚ್ಚಿನ ಹೃದಯಸ್ಪರ್ಶಿ ಸಂಗತಿ ಯಾವುದು?

**- ಚೆನ್ನವೀರ ಕಣವಿ**

ಎದ್ದವರು ಬಿದ್ದವರು ಮನು ಬಳಿಗಾರ್ ಸಾಹಿತ್ಯವನ್ನು ಪ್ರವೃತ್ತಿಯನ್ನಾಗಿಸಿಕೊಂಡ ಅಪರೂಪದ ಕವಿ ಮನಸ್ಸಿನವರು. ಈಗಾಗಲೇ ಒಂದು ಕವನ ಸಂಕಲನ, ಕಥಾ ಸಂಕಲನವನ್ನು ಹೊರತಂದಿರುವುದು ಅವರ ಕವಿ ಮನಸ್ಸಿಗೆ ಸಾಕ್ಷಿಯಾಗಿದೆ. ಇದೀಗ 'ಎದ್ದವರು ಬಿದ್ದವರು' ಕವನ ಸಂಕಲನವನ್ನು ತಂದಿದ್ದಾರೆ.

ಬಳಿಗಾರ್ ಅವರ ಕವನಗಳು ಕಚೇರಿಯ ವ್ಯಾಪ್ತಿಯನ್ನು ದಾಟಿ 'ಮಂಡೇಲ', 'ತಾಯಿ ತೆರೇಸಾ'ವರೆಗೂ ಕೈ ಚಾಚುತ್ತವೆ. ಪ್ರೇಮದ ಬಗೆಗೆ ಅದಮ್ಯ ನಂಬಿಕೆ ಗೌರವವಿರುವ ಅನೇಕ ಕವನಗಳನ್ನು ಇಲ್ಲಿ ಕಾಣಬಹುದು. ಕವಿಯ ವೃತ್ತಿಗೆ ಸಂಬಂಧಿಸಿದ 'ಪರಿವರ್ತನೆ', 'ತಹಶೀಲ್ದಾರ' ಕವನಗಳಂತೂ ತುಂಬಾ ಸಹಜವಾಗಿ ಲವಲವಿಕೆಯಿಂದ ಕೂಡಿದ್ದು ವಿಶಿಷ್ಟವಾಗಿವೆ. 'ದಲಿತನ ಮಹಿಮೆ', 'ಸಾಕಿನ್ನು ಭಂಡತನ' ಮುಂತಾದ ಕವನಗಳು ಕವಿಗಿರುವ ರಾಜಕೀಯ ಪ್ರಜ್ಞೆ ಹಾಗೂ ಧೋರಣೆಗಳನ್ನು ಸೂಚಿಸುತ್ತವೆ.

**- ಡಾ. ಚಂದ್ರಶೇಖರ ಕಂಬಾರ**

ಕವನಗಳಲ್ಲಿ ಸಹಜತೆಯಿಂದ, ಸಜೀವತೆಯಿಂದ, ಸಮೀಚೀನತೆಯಿಂದ, ಜನರ ಬಗ್ಗೆ ಕವಿಗಿರುವ ಕಾಳಜಿ ಕಳಕಳಿಗಳು ಮೈವೆತ್ತಿವೆ. ಸ್ವಂತಿಕೆಯ ಸೊಬಗನ್ನು ಭಾಷೆಯ ಬೆಡಗನ್ನು, ನಿರೂಪಣೆಯ ನಾವೀನ್ಯವನ್ನು ಅಭಿವ್ಯಕ್ತಿಸಿರುವ ಈ ಕವಿಗೆ ಉಜ್ವಲ ಭವಿಷ್ಯವಿದೆಯೆಂದು ಹೇಳಲು ಯಾವ ಭವಿಷ್ಯವಾದಿಯೂ ಬೇಕಿಲ್ಲ.

**ಶ್ರೀ ಸಿದ್ಧಯ್ಯ ಪುರಾಣಿಕ (ಮುನ್ನುಡಿಯಿಂದ)**

## ಸಂಸ್ಕೃತಿ ವಿಹಾರ - ಬೆನ್ನುಡಿ

ಮನು ಬಳಿಗಾರರು ದಕ್ಷ ಆಡಳಿತಗಾರರು, ಸೂಕ್ಷ್ಮ ಸಂವೇದನೆಯ ಸಂಸ್ಕೃತಿ ಚಿಂತಕರು, ಕಥೆ, ಕಾವ್ಯ, ಲಲಿತ ಪ್ರಬಂಧಗಳ ರಚನೆಯಲ್ಲಿ ತಮ್ಮದೇ ಅಸ್ಮಿತೆಯನ್ನು ಕಂಡುಕೊಂಡವರು.

ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇವರು ಬರೆದ ಅಂಕಣ ಬರಹಗಳು ವರ್ತಮಾನದ ವಿದ್ಯಮಾನಗಳನ್ನು ಒರೆಗೆ ಹಚ್ಚುವ ವಿಶ್ಲೇಷಣಾತ್ಮಕ ಭಾವದಲ್ಲಿ ಮೂಡಿದವು.

ಸಮಾಜದ ಬಹುತ್ವಮೂಲಗಳನ್ನು ಸಾಮಾಜಿಕ ನ್ಯಾಯದ ತಕ್ಕಡಿಯಲ್ಲಿ ಪರಿಗಣಿಸುವ ಅಂತಃಕರಣ, ಎಳೆಯ ಪ್ರತಿಭೆಗಳನ್ನು ನಿರುಮ್ಮಳಭಾವದಲ್ಲಿ ಪ್ರೋತ್ಸಾಹಿಸುವ ಉಮೇದು ಇವರ ವ್ಯಕ್ತಿತ್ವದ ಅಸ್ಮಿತೆ.

ಈ ಸಂಕಲನದಲ್ಲಿ ಇವರ ಸಾಹಿತ್ಯದ ಓದಿನ ಹರಹು, ಗ್ರಹಿಕೆಯ ನೆಲೆ, ವಿಶ್ಲೇಷಣೆಯ ಸಮದೃಷ್ಟಿ ತೊದಲಿಲ್ಲದ ಬಗೆಯಲ್ಲಿ ಮೂಡಿಬಂದಿವೆ. ಭಾಷೆ, ನೆಲ, ಜಲದ ವಿಷಯಗಳ ಜೊತೆಗೆ ಸಾಹಿತ್ಯ ಸಂಸ್ಕೃತಿ, ಸಾಮಾಜಿಕ ಚಿಂತನೆ, ಮಾಧ್ಯಮಗಳ ವಿಚಾರ ಶಿಕ್ಷಣ ಈ ಎಲ್ಲ ಕ್ಷೇತ್ರಗಳ ಬಗೆಗೆ ನಿರ್ದುಷ್ಟ ಹಾಗೂ ನಿಖರ ಭಾವದಲ್ಲಿ ಮಾತನಾಡುವ ಮನು ಅವರಿಗೆ ವಿಷಯಗಳ ಆಳ ವಿಸ್ತಾರಗಳ ಅರಿವು ಇದೆ. ಆರ್ದ ಹಾಗೂ ಆಪ್ತಭಾವದಲ್ಲಿ ವಿಷಯವನ್ನು ಮಂಡಿಸುವ ಶೈಲಿ ಕರಗತವಾಗಿದೆ.

**- ಪ್ರೊ. ಎಸ್. ಜಿ. ಸಿದ್ಧರಾಮಯ್ಯ**

## ನನ್ನ ನಿನ್ನೊಳಗೆ (ಕವನ ಸಂಕಲನ)

ಶ್ರೀ ಮನು ಬಳಿಗಾರ್ ಅವರು ಸ್ನೇಹಜೀವಿ, ನಿಗರ್ವಿ, ಕಾರ್ಯನಿಷ್ಠ ಅಧಿಕಾರಿಗಳು. ಧಾರವಾಡ ಜಿಲ್ಲೆಯ ಶಿಗ್ಗಿಯ ಈ ತರುಣ ಸೃಜನಶೀಲ ಬರಹಗಾರರು ಇಂಗ್ಲೀಷ್ ಬಿ.ಎ.(ಪ್ರಥಮವರ್ಗ), ಹಾಗೂ ಎಲ್ಎಲ್ಬಿ ಪದವಿಗಳನ್ನು ಪಡೆದು ಕೆಲಕಾಲ ವಕೀಲಿ ವೃತ್ತಿ ನಡೆಸಿದರು. ೧೯೭೯ರಲ್ಲಿ ಕೆ.ಎ.ಎಸ್. ಮುಗಿಸಿ, ಮಂಗಳೂರು, ಗುಲಬರ್ಗಾ, ವಿಜಾಪುರಗಳಲ್ಲಿ ತಹಸಿಲ್ದಾರರೆಂದು ಸೇವೆ ಸಲ್ಲಿಸಿ ಇದೀಗ ಮುದ್ದೇಬಿಹಾಳದಲ್ಲಿ ಅದೇ ಹುದ್ದೆಯಲ್ಲಿದ್ದಾರೆ. ತಮ್ಮ ಎಂಟು ವರ್ಷಗಳ ಸೇವಾವಧಿಯಲ್ಲಿ ಅವರು ಅತ್ಯುತ್ತಮ ಅಧಿಕಾರಿಗಳೆಂದು ಒಟ್ಟು ಮೂರು ಪ್ರಶಸ್ತಿ, ಹಾಗೂ ಎರಡು ಚಿನ್ನದ ಪದಕಗಳನ್ನು ಪಡೆದುದು ಅವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿವೆ. ಆಕಾಶವಾಣಿ ದೂರದರ್ಶನಗಳಲ್ಲಿಯೂ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಪ್ರಸ್ತುತ 'ನನ್ನ ನಿನ್ನೊಳಗೆ' ಸಂಕಲನದ ಕವನಗಳ ಬಗೆಗೆ ನಾಡಿನ ಖ್ಯಾತ ಕವಿ ಶ್ರೀ ಚೆನ್ನವೀರ ಕಣವಿ ಅವರ ಮಾತಿನಲ್ಲಿ ಹೇಳಬೇಕೆಂದರೆ- "ಕೆಲವೆ ಪದಗಳನ್ನು ಪ್ರೇಮದ ಉತ್ಕಟತೆ ಭಾವೋದ್ರೇಕದಲ್ಲಿ ಕೊನೆಗೊಳ್ಳದಂತೆ ನೋಡಿಕೊಳ್ಳುವಲ್ಲಿ ಇವು ಯಶಸ್ವಿಯಾಗುತ್ತವೆ."

**- ಡಾ. ಸಂಗಮೇಶ ಸವದತ್ತಿಮಠ**

## ಮನು ಬಳಿಗಾರ್ ಅವರ ಆಯ್ದ ಕವನಗಳು - ಬೆನ್ನುಡಿ

ಕಾವ್ಯಕ್ರಿಯೆ ಎಂಬುದು ಒತ್ತಡ, ಸಂಕಟದೊಳಗಿನ ಉತ್ಪಾದನೆ ಎಂಬ ಮಾತಿದೆ. ಸೃಜನಶೀಲತೆಯ ಪ್ರಧಾನಗುಣ ಅದು. ಶ್ರೀ ಮನು ಬಳಿಗಾರ್ ಅವರ ಕಾವ್ಯ ಬರೆಹಗಳಲ್ಲಿ ಈ ಗುಣವೇ ಕ್ರಿಯಾಶೀಲವಾಗಿದೆ. ಇಲ್ಲಿನ ಬಹುಪಾಲು ಕವನಗಳಲ್ಲಿ ಘಟನೆ, ವ್ಯಕ್ತಿಸಂದರ್ಭಗಳೇ ಮುಖಾಮುಖಿಗೊಂಡು ಆ ಪರಿಣಾಮದ ಅಭಿವ್ಯಕ್ತಿಯಾಗಿ ಮೈದಾಳಿವೆ. ಹೀಗೆ ಪ್ರಸ್ತುತಗೊಳ್ಳುವ ಕ್ರಿಯೆ ಕಾವ್ಯದ ಮೂಲಧಾತು, ಅದು ಕಾರಣವಾಗಿ, ಸಾಮಾಜೀಕರಣಗೊಳ್ಳುವ ಮನೋಭಾವದಿಂದ ಹಗುರವಾಗುವುದನ್ನು ಈ ಕವನಗಳು ಬಯಸುತ್ತವೆ. ಹಗುರವಾಗುವುದೆಂದರೆ ಉರಿಯುವ ದೀಪದ ಬತ್ತಿಗೆ ತೈಲವಾಗುವ ಬಗೆ. ಇಂಥ ಹಗುರವಾಗುವಿಕೆಯ

ಗತಿಶೀಲತೆಯನ್ನು ಇಲ್ಲಿ ಕವಿ ಬಹು ಸಮರ್ಥವಾಗಿ, ಆಪ್ತವಾಗುವ ಭಾಷೆ ಮೂಲಕ ಕಟ್ಟಿಕೊಡುತ್ತಾರೆ. ಇದು ಇವರ ಯಶಸ್ಸಿಗೆ ಗುಟ್ಟು.

**ಕಾ.ತ. ಚಿಕ್ಕಣ್ಣ**

## ಮೈಲಾರ ಮಹಾದೇವ (ನಾಟಕ) - ಬೆನ್ನುಡಿ

ಅಕ್ಕರದ ಒಡೆತನ ಮನುಷ್ಯನನ್ನು ಅಹಂಕಾರಿಯಾಗಿ ಮಾಡುತ್ತದೆ. ಅಧಿಕಾರದ ಬಲ ಆತನನ್ನು ಸ್ವಾರ್ಥಿಯಾಗಿ ಮಾಡುತ್ತದೆ. ಇಂದು ನಿಸ್ವಾರ್ಥಿಯಾಗುವುದು ಆಗದ ಮಾತು. ಆದರೆ ನಿಗರ್ವಿಯಾಗಿರಲೆತ್ನಿಸುವವನು, ಸಾಮಾಜಿಕ ಒಳಿತನ್ನು ಬಯಸುವವನು ತನ್ನೊಳಗಿನ ಶತ್ರುವಿನ ಬಗ್ಗೆ ಅತೀವ ಎಚ್ಚರದಿಂದ ಇರಬೇಕು. ಪ್ರತಿ ಕ್ಷಣದ ಒಳಗೂ, ಪ್ರತಿ ಮಾತಿನ ಮರೆಗೂ ಅಧಃಪಾತ ಪಾತಾಳಗಳು ಹೊಂಚಿ ಕಾಯುತ್ತಿರುವುದಂತೂ ನಿಜ. ಇದು ಸಂಕಟದ ಹಾದಿ. ಇಂತಹ ಹಾದಿಯಲ್ಲಿ ನುಡಿ ನಡೆಯಾಗಿ ಸಾಗುವುದಕ್ಕೆ ಸಾಮಾಜಿಕ ನ್ಯಾಯದಲ್ಲಿ ಉಗ್ರ ನಿಷ್ಠೆ ಹಾಗೂ ನಿಷ್ಠೂರ ಮಾನವೀಯ ಅಂತಃಕರಣಬೇಕು. ನಾನು ಕಂಡಂತೆ ರೈತನ ಹಠ, ವಿವೇಕ ಮತ್ತು ಹುಂಬತನ ಸ್ಥಾಯಿಯಾಗಿಸಿಕೊಂಡಿರುವ ಶ್ರೀ ಮನು ಬಳಿಗಾರ್ ಈ ಕಠಿಣ ಹಾದಿಯ ಪಯಣಿಗ.

ತ್ಯಾಗ, ನಿಸ್ವಾರ್ಥ, ದೇಶಭಕ್ತಿ ಮುಂತಾದ ಆದರ್ಶಗಳು ಇಂದು ನಗೆಪಾಟಲಿಗೆ ಗುರಿಯಾಗಿವೆ. ದೇಶಕ್ಕಾಗಿ, ನಂಬಿದ ಅಹಿಂಸಾ ತತ್ವಕ್ಕಾಗಿ ತನ್ನ ಪ್ರಾಣವನ್ನೇ ಬ್ರಿಟಿಷ್‌ರ ಬಂದೂಕಿಗೆ ಸಹಜ ಕತೆಗಾರರಾದ ಮನುಬಳಿಗಾರ್‌ರವರು ನಾಟಕವಾಗಿ ಕಟ್ಟಿಕೊಟ್ಟಿದ್ದಾರೆ. ಜಾಗತಿಕ ಮಾರುಕಟ್ಟೆ ನಿರ್ದೇಶಿತ ಜೀವನ ಕ್ರಮಗಳು ನಮ್ಮ ವರ್ತಮಾನದ ಸಾಂಸ್ಕೃತಿಕ ನೆನಪನ್ನು ಅಳಿಸುವ ದಿಕ್ಕಿನಲ್ಲಿ ಕ್ರಿಯಾಶೀಲವಾಗಿರುವ ಈ ಹೊತ್ತಿನಲ್ಲಿ, ಚರಿತ್ರೆ, ಪುರಾಣ, ಸಾಂಸ್ಕೃತಿಕ ನಾಯಕರು ವಾರಸುದಾರರಿಲ್ಲದೆ ಗುರುತು ಕಳೆದುಕೊಂಡಿರುವ ಕಾಲ ಘಟ್ಟದಲ್ಲಿ, ಇವರ ಈ ಪ್ರಯತ್ನವು ಕನ್ನಡದ ಮನಸ್ಸುಗಳನ್ನು ಮಹಾತ್ಮನ ಮಾರ್ಗದ ಕಡೆ ಸೆಳೆಯುವಂತಾಗಲಿ.

**ಡಾ. ಕೆ.ವೈ. ನಾರಾಯಣಸ್ವಾಮಿ**

## ಅಪ್ಪ - ಬೆನ್ನುಡಿ

ಕಥೆ, ಕವನ, ನಾಟಕ, ಲಲಿತಪ್ರಬಂಧ, ಜೀವನ ಚರಿತ್ರೆ, ವಿಮರ್ಶೆ, ಗ್ರಂಥ ಸಂಪಾದನೆ ಹೀಗೆ ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ಕೃಷಿ ಮಾಡಿರುವ ಖ್ಯಾತ ಲೇಖಕ ಡಾ. ಮನು ಬಳಿಗಾರ್ ಪ್ರಗತಿಪರ ಕೃಷಿಕರ ಮಗ. ಶ್ರೀಯುತರು ತಮ್ಮ ತಂದೆ ದೇಶಭಕ್ತ ದಿ.ಪರಮೇಶ್ವರಪ್ಪನವರ ಬಗ್ಗೆ ಅಪಾರ ಹೆಮ್ಮೆ, ಅತೀವ ಪ್ರೀತಿಯಿಂದ ಬರೆದಿರುವ 'ಅಪ್ಪ' ಎಂಬ ಈ ಕೃತಿಯಲ್ಲಿ, ಅವರನ್ನು ಹೆತ್ತು ಹೊತ್ತು ಬೆಳೆಸಿದವರ ಬಗೆಗಿನ ಆಪ್ಯಾಯಮಾನವಾದ ನೈಜ ಚಿತ್ರಣವಿದೆ. ಇದು ಇಪ್ಪತ್ತನೆಯ ಶತಮಾನದ ಪೂರ್ವಾರ್ಧ ಹಾಗೂ ಉತ್ತರಾರ್ಧಗಳ ಗ್ರಾಮೀಣ ಭಾರತದ, ಸಾಮಾಜಿಕ ಹಾಗೂ ಕೌಟುಂಬಿಕ ಜೀವನಕ್ರಮದ ಚಿತ್ರಣವೂ

ಆಗುವುದರಿಂದ ಜೀವನಚರಿತೆ ರಚನೆಯಲ್ಲಿ ಒಂದು ವಿಶೇಷ ಪ್ರಯೋಗವೆಂದೆನಿಸಿದೆ. ಕೇವಲ ಘಟನಾವಳಿಗಳನ್ನು ವಿವರಿಸದೆ, ಅಲ್ಲಿನ ವೈಶಿಷ್ಟ್ಯಗಳ ಬಗ್ಗೆ ಒಳನೋಟ ಒದಗಿಸುವ ಲೇಖಕರ ಅನನ್ಯ ರೀತಿಯೇ ಈ ಗ್ರಂಥವನ್ನು ಸಹಜವಾಗಿ ಓದುವಂತೆ, ನಂತರ ಮೆಚ್ಚುವಂತೆ ಮಾಡುತ್ತದೆ. ಪುಟ್ಟ ಗ್ರಾಮವೊಂದರ ಅಪ್ಪಟ ದೇಸಿ ವ್ಯಕ್ತಿತ್ವವೊಂದು ಹೇಗೆ ಜಾಗತಿಕ ಮಟ್ಟ ಮುಟ್ಟಬಹುದೆಂಬುದನ್ನು ಈ ಜೀವನಚರಿತ್ರೆ ಓದಿದವರೆಲ್ಲ ಮನಗಾಣುತ್ತಾರೆಂಬುದು ನಮ್ಮ ನಂಬುಗೆ. ಈ ಹೆಮ್ಮೆಯಿಂದಲೇ ಐ.ಬಿ.ಎಚ್. ಪ್ರಕಾಶನ ಈ ಕೃತಿಯನ್ನು ತಮ್ಮ ಕೈಯಲ್ಲಿಡುತ್ತಿದೆ.

**ಐ.ಬಿ.ಎಚ್. ಪ್ರಕಾಶನ**

## ಭಾಗ-9

# ಸಂದರ್ಶನಗಳು

1. ಮನು ಬಳಿಗಾರ್ - ಜೀವನ ಸಾಧನೆ

ಕೃಪೆ ಹಾಗೂ ಸಂದರ್ಶನ ಡಾ. ಜಿ.ಎಂ. ಹೆಗಡೆ, 2010

ಮನು ಬಳಿಗಾರ್ ಅವರು ಕರ್ನಾಟಕ ರಾಜ್ಯದ ಹಿರಿಯ ಅಧಿಕಾರಿಗಳಾಗಿ ವಿವಿಧ ಹುದ್ದೆಗಳಲ್ಲಿ ಅವಿಸ್ಮರಣೀಯ ಸೇವೆ ಸಲ್ಲಿಸಿ ನಾಡಿನ ಅಭಿವೃದ್ಧಿಗೆ ಪ್ರಾಮಾಣಿಕ ಕಾರ್ಯ ಮಾಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಕನ್ನಡದ ಬೆಳವಣಿಗೆಗೆ ಶ್ರಮಿಸಿದ್ದಾರೆ. ಮನು ಬಳಿಗಾರ್ ಅವರು ಕವಿ, ಕಥೆಗಾರ, ಚಿಂತಕರಾಗಿ ಸಾಹಿತ್ಯಲೋಕದಲ್ಲಿ ಸಾಧನೆ ಮಾಡಿದ್ದಾರೆ. ಮನು ಸ್ನೇಹಮಯಿ; ಸೌಜನ್ಯ; ಸಜ್ಜನಿಕೆಗೆ, ಕ್ರಿಯಾಶೀಲತೆಗೆ ಇನ್ನೊಂದು ಹೆಸರು ಎಂಬಂತೆ ಇದ್ದಾರೆ. ಹಾಗೆಯೇ ಅವರು ಸಾಹಿತ್ಯ ಸಂಸ್ಕೃತಿಯ ಕುರಿತು ಅಪಾರವಾದ ಆಸ್ಥೆಯಿಂದ ಮಾತಾಡುತ್ತಾರೆ. ಅವರೊಡನೆ ನಡೆಸಿದ ಸಾಹಿತ್ಯ ಸಂವಾದ ಈ ಕೆಳಗಿನಂತಿದೆ.

**ನಿಮಗೆ ಸಾಹಿತ್ಯದ ಅಭಿರುಚಿ ಉಂಟಾದದ್ದು ಹೇಗೆ?**

ನನ್ನ ಹದಿನಾಲ್ಕು ಹದಿನೈದರ ವಯಸ್ಸಿನಲ್ಲಿಯೇ ನಾನು ಸಾಹಿತ್ಯದತ್ತ ಆಕರ್ಷಿತನಾದೆ. ಗದುಗಿನಿಂದ ಹೊರಡುತ್ತಿದ್ದ 'ಮುತ್ತು'ದಲ್ಲಿ ನನ್ನ ಕವಿತೆ (1968ರಲ್ಲೆ) ಪ್ರಕಟವಾಯಿತು. ವಿದ್ಯಾರ್ಥಿ ಜೀವನದಲ್ಲಿ ಸಾಹಿತ್ಯದ ಓದು ಮತ್ತು ಸಾಹಿತ್ಯದ ಒಡನಾಟ ನನ್ನಲ್ಲಿರುವ ಸಾಹಿತ್ಯವನ್ನು ಹೊರಗೆ ಹಾಕುವಂತಾಯಿತು. ನನಗೆ ಬರವಣಿಗೆ ಓದು ಎಂದರೆ ಬಹಳ ಪ್ರೀತಿ. ನನ್ನ ಜೀವನದ ಸಂತೋಷದ ಕ್ಷಣಗಳನ್ನು ನಾನು ಬರೆಯುವುದರಲ್ಲಿ ತೊಡಗಿಸಿಕೊಂಡದ್ದು ಒಂದು ವಿಶೇಷ. ನನಗೆ ಯಾವುದೇ ಇತರ ಹವ್ಯಾಸಗಳಿಲ್ಲ. ಸಾಹಿತ್ಯ, ಸಂಸ್ಕೃತಿ, ಕಲೆಯ ಬಗ್ಗೆ ನನ್ನ ಆಸಕ್ತಿ ಬೆಳೆಯುತ್ತಲೇ ಇವೆ.

**ನೀವು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದೀರಿ, ಇವುಗಳಲ್ಲಿ ನಿಮ್ಮ ಪ್ರಮುಖ ಆಸಕ್ತಿ ಯಾವುದು?**

ಕವಿತೆ, ಕಥೆ, ನಾಟಕ, ಅಂಕಣ ಸಾಹಿತ್ಯ, ಜೀವನಚರಿತ್ರೆ, ಲಲಿತಪ್ರಬಂಧ, ವಿಮರ್ಶೆ ಹೀಗೆ ಬೇರೆ ಬೇರೆ ಸಾಹಿತ್ಯಪ್ರಕಾರಗಳಲ್ಲಿ ನಾನು ಬರವಣಿಗೆ ಮಾಡಿದ್ದೇನೆ. ಆದರೆ ನನ್ನ ಸಾಹಿತ್ಯಾಭಿವ್ಯಕ್ತಿ ಎಲ್ಲ ಪ್ರಕಾರಗಳಲ್ಲಿ ಅಂತಸ್ಥವಾಗಿದ್ದರೂ ಕವಿತೆ, ಕಥೆ ನನಗೆ ಪ್ರಿಯವಾದದ್ದು. ಯಾಕೆಂದರೆ ಸೃಜನಾತ್ಮಕ ಸಾಹಿತ್ಯ ನನಗೆ ಆನಂದ ನೀಡುತ್ತದೆ. ಕಥೆ, ಕವಿತೆಗಳಲ್ಲಿ ಸೃಜನಶೀಲತೆ, ಅಂಕಣಸಾಹಿತ್ಯದಲ್ಲಿ ಚಿಂತನಶೀಲತೆ ಪ್ರಕಟಗೊಂಡುದನ್ನು ಓದುಗರು ಗಮನಿಸಿದ್ದಾರೆ.

**ನಿಮ್ಮ ಸಾಹಿತ್ಯದ ಕೇಂದ್ರ ಆಶಯ ಯಾವುದು?**

ಸಾಮಾಜಿಕ ಕಳಕಳಿ ಮತ್ತು ಮನುಷ್ಯ ಸಂಬಂಧಗಳು ನನ್ನನ್ನು ಸದಾ ಸೃಜನಶೀಲನನ್ನಾಗಿಸಿದೆ. ಮಾನವೀಯ ಅನುಭವಗಳು ನನ್ನ ಸಾಹಿತ್ಯದಲ್ಲಿ ಪ್ರತಿಫಲಿತವಾಗಿವೆ. ನನಗೆ ಗ್ರಾಮ ಜೀವನದಲ್ಲಿ ವಿಶೇಷವಾದ ಆಸಕ್ತಿ. ನಾನು ನಗರ ಜೀವನದಲ್ಲಿದ್ದರೂ ಗ್ರಾಮಜೀವನದ ನೆನಪುಗಳು ನನ್ನನ್ನು ಸದಾ ಕಾಡುತ್ತವೆ. ನಗರಪ್ರಜ್ಞೆಗಿಂತ ಗ್ರಾಮೀಣ ಅನುಭವವೇ ನನ್ನ ಸಾಹಿತ್ಯದ ಕೇಂದ್ರ ಆಶಯ ಎಂದು ಹೇಳಬಹುದು.

**ನಿಮ್ಮ ಕಥೆಗಳಲ್ಲಿ ಹಳ್ಳಿಯ ಜನರ ಜೀವನದೃಷ್ಟಿ ಪಾತ್ರಗಳು ಅರಳಿ ಬರಲು ಕಾರಣವೇನು?**

ನನ್ನ ಬದುಕಿನಲ್ಲಿ ಗ್ರಾಮೀಣ ಪರಿಸರದ ಪ್ರಭಾವ ಪ್ರಮುಖವಾದದ್ದು ನಾನು ಉತ್ಕೃಷ್ಟವಾದ ಕೌಟುಂಬಿಕ ಪರಿಸರದಲ್ಲಿ ಬಂದವರು. ನನ್ನ ತಂದೆತಾಯಿಗಳು ಪ್ರಖರ ವ್ಯಕ್ತಿತ್ವ ಹೊಂದಿದ್ದರು. ಮಕ್ಕಳನ್ನು ಚೆನ್ನಾಗಿ ಲಾಲನೆ ಪಾಲನೆ ಮಾಡುವುದು ಅವರಿಗೆ ಉತ್ತಮ ವಿದ್ಯಾಭ್ಯಾಸ, ಸಂಸ್ಕಾರ ನೀಡುವುದು ಅವಶ್ಯಕ. ಆಟ, ಪಾಠ, ಊಟ, ಈ ಮೂರರಲ್ಲೂ ಮಕ್ಕಳನ್ನು ಸರಿಯಾಗಿ ಬೆಳೆಸಲು ಅವರು ನಡೆಸಿದ ಪ್ರಯತ್ನ ಸಾಕಾರಗೊಂಡಿದೆ. ಆ ವಾತಾವರಣದಲ್ಲಿದ್ದ ನೈತಿಕ ಶಕ್ತಿ, ಅನ್ಯೋನ್ಯ ಸಂಬಂಧ, ಗುರುಶಿಷ್ಯ ಪ್ರೀತಿ, ಅತ್ಯುತ್ತಮ ಜೀವನರೀತಿ ನನ್ನ ಮೇಲೆ ಪ್ರಭಾವ ಬೀರಿವೆ. ಹಳ್ಳಿಯ ಜನರ, ರೈತರ, ಕೂಲಿಕಾರರ ಜೀವನ ಸಮಸ್ಯೆಗಳನ್ನು ಕಂಡು ನಾನು ನೇರ ಅನುಭವವನ್ನು ಪಡೆದುಕೊಂಡಿದ್ದೇನೆ.

**ಗ್ರಾಮೀಣ ಬದುಕಿನ ಯಾವ ಅನುಭವಗಳು ನಿಮ್ಮ ಕಥೆಗಳಲ್ಲಿ ವಸ್ತುವಾಗಿವೆ?**

ಜಾಗತೀಕರಣ, ನಗರೀಕರಣಗಳಿಂದಾಗಿ ಭಾರತದ ಗ್ರಾಮೀಣ ಭಾಗ ನಲುಗಿ ಹೋಗಿದೆ. ಅದಕ್ಕೆ ಪರಿಹಾರದ ಮಾರ್ಗೋಪಾಯಗಳನ್ನು ನಾವು ಕಂಡುಕೊಳ್ಳಬೇಕು. ಈ ದಿಶೆಯಲ್ಲಿ ನಾನು ಸದಾ ಚಿಂತಿಸುತ್ತ ಬಂದಿದ್ದೇನೆ. ಹಳ್ಳಿಗಳಲ್ಲಿ ರೈತರ ಬಾಳು ದಾರುಣ್ಯಸ್ಥಿತಿ ತಲುಪಿದೆ. ವಿದ್ಯಾವಂತ ಯುವಕರು ನಗರದತ್ತ ಮುಖ ಮಾಡುತ್ತಿದ್ದಾರೆ. ಕೆಲವು ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ. ಗ್ರಾಮಜೀವನದಲ್ಲಿರುವ ಪ್ರೀತಿ, ಸ್ನೇಹ, ಕೌಟುಂಬಿಕ ಸಂಬಂಧಗಳು ಈಗ ಕಣ್ಮರೆಯಾಗುತ್ತಲಿವೆ. ರಾಜಕೀಯದಿಂದ ಹಳ್ಳಿಗಳಲ್ಲಿ ದ್ವೇಷ ಅಸೂಯೆ

ಹೆಚ್ಚಿದೆ. ಹಳ್ಳಿಗಳ ಆರ್ಥಿಕ ವ್ಯವಸ್ಥೆ ಕುಸಿದಿದೆ. ಬಡಜನರಲ್ಲಿ ಕಾಣುವ ನೈತಿಕ ಸಂಪನ್ನತೆ, ಆದರ್ಶದ ಮಾದರಿಗಳು ವಿದ್ಯಾವಂತರಲ್ಲಿ ನಾವು ನೋಡಲಾರದವರಾಗಿದ್ದೇವೆ. ಹೀಗೆ ಗ್ರಾಮೀಣ ಬದುಕಿನ ನೈಜಜೀವನದ ಬಿಡದ ಸ್ಪರ್ಶಗಳು ನನ್ನ ಕಥೆಯಲ್ಲಿ ಮೈದಾಳಿವೆ. ಜನಜೀವನದ ತವಕತಲ್ಲಣಗಳು, ಮಾನವ ಮನಸ್ಸಿನ ಎಳೆಗಳನ್ನು ನಾನು ನನ್ನ ಕಥೆ, ಕವನ, ಲೇಖನಗಳ ಮೂಲಕ ವ್ಯಕ್ತಪಡಿಸಿದ್ದೇನೆ. ಒಂದು ಮಾತಿನಲ್ಲಿ ಹೇಳುವದಾದರೆ ನನ್ನದು ನಗರಕೇಂದ್ರಿತ ಬರವಣಿಗೆಗಿಂತ ಗ್ರಾಮಕೇಂದ್ರಿತ ಬರವಣಿಗೆ ಎಂದರೆ ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ.

**ಪಾಶ್ಚಾತ್ಯ ಜೀವನಕ್ರಮಕ್ಕೂ ನಮ್ಮ ಜೀವನಕ್ಕೂ ಇರುವ ವ್ಯತ್ಯಾಸ ಯಾವುದು?**

ನಾನು ಪ್ರಪಂಚದ ಹದಿನೈದು ರಾಷ್ಟ್ರಗಳನ್ನು ಕಂಡುಬಂದಿದ್ದೇನೆ. ಆದರೆ ಪ್ರವಾಸ ಸಾಹಿತ್ಯ ಬರೆಯಲಿಲ್ಲ. ಶಿವರಾಮ ಕಾರಂತರು ಸ್ವಂತ ಖರ್ಚಿನಲ್ಲಿ ವಿದೇಶಯಾತ್ರೆ ಮಾಡಿ ಅನುಭವಗಳನ್ನು ವಿವಿಧ ಪುಸ್ತಕಗಳಲ್ಲಿ ಬರೆದಿದ್ದಾರೆ. ವಿದೇಶಯಾತ್ರೆ ಮಾಡಿದಾಗ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳಿಗಿಂತ ಅಲ್ಲಿಯ ಜೀವನಕ್ರಮದ ಬಗ್ಗೆ ನಾನು ಚಿಂತಿಸುವಂತೆ ಮಾಡಿತು. ಪ್ರಪಂಚ ಪರ್ಯಟನ ಮುಗಿಸಿ ಬಂದಾಗ ನನಗೆ ಭಾರತದ ಕೌಟುಂಬಿಕ ಜೀವನವೇ ಶ್ರೇಷ್ಠ ಎಂದು ಅನ್ನಿಸಿತು. ಇದಕ್ಕೆ ಕಾರಣ ಪಾಶ್ಚಾತ್ಯರು ವೈಜ್ಞಾನಿಕ ಪ್ರಗತಿ ಸಾಧಿಸಿರಬಹುದು. ಆರ್ಥಿಕವಾಗಿ ಶ್ರೀಮಂತರಾಗಿರಬಹುದು. ಆದರೆ ಅಲ್ಲಿಯ ಕುಟುಂಬ ವ್ಯವಸ್ಥೆ ಕುಸಿದುಬಿದ್ದಿದೆ. ಭಾರತೀಯರು ಆರ್ಥಿಕವಾಗಿ ಬಡವರು ಆದರೆ ನೈತಿಕವಾಗಿ ಶ್ರೀಮಂತರು. ಇದು ಪ್ರಪಂಚ ಸುತ್ತಿದಾಗ ಹೆಚ್ಚು ಮನವರಿಕೆ ಆಯಿತು. ಅಲ್ಲಿಯ ಅನಿರ್ಬಂಧಿತ ವಿವಾಹ ವಿಚ್ಛೇದನಗಳು, ಕೌಟುಂಬಿಕ ಜೀವನದ ಶಾಂತಿ ಸಂತೋಷಗಳನ್ನು ನಾಶಪಡಿಸಿವೆ. ನೈತಿಕ ಜೀವನದ ಉತ್ತಮ ಮಾದರಿಗಳು ನಮ್ಮ ಭಾರತೀಯ ಜೀವನದಲ್ಲಿ ನನಗೆ ಹೆಚ್ಚು ಕಾಣಿಸುತ್ತವೆ.

**ಭಾರತೀಯ ಸಂಸ್ಕೃತಿಯ ಬಗ್ಗೆ ನೀವು ಪಾಶ್ಚಾತ್ಯರಾಷ್ಟ್ರಗಳಲ್ಲಿ ಉಪನ್ಯಾಸ ಮಾಡಿದಿರಿ ಇದಕ್ಕೆ ಅವರ ಪ್ರತಿಕ್ರಿಯೆ ಯಾವುದು?**

ಭಾರತೀಯ ಸಂಸ್ಕೃತಿಯ ಬಗ್ಗೆ ನಾನು ವಿದೇಶಗಳಲ್ಲಿ ಅಭಿಮಾನದಿಂದ ಉಪನ್ಯಾಸ ಮಾಡಿದಾಗ ಅದಕ್ಕೆ ವಿದೇಶೀಯರ ಪ್ರತಿಕ್ರಿಯೆ ಅದ್ಭುತವಾಗಿದೆ. ಪಾಶ್ಚಾತ್ಯರು ನಮ್ಮ ಸಂಸ್ಕೃತಿಯ ಆದರ್ಶಗಳನ್ನು ಕೇಳಿ ಅಚ್ಚರಿ ವ್ಯಕ್ತಪಡಿಸಿದರು. ಇಂಡಿಯಾದ ಬಗೆಗೆ ನಾವು ತಿಳಿದುಕೊಳ್ಳುವುದು ಬಹಳವಿದೆ ಎಂದು ಹೇಳುತ್ತಾರೆ. ತಾವು ಸಾಧಿಸಿದ ವೈಜ್ಞಾನಿಕ ಪ್ರಗತಿ ಅದು ಭೌತಿಕ ಪ್ರಗತಿ ಆದರೆ ಭಾರತೀಯರು ಅದರಾಚೆ ಹೋಗಿ ಆಧ್ಯಾತ್ಮಿಕ ಸಾಧನೆ ಮಾಡಿದ್ದನ್ನು ಕೇಳಿ ಅವರು ಚಕಿತರಾಗುತ್ತಾರೆ.

**ನಿಮ್ಮ ವೈಚಾರಿಕ ಚಿಂತನ ಸ್ವರೂಪವನ್ನು ವಿವರಿಸುವಿರಾ?**

ಚಿಂತನಶೀಲತೆ ನನ್ನ ಬದುಕಿನ ಬಹುಮುಖ್ಯ ಭಾಗ. ಆಗಾಗ ನಾನು ನನ್ನ ಲೇಖನ, ಉಪನ್ಯಾಸಗಳಲ್ಲಿ ವಿವಿಧ ವಿಷಯಗಳ ಕುರಿತು ಚಿಂತನೆ ನಡೆಸಿದ್ದುಂಟು. ನಮ್ಮ ಸಂಸ್ಕೃತಿ ಪರಂಪರೆ, ಸಾಮಾಜಿಕ ನ್ಯಾಯ,

ರಾಷ್ಟ್ರೀಯ ಏಕತೆ, ದೇಶಭಕ್ತಿ, ಕನ್ನಡಪ್ರಜ್ಞೆ-ಇವುಗಳ ಬಗ್ಗೆ ನನ್ನ ದೃಷ್ಟಿಕೋನವನ್ನು ನಾನು ವ್ಯಕ್ತಪಡಿಸಿದ್ದೇನೆ. ನನ್ನ ಅಂಕಣ ಬರಹ, ಕಥೆ, ಕವನ ಮತ್ತು ಲಲಿತಪ್ರಬಂಧಗಳನ್ನು ನೀವು ನೋಡಬೇಕು ಅದರಲ್ಲಿ ಈ ವಿಚಾರವಿದೆ.

**ನಿಮ್ಮ ಅಧಿಕಾರಿ ಜೀವನದ ಬಗ್ಗೆ ವಿವರಿಸುವಿರಾ?**

ನಾನು ಕರ್ನಾಟಕದ ಆರು-ಏಳು ಬೇರೆಬೇರೆ ಜಿಲ್ಲೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸಮಾಡಿದ್ದೇನೆ. ಮಂಗಳೂರು, ಉಡುಪಿ, ಗುಲ್ಬರ್ಗ, ವಿಜಾಪುರ, ರಾಯಚೂರು, ಕೊಪ್ಪಳ, ಬೆಳಗಾವಿ, ಬೆಂಗಳೂರು ಹೀಗೆ ವಿವಿಧ ಜಿಲ್ಲೆಗಳಲ್ಲಿ ನಾನು ಸಂತೋಷದಿಂದಲೇ ಕಾರ್ಯ ಮಾಡಿದ್ದೇನೆ. ನನ್ನ ಮೇಲಧಿಕಾರಿಗಳು ಉತ್ತಮ ಆಡಳಿತ ಮಾಡಲು ನನಗೆ ಪ್ರೇರಕರಾಗಿದ್ದಾರೆ. ಅವರಲ್ಲಿ ಕೆಲವರ ಹೆಸರನ್ನಾದರೂ ನಾನು ಹೇಳಬೇಕು. ಎಸ್.ವಿ.ರಂಗನಾಥ, ಅರವಿಂದ ಜಾಧವ, ಸಿ.ಎಸ್. ಕೇದಾರ್, ಅನೂಪ್ ಪೂಜಾರಿ, ಜ್ಯೋತಿ ರಾಮಲಿಂಗಂ, ಪ್ರದೀಪಸಿಂಗ್ ಖರೋಲಾ, ಇವರ ಮಾರ್ಗದರ್ಶನ ನನಗೆ ಲಭಿಸಿತು. ಸರಕಾರದ ಯೋಜನೆಗಳು ಕಾರ್ಯರೂಪಕ್ಕೆ ಬರಲು ನಾನು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ.

**ನಿಮ್ಮ ಅಧಿಕಾರಿ ಜೀವನದ ಯಶಸ್ಸಿನ ಒಳಗುಟ್ಟೇನು?**

ನಾನು ರಾಜ್ಯದ ಆಡಳಿತದ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದೇನೆ. ಎಲ್ಲ ಹುದ್ದೆಗಳಲ್ಲೂ ನನಗೆ ಸಮಾನವಾದ ಪ್ರೀತಿ, ಶ್ರದ್ಧೆ ಇದೆ. ಅಧಿಕಾರಿಗಳಾದವರು ಯಾವುದೇ ಆಸೆ, ಒತ್ತಡಗಳಿಗೆ ಒಳಗಾಗಬಾರದು. ಜಾತಿ, ಧರ್ಮ, ಪಕ್ಷ ಇವುಗಳನ್ನು ಮೀರಿ ಕೆಲಸಮಾಡಬೇಕು. ಎಲ್ಲರನ್ನೂ ಸರಿಸಮಾನವಾಗಿ ಕಾಣಬೇಕು. ನಿಗದಿತ ಕೆಲಸವನ್ನು ನಿಷ್ಠೆ ಮತ್ತು ಶ್ರದ್ಧೆಯಿಂದ ಕಾಲಮಿತಿಯೊಳಗೆ ಮುಗಿಸಬೇಕು. ನನ್ನ ಮೂವತ್ತೆರಡು ವರ್ಷಗಳ ಸೇವೆಯಲ್ಲಿ ಅಂದಿನ ಕಡತ ಮುಂದಿನ ದಿನಕ್ಕೆ ನಾನು ಎಂದೂ ಒಯ್ದಿಲ್ಲ. ಅಂದೇ ಮುಗಿಸುವುದು ನನ್ನ ಜಾಯಮಾನ, ಸಾರ್ವಜನಿಕರೊಡನೆ ನೇರಸಂಪರ್ಕ ಸಾಧಿಸುವುದು, ಸಮಸ್ಯೆಯನ್ನು ಅರಿತುಕೊಂಡು ತಕ್ಷಣ ಸ್ಪಂದಿಸುವದೇ ನನ್ನ ಸ್ವಭಾವ. ಇದರಿಂದ ನಾನು ಸೇವಾಜೀವನದಲ್ಲಿ ತೃಪ್ತನಾಗಿದ್ದೇನೆ. ಮೊದಲು ನಾವು ಒಳ್ಳೆಯವರಾಗಿದ್ದರೆ ಉಳಿದವರೂ ಒಳ್ಳೆಯವರಾಗಿರುತ್ತಾರೆ ಎಂದು ನಂಬಿದವ ನಾನು. ಜನರ ಕೂಡ ಬೆಳೆದಿದ್ದರಿಂದ ಅವರ ಸಮಸ್ಯೆ ಅರಿಯುವುದು ಕಷ್ಟವೇನಲ್ಲ. ಹಾಗೆಯೇ ಎಲ್ಲರ ಸಹಕಾರ ನನಗೆ ಸಿಕ್ಕಿದೆ.

**ನಿಮ್ಮ ಕಥಾಸಾಹಿತ್ಯದ ವಿಶಿಷ್ಟತೆ ಯಾವುದು?**

ಗಾಢವಾದ ಮನುಷ್ಯ ಸಂಬಂಧ, ಸಾಮಾಜಿಕ ಜೀವನವಿನ್ಯಾಸದ ಬಗ್ಗೆ ನನ್ನ ಮೊದಲ ಆಸಕ್ತಿ. ನಾನು ಕುಸ್ತಿಪೈಲವಾನರ ಜೀವನದ ಬಗ್ಗೆ ಕಥೆ ಬರೆದಾಗ ಖ್ಯಾತ ವಿಮರ್ಶಕರಾದ ಕೀರ್ತಿನಾಥ ಕುರ್ತುಕೋಟಿ ಅವರು ಓದಿ ಪ್ರಶಂಸಿಸಿದರು. ಗ್ರಾಮೀಣ ಸಮಾಜದ ಇಂತಹ ಅಗೋಚರ ಪಾತ್ರಗಳ ಬಗ್ಗೆ ನನ್ನ ಬಳಿ ಸಾಮಗ್ರಿ ಇದೆ. ಅದಕ್ಕೆ ಆಗಾಗ ಕಲಾತ್ಮಕ ಸ್ವರೂಪ ಕೊಡುತ್ತಬಂದಿದ್ದೇನೆ. ಕೇವಲ ಗ್ರಾಮೀಣ ಮಾತ್ರ ಅಲ್ಲ ನಗರ ಜೀವನದ ವಸ್ತುವನ್ನೂ ನನ್ನ ಹಲವಾರು ಕಥೆಗಳಲ್ಲಿ ಚಿತ್ರಿಸಿದ್ದನ್ನು ಕಾಣಬಹುದು.

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ನಿಮ್ಮ ಅನುಭವಗಳನ್ನು ತಿಳಿಸುವಿರಾ?**

ಕನ್ನಡ ಮತ್ತು ಸಂಸ್ಕೃತಿ ನನಗೆ ಪ್ರಿಯವಾದ ಕ್ಷೇತ್ರ ಇದರಲ್ಲಿ ಕಾಯಾವಾಚಾಮನಸಾ ನಾನು ತೊಡಗಿಸಿಕೊಂಡಿದ್ದೇನೆ. ಸಂಪೂರ್ಣ ಪಾರದರ್ಶಕತೆ, ಪರಿಪೂರ್ಣನಿಷ್ಠೆ ಶ್ರದ್ಧೆಯಿಂದ ಕೆಲಸ ಮಾಡುತ್ತ ಬಂದಿದ್ದೇನೆ. 2008-2009ನೆಯ ವರ್ಷದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶೇಕಡಾ 111ರಷ್ಟು ಪ್ರಗತಿ ಸಾಧಿಸಿದೆ ಎಂದು ಯೋಜನಾ ಇಲಾಖೆಯೆ ಹೇಳಿರುವುದು ಸಂಸ್ಕೃತಿ ಇಲಾಖೆಗೆ ಹೆಮ್ಮೆಯ ವಿಷಯ. ಈಗ ಇಲಾಖೆಯ ಅನುದಾನ ಹಿಂದಿಗಿಂತಲೂ ಹತ್ತಾರುಪಟ್ಟು ಹೆಚ್ಚಾಗಿದೆ. ಕಾರ್ಯಭಾರ ವಿಪರೀತವಾಗಿದೆ. ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅನೇಕ ಮಹತ್ವದ ಯೋಜನೆಗಳನ್ನು ಕೈಗೊಂಡಿದೆ. ಇವುಗಳಲ್ಲಿ ನಮ್ಮ ಅಗ್ರ ಲೇಖಕರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸುವ ಕೆಲಸ ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಿಗೆ ತಲಾ ಒಂದು ಲಕ್ಷ ಅನುದಾನ ನೀಡಲು ಪ್ರಾರಂಭಿಸಿದ್ದು ಇಲ್ಲಿ ಉಲ್ಲೇಖನೀಯ. ಈ ಮಾಲಿಕೆಯಲ್ಲಿ ಅ.ನ.ಕೃ, ಶಿವರಾಮಕಾರಂತ, ನಾಶ್ರೀರಾಜಪುರೋಹಿತ, ಕೆ.ಎಸ್.ನರಸಿಂಹಸ್ವಾಮಿ, ಆಲೂರು ವೆಂಕಟರಾವ್, ಅಡಿಗ, ಡಿ.ಎಸ್.ಕರ್ಕಿ, ಚೆನ್ನವೀರ ಕಣವಿ, ಕುರ್ತಕೋಟಿ, ಜಿ.ಎಸ್.ಶಿವರುದ್ರಪ್ಪ, ಎಲ್.ಎಸ್.ಶೇಷಗಿರಿರಾವ್ ಕಡಿದಾಳ ಮಂಜಪ್ಪ, ಗೋಕಾಕ ಮೊದಲಾದವರ ಸಮಗ್ರ / ಪ್ರಮುಖ ಸಾಹಿತ್ಯ ಪ್ರಕಟಣೆಯಾಗಿದೆ/ಯಾಗುತ್ತಲಿದೆ. ಅನಕೃ ಟ್ರಸ್ಟಿಗೆ ಬೆಂಗಳೂರಿನ ಜೆಪಿ ನಗರದಲ್ಲಿ ಹಲವು ಕೋಟಿ ರೂಪಾಯಿ ಬೆಲೆಬಾಳುವ ಸುಮಾರು 14 ಗುಂಟೆ ನಿವೇಶನ ಒದಗಿಸಲಾಗಿದೆ. ಚೆನ್ನೈನಲ್ಲಿ ಸರ್ವಜ್ಞ, ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆಗಳು ಅನಾವರಣವಾಗಿ ಎರಡೂ ರಾಜ್ಯಗಳ ಸೌಹಾರ್ದ ಬೆಸೆಯುವಲ್ಲಿ ಮನು ಅವರದು ಸ್ವಲ್ಪ ಪಾತ್ರವಿದೆ ಎಂದು ಜನರು ಹೇಳಿದಾಗ ಹೃದಯ ತುಂಬಿ ಬರುತ್ತದೆ. ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರಕಿಸಿಕೊಳ್ಳಲು, ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರ ನೇತೃತ್ವದಲ್ಲಿ ಒಯ್ದ ನಿಯೋಗದ ತಂಡದಲ್ಲಿ ನಾನಿದ್ದುದು, ಸನ್ಮಾನ್ಯ ರಾಷ್ಟ್ರಪತಿಗಳನ್ನು, ಭಾರತದ ಗೃಹಸಚಿವರನ್ನು, ಮಾನ್ಯ ಶ್ರೀ ಅದ್ವಾನಿಯವರನ್ನು ಭೇಟಿಯಾದುದು ನನ್ನ ಸುಕೃತವೆಂದೇ ಹೇಳಬಹುದು. ಆ ಗಣ್ಯರಿಗೆ ನೀಡಿದ ಮನವಿಪತ್ರ ತಯಾರಿಸುವಲ್ಲಿ ಹಿರಿಯ ವಿದ್ವಾಂಸರಾದ ಡಾ.ಎಂ.ಚಿದಾನಂದಮೂರ್ತಿ ಹಾಗೂ ಡಾ.ಎಲ್.ಎಸ್.ಶೇಷಗಿರಿರಾವ್ ಅವರಿಗೆ ಸಹಾಯಕನಾಗಿ ಕೆಲಸ ಮಾಡುವ ಭಾಗ್ಯ ಸಿಕ್ಕಿದ್ದೂ ನನ್ನ ಜೀವನದ ಮಹತ್ವದ ಪ್ರಸಂಗ ಎಂದೇ ಭಾವಿಸಿದ್ದೇನೆ. (ಈ ನಿಯೋಗದಲ್ಲಿ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ನನ್ನ ತಮ್ಮ ವೀರಣ್ಣನೂ ಇದ್ದುದೊಂದು ಯೋಗಾಯೋಗ). ಮಹಾನ್ ಸ್ವಾತಂತ್ರ್ಯ ಹೋರಾಟಗಾರರಾದ ಹರ್ಡೇಕರ್ ಮಂಜಪ್ಪ, ಹುತಾತ್ಮ ಮೈಲಾರ ಮಹಾದೇವಪ್ಪ, ಕರ್ನಾಟಕ ಕೇಸರಿ ಗಂಗಾಧರರಾವ್ ದೇಶಪಾಂಡೆ, ಶೂರ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್, ಅನಕೃ, ಕುವೆಂಪು, ಗಂಗೂಬಾಯಿ ಹಾನಗಲ್, ಸವಾಯಿ ಗಂಧರ್ವ, ಬಸವರಾಜ ರಾಜಗುರು, ತೇಜಸ್ವಿ,ಎಸ್.ಎಂ. ಪಂಡಿತ್ ಮುಂತಾದವರ ಸ್ಮಾರಕಗಳ ನಿರ್ಮಾಣ, ಅಭಿವೃದ್ಧಿ ಹಾಗೂ ಇತರ ಸಾಂಸ್ಕೃತಿಕ

ಕಟ್ಟಡಗಳ ಕೆಲಸದಲ್ಲಿ ಭಾಗಿಯಾಗುವದು ಆತ್ಮತೃಪ್ತಿ ನೀಡಿರುವಂತಹದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಾಧನೆಗೆ ಸರ್ಕಾರದ ಕಾರ್ಯದರ್ಶಿ ಜಯರಾಮರಾಜೇ ಅರಸುರವರು ಹಾಗೂ ನನ್ನ ಇಲಾಖೆಯ ಎಲ್ಲ ಅಧಿಕಾರಿ ವರ್ಗದವರು, ಸಿಬ್ಬಂದಿ ಕಾರಣರಾಗಿದ್ದಾರೆ. ಅವರ ಪ್ರೀತಿ ವಿಶ್ವಾಸ ದುಡಿಮೆ ಅನನ್ಯವಾದದ್ದು,

**ನಿಮ್ಮ ಕುಟುಂಬ ಜೀವನದ ಬಗ್ಗೆ ತಿಳಿಸುವಿರಾ?**

ನನ್ನ ಮದುವೆ ಸೌ. ಮಾಯಾದೇವಿ ಅವರೊಂದಿಗೆ 1983ರಲ್ಲಿ ಆಯಿತು. ನಮ್ಮದು ಸುಖೀದಾಂಪತ್ಯ ಜೀವನ ನಮ್ಮ ಮಗಳು ಮೇಘಾ ದಂತವೈದ್ಯ ಅಭ್ಯಾಸ ಮಾಡುತ್ತಿದ್ದಾಳೆ. ಮಗ ಮಯೂರವರ್ಮ ಬೆಂಗಳೂರಿನ ಇನ್‌ಫೋಸಿಸ್‌ನಲ್ಲಿ ಇಂಜಿನಿಯರ್ ಆಗಿದ್ದಾನೆ. ನಮ್ಮದು ಸುಸಂಸ್ಕೃತ ಹಾಗೂ ಸಾಹಿತ್ಯಾರಾಧಕರ ಕುಟುಂಬ. ನನ್ನ ತಮ್ಮಂದಿರಾದ ವೀರಣ್ಣ, ಶಿವಲಿಂಗು, ಡಾ. ಶಿವಯೋಗಿ, ಡಾ. ವಿಶ್ವನಾಥ ಎಲ್ಲರೂ ಕವಿತೆ, ಕಥೆ, ಲೇಖನ ಬರೆಯುತ್ತಾರೆ. ಇನ್ನೊಬ್ಬ ತಮ್ಮ ಸದಾಶಿವ (ಈಗ ಚೆನ್ನೈನಲ್ಲಿ ಬಹುರಾಷ್ಟ್ರೀಯ ಕಂಪನಿಯೊಂದರ ಉಪಾಧ್ಯಕ್ಷ) ಅಭಿನಯ ಚತುರ, ನಮ್ಮ ತಂದೆ ತಾಲ್ಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದರು, ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿದ್ದರು. ಆದರೆ ರಾಜಕೀಯ ವೃತ್ತಿಯಾಗಬಾರದು ಎಂಬುದು ಅವರ ಆಶಯವಾಗಿತ್ತು. ಹೀಗೆ ನಾವು ರಾಜಕೀಯದಿಂದ ದೂರ ಇದ್ದುಕೊಂಡೆ ಜನಹಿತ ಕಾರ್ಯಗಳನ್ನು ಮಾಡಲು ಅವರು ಪ್ರೇರಣೆ ನೀಡಿದರು.

**ನಿಮ್ಮ ಜೀವನದೃಷ್ಟಿ ಯಾವುದು?**

ಏನನ್ನೇ ಮಾಡಿದರೂ ಉತ್ಕೃಷ್ಟವಾಗಿ ಮಾಡಬೇಕು. ಆತ್ಮತೃಪ್ತಿ ಮತ್ತು ಜನಮೆಚ್ಚುಗೆ ಎರಡೂ ಆಗುವಂತೆ ಇರಬೇಕು. ಉಪದೇಶ ಮಾಡದೆ ನಡೆದು ತೋರಿಸಬೇಕು. ಎಲ್ಲರಲ್ಲಿ ಪ್ರೀತಿ ವಿಶ್ವಾಸವಿಟ್ಟು ಸ್ನೇಹಸೌಹಾರ್ದದಿಂದ ಬಾಳಿದರೆ ಜೀವನ ಆನಂದಮಯವಾಗುತ್ತದೆ. ಆಷಾಢಭೂತಿತನ ಎಂದಿಗೂ ಸಲ್ಲದು. ನೇರ ಹಾಗೂ ಸ್ಪಷ್ಟ ನಡೆನುಡಿ ಇರಬೇಕು. ಮಾನವ ಸಂಬಂಧಗಳನ್ನು ಬೆಸೆಯುವ ಸಾಹಿತ್ಯ, ಸಂಗೀತ ಮತ್ತು ಕಲೆಗಳ ಪ್ರೀತಿಯನ್ನು ನಾವು ಬೆಳೆಸಿಕೊಳ್ಳಬೇಕು. ಇದಕ್ಕಾಗಿ ನನ್ನ ಕವನಗಳ ಕೆಲವೊಂದು ಸಾಲುಗಳನ್ನು ಇಲ್ಲಿ ನೆನಪಿಸಿಕೊಳ್ಳೋಣ.

**ಅರಿವಿಲ್ಲದ ವಚನದೋದು**
**ಬರಿಮೈಯ ಪರಚಿದಂತೆ**
**ನಡೆಯಿಲ್ಲದ ನುಡಿ ಬೋಕಿಯೊಳಗಣ ಹುಳು**
**ಗುಂಯ್‌ಗುಟ್ಟಿದಂತೆ**
**ಒಸರಲಿ ಸಮತೆಯ ಸಣ್ಣ ಸೆಲೆ ಕೊಚ್ಚಿ ಹೋಗಲಿ ಜಾತಿ**
**ವಿಜಾತಿಯ ಕೊಳೆ**
**ಹೊಸ ವರುಷ ಬರುವಾಗ ಎದೆಯು ಹದವಾಗಿರಲಿ**
**ಮೊಳಕೆಯೊಡೆಯಲಲ್ಲ ನೀತಿ ನಿಷ್ಪತ್ತಿಯ ಬೆಳೆ.**

**ಹೊಸವರುಷ ಬರುವಾಗ – 2006.**

## 2. ಮನು ಬಳಿಗಾರ್

**ಕೃಪೆ ಹಾಗೂ ಸಂದರ್ಶನ ವಿಜಯವಾಣಿ, 04-10-2016**

**1. ಕಸಾಪ ಅಧ್ಯಕ್ಷರಾಗಿ ಅಧಿಕೃತ ಘೋಷಣೆಯೊಂದೇ ಬಾಕಿಯಿದೆ. ನಿಮ್ಮ ಗೆಲುವಿಗೆ ಕಾರಣ ಏನು?**

ನಾನು 38 ವರ್ಷಗಳ ಕಾಲ ಸರ್ಕಾರಿ ಸೇವೆಯಲ್ಲಿ ತೊಡಗಿದ್ದೆ. ಈ ಸಮಯದಲ್ಲಿ ದಕ್ಷತೆ, ಕ್ರಿಯಾಶೀಲತೆ, ಜಾತ್ಯತೀತ ಮನೋಧರ್ಮ, ಬಡವರು-ನೊಂದವರಿಗೆ ಮೊದಲು ಮಿಡಿಯುವ ಮನ, ಸಮಾಜದ ಆಶೋತ್ತರಗಳಿಗೆ ಸ್ಪಂದಿಸುವ ಗುಣ, ಯಾವುದೇ ಪ್ರದೇಶ ಅಥವಾ ಗುಂಪಿಗೆ ಸೀಮಿತವಾಗದೆ ಸೇವೆ ಮಾಡಿದ್ದೇನೆ. ಇವೆಲ್ಲವನ್ನೂ ಹತ್ತಿರದಿಂದ ಗಮನಿಸುತ್ತಿದ್ದವರ ಆಶೀರ್ವಾದದ ಫಲದಿಂದ ವಿಜೇತನಾಗಿದ್ದೇನೆ.

**2. ಕಸಾಪ ಅಧ್ಯಕ್ಷರಾಗಿ ನಿಮ್ಮ ಮೊದಲ ಆದ್ಯತೆಗಳೇನು?**

ಈ ಹಿಂದಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರು ಆರಂಭಿಸಿದ ಅನೇಕ ಯೋಜನೆಗಳನ್ನು ಮುಂದುವರಿಸುತ್ತೇನೆ. 27ರ ಪೈಕಿ 8 ಮಾತ್ರ ಮುದ್ರಣವಾಗಿರುವ ಸಾಹಿತ್ಯ ಚರಿತ್ರೆ ಸಂಪುಟದ ಮುದ್ರಣ ಪೂರ್ಣಗೊಳಿಸುವಿಕೆ, ನಿಘಂಟಿಗೆ ಶಬ್ದಗಳನ್ನು ಸೇರಿಸುವ ನಿಘಂಟು ಕೇಂದ್ರ ಸ್ಥಾಪನೆ, ಶತಮಾನೋತ್ಸವ ಭವನವನ್ನು ನನ್ನ ಅವಧಿಯಲ್ಲಿ ಸಂಪೂರ್ಣಗೊಳಿಸಲು ಮೊದಲ ಆದ್ಯತೆ.

**3. ಮುಂದೂಡಲ್ಪಟ್ಟಿರುವ ಕನ್ನಡ ಸಾಹಿತ್ಯ ಸಮ್ಮೇಳನ ಯಾವಾಗ ನಡೆಯಲಿದೆ?**

ಈ ಕುರಿತು ಕಾರ್ಯಕಾರಿ ಸಮಿತಿಯ ಮುಂದೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇನೆ.

**4. ನಿಮ್ಮ ಗೆಲುವಿಗೆ ಯಾರಾರು ಕಾರಣರು?**

ಎಲ್ಲರ ಹೆಸರನ್ನೂ ಹೇಳಿದರೆ ಬರೆಯಲು ಸ್ಥಳವಿಲ್ಲ (ನಗುತ್ತಾ). ಸದ್ಯಕ್ಕೆ ಹೆಸರಿಸಬಹುದಾದವರೆಂದರೆ 103 ವರ್ಷದ ಪ್ರೊ. ಜೀವಿ, 99ರ ಹರೆಯದ ದೇಜಗೌ, 97 ವರ್ಷದ ಪಾಪು, ಡಾ.ಚಿಮೂ, ಎಲ್‌ಎಸ್‌ಎಸ್, ಡಾ. ಬರಗೂರು ರಾಮಚಂದ್ರಪ್ಪ, ಡಾ.ಸಿದ್ದಲಿಂಗಯ್ಯ, ಡಾ.ಜಿ.ಎಸ್.ಸಿದ್ದಲಿಂಗಯ್ಯ, ಡಾ.ಹಂಪನಾ, ಈ ಹಿಂದಿನ ಅಧ್ಯಕ್ಷರುಗಳಾದ ಪ್ರೊ. ಚಂಪಾ, ಹರಿಕೃಷ್ಣ ಪುನರೂರು, ಗೊರುಚ ಹಾಗೂ ಪುಂಡಲೀಕ ಹಾಲಂಬಿಯವರ ಬೆಂಬಲವಿದೆ. ಎಲ್ಲಾ ಸಾಹಿತಿಗಳ, ಕಲಾವಿದರ, ಹೋರಾಟಗಾರರು ಬೆನ್ನಿಗಿದ್ದದ್ದರಿಂದಲೇ ಈ ಗೆಲುವು ದಕ್ಕಿದ್ದು.

* * * * *

# 3. ಕನ್ನಡ ಭಾಷೆ-ಕನ್ನಡಿಗರಿಗೆ ಗೌರವ ತರುವ ಕೆಲಸ ಮಾಡುತ್ತೇನೆ

_ ಕೃಪೆ ಹಾಗೂ ಸಂದರ್ಶನ ವಿಜಯ ಕರ್ನಾಟಕ,

ಮಂಗಳವಾರ ಮಾರ್ಚ್, 1, 2016

ಬಿ.ಎಸ್.ಜಯಪ್ರಕಾಶ್ ನಾರಾಯಣ, ಬೆಂಗಳೂರು

"ರಾಜ್ಯದ ಜನರು ನನ್ನ ಮೇಲಿಟ್ಟಿರುವ ನಂಬಿಕೆಯ ಪ್ರತೀಕ. ಇವನಿಗೆ ಮತ ಹಾಕಿದರೆ ಕನ್ನಡದ ಕೆಲಸಗಳು ಆಗುತ್ತವೆ ಎನ್ನುವ ಜನರ ವಿಶ್ವಾಸ ಇದರ ಹಿಂದಿದೆ. ಇದಕ್ಕೆ ನಾನು ಆಭಾರಿ. ಇದಕ್ಕೆ ತಕ್ಕಂತೆ, ಕನ್ನಡಿಗರಿಗೆ ಗೌರವ ತರುವ ಹಾಗೆ ನಾನು ನಡೆದುಕೊಳ್ಳುತ್ತೇನೆ."

ಇದು ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಗೆಲುವಿನ ಹೊಸ್ತಿಲಲ್ಲಿ ಇರುವ ನಿವೃತ್ತ ಕೆಎಎಸ್ ಅಧಿಕಾರಿ ಮನು ಬಳಿಗಾರ್ ಅವರ ಮನದಾಳದ ಮಾತು. ವಿಜಯ ಕರ್ನಾಟಕದ ಜತೆ ಮಾತನಾಡಿದ ಬಳಿಗಾರ್ ಹೇಳಿದ್ದಿಷ್ಟು.

**1. ನೀವು ಅಭೂತಪೂರ್ವವಾದ ಗೆಲುವನ್ನು ಸಾಧಿಸಿ, ಪರಿಷತ್‌ನ ಚುಕ್ಕಾಣಿ ಹಿಡಿಯುತ್ತಿದ್ದೀರಿ. ನಿಮ್ಮ ಮೊದಲ**

**ಆದ್ಯತೆ ಏನು?**

ಪರಿಷತ್ತಿನಲ್ಲಿ ಈಗಾಗಲೇ ಉತ್ತಮವಾದ ಅನೇಕ ಯೋಜನೆಗಳು ಜಾರಿಯಲ್ಲಿವೆ. ನಾನು ಅವಕ್ಕೆ ಯಾವ ಚ್ಯುತಿಯನ್ನೂ ತರದೆ ಮುಂದುವರಿಸಿಕೊಂಡು ಹೋಗುತ್ತೇನೆ. ಇದರ ಜತೆಗೆ ನನಗೂ ಸಾಕಷ್ಟು ಕನಸುಗಳಿವೆ. ಅಧಿಕಾರ ಸ್ವೀಕರಿಸಿದ ನಂತರ, ಎಲ್ಲ ಕೋನಗಳಿಂದಲೂ ಪರಿಶೀಲಿಸಿ, ಜಾರಿಗೆ ತರಲು ಪ್ರಯತ್ನಿಸುತ್ತೇನೆ.

**2. ಪರಿಷತ್ತಿನ ಅಮೂಲ್ಯ ಗ್ರಂಥಗಳ ಡಿಜಿಟಲೀಕರಣದಲ್ಲಿ ನಿಮಗೆ ಏನಾದರೂ ಹೊಸ ಆಲೋಚನೆ ಇದೆಯೇ?**

ಈ ಬಗ್ಗೆ ಈಗಲೇ ಏನನ್ನೂ ಹೇಳಲಾರೆ. ಆದರೆ, ಡಿಜಿಟಲೀಕರಣ ಅವಶ್ಯವೆನಿಸಿದರೆ ಖಂಡಿತವಾಗಿಯೂ ನಾನು ಈ ನಿಟ್ಟಿನಲ್ಲಿ ಮುಂದಡಿ ಇಡುತ್ತೇನೆ.

**3. ಪರಿಷತ್ತು ಕೇವಲ ಸಮ್ಮೇಳನಕ್ಕೆ ಮಾತ್ರ ಅಂಟಿಕೊಂಡಿದೆ ಎನ್ನುವ ಅಭಿಪ್ರಾಯವಿದೆ. ಇದಕ್ಕೇನಾದರೂ ಕಾಯಕಲ್ಪ ಮಾಡುವ ಹಂಬಲವಿದೆಯೇ?**

ಪರಿಷತ್ತು ಕೇವಲ ಸಮ್ಮೇಳನ ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ ಅನ್ನುವುದು ತಪ್ಪು ಕಲ್ಪನೆ. ಪರಿಷತ್ತು ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಸಮಗ್ರ ತಿಳಿವಳಿಕೆ ಇಲ್ಲದವರು ಮಾತ್ರ ಇಂಥ ಆರೋಪಗಳನ್ನು ಮಾಡುತ್ತಿದ್ದಾರೆ. ಪರಿಷತ್ತು ಪ್ರತಿ ತಿಂಗಳೂ 2-3 ವಿಚಾರ ಸಂಕಿರಣ, ಕಮ್ಮಟಗಳು ಇತ್ಯಾದಿಗಳನ್ನು ನಡೆಸುತ್ತಲೇ ಇದೆ. ಇವು ಕೂಡ ತುಂಬಾ ಮುಖ್ಯ.

**4. ನಿಘಂಟು ಯೋಜನೆಗೆ ಮರುಜೀವ ತುಂಬುವ ಬಗ್ಗೆ ಏನಾದರೂ ಯೋಚಿಸಿದ್ದೀರಾ?**

ಹೌದು, ನಿಘಂಟು ಕೆಲಸಕ್ಕೆ ಮತ್ತೆ ಜೀವತುಂಬುವ ಕನಸು ನನಗಿದೆ. ಒಂದು ಶಬ್ದಕೋಶವನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡಬೇಕಾದ್ದು ಅತ್ಯಗತ್ಯ. ಈ ಬಗ್ಗೆ ಸಮರ್ಥ ತಜ್ಞರನ್ನು ಸಂಪರ್ಕಿಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

**5. ಒಬ್ಬ ಅಧ್ಯಕ್ಷರ ಅವಧಿಯಲ್ಲಿ ಒಂದೇ ಸಮ್ಮೇಳನ ಸಾಕೆಂಬ ಮಾತು ಅಲ್ಲಲ್ಲಿ ಕೇಳಿಬಂದಿದ್ದುಂಟು. ಈ ಬಗ್ಗೆ**

**ನಿಮ್ಮ ಆಲೋಚನೆ?**

ಸಮ್ಮೇಳನಗಳು ಪ್ರತೀ ವರ್ಷವೂ ನಡೆದರೆ ಚೆಂದ. ಇಲ್ಲಿಯವರೆಗೂ ಅದು ಹೀಗೆಯೇ ನಡೆದುಕೊಂಡು ಬಂದಿದೆ. ಈ ಹಾದಿಯಲ್ಲೇ ನಾನೂ ಸಾಗುತ್ತೇನೆ.

* * * * *

## 4. ಪ್ರಜಾವಾಣಿ – ಮಂಗಳವಾರ ಮಾರ್ಚ್ 1, 2016

**ಸಾಮಾಜಿಕ ನ್ಯಾಯ ಪಾಲಿಸುತ್ತೇನೆ, ಪರಿಷತ್ತನ್ನು ಎಲ್ಲರ ಸಂಸ್ಥೆಯಾಗಿಸುತ್ತೇನೆ.**

**ಬೆಂಗಳೂರು:** ನೂರು ವಸಂತಗಳನ್ನು ಕಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನ ವಹಿಸಿಕೊಳ್ಳಲು ಮನು ಬಳಿಗಾರ್ ಸಜ್ಜಾಗಿದ್ದಾರೆ.

ಪರಿಷತ್ ಅಧ್ಯಕ್ಷ ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರು ಸುಮಾರು 38 ಸಾವಿರ ಮತಗಳ ಅಂತರದ ಮುನ್ನಡೆ ಪಡೆದಿರುವುದು ಇತ್ತೀಚಿನ ವರ್ಷಗಳಲ್ಲಿ ಇದೇ ಮೊದಲು. ಪರಿಷತ್ತಿಗೆ, ಕನ್ನಡಕ್ಕೆ ತಮ್ಮ ಕಾರ್ಯಕ್ರಮಗಳು ಏನು ಎಂಬುದನ್ನು ಬಳಿಗಾರ್ ಅವರು 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ. ಸಂದರ್ಶನದ ಆಯ್ದ ಭಾಗ ಇಲ್ಲಿದೆ.

**1. ಪರಿಷತ್ತಿನಲ್ಲಿ ಮಹಿಳೆಯರ ಸದಸ್ಯತ್ವ, ತೀರಾ ಕಡಿಮೆ. ಪರಿಷತ್ತು ಎಲ್ಲರನ್ನೂ ಒಳಗೊಳ್ಳುವ ಸಂಸ್ಥೆಯಾಗಿ**

**ಬೆಳೆಯಲು ನಿಮ್ಮ ಪ್ರಯತ್ನ ಏನಿರುತ್ತದೆ?**

ಪರಿಷತ್ತು ಎಲ್ಲರನ್ನೂ ಒಳಗೊಳ್ಳಲು ಈಗಾಗಲೇ ಒಳ್ಳೆಯ ಪ್ರಯತ್ನ ನಡೆಸಿದೆ. ಮಹಿಳೆಯರು ಮತ್ತು ಯುವಕರು ಪರಿಷತ್ತಿನ ಚಟುವಟಿಕೆಗಳಲ್ಲಿ ಹೆಚ್ಚು ಪಾಲ್ಗೊಳ್ಳುವಂತೆ ಮಾಡಲು ಕಾರ್ಯಕ್ರಮ ರೂಪಿಸುತ್ತೇನೆ.

ಸದಸ್ಯರಲ್ಲಿ ಮಹಿಳೆಯರ ಪ್ರಮಾಣ ಈಗ ಶೇಕಡ 18 ರಷ್ಟಿದೆ. ಇದು ಹೆಚ್ಚಬೇಕು. ಪರಿಷತ್ತಿನ ಜೊತೆ ಹೆಚ್ಚಿನ ಪ್ರಮಾಣದಲ್ಲಿ ಗುರುತಿಸಿಕೊಳ್ಳುವಂತೆ ನಾನು ಮಹಿಳಾ ಸಮುದಾಯವನ್ನು ಕೋರುತ್ತೇನೆ.

ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಮಹಿಳೆಗೆ ಒಂದು ಸ್ಥಾನ ಮೀಸಲಿದೆ. ಇದನ್ನು ಹೆಚ್ಚಿಸಲು ಉಪನಿಯಮಗಳಿಗೆ ತಿದ್ದುಪಡಿ ಆಗಬೇಕು. ಆ ಪ್ರಕ್ರಿಯೆ ಆರಂಭಿಸುತ್ತೇನೆ.

ಅಷ್ಟೇ ಅಲ್ಲ, ಪರಿಷತ್ತು ಸಾಮಾಜಿಕ ನ್ಯಾಯ ಪಾಲಿಸಲಿದೆ. ಪ್ರಾದೇಶಿಕ, ಸಾಮಾಜಿಕ ಮತ್ತು ಪ್ರತಿಭಾ ನ್ಯಾಯದ ನೆಲೆಯಲ್ಲೇ ಕೆಲಸ ಮಾಡುತ್ತೇನೆ.

**2. ಯುವಜನರನ್ನು ಪರಿಷತ್ತಿನ ಕಡೆ ಹೇಗೆ ಸೆಳೆಯುತ್ತೀರಿ?**

ಅವರಿಗೆ ಅಭಿರುಚಿ ಇರುವ ಕಾರ್ಯಕ್ರಮಗಳನ್ನು ಪರಿಷತ್ತಿನ ಮೂಲಕ ಆಯೋಜಿಸುತ್ತೇನೆ. ಅಲ್ಲದೆ, ಕನ್ನಡ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ತರುಣರ ಪಾಲ್ಗೊಳ್ಳುವಿಕೆ ಇರುವಂತೆ ಮಾಡುತ್ತೇನೆ.

**3. ಇಂದಿನ ಕಾಲಘಟ್ಟಕ್ಕೆ ಪರಿಷತ್ತು ಎಷ್ಟು ಪ್ರಸ್ತುತ? ಇದು ಸಂವಿಧಾನಿಕ ಸಂಸ್ಥೆ ಅಲ್ಲ. ಆಳುವ ವರ್ಗ ಅಂದರೆ ಸರ್ಕಾರ, ಪರಿಷತ್ತನ್ನು ಗಂಭೀರವಾಗಿ ಪರಿಗಣಿಸಲು ನಿಮ್ಮ ಯೋಜನೆ ಏನು?**

ಈ ಸಂಸ್ಥೆ ಇಂದಿಗೂ ಪ್ರಸ್ತುತ. ಪರಿಷತ್ತನ್ನು ಹೊರತುಪಡಿಸಿದರೆ, ಕನ್ನಡಿಗರದ್ದೇ ಆದ ಪ್ರಾತಿನಿಧಿಕ ಸಂಸ್ಥೆ ಬೇರೆ ಯಾವುದಿದೆ? ನಿಜ. ಈ ಸಂಸ್ಥೆ ಪರ್ಯಾಯ ಸರ್ಕಾರವಾಗಲು ಸಾಧ್ಯವಿಲ್ಲ. ಆದರೆ ಆಳುವ ವರ್ಗ ಪರಿಷತ್ತಿನ ಮಾತನ್ನು ಗಂಭೀರವಾಗಿ ಪರಿಗಣಿಸುವಂತೆ ಒತ್ತಡವನ್ನಂತೂ ಹೇರಬಹುದು. ಅವಶ್ಯ ಬಂದರೆ ಆ ಕೆಲಸ ಮಾಡುತ್ತೇನೆ. ಆದರೆ, ಈ ಹಂತದಲ್ಲಿ ಒತ್ತಾಯದ ಮಾರ್ಗದಿಂದಲೇ ಕೆಲಸ ಮಾಡಬೇಕಾಗುತ್ತದೆಂದು ನನಗೆ ಅನಿಸುತ್ತಿಲ್ಲ. ಸರ್ಕಾರದಲ್ಲಿ ಪ್ರಮುಖ ಹುದ್ದೆಗಳಲ್ಲಿ ಇರುವವರು ನನಗೆ ಪರಿಚಿತರೇ ಆಗಿದ್ದಾರೆ. ಆ ಪರಿಚಯವನ್ನು ಪರಿಷತ್ತಿನ ಕೆಲಸಗಳಿಗಾಗಿ ನಾನು ಬಳಸಿಕೊಳ್ಳುತ್ತೇನೆ.

**4, ಪರಿಷತ್ತು ತನ್ನ ಚಟುವಟಿಕೆಗಳಿಗೆ ಸರ್ಕಾರದ ಹಣ ಪಡೆಯಬಾರದು ಎಂಬ ಮಾತೂ ಇದೆ, ಪಡೆಯಬೇಕು ಎಂಬ ವಾದವೂ ಇದೆ. ಈ ವಿಚಾರದಲ್ಲಿ ನಿಮ್ಮ ನಿಲುವು ಏನು?**

ಸರ್ಕಾರದಿಂದ ಹಣ ಪಡೆಯಬಾರದು ಎಂದು ಏಕೆ ಹೇಳುತ್ತಾರೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇದು ಪ್ರಜಾತಂತ್ರ ಸರ್ಕಾರದ ಹಣ ಜನರ ಹಣ, ಸರ್ಕಾರವೆಂದರೆ ಹೊರಗಿನವರದಲ್ಲ, ಅದು ನಮ್ಮದೇ ವ್ಯವಸ್ಥೆ, ಬ್ರಿಟಿಷರಿಂದ ಆಳಿಸಿಕೊಂಡ ಕಾರಣಕ್ಕೆ, ಸರ್ಕಾರ ಎಂದರೆ ನಮ್ಮದಲ್ಲ; ಹೊರಗಿನದು ಎಂಬ ಭಾವನೆ ಬೆಳೆದಿದೆಯೇನೋ ಅನಿಸುತ್ತದೆ. ಸರ್ಕಾರದ ಹಣ ಬೇರೆಯವರದ್ದು ಎಂದೇಕೆ ತಿಳಿಯಬೇಕು. ಅದು ಕನ್ನಡಿಗರದ್ದೇ ಅಲ್ಲವೇ? ನನ್ನ ಅವಧಿಯಲ್ಲಿ ಪರಿಷತ್ತು ಸರ್ಕಾರದ ಜೊತೆ ಅತ್ಯಂತ ಸೌಹಾರ್ದ ಸಂಬಂಧ ಹೊಂದಿರಲಿದೆ.

ಸರ್ಕಾರ ನನ್ನ ಪಾಲಿನ ತವರು ಮನೆ. ಅದರ ಜೊತೆ ಖಂಡಿತ ಒಳ್ಳೆಯ ಸಂಬಂಧ ಇಟ್ಟುಕೊಳ್ಳುತ್ತೇನೆ.

**5. ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರದ ಪರಿಣಾಮಗಳನ್ನು ಪರಿಷತ್ತಿನ ಅಧ್ಯಕ್ಷರಾಗಿ ಹೇಗೆ ಎದುರಿಸುವಿರಿ?**

ವಕೀಲಿಕೆಯಲ್ಲಿ ನನಗೆ ತುಸು ಅನುಭವ ಇದೆ. ಅದರ ಹಿನ್ನೆಲೆಯಲ್ಲಿ, ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸಲು ಏನು ಮಾಡಬೇಕು, ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ಆಗುವಂತೆ ಮಾಡಲು ಸುಪ್ರೀಂಕೋರ್ಟ್‌ಗೆ ಹೇಗೆ ಮನವರಿಕೆ ಮಾಡಬಹುದು ಎಂಬ ಬಗ್ಗೆ ತಜ್ಞರಿಂದ ಮಾಹಿತಿ ಪಡೆಯುತ್ತೇನೆ.

ಈ ವಿಚಾರದಲ್ಲಿ ನಾನೇ ಮುಂದಾಗಿ ಕೆಲಸ ಮಾಡುತ್ತೇನೆ. ಮತ್ತೆ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಲು ಅವಕಾಶ ಇದೆಯೇ ಎಂಬುದನ್ನು ಪರಿಶೀಲಿಸಬೇಕು. ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸುವುದು ಅಂದುಕೊಂಡಷ್ಟು ಸುಲಭವಲ್ಲ. ಈ ಬಗ್ಗೆ ತಜ್ಞರ ಜೊತೆ, ಪಾಲಕರ ಜೊತೆ, ವಿದ್ಯಾರ್ಥಿಗಳ ಜೊತೆಗೂ ಮಾತುಕತೆ ನಡೆಸಬೇಕು.

**6. ಆಡಳಿತದಲ್ಲಿ ಕನ್ನಡವನ್ನು ಇನ್ನಷ್ಟು ಹೆಚ್ಚಿಸಲು ಪರಿಷತ್ ಅಧ್ಯಕ್ಷರಾಗಿ ಏನು ಮಾಡುತ್ತೀರಿ?**

ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ನೂರಕ್ಕೆ ನೂರರಷ್ಟು ಎನ್ನುವ ರೀತಿಯಲ್ಲಿ ಆಡಳಿತದಲ್ಲಿ ಕನ್ನಡ ಅನುಷ್ಠಾನ ಆಗಿದೆ. ಈಗ ಅದು ಪೂರ್ಣಪ್ರಮಾಣದಲ್ಲಿ ಜಾರಿಗೆ ಬರಬೇಕಾಗಿರುವುದು ವಿಧಾನಸೌಧದಲ್ಲಿ, ಅಲ್ಲಿಯೂ ಸಾಕಷ್ಟು ಕೆಲಸ ಆಗಿದೆ. ತಾಂತ್ರಿಕ ಅಂಶಗಳನ್ನು ಒಳಗೊಂಡ ಕ್ಷೇತ್ರಗಳಲ್ಲಿ ಕನ್ನಡದ ಅನುಷ್ಠಾನಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕಾಗಿದೆ. ಈ ಕೆಲಸವನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆ.

**7. ಇ-ಜಗತ್ತಿನಲ್ಲಿ ಕನ್ನಡದ ಬಲವರ್ಧನೆಗೆ ಏನು ಮಾಡುತ್ತೀರಿ?**

ಕನ್ನಡ ತಂತ್ರಾಂಶ ಅಭಿವೃದ್ಧಿಯ ವಿಚಾರದಲ್ಲಿ ರಾಜ್ಯದಲ್ಲಿ ಸಾಕಷ್ಟು ಪರಿಣಿತರು ಇದ್ದಾರೆ. ಅವರಲ್ಲಿ ಹಲವರ ಪರಿಚಯವಿದೆ. ನನಗೆ ತಂತ್ರಜ್ಞಾನದ ಬಗ್ಗೆ ದೊಡ್ಡ ಮಟ್ಟದ ಜ್ಞಾನ ಇಲ್ಲ. ಆದರೆ, ತಂತ್ರಜ್ಞರನ್ನು ಕರೆದು, ಕನ್ನಡವನ್ನು ಕಂಪ್ಯೂಟರ್ ಜಗತ್ತಿನಲ್ಲಿ ಇನ್ನಷ್ಟು ಶಕ್ತಿಯುತಗೊಳಿಸಲು ಏನು ಮಾಡಬಹುದು ಎಂಬುದನ್ನು ಚರ್ಚಿಸುತ್ತೇನೆ.

**8. ಪರಿಷತ್ತಿನ ಚುನಾವಣೆಯಲ್ಲಿ ದಾಖಲೆಯ ಜಯ ಸಾಧಿಸಿದ್ದೀರಿ, ಇದು ಎಂತಹ ಭಾವ ಮೂಡಿಸಿದೆ?**

ಕನ್ನಡಿಗರು ನನ್ನ ಮೇಲೆ ಇಷ್ಟು ವಿಶ್ವಾಸ ಇಟ್ಟಿದಕ್ಕೆ ಋಣಿ. ನನ್ನ ನಿರೀಕ್ಷೆಗೂ ಮೀರಿ ಮತಗಳು ಬಂದಿವೆ. ಕನ್ನಡಿಗರ ಆಶೋತ್ತರಗಳಿಗೆ ಸ್ಪಂದಿಸಲು ಸಿದ್ಧನಾಗುತ್ತೇನೆ.

**9. ನಿಮ್ಮ ಅವಧಿಯಲ್ಲಿ ಪರಿಷತ್ತಿನ ಚಟುವಟಿಕೆಗಳಿಗಾಗಿ ಏನು ಕೆಲಸ ಹಮ್ಮಿಕೊಳ್ಳುವಿರಿ?**

ಶತಮಾನೋತ್ಸವ ಭವನ ನಿರ್ಮಾಣ ಪೂರ್ಣಗೊಳಿಸುವ ಇರಾದೆ ನನ್ನದು. ಅಲ್ಲದೆ, ಕಾರ್ಯಕಾರಿ ಸಮಿತಿ ಒಪ್ಪಿದರೆ, ಸರ್ಕಾರ ಅನುಕೂಲ ಮಾಡಿಕೊಟ್ಟರೆ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವ ಆಸೆ ಇದೆ. ಇಂಗ್ಲಿಷಿನ ಒತ್ತಡವನ್ನು ಪ್ರಾದೇಶಿಕ ಭಾಷೆಗಳು ಹೇಗೆ ತಡೆದುಕೊಳ್ಳಬೇಕು ಎಂಬ ಜಿಜ್ಞಾಸೆ ಆ ಸಮ್ಮೇಳನದಲ್ಲಿ ನಡೆಯಬೇಕು. ಲಂಡನ್ ಸುತ್ತಲಿನ ಅನ್ಯ ಭಾಷೆಗಳು ಇಂಗ್ಲಿಷಿನ ಒತ್ತಡವನ್ನು ತಾಳಿಕೊಂಡಿವೆ. ಅವರಿಗೆ ಇದು ಸಾಧ್ಯವಾಗಿದ್ದು ಹೇಗೆ? ಕನ್ನಡಕ್ಕೆ ಅದು ಸಾಧ್ಯವಾಗುತ್ತಿಲ್ಲ ಎಂಬ ಮಂಥನ ಅಲ್ಲಿ ನಡೆಯಬೇಕು

ಎಂಬ ಆಸೆ ನನ್ನದು. ಸಮ್ಮೇಳನ ಎಲ್ಲಿ ನಡೆಯಬೇಕು ಎಂಬುದನ್ನು ಸಮಿತಿಯ ನಿರ್ಣಯ ಆಧರಿಸಿಯೇ ಹೇಳಬಹುದು.

* * * * *

## 5. ಉದಯವಾಣಿ - 3-3-2016

**ಸಂದರ್ಶನ - ವಿಜಯಕುಮಾರ್ ಚಂದರಗಿ**

**ಕನ್ನಡದ ಯಾವುದೇ ಸಮಸ್ಯೆಗೆ ಹೋರಾಡಲು ಸಿದ್ಧ**

ಶತಮಾನ ಕಂಡ ಕನ್ನಡ ಸಾಹಿತ್ಯ ಪರಿಷತ್ತಿಗೆ ಈಗ ನೂತನ ಸಾರಥಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾಗಿದ್ದ ಮನು ಬಳಿಗಾರ್ ಐತಿಹಾಸಿಕ ಜಯದೊಂದಿಗೆ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯ ಚುಕ್ಕಾಣಿ ಹಿಡಿದಿದ್ದಾರೆ. ಬೆನ್ನಲ್ಲೇ ಅವರ ಮುಂದೆ ಕನ್ನಡಿಗರ ನಿರೀಕ್ಷೆಗಳ ಗೋಪುರವೂ ಎದ್ದು ನಿಂತಿದೆ. ಯಾಕೆಂದರೆ, ಕನ್ನಡ-ಕನ್ನಡಿಗರ ರಕ್ಷಣೆ ಭಾಷಾ ಮಾಧ್ಯಮ, ಗಡಿನಾಡ ಸಮಸ್ಯೆಯಂತಹ ದಶಕಗಳ ಸವಾಲುಗಳಿಗೆ ಪರಿಹಾರ ಸಿಕ್ಕಿಲ್ಲ. ಸಾಂಪ್ರದಾಯಿಕ ಚೌಕಟ್ಟಿನಲ್ಲಿರುವ ಪರಿಷತ್ತು ಇನ್ನೂ ಆಧುನಿಕತೆಗೆ ತೆರೆದುಕೊಂಡಿಲ್ಲ. ಸರ್ಕಾರದ ಮುಲಾಜಿನಿಂದ ಹೊರಬಂದಿಲ್ಲ. ಇಂತಹ 'ಇಲ್ಲ'ಗಳ ನಡುವೆ ಮನು ಬಳಿಗಾರ್ ಸಾರಥ್ಯ ವಹಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪರಿಷತ್ತಿನ ಚಟುವಟಿಕೆಗಳು ಹೇಗಿರಬೇಕು? ಕನ್ನಡಪರ ಹೋರಾಟಗಳಲ್ಲಿ ಪರಿಷತ್ತಿನ ಪಾತ್ರ ಏನಿರಬೇಕು? ಯುವ ಸಾಹಿತಿಗಳನ್ನು ಕರೆತರುವಲ್ಲಿ ಹಾಕಿಕೊಂಡ ಕಾರ್ಯಯೋಜನೆಗಳೇನು? ಹತ್ತಾರು ಪ್ರಶ್ನೆಗಳ ಜತೆ ಮನು ಬಳಿಗಾರ್ ಅವರೊಂದಿಗೆ 'ನೇರಾನೇರ' ಮಾತಿಗಿಳಿದಾಗ...

**1. ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ ಅಪರೂಪ ಎನ್ನುವಂಥ ಗೆಲುವು ನಿಮಗೆ ಸಿಕ್ಕಿತಲ್ಲ?**

ನನ್ನ ದಕ್ಷ ಪ್ರಾಮಾಣಿಕ, ಜಾತ್ಯತೀತ ನಿಲುವಿಗೆ ಗೆಲುವು ಸಿಕ್ಕಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ಸರ್ಕಾರಿ ಹುದ್ದೆಯಲ್ಲಿದ್ದಾಗ ನಾನು ಮಾಡಿದ ಕನ್ನಡ ಸೇವೆಯನ್ನು ಸದಸ್ಯರು ಗುರುತಿಸಿದ್ದಾರೆ. ಹಾಗಾಗಿಯೇ ಒಟ್ಟಾರೆ ಮತಗಳಲ್ಲಿ ಶೇ.56ರಷ್ಟು ಮತಗಳು ನನಗೆ ಬಿದ್ದಿವೆ. ಈ ವಿಶ್ವಾಸವನ್ನು ಉಳಿಸಿಕೊಂಡು ಹೋಗುತ್ತೇನೆ.

**2. ಪರಿಷತ್ತಿನ ನೂತನ ಅಧ್ಯಕ್ಷರಾಗಿ ಅದರ ಕಲ್ಯಾಣಕ್ಕಾಗಿ ಏನು ಕನಸು ಕಂಡಿದ್ದೀರಿ?**

ಪರಿಷತ್ತನ್ನು ಮತ್ತಷ್ಟು ಆರ್ಥಿಕವಾಗಿ ಸಬಲೀಕರಣಗೊಳಿಸುವುದು. ಈಗಾಗಲೇ ಕೈಗೊಂಡ ಯೋಜನೆಗಳನ್ನು ಮುಂದುವರಿಸುವುದು.

**3. ಈಗಾಗಲೇ ಕೈಗೆತ್ತಿಕೊಂಡ ಯೋಜನೆಗಳು ಅಂದರೆ ಸಾಕಷ್ಟಿವೆ. ಯಾವುದನ್ನು ಮುಂದುವರಿಸುತ್ತೀರಿ?**

ಶತಮಾನೋತ್ಸವದ ಸಂದರ್ಭದಲ್ಲಿ ಹೊರತರಲು ಉದ್ದೇಶಿಸಿರುವ ಆಧುನಿಕ ಕನ್ನಡ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸುವುದು. ಶತಮಾನೋತ್ಸವ ಭವನವನ್ನು ನನ್ನ ಅವಧಿಯಲ್ಲೇ ಪೂರ್ಣಗೊಳಿಸುವುದು. ನಿಘಂಟು ಕೇಂದ್ರ ಸ್ಥಾಪಿಸುವುದು. ಪರಿಷತ್ತಿಗೆ ಏನೇನು ಮಾಡಬೇಕು ಎಂಬುದರ ಕುರಿತು ವಿದ್ವಾಂಸರು, ವಿಷಯ ತಜ್ಞರೊಂದಿಗೆ ಮುಂದಿನ ತಿಂಗಳು ಚರ್ಚಿಸಿ, ಕಾರ್ಯಯೋಜನೆ ಸಿದ್ಧಪಡಿಸುವುದು.

**4. ಹಾಗಾದರೆ ಆದ್ಯತಾ ಪಟ್ಟಿಯಲ್ಲಿ ನಿಮ್ಮ ಮಹತ್ವಾಕಾಂಕ್ಷಿ ಕಾರ್ಯಕ್ರಮ ವಿಶ್ವ ಕನ್ನಡ ಸಮ್ಮೇಳನ ಇಲ್ಲವೇ?**

ನನ್ನ ಮೂರು ವರ್ಷಗಳ ಅವಧಿಯಲ್ಲಿ ಅದನ್ನು ಮಾಡಬೇಕು ಎಂಬ ಆಶಯವಿದೆ. ಅದನ್ನು ಎಲ್ಲಿ, ಯಾವಾಗ, ಹೇಗೆ ಮಾಡಬೇಕು ಎಂಬುದನ್ನು ಮುಂದೆ ನಿರ್ಧರಿಸಲಾಗುವುದು.

**5. ಸರ್ಕಾರದೊಂದಿಗೆ ಸಂಘರ್ಷದ ಸಂಬಂಧ ಇರಬೇಕೇ ಹೊರತು, ಅದು ಕೊಡುವ ಅನುದಾನಕ್ಕಾಗಿ ಸರ್ಕಾರದ ಮುಂದೆ ಮಂಡಿಯೂರಿ ಕೂರಬಾರದು ಎಂದು ನಿಕಟಪೂರ್ವ ಅಧ್ಯಕ್ಷರು ಹೇಳಿದ್ದಾರೆ?**

ನನ್ನ ಪ್ರಕಾರ ಸಂಘರ್ಷದ ಅವಶ್ಯಕತೆಯೇ ಇಲ್ಲ, ಹಾಗಂತ ಅದರ ಅಡಿಯಾಳೂ ಆಗಬೇಕಿಲ್ಲ. ಸೌಹಾರ್ದಯುತ ಸಂಬಂಧ ಇಟ್ಟುಕೊಂಡೇ ಹೆಚ್ಚು ಹೆಚ್ಚು ಕನ್ನಡದ ಕೆಲಸ ಮಾಡುವ ಪ್ರವೃತ್ತಿ ನನ್ನದು. ಹಿಂದಿನವರೂ ಸರ್ಕಾರದೊಂದಿಗೆ ಒಳ್ಳೆಯ ಸಂಬಂಧವನ್ನೇ ಹೊಂದಿದ್ದರು. ಸಂಘರ್ಷದೊಂದಿಗಿನ ಸಂಬಂಧ ಎಂದು ಇವರೇ ಪರಿಭಾವಿಸಿಕೊಂಡಿರುತ್ತಾರೆ. ಯಾವುದೋ ಒಂದು ಸಂದರ್ಭದಲ್ಲಿ ಹಾಗೆ ಆಗಿರಬಹುದು. ನನಗೂ ಸಂದರ್ಭ ಬಂದರೆ ಹಾಗೆ ಹೇಳಲೂಬಹುದು. ಆದರೆ, ಸಂಘರ್ಷದ ಅವಶ್ಯಕತೆ ಇಲ್ಲ.

**6. ನಿಮ್ಮ ಪ್ರಕಾರ ಸೌಹಾರ್ದ ಸಂಬಂಧವೆಂದರೆ ಹೇಗೆ?**

ವಿನಾಕಾರಣ ಗುದ್ದಾಟಕ್ಕಿಳಿಯಬೇಕಾಗಿಲ್ಲ ಸರ್ಕಾರದೊಂದಿಗೆ ಅನ್ಯೋನ್ಯವಾಗಿದ್ದುಕೊಂಡೇ ಪರಿಷತ್ತಿನ ಚಟುವಟಿಕೆಗಳಲ್ಲಿಗೆ ಬೇಕಾದ ಅನುದಾನ ತರುವುದು. ಅದರಿಂದ ಸಾಹಿತ್ಯಕ ಕಾರ್ಯಕ್ರಮ-ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

**7. ಹೀಗೆ ಅನುದಾನ ತಂದರೆ, ಸರ್ಕಾರದ ಋಣದಲ್ಲಿ ಬಿದ್ದಂತಾಗುವುದಿಲ್ಲವೇ?**

ಸರ್ಕಾರದಿಂದ ಅನುದಾನ ತೆಗೆದುಕೊಂಡರೂ ಇದುವರೆಗೆ ಯಾರೂ ವೇದಿಕೆಯನ್ನು ಹಂಚಿಕೊಂಡ ಉದಾಹರಣೆಗಳೇ ಇಲ್ಲ ಅಷ್ಟಕ್ಕೂ ಯಾವ ರಾಜಕಾರಣ ವಿಚಾರಗೋಷ್ಠಿಗೆ ಬರುತ್ತಾರೆ ನೀವೇ ಹೇಳಿ. ಅನುದಾನ ತಂದಾಕ್ಷಣ ಅವರ ಮರ್ಜಿಗೆ ಕಾಯಬೇಕು ಎಂಬುದೇನೂ ಇಲ್ಲ. ಅದೇನೇ ಇರಲಿ, ಚೆನ್ನಾಗಿ ವಿಷಯಗಳನ್ನು ಮಂಡಿಸಬಲ್ಲವರು ಯಾರಾದರೂ ಆಗಿರಬಹುದು. ಅವರನ್ನು ಕರೆಯುವುದರಲ್ಲಿ ಏನು ತಪ್ಪು? ಕೃಷಿ ನೀರಾವರಿ, ಗಡಿ ವಿಷಯಗಳ ಮೇಲೆ ರಾಜಕಾರಣಿಗಳಲ್ಲೂ ಸಂಪನ್ಮೂಲ ವ್ಯಕ್ತಿಗಳಿದ್ದಾರೆ.

**8. ಕಸಾಪಕ್ಕೆ ಪರ್ಯಾಯ ಸಂಘಟನೆಗಳು ಹುಟ್ಟಿಕೊಳ್ಳುತ್ತಿವೆ?**

ಅದು ಅವರವರ ಆಯ್ಕೆಗೆ ಬಿಟ್ಟ ವಿಚಾರ. ನನ್ನ ಅಭಿಪ್ರಾಯವೇನೂ ಇರುವುದಿಲ್ಲ ಅದಕ್ಕೆ ಮಾಡು ಅಥವಾ ಮಾಡಬೇಡ ಎಂದು ಹೇಳಲು ನಾನ್ಯಾರು? ಸಾಹಿತ್ಯ ಚಟುವಟಿಕೆಗಳು ಹೆಚ್ಚು ಹೆಚ್ಚು ಆದಷ್ಟು ಒಳ್ಳೆಯದೇ. ಆದರೆ, ಅದು ಕನ್ನಡ ಸಾಹಿತ್ಯ ಪರಿಷತ್ತಿಗೆ ಅದು ಪರ್ಯಾಯ ಎಂದು ಹೇಳಲು ಸಾಧ್ಯವೇ ಇಲ್ಲ.

**9.ಹೊಸ ತಲೆಮಾರಿನ ಸಾಹಿತಿಗಳನ್ನು ತನ್ನತ್ತ ಸೆಳೆಯುವುದರಲ್ಲಿ ಪರಿಷತ್ತು ವಿಫಲವಾದಂತಿದೆ?**

ಗೊತ್ತಿಲ್ಲದವರು ಆಡುವ ಮಾತುಗಳಿವು ಹೊಸ ತಲೆಮಾರಿನ ಸಾಹಿತಿಗಳು ಬೇಕಾದಷ್ಟು ಜನ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಆರೋಪ ಮಾಡುವವರು ಸಮಗ್ರವಾಗಿ ನೋಡಿರುವುದಿಲ್ಲ ಅಷ್ಟೇ. ಮುಂದೆ ಮಹಿಳೆಯರಿಗೆ ಮತ್ತು ಯುವಕರಿಗೆ ಇನ್ನಷ್ಟು ಅವಕಾಶ ನೀಡೋಣ, ಅದಕ್ಕೇನಂತೆ.

**10. ಯುವಸಮೂಹ ತಂತ್ರಜ್ಞಾನದತ್ತ ಮುಖಮಾಡಿದೆ. ಆದರೆ, ಸಾಹಿತ್ಯ ಪರಿಷತ್ತು ಮಾತ್ರ ಇನ್ನೂ ಹಳೇ ಸಂಪ್ರದಾಯಕ್ಕೆ ಜೋತುಬಿದ್ದಿದೆ?**

ಇಲ್ಲ, ಇಲ್ಲ. ಸಾಹಿತ್ಯ ಪರಿಷತ್ತು ಇತ್ತೀಚೆಗೆ ತಂತ್ರಜ್ಞಾನದತ್ತ ತೆರೆದುಕೊಳ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ಕನ್ನಡ ತಂತ್ರಾಂಶಗಳ ಕಾರ್ಯ ನಡೆದಿದೆ. ತಂತ್ರಜ್ಞರ ಸಭೆಯನ್ನೂ ಕರೆಯಲು ನಿರ್ಧರಿಸಿದ್ದೇನೆ. ಈಗಿನ ವ್ಯವಸ್ಥೆ ಹೇಗಿದೆ ಎಂಬುದನ್ನು ನೋಡಿಕೊಂಡು, ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**11. ದತ್ತಿ ಉಪನ್ಯಾಸದಂತಹ ಸರ್ಕಾರಿ ಮಾದರಿ ಕಾರ್ಯಕ್ರಮಗಳನ್ನು ದಾಟಿ ಕಸಾಪ ಮುಂದೆ ಬರುತ್ತಿಲ್ಲ?**

ಹಾಗೇನಿಲ್ಲ. ಈ ಹಿಂದೆ ಭಾಷಾ ಮಾಧ್ಯಮ, ಶಿಕ್ಷಣ ಸೇರಿದಂತೆ ಇತರೆ ಸಾಕಷ್ಟು ಕಾರ್ಯಕ್ರಮಗಳಾಗಿವೆ. ಆಗಿಯೇ ಇಲ್ಲ ಎಂದೇನಿಲ್ಲ. ಆದಾಗ್ಯೂ ಮುಂದಿನ ದಿನಗಳಲ್ಲಿ ಹಿರಿಯ ವಿದ್ವಾಂಸರು, ಹೋರಾಟಗಾರರು, ಪೋಷಕರು, ಅಗತ್ಯಬಿದ್ದರೆ ವಿದ್ಯಾರ್ಥಿಗಳ ಸಭೆ ಕರೆಯುತ್ತೇನೆ. ಅಲ್ಲಿ ಯಾವ ರೀತಿ ಪರಿಷತ್ತಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಿ, ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

**12. ನಾಲ್ಕು ಕವನ ಬರೆದಾಕ್ಷಣ ಸಾಹಿತಿ ಆಗ್ತಾರೆ. ಪರಿಷತ್ತು ಕರೆಸಿ ಸನ್ಮಾನಾನೂ ಮಾಡಿಬಿಡುತ್ತೆ. ಆದರೆ, ನೂರು ಯಕ್ಷಗಾನ ಪ್ರಸಂಗಗಳನ್ನು ಬರೆದರೂ ಅವರನ್ನೂ ಕೇಳೋರೂ ಇರಲ್ಲ. ಸಾಹಿತ್ಯದಲ್ಲೂ ಯಾಕೀ ತಾರತಮ್ಯ?**

ನಾನು ಈ ಪ್ರಕಾರದ ಕಲಾವಿದರನ್ನೂ ಗುರುತಿಸಿದ್ದರಿಂದಲೇ ಜನ ನನಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಚುನಾವಣೆಯಲ್ಲಿ ಕರಾವಳಿಯಿಂದಲೂ ನನಗೆ ಬೆಂಬಲ ದೊರಕಿದೆ. ಯಾಕೆಂದರೆ, ನಾನು ಅವರನ್ನು ಗುರುತಿಸಿದ್ದರಿಂದ ಅಲ್ಲಿನ ಕಲಾವಿದರು ನನ್ನನ್ನೂ ಗುರುತಿಸಿದ್ದಾರೆ. ಆ ಕೆಲಸವನ್ನು ನಾನು, ಮುಂದುವರಿಸುತ್ತೇನೆ. ಅವರನ್ನು ಹೇಗೆ ಗುರುತಿಸಬೇಕು ಎಂಬುದೂ ನನಗೆ ಗೊತ್ತಿದೆ.

**13. ಗಡಿನಾಡ ಭಾಗದ ಕನ್ನಡ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಓದುವುದಕ್ಕೆ ಪುಸ್ತಕಗಳೂ ಸಿಗುತ್ತಿಲ್ಲ? ಗಡಿನಾಡ ಸಮಸ್ಯೆಗಳ ಹೋರಾಟದಲ್ಲೇಕೆ ಸಾಹಿತ್ಯ ಪರಿಷತ್ತು ದೂರ ನಿಲ್ಲುತ್ತದೆ?**

ಅದು ನನ್ನ ಗಮನಕ್ಕೆ ಬಂದಿಲ್ಲ. ಪುಸ್ತಕಗಳು ಸಿಗುತ್ತಿವೆ. ಯಾವ ಶಾಲೆಯಲ್ಲಿ ಸಿಗುತ್ತಿಲ್ಲ ಎಂದು ಹೇಳಲಿ, ಶಿಕ್ಷಣ ಸಚಿವರಿಗೇ ಮಾತನಾಡುತ್ತೇನೆ. ಪುಸ್ತಕ ಒಂದೇ ಅಲ್ಲ, ಇನ್ನಾವುದೇ ಸಮಸ್ಯೆಗಳಿದ್ದರೆ ಹೇಳಲಿ, ನಾನು ಖುದ್ದಾಗಿ ನಿಂತು ಬಗೆಹರಿಸುತ್ತೇನೆ. ಯಾವುದೇ ಪ್ರಕಾರದ ಹೋರಾಟಕ್ಕೂ ಪರಿಷತ್ತು ಸಂಪೂರ್ಣ ಕೈಜೋಡಿಸಲಿದೆ. ಅವಶ್ಯಕತೆ ಬಿದ್ದರೆ, ನಾನೇ ಹೋರಾಟ ಆರಂಭಿಸುತ್ತೇನೆ.

**14. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂಬ ಸಾಹಿತ್ಯ ಪರಿಷತ್ತು ಕಳಸಾ-ಬಂಡೂರಿ, ಮಹದಾಯಿ ಸೇರಿದಂತೆ ಜನಪರ ಹೋರಾಟಗಳ ಬಗ್ಗೆ ಚಕಾರ ಎತ್ತುವುದಿಲ್ಲ?**

ಈ ಬಗ್ಗೆ ಸಂಶಯವೇ ಬೇಡ. ನಾನೊಬ್ಬ ಪ್ರಗತಿಪರ ರೈತನ ಮಗ, ಗ್ರಾಮೀಣ ಭಾಗದಿಂದ ಬಂದವನು. ಕನ್ನಡ ಮಾಧ್ಯಮದಲ್ಲಿ ಕಲಿತವನು. ರೈತರ ಸಮಸ್ಯೆ, ಕೂಲಿಕಾರರ ಸಮಸ್ಯೆಗಳು ನನಗೆ ಚೆನ್ನಾಗಿ ಗೊತ್ತು. ಹಾಗಾಗಿ, ರೈತರ ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ರೀತಿಯ ಹೋರಾಟಗಳಾಗಿರಲಿ, ಅವುಗಳಲ್ಲಿ ನನ್ನದೇ ಆದ ಪಾತ್ರ ವಹಿಸುತ್ತೇನೆ. ಸಾಹಿತ್ಯ ಪರಿಷತ್ತು ಕೂಟ ಅದಕ್ಕೆ ಸ್ಪಂದಿಸಬೇಕು ಎನ್ನುವುದು ನನ್ನ ನಿಲುವು.

**15, ಪರಿಷತ್ತಿನ ಸದಸ್ಯತ್ವಕ್ಕೆ ಸೂಕ್ತ ಮಾನದಂಡವೇ ಇಲ್ಲ? ಮುಂದೆ ಅಧಿಕಾರದ ಗದ್ದುಗೆಗೇರಲು ಈಗಿನಿಂದಲೇ ತಮಗೆ ಬೇಕಾದವರನ್ನು ಸದಸ್ಯರನ್ನಾಗಿ ಮಾಡ್ತಾರಲ್ಲ?**

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವಕ್ಕೆ ಒಂದೇ ಮಾನದಂಡ. ಅದು ಕನ್ನಡಿಗನಾಗಿರಬೇಕು. ಸದಸ್ಯತ್ವ ನಿಯಮಾವಳಿಗಳ ಬದಲಾವಣೆ ಮಾಡುವ ಆಲೋಚನೆಯೇ ಇಲ್ಲ.

**16. ಭಾಷಾ ಮಾಧ್ಯಮ ವಿಚಾರದ ಬಗ್ಗೆ?**

ಈ ವಿಚಾರ ಕೋರ್ಟ್‌ನಲ್ಲಿದೆ. ನನಗೆ ಎರಡು-ಮೂರು ವರ್ಷ ವಕೀಲಿ ವೃತ್ತಿ ಮಾಡಿದ ಅನುಭವ ಇದೆ. ನಮ್ಮ ಪರವಾಗಿ ಹೋರಾಡುತ್ತಿರುವ ವಕೀಲರಿಗೆ ವಿಷಯಕ್ಕೆ ಸಂಬಂಧಿಸಿದ ಅಂಕಿ-ಅಂಶಗಳು, ಕಡತಗಳನ್ನು ಕೊಟ್ಟು, ಈ ನಿಟ್ಟಿನಲ್ಲಿ ಒತ್ತಾಯಪೂರ್ವಕ ಮನವಿ ಮಾಡುತ್ತೇನೆ. ಇದಕ್ಕಿಂತ ಹೆಚ್ಚಿನದು ಏನು ಮಾಡುವುದಕ್ಕೆ ಆಗುತ್ತೆ? ಯಾಕೆಂದರೆ, ಇದು ಕೋರ್ಟಿನಲ್ಲಿರುವುದರಿಂದ ತುಂಬಾ ಸೂಕ್ಷ್ಮವಾದ ವಿಷಯ.

**17. ಪರಿಷತ್ತಿನ ಪತ್ರಿಕೆ ಕೇವಲ ಸದಸ್ಯರಿಗೆ ಸೀಮಿತವಾಗಿದೆ. ಎಲ್ಲ ಕನ್ನಡಿಗರಿಗೂ ತಲುಪಿಸುವ ಯೋಚನೆ ಇದೆಯೇ?**

ಪರಿಷತ್ತಿನ ಎಲ್ಲ 2.6 ಲಕ್ಷ ಸದಸ್ಯರಿಗೂ ಪತ್ರಿಕೆ ತಲುಪಿಸುವ ಖರ್ಚು-ವೆಚ್ಚವೇ ಹೆಚ್ಚಿದೆ, ಮುದ್ರಣ, ಅಂಚೆ ಸೇರಿ ಎಲ್ಲವೂ ಹೆಚ್ಚಿದೆ. ಆದರೆ, ಸದಸ್ಯತ್ವ ಶುಲ್ಕ ಬರೀ 260 ರೂ. ಈಗ ಪತ್ರಿಕೆ ತ್ರೈಮಾಸಿಕ ಆಗಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

**18. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕನ್ನಡ ಭವನಗಳನ್ನು ನಿರ್ಮಿಸಬೇಕು ಎಂಬ ಕೂಗು ಹಾಗೆಯೇ ಉಳಿದಿದೆ?**

ಈಗ ಜಿಲ್ಲಾ ಮಟ್ಟದಲ್ಲಿ ಕನ್ನಡ ಭವನಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲಾಗುವುದು. ಮುಂದಿನ ದಿನಗಳಲ್ಲಿ ಸಾಹಿತ್ಯಕ ಚಟುವಟಿಕೆಗಳಿಗಾಗಿ ತಾಲ್ಲೂಕು ಮಟ್ಟದಲ್ಲಿ ಘಟಕಗಳು ಜಾಗ ಮತ್ತು ಮೂರನೇ ಎರಡು ಭಾಗದಷ್ಟು ಹಣ ನೀಡಲು ಮುಂದೆ ಬಂದರೆ, ಸರ್ಕಾರದೊಂದಿಗೆ ಚರ್ಚಿಸಿ, ಅದಕ್ಕೂ ಅನುಕೂಲ ಮಾಡಿಕೊಡಲಾಗುವುದು.

**19. ಸಾಹಿತ್ಯ ಪರಿಷತ್ತಿನಲ್ಲಿ ಮಹಿಳೆಯರ ಪಾಲುದಾರಿಕೆ ಹೆಚ್ಚಿಸುವಲ್ಲಿ ನಿಮ್ಮ ಯೋಜನೆ?**

ಪರಿಷತ್ತಿನ ಒಟ್ಟಾರೆ ಸದಸ್ಯರಲ್ಲಿ ಮಹಿಳೆಯರ ಪ್ರಮಾಣ ಈಗ ಶೇ. 18ರಷ್ಟಿದೆ. ಇದು ಹೆಚ್ಚಬೇಕು. ಪರಿಷತ್ತಿನ ಕಾರ್ಯಕಾರಿ ಸಮಿತಿಯಲ್ಲಿ ಮಹಿಳೆಗೆ ಒಂದು ಸ್ಥಾನ ಮೀಸಲಿದೆ. ಇದನ್ನು ಹೆಚ್ಚಿಸಲು ಉಪ ನಿಯಮಗಳಿಗೆ ತಿದ್ದುಪಡಿ ಆಗಬೇಕು. ಆ ಪ್ರಕ್ರಿಯೆ ಆರಂಭಿಸುತ್ತೇನೆ.

* * * * *

# 6. ಕನ್ನಡ ಪ್ರಭ 3.3.2016

**ಸಂದರ್ಶನ – ಉತ್ತನಹಳ್ಳಿ ಮಹದೇವ**

## ಪರಂಪರೆ ಮುಂದುವರಿಸುವೆ, ವಿಶ್ವ ಕನ್ನಡ ಸಮ್ಮೇಳನ ನಡೆಸುವೆ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ ನೂತನ ಸಾರಥಿಯಾಗಿ ಆಯ್ಕೆಯಾಗಿರುವ ನಿವೃತ್ತ ಐಎಎಸ್ ಅಧಿಕಾರಿ ಡಾ. ಮನು ಬಳಿಗಾರ್ 'ಕಸಾಪ ಅಧ್ಯಕ್ಷನಾಗಿ ಸರ್ಕಾರ ಮತ್ತು ಕನ್ನಡಿಗರ ನಡುವಿನ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡುತ್ತೇನೆ' ಎಂದು 'ಕನ್ನಡ ಪ್ರಭ'ಕ್ಕೆ ನೀಡಿದ ಸಂದರ್ಶನದಲ್ಲಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

**ಉತ್ತನಹಳ್ಳಿ ಮಹದೇವ**

**1. ತಾವು 25ನೇ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ಕನ್ನಡಿಗರೇ ಕಟ್ಟಿ ಬೆಳೆಸಿರುವ ಕಸಾಪವನ್ನು ಯಾವ ರೀತಿ ಮುಂದುವರೆಸಿಕೊಂಡು ಹೋಗಲು ಇಚ್ಚಿಸಿದ್ದೀರಿ? ನಿಮ್ಮ ಮುಂದಿನ ಧ್ಯೇಯೋದ್ದೇಶಗಳೇನು?**

ಮೊಟ್ಟ ಮೊದಲನೆಯದಾಗಿ ಅಭೂತಪೂರ್ವ ಬಹುಮತ ನೀಡಿ ಈ ಸಂಸ್ಥೆಗೆ ಕೂರಿಸಿದ್ದಕ್ಕಾಗಿ ನಮ್ಮೆಲ್ಲ ಮತದಾರರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತೇನೆ. ಕಸಾಪ ಶತಮಾನೋತ್ಸವ ಆಚರಿಸಿ 101ನೇ ವರ್ಷಕ್ಕೆ ಕಾಲಿರಿಸಿದೆ. ಅದ್ಭುತ ಇತಿಹಾಸವಿರುವ, ಮಹಾಮಹಿಮರೆಲ್ಲ ಕುಳಿತು ಹೋಗಿರುವ, ಮೈಸೂರು

ಮಹಾರಾಜರಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಮುನ್ನಡೆಸಿರುವ ಈ ಕಸಾಪವನ್ನು ತಜ್ಞರು, ಹೋರಾಟಗಾರರು, ವಿದ್ವಾಂಸರ ಜತೆಗೂಡಿ ಮುಂದುವರೆಸಿಕೊಂಡು ಹೋಗುತ್ತೇನೆ. ನಿಘಂಟು ಹೊರತರುವ, ನಿಘಂಟನ್ನು ಹಿಂದೀಕರಣಗೊಳಿಸುವುದು ಸೇರಿದಂತೆ ಕಾಲ-ಕಾಲಕ್ಕೆ ಪರಿಷ್ಕರಿಸಿ ಕ್ರಮ ಕೈಗೊಳ್ಳಲಾಗುವುದು. ಕಸಾಪ ಸಾಹಿತ್ಯ ಚರಿತ್ರೆ ಪ್ರಕಟಿಸಲು 28 ಯೋಜನೆಗಳನ್ನು ಹಾಕಿಕೊಂಡಿದೆ. ಈಗ 8 ಯೋಜನೆಗಳು ಬಂದಿವೆ. ನನ್ನ ಅವಧಿಯಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಬೇಕು ಎಂದುಕೊಂಡಿದ್ದೇನೆ.

**2. ಕನ್ನಡ ಸಾಹಿತ್ಯ ಪರಿಷತ್ತು ಆರ್ಥಿಕ ಸ್ವಾಯತ್ತತೆಯತ್ತ ಹೊರಳುತ್ತಿದೆ. ನೀವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿ ಸೇವೆ ಸಲ್ಲಿಸಿ ಬಂದಿದ್ದೀರಿ. ನಿಮ್ಮ ಆಡಳಿತ ಅನುಭವವನ್ನು ಆಧಾರವಾಗಿಟ್ಟುಕೊಂಡು ಕಸಾಪಗೆ ಎಷ್ಟು ಅನುದಾನ ನಿರೀಕ್ಷಿಸಬಹುದು?**

ಯೋಜನೆಗಳಿಗೆ ಅಗತ್ಯವಾಗಿರುವ ಹಣವನ್ನು ಸರ್ಕಾರ ಆಯಾ ಕಾಲಘಟ್ಟಕ್ಕೆ ಬಿಡುಗಡೆ ಮಾಡುತ್ತಿರುತ್ತದೆ. ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳುವ ಯೋಜನೆಗಳಿಗೆ ಅವಶ್ಯವಾಗಿರುವ ಅನುದಾನವನ್ನೂ ಈಗಾಗಲೇ ಸರ್ಕಾರ ಬಿಡುಗಡೆ ಮಾಡುತ್ತದೆ. ಅದನ್ನು ಬಳಸಿಕೊಳ್ಳುವ ಕೆಲಸ ನಮ್ಮದಾಗಿದೆ. ನನ್ನ ಅನುಭವ, ಇಲಾಖೆಯಲ್ಲಿನ ಸಂಪರ್ಕದ ಹಿನ್ನೆಲೆಯಲ್ಲಿ ಅಗತ್ಯ ಅನುದಾನ ಬಿಡುಗಡೆ ಮಾಡಿಸಿಕೊಳ್ಳುತ್ತೇನೆ.

**3. ಸಾಮಾನ್ಯವಾಗಿ ಅಧ್ಯಕ್ಷರಾದವರಿಗೆ ಸಾಕಷ್ಟು ಸವಾಲುಗಳಿರುತ್ತವೆ, ಅವು ಯಾವುವು?**

ಈಗ ನಮ್ಮೆದುರಿಗೆ ಸವಾಲುಗಳು ಸಾಕಷ್ಟಿವೆ. ಪ್ರಾಥಮಿಕ ಶಿಕ್ಷಣ ಮಾತೃ ಭಾಷಾ ಮಾಧ್ಯಮವಾಗಬೇಕು. ಗಡಿಪ್ರದೇಶ ಅಭಿವೃದ್ಧಿಗೆ ಪ್ರಾಧಿಕಾರ ರಚನೆಯಾಗಿದೆ ಆದರೆ, ಹೆಚ್ಚು ಕ್ರಿಯಾಶೀಲವಾಗಿರಲಿಲ್ಲ. ಈಗ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲರು ಅಧ್ಯಕ್ಷರಾಗಿದ್ದು, ಅವರ ಸಲಹೆ ಪಡೆದುಕೊಳ್ಳಲಾಗುವುದು. ಗಡಿ ವಿಚಾರ ಸುಪ್ರೀಂಕೋರ್ಟ್‌ನಲ್ಲಿರುವುದರಿಂದ, ನೆಲ-ಜಲ-ನುಡಿಯ ಪ್ರಶ್ನೆಗಳು ಸರ್ಕಾರವನ್ನು ದಾಟಿ ಸರ್ವೋಚ್ಚ ನ್ಯಾಯಾಲಯದ ಮಟ್ಟಕ್ಕೆ ಹೋಗಿರುವುದರಿಂದ ನಾವು ಬಹಳ ಜಾಗರೂಕತೆಯಿಂದ ಹೆಜ್ಜೆಯಿಡಬೇಕಾಗಿದೆ. ನಮ್ಮ ರಾಜ್ಯ ಪ್ರತಿನಿಧಿಸುವ ವಕೀಲರು ಮೇಧಾವಿಗಳಾಗಿದ್ದಾರೆ. ನಾನು ಮಾಡಬೇಕಾದಂತಹ ಕೆಲಸ ಅವರನ್ನು ಸಂಪರ್ಕಿಸುವುದು ಮೊದಲನೆಯದು. ಸರ್ಕಾರ ನೀಡುವ ಮಾಹಿತಿಯನ್ನು ಅವರಿಗೆ ತಲುಪಿಸಿ, ತ್ವರಿತಗತಿಯಲ್ಲಿ ಪ್ರಕರಣ ಇತ್ಯರ್ಥವಾಗುವಂತೆ ನೋಡಿಕೊಳ್ಳುವುದು ನನ್ನ ಮುಂದಿರುವ ಸವಾಲುಗಳಾಗಿವೆ.

**4. ಪ್ರತಿ ಸಾಹಿತ್ಯ ಸಮ್ಮೇಳನ ನಡೆಯುವಾಗ ಬಹುತೇಕ ಶಿಕ್ಷಕರು ಒಒಡಿ ಪಡೆದು ಭಾಗವಹಿಸುವುದಕ್ಕಿಂತ ಸ್ವಯಂ ಪ್ರೇರಿತರಾಗಿ ಯಾಕೆ ಭಾಗವಹಿಸಬಾರದು? ಅವರು ಒಂದು ರೀತಿಯಲ್ಲಿ ದುರ್ಬಳಕೆ ಮಾಡಿಕೊಂಡಂತಲ್ಲವೇ?**

ಶಿಕ್ಷಕರೆಲ್ಲರೂ ಸ್ವಯಂ ಪ್ರೇರಿತರಾಗಿಯೇ ಭಾಗವಹಿಸುತ್ತಾರೆ. ಅವರು ಭಾಗವಹಿಸಿದ್ದಕ್ಕಾಗಿ ಒಒಡಿ ನೀಡಲಾಗುತ್ತದೆಯೇ ವಿನಃ ಅವರನ್ನು ಬರಲೇಬೇಡಿ ಎಂದು ಹೇಳಲು ಆಗುವುದಿಲ್ಲ. ಒಒಡಿಯು ಅನ್ಯ ಕರ್ತವ್ಯ ನಿರ್ವಹಿಸಿದ್ದಕ್ಕಾಗಿ ನೀಡಲಾಗುತ್ತದೆ.

**5. ಈ ಬಾರಿಯ ಕಸಾಪ ಚುನಾವಣೆಯಲ್ಲಿ ಜಾತಿ ರಾಜಕಾರಣ ಮತ್ತು ಪ್ರಾದೇಶಿಕ ಅಸಮತೋಲನ ಕೆಲಸ ಮಾಡಿತಾ? ಕೆಲವರು ಪ್ರತ್ಯೇಕವಾಗಿ ಒಂದು ಜಾತಿಯನ್ನು ಪ್ರಸ್ತಾಪಿಸಿ ಮಾತನಾಡಿದ್ದಾರಲ್ಲಾ?**

ಇವೆರಡನ್ನು ಮೀರಿ ನಡೆದ ಉತ್ತಮ ಚುನಾವಣೆ ಇದಾಗಿದೆ. ನಾನು ಆಯ್ಕೆಯಾಗಲು 27 ಜಿಲ್ಲೆಗಳಲ್ಲಿ ಮುನ್ನಡೆ ನೀಡಿರುವುದೇ ಇದಕ್ಕೆ ಕಾರಣ. ಚಾಮರಾಜನಗರದಿಂದ ಹಿಡಿದು ಬೀದರ್‌ವರೆಗೆ, ಕರಾವಳಿಯಿಂದ ಹಿಡಿದು ಕೋಲಾರದವರೆಗೆ ಜನಬೆಂಬಲ ಸಿಕ್ಕಿದೆ. ನನ್ನ ಜಾತಿಯವರು ಹೆಚ್ಚಾಗಿ ಇಲ್ಲದ ಜಿಲ್ಲೆಗಳಲ್ಲಿ ಅತಿ ಹೆಚ್ಚು ಮತ ಸಿಕ್ಕಿದೆ. ಈ ರೀತಿ ಆರೋಪ ಮಾಡಿರುವವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ, ನನ್ನ ಅರ್ಹತೆ, ಯೋಗ್ಯತೆ, ದಕ್ಷತೆ, ಪ್ರಮಾಣಿಕತೆಗೆ ಬೆಲೆ ಕೊಟ್ಟು ಮತದಾರರು ಆಯ್ಕೆ ಮಾಡಿದ್ದರೆ, ಕೆಲವರು ಆಡಿರುವ ಮಾತುಗಳು ಇಂತಹ ಸಂದರ್ಭದಲ್ಲಿ ಅಪ್ರಸ್ತುತ.

**6. ಅಭಿವ್ಯಕ್ತಿ ಸ್ವಾತಂತ್ರ್ಯ ದಮನವಾಗುತ್ತಿರುವುದು, ಕಲಬುರ್ಗಿ ಹತ್ಯೆಯನ್ನು ಸರಿಯಾದ ರೀತಿಯಲ್ಲಿ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲು ಕಸಾಪ ಸರ್ಕಾರಕ್ಕೆ ಗಟ್ಟಿ ದನಿ ಹೊರಡಿಸಲಿಲ್ಲ ಎಂಬ ಅಪವಾದವಿದೆಯಲ್ಲ?**

ಈ ಬಗ್ಗೆ ಜನರಿಗೆ ಮಾಹಿತಿ ಕೊರತೆ ಇದೆ. ಕಾನೂನಿನ ಜ್ಞಾನ ಉಳ್ಳವರಿಗೆ ಅರ್ಥವಾಗುತ್ತದೆ. ಕೊಲೆ ಅಥವಾ ಹತ್ಯೆಯಂತಹ ಕ್ರಿಮಿನಲ್ ಪ್ರಕರಣಕ್ಕೂ ಸಾಹಿತ್ಯ ಪರಿಷತ್ತಿನ ಹೋರಾಟಕ್ಕೂ ವ್ಯತ್ಯಾಸವಿದೆ. ನಾವು ಈ ರೀತಿ ಮಾತನಾಡಿದರೆ ನ್ಯಾಯಲಯಗಳು, ಪೊಲೀಸರು ಇರಬಾರದು ಎಂದಾಗುತ್ತದೆ. ನಾನು ಲಕ್ಷ್ಮೀಶ್ವರ, ಹುಬ್ಬಳ್ಳಿಯಲ್ಲಿ ಎರಡು ವರ್ಷ ವಕೀಲಿ ವೃತ್ತಿ ಮಾಡಿರುವುದರಿಂದ ನೀತಿ ನಿಯಮಗಳು ಗೊತ್ತಿವೆ. ರಾಜ್ಯಸರ್ಕಾರ ಸಿಐಡಿ ತನಿಖೆ ಆದೇಶ ಮಾಡಿದೆ. 10-12 ವರ್ಷದಿಂದ ಹಲವು ಪ್ರಕರಣಗಳೇ ಉಳಿದಿರುವುದರಿಂದ ಈ ಪ್ರಕರಣ ತ್ವರಿತಗತಿಯಲ್ಲಿ ನಡೆಯಲು ಸಾಧ್ಯವಾಗಿಲ್ಲ. ಸಿಐಡಿಯು ಈ ಪ್ರಕರಣವನ್ನು ಸರಿಯಾದ ರೀತಿಯಲ್ಲಿ ತನಿಖೆ ಮಾಡುವಂತೆ ಒತ್ತಾಯಿಸಬಹುದಷ್ಟೆ.

* * * * *

## 7. ಲಂಕೇಶ್ ಪತ್ರಿಕೆ - 9.3.2016

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷಗಾದಿ ಚುನಾವಣೆಗೆ ಇನ್ನೇನು ಕ್ಷಣಗಣನೆ ಶುರುವಾಗಿದೆ. ಫೆಬ್ರವರಿ 28ಕ್ಕೆ ಸರಿಸುಮಾರು ಒಂದು ಲಕ್ಷದ ಎಂಬತ್ತು ಸಾವಿರ ಕಸಾಪ ಸದಸ್ಯರು ಹೊಸ ಸಾರಥಿಗಳ ಆಯ್ಕೆಗೆ ಮತ ಚಲಾಯಿಸಲು ದಿನಾಂಕವೂ ನಿಕ್ಕಿಯಾಗಿದೆ. ಕಸಾಪ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ದಲಿತ ಸಾಹಿತಿಯೊಬ್ಬರನ್ನು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸುವ ಮೂಲಕ ನಿಕಟಪೂರ್ವ ಅಧ್ಯಕ್ಷರಾದ ಪುಂಡಲೀಕ ಹಾಲಂಬಿಯವರು ಹೊಸದೊಂದು ಕ್ರಾಂತಿಕಾರಿ ದಿಕ್ಕನ್ನು ತೋರಿಸಿಕೊಟ್ಟಿದ್ದರು. ಕಸಾಪದ ಮುಂದಿನ ಅಧ್ಯಕ್ಷರಾಗಿ ಆಯ್ಕೆಗೊಳ್ಳುವವರೂ ಸಹ ಇಂತದ್ದೇ ದಿಟ್ಟ ಹೆಜ್ಜೆಗಳಿಗೆ ಸಾಕ್ಷಿಯಾಗಬಲ್ಲರೇ? ಮುಸುಕಿರುವ ಅಪವಾದಗಳಿಂದ ಹೊರಗೆಳೆದು ಕಸಾಪದ ಜಡತ್ವವನ್ನು ಕಿತ್ತೆಸೆಯಬಲ್ಲರೆ? ಕನ್ನಡಿಗರ ಈ ಸ್ವಾಭಿಮಾನಿ ಪ್ರಜ್ಞೆಯನ್ನು ಹೋರಾಟಗಳಲ್ಲಿ ಸಕ್ರಿಯವಾಗಿಸಬಲ್ಲರೇ? ಎಂಬ ಕುತೂಹಲ ಎಲ್ಲರಲ್ಲೂ ಇದೆ. ಇಂತಹ ಗಂಭೀರ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ನೋಡಿದಾಗ ಸ್ಪರ್ಧೆಯಲ್ಲಿ ಗಮನ ಸೆಳೆಯೋದು ಮನು ಬಳಿಗಾರ್. ರಾಜ್ಯ ಸರ್ಕಾರದ ಕೆಎಎಸ್ ಶ್ರೇಣಿಯ ಅಧಿಕಾರಿಯಾಗಿ ವಿವಿಧ ಇಲಾಖೆಗಳಲ್ಲಿ, ಪ್ರಧಾನವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕೆಲಸ ಮಾಡಿದ ಅನುಭವ ಇರುವ ಬಳಿಗಾರ್ ಸ್ವತಃ ಒಬ್ಬ ಸಾಹಿತಿ ಮತ್ತು ಸಾಹಿತ್ಯಾಭಿಮಾನಿ. ಕಸಾಪದ ಆಡಳಿತಾಧಿಕಾರಿಯಾಗಿಯೂ ಕೆಲಸ ಮಾಡಿದ್ದಂತವರು. ಒಂದುಕಡೆ ಅಕ್ಷರಕೃಷಿಯ ಮೂಲಕ ಸೃಜನಶೀಲತೆಯನ್ನೂ, ಮತ್ತೊಂದೆಡೆ ಆಡಳಿತಾನುಭವದ ಮೂಲಕ ದಕ್ಷತೆಯನ್ನೂ ಹೊಂದಿರುವ ಮನು ಬಳಿಗಾರ್‌ರ ಸ್ಪರ್ಧೆ ಕುತೂಹಲ ಹುಟಿಸಿರೋದೆ ಈ ಕಾರಣ. ಅಂತಹ ಕುತೂಹಲ ತಣಿಸಿಕೊಳ್ಳಲೆಂದೇ ಮನು ಬಳಿಗಾರ್‌ರನ್ನು 'ಪತ್ರಿಕೆ' ಮಾತಿಗೆಳೆದಾಗ ಹೊರಬಂದ ಅವರ ಕನಸು, ಯೋಜನೆಗಳ ಅಕ್ಷರರೂಪ ಇಲ್ಲಿದೆ.

**ಪತ್ರಿಕೆ: ಇಷ್ಟು ದಿನ ತಾವು ಸರ್ಕಾರಿ ಯಂತ್ರದ ಅಧಿಕಾರಿಯಾಗಿ ಕೆಲಸ ಮಾಡಿದ್ದಂತವರು. ಮನಸ್ಸು ಮಾಡಿದ್ದರೆ ಸಕ್ರಿಯ ರಾಜಕಾರಣಕ್ಕೇ ಇಳಿಯಬಹುದಿತ್ತು. ಆದರೆ, ಸಾಹಿತ್ಯ ಕೃಷಿ ಹಿನ್ನೆಲೆಯ ಕಸಾಪದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸಬೇಕೆಂದು ಏಕೆನ್ನಿಸಿತು?**

**ಬಳಿಗಾರ್:** ಬಾಲ್ಯದಿಂದಲೂ ನನ್ನನ್ನು ಸಾಹಿತ್ಯ ಸೆಳೆಯುತ್ತಲೇ ಇತ್ತು. ಸಣ್ಣಪುಟ್ಟ ಕತೆಗಳಿಂದ ಹಿಡಿದು ಮೇರು ಸಾಹಿತಿಗಳ ಕೃತಿಗಳನ್ನು ಓದುವುದೇ ನನ್ನ ಗೀಳಾಗಿತ್ತು. ಕನ್ನಡ ಭಾಷಾಭಿಮಾನ ನನ್ನೊಳಗೆ ಗಟ್ಟಿಗೊಂಡು ಆ ಓದು ಸಹ ಒಂದು ನೆಪವಾಯ್ತು. ಹೀಗೆ ಸಾಗಿದ ನಾನು ಮುಂದೆ ಎಂ.ಎ. ಮಾಡಿ, ಕೆಎಎಸ್ ಪೂರೈಸಿ ಸರ್ಕಾರಿ ಹುದ್ದೆಗೇರಿದರೂ ಸಾಹಿತ್ಯದ ಗೀಳು, ಭಾಷಾಭಿಮಾನದ ತುಡಿತ ನನ್ನಿಂದ ದೂರಾಗಲಿಲ್ಲ.

ನಿಧಾನಕ್ಕೆ ನನ್ನನ್ನು ಅಕ್ಷರ ಕೃಷಿಯಲ್ಲಿ ತೊಡಗಿಸಿಕೊಂಡೆ. ಐದು ಕತಾಸಂಕಲನ, ಆರು ಕವನಸಂಕಲನ, ನಾಲ್ಕು ಲಲಿತ ಪ್ರಬಂಧ ಸಂಕಲನ, ನಾಲ್ಕು ಜೀವನ ಚರಿತ್ರೆ, ಅಂಕಣಗಳ ಬರಹಗುಚ್ಛ, ಏಳು ಸಂಪಾದಿತ

ಕೃತಿಗಳೂ ಸೇರಿದಂತೆ ಒಟ್ಟು ಇಪ್ಪತ್ತೆಂಟಕ್ಕೂ ಹೆಚ್ಚು ಕೃತಿಗಳನ್ನು ರಚಿಸುವಷ್ಟರಮಟ್ಟಿಗೆ ನನ್ನ ಸಾಹಿತ್ಯದ ಹಾದಿ ಸಾಗಿಬಂದಿದೆ. ಸಾಹಿತ್ಯ ಮನುಷ್ಯನೊಳಗೆ ಹುಮ್ಮಸ್ಸನ್ನು ತುಂಬುತ್ತೆ ಅನ್ನೋದು ನನ್ನ ವಿಚಾರದಲ್ಲೂ ನಿಜವಾಯ್ತು. ನಿವೃತ್ತಿಯಾಗುವ ವೇಳೆಗಾಗಲೇ ವೃತ್ತಿಯ ಜಂಜಡದಿಂದ ಬಸವಳಿಯುವ ಬದಲು ನಾನು ಮತ್ತಷ್ಟೂ ಚೈತನ್ಯಶೀಲನಾಗಿದ್ದೆ. ಅದನ್ನು ಕಂಡೇ ರಾಜ್ಯ ಸರ್ಕಾರ ನಿವೃತ್ತಿಯ ನಂತರವೂ ನನ್ನ ಸೇವೆಯನ್ನು ಪಡೆಯಬಯಸಿ ನಿಯುಕ್ತಿಗೊಳಿಸಿತ್ತು. ಆದರೆ ಸರ್ಕಾರಿ ಸೇವೆ ಮಾಡಿದ್ದು ಸಾಕು ಅಂತ ಮನಸ್ಸು ಹೇಳಿತ್ತು. ಹಾಗಂತ ವಿಶ್ರಾಂತಿಯ ಹೆಸರಲ್ಲಿ ಜಡವಾಗಿ ಕೂರುವುದೂ ನನಗೆ ಸುತಾರಾಂ ಇಷ್ಟವಿರಲಿಲ್ಲ. ಸಾಹಿತ್ಯದಲ್ಲಿ ಆಳವಾಗಿ ತೊಡಗಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೆ. ಅದೇವೇಳೆಗೆ ಕಸಾಪ ಚುನಾವಣೆಯೂ ಎದುರು ಬಂತು. ಹಲವು ಹಿತೈಷಿಗಳು ಸ್ಪರ್ಧಿಸುವಂತೆ ಸಲಹೆ ನೀಡಿದರು. ಮೊದಲಿಂದಲೂ ಕನ್ನಡಾಭಿಮಾನದಲ್ಲೇ ಬೆಳೆದ ನಾನು ನಾಡು, ನುಡಿಯ ಸೇವೆ ಮಾಡಲು ಇದೇ ಒಳ್ಳೆಯ ಅವಕಾಶವೆಂಬ ತೀರ್ಮಾನಕ್ಕೆ ಬಂದೆ. ಕೂಡಲೇ ಸರ್ಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಕಸಾಪ ಚುನಾವಣೆಗೆ ಸ್ಪರ್ಧಿಸಿದೆ.

ಇನ್ನು ರಾಜಕಾರಣದ ಬಗ್ಗೆ ಹೇಳಬೇಕಂದ್ರೆ ನನಗೇನೂ ಪೊಲಿಟಿಕ್ಸ್ ಮೈಲಿಗೆಯ ಸಂಗತಿಯಲ್ಲ. ಆದರೆ ಎಲ್ಲಾ ಪಕ್ಷಗಳಲ್ಲೂ ನನ್ನ ಸ್ನೇಹಿತರಿದ್ದಾರೆ. ಹಿತೈಷಿಗಳಿದ್ದಾರೆ. ನಾನು ಗುಣಗ್ರಾಹಿ ಮನುಷ್ಯ. ಅದೇ ಕಾರಣಕ್ಕೆ ನನ್ನ ಆತ್ಮೀಯರು ನನ್ನನ್ನು ಅಜಾತಶತ್ರು ಅಂತ ಗುರುತಿಸುತ್ತಾರೆ. ಯಾವುದೋ ಒಂದು ಪಕ್ಷದಲ್ಲಿ ಗುರುತಿಸಿಕೊಳ್ಳುವುದು ನನಗೆ ಇಷ್ಟವಾಗಲಿಲ್ಲ. ಹಾಗಾಗಿ ಅದನ್ನೊಂದು ಆಯ್ಕೆಯಾಗಿ ನನ್ನ ಮುಂದೆ ಇರಿಸಿಕೊಳ್ಳಲೇ ಇಲ್ಲ.

"ಸಮಾನತೆಯನ್ನು ಕನಸುವುದೇ ಮಾನವತೆಯ ಮೂಲಧರ್ಮ"

**ಪತ್ರಿಕೆ: ಕಸಾಪ ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಅದರಲ್ಲಿ ಎರಡು ಮಾತಿಲ್ಲ. ಇದೇ ವೇಳೆ, ಅದರ ಮೇಲಿರುವ ಕೆಲವು ಅಪವಾದಗಳನ್ನೂ ನಾವು ಮರೆಯಲಿಕ್ಕಾಗುವುದಿಲ್ಲ. ಉದಾಹರಣೆಗೆ, ಕನ್ನಡ ಸಾಹಿತ್ಯ ಸಮ್ಮೇಳನ ಒಬ್ಬ ಮಹಿಳಾ ಅಧ್ಯಕ್ಷತೆಯನ್ನು ಕಾಣಲು 60 ವರ್ಷಗಳ ಕಾಲ ಕಾಯಬೇಕಾಯ್ತು. ಒಬ್ಬ ದಲಿತ ಸಾಹಿತಿ ಅಧ್ಯಕ್ಷನಾಗಲು 80 ಸಮ್ಮೇಳನಗಳು ಸರಿಯಬೇಕಾಯ್ತು. ಆದಾದ ಮೇಲಾದರೂ ಇಲ್ಲಿವರೆಗೆ ನಡೆದಿರುವ 81 ಸಮ್ಮೇಳನಗಳಲ್ಲಿ ಮಹಿಳೆಯರಿಗೆ ಅಧ್ಯಕ್ಷ ಸ್ಥಾನ ದಕ್ಕಿರೋದು ನಾಲ್ಕು ಜನರಿಗೆ ಮಾತ್ರ ಇಂತಹ ಅಪವಾದಗಳನ್ನು ನೀವು ಹೇಗೆ ನಿಭಾಯಿಸುತ್ತೀರಿ?**

**ಬಳಿಗಾರ್:** ಮೂಲಭೂತವಾಗಿ ನಾನು ಸಮಾನತಾವಾದಿ, ಜಾತ್ಯತೀತ ಮನಸ್ಸಿನವ. ಇವು ನನ್ನ ರಕ್ತದಲ್ಲೇ ಬೆರೆತಿವೆ: ನನ್ನ ಬರಹಗಳಲ್ಲೂ ಅವು ಪ್ರತಿಫಲಿಸಿವೆ. ಕೇವಲ ಸಾಹಿತ್ಯಶೀಲ ವಿಭಾಗದಲ್ಲಿ ಮಾತ್ರವಲ್ಲ ಆಡಳಿತವನ್ನೂ ಒಳಗೊಂಡಂತೆ ಕಸಾಪದ ಎಲ್ಲಾ ಅಂಗಗಳಲ್ಲೂ ಸಮಾನತೆಯು ಸ್ಥಾಪಿಸುವ ಕನಸು ಕಂಡಂತವನು ನಾನು. ಸುಮಾರು ನಾಲ್ಕೂವರೆ ವರ್ಷ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕನಾಗಿದ್ದಾಗ ನಾನು ಇದನ್ನೇ ಸಾಕಾರಗೊಳಿಸಿದ್ದೇನೆ. ನನಗಿಂತ ಮೊದಲು ಪರಿಶಿಷ್ಟಜಾತಿ ಮತ್ತು

ಪರಿಶಿಷ್ಟಪಂಗಡದ ಸಾಹಿತ್ಯ ವಿಭಾಗಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನವೇ ಬರುತ್ತಿರಲಿಲ್ಲ. ಬಂದರೂ ಅದು ಯಾತಕ್ಕೂ ಸಾಕಾಗುತ್ತಿರಲಿಲ್ಲ. ಆದರೆ ನಾನು ಹೆಚ್ಚು ಅನುದಾನವನ್ನು ತಂದು ಹೆಚ್ಚು ದಲಿತ ಮತ್ತು ಬಂಡಾಯ ಸಾಹಿತ್ಯ ಹೊರಬರುವಂತೆ ಮಾಡಿದೆ. ಇದು ನನ್ನ ಸಾಧನೆ ಅಂತ ನಾನು ಹೇಳಿಕೊಳ್ಳುತ್ತಿಲ್ಲ. ಜವಾಬ್ದಾರಿಯುತ, ಪ್ರಜ್ಞಾವಂತ ನಾಗರಿಕನಾಗಿ ಸಾಮಾಜಿಕ ನ್ಯಾಯದ ಬಗೆಗಿರುವ ನನ್ನ ಬದ್ಧತೆಯನ್ನು ಖಾತ್ರಿಪಡಿಸುವುದಕ್ಕೋಸ್ಕರ ಪ್ರಸ್ತಾಪಿಸುತ್ತಿದ್ದೇನೆ.

'ನಾನು ಕಸಾಪದ ಅಧ್ಯಕ್ಷನಾಗಿ ಆಯ್ಕೆಯಾದದ್ದೇ ಆದಲ್ಲಿ ಸಾಧನೆ, ಯೋಗ್ಯತೆ, ಅರ್ಹತೆ, ಪ್ರಾದೇಶಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಆಧಾರವಾಗಿಟ್ಟುಕೊಂಡು ಪಾರದರ್ಶಕವಾಗಿ ಕೆಲಸ ಮಾಡುತ್ತೇನೆ' ಅನ್ನೋ ವಾಕ್ಯವನ್ನು ಈ ನಿಮ್ಮ ಪ್ರಶ್ನೆಗೆ ಬಹಳ ಮುಂಚೆಯೇ ನನ್ನ ಮನವಿ ಪತ್ರದಲ್ಲಿ ಬರೆದುಕೊಂಡಿದ್ದೇನೆ. ಬೇಕಾದ್ರೆ ನೀವೇ ಪರಿಶೀಲಿಸಿ ನೋಡಿ, ಸರ್ಕಾರಿ ಆಡಳಿತ ನನಗೆ ದಕ್ಷತೆಯನ್ನು ಕಲಿಸಿದಂತೆಯೇ ಸಾಹಿತ್ಯ ನನಗೆ ದಕ್ಷತೆಯನ್ನು ಕಲಿಸಿದಂತೆಯೇ ಸಾಹಿತ್ಯ ನನಗೆ ಮಾನವೀಯತೆಯನ್ನು ಕಲಿಸಿದೆ. ಗಂಡು-ಹೆಣ್ಣು, ಜಾತಿ-ಧರ್ಮ, ಮೇಲು-ಕೀಳು ಇವ್ಯಾವುಗಳ ಪೂರ್ವಾಗ್ರಹಕ್ಕೆ ಒಳಗಾಗದೆ ಸಮಾನತೆಯನ್ನು ಕನಸುವುದೇ ಮಾನವೀಯತೆಯ ಮೂಲಧರ್ಮ. ನಾನು ಅಧ್ಯಕ್ಷನಾಗಲಿ, ಬಿಡಲಿ ನನ್ನ ಬದುಕಿನುದ್ದಕ್ಕೂ ಅದನ್ನು ಪಾಲಿಸಿಕೊಂಡು ಹೋಗುತ್ತೇನೆ. ಈಗ ನನಗೆ ಬೆಂಬಲ ಸೂಚಿಸಿರುವ ನಿಕಟಪೂರ್ವ ಅಧ್ಯಕ್ಷ ಪುಂಡಲೀಕ ಹಾಲಂಬಿಯವರು ದಲಿತ ಕವಿ ಸಿದ್ದಲಿಂಗಯ್ಯ ಅವರನ್ನು ಸಮ್ಮೇಳನಾಧ್ಯಕ್ಷ ಮಾಡುವ ಮೂಲಕ ಒಂದು ಹೊಸ ಕ್ರಾಂತಿಯನ್ನು ಮೊಳಗಿಸಿದ್ದಾರೆ. ಅಂತಹ ಪರಂಪರೆಯನ್ನು ನಾನೂ ಮುಂದುವರೆಸಿಕೊಂಡು ಹೋಗುತ್ತೇನೆ.

**ಪತ್ರಿಕೆ: ಕಸಾಪ ಈಗ ಸಂಪೂರ್ಣ ರಾಜಕೀಯಮಯವಾಗುತ್ತಿದೆ; ರಾಜಕಾರಣಿಗಳು ಕಸಾಪದೊಳಕ್ಕೆ ಪ್ರವೇಶ ಪಡೆಯುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಈ ಕುರಿತು ತಮ್ಮ ಅಭಿಪ್ರಾಯ.**

**ಬಳಿಗಾರ್:** ಸಾಹಿತ್ಯ ಯಾರಿಗೂ ಸೀಮಿತವಾದದ್ದಲ್ಲ. ರಾಜಕಾರಣಿಯಾದವನೊಬ್ಬ ಸಾಹಿತಿಯಾಗಿರಕೂಡದು ಎಂದೇನಿಲ್ಲವಲ್ಲ. ರಾಜಕಾರಣದ ಜೊತೆಜೊತೆಗೆ ಸಾಹಿತ್ಯದಲ್ಲೂ ತೊಡಗಿಸಿಕೊಂಡ ಎಷ್ಟು ರಾಜಕಾರಣಿಗಳು ಉದಾಹರಣೆಗೆ ಸಿಗುವುದಿಲ್ಲ. ಸಾಹಿತಿಗಳಾದವರಿಗೆ ಒಂದು ರಾಜಕೀಯ ಧೋರಣೆ ಅಂತ ಹೇಗಿರುತ್ತೋ ಹಾಗೆಯೇ ಒಬ್ಬ ರಾಜಕಾರಣಿಗೆ ಸಾಹಿತ್ಯದ ಒಲವೂ ಇರಬಹುದು. ಆ ನಿಟ್ಟಿನಿಂದ ರಾಜಕಾರಣಿ ಕಸಾಪ ಚುನಾವಣೆಯಲ್ಲಿ ಸ್ಪರ್ಧಿಸುವುದು ತಪ್ಪು ಅಂತ ನನಗನ್ನಿಸುವುದಿಲ್ಲ. ಆದರೆ ಹೀಗೆ ಪ್ರವೇಶಿಸಿದವರು ಇಲ್ಲಿಗೆ ಬಂದಮೇಲೆ ಒಳರಾಜಕಾರಣ ಮಾಡಬಾರದು. ಸಾಹಿತ್ಯವನ್ನು ಶುದ್ಧವಾಗಿಡುವುದಷ್ಟೇ ಅವರ ಪ್ರಾಧಾನ್ಯತೆಯಾಗಬೇಕು.

ಆದರೆ ಇಲ್ಲೊಂದು ಮಾತನ್ನು ನಾನು ಹೇಳಲೇಬೇಕು. ಆಳುವ ಸರ್ಕಾರಗಳು ಕಸಾಪ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತವೆ ಎಂಬ ಮಾತುಗಳೂ ನನ್ನ ಕಿವಿಗೆ ಬಿದ್ದಿವೆ. ಕನ್ನಡ ಸಾಹಿತ್ಯ ಪರಿಷತ್ತಿನ

ಆಡಳಿತಾಧಿಕಾರಿಯಾಗಿ ನಾನು ಸವೆಸಿದ ಇಷ್ಟು ವರ್ಷಗಳ ಅನುಭವದಲ್ಲಿ ಅಂತಹ ಬೆಳವಣಿಯೇನೂ ನನ್ನ ಕಣ್ಣಿಗೆ ಕಂಡಿಲ್ಲ. ಕಸಾಪ ಕೇವಲ ಒಂದು ಸಂಸ್ಥೆಯಲ್ಲಿ ಕನ್ನಡ ಮತ್ತು ಕರ್ನಾಟಕದ ಸಾಕ್ಷಿಪ್ರಜ್ಞೆ ಅಂತದ್ದು ಪ್ರಭುತ್ವದ ಹಿಡಿತಕ್ಕೆ ಸಿಕ್ಕಿಕೊಳ್ಳುವುದು ಸ್ವೀಕರಿಸುವಂತದ್ದಲ್ಲ, ಅದೇರೀತಿ ಅನುದಾನವನ್ನು ಸ್ವೀಕರಿಸಿದ ಮಾತ್ರಕ್ಕೆ ಕಸಾಪ ಸರ್ಕಾರದ ಹಿಡಿತಕ್ಕೊಳಪಡುತ್ತದೆ ಎಂಬುದೂ ತಪ್ಪು. ಒಂದೊಮ್ಮೆ ಇಂತಹ ವ್ಯವಸ್ಥೆಯೇನಾದರೂ ಈಗ ಅಸ್ತಿತ್ವದಲ್ಲಿದ್ದರೆ ನನ್ನ ಇದುವರೆಗಿನ ಆಡಳಿತ ಅನುಭವವನ್ನು ಬಳಸಿಕೊಂಡು ಅದನ್ನು ಅಂತ್ಯಗಾಣಿಸುತ್ತೇನೆ.

**ಪತ್ರಿಕೆ: ಕಸಾಪ ಚುನಾವಣೆಯಲ್ಲಿ ಜಾತಿ ಮಹತ್ವದ ಪಾತ್ರ ವಹಿಸುತ್ತೆ ಎಂಬ ಮಾತಿದೆ. ಈ ಚುನಾವಣೆಯಲ್ಲಿ ಇದು ನಿಮ್ಮ ಅನುಭವಕ್ಕೆ ಬಂದಿದೆಯಾ?**

**ಬಳಿಗಾರ್:** ನೋಡಿ, ಪುಂಡಲೀಕ ಹಾಲಂಬಿ, ಶೇಖರಗೌಡ ಮಾಲಿ ಪಾಟೀಲ, ದೊಡ್ಡರಂಗೇಗೌಡರು ನನ್ನ ಸ್ಪರ್ಧೆಯ ಸೂಚಕರು. ಇನ್ನುಳಿದಂತೆ ದೇಜಗೌ, ಚಂಪಾ, ಪುನರೂರು, ಗೊ.ರು.ಚನ್ನಬಸಪ್ಪ, ಸಿದ್ದಲಿಂಗಯ್ಯ, ಕಮಲಾ ಹಂಪನಾ, ಜಿ.ವೆಂಕಟಸುಬ್ಬಯ್ಯ, ಎಲ್.ಎಸ್.ಶೇಷಗಿರಿರಾವ್, ಮಳಲಿ ವಸಂತಕುಮಾರ್, ಬರಗೂರು, ರಂಜಾನ್ ದರ್ಗಾ, ಬಿ.ಟಿ.ಲಲಿತಾ ನಾಯಕ್ ಹೀಗೆ ಸಾಕಷ್ಟು ಹಿರಿಯ ಸಾಹಿತಿಗಳು ನನಗೆ ಬಹಿರಂಗವಾಗಿ ಬೆಂಬಲ ಸೂಚಿಸಿದ್ದಾರೆ. ಇವರನ್ನು ಜಾತಿಯ ಆಧಾರದಲ್ಲಿ ವರ್ಗೀಕರಿಸಿ ನೋಡಿ. ಯಾವುದೇ ಒಂದು ಜಾತಿಯವರು ಮಾತ್ರ ಇಲ್ಲಿದ್ದಾರಾ? ಅಥವಾ ಪ್ರಬಲ ಜಾತಿಗಳವರು ಮಾತ್ರ ನನ್ನ ಬೆಂಬಲಕ್ಕೆ ಬಂದಿದ್ದಾರಾ?

ನಿಜ ಹೇಳಬೇಂಕಂದ್ರೆ ನಾನು ಕೊಟ್ಟಿರೊ ಹೆಸರುಗಳ ಪಟ್ಟಿ ತೀರಾ ಚಿಕ್ಕದಾಯ್ತು. ಎಲ್ಲಾ ವರ್ಗದ ಎಲ್ಲಾ ಜಾತಿಯ ಹಿರಿ-ಕಿರಿ ಸಾಹಿತಿಗಳು, ಕಲಾವಿದರು, ಚಿಂತಕರು, ಹೋರಾಟಗಾರರು ನನ್ನನ್ನು ಬೆಂಬಲಿಸುತ್ತಿದ್ದಾರೆ. ಅವರಲ್ಲೆಲ್ಲ ಜಾತಿಯನ್ನು ಎಣಿಸುವುದಕ್ಕಾಗುವುದಿಲ್ಲ. ಜಾತಿಯ ಕಾರಣಕ್ಕೆ ಅವರಾರು ನನ್ನ ಜೊತೆಗಿಲ್ಲ. ಹಾಗಾಗಿ ಕಸಾಪ ಚುನಾವಣೆಯಲ್ಲಿ ಜಾತಿ ಪ್ರಭಾವ ಬೀರುತ್ತೆ ಅನ್ನೋ ಅಂಶ ನನ್ನ ಅನುಭವಕ್ಕಂತೂ ಬಂದಿಲ್ಲ.

**ಪತ್ರಿಕೆ: ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಗಳಿಗೂ ಸರ್ಕಾರದಿಂದ ಅನುದಾನ ಲಭಿಸುವಂತೆ ಮಾಡುವಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ತಮ್ಮ ಪಾತ್ರ ಅಪಾರ. ಇಂತಹ ಆಲೋಚನೆ ನಿಮಗೆ ಬರಲು ಕಾರಣ?**

**ಬಳಿಗಾರ್:** 1989-90ರಲ್ಲಿ ಬಿಜಾಪುರದಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನವೊಂದು ನಡೆದಿತ್ತು. ನಾನು ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಆ ಸಮ್ಮೇಳನಕ್ಕೆ ನಾನೇ ಖುದ್ದು ಆಸ್ಥೆ ವಹಿಸಿ ಶಿವರಾಮ ಕಾರಂತರನ್ನು ಕರೆಸಿದ್ದೆ. ಅವರು ಬಂದಾಗ ಉಳಿದುಕೊಳ್ಳಲು ಒಳ್ಳೆಯ ಜಾಗವೇ ಇರಲಿಲ್ಲ ನಮಗಿದ್ದ ಅನುದಾನದಲ್ಲಿ ಅತಿಥಿಗೆ ಐಬಿಯಲ್ಲಿ ರೂಮು ಮಾಡಬೇಕಿತ್ತು. ಆ ಐಬಿ ತೀರಾ ಕಳಪೆ ವ್ಯವಸ್ಥೆಯಲ್ಲಿತ್ತು.

ಅದನ್ನು ಕಂಡು ಬೇಸರಗೊಂಡ ನಾನು ಮುದ್ದೇಬಿಹಾಳದ ನನ್ನ ಮನೆಯಲ್ಲೇ ಅವರನ್ನು ಎರಡು ದಿವಸ ಉಳಿಸಿಕೊಂಡಿದ್ದೆ. ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳಿಗೇ ಸರ್ಕಾರಗಳಿಂದ ಈ ಮಟ್ಟಿಗಿನ ನಿರ್ಲಕ್ಷ್ಯ ಕಂಡುಬರುತ್ತಿದೆ, ಇನ್ನೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ಸಮ್ಮೇಳನಗಳ ಶೋಚನೆ ಹೇಗಿರಬೇಡ ಅಂತ ಆಗ ನನಗನ್ನಿಸಿತ್ತು.

ಆದಾಗಿ 16 ವರ್ಷಗಳ ನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶನ ಹುದ್ದೆ ನನಗೆ ಒದಗಿ ಬಂದಾಗ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಐದು ಲಕ್ಷ ಮತ್ತು ತಾಲ್ಲೂಕು ಸಮ್ಮೇಳನಕ್ಕೆ 1 ಲಕ್ಷ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳಿಸಿ, ಅನುಮೋದನೆ ಪಡೆದೆ.

**ಪತ್ರಿಕೆ: ಕನ್ನಡವನ್ನು ಪಸರಿಸಲು ನಿಮ್ಮದೇ ಆದ ಯೋಜನೆಯನ್ನೇನಾದರೂ ಹಾಕಿಕೊಂಡಿದ್ದೀರಾ?**

**ಬಳಿಗಾರ್:** ನನ್ನ ಮುಂದೆ ಎರಡು ಗುರಿಗಳಿವೆ. ಮೊದಲನೆಯದ್ದು ಕನ್ನಡ ತಂತ್ರಾಂಶ ವರದಿಗೆ ಹೆಚ್ಚು ಒತ್ತು ಕೊಡುವುದು. ಇದು ತಂತ್ರಜ್ಞಾನದ ಯುಗ. ಪ್ರತಿಯೊಬ್ಬರ ಅಂಗೈಗೂ ಅಂತರ್ಜಾಲ ಬಂದು ತಲುಪಿದೆ. ಅದನ್ನು ಬಳಸಿಕೊಂಡು ಕನ್ನಡ ಭಾಷೆಯನ್ನು ಮತ್ತಷ್ಟು ಪ್ರಚುರಪಡಿಸಬೇಕೆನ್ನುವುದು ನನ್ನ ಆಸೆ. ಡಾ.ಚಿದಾನಂದ ಗೌಡರ ನೇತೃತ್ವದಲ್ಲಿ ಗಣಕಯಂತ್ರ ತಜ್ಞರ ತಂಡವೊಂದು ಕನ್ನಡ ತಂತ್ರಾಂಶ ವರದಿಯನ್ನು ಸಲ್ಲಿಸಿದೆ. ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ನಿರ್ದೇಶಕನಾಗಿದ್ದಾಗ ರಚಿಸಿದ್ದಂತಹ ಸಮಿತಿ ಅದು. ವರದಿ ಪೂರ್ಣಪ್ರಮಾಣದಲ್ಲಿ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ಅದಕ್ಕೆ ಒತ್ತುಕೊಟ್ಟು ಜಾರಿಗೆ ತರಲು ಯತ್ನಿಸುತ್ತೇನೆ. ಆಗ ಯುವಪೀಳಿಗೆಯವರಲ್ಲೂ ಕನ್ನಡಾಭಿಮಾನವನ್ನು ಮೊಳೆಸಲು ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯವನ್ನೂ ಸಂಪದ್ಭರಿತವಾಗಿಸಬಹುದು.

ನನ್ನ ಅವಧಿಯಲ್ಲಿ ವಿಶ್ವ ಕನ್ನಡ 'ಸಾಹಿತ್ಯ' ಸಮ್ಮೇಳನವನ್ನು ನಡೆಸಬೇಕು ಎನ್ನುವುದೇ ನನ್ನ ಎರಡನೇ ಮಹದಾಸೆ. ವಿಶ್ವಕನ್ನಡ ಸಮ್ಮೇಳನವನ್ನು ಬೆಳಗಾವಿಯಲ್ಲಿ ಯಶಸ್ವಿಯಾಗಿ ಆಯೋಜಿಸಿದ ಅನುಭವ ನನಗಿದೆ. ಅದನ್ನೇ ಬಳಸಿಕೊಂಡು ಕನ್ನಡ ಸಾಹಿತ್ಯಕ್ಕೂ ಒಂದು ವಿಶ್ವ ಸಮ್ಮೇಳನ ಆಯೋಜಿಸಬೇಕು. ಅದರಿಂದೇನು ಪ್ರಯೋಜನ ಅಂತ ನೀವು ಕೇಳಬಹುದು. ನೋಡಿ, ನಮ್ಮ ದೇಶದ ಬಹುಪಾಲು ಪ್ರಾದೇಶಿಕ ಭಾಷೆಗಳು ಇವತ್ತು ಇಂಗ್ಲಿಷ್ ಪ್ರಭಾವಕ್ಕೆ ಸಿಲುಕಿಕೊಂಡಿವೆ. ಅದೊಂದು ಜಾಗತಿಕ ಭಾಷೆ. ಅದು ಸಹಜ ಅಂತ ನೀವಂದುಕೊಂಡಿರಬಹುದು. ಹಾಗಾದರೆ ನಿಮಗೊಂದು ಪ್ರಶ್ನೆ, ಇವತ್ತು ಪ್ರಪಂಚದಲ್ಲಿ ಹೆಚ್ಚು ಜನರು ಮಾತಾಡುವುದು ಯಾವ ಭಾಷೆ.. ಅದಲ್ಲದೆ ಫ್ರೆಂಚ್, ಅರೇಬಿಕ್, ಸ್ಪಾನಿಶ್, ಜಪಾನಿ ಭಾಷೆಗಳೂ ಇಂಗ್ಲಿಷ್ ಪ್ರಭಾವದ ಹೊರತಾಗಿ ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಹಾಗಿದ್ದಲ್ಲಿ ನಮ್ಮ ಪ್ರಾದೇಶಿಕ ಭಾಷೆಗಳಿಗೆ ಅದು ಸಾಧ್ಯವಿಲ್ಲವೇ?

ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸುವುದರಿಂದಲೇ ಅದು ಸಾಧ್ಯವಾಗಿಬಿಡುತ್ತೆ ಎಂಬ ಭ್ರಮೆ ನನ್ನದಲ್ಲ. ಆದರೆ ಆ ಮೂಲಕ ನಮ್ಮ ಸಾಹಿತ್ಯದ ಸಾಹಿತಿಗಳ ಉದ್ದೇಶವಾಗಿದ್ದುದರಿಂದ ತೊಡಕುಗಳು

ಇರುತ್ತಿರಲಿಲ್ಲ. ಹಳೆಯ ಸಾಹಿತಿಗಳಾದ ಬಿ.ಎಂ.ಶ್ರೀ. ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ ಮುಂತಾದವರ ಕಾಲ ಮುಗಿದು ನವೋದಯ ಸಾಹಿತ್ಯದ ಬೇಂದ್ರೆ, ಕುವೆಂಪು, ಪು.ತಿ.ನ., ಕಾರಂತರ ಕಾಲ ಬಂದಾಗಲೂ ಬಿಕ್ಕಟ್ಟು ಕಾಣಿಸಿಕೊಳ್ಳಲಿಲ್ಲ. ಪ್ರಗತಿಶೀಲ ಸಾಹಿತಿಗಳು, ನವ್ಯ ಸಾಹಿತಿಗಳು, ಬಂಡಾಯ, ದಲಿತ ಸಾಹಿತಿಗಳೆಲ್ಲ ಬರುವಷ್ಟರಲ್ಲಿ ಸಾಹಿತ್ಯ ಹಲವಾರು ಕಂಟಕಗಳಲ್ಲಿ ಸಿಕ್ಕಿಹಾಕಿಕೊಂಡಿತು.

## 8. ಲಂಕೇಶ್ ಪತ್ರಿಕೆ ಫೆಬ್ರವರಿ 18, 2016

## ಸಂದರ್ಶನ ಬಿ.ಎಂ. ರವಿಕೀರ್ತಿ

### ಭಾಷೆ, ಸಮಾನತೆಯ ನಿಲುವು: ಸರ್ವಜನಾಂಗದ ಒಲವು-ಮನು ಬಳಿಗಾರ್

ಮಾತೃಭಾಷೆಯ ಸಂದಿಗ್ಧತೆಯ ಮನನ ಮಾಡಿದಾಗ ಈ ಮಣ್ಣಿನ ಮನುಷ್ಯನ ಮನಸ್ಸು ಮರುಗುತ್ತದೆ. ಅನ್ನದ ಭಾಷೆನ ನಂಬಿ ಬದುಕುವುದು ಕನಸಾಗುತ್ತಿದೆ. ಖಾಸಗಿಯವರ ಕ್ರೂರ ಕನಸುಗಳು ಕನ್ನಡಕ್ಕೆ ಉರುಳಾಗುತ್ತಿವೆ. ಆಳುವವರ ಇಚ್ಛಾಶಕ್ತಿಯ ಕೊರತೆ ಭಾಷೆಗೆ ಕಂಟಕವಾಗುತ್ತಿದೆ. ಕನ್ನಡದ ಉಳಿವಿಗಾಗಿ ಹುಟ್ಟಿಕೊಂಡಿರುವ ಸಂಘಟನೆಗಳ ಕೂಗು ಸದಾಕಾಲ ಪ್ರತಿಧ್ವನಿಸುತ್ತಿಲ್ಲ. ಎಚ್ಚರಿಸುತ್ತಿಲ್ಲ. ಕನ್ನಡ ನಾಡು, ನುಡಿ ವರ್ಚಸ್ಸನ್ನು ಮತ್ತಷ್ಟು ದ್ವಿಗುಣಗೊಳಿಸಿ, ಕಣ್ ರೆಪ್ಪೆಕದಲಿಸದೆ ಅದರ ಸಮಸ್ಯೆ, ಸವಾಲಿಗೆ ಎದೆಯೊಡ್ಡಿ ಹೆಲಗ ಮೇಲೆ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಸಾಗಿದ ದಾರಿಯೂ ಕೂಡ ಕವಲುಗಳಾಗಿ ಸವಕಲಾಗಿದ್ದು ಸುಳ್ಳಲ್ಲ. ಆ ದಾರಿಯಲ್ಲೀಗ ಚುನಾವಣೆ ಎದುರಾಗಿದೆ. ಕನ್ನಡ ಬಾಷೆಯನ್ನು ಉಳಿಸುವ, ಬೆಳೆಸುವ, ಸಮಸ್ಯೆಗಳ ನಿವಾರಿಸುವ ಹಾಗೂ ಕ.ಸಾ.ಪದ ಶಕ್ತಿ ತೋರಿಸುವ, ನಿಜವಾಗಿ ಕನ್ನಡದ ಅಭಿಮಾನ, ಕನಸು, ಪ್ರೇಮ ಹೊತ್ತ ಕನ್ನಡಿಗನ ಅಗತ್ಯವಿದೆ. ಈ ನಿಟ್ಟಿನಲ್ಲಿ ಹಲವರು ಚುನಾವಣಾ ಕಣದಲ್ಲಿದ್ದಾರೆ. ಅವಲೋಕಿಸಿದಾಗ ಎಲ್ಲೆಲ್ಲಿಯೂ ಕೇಳಿಬರುತ್ತಿರುವ ಹೆಸರಿನ ಡಿಂಡಿಮ ಮನುಬಳಿಗಾರ್.

ಕನ್ನಡ ತಾಯಿಯ ರಥವನ್ನು ಪ್ರಾಮಾಣಿಕವಾಗಿ ಎಳೆಯಲು ಮನಸ್ಸು ಮಾಡಿ ಕ.ಸಾ.ಪ.ದ ಸಾರಥಿಯಾಗುವ ನಂಬಿಕೆಯಲ್ಲಿ ಚುನಾವಣಾ ಆಖಾಡದಲ್ಲಿರುವ ಮನುಬಳಿಗಾರ್ ಈಗಾಗಲೇ ರಾಜ್ಯಾದ್ಯಂತ ಒಂದು ಸುತ್ತಿನ ಪ್ರಚಾರ ಮುಗಿಸಿದ್ದಾರೆ. ಈ ಮಧ್ಯೆ 'ಪತ್ರಿಕೆ' ಅವರನ್ನು ಸಂಪರ್ಕಿಸಿ ಮಾತನಾಡಿಸಿದಾಗ ಕನ್ನಡ ನಾಡು ನುಡಿಯ ಬಗ್ಗೆ ಹೊಂದಿರುವ ಗುರಿ, ಉದ್ದೇಶ, ಮಾರ್ಗೋಪಾಯ, ಪ್ರಚಾರದಿಂದ ಸಿಗುತ್ತಿರುವ ಪ್ರತಿಕ್ರಿಯೆ, ಸಾಹಿತಿಗಳ ಬೆಂಬಲ ಎಲ್ಲದರ ಬಗ್ಗೆ ತಮ್ಮ ಮನಸ್ಸಿನ ಮಾತನ್ನು ಅನಾವರಣ ಮಾಡಿದ್ದಾರೆ. ಮನುಬಳಿಗಾರ್‌ರ ಮಾತಿನ ಆಯ್ದ ಭಾಗ ಸಂದರ್ಶನದ ರೂಪದಲ್ಲಿ.

**ಪತ್ರಿಕೆ: ಒಂದು ಸುತ್ತಿನ ಪ್ರಚಾರ ಮುಗಿಸಿದ್ದೀರಿ. ಹೇಗಿದೆ ಪ್ರತಿಕ್ರಿಯೆ?**

**ಮನು:** ರಾಜ್ಯದಲ್ಲಿರುವ ಪ್ರತಿ ಜಿಲ್ಲೆಗಳಿಗೂ ಭೇಟಿ ನೀಡಿರುವ ಪ್ರತಿಯೊಬ್ಬರೂ ಬೆಂಬಲ ಸೂಚಿಸಿದ್ದಾರೆ. ಹಾಗೆಯೇ ಪ್ರತಿಯೊಂದು ಭಾಗದಲ್ಲಿರುವ ಕವಿಗಳು, ಸಾಹಿತಿಗಳು, ಯುವ ಲೇಖಕರು, ಕನ್ನಡಪರ ಸಂಘಟನೆಗಳು, ಜಿಲ್ಲಾ ಘಟಕಗಳು, ಹೀಗೆ ಎಲ್ಲರೂ ಬೆಂಬಲ ನೀಡಿದ್ದಾರೆ. ಇವ ಯಾರವ ಇವ ಯಾರವ ಎನ್ನದೆ ಹೋದ ಕಡೆಗಳಲ್ಲೆಲ್ಲಾ ಇವ ನಮ್ಮವ ಇವ ನಮ್ಮವ ಎಂದು ಪ್ರೀತಿಯಿಂದ ಜೊತೆಯಾದರು. ಬಸವಣ್ಣನವರ ಈ ವಚನದ ಸಾಲು ಕೂಡ ನಮ್ಮ ನಿಲುವು. ಕನ್ನಡ ಕಟ್ಟಿ ಕ.ಸಾ.ಪ. ಅಭಿವೃದ್ಧಿಪಡಿಸುವುದು ಮುಖ್ಯಗುರಿ. ಜನರಿಂದ ವ್ಯಕ್ತವಾಗಿರುವ ಉತ್ತಮ ಸ್ಪಂದನೆಯಿಂದ ಗೆಲ್ಲುವ ಆಶಾಭಾವನೆ ಮೂಡಿದೆ.

**ಪತ್ರಿಕೆ: ಸರ್ಕಾರದ ಅಧಿಕಾರದಲ್ಲಿದ್ದವರು ಕನ್ನಡದ ಸೇವೆ ಮಾಡಲು ಕಾರಣ?**

**ಮನು:** ನಾನು 38 ವರ್ಷಗಳ ಕಾಲ ಸರ್ಕಾರಿ ಸೇವೆಯಲ್ಲಿದ್ದೆ ಅದರ ನಡುವೆಯೂ ಸಾಹಿತ್ಯ ರಚನೆಯಲ್ಲೂ ತೊಡಗಿಕೊಂಡೆ. ಇಪ್ಪತ್ತೇಳಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದೇನೆ. ಉಪಯುಕ್ತವಾದ ಕತೆ, ಕವನ ಹಾಗೂ ಲೇಖನಗಳನ್ನು ಭಾಷಾಂತರ ಮಾಡಿದ್ದೇನೆ. ಅವುಗಳಲ್ಲಿ ರವೀಂದ್ರನಾಥ ಠಾಕೂರರ 207ಕ್ಕೂ ಹೆಚ್ಚಿನ ಕವನಗಳು ಸೇರಿದಂತೆ ಮುಂತಾದವುಗಳಿವೆ. ಸರ್ಕಾರ ಮತ್ತು ಸಂಘ ಸಂಸ್ಥೆಗಳು ನನ್ನ ಸಾಹಿತ್ಯ ಪಯಣ ಗುರುತಿಸಿ ರನ್ನ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಗೊರೂರು ಪ್ರಶಸ್ತಿ ಮತ್ತು ವಿಶ್ವಮಾನವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಕೊಟ್ಟಿವೆ. ಸರ್ಕಾರಿ ಕೆಲಸದಿಂದ ನಿವೃತ್ತಿಯಾದ ಮೇಲೆ ಸಾಹಿತ್ಯದ ಕಡೆ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೇನೆ. ಸಿದ್ದರಾಮಯ್ಯನವರ ಸರ್ಕಾರ ರೋರಿಕೆ ದೇವಿಕಾರಾಣಿ ಎಸ್ಟೇಟ್ ಅಭಿವೃದ್ಧಿಪಡಿಸಲು ಕಮಿಟಿ ಮಾಡಿ ಅದರ ಮುಖ್ಯ ಕಾರ್ಯನಿರ್ವಾಹಕ ಹುದ್ದೆಗೆ ಹೆಚ್ಚುವರಿ ಸೇವೆಗಾಗಿ ನನ್ನನ್ನು ನೇಮಕ ಮಾಡಿತು. ಕಂದಾಯ, ಅರಣ್ಯ, ತೋಟಗಾರಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಂದಂತಹ ಅನುದಾನದಲ್ಲಿ ದೇವಿಕಾ ರಾನಿ ಎಸ್ಟೇಟ್ ಅಭಿವೃದ್ಧಿಪಡಿಸಿದ್ದೇನೆ. ಅಲ್ಲದೆ ಸುಮಾರು ನಾಲ್ಕೂವರೆ ವರ್ಷಗಳ ಕಾಲ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದೇನೆ. ಆ ಅವಧಿಯಲ್ಲಿ ಕ.ಸಾ.ಪ.ದ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿಸಿದ್ದೇನೆ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದೇನೆ. ಇದರ ನಡುವೆ 2011ರಲ್ಲಿ ಬೆಳಗಾವಿಯಲ್ಲಿ 'ವಿಶ್ವಕನ್ನಡ ಸಮ್ಮೇಳನ' ಸಂಘಟಿಸಿ ಯಶಸ್ವಿಯಾಗಿ ನಿರ್ವಹಿಸಿದ್ದೇನೆ. ಇದೀಗ ಸರ್ಕಾರ ಹೆಚ್ಚುವರಿ ಸೇವೆಯನ್ನು ಬಿಟ್ಟು ತನುಮನಧನಗಳನ್ನು ಅರ್ಪಿಸಿ ಕನ್ನಡ ಸೇವೆ ಮಾಡಲು ಮನಸ್ಸು ಮಾಡಿ ಕ.ಸಾ.ಪ.ದ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದೇನೆ.

**ಪತ್ರಿಕೆ: ಕನ್ನಡ ಭಾಷೆ ಮತ್ತು ಕ.ಸಾ.ಪ ಬಗೆಗಿನ ಗುರಿ ಮತ್ತು ಉದ್ದೇಶ?**

**ಮನು:** ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮನಾಗಿರಬೇಕು. ಈ ಬಗ್ಗೆ ಕನ್ನಡ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷೆ ಬಗ್ಗೆ ಎಲ್ಲರಲ್ಲೂ ಜಾಗೃತಿ ಮೂಡಿಸುವ ಕಾರ್ಯಗಳು ಆಗಬೇಕಿದೆ. ಸರ್ಕಾರದವರಿಗೆ ಕನ್ನಡ

ಭಾಷೆಯ ಸಾಧ್ಯತೆಗಳ ಬಗ್ಗೆ ಮನವರಿಕೆ ಮಾಡಿಸಿ ಇಚ್ಛಾಶಕ್ತಿ ತೋರಿಸುವಂತೆ ಮಾಡಬೇಕು. ಪಠ್ಯಪುಸ್ತಕದಿಂದ ಹಿಡಿದು ವೃತ್ತಿವರೆಗೂ ಕನ್ನಡ ಭಾಷೆ ಮತ್ತು ಕನ್ನಡಿಗರಿಗೆ ಆದ್ಯತೆ ಕೊಡುವಂತೆ ಆದಾಗ ಕನ್ನಡಿಗರಿಗೆ ಸಹಜವಾಗಿ ಭಾಷೆಯ ಮೇಲೆ ಅಭಿಮಾನ ಉಂಟಾಗುತ್ತದೆ. ಮುಖ್ಯವಾಗಿ ಕನ್ನಡ ಕಲಿತರೇನೇ ಕರ್ನಾಟಕದಲ್ಲಿ ಬದುಕಲು ಸಾಧ್ಯ ಎನ್ನುವ ವಾತಾವರಣ ಪರಿಣಾಮಕಾರಿಯಾಗಿ ಮೂಡಬೇಕು. ಇದಕ್ಕೆ ಸಂಘಟನೆಗಳ ಬೆಂಬಲ ಮುಖ್ಯ. ಕನ್ನಡ ಸಾಹಿತ್ಯ ರಚನೆಗೆ ಯುವಸಾಹಿತಿಗಳನ್ನು ಪ್ರೇರೇಪಿಸುವುದು, ಗುರುತಿಸುವುದು, ಈಗಿರುವ ಸಾಹಿತಿಗಳ ಕೊಡುಗೆಯನ್ನು ಪಸರಿಸುವುದು.

ಹಾಗೆಯೇ ಕ.ಸಾ.ಪ.ದಲ್ಲೂ ಪಾರದರ್ಶಕವಾದ ಆಡಳಿತ ನಡೆಸಿ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಕನ್ನಡದ ಕೆಲಸಗಳನ್ನು ಮಾಡಬೇಕಿದೆ. ಕ.ಸಾ.ಪ ಭವನ ನಿರ್ಮಾಣ, ವಿಶ್ವಕನ್ನಡ ಸಮ್ಮೇಳನ, ಜಿಲ್ಲಾ ಘಟಕಗಳ ಬಲಪಡಿಸುವಿಕೆ, ಓದುಗರ ಬಲವನ್ನು ಹೆಚ್ಚಿಸುವುದು, ಸಾಹಿತಿಗಳನ್ನು ಹೆಚ್ಚು ಕನ್ನಡಕ್ಕಾಗಿ ದುಡಿಸಿಕೊಳ್ಳುವ ಮೂಲಕ ಕನ್ನಡದ ಹಿರಿಮೆ-ಗರಿಮೆಯನ್ನು ಸಾರಿ ಹೇಳುವುದು.

**ಪತ್ರಿಕೆ: ಕನ್ನಡ ಭಾಷೆಯ ಸಂದಿಗ್ಧ ಪರಿಸ್ಥಿತಿಯ ಅಪಾಯ ಮತ್ತು ಉಪಾಯ?**

**ಮನು:** ಬೆಂಗಳೂರಿನಂಥ ಮೆಟ್ರೊ ಪಾಲಿಟನ್ ಸಿಟಿಗಳಲ್ಲಿರುವ ಇಂಗ್ಲಿಷ್ ವಾತಾವರಣದಿಂದ ಕನ್ನಡಕ್ಕೆ ಸಂದಿಗ್ಧ ವಾತಾವರಣ ಇದೆ ಅನಿಸುತ್ತದೆ. ಆದರೆ ಬೆಂಗಳೂರು ಬಿಟ್ಟು ಹೊರ ಜಿಲ್ಲೆಗಳಲ್ಲಿ ಕನ್ನಡದ ಮಹತ್ವ ಸ್ವಲ್ಪವೂ ಕಡಿಮೆಯಾಗಿಲ್ಲ. ಇದರಿಂದ ಸುಮ್ಮನೆ ಇರಲು ಸಾಧ್ಯವಿಲ್ಲ. ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಕನ್ನಡದ ಕಹಳೆಯನ್ನು ಗಟ್ಟಿಯಾಗಿ ಊದಬೇಕಿದೆ. ಪ್ರತಿಯೊಬ್ಬರ ಮನಸ್ಸಲ್ಲೂ ಕನ್ನಡವನ್ನು ಉಸಿರಾಗಿಸಬೇಕು. ಅದಕ್ಕಾಗಿ ಕನ್ನಡದಲ್ಲಿ ಈದಿನದವರಿಗೆ ಮತ್ತಷ್ಟು ಸೌಲಭ್ಯ ಸರ್ಕಾರ ಕೊಡಬೇಕು. ಶಿಕ್ಷಣ, ಉದ್ಯೋಗಗಳಲ್ಲಿ ಪ್ರತಿದಿನ ಕನ್ನಡದ ಕುರಿತಾದ ಕಾರ್ಯಕ್ರಮ ಎಲ್ಲೆಡೆ ಮೊಳಗಬೇಕು. ಇ-ತಂತ್ರಜ್ಞಾನದಲ್ಲೂ ಕನ್ನಡದಲ್ಲಿ ಹೆಚ್ಚಾಗಿ ಮಾಹಿತಿ ಸಿಗುವಂತೆ ಕಾರ್ಯಪ್ರವೃತ್ತರಾಗಬೇಕು. ಉನ್ನತ ಶಿಕ್ಷಣದ ಪಠ್ಯಪುಸ್ತಕಗಳು ಕನ್ನಡದಲ್ಲಿ ಮುದ್ರಿಸುವಂತೆ ಮಾಡುವುದು. ಹಾಗೆಯೇ ಕನ್ನಡಿಗರ ಉದ್ಯೋಗಕ್ಕೆ ಸಂಬಂಧಿಸಿದಂತೆ ಸರೋಜಿನಿ ಮಹಿಷಿ ವರದಿ ಜಾರಿಗೆ ತರುವಂತೆ ಸರ್ಕಾರಕ್ಕೆ ಒತ್ತಡ ತರುವುದು-ಹೀಗೆ ಮುಂತಾದ ಆಲೋಚನೆಗಳಿವೆ. ಈ ಎಲ್ಲದರ ಜೊತೆಗೆ ಕ.ಸಾ.ಪ, ಆಡಳಿತ ವರ್ಗದವರ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳುವ ಮತ್ತು ಸಾಹಿತಿಗಳ ಸಲಹೆ, ಸೂಚನೆಗಳನ್ನು ಸ್ವೀಕರಿಸಿದಾಗ ಕನ್ನಡಿಗರೆಲ್ಲರೂ ಕ.ಸಾ.ಪ ನಮ್ಮ ದನಿ ಎಂದು ಭಾವಿಸುವಂತೆ ಮಾಡಬೇಕಿದೆ.

**ಪತ್ರಿಕೆ: ಕ.ಸಾ.ಪ.ದಲ್ಲಿ ಜಾತೀಯತೆಯ ಅಸಮಾಧಾನದ ಮಾತುಗಳಿವೆ?**

**ಮನು:** ಕುವೆಂಪು ಅವರ 'ಸರ್ವಜನಾಂಗದ ಶಾಂತಿಯ ತೋಟ' ಎನ್ನುವ ಸಾಲುಗಳು ನನ್ನ ಪ್ರೇರಣಾ ಶಕ್ತಿ, ಅದಕ್ಕೆ ಕಂಕಣಬದ್ಧನಾಗಿದ್ದೇನೆ. ಕ.ಸಾ.ಪ.ದಲ್ಲಿ ಎಲ್ಲಾ ಜಾತಿಯ ಜನರು ಇದ್ದಾರೆ. ಎಲ್ಲಿಯೂ ಜಾತಿಯಿಂದ ಗುರುತಿಸಿಕೊಳ್ಳುವ, ಮತ ಕೇಳುವ ಅವಶ್ಯಕತೆ ಇಲ್ಲ. ಜಾತ್ಯಾತೀತ ಮನೋಭಾವ ನನ್ನದು.

ಮೂವತ್ತು ಜಿಲ್ಲೆಗಳಿಗೂ ಮತ ಕೇಳಲು ಭೇಟಿ ಕೊಟ್ಟರೆ ಎಲ್ಲಾ ಜಾತಿಯವರೂ ನನ್ನನ್ನು ಬೆಂಬಲಿಸಿದರು. ಶೂದ್ರ ಶ್ರೀನಿವಾಸ, ಕುಂವೀ, ಪುಂಡಲೀಕ ಹಾಲಂಬಿ ಹೀಗೆ ಹಾಲಿ ಮಾಜಿ ಅಧ್ಯಕ್ಷರಿಂದ ಹಿಡಿದು ತಾಲ್ಲೂಕು ಅಧ್ಯಕ್ಷರು ಜೊತೆಗೆ ಎಲ್ಲಾ ವರ್ಗದ ಸಾಹಿತಿಗಳು ಶುಭ ಹಾರೈಸಿದ್ದಾರೆ. ಜಾತಿಯಿಂದ ಭಾಷೆ ಸೇರಿದಂತೆ ಯಾವುದನ್ನೂ ಗುರುತಿಸಬಾರದು. ಪಂಪನ 'ಮನುಷ್ಯ ಕುಲಂ ತಾನೊಂದು ವಲಂ' ಎಂದಾಗಲೇ ಮನುಷ್ಯತ್ವಕ್ಕೆ ನಿಜವಾದ ಅರ್ಥಬರಲು ಸಾಧ್ಯ.

**ಪತ್ರಿಕೆ: ಒಳಭಾಗದ ಕನ್ನಡ ಸಮಸ್ಯೆ ಒಂದೆಡೆಯಾದರೆ ಗಡಿಭಾಗದ ಕನ್ನಡಿಗರ ಸಮಸ್ಯೆ ಮತ್ತೊಂದು ರೀತಿಯದು?**

**ಮನು**: ನಾನು ಮತಯಾಚಿಸಲು ರಾಜ್ಯ ಪ್ರವಾಸ ಮಾಡಿದಾಗ ಗಡಿಜಿಲ್ಲೆಗಳಾದ ಬೆಳಗಾವಿ, ಬಳ್ಳಾರಿ, ಕೋಲಾರ ಮುಂತಾದ ಕಡೆಗಳಲ್ಲಿ ಗಡಿನಾಡ ಕನ್ನಡಿಗರ ಸಮಸ್ಯೆಗಳ ಬಗ್ಗೆ ವಿಚಾರಿಸಿದೆ. ಗಡಿ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಬಾರದು ಹಾಗೂ ಅಲ್ಲಿನ ಮಕ್ಕಳಿಗೆ ಕನ್ನಡ ಪಠ್ಯಪುಸ್ತಕಗಳು, ಸಾಹಿತ್ಯದ ವಿವಿಧ ಪ್ರಕಾರದ ಕೃತಿಗಳು ಗ್ರಂಥಾಲಯಗಳಿಗೆ ಹೆಚ್ಚಾಗಿ ತಲುಪಿಸಬೇಕಿದೆ. ಅಲ್ಲದೆ ಸರ್ಕಾರ ಹೆಚ್ಚಿನ ಸೌಲಭ್ಯಗಳನ್ನು ನೀಡಲು ಗಮನ ಹರಿಸಬೇಕಿದೆ. ಅಲ್ಲಿರುವ ಕನ್ನಡಿಗರಿಗೆ ಸಂಘಟನೆಗೊಳ್ಳಲು ನೈತಿಕ ಬೆಂಬಲ ಕೊಡಬೇಕು. ಕನ್ನಡದ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯುವಂತೆ ಮಾಡಬೇಕು. ಆ ಮೂಲಕ ಗಡಿಬಾಗದ ಕನ್ನಡಿಗರ ಸಮಸ್ಯೆಗಳ ನಿವಾರಣೆ ಸಾಧ್ಯ.

ಹೀಗೆ ಮನುಬಳಿಗಾರ್ ಕನ್ನಡ ಕಟ್ಟುವ ಕಾಯಕವನ್ನು ಪತ್ರಿಕೆಯೊಂದಿಗಿನ ಸಂದರ್ಶನದಲ್ಲಿ ಬಿಚ್ಚಿಟ್ಟರು. ಈ ಸಲದ ಚುನಾವಣಾ ಆಖಾಡದಲ್ಲಿ ಡಾ|| ಎಚ್.ಎಲ್.ಜನಾರ್ಧನ್, ಜಯಪ್ರಕಾಶ್‌ಗೌಡ, ಪಟೇಲ್‌ಪಾಂಡು ಅವರುಗಳ ಪೈಪೋಟಿಯಿದೆ. ಮನುಬಳಿಗಾರ್ ಕ.ಸಾ.ಪ.ಗೆ ಅರ್ಹ ಅಭ್ಯರ್ಥಿ, ಸರ್ವಜಾತಿಯವರ ವಿಶ್ವಾಸಗಳಿಸಿ ಎಲ್ಲರನ್ನೂ ಜೊತೆಯಾಗಿ ಕನ್ನಡ ಸೇವೆಗೆ ಕರೆದೊಯ್ಯುವ ಸಾಮರ್ಥ್ಯ ಹೊಂದಿರುವುದರಿಂದ ಎಲ್ಲೆಲ್ಲಿಯೂ ಅವರ ಕಡೆ ಒಲವು ಕೇಳಿಬರುತ್ತಿದೆ. ಪ್ರಗತಿಪರ ಮನೋಭಾವನೆ ಹೊಂದಿರುವ ಸುಶಿಕ್ಷಿತ ಕುಟುಂಬದಿಂದ ಬಂದವರು ಮನುಬಳಿಗಾರ್. ಗದಗ ಜಿಲ್ಲೆಯ ಶಿಗ್ಲಿ'ಎಂಬ ಗ್ರಾಮದವರು ಎಸ್.ಎಸ್.ಎಲ್.ಸಿ.ವರೆಗೂ ಕನ್ನಡದಲ್ಲಿ ಶಿಕ್ಷಣ ಮುಗಿಸಿದರು. ಧಾರವಾಡದಲ್ಲಿ ಪದವಿ ಪಡೆದು ಸ್ನಾತಕೋತ್ತರ ಪದವಿಯ ನಂತರ ಎಲ್.ಎಲ್.ಬಿ. ಪದವಿ ಪಡೆದರು. ನಂತರ ಸರ್ಕಾರಿ ಕೆಲಸ, ವಿವಿಧ ಇಲಾಖೆಗಳಲ್ಲಿ ಗಮನಾರ್ಹ ಸೇವೆ. ಅವರೆಂದೂ ಜಾತಿ ಲೆಕ್ಕಾಚಾರ ಮಾಡಿದವರಲ್ಲ. 'ವಿಶ್ವಮಾನವ'ದಂತಹ ತತ್ವ ಸಿದ್ಧಾಂತಗಳನ್ನು ಪಾಲಿಸುತ್ತಾ ಬದುಕುತ್ತಿರುವವರು. ಈ ಮಣ್ಣಿನ ಸೊಗಡು ಮತ್ತು ಆಳದ ಜ್ಞಾನ ಸಾಹಿತ್ಯದೆಡೆ ವಾಲಿಸಿತು. ಅಪಾರ ಮನ್ನಣೆ ಗಳಿಸಿದರು. ಪ್ರಸ್ತುತ ಕನ್ನಡ ಸೇವೆ ಮಾಡಲು ಕನ್ನಡಿಗರ ಆಶೀರ್ವಾದಕ್ಕಾಗಿ ಹಂಬಲಿಸುತ್ತಿದ್ದಾರೆ. ಹಾಗಾಗಿ ಈ ಬಾರಿಯ ಕ.ಸಾ.ಪ ಗದ್ದುಗೆಗೆ ಅಪರೂಪದ ವ್ಯಕ್ತಿತ್ವದ ಮನುಬಳಿಗಾರ್ ಸೂಕ್ತವ್ಯಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ.

* * * * *

## 9. ವಿಕ್ರಮ : ಭಾನುವಾರ 20-3-2018, ಸಂದರ್ಶನ - ವೃಷಾಂಕ

## ವಾರದ ಸಂದರ್ಶನ

### ಮನು ಬಳಿಗಾರ್ ಬತ್ತಳಿಕೆಯಲ್ಲಿ ಜೊತೆಯಾಗಿ ಸಾಗುವ ಮಂತ್ರ

ಕನ್ನಡ ಸಾಹಿತ್ಯ ಪರಿಷತ್ ಆಡಳಿತಾಧಿಕಾರಿಯಾಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಕೆಎಎಸ್ ಅಧಿಕಾರಿ ಮನು ಬಳಿಗಾರರು ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಹೊಸ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡಿದ್ದಾರೆ. ಚಲಾವಣೆಯಾದ ಮತಗಳಲ್ಲಿ ಶೇ.50ಕ್ಕೂ ಹೆಚ್ಚು ದಾಖಲೆ ಮತಗಳನ್ನು ಪಡೆದಿರುವ ಬಳಿಗಾರರು, ಮತ ಕೊಟ್ಟವರನ್ನು ಮತ ಕೊಡದವರನ್ನು ಒಟ್ಟಿಗೆ ಕೊಂಡೊಯ್ಯುವ ಸೂತ್ರಕ್ಕೆ ಬದ್ಧರಾಗಿದ್ದಾರೆ. ಅವರದೇ ಮಾತುಗಳಲ್ಲಿ ಹೇಳುವುದಾದರೆ, ಚುನಾವಣೆ ಮುಗಿದಿದೆ. ಇನ್ನೇನಿದ್ದರೂ ಕೂಡಿ ಕೆಲಸ ಮಾಡುವ ಸಮಯ. ವಿಕ್ರಮಕ್ಕೆ ಸಂದರ್ಶನ ನೀಡಿದ ವೇಳೆಯೂ ಯಾರನ್ನೂ ಅತಿಯಾಗಿ ಹೊಗಳದೆ, ಯಾರನ್ನೂ ಕನಿಷ್ಠವಾಗಿ ಕಾಣದೆ ನೀಡಿದ ಹೇಳಿಕೆಗಳು ಬಳಿಗಾರರ ಕೂಡಿ ಬಾಳುವ ಸೂತ್ರವನ್ನು ಎತ್ತಿ ಹಿಡಿದೀತು.

ಬಳಿಗಾರರು ಈ ಹಿಂದೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿ ಪಡೆದ ಅನುಭವ ಹಾಗೂ ಸಾಹಿತ್ಯಾಭಿರುಚಿ ನೂತನ ಜವಾಬ್ದಾರಿಗೆ ಹೆಚ್ಚು ಪ್ರಯೋಜನಕ್ಕೆ ಬರಬಹುದು. ಸರ್ಕಾರದ ಒಳ-ಹೊರಗನ್ನು ಅರಿತವರು ಅಧ್ಯಕ್ಷರಾಗಿರುವುದು ಪರಿಷತ್ತಿನ ಚಟುವಟಿಕೆ ದೃಷ್ಟಿಯಿಂದಲೂ ಉತ್ತಮವಾದದ್ದೇ.

**ಬಹಳ ಕುತೂಹಲ ಕೆರಳಿಸಿದ್ದ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಪ್ರಚಂಡ ಗೆಲುವು ಸಾಧಿಸಿದ್ದೀರಿ. ಈ ಗೆಲುವಿಗೆ ಕಾರಣವಾದ ಅಂಶಗಳಾವುವು?**

ನಿಷ್ಪಕ್ಷಪಾತವಾಗಿ ಈವರೆಗೆ ಮಾಡಿದ ಕೆಲಸಗಳೇ ಈ ಗೆಲುವಿಗೆ ಕಾರಣ. ಚುನಾವಣೆಗಳಲ್ಲಿ ಜಾತಿ ಕೆಲಸ ಮಾಡುತ್ತದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಬಾರಿಯ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನಿಜಕ್ಕೂ ಜಾತಿ ಇದೆಯೇ ಎಂದೆನಿಸಿತು. ನನ್ನ ಜಾತಿಯ ಮತಗಳೇ ಇಲ್ಲದ ಏಳೆಂಟು ಜಿಲ್ಲೆಗಳಲ್ಲಿ ಜನರು ನನಗೇ ಮತ ನೀಡಿದ್ದಾರೆ. ಚುನಾವಣೆಗಳು ನಿಜಕ್ಕೂ ಜಾತಿ ಆಧಾರದಲ್ಲಿ ನಡೆಯುವುದಾಗಿದ್ದಿದ್ದರೆ ಎಲ್ಲಾ ಸಮುದಾಯದವರು ನನಗೇಕೆ ಮತ ನೀಡುತ್ತಾರೆ? ಈ ಹಿಂದೆ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಜಾತ್ಯತೀತನಾಗಿ ಮಾಡಿದ ಕೆಲಸಗಳನ್ನು ಗುರುತಿಸಿದ್ದಾರೆ ಜನರು. ಇನ್ನು ಮುಂದೆಯೂ ಜಾತ್ಯತೀತನಾಗಿರುವಂತೆ ಆ ಜನರು ಕೊಟ್ಟ ಜನಾದೇಶವೇ ಈ ಗೆಲುವು. ಈ ಆದೇಶವನ್ನು ಪಾಲಿಸುವುದೇ ನನ್ನ ಜವಾಬ್ದಾರಿ.

ಭಾರತ ಜನನಿಯ ತನುಜಾತೆ ಎಂದು ಕುವೆಂಪು ಬರೆದಿದ್ದರು. ಆದರೆ ಇಂದು ಅನ್ಯ ಭಾಷೆಗಳ ಮೇಲೆ, ಆ ಭಾಷೆಗಳ ನೆಲದ ಮೇಲೆ ದ್ವೇಷದ ಮನಃಸ್ಥಿತಿ ಹೆಚ್ಚುತ್ತಿದೆ. ವಿದೇಶಿ ಭಾಷೆಯ ಸ್ವೀಕಾರ ತಪ್ಪಲ್ಲ. ಆದರೆ ನಮ್ಮದೇ ದೇಶದ ಇನ್ನೊಂದು ಭಾಷೆಯನ್ನು ಬೇಡ ಎನ್ನುತ್ತಿದ್ದೇವೆ?

ನನಗೆ ಹಾಗೆನ್ನಿಸುವುದಿಲ್ಲ ಕೆಲವು ಭಾಗಗಳಲ್ಲಿ ಇಂತಹ ಸಮಸ್ಯೆಯಿರಬಹುದೇ ಹೊರತು ಸಂಪೂರ್ಣ ರಾಜ್ಯದ ಪರಿಸ್ಥಿತಿ ಹೀಗಿಲ್ಲ. ಅನ್ಯ ಭಾಷಿಕರ ಬಗ್ಗೆ ಪರರಾಜ್ಯದ ಬಗ್ಗೆ ದ್ವೇಷದ ವಾತಾವರಣವಿಲ್ಲ. ಕುವೆಂಪು ಅವರು ಬರೆದ ಭಾರತ ಜನನಿಯ ತನುಜಾತೆ ಇಂದಿಗೂ ಪ್ರಸ್ತುತ.

**ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಕಡ್ಡಾಯಗೊಳಿಸಲು ಪರಿಷತ್ತು ಹೇಗೆ ಕೆಲಸ ಮಾಡಲಿದೆ?**

ಪ್ರಾಥಮಿಕ ಶಿಕ್ಷಣ ಕನ್ನಡದಲ್ಲೇ ನೀಡಬೇಕೆಂಬುದರಲ್ಲಿ ಯಾವುದೇ ದ್ವಂದ್ವವಿಲ್ಲ. ಈ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ. ರಾಜ್ಯ ಸರ್ಕಾರ ನಡೆಸುತ್ತಿರುವ ಕಾನೂನು ಹೋರಾಟಕ್ಕೆ ನಾವು ಬೆಂಬಲ ನೀಡುತ್ತೇವೆ.

ಕಲಾವಿದರಿಗೆ ಆಡಳಿತದ ಭಾಗ ಹೆಚ್ಚು ಅರ್ಥವಾಗುವುದಿಲ್ಲ ಎಂಬ ಮಾತಿದೆ. ನೀವು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು ಹಾಗೂ ಪರಿಷತ್ತಿನ ಆಡಳಿತಾಧಿಕಾರಿಯಾಗಿದ್ದರಿಂದ ಪರಿಷತ್ತಿನ ಕೆಲಸಗಳಿಗೆ ವೇಗ ಬರಬಹುದೇ?

ಅದನ್ನು ನೀವೇ ಹೇಳಬೇಕು. ಆದರೆ ಒಂದಂತೂ ನಿಜ. ಈ ಹಿಂದಿನ ಕೆಲಸಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಹಲವು ಅನುಭವಗಳೂ, ಅಗತ್ಯ ಮಾಹಿತಿಗಳೂ ದೊರೆತಿವೆ. ಯಾವ ಯಾವ ಕಲಾ ಪ್ರಕಾರಗಳಲ್ಲಿ ಯಾರೆಲ್ಲ ಪ್ರಾವೀಣ್ಯರಿದ್ದಾರೆ. ಯಾವ ಜಿಲ್ಲೆಯಲ್ಲಿ ಉತ್ತಮ ಹಾಡುಗಾರರಿದ್ದಾರೆ. ದಲಿತ ಕವಿಗಳಲ್ಲಿ ಅತ್ಯಂತ ಪ್ರಬುದ್ಧವಾಗಿ ಬರೆಯುವವರ್‍ಯಾರು ಎಂಬುದರಿಂದ ಪ್ರಾರಂಭಿಸಿ ಹಿರಿಯ ಸಾಹಿತಿಗಳಲ್ಲಿ ಯಾರಿಗೆ ಎಷ್ಟು ವಯಸ್ಸಾಗಿದೆ ಎಂದೂ ನಿಖರವಾಗಿ ಹೇಳಬಲ್ಲೆ. ಯಾವುದೇ ವಿಷಯದಲ್ಲಿ ನನಗೆ ಸುಳ್ಳು ಹೇಳಲು ಮೋಸ ಮಾಡಲು ಸಾಧ್ಯವಿಲ್ಲ. ಸಾಹಿತ್ಯ ಲೋಕ ಮತ್ತು ಸಾಹಿತಿಗಳೊಡನೆ ನಡೆಸಿದ ಒಡನಾಟ ಹಲವು ಅನುಭವಗಳನ್ನು ನೀಡಿದೆ.

**ಎಲ್ಲರನ್ನು ಒಟ್ಟಿಗೆ ಕರೆದೊಯ್ಯುವ ಮಾತನ್ನು ಹಲವು ಬಾರಿ ಹೇಳಿದಿರಿ.**

ಹೌದು, ಚುನಾವಣೆ ಮುಗಿಯುವವರೆಗಷ್ಟೇ ಸ್ಪರ್ಧೆ, ಇತ್ಯಾದಿ, ಈಗ ಚುನಾವಣೆ ಮುಗಿದಿದೆ. ಚುನಾವಣೆ ವೇಳೆ ನನ್ನ ಜೊತೆ ಯಾರಿದ್ದರೂ ಯಾರಿರಲಿಲ್ಲ. ಎಂದು ನೋಡುವ ಸ್ವಭಾವ ನನ್ನದಲ್ಲ. ಪರಿಷತ್ತಿನ ಕೆಲಸ ಅಂದುಕೊಂಡಂತೆ ನಡೆಯಬೇಕಾದರೆ ಎಲ್ಲರೂ ಜೊತೆಯಲ್ಲಿ ಹೆಜ್ಜೆ ಹಾಕಬೇಕು. ಚುನಾವಣೆ ವೇಳೆ ಎಲ್ಲರನ್ನು ಜೊತೆಗೆ ಕರೆದುಕೊಂಡು ಹೋಗುವ ಮಾತುಗಳನ್ನಾಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ

ಮಾತುಗಳನ್ನಾಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷ ಮನು ಬಳಿಗಾರರು ಅದಮ್ಯ ಉತ್ಸಾಹದಿಂದ ಹೆಜ್ಜೆ ಹಾಕುತ್ತಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿನ ತಮ್ಮ ಈವರೆಗಿನ ಅನುಭವ ಅವರಲ್ಲಿ ಆತ್ಮವಿಶ್ವಾಸವನ್ನೂ ಹೆಚ್ಚಿಸಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಜವಾಬ್ದಾರಿ ಹೊತ್ತಿದ್ದ ಬಳಿಗಾರರಿಂದ ಸಾಹಿತ್ಯ ಪರಿಷತ್ತು ಕೂಡ ಹಲವು ಪ್ರಯೋಜನಗಳನ್ನು ಪಡೆಯುವ ಸಾಧ್ಯತೆಗಳಿವೆ. ಹಿಂದೆ ಪರಿಷತ್ತು ಮತ್ತು ಸರ್ಕಾರದ ಮಧ್ಯೆ ಸೇತುವೆಯಾಗಿದ್ದವರೇ ಇಂದು ಅಧ್ಯಕ್ಷರಾಗಿರುವುದು, ಪರಿಷತ್ತಿನ ಚಟುವಟಿಕೆಗಳಿಗೆ ಪೂರಕವಾದೀತು.

ಜಿಲ್ಲಾ ಮಟ್ಟದಲ್ಲಿ ಸ್ಪರ್ಧಿಸಿದ್ದ ಯಾವುದೇ ಅಭ್ಯರ್ಥಿಗೆ ಬೆಂಬಲ ಸೂಚಿಸಿದ ಕಾರಣ, ನನ್ನ ಮೇಲೆ ದ್ವೇಷ ಸಾಧಿಸುವ ಪ್ರಮೇಯ ಯಾರಿಗೂ ಬರುವುದಿಲ್ಲ.

ಪರಿಷತ್ತು ನಡೆಸಬೇಕಾದ ತುರ್ತು ಕಾರ್ಯಕ್ರಮಗಳು, ನಡೆಗಳ ಬಗ್ಗೆ ಒಂದು ಪುಟದ ಸಲಹೆ ನೀಡುವಂತೆಯೂ ಸದಸ್ಯರಲ್ಲಿ ಮನವಿ ಮಾಡಿದ್ದೇನೆ. ತಮಗೆ ತೋಚುವ ಸಲಹೆಗಳನ್ನು ಯಾರು ಬೇಕಾದರೂ ನೀಡಬಹುದು. ಎಲ್ಲರ ಅಭಿಪ್ರಾಯಗಳನ್ನು ಸಲಹೆಗಳನ್ನು ಸ್ವೀಕರಿಸುತ್ತಾ ಪರಿಷತ್ತನ್ನು ಮುನ್ನಡೆಸುವುದು ನನ್ನ ಉದ್ದೇಶ.

ಕನ್ನಡದ ಕೃತಿಗಳು ಪರಭಾಷೆಗೆ ಸಮರ್ಥವಾಗಿ ಅನುವಾದವಾಗಿಲ್ಲವೆಂಬ ಕೊರಗಿದೆ. ದೆಹಲಿಯ ಜೆಎನ್‌ಯು ಕನ್ನಡ ಅಧ್ಯಯನ ಪೀಠವು ಕನ್ನಡದ ಕೃತಿ ಅನುವಾದದ ಕೆಲಸದಲ್ಲಿ ತೊಡಗಿಸಿಕೊಳ್ಳುವುದಾಗಿ ಹೇಳಿದೆ. ಪರಿಷತ್ತು ಈ ನಿಟ್ಟಿನಲ್ಲಿ ಕೆಲಸ ಮಾಡುವುದೇ?

ಕನ್ನಡದ ಕೃತಿಗಳು ಅನುವಾದವಾಗಿಲ್ಲ ಎಂಬ ಮಾತನ್ನು ನಾನು ಒಪ್ಪುವುದಿಲ್ಲ. ಕನ್ನಡದ ಬಹಳಷ್ಟು ಸಾಹಿತ್ಯ ಕೃತಿಗಳು ಅನುವಾದವಾದ ಕಾರಣವೇ ಎಸ್.ಎಲ್.ಭೈರಪ್ಪನವರು ಮರಾಠಿಯಲ್ಲಿ ಪ್ರಸಿದ್ಧರಾಗಲು ಸಾಧ್ಯವಾಯಿತು. ಮರಾಠಿಗಳು ಭೈರಪ್ಪನವರನ್ನು ತಮ್ಮ ಬಾಷೆಯ ಲೇಖಕ ಎಂದು ಸ್ವೀಕರಿಸಿದ್ದಾರೆ. ಅನುವಾದ ಕೆಲಸಕ್ಕಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಚಿಸಲಾಗಿದೆ. ಇಂತಹ ಪ್ರಯೋಗದಲ್ಲಿ ದೇಶಕ್ಕೆ ರಾಜ್ಯವೇ ಪ್ರಥಮ. ಹಲವು ಸಾಹಿತಿಗಳು ಕನ್ನಡ ಕೃತಿಗಳ ಅನುವಾದಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ಹೀಗಿರುವಾಗ ನಮ್ಮ ಕೃತಿಗಳು ಅನುವಾದವಾಗಲಿಲ್ಲ ಎಂದು ಟೀಕಿಸುವವರು ವಸ್ತುಸ್ಥಿತಿಯನ್ನು ಅರಿಯಬೇಕು.

ಈಗಾಗಲೇ ನಡೆಯುತ್ತಿರುವ ಅನುವಾದವನ್ನು ಜೆಎನ್‌ಯು ಕನ್ನಡ ಅಧ್ಯಯನ ಪೀಠ ಮುಂದುವರೆಸಲು ನಿರ್ಧರಿಸಿರಬಹುದು.

**ಪರಿಷತ್ತಿನಲ್ಲಿ ಯಾವ್ಯಾವ ನೂತನ ಬದಲಾವಣೆಗಳು ಕಾಣಲಿವೆ?**

ಹೊಸ ಅಧ್ಯಕ್ಷರು ಬಂದ ಕೂಡಲೆ ಆಡಳಿತ ಬದಲಾಗುತ್ತದೆ. ಎಂದು ಬಯಸಬೇಕಿಲ್ಲ. ಹಿಂದಿನ ಅಧ್ಯಕ್ಷರು ಅತ್ಯಂತ ಸಮರ್ಥವಾದ ಆಡಳಿತ ನಡೆಸಿದ್ದರು. ಅವರು ಕೈಗೊಂಡ ಯಾವುದೇ ನಿರ್ಧಾರಗಳನ್ನು

ಹಿಂಪಡೆಯುವುದಿಲ್ಲ. ಅವರು ಘೋಷಿಸಿದ್ದಂತೆಯೇ ಈ ಬಾರಿಯ ಸಾಹಿತ್ಯ ಸಮ್ಮೇಳನ ರಾಯಚೂರಿನಲ್ಲಿ ನಡೆಯಲಿದೆ.

**ಕನ್ನಡಪರ ಸಂಘಟನೆಗಳ ಹೋರಾಟಗಳು ಟಿವಿ ಹೋರಾಟಗಳು ಎಂಬ ಸ್ಥಿತಿಯಲ್ಲಿರುವಾಗ, ಪರಿಷತ್ತು ಈ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆಯೇ?**

ಕನ್ನಡ ಸಂಘಟನೆಗಳು ಪ್ರಚಾರಕ್ಕಾಗಿ ಹೋರಾಟ ನಡೆಸುತ್ತಿದೆ ಎಂಬುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅವರ ಪ್ರತಿಭಟನೆಗಳಲ್ಲಿ ಭಾಗವಹಿಸುವ ಅವಕಾಶ ಮೂರು ಬಾರಿ ದೊರೆತಿತ್ತು. ನೈಜ ಹೋರಾಟಗಾರರು ಮತ್ತು ಪ್ರಚಾರಪ್ರಿಯರ ವ್ಯತ್ಯಾಸವನ್ನು ಕೂಡಲೇ ಪತ್ತೆಹಚ್ಚಬಹುದು. ಕೇವಲ ಪ್ರಚಾರಕ್ಕಾಗಿ ಹೋರಾಟ ನಡೆಸುವವರು ಟಿ.ವಿ. ವರದಿಗಾರರು ಹೋದ ಕೂಡಲೆ ತಾವೂ ಜಾಗ ಖಾಲಿ ಮಾಡುತ್ತಾರೆ. ಆದರೆ ಇವರುಗಳು ಬೆಳಗ್ಗೆಯಿಂದ ಸಂಜೆಯವರೆಗೆ ಬಿಸಿಲಿನಲ್ಲಿ ಕೂತು ಧರಣಿ ನಡೆಸುತ್ತಾರೆ. ಹಲವು ಪ್ರಮುಖ ಸಮಸ್ಯೆಗಳ ಬಗ್ಗೆ ಈ ಸಂಘಟನೆಗಳು ದನಿಯೆತ್ತಿರುವುದರಿಂದ ಅವರುಗಳನ್ನು ಟಿ.ವಿ. ಹೋರಾಟಗಾರರು ಎಂದು ಕರೆಯುವುದು ಸರಿಯಲ್ಲ. ಆ ಪ್ರತಿಭಟನೆಗಳಿಂದ ರಾಜ್ಯ ಹಾಗೂ ಭಾಷೆಗೆ ಬಹಳ ಉಪಯೋಗವಾಗಿದೆ.

**ಬೆಂಗಳೂರಿನಲ್ಲಿ ಕನ್ನಡ ಕಾಣೆಯಾಗುತ್ತಿದೆ. ಬಹುತೇಕ ಮೆಟ್ರೋಪಾಲಿಟನ್ ನಗರಗಳ ಪಾಡಿದು, ಈ ಸಮಸ್ಯೆಯನ್ನು ಪರಿಷತ್ತು ಹೇಗೆ ಸ್ವೀಕರಿಸಲಿದೆ?**

ಇದಕ್ಕೆ ಕಾರಣ ಇಂಗ್ಲಿಷ್ ಭಾಷೆಯ ಮೇಲೆ ಹೆಚ್ಚುತ್ತಿರುವ ವಿಪರೀತವಾದ ವ್ಯಾಮೋಹ. ಲಂಡನ್ನಿನ ಸುತ್ತಲಿನ ಅನ್ಯಭಾಷೆಗಳು ಇಂಗ್ಲಿಷ್ ಒತ್ತಡ ತಾಳಿಕೊಂಡಿವೆ. ಅವರಿಗೆ ಅದು ಸಾಧ್ಯವಾದದ್ದು ಹೇಗೆ? ಕನ್ನಡಕ್ಕೆ ಅದು ಸಾಧ್ಯವಾಗುತ್ತಿಲ್ಲ ಎಂಬ ಮಂಥನ ನಡೆಯಬೇಕು.

'ನಿಷ್ಪಕ್ಷಪಾತವಾಗಿ ಈವರೆಗೆ ಮಾಡಿದ ಕೆಲಸಗಳೇ ಈ ಗೆಲುವಿಗೆ ಕಾರಣ. ಚುನಾವಣೆಗಳಲ್ಲಿ ಜಾತಿ ಕೆಲಸ ಮಾಡುತ್ತದೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಬಾರಿಯ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ನಿಜಕ್ಕೂ ಜಾತಿ ಇದೆಯೇ ಎಂದೆನಿಸಿತು. ನನ್ನ ಜಾತಿಯ ಮತಗಳೇ ಇಲ್ಲದ ಏಳೆಂಟು ಜಿಲ್ಲೆಗಳಲ್ಲಿ ಜನರು ನನಗೇ ಮತ ನೀಡಿದ್ದಾರೆ. ಚುನಾವಣೆಗಳು ನಿಜಕ್ಕೂ ಜಾತಿ ಆಧಾರದಲ್ಲಿ ನಡೆಯುವುದಾಗಿದ್ದಿದ್ದರೆ ಎಲ್ಲಾ ಸಮುದಾಯದವರು ನನಗೇಕೆ ಮತ ನೀಡುತ್ತಾರೆ? ಈ ಹಿಂದೆ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಜಾತ್ಯತೀತನಾಗಿ ಮಾಡಿದ ಕೆಲಸಗಳನ್ನು ಗುರುತಿಸಿದ್ದಾರೆ ಜನರು. ಇನ್ನು ಮುಂದೆಯೂ ಜಾತ್ಯತೀತನಾಗಿರುವಂತೆ ಆ ಜನರು ಕೊಟ್ಟ ಜನಾದೇಶವೇ ಈ ಗೆಲುವು ಈ ಆದೇಶವನ್ನು ಪಾಲಿಸುವುದೇ ನನ್ನ ಜವಾಬ್ದಾರಿ'.

* * * * *

## 10. ಕಂದಾಯ ಮಿತ್ರ - 15-4-2016

# ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಡಾ|| ಮನು ಬಳಿಗಾರ್ ಆಯ್ಕೆ.

## ಪರಿಷತ್ತಿನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಬಹುಮುಖ ಪ್ರತಿಭೆಯ ಕನ್ನಡಿಗನ ಆಯ್ಕೆ.

ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ದಿಗ್ಗಜ ಡಾ|| ಮನು ಬಳಿಗಾರ್ ತಮ್ಮ ಸಮೀಪದ ಪ್ರತಿಸ್ಪರ್ಧಿಗಿಂತ ಬಹಳಷ್ಟು ಹೆಚ್ಚಿನ ಅಂತರದ ಮತವನ್ನು ಗಳಿಸಿ ಜಯಶೀಲರಾಗಿರುವುದು ದಾಖಲಾರ್ಹ ಸಂಗತಿ. ಈ ಹಿಂದಿನ ಅಧ್ಯಕ್ಷರುಗಳು ಕನ್ನಡ ಸಾರಸ್ವತಲೋಕದಲ್ಲಿ ಸಾಕಷ್ಟು ಪರಿಣಿತ ಹಾಗೂ ಪಾಂಡಿತ್ಯದಲ್ಲಿ ಹೆಸರುವಾಸಿಯಾಗಿದ್ದರೂ ಇದೀಗ ಚುನಾಯಿತರಾಗಿರುವ ಡಾ||ಮನು ಬಳಿಗಾರ್‌ರವರು ಕನ್ನಡ ಭಾಷೆಯ ಸರ್ವತೋಮುಖ ಏಳಿಗೆಗಾಗಿ ಕನ್ನಡ ಸಾಹಿತ್ಯ ಲೋಕದ, ವಿವಿಧ ವಿಭಾಗಗಳಲ್ಲಿ ಇವರು ಸಲ್ಲಿಸಿರುವ ಅಮೋಘ ಸೇವೆ ವಿಶ್ವವಿಖ್ಯಾತ ಆಗಿದೆ ಎಂಬುದು ಸ್ತುತ್ಯಾರ್ಹ. ಕನ್ನಡ ನಾಡಿನ ಎಲ್ಲಾ ರಂಗಗಳಲ್ಲಿಯೂ ಕನ್ನಡತೆಯನ್ನು ಸಾರುವ ಇವರ ಕಠಿಣಶ್ರಮ ಅದ್ವಿತೀಯವಾದುದು ಎಂದರೆ ಉತ್ಪ್ರೇಕ್ಷೆಯಾಗದು. ಜೀವನದುದ್ದಕ್ಕೂ "ಕನ್ನಡತೆ"ಯನ್ನು ಮೈಗೂಡಿಸಿಕೊಂಡಿರುವ ಡಾ||ಮನುಬಳಿಗಾರ್‌ರವರು ಕನ್ನಡ ಸಾಹಿತ್ಯ ಪರಿಷತ್ತಿನ ಮುಖ್ಯಸ್ಥರಾಗಿ ಆಯ್ಕೆಯಾಗಿರುವುದು, ವಿಶ್ವಾದ್ಯಂತ ಕನ್ನಡಿಗರೆಲ್ಲರಿಗೂ ಸಂತಸ ತಂದಿದೆ. ಇಂತಹ ಮಹಾನ್ ಅನುಭವಿ, ಕನ್ನಡಿಗನಿಂದ ಪರಿಷತ್ತಿನ ಎಂಬ ವಿಷಯದಲ್ಲಿ ಯಾವ ಸಂದೇಹಕ್ಕೂ ಎಡೆಯಿಲ್ಲ. ಇವರು ಅಲಂಕರಿಸಿರುವ ಉನ್ನತ ಸ್ಥಾನಕ್ಕೆ ಮತ್ತು ಇವರು ಕೈಗೊಳ್ಳಬಹುದಾದ ಕನ್ನಡಾಭಿವೃದ್ಧಿ ಕಾರ್ಯಗಳಿಗೆ ಖಂಡಿತ ಯಶಸ್ಸು ಸಿಗಲಿದೆ ಎಂದು ನಮ್ಮ ಪತ್ರಿಕೆ ಬಯಸುತ್ತದೆ.

**ಜೈವಿಕ ವಿವರ ಮತ್ತು ನಿರ್ವಹಿಸಿದ ಸೇವೆಗಳು**

ಅಂದಿನ ಧಾರವಾಡ ಜಿಲ್ಲೆಯ (ಇಂದಿನ ಗದಗ ಜಿಲ್ಲೆ) ಶಿಗ್ಲಿ ಎಂಬ ಗ್ರಾಮದಲ್ಲಿನ ಪ್ರಗತಿಪರ ರೈತ ಕುಟುಂಬವೊಂದರಲ್ಲಿ ಜನನ. ಬಾಲಕನಾಗಿದ್ದಾಗಲಿಂದಲೇ ಓದಿನಲ್ಲಿ ಅತ್ಯಂತ ಶ್ರದ್ಧೆ ಮತ್ತು ಚುರುಕು. ಪ್ರಾಥಮಿಕ ಶಾಲಾಭ್ಯಾಸದಿಂದಲೇ ಕನ್ನಡ ಭಾಷೆಯ ಮೇಲೆ ಅಗಾಧ ಒಲವು ಮತ್ತು ಹಿಡಿತ. ಅಂತೆಯೇ ಶಾಲಾಕಾಲೇಜುಗಳ ದಿನಗಳಲ್ಲೇ ಸಾಹಿತ್ಯಾಸಕ್ತಿ, ಬಹುತೇಕ ಕನ್ನಡ ಬರಹಗಳ ಪ್ರಕಟಣೆ, ಎಂ.ಎ.ಎಲ್.ಎಲ್.ಬಿ. ಪದವಿ ಪಡೆದ ಬಳಿಗಾರ್‌ರವರು 1979ರಲ್ಲಿ ಕರ್ನಾಟಕ ಆಡಳಿತ ಸೇವೆಯ ಪರೀಕ್ಷೆಯಲ್ಲಿ ಯಶಸ್ವಿಯಾಗಿ ರಾಜ್ಯದ ವಿವಿಧ ಇಲಾಖೆಗಳಲ್ಲಿ ಉನ್ನತ ಮಟ್ಟದ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ಪಟ್ಟಿ ಹೀಗಿದೆ.

1. 1992 ರಿಂದ 2007ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಿಕ್ಷಣ ಇಲಾಖೆ, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆ ಪ್ರವಾಸೋದ್ಯಮ, ಐ.ಟಿ.ಬಿ.ಟಿ, ಇಲಾಖೆ, ಈ ಎಲ್ಲಾ

ಸಚಿವರುಗಳ ಆಪ್ತ ಕಾರ್ಯದರ್ಶಿಯಾಗಿ ವೈವಿಧ್ಯಮಯ ಅನುಭವವನ್ನು ಮೈಗೂಡಿಸಿಕೊಂಡಿರುವ ಅಪೂರ್ವ ಅವಧಿ.

2. 2004 ರಿಂದ 2007ರವರೆಗೆ ಡೆಪ್ಯುಟಿ ಕಮಿಷನರ್ ಹಾಗೂ ಕೌನ್ಸಿಲ್ ಕಾರ್ಯದರ್ಶಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಭೂತಪೂರ್ವ ಆಡಳಿತಾನುಭವ.

3, 2007ರಿಂದ 2012ರವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿ ಸೇವೆ ಸಲ್ಲಿಸಿ ಕನ್ನಡ ಭಾಷೆಯನ್ನು ಎತ್ತರಕ್ಕೆ ಒಯ್ದು ಪ್ರಾಜ್ಞಾವಂತ ಅಧಿಕಾರಿ. ಇದಲ್ಲದೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ ಕಂದಾಯ ಇಲಾಖೆಯಲ್ಲಿಯೂ ಸಹ ಜವಾಬ್ದಾರಿಯುತ ಉನ್ನತ ಅಧಿಕಾರಿಯಾಗಿ ಸೇವೆ. ಇವರು ಅಲಂಕರಿಸಿದ ಈ ಎಲ್ಲಾ ಪ್ರಮುಖ ಹುದ್ದೆಗಳಲ್ಲಿ ಆಡಳಿತದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ನೀಡಿ ಸರ್ಕಾರದಲ್ಲಿ ಅಪ್ಪಟ 'ಕನ್ನಡಿಗ ಅಧಿಕಾರಿ' ಎಂಬ ಪ್ರಶಂಸೆಗೂ ಪಾತ್ರರಾಗಿದ್ದಾರೆ.

**ಸಾಹಿತ್ಯ ಪ್ರಕಟಣೆಗಳು**

ಕನ್ನಡ ಸಾರಸ್ವತ ಲೋಕದ ವಿವಿಧ ರಂಗಗಳಲ್ಲಿನ ಇದರ ಒಟ್ಟು 27 ಪ್ರಕಟಣೆಗಳ ವಿವರ ಇಂತಿವೆ.

**ಕಥಾ ಸಂಕಲನ :** ಅವ್ಯಕ್ತ (1983), ಋಣ (1998), ಬದುಕು ಮಾಯೆಯ ಮಾಟ (2002) ಡಯೆಟ್ & ಅದರ್ ಸ್ಟೋರಿಸ್ (2004), ಕೆಲವು ಕತೆಗಳು(2005)

**ಕವನ ಸಂಕಲನ :** ನನ್ನ ನಿನ್ನೊಳಗೆ (1983), ಎದ್ದವರು ಬಿದ್ದವರು(1994), ಸಾಕ್ಷರ ಗೀತೆಗಳು(1994), ನಯಾಗರ ಮತ್ತು ಜಲಪಾತಗಳು(1998), ಕವಿ ರವೀಂದ್ರರ ಮಿಂಚಿನ ಹನಿಗಳು(2004), ಆಯ್ದ ಕವನಗಳು(2011).

**ಲಲಿತ ಪ್ರಬಂಧ ಸಂಕಲನ :** ಏಕಾಂತ ಮತ್ತು ಏಕಾಗ್ರತೆ(2004) ಬೆಳಕಬೆಡಗು(2009), ಸಂಸ್ಕೃತಿ ವಿಹಾರ (2012)

**ನಾಟಕ :** ಮೈಲಾರ ಮಹಾದೇವ (2007)

**ಜೀವನ ಚರಿತ್ರೆಗಳು :** ಅತಿ ವಿರಳ ರಾಜಕಾರಣಿ ಎಸ್.ಆರ್.ಕಂಠಿ(2001), ಪ್ರತಿಭಾವಂತ ಸಂಸದೀಯ ಪಟುಗಳು, ಅಬ್ದುಲ್ ನಜೀರ್ ಸಾಬ್ (2005), ಅಪ್ಪ(2012) ಸಂಪಾದನೆ : ಬಹುಮುಖಿ (ಶಿವರಾಮ ಕಾರಂತರ ಬದುಕು ಬರಹ) ಗಾನಗಂಧರ್ವ(ಕುಮಾರಗಂಧರ್ವರ ಜೀವನ ಸಾಧನೆ), ಜ್ಞಾನಪ್ರಭಾ, ಕಲ್ಪವೃಕ್ಷ, ತಲಸ್ಪರ್ಶಿ, ತುಳಸಿ ಇತ್ಯಾದಿ.

**ಭಾಷಾಂತರ:** ಇದಲ್ಲದೇ ಇವರ ಹಲವಾರು ಕಥೆಗಳು ಇಂಗ್ಲೀಷ್, ಒರಿಯಾ, ತೆಲುಗು ಮತ್ತು ಹಿಂದಿಗೆ ಭಾಷಾಂತರಗೊಂಡಿವೆ ಹಾಗೂ ರವೀಂದ್ರನಾಥ ಠಾಕೂರ ಅವರ 207ಕ್ಕೂ ಹೆಚ್ಚು ಕವನಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

**ಪ್ರಶಸ್ತಿ ಪುರಸ್ಕಾರಗಳು:**

ಸಾಹಿತ್ಯ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಗೌರವ ಡಾಕ್ಟರೇಟ್ (2011) ನೀಡಿದೆ.

ಸರಕಾರಿ ಸೇವೆಯಲ್ಲಿ ಅತ್ಯುತ್ತಮ ಅಧಿಕಾರಿಯೆಂದು ಎರಡು ಚಿನ್ನದ ಪದಕ ಸಮೇತ ಒಟ್ಟು 5 ಬಹುಮಾನಗಳು (1982-83 ರಿಂದ 1985-86)

ಸಾಕ್ಷರತಾ ಆಂದೋಲನ ಬೆಳಗಾವಿ ಜಿಲ್ಲಾ ಸಮಿತಿಯ ಪಾಕ್ಷಿಕ 'ಅಕ್ಷರ ಪ್ರಭಾ' ಸಂಪಾದಕನಾಗಿದ್ದಾಗ ಜಿಲ್ಲೆಗೆ ರಾಷ್ಟ್ರಪತಿಗಳ 'ಸತ್ಯೇನ್ ಮೈತ್ರ ಪ್ರಶಸ್ತಿ' (1994-95)

ವಿಶ್ವಮಾನವ ಪ್ರಶಸ್ತಿ - 2008, ಇತ್ಯಾದಿ

**ಸಾಹಿತ್ಯ ಪುರಸ್ಕಾರಗಳು:**

- ರನ್ನ ಸಾಹಿತ್ಯ ಪ್ರಶಸ್ತಿ
- ಗೊರೂರು ಸಾಹಿತ್ಯ ಪ್ರಶಸ್ತಿ
- ಕೆಂಪೇಗೌಡ ಸಾಹಿತ್ಯ ಪ್ರಶಸ್ತಿ
- ಲಿಂಗರಾಜದೇಸಾಯಿ ಸಾಹಿತ್ಯ ಪ್ರಶಸ್ತಿ
- ಬೆಳಗಾವಿಯ ಎಂ.ಕೆ.ಪಬ್ಲಿಸಿಟಿ ಪ್ರಶಸ್ತಿ ಮುಂತಾದವುಗಳು.

**ವಿದೇಶ ಪ್ರವಾಸ ಹಾಗೂ ಉಪನ್ಯಾಸಗಳು:**

- ಸಿಂಗಪುರದಲ್ಲಿ ನಡೆದ ವಿಶ್ವಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆ (2005)
- ಅಮೇರಿಕಾದ ವಿ.ಎಸ್.ಎನ್.ಎ. ರಜತ ಮಹೋತ್ಸವದಲ್ಲಿ ಪ್ರಧಾನ ಭಾಷಣ -1997, 2003, 2007.
- ಆಸ್ಟ್ರೇಲಿಯಾದ ಮೆಲ್ಬರ್ನ್‌ಕನ್ನಡ ಸಂಘದ ರಜತ ಮಹೋತ್ಸವಲಯದಲ್ಲಿ ಮುಖ್ಯ ಅತಿಥಿ-ಉಪನ್ಯಾಸ-2010
- ಲಂಡನ್ ನಲ್ಲಿ ರವೀಂದ್ರನಾಥ್ ಟ್ಯಾಗೂರ್ 150ನೇ ವರ್ಷಾಚರಣೆಯಲ್ಲಿ ಮುಖ್ಯ ಅತಿಥಿ-ಉಪನ್ಯಾಸ-2011
- ಗದಗ ಜಿಲ್ಲಾ ಕನ್ನಡ ಸಾಹಿತ್ಯದ ಸಮ್ಮೇಳನದ ಅಧ್ಯಕ್ಷತೆ (2004)
- ಸದಸ್ಯ ಕರ್ನಾಟಕ ಸಾಹಿತ್ಯ ಅಕಾಡೆಮಿ (1999-2001)
- ಬಿಜಾಪುರ ಜಿಲ್ಲಾ 5ನೇ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಧ್ಯಕ್ಷ (1989-1990)
- ಮಾರ್ಚ್ 2011ರಲ್ಲಿ ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದು.

- ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ (1999) ಮತ್ತು ಸಾಂಸ್ಕೃತಿಕ ಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ್ದು (2003) ಕನಕಪುರ, ಮೂಡಬಿದ್ರೆ.
- ರಾಷ್ಟ್ರೀಯ ಕನ್ನಡ ಸಮ್ಮೇಳನ ಅಧ್ಯಕ್ಷರು, ನವದೆಹಲಿ - ಅಧ್ಯಕ್ಷತೆ (2010)
- 2008 ಮತ್ತು 2009ರಲ್ಲಿ ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಸಾಕ್ಷಿಪ್ರಜ್ಞೆ' ಎಂಬ ಅಂಕಣ ಬರೆದದ್ದು.
- ಅಮೆರಿಕಾ, ಯುರೋಪ್, ಆಸ್ಟ್ರೇಲಿಯಾ, ಥೈಲ್ಯಾಂಡ್, ಮಲೇಷಿಯಾ, ದುಬೈ, ಸಿಂಗಾಪುರಗಳಲ್ಲಿ ವ್ಯಾಪಕ ಪ್ರವಾಸ (1997-2003-2005-2007-2008, 20i0, 2011) ಅಲ್ಲಿ ಮಾಡಿದ ಉಪನ್ಯಾಸಗಳು:
- ರವೀಂದ್ರನಾಥ ಠಾಗೋರ್ ಅಂಡ್ ಇಂಡಿಯನ್ ಆರ್ಟ್ & ಕಲ್ಚರ್: ಇಂಟರ್ ನ್ಯಾಷನಲ್ ಅಂಡರ್ ಸ್ಟಾಂಡಿಂಗ್ ಅಂಡ್ ವಚನ ಲಿಟರೇಚರ್; ಇಂಡಿಯನ್ ಕಲ್ಚರ್ ಅಂಡ್ ಹೆರಿಟೇಜ್; ಚಾಲೆಂಜಸ್ ಬಿಫೋರ್ ರಿಲಿಜನ್; ಕನ್ನಡ ಸಂಸ್ಕೃತಿ ಒಂದು ಅಧ್ಯಯನ ಇತ್ಯಾದಿ.
- ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಇಷ್ಟೊಂದು ಅನುಭವವನ್ನು ಮೈಗೂಡಿಸಿಕೊಂಡಿರುವ 'ಮನು ಬಳಿಗಾರ್'ರಂತಹ ವ್ಯಕ್ತಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು. ವಿಶ್ವದ ಕನ್ನಡಿಗರ ಪಾಲಿನ ಸೌಭಾಗ್ಯವೆಂದೆ ಪರಿಗಣಿಸಬೇಕಾಗಿದೆ. ಅಂತೆಯೇ ಬಳಿಗಾರ್‌ರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತದಲ್ಲಿನ ಲೋಪದೋಷಗಳು ಪರಿಹಾರ ಕಂಡು ಕನ್ನಡದ ಸರ್ವಾಂಗೀಕರಣ ಅಭಿವೃದ್ಧಿಗೆ ಮುಕ್ತ ಅವಕಾಶಗಳು ಒದಗಿ, 'ಕನ್ನಡಮ್ಮ'ನ ಪತಾಕೆಯನ್ನು ಹೆಮ್ಮೆಯಿಂದ ಎತ್ತಿ ಹಿಡಿಯೋಣ.

* * * * *

## ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ

## ನಾಡೋಜ ಡಾ. ಮನು ಬಳಿಗಾರ್ ಕೈಗೊಂಡ ಕಾರ್ಯಕ್ರಮಗಳು

- ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ ಪ್ರಪ್ರಥಮಬಾರಿಗೆ ಬಹರೇನ್ ಕನ್ನಡ ಸಂಘ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಬಹರೇನ್‌ನಲ್ಲಿ ಐತಿಹಾಸಿಕ **ಪ್ರಥಮ ಅಂತರರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು** ಅತ್ಯಂತ ಯಶಸ್ವಿಯಾಗಿ ಜರುಗಿಸಲಾಗಿದೆ.
- ದೆಹಲಿಯಲ್ಲಿ ಅಕ್ಟೋಬರ್ ೮ ಮತ್ತು ೯, ೨೦೧೬ - **ಹೊರನಾಡ ಕನ್ನಡಿಗರ ಪ್ರಥಮ ರಾಷ್ಟ್ರೀಯ ಸಮಾವೇಶ**, ನಂತರದಲ್ಲಿ ಮುಂಬೈನಲ್ಲಿ ಫೆಬ್ರವರಿ ೧೦ ಮತ್ತು ೧೧, ೨೦೧೮ ಹೊರನಾಡ ಕನ್ನಡಿಗರ ದ್ವಿತೀಯ ರಾಷ್ಟ್ರೀಯ ಸಮಾವೇಶಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ.

- ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲೇ **ಪ್ರಥಮ ಬಾರಿಗೆ ಅಖಿಲ ಭಾರತ ಹಳಗನ್ನಡ ಸಾಹಿತ್ಯ ಸಮ್ಮೇಳನವನ್ನು** ೨೦೧೮ರಲ್ಲಿ ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ಇತ್ತೀಚಿಗೆ ಯಶಸ್ವಿಯಾಗಿ ಆಯೋಜಿಸಲಾಗಿದೆ.
- ಮಹಾರಾಷ್ಟ್ರ ರಾಜ್ಯ **ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸೊಲ್ಲಾಪುರದಲ್ಲಿ** ೨೦೧೭ರಲ್ಲಿ ಯಶಸ್ವಿಯಾಗಿ ಜರುಗಿಸಲಾಗಿದೆ.
- ಚೆನ್ನೈನಲ್ಲಿ ೨೦೧೭ರಲ್ಲಿ ತಮಿಳುನಾಡು ರಾಜ್ಯ ಮಟ್ಟದ ಸಾಹಿತ್ಯ ಸಮ್ಮೇಳನ.
- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಸಹಯೋಗದಲ್ಲಿ ರಾಜ್ಯಾದ್ಯಂತ ಸಹಕಾರ, ಕೃಷಿ, ತೋಟಗಾರಿಕೆ, ನೀರಾವರಿ, ಬ್ಯಾಂಕಿಂಗ್, ಇತ್ಯಾದಿ.. ವಿಷಯಗಳ ಸಾಹಿತ್ಯ ಕುರಿತು ೧೪ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಇದೂ ಕೂಡ **ಕಸಾಪದ ಇತಿಹಾಸದಲ್ಲಿ ಮೊದಲ ಪ್ರಯತ್ನವೆನಿಸಿದೆ.**
- ಕ.ಸಾ.ಪ. ದ ಮೂರು ಅಂತಸ್ತಿನ ಶತಮಾನೋತ್ಸವ ಸ್ಮಾರಕಭವನದ ನಿರ್ಮಾಣ ಕಾರ್ಯವನ್ನು **ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡಕೂಡಲೇ ಪ್ರಾರಂಭಿಸಿ ೧೯ ತಿಂಗಳ ಕಾಲಾವಧಿಯೊಳಗೆ ನಿರ್ಮಿಸಲಾಗಿದೆ.** ಕನ್ನಡದ ಆದಿಕವಯಿತ್ರಿ ಅಕ್ಕಮಹಾದೇವಿ ಹೆಸರಿನ ಸುಸಜ್ಜಿತ ಸಭಾಂಗಣ, ಕಚೇರಿಗಾಗಿ ಸ್ಥಳಾವಕಾಶ ಮತ್ತು ಅತಿಥಿಗಳಿಗಾಗಿ ಆರು ಕೊಠಡಿಗಳನ್ನು ಇದು ಒಳಗೊಂಡಿದೆ.
- ಪ್ರಥಮ ಬಾರಿಗೆ ರಾಜ್ಯದ ೧೪ ಕಡೆ ಕನ್ನಡ/ಸಾಹಿತ್ಯ ಭವನಗಳನ್ನು ನಿರ್ಮಿಸಲಾಗುತ್ತಿದೆ. ಎರಡು ಕಡೆ ಈಗಾಗಲೇ ಕನ್ನಡ ಭವನವನ್ನು ಲೋಕಾರ್ಪಣೆಗೊಳಿಸಲಾಗಿದೆ.
- ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ೧೫೦೦ಕ್ಕೂ ಹೆಚ್ಚಿನ ಮೌಲಿಕ ಕೃತಿಗಳನ್ನು, ಕನ್ನಡ-ಕನ್ನಡ ಬೃಹತ್ ನಿಘಂಟಿನ ೮ ಸಂಪುಟಗಳನ್ನು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಹಯೋಗದೊಂದಿಗೆ ಭಾರತವಾಣಿ ಪೋರ್ಟಲ್ ಮೂಲಕ ಡಿಜಿಟಲೈಜೇಶನ್ ಮಾಡಿಸಿ ಅಂತರ್ಜಾಲ ತಾಣದ ಓದುಗರಿಗೆ ಒದಗಿಸಿಕೊಡುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ.
- ಭಾಷಾ ಬೆಳವಣಿಗೆಗೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುವ ನಿಟ್ಟಿನಲ್ಲಿ ನೇಪಾಳಿ ಕಲಾ ಡಾಟ್ ಕಾಂ ಪ್ರತಿಷ್ಠಾನದೊಂದಿಗೆ ಪರಿಷತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದ್ದು, ಈ ಒಡಂಬಡಿಕೆಯನ್ವಯ ಪರಸ್ಪರ ಭಾಷೆಗಳ ೫೦ ಕ್ಕೂ ಹೆಚ್ಚು ಕವಿಗಳ ಒಂದೊಂದು ಕವನಗಳನ್ನು **ಭಾಷಾಂತರಿಸಿ ಕನ್ನಡ ಹಾಗೂ ನೇಪಾಳಿ ಭಾಷೆಗಳಲ್ಲಿ ಪ್ರಕಟಿಸುವ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ.**

- ಗೋವಾ ರಾಜ್ಯ ಕ.ಸಾ.ಪ. ಗಡಿನಾಡು ಘಟಕವನ್ನು ೨೦೧೮ರ ಸೆಪ್ಟೆಂಬರ್ ೯ರಂದು ವಿಧ್ಯುಕ್ತವಾಗಿ ಉದ್ಘಾಟಿಸಿ, ಅಲ್ಲಿನ ಕನ್ನಡಿಗರ ಬಹುದಿನಗಳ ಬೇಡಿಕೆಯನ್ನು ಈಡೇರಿಸಲಾಗಿದೆ. ಇದೊಂದು ಚಾರಿತ್ರಿಕ ದಾಖಲೆ ಎನಿಸಿದೆ.
- ಸಾಹಿತ್ಯದ ವಿವಿಧ ಪ್ರಕಾರಗಳ ದಲಿತ ಸಾಹಿತ್ಯ ೧೦ ಸಂಪುಟಗಳ ಪ್ರಕಟಣೆಗೆ ಚಾಲನೆ ನೀಡಲಾಗಿದ್ದು, ಮೊದಲ ಕಂತಾಗಿ ೫ ಸಂಪುಟಗಳ ಮುದ್ರಣಕಾರ್ಯ ಪ್ರಗತಿಯಲ್ಲಿದೆ. ಇದೂ ಕೂಡ **ಕ.ಸಾ.ಪ.ದ ಇತಿಹಾಸದಲ್ಲಿ ಮೊದಲನೆಯದೆನಿಸಿದೆ.**
- ಕನ್ನಡ ಸಾರಸ್ವತ ಲೋಕಕ್ಕೆ ಅದ್ವಿತೀಯ ಕಾಣಿಕೆ ನೀಡಿದ ಮಹನೀಯರುಗಳಾದ ಡಾ. ಗೋಪಾಲಕೃಷ್ಣ ಅಡಿಗರು, ಶ್ರೀಮತಿ ಎಂ.ಕೆ. ಇಂದಿರಾ, ಶ್ರೀಮತಿ ವಾಣಿ, ಶ್ರೀ ಬೆಳಗೆರೆ ಕೃಷ್ಣಶಾಸ್ತ್ರೀ ಹಾಗೂ ಡಾ. ದೇ. ಜವರೇಗೌಡರ ಜನ್ಮ ಶತಮಾನೋತ್ಸವಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ.
- ಕನ್ನಡಿಗರಿಗೆ ಉದ್ಯೋಗ ಸಂಬಂಧಿತ ಸಿ ಮತ್ತು ಡಿ ಗ್ರೂಫ್ ಕೆಲಸಕ್ಕಾಗಿ ಕ.ಸಾಪ.ದಲ್ಲಿ ಉದ್ಯೋಗ ಪೋರ್ಟಲ್ ಸ್ಥಾಪನೆ ಮಾಡಲಾಗಿದೆ. ಈ ಮೂಲಕ ಸ್ವೀಕೃತವಾದ ಅಂದಾಜು ೨೨ ಸಾವಿರ ಉದ್ಯೋಗ ಅರ್ಜಿಗಳನ್ನು ೩೭೫ ಬಹುರಾಷ್ಟ್ರೀಯ ಮತ್ತು ಇತರೆ ಕಂಪನಿಗಳಿಗೆ ಕಳಿಸಿ ಸಿ ಮತ್ತು ಡಿ ದರ್ಜೆಯ ನೌಕರಿಗಳನ್ನು ಕನ್ನಡಿಗರಿಗೆ ನೀಡುವಂತೆ ಮನವಿಸಲ್ಲಿಸುವುದರ ಮೂಲಕ ಕನ್ನಡಿಗರಿಗೆ ಉದ್ಯೋಗ ದೊರಕಿಸಿಕೊಡುವಲ್ಲಿ ಪರಿಷತ್ತು ಸಹಾಯಹಸ್ತ ನೀಡುವಲ್ಲಿ ಕಾರ್ಯನಿರತವಾಗಿದೆ.

* * * * *

**ಜನನ** : ಅಂದಿನ ಧಾರವಾಡ ಜಿಲ್ಲೆಯ (ಇಂದಿನ ಗದಗ ಜಿಲ್ಲೆ) ಶಿಗ್ಲಿ ಗ್ರಾಮದ ಪ್ರಗತಿಪರ ಕೃಷಿ ಕುಟುಂಬದಲ್ಲಿ

**ವಿದ್ಯಾರ್ಹತೆ** : ಎಂ.ಎ, ಎಲ್‌ಎಲ್.ಬಿ (ಸ್ಪೆಶಲ್)

**ಸೇವೆ** : ಕರ್ನಾಟಕ ಆಡಳಿತ ಸೇವೆ (ಕೆ.ಎ.ಎಸ್. ೧೯೮೯ ಬ್ಯಾಚ್)

- ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಇಲಾಖೆ.
- ಡೆಪ್ಯೂಟಿ ಕಮೀಷನರ್ ಹಾಗೂ ಕೌನ್ಸಿಲ್ ಕಾರ್ಯದರ್ಶಿ, ಬಿ.ಬಿ.ಎಂ.ಪಿ.- ಬೆಂಗಳೂರು.

- ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ & ಪಂಚಾಯತ್‌ರಾಜ್ ಇಲಾಖೆ, ಶಿಕ್ಷಣ ಇಲಾಖೆ, ಆಹಾರ ನಾಗರಿಕ ಪೂರೈಕೆ ಇಲಾಖೆ, ಪ್ರವಾಸೋದ್ಯಮ, ಐ.ಟಿ.ಬಿ.ಟಿ ಇಲಾಖೆಗಳ ಸಚಿವರುಗಳಿಗೆ, ಇತ್ಯಾದಿ.

**ಒಟ್ಟು ಸಾಹಿತ್ಯ ಕೃತಿಗಳು :** ೨೯ ಕೃತಿಗಳು

**ಕಥಾ ಸಂಕಲನಗಳು** : ಅವ್ಯಕ್ತ ೧೯೮೩), ಋಣ((೧೯೯೮), ಬದುಕು ಮಾಯೆಯ ಮಾಟ(೨೦೦೨),

ದ ಡೆಟ್ & ಅದರ್ ಸ್ಟೋರೀಸ್ (೨೦೦೪), ಕೆಲವು ಕತೆಗಳು(೨೦೦೫)

**ಕವನ ಸಂಕಲನಗಳು** : ನನ್ನ ನಿನ್ನೊಳಗೆ(೧೯೮೩), ಎದ್ದವರು ಬಿದ್ದವರು(೧೯೯೪),

ಸಾಕ್ಷರ ಗೀತೆಗಳು(೧೯೯೪),

ನಯಾಗರ ಮತ್ತು ಜಲಪಾತಗಳು (೧೯೯೮),

ಕವಿ ರವೀಂದ್ರರ ಮಿಂಚಿನ ಹನಿಗಳು(೨೦೦೪), ಆಯ್ದ ಕವನಗಳು (೨೦೧೧)

**ಲಲಿತ ಪ್ರಬಂಧ ಸಂಕಲನಗಳು :** ಏಕಾಂತ ಮತ್ತು ಏಕಾಗ್ರತೆ (೨೦೦೪), ಬೆಳಕ ಬೆಡಗು (೨೦೦೯), ಸಂಸ್ಕೃತಿ ವಿಹಾರ(೨೦೧೨)

**ನಾಟಕ** : ಮೈಲಾರ ಮಹಾದೇವ (೨೦೦೭)

**ಜೀವನ ಚರಿತ್ರೆಗಳು** : ಅತಿ ವಿರಳ ರಾಜಕಾರಣಿ ಎಸ್.ಆರ್. ಕಂಠಿ (೨೦೦೧), ಪ್ರತಿಭಾವಂತ ಸಂಸದೀಯ ಪಟುಗಳು, ಅಬ್ದುಲ್ ನಜೀರ್‌ಸಾಬ್ (೨೦೦೫), ಅಪ್ಪ (೨೦೧೨) **ಸಂಪಾದನೆ** : ಬಹುಮುಖಿ(ಶಿವರಾಮ ಕಾರಂತರ ಬದುಕು-ಬರಹ), ಗಾನಗಂಧರ್ವ

(ಕುಮಾರ ಗಂಧರ್ವರ ಜೀವನ ಸಾಧನೆ),

ಜ್ಞಾನಪ್ರಭಾ, ಕಲ್ಪವೃಕ್ಷ, ತಲಸ್ಪರ್ಶಿ, ತುಳಸಿ ಇತ್ಯಾದಿ.

**ಭಾಷಾಂತರ** : ಇದಲ್ಲದೇ ಇವರ ಹಲವಾರು ಕಥೆಗಳು ಇಂಗ್ಲೀಷ್, ಒರಿಯಾ, ತೆಲುಗು ಮತ್ತು ಹಿಂದಿಗೆ ಭಾಷಾಂತರಗೊಂಡಿವೆ ಹಾಗೂ ರವೀಂದ್ರನಾಥ ಠಾಕೂರ ಅವರ ೨೦೭ಕ್ಕೂ ಹೆಚ್ಚು ಕವನಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

**ಪ್ರಶಸ್ತಿ ಪುರಸ್ಕಾರಗಳು :**

- ಸರಕಾರಿ ಸೇವೆಯಲ್ಲಿ ಅತ್ಯುತ್ತಮ ಅಧಿಕಾರಿಯೆಂದು ಎರಡು ಚಿನ್ನದ ಪದಕ ಸಮೇತ ಒಟ್ಟು ೫ ಬಹುಮಾನಗಳು (೧೯೮೨-೮೩ ರಿಂದ ೧೯೮೫-೮೬)
- ಸಾಕ್ಷರತಾ ಆಂದೋಲನ ಬೆಳಗಾವಿ ಜಿಲ್ಲಾ ಸಮಿತಿಯ ಪಾಕ್ಷಿಕ "ಅಕ್ಷರ ಪ್ರಭಾ" ಸಂಪಾದಕನಾಗಿದ್ದಾಗ ಜಿಲ್ಲೆಗೆ ರಾಷ್ಟ್ರಪತಿಗಳ 'ಸತ್ಯೇನ್ ಮೈತ್ರ ಪ್ರಶಸ್ತಿ' (೧೯೯೪-೯೫)
- 'ವಿಶ್ವಮಾನವ ಪ್ರಶಸ್ತಿ' ೨೦೦೮, ಇತ್ಯಾದಿ.

**ಸಾಹಿತ್ಯ ಪುರಸ್ಕಾರಗಳು :**

- ಸಾಹಿತ್ಯ ಕ್ಷೇತ್ರದಲ್ಲಿನ ಅನನ್ಯ ಸೇವೆಗಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಗೌರವ ಡಾಕ್ಟರೇಟ್ (೨೦೧೧)
- ಬೆಟಗೇರಿ ಕೃಷ್ಣಶರ್ಮ ಕಥಾ ಪ್ರಶಸ್ತಿ
- ರನ್ನ ಸಾಹಿತ್ಯ ಪ್ರಶಸ್ತಿ
- ಗೊರೂರು ಸಾಹಿತ್ಯ ಪ್ರಶಸ್ತಿ
- ಕೆಂಪೇಗೌಡ ಸಾಹಿತ್ಯ ಪ್ರಶಸ್ತಿ
- ಲಿಂಗರಾಜ ದೇಸಾಯಿ ಸಾಹಿತ್ಯ ಪ್ರಶಸ್ತಿ
- ಬೆಳಗಾವಿಯ ಎಂ.ಕೆ. ಪಬ್ಲಿಸಿಟಿ ಪ್ರಶಸ್ತಿ, ಮುಂತಾದವುಗಳು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಪ್ರತಿಷ್ಠಿತ **'ನಾಡೋಜ'**ಪ್ರಶಸ್ತಿ.

**ವಿದೇಶ ಪ್ರವಾಸ ಹಾಗೂ ಉಪನ್ಯಾಸಗಳು :**

- ಸಿಂಗಾಪುರದಲ್ಲಿ ನಡೆದ ವಿಶ್ವಕನ್ನಡ ಸಂಸ್ಕೃತಿ ಸಮ್ಮೇಳನದ ಅಧ್ಯಕ್ಷತೆ (೨೦೦೫)
- ಅಮೇರಿಕಾದ ವಿ.ಎಸ್.ಎನ್.ಎ. ರಜತ ಮಹೋತ್ಸವದಲ್ಲಿ ಪ್ರಧಾನ ಭಾಷಣ – ೧೯೯೭, ೨೦೦೩, ೨೦೦೭.
- ಆಸ್ಟ್ರೇಲಿಯಾದ ಮೆಲ್ಬರ್ನ್ ಕನ್ನಡ ಸಂಘದ ರಜತ ಮಹೋತ್ಸವದಲ್ಲಿ ಮುಖ್ಯಅತಿಥಿ–ಉಪನ್ಯಾಸ- ೨೦೧೦.
- ಲಂಡನ್‌ನಲ್ಲಿ ರವೀಂದ್ರನಾಥ್ ಟ್ಯಾಗೂರ್ ೧೫೦ನೇ

ವರ್ಷಾಚರಣೆಯಲ್ಲಿ ಮುಖ್ಯಅತಿಥಿ–ಉಪನ್ಯಾಸ- ೨೦೧೧,

- ಗದಗ ಜಿಲ್ಲಾ ಕನ್ನಡ ಸಾಹಿತ್ಯದ ಸಮ್ಮೇಳನದ ಅಧ್ಯಕ್ಷತೆ (೨೦೦೪)
- ಸದಸ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ (೧೯೯೯-೨೦೦೧)
- ಬಿಜಾಪುರ ಜಿಲ್ಲಾ ೫ನೇ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ (೧೯೮೯-೧೯೯೦)
- ಮಾರ್ಚ್ ೨೦೧೧ರಲ್ಲಿ ಬೆಳಗಾವಿಯಲ್ಲಿ ವಿಶ್ವಕನ್ನಡ ಸಮ್ಮೇಳನವನ್ನು
ಅತ್ಯಂತ ಯಶಸ್ವಿಯಾಗಿ ನಡೆಸುವಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಮುಖ್ಯಸ್ಥನಾಗಿ ಮಹತ್ವದ ಪಾತ್ರವಹಿಸಿದ್ದು.
- ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ (೧೯೯೯) ಕನಕಪುರ; ಮತ್ತು ಸಾಂಸ್ಕೃತಿಕ ಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ್ದು (೨೦೦೩) ಮೂಡಬಿದ್ರೆ.
- ರಾಷ್ಟ್ರೀಯ ಕನ್ನಡ ಸಮ್ಮೇಳನ ಅಧ್ಯಕ್ಷತೆ, ನವದೆಹಲಿ (೨೦೧೦)
- ೨೦೦೮ ಮತ್ತು ೨೦೦೯ರಲ್ಲಿ ಪ್ರಜಾವಾಣಿ ದಿನಪತ್ರಿಕೆಯಲ್ಲಿ 'ಸಾಕ್ಷಿಪ್ರಜ್ಞೆ' ಎಂಬ ಅಂಕಣ ಬರೆದದ್ದು.
- ಅಮೆರಿಕಾ, ಯುರೋಪ್, ಆಸ್ಟ್ರೇಲಿಯಾ, ಬಹರೇನ್, ಮಲೇಷಿಯಾ, ದುಬೈ, ಸಿಂಗಾಪುರಗಳಲ್ಲಿ ವ್ಯಾಪಕ ಪ್ರವಾಸ (೧೯೯೭-೨೦೦೩-೨೦೦೫-೨೦೦೭-೨೦೦೮, ೨೦೧೦, ೨೦೧೧)

**ಅಲ್ಲಿ ಮಾಡಿದ ಉಪನ್ಯಾಸಗಳು :**

- ರವೀಂದ್ರನಾಥ ಠಾಗೂರ್ ಆ್ಯಂಡ್ ಇಂಡಿಯನ್ ಆರ್ಟ್ & ಕಲ್ಚರ್; ಇಂಟರ್‌ನ್ಯಾಷನಲ್ ಅಂಡರ್‌ಸ್ಟಾಂಡಿಂಗ್ ಅಂಡ್ ವಚನ ಲಿಟರೆಚರ್; ಇಂಡಿಯನ್ ಕಲ್ಚರ್ ಅಂಡ್ ಹೆರಿಟೇಜ್; ಚಾಲೆಂಜಸ್ ಬಿಫೋರ್ ರಿಲಿಜನ್; ಕನ್ನಡ ಸಂಸ್ಕೃತಿ- ಒಂದು ಅಧ್ಯಯನ ಇತ್ಯಾದಿ.

* * * * *

# Dr. MANU BALIGAR

**President, Kannada Sahitya Parishath**

| | |
|---|---|
| Birth | : Born in to a progressive Agricultural Family in Shigli village of erstwhile Dharwad dist. (now in Gadag district, Karnataka) |
| Educational Qualification | : M.A., LL.B. |
| Present Position held | : President, Kannada Sahitya Parishath, Bangalore (Total number of Members 325000) |
| Earlier Positions held | ► Commissioner, Kannada & Culture Department Govt. of Karnataka<br>► Director, Social Security and Pensions, Revenue Dept., Government of Karnataka, Bangalore.<br>► Chief Executive Officer, Roerich and Devikarani Roerich Estate Board, Bangalore etc. |
| **Total Books Authored** | **:** 29 books |

Collections of short stories - 5

Collections of Poems -6

Collections of Essays -3

Play -1

Biographies -4

Edited Works &Transalations - 10

- Dr.ManuBaligar's several short stories have been translated in to English, Hindi, Oria And Telugu.
- Some short stories and poems and Articles of Dr.ManuBaligar have become text and reference in books for graduation level and PG level in a few universities of Karnataka State and

Maharashtra

**Awards & Honours** :

- ▶ Total Five Prizes including two Gold Medals for the Outstanding performance in Government Service (during 1982-83 to 1985-86)
- ▶ Belgaum Dist., was conferred with the President of India "Satyen Mythra Award" (1994-95) for total literacy programme and at that time (Manu Baligar) worked as the Editor of "Akshara Prabha" and "Jnana Prabha" Fortnightly of Belgaum Dist., in 'Saksharatha Andholana (1993-1999).
- ▶ Conferred with **Honorary Doctorate** for Literature from Karnataka University Dharwad (2011).
- ▶ Conferred with the **"VishwaManava Award"** – Kuvempu and Dejagou Trust, Mysore
- ▶ 'Betageri Krishna Sharma Katha Prashasthi','Ranna Literary award', 'Gorur Literary award", "Kempegowda Literary award', 'Ligaraja Desai Literary award', 'M.K.Publicity Award, Belgaum etc.
- ▶ Awarded with Prestigious "Nadoja" honour by Kannada University,Hampi.

**Tours and Lectures Abroad:**

- ▶ Has Chaired and been guest and delivered lectures on many National and International Seminars in U.S.A., England, Australia, Bangkok, Dubai, Singapore, Malasia, Behrain, etc.

- ► Columnist of Prajavani, Vijaya karnataka, Samyukta Karnataka and other Leading News papers of Karnataka.
- ► During the Presidentship period of Dr. Manu Baligar Kannada Sahitya Parishattu has extended its boundaries beyond Karnataka and India for the first time in its history of 105 years. Kannada Sahitya Parishattu conducted First International Kannada Sahitya Sammelana successfully in Behrain on 5th and 6th October 2018 and second oneis convened during April 2020.
- ► Fifty important Kannada Poets' 50 poems are brought out in Nepali Language and 50 Nepali poems in to Kannada Language. Kannada poems include the writings of great poets like Dr. Kuvempu, Dr. Bendre, Dr. Gokak, Dr. Anantamurty (all Jnanapeeta awardees) and also Dr. G.S. Shivarudrappa, Channaveera Kanavi, Gopalakrishna Adiga, Lankesh, Siddalingaiah, Yakkundi, Baragoor etc.
- ► Two non resident Kannadigas (ಹೊರನಾಡ ಕನ್ನಡಿಗರ) National Level Conferences were conducted in Delhi and Mumbai during October 2016 & February 2018 respectively. This type of sammelanas

outside Karnataka were held for the first time in the history of Karnataka and Kannada Sahitya Parishattu.

- ► Old Kannada (Halegannada) National Level Sammelana was held for the first time in June 2018 in Shravanabelagola
- ► First time Kannada Sahitya Parishattu is constructing Kannada / Sahitya Bhavanas in 14 places and 4 have been already constructed and inaugurated.

## ಲೇಖಕರ ವಿಳಾಸಗಳು


**ಡಾ. ಜಿ.ಆರ್. ತಿಪ್ಪೇಸ್ವಾಮಿ**
ನಿವೃತ್ತ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ.ಅಂಕನಹಳ್ಳಿ ಪಾರ್ಥ**
ಕನ್ನಡ ಉಪನ್ಯಾಸಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ರಾಮನಗರ

**ಚೆನ್ನರಾಜು ಎಂ. ಬಸಪ್ಪನದೊಡ್ಡಿ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು
ಮೊ. : ೮೮೬೭೩೯೧೬೦

**ಡಾ. ಗಜಾನನ ನಾಯ್ಕ**
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಡಾ. ಗೋಪಿ.ಎಸ್.ಎಂ.**
ಸಹಾಯಕ ಪ್ರಾಧ್ಯಾಪಕರು
ಪಿ.ಜಿ. ಸೆಂಟರ್, ರಾಮನಗರ
ಬೆಂಗಳೂರು ವಿಶ್ವವಿದ್ಯಾಲಯ

**ಪ್ರೊ ಚನ್ನವೀರಯ್ಯ**
ಕನ್ನಡ ವಿಭಾಗ, ಆಚಾರ್ಯ ಪದವಿ
ವಿದ್ಯಾಲಯ, ಸೋಲದೇವವನಹಳ್ಳಿ
ಬೆಂಗಳೂರು-೫೬೦೧೦೭

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**
ಕನ್ನಡ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಸಿರಾ., ತುಮಕೂರು
ಮೊ : ೯೯೪೫೯೭೫೫೦೯

**ಡಾ. ಚಿತ್ರಲಿಂಗಯ್ಯ ಡಿ.ಸಿ.**
ಸಹಾಯಕ ಪ್ರಾಧ್ಯಾಪಕ
ಎನ್.ಎಂ.ಕೆ.ಆರ್.ವಿ. ಕಾಲೇಜು
ಜಯನಗರ, ಬೆಂಗಳೂರು

**ಡಾ. ಡಿ.ಕೆ. ಚಿತ್ತಯ್ಯ ಪೂಜಾರ್**
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು – ೫೬೦೦೫೬

**ಡಾ. ಸಿದ್ದಪ್ಪ ಬೆಳಗಟ್ಟ**
ಮಹಿಳಾ ಅಧ್ಯಯನ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು – ೫೬೦೦೫೬

**ಜಗದೀಶ್ ಎಸ್.**

ಸಂಶೋಧನ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನ ಭಾರತಿ, ಬೆಂಗಳೂರು

**ಡಾ. ಜ್ಯೋತ್ಸ್ನಾ ಚಂದ್ರಕಾಂತ**
ಕೇರಾಫ್ ಡಾ. ಎಸ್. ಮೋಹನ್
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ ೫೮೩ ೨೭೬
ಮೊ: ೯೪೪೯೪೨೯೦೯೭

**ಡಾ. ಶ್ವೇತಾ ಎನ್.**
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ
ಶಿವಮೊಗ್ಗ

**ದೀಪಿಕಾ ಬಿ.**
ಹಿರಿಯ ಸಂಶೋಧನಾ ಸಹಾಯಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ ಆವರಣ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-೫೬೦೦೫೬
ಮೊ.ನಂ. – ೯೫೩೮೬೭೭೩೮೫

**ಡಾ.ಹಾ.ಮ.ನಾಗಾರ್ಜುನ**
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ

**ಡಾ. ವಿಜಯ ಕುಮಾರ ಹೆಚ್**
ಸಹಾಯಕ ಪ್ರಾಧ್ಯಾಪಕರು
ಕೇಂದ್ರೀಯ ವಿಶ್ವವಿದ್ಯಾಲಯ
ಕಡಗಂಚಿ, ಕಲಬುರಗಿ, ಕರ್ನಾಟಕ

**ಲೋಕೇಶ ನೀರಕಲ್ಲು**
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ ೫೮೩೨೭೬, ಬಳ್ಳಾರಿ ಜಿಲ್ಲೆ
ಮೊ. ೯೦೦೮೮೧೫೪೦೯

**ಡಾ. ಎಂ. ನಾಗರಾಜ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ-೫೮೬೧೦೮
ಮೊ-೯೪೮೦೧೯೨೪೮

**ಡಾ.ಮೈತ್ರೇಯಿಣಿ ಗದಿಗೆಪ್ಪಗೌಡರ**
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ
ಸಹಾಯಕ ನಿರ್ದೇಶಕರು, ಪ್ರಸಾರಾಂಗ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ-೫೯೧೧೫೬

**ಪ್ರೊ. ಎಂ.ಎಲ್. ನರಸಿಂಹಮೂರ್ತಿ**
ವಿಶ್ರಾಂತ ಪ್ರಾಧ್ಯಾಪಕರು
ಶ್ರೀ ಲಕ್ಷ್ಮೀನರಸಿಂಹ ಕೃಪ
ಟಿ.ವಿ.ವಿ. ಕಾಲೇಜ್ ಮುಂಭಾಗ
ಗೌರಿಬಿದನೂರು ಗೇಟ್ ಹತ್ತಿರ
ಮಧುಗಿರಿ-೫೭೨ ೧೩೨, ತುಮಕೂರು ಜಿಲ್ಲೆ
ಮೊ: ೯೪೮೨೭೬೫೭೩೧

**ಮಾಸ್ಕೇರಿ ಎಂ.ಕೆ. ನಾಯಕ**
'ಶ್ರೀಗುರು', ಜೆ.ಎನ್. ರಸ್ತೆ
ಕ್ರೀಡಾಂಗಣ ಹತ್ತಿರ
ದಾಂಡೇಲಿ - ೫೮೧೩೨೫, ಉತ್ತರ ಕನ್ನಡ
ಮೊ: ೯೪೪೯೦೦೯೫೬೦

**ಡಾ. ಎಸ್. ಮೋಹನ್**
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ ೫೮೩೨ ೭೬
ಮೊ೯೪೪೮೬೫೩೮೬೦

**ಡಾ.ಕೆ.ವಿ.ಮುದ್ದವೀರಪ್ಪ**
ಅಧ್ಯಾಪಕರು, ಸಾಹಿತ್ಯ ನಿಲಯ
ಭಗೀರಥ ನಗರ, ಬೆಳಗುಂಬ ರಸ್ತೆ,
ತುಮಕೂರು-೫೭೨೧೦೪
ಮೊಬೈಲ್- ೯೪೪೯೬೫೯೬೩೧.

**ಡಾ.ಮುನಿಯಪ್ಪ**
ಪ್ರಾಧ್ಯಾಪಕರು, ಕನ್ನಡ ವಿಭಾಗ
ಪಿ.ಜಿ. ಸೆಂಟರ್ ಕೋಲಾರ
ಬೆಂಗಳೂರು ವಿಶ್ವವಿದ್ಯಾಲಯ.

**ಡಾ. ಸಿಪಿಲೆ ಸತೀಶ್**
ಕನ್ನಡ ಉಪನ್ಯಾಸಕರು
ಬಾಲಕಿಯರ ಸ.ಪ.ಪೂರ್ವ ಕಾಲೇಜು
ರಾಮನಗರ--೫೬೨೧೫೯.

**ಡಾ. ಮುತ್ತೇಗೌಡ, ಟಿ. ಎನ್.**
ಪ್ರಾಂಶುಪಾಲರು
ಎಸ್.ಇ.ಎ.ಮಹಾವಿದ್ಯಾಲಯ
ಕೆ.ಆರ್.ಪುರಂ, ಬೆಂಗಳೂರು

**ಡಾ. ನಿತ್ಯಾನಂದ ಬಿ ಶೆಟ್ಟಿ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಡಾ. ಪಿ. ನಾಗರಾಜ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ

**ಡಾ. ರಾಘವೇಂದ್ರ ಪಿ ಕೆ,**
ಸೀನಿಯರ್ ರಿಸರ್ಚ್ ಫೆಲೋ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು-೦೬

**ಡಾ. ರಣಧೀರ**
ಕನ್ನಡ ಪ್ರಾಧ್ಯಾಪಕರು
ಭದ್ರಾವತಿ, ಶಿವಮೊಗ್ಗ

**ಡಾ. ಶಿವರಾಜ್ ಬ್ಯಾಡರಹಳ್ಳಿ**
ಸಹ ಪ್ರಾಧ್ಯಾಪಕರು
ಆಕ್ಸ್‌ಫರ್ಡ್ ಕಾಲೇಜ್
ಎಚ್.ಎಸ್.ಆರ್. ಬಡಾವಣೆ
ಬೆಂಗಳೂರು ೫೬೦ ೧೦೨

**ಯುವರಾಜ ಮಾದನಶೆಟ್ಟಿ**
ಸಂಶೋಧನಾ ವಿದ್ಯಾರ್ಥಿ
ಶಾಸ್ತ್ರೀಯ ಕನ್ನಡ ಭಾಷಾ
ಅಧ್ಯಯನ ಸಂಸ್ಥೆ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಬೆಳಗಾವಿ-೫೯೧೧೫೬

**ಡಾ. ಶಿವಾನಂದ ಕೆಳಗಿನಮನಿ**
ಪ್ರಾಧ್ಯಾಪಕರು, ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಸಂತೋಷ ಹಾನಗಲ್ಲು**
ಪ್ರಾಧ್ಯಾಪಕರು, ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

**ಡಾ. ನಟರಾಜ ತಲಘಟ್ಟಪುರ**
ಪ್ರಾಧ್ಯಾಪಕರು, ಬಿ.ಎನ್.ಎಮ್. ಕಾಲೇಜು
ಬೆಂಗಳೂರು

**ಡಾ. ರಂಜಾನ್ ದರ್ಗಾ**
ಖ್ಯಾತ ವಿದ್ವಾಂಸರು

**ಡಾ. ಪ್ರಸನ್ನ ಕುಮಾರ ಕೆ.**
ಆಚಾರ್ಯ ಪ್ರಥಮ ದರ್ಜೆ ಕಾಲೇಜು
ಬೆಂಗಳೂರು

**ಡಾ. ರಾಜೀವ ನಾಯ್ಕ**
ಕನ್ನಡ ಭಾರತಿ
ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

**ಡಾ. ಎಚ್.ಎಲ್. ಪುಷ್ಪ**
# ೧೦-೧೧, ಮಾತಾ ಕನ್ನಿಕಾ ಅಪಾರ್ಟ್‌ಮೆಂಟ್
೪ನೇ ಕ್ರಾಸ್, ಕೆ.ಎಸ್.ಆರ್.ಟಿ.ಸಿ. ಬಡಾವಣೆ
ಚಿಕ್ಕಕಲ್ಲಸಂದ್ರ, ಬೆಂಗಳೂರು-೫೬೦ ೦೬೧
ಮೊ : ೯೪೮೦೦-೫೧೨೨೨

**ಡಾ. ಜಿ. ಎಂ. ಹೆಗಡೆ**
ಖ್ಯಾತ ಬರಹಗಾರರು
ಕರ್ನಾಟಕ

**ಶಿಲ್ಪ ಬಿ.**
ಹಿರಿಯ ಸಂಶೋಧಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦೦೫೬

**ಶ್ವೇತಾ ಎನ್.**
ಎಂ.ಎ. ದ್ವಿತೀಯ ವರ್ಷ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - ೫೬೦೦೫೬

**ಡಾ. ಎಸ್. ಜಿ. ಸಿದ್ಧರಾಮಯ್ಯ**
ಖ್ಯಾತ ವಿದ್ವಾಂಸರು
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ
ವಿಧಾನಸೌಧ

**ಡಾ. ಕಾ.ತ. ಚಿಕ್ಕಣ್ಣ**
ನಿರ್ದೇಶಕರು, ಕನಕದಾಸ ಸಂಶೋಧನಾ ಕೇಂದ್ರ
ಕನ್ನಡ ಭವನ, ಬೆಂಗಳೂರು

**ಡಾ. ಕೆ. ವೈ. ನಾರಾಯಣಸ್ವಾಮಿ**
ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು
ಬೆಂಗಳೂರು

**ಶ್ರೀ ಸಂಗಮೇಶ ಉಪಾಸೆ, ಕೆ.ಎ.ಎಸ್.**
ವಿಧಾನಸೌಧ ಲೇಔಟ್
ಬೆಂಗಳೂರು

* ** ** *

ಕರ್ನಾಟಕದ 'ಪುಸ್ತಕ ಕಾಶಿ' ಎಂದು ಹೆಸರಾಗಿರುವ ಸಪ್ನ ಬುಕ್ ಹೌಸ್ ಪುಸ್ತಕ ಪ್ರೇಮಿಗಳ ನೆಮ್ಮದಿಯ ತಾಣವೆಂದರೆ ಉತ್ಪ್ರೇಕ್ಷೆಯಲ್ಲ. ಬೆಂಗಳೂರಿನಲ್ಲಿ ಪುಸ್ತಕ ಪ್ರೇಮಿಯೊಬ್ಬನನ್ನು ಎತ್ತಕಡೆ ಹೋಗುತ್ತಿದ್ದೀರಿ ಎಂದು ಕೇಳಿದರೆ ಆತ ಸಪ್ನ ಬುಕ್ ಹೌಸ್ ಕಡೆಗೆ ಎಂದು ಹೇಳಿದರೆ ಆಶ್ಚರ್ಯ ಪಡಬೇಕಾಗಿಲ್ಲ. 1967ರಲ್ಲಿ 100 ಚದರ ಅಡಿ ಜಾಗದಲ್ಲಿ ಶ್ರೀ ಸುರೇಶ್ ಷಾ ಅವರು ಪುಟ್ಟದಾಗಿ ಪ್ರಾರಂಭಿಸಿದ ಸಪ್ನ ಬುಕ್ ಹೌಸ್ ಇಂದು 3 ಲಕ್ಷ ಚದರ ಅಡಿ ವ್ಯಾಪಿಸಿರುವ ಪುಸ್ತಕ ಮಾರಾಟ ಮಳಿಗೆಯಾಗಿದೆ ಎಂಬುದು ಪುಸ್ತಕ ಲೋಕದ ವಿಸ್ಮಯ.

ಕನ್ನಡದ ಧೀಮಂತ ಸಾಹಿತಿ ಡಾ. ಕೆ. ಶಿವರಾಮ ಕಾರಂತರಿಂದ ಹಿಡಿದು, ಇಂದಿನ ತರುಣ ಲೇಖಕರವರೆಗೆ 6000ಕ್ಕೂ ಮಿಗಿಲಾಗಿ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸಿದ ಕೀರ್ತಿ ಸಪ್ನ ಬುಕ್ ಹೌಸ್‌ಗೆ ಸಲ್ಲುತ್ತದೆ. ಕನ್ನಡದ ಹಿರಿಯ ಸಾಹಿತಿಗಳ ಸಮಗ್ರ ಸಂಪುಟಗಳನ್ನು ಒಳಗೊಂಡಂತೆ ಸಾಹಿತ್ಯದ ಎಲ್ಲಾ ಪ್ರಕಾರದ ಕೃತಿಗಳನ್ನು ಸಪ್ನ ಪ್ರಕಟಿಸಿದೆ. ಸಪ್ನ ಹೊರತಂದ ಒಂದೊಂದು ಕೃತಿಯೂ ಪ್ರಕಟಣೆಯ ಗುಣಮಟ್ಟವನ್ನು ಕಾಯ್ದುಕೊಂಡು ಸರ್ವಾಂಗ ಸುಂದರವಾಗಿ ಮೂಡಿ ಬಂದಿದೆ. ಸಾಹಿತ್ಯ ಕೃತಿಗಳನ್ನಲ್ಲದೆ ವಿಜ್ಞಾನ, ಮಾನವಿಕ, ಕ್ರೀಡೆ, ಆರೋಗ್ಯ ವಿಜ್ಞಾನ, ವ್ಯಕ್ತಿತ್ವ ವಿಕಸನ ಇತ್ಯಾದಿ ವಿಭಾಗಗಳಿಗೆ ಸಂಬಂಧಪಟ್ಟ ಅತ್ಯುತ್ತಮ ಕೃತಿಗಳನ್ನು ಸಪ್ನ ಪ್ರಕಟಿಸಿದೆ. ಆಧುನಿಕ ಕನ್ನಡ ಸಾಹಿತ್ಯವನ್ನು ಅತ್ಯಾಕರ್ಷಕವಾಗಿ ಕನ್ನಡಿಗರಿಗೆ ಪರಿಚಯಿಸಿದ ಕೀರ್ತಿ ಸಪ್ನ ಸಂಸ್ಥೆಗೆ ಸಲ್ಲುತ್ತದೆ.

ಸಪ್ನ ಬುಕ್ ಹೌಸ್ ಭಾರತದ ಅತ್ಯಂತ ಬೃಹತ್ ಪುಸ್ತಕ ಮಾರಾಟ ಮಳಿಗೆ ಎಂದು ಲಿಮ್ಕಾ ದಾಖಲೆಯಲ್ಲಿ ನಮೂದಾಗಿರುವುದು ಕರ್ನಾಟಕದ ಜನತೆಗೆ ಹೆಮ್ಮೆ ತರುವ ಸಂಗತಿಯಾಗಿದೆ. ಪ್ರತಿವರ್ಷ ಕನ್ನಡ ರಾಜ್ಯೋತ್ಸವದಂದು ಸಮಾರಂಭವನ್ನು ಏರ್ಪಡಿಸಿ, ಕನ್ನಡದ ಅತ್ಯುತ್ತಮ ಕೃತಿಗಳನ್ನು ಪ್ರಕಟಿಸಿ ಲೋಕಾರ್ಪಣೆ ಮಾಡಿ ಲೇಖಕರನ್ನು ಸನ್ಮಾನಿಸುವ ಸಪ್ನ ಬುಕ್ ಹೌಸ್‌ನ ಸಂಪ್ರದಾಯ ಅಭಿನಂದನೀಯವಾಗಿದೆ. ಕನ್ನಡ ಸಂಘ ಸಂಸ್ಥೆಗಳಿಗೆ, ಶಾಲಾ ಕಾಲೇಜುಗಳಿಗೆ ಉಚಿತವಾಗಿ ಕನ್ನಡ ಪುಸ್ತಕಗಳನ್ನು ನೀಡುವ 'ಪುಸ್ತಕ ದಾನ' ಯೋಜನೆ ಉತ್ತಮ ಯೋಜನೆಯಾಗಿದೆ. ಕನ್ನಡಿಗರ ಪುಸ್ತಕ ಪ್ರೇಮ, ಜ್ಞಾನದಾಹವನ್ನು ಗಮನಿಸಿ ಕನ್ನಡ ಪುಸ್ತಕಗಳ ಪ್ರಕಟಣೆಯಲ್ಲಿ ಸಪ್ನ ಬುಕ್ ಹೌಸ್ ಮಾಡಿರುವ ಸಾಧನೆ ಚಾರಿತ್ರಿಕವಾದದ್ದು. ಕನ್ನಡ ಓದುಗರ ಪರವಾಗಿ ಕರ್ನಾಟಕ ಜನತೆಯ ಪರವಾಗಿ ಸಪ್ನ ಸಂಸ್ಥೆಯನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಕವಿಗಳು

ಸಪ್ನ®
1967 ರಿಂದ

ಲೇಖನಗಳ ಸಂಕಲನ

ISBN : 978-93-90490-57-8

ಬೆಲೆ : ₹295/-

www.sapnaonline.com